ಶೈವಮತ : ಸಾಂಸ್ಕೃತಿಕ ಅಧ್ಯಯನ

(ವಿಜಯಪುರ ಜಿಲ್ಲೆಯನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಎನ್. ವ್ಹಿ. ಅಸ್ಕಿ

ಮಾರ್ಗದರ್ಶಕರು

ಡಾ. ವಾಸುದೇವ ಬಡಿಗೇರ

ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – 583 276

2019

ಶೈವಮತ : ಸಾಂಸ್ಕೃತಿಕ ಅಧ್ಯಯನ

(ವಿಜಯಪುರ ಜಿಲ್ಲೆಯನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಎನ್.ವ್ಹಿ. ಅಸ್ಕಿ

ಮಾರ್ಗದರ್ಶಕರು

ಡಾ. ವಾಸುದೇವ ಬಡಿಗೇರ

ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೧೯

ಸಂಶೋಧಕರ ಘೋಷಣಾ ಪತ್ರ

'ಶೈವಮತ : ಸಾಂಸ್ಕೃತಿಕ ಅಧ್ಯಯನ' (ವಿಜಯಪುರ ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ **ಡಾ. ವಾಸುದೇವ ಬಡಿಗೇರ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಘೋಷಿಸುತ್ತೇನೆ.

ದಿನಾಂಕ : 7-5-19
ಸ್ಥಳ : ವಿದ್ಯಾರಣ್ಯ

(ಎನ್.ವ್ಹಿ. ಅಸ್ಕಿ)
ಸಂಶೋಧನಾ ವಿದ್ಯಾರ್ಥಿ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಮಾರ್ಗದರ್ಶಕರ ದೃಢೀಕರಣ ಪತ್ರ

ಎನ್.ವ್ಹಿ. ಅಸ್ಕಿ ಇವರು ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **'ಶೈವಮತ: ಸಾಂಸ್ಕೃತಿಕ ಅಧ್ಯಯನ'** (ವಿಜಯಪುರ ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ಮಾರ್ಗದರ್ಶಕರು

(ಡಾ. ವಾಸುದೇವ ಬಡಿಗೇರ)

ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ.

ದಿನಾಂಕ :

ಸ್ಥಳ : ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸಮೀಕ್ಷೆ ಮತ್ತು ಸ್ವರೂಪ

ಸಂಸ್ಕೃತಿ ಎಂಬುದು ನಡವಳಿಕೆಯಾಗಿದ್ದು, ಜೀವನ ಸ್ವರೂಪವನ್ನು ನಿರ್ಧರಿಸುವ ಗುಣವನ್ನು ಹೊಂದಿದೆ. ಸಂಸ್ಕೃತಿಯನ್ನು ವ್ಯಾಖ್ಯಾನಿಸುವಾಗ ಭೌತಿಕ ಸಂಸ್ಕೃತಿ ಮತ್ತು ಅಧ್ಯಾತ್ಮಿಕ ಸಂಸ್ಕೃತಿಗಳೆಂದು ವಿಭಾಗ ಮಾಡುವ ಪ್ರಯತ್ನಗಳನ್ನು ಸಹ ಕಾಣುತ್ತೇವೆ. ಪರಿಸರ, ಪರಂಪರೆ ಹಾಗೂ ಪ್ರತ್ಯಕ್ಷ ಜೀವನದ ಅನೇಕ ಸಂಸ್ಕಾರಗಳ ಮೂಲಕ ಮನುಷ್ಯನ ಅಂತರಂಗ ಪಡೆಯುವ ಪರಿಪಕ್ವತೆ ಇದ್ದು, ಸಂಸ್ಕೃತಿಯನ್ನು ಕುರಿತಂತೆ ಒಂದು ಸ್ಥೂಲವಾದ ವ್ಯಾಖ್ಯೆ ಎನ್ನಲಾಗಿದೆ. ಸಮಾಜಶಾಸ್ತ್ರಜ್ಞರು, ಸಂಸ್ಕೃತಿ ಅಂತರ್ಮುಖದ್ದೆಂದು ತಿಳಿಯುತ್ತಾರೆ. ಮಾನವನ ಅಧ್ಯಾತ್ಮಿಕ ಸಾಧನೆಯೇ ಸಂಸ್ಕೃತಿ. ಸಕಲ ಜೀವಿಗಳಿಗೆ ಒಳ್ಳೆಯದನ್ನು ಬಯಸುವ ಉಚ್ಚ ಆದರ್ಶವೇ ಸಂಸ್ಕೃತಿ. ಭಾರತೀಯ ಸಂಸ್ಕೃತಿಯ ವಿಭಿನ್ನ ಪ್ರಾದೇಶಿಕ ಸಂಸ್ಕೃತಿಗಳ ಒಟ್ಟು ಮೊತ್ತವಾಗಿದೆ. ಹೀಗಾಗಿ ಅದು ಸಂಕೀರ್ಣ ಸ್ವರೂಪದ ಸಂಸ್ಕೃತಿ ಎನ್ನಲು ಅಡ್ಡಿಯಿಲ್ಲ. ಭೌಗೋಳಿಕ ಲಕ್ಷಣಗಳು, ಭಾಷೆ, ಧರ್ಮ ಇವುಗಳಿಂದಾಗಿ ಪ್ರಾದೇಶಿಕ ಭೇದಗಳುಂಟಾಗಿ ಸಂಸ್ಕೃತಿಯ ಅಭಿವ್ಯಕ್ತಿಗೆ ವೈವಿಧ್ಯತೆಯನ್ನು ಒದಗಿಸಿವೆ. ಕರ್ನಾಟಕದ ಸಂಸ್ಕೃತಿಯು ಭಾರತೀಯ ಸಂಸ್ಕೃತಿಯಲ್ಲಿ ಅಂತರ್ಗತವಾಗಿದ್ದರೂ ತನ್ನದೇ ಆದ ಉದಾತ್ತ ಗುಣಗಳಿಂದಾಗಿ ವಿಶೇಷವಾಗಿ ಮತ್ತು ಪ್ರೌಢವಾಗಿ ಗೋಚರಿಸುತ್ತದೆ. ಕರ್ನಾಟಕದ ಸಂಸ್ಕೃತಿಗೆ ಹಿರಿದಾದ ಅಂತಃಸತ್ವವಿದ್ದು, ಅನೇಕ ಶತಮಾನಗಳ ಕಾಲಾವಧಿಯಲ್ಲಿ ನಡೆದ ತನ್ನ ಕೊಡುಕೊಳ್ಳುವಿಕೆಗಳ ಗುಣದಿಂದಾಗಿ ಉನ್ನತ ಸ್ಥಾನದಲ್ಲಿದೆ.

ಕರ್ನಾಟಕದಲ್ಲಿ ಮಾನವನ ಅಸ್ತಿತ್ವವನ್ನು ಕ್ರಿ.ಪೂ ೫,೦೧,೦೦೦ ವರ್ಷಗಳಿಂದಲೂ ಗುರುತಿಸಿದ್ದಾರೆ. ಕ್ರಿ.ಪೂ. ೩೦೦ವರೆಗಿನ ಜನಜೀವನವನ್ನು ಶಿಲಾಯುಗಗಳ ಕಾಲದ ಸಂಸ್ಕೃತಿ ಎಂದು ಪುರಾತತ್ವಜ್ಞರು ಕರೆದಿದ್ದಾರೆ. ಶಿಲಾಶಾಸನಗಳ ಆಗಮನ ಕಾಲದಿಂದ ಇಲ್ಲಿಯವರೆಗಿನ ಸಂಸ್ಕೃತಿಯನ್ನು ಕುರಿತು ಅಧ್ಯಯನಗಳು ವಿವಿಧ ನೆಲೆಯಲ್ಲಿ ನಡೆಯುತ್ತ ಬಂದಿವೆ. ಅಶೋಕನ ಶಾಸನಗಳ ಅಸ್ತಿತ್ವದಿಂದಾಗಿ ಕರ್ನಾಟಕವೂ ಔತ್ತರೇಯ ಸಂಸ್ಕೃತಿಯ ಸಂಪರ್ಕವನ್ನು ಹೊಂದಿತ್ತೆಂಬ ಸಂಗತಿ ಗಮನಾರ್ಹವಾಗಿದೆ. ಕ್ರಿ.ಶ. ೧-೨ನೆಯ ಶತಮಾನದಲ್ಲಿ ರೋಮ್, ಚೀನಾ ಮತ್ತಿತರ ದೇಶಗಳ ಜೊತೆ ಹಲವು ಶತಮಾನಗಳ ವರೆಗೆ ಸಂಪರ್ಕ ಸಾಧಿಸಿದ ಕರ್ನಾಟಕವು ಹೆಚ್ಚು ಕೊಡುಕೊಳ್ಳುವಿಕೆಗಳ ಕ್ರಿಯೆಗೆ ಒಳಗಾಯಿತು. ಈ ಚಾರಿತ್ರಿಕ ಘಟನೆಗಳಿಂದ ಕರ್ನಾಟಕ ಸಂಸ್ಕೃತಿಯು ಕಾಲಕಾಲಕ್ಕೆ ಹೊಸ ಹೊಸ ಅಂಶಗಳನ್ನು ತನ್ನದಾಗಿಸಿಕೊಂಡು ಬೆಳೆದ ಬಗೆಯನ್ನು

ಮನಗಾಣುತ್ತೇವೆ. ವೈವಿಧ್ಯಮಯ ಸಂಸ್ಕೃತಿಯನ್ನು ಹೊಂದಿದ ಕರ್ನಾಟಕದಲ್ಲಿ ಶೈವ, ವೈಷ್ಣವ, ಬೌದ್ಧ, ಜೈನ, ಕ್ರೈಸ್ತ, ಇಸ್ಲಾಂ ಮುಂತಾದ ಧರ್ಮಗಳು ಅಸ್ತಿತ್ವಕ್ಕೆ ಬಂದು ಇವುಗಳಿಗೆ ಭದ್ರ ನೆಲೆಯೆಂಬಂತೆ ದೇವಾಲಯಗಳು ನಿರ್ಮಾಣಗೊಂಡವು. ಅದರಲ್ಲೂ ಮಧ್ಯಯುಗೀನ ಕಾಲದ ಚರಿತ್ರೆಯನ್ನು ಗಮನಿಸಿದರೆ ದೇವಾಲಯಗಳು ಮಾನವ ಜೀವನದ ಅವಿಭಾಜ್ಯ ಅಂಗಗಳಾಗಿದ್ದವು. ಈ ಕಾಲದಲ್ಲಿಯೇ ಧರ್ಮ ಮತ್ತು ದೇವಾಲಯಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಒದಗಿ, ಧರ್ಮಗಳಲ್ಲೇ ಸಂಘರ್ಷಗಳುಂಟಾಗಿ ಆಯಾ ಧರ್ಮಗಳಿಗೆ ಪ್ರತ್ಯೇಕ ದೇವಾಲಯಗಳು ಪೈಪೋಟಿಯೆಂಬಂತೆ ನಿರ್ಮಾಣಗೊಂಡವು. ಅಲ್ಲದೆ ಅವುಗಳಿಗೆ ರಾಜರಾಧಿಯಾಗಿ ಅನೇಕ ಸಾಮಂತರು, ಪ್ರಜೆಗಳು ವಿವಿಧ ರೀತಿಯ ದಾನಕೊಟ್ಟಿದ್ದನ್ನು ಶಾಸನಗಳು ತಿಳಿಸುತ್ತವೆ. ದೇವಾಲಯಗಳು ಸಹ ಒಂದಕ್ಕಿಂತ ಇನ್ನೊಂದು ವಿಭಿನ್ನ, ಭವ್ಯ ಹಾಗೂ ಹೆಚ್ಚು ವೈಭವಯುತವಾಗತೊಡಗಿದವು. ಮುಂದೆ ಈ ದೇವಾಲಯಗಳು ಕೇವಲ ಧಾರ್ಮಿಕ ಕೇಂದ್ರಗಳಾಗಿ ಉಳಿಯದೇ ವಿದ್ಯಾಕೇಂದ್ರಗಳಾಗಿ, ಆರ್ಥಿಕ, ಸಾಮಾಜಿಕ, ನ್ಯಾಯಿಕ ಮತ್ತು ಸಾಂಸ್ಕೃತಿಕ ಕೇಂದ್ರಗಳಾಗಿ ರೂಪುಗೊಂಡವು. ದೇವಾಲಯದ ಈ ಎಲ್ಲ ಚಟುವಟಿಕೆಗಳ ಮಾಹಿತಿಗಳನ್ನು ಅರಿಯಲು ಶಾಸನ, ಮೂರ್ತಿಶಿಲ್ಪ, ಸಾಹಿತ್ಯ ಹಾಗೂ ಮೌಖಿಕ ಆಕರಗಳು ಪ್ರಮುಖ ಸಾಕ್ಷಿಗಳಾಗಿವೆ.

ಪ್ರಾಚೀನ ನಾಗರೀಕತೆಯ ನಗರೀಕರಣದ ಕಾಲಕ್ಕಾಗಲೆ ಮತಧರ್ಮವು ಸಾಕಷ್ಟು ಪ್ರಭಾವಶಾಲಿಯಾದ ಸಾಮಾಜಿಕ ವ್ಯವಸ್ಥೆಯಾಗಿದ್ದಿರಬೇಕು ಆದ್ದರಿಂದ ಆ ಪ್ರಾಚೀನ ನಾಗರೀಕತೆಯ ಜನ ಉತ್ಕೃಷ್ಟವಾದ ಜೀವನವನ್ನು ಹೊಂದಿದ್ದರು ಎಂಬುದಾದರೆ ಅವರು ಒಂದು ಧರ್ಮದ ಚೌಕಟ್ಟನ್ನು ಹೊಂದಿರಲೇಬೇಕು. ಚಿಂತನಾ ಪರವಾದ ಧರ್ಮವು ನಿರಂತರ ಅಧ್ಯಯನಶೀಲವಾದದ್ದು. ಧರ್ಮಕ್ಕೆ ಆದಿ ಅಂತ್ಯಗಳೆಂಬ ಮಿತಿ ಇಲ್ಲ. ಕಾಲದಿಂದ ಕಾಲಕ್ಕೆ ಜೀವನದ ವಿಕಾಸಗಳಿಗನುಗುಣವಾಗಿ ಧರ್ಮದ ಬಗೆಗಿನ ಅನಿಸಿಕೆಗಳು, ಕ್ರಿಯೆಗಳು ಬದಲಾಗುತ್ತಾ ಹೋಗುತ್ತವೆ. ಅದೇ ತೆರನಾಗಿ ಪ್ರದೇಶದಿಂದ ಪ್ರದೇಶಕ್ಕೆ ಧರ್ಮದ ಪರಿಕಲ್ಪನೆ ಬದಲಾವಣೆ ಹೊಂದುತ್ತದೆ. ವಿಶ್ವದ ಎಲ್ಲಾ ಕಡೆಯಲ್ಲು ಧರ್ಮವು ಒಂದೇ ತೆರನಾಗಿರುವುದಿಲ್ಲ. ಆಯಾ ಕಾಲ, ದೇಶಗಳಿಗನುಗುಣವಾಗಿ ಅದು ವಿವಿಧ ರೂಪಗಳನ್ನು ತಾಳುತ್ತದೆ. ಒಂದು ಪ್ರದೇಶದಲ್ಲಿ ಹುಟ್ಟಿದ ಧರ್ಮ ಕಾಲಾಂತರದಲ್ಲಿ ವಿಶ್ವದ ತುಂಬ ಪಸರಿಸಬಹುದು. ಯಾವುದು ಸಮಾಜಕ್ಕೆ ಧಾರಣ ಸಾಮರ್ಥ್ಯವನ್ನು ನೀಡುತ್ತದೆಯೋ ಅದು ಧರ್ಮ. ಅಂದರೆ "ಧಾರಣಾದ್ದರ್ಯ ಇತ್ಯಾದಿ" ಎಂಬ ಹೇಳಿಕೆ ತುಂಬಾ ಅರ್ಥಪೂರ್ಣವಾದುದು. ಭಾರತೀಯ ಧರ್ಮ ಶಾಸ್ತ್ರಕಾರರು ಧರ್ಮದ ಉಗಮ ಹಾಗು ಅಧಿಕಾರವು ಅಪೌರುಷೇಯವಾದ ವೇದಗಳಿಂದ ಸಿದ್ಧಿಸಿದೆ ಎಂದು ಪ್ರತಿಪಾದಿಸುತ್ತಾರೆ.

ಅತ್ಯಂತ ಪುರಾತನ ಹಾಗೂ ವ್ಯಾಪಕವಾಗಿ ಹರಡಿದ ಧರ್ಮವೆಂದರೆ ಶೈವ ಧರ್ಮ. ಭಾರತೀಯ ದೇವರುಗಳಲ್ಲಿ ಶಿವ ಅತ್ಯಂತ ಶ್ರೇಷ್ಠ ದೇವರೆಂದು ಒಪ್ಪಿತನಾಗಿದ್ದಾನೆ. ಇಲ್ಲಿ ಶಿವನೇ ಅಧಿಪತಿ. ಶಿವನು ಈಶ, ಈಶ್ವರ, ಮಾಹೇಶ್ವರ, ಮಹೇಶ, ಮಹಾದೇವ, ಸದಾಶಿವ, ಶರ್ವ, ಶಂಕರ ಮುಂತಾದ ಅನೇಕ ಹೆಸರುಗಳಿಂದ ಕರೆಯಲ್ಪಟ್ಟಿರುವನು. ವೇದಗಳು, ಪುರಾಣಗಳು, ಆಗಮಗಳು, ಶಿಲ್ಪಶಾಸ್ತ್ರಕ್ಕೆ ಸಂಬಂಧಿಸಿದ ಅನೇಕ ಸಾಹಿತ್ಯ ಕೃತಿಗಳು ಶೈವಧರ್ಮ, ಶೈವ ಧರ್ಮಕ್ಕೆ ಸಂಬಂಧಿಸಿದ ಕಥೆಗಳು, ಶೈವ ಶಿಲ್ಪಗಳು, ಶೈವಶಿಲ್ಪ ಪ್ರತಿಮಾ ಲಕ್ಷಣಗಳ ಕುರಿತಾದ ಮಹತ್ವದ ಮಾಹಿತಿಗಳನ್ನು ಒದಗಿಸುತ್ತವೆ. ಧರ್ಮ ಮತ್ತು ದೇವಾಲಯಗಳಿಗೆ ಅವಿನಾಭಾವವಾದ ಸಂಬಂಧವಿದೆ. ಧರ್ಮ ಮತ್ತು ಧಾರ್ಮಿಕ ಚಿಂತನೆಗಳು ಮಾನವ ನಾಗರಿಕತೆಯ ಕೊಡುಗೆಗಳು. ಧರ್ಮ ಬೆಳೆದಂತೆ ದೇವಾಲಯಗಳು ಬೆಳೆದವು. ದೇವಾಲಯಗಳ ಜೊತೆಗೆ ಪ್ರಸಿದ್ಧ ಮಠಗಳನ್ನು ನಿರ್ಮಿಸಿ ಗುರು ಪರಂಪರೆಯು ಅಲ್ಲಿ ಬೆಳೆದು ಕೊಂಡುಬಂದಿದೆ. ಶಿವನೇ ಈ ಧರ್ಮದ ಮೂಲ ಕರ್ತೃ ಇವರ ಅನುಯಾಯಿಗಳನ್ನು ಶೈವರೆಂದು ಕರೆಯುತ್ತಾರೆ. ಶೈವರು ಶಿವಭಕ್ತರು, ಲಿಂಗೋಪಾಸಕರು, ಲಿಂಗಪೂಜೆ ಮಾಡುವವರು ಆಗಿದ್ದಾರೆ. ಇವರಲ್ಲಿ ಪಾಶುಪತ, ಕಾಳಾಮುಖ, ಲಾಕುಳ ಮತ್ತು ಕಾಪಾಲಿಕ ಪಂಗಡಗಳಿದ್ದುದು ಶಾಸನಗಳಿಂದ ತಿಳಿದುಬರುತ್ತದೆ. ಅಂತೆಯೇ ವಿಜಯಪುರ ಜಿಲ್ಲೆಯು ಸಹ ಪ್ರಾಚೀನ ಕಾಲಘಟ್ಟದಿಂದಲೂ ಶೈವ ಧರ್ಮದ ಒಂದು ಪ್ರಮುಖ ಕೇಂದ್ರವಾಗಿದೆ.

ಚಾರಿತ್ರಿಕವಾಗಿ ಬಾದಾಮಿ ಚಾಲುಕ್ಯರಿಂದ ಈ ಜಿಲ್ಲೆಯ ಇತಿಹಾಸ ಪ್ರಾರಂಭವಾಗುತ್ತದೆಂದು ಹೇಳಲಾಗುತ್ತದೆ. ಕ್ರಿ.ಶ. ೧೧-೧೨ನೆಯ ಶತಮಾನಗಳಲ್ಲಿ ವಿಜಯಪುರ, ರಾಜಧಾನಿ ವಿಜಯಾಪುರ, ರಾಯರಾಜಧಾನಿ ವಿಜಯಾಪುರ ಎಂದು ಶಾಸನಗಳಲ್ಲಿ ಉಲ್ಲೇಖಗೊಂಡಿದ್ದು, ಕಲ್ಯಾಣ ಚಾಲುಕ್ಯ ಹಾಗೂ ಸೇವುಣರ ಕಾಲದಲ್ಲಿ ಪ್ರಾದೇಶಿಕ ರಾಜಧಾನಿಯಾಗಿತ್ತು. ಆದಿಲ್‌ಷಾಹಿ ಸಾಮ್ರಾಜ್ಯದ ರಾಜಧಾನಿಯಾಗಿ ದಖನ್ನಿನ ರಾಣಿ ಎಂಬ ಹೆಗ್ಗಳಿಕೆಗೂ ಪಾತ್ರವಾಗಿತ್ತು. ಬ್ರಿಟಿಷರ ಆಡಳಿತಾವಧಿಯಲ್ಲಿ ಮುಂಬೈ ಕರ್ನಾಟಕದ ಜಿಲ್ಲಾ ಕೇಂದ್ರವಾಗಿರುವುದನ್ನು ಗುರುತಿಸಬಹುದು. ಪ್ರಮುಖ ಆಡಳಿತ ಕೇಂದ್ರವಾಗಿ ಗುರುತಿಸಿಕೊಳ್ಳುವ ವಿಜಯಪುರ ಜಿಲ್ಲೆಯಲ್ಲಿ ಕಂಡುಬರುವ ಐತಿಹಾಸಿಕ ಅವಶೇಷಗಳು ಮತ್ತು ಸ್ಮಾರಕಗಳು ಈ ನಾಡಿನ ಇತಿಹಾಸದ ಪ್ರತೀಕವಾಗಿದ್ದು, ಅಂದಿನ ಕಾಲದ ರಾಜಕೀಯ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಅಂಶಗಳಲ್ಲಿ ಮಹತ್ತರವಾದ ಪಾತ್ರವನ್ನು ವಹಿಸುತ್ತವೆ. ಇಂತಹ ಹಿನ್ನೆಲೆಯನ್ನು ಹೊಂದಿರುವ ದೇವಾಲಯಗಳು, ಕೋಟೆಗಳು, ಮಂಟಪಗಳು, ಕಟ್ಟಡಗಳು, ಶಾಸನಗಳು ಹಾಗೂ ಸಾಹಿತ್ತಿಕ ಆಕರಗಳು ಅಂದಿನ ಸಾಂಸ್ಕೃತಿಕ ವೈವಿಧ್ಯತೆಯನ್ನು ಪ್ರತಿಬಿಂಬಿಸುತ್ತವೆ.

ವಿಜಯಪುರ ಜಿಲ್ಲೆಯಲ್ಲಿ ಶೈವ, ವೈಷ್ಣವ, ವೀರಶೈವ, ಜೈನ ಧರ್ಮಗಳಿಗೆ ಸಂಬಂಧಿಸಿದ ಬಹುತೇಕ ಸ್ಮಾರಕಗಳು ಈ ಜಿಲ್ಲೆಯಲ್ಲಿ ಕಂಡುಬರುತ್ತವೆ. ಈ ಜಿಲ್ಲೆಯನ್ನು ಆಳಿದ ರಾಜಮನೆತನಗಳು ಪೋಷಿಸಿದ ಧರ್ಮಗಳಲ್ಲಿ ಶೈವ ಧರ್ಮವು ಪ್ರಮುಖವಾಗಿದೆ. ಇವರು ಅನೇಕ ಶೈವ ದೇವಾಲಯಗಳನ್ನು ನಿರ್ಮಿಸಿದರಲ್ಲದೆ ಆ ದೇವಾಲಯಗಳಿಗೆ ದಾನ ದತ್ತಿಗಳನ್ನು ಬಿಟ್ಟಿರುವುದನ್ನು ಶಾಸನಗಳು ಉಲ್ಲೇಖಿಸುತ್ತವೆ. ಜಿಲ್ಲೆಯು ಶೈವ ಧರ್ಮಕ್ಕೆ ವಿಶೇಷ ಪ್ರೋತ್ಸಾಹ ಮತ್ತು ಕೊಡುಗೆಯನ್ನು ನೀಡಿದ್ದು, ಇಲ್ಲಿ ಸುಮಾರು ೧೨೦ ಕ್ಕೂ ಹೆಚ್ಚು ಶೈವ ದೇವಾಲಯಗಳು ಕಂಡುಬರುತ್ತವೆ. ಜಿಲ್ಲೆಯಲ್ಲಿ ಈ ವರೆಗೆ ಒಟ್ಟು ೪೧೯ ಶಾಸನಗಳು ಪ್ರಕಟವಾಗಿವೆ ವಿಜಯಪುರ ತಾಲೂಕಿನಲ್ಲಿ ೮೬, ಇಂಡಿ ತಾಲೂಕಿನಲ್ಲಿ ೭೯, ಸಿಂದಗಿ ತಾಲೂಕಿನಲ್ಲಿ ೧೦೮, ಬಾಗೇವಾಡಿ ತಾಲೂಕಿನಲ್ಲಿ ೭೫ ಹಾಗೂ ಮುದ್ದೇಬಿಹಾಳ ತಾಲೂಕಿನಲ್ಲಿ ೭೧ ಇದರಲ್ಲಿ ಕಲ್ಯಾಣದ ಚಾಲುಕ್ಯರ ಶಾಸನಗಳು ಅಧಿಕ ಸಂಖ್ಯೆಯಲ್ಲಿ ಲಭ್ಯವಾಗಿವೆ. ಎರಡನೆಯ ಸ್ಥಾನವು ಯಾದವರಿಗೆ ಸೇರಿದ್ದರೆ, ಮೂರನೆಯ ಸ್ಥಾನವು ಕಳಚೂರಿಗಳಿಗೆ ಸಲ್ಲುತ್ತದೆ. ಅವುಗಳಲ್ಲಿ ೧೫೯ ರಷ್ಟು ಶೈವ ಶಾಸನಗಳು ಕಂಡುಬರುತ್ತವೆ. ಜಿಲ್ಲೆಯ ಶೈವ ಧರ್ಮದ ಚರಿತ್ರೆಯನ್ನು ಕಟ್ಟಿಕೊಡುವ ಅಧ್ಯಯನಗಳು ನಡೆದಿಲ್ಲ. ಆದರೆ ಈ ಕುರಿತಾಗಿ ವಿವಿಧ ದೃಷ್ಟಿಕೋನಗಳನ್ನು ಇಟ್ಟುಕೊಂಡು ಅಲ್ಪ ಪ್ರಮಾಣದ ಸಂಶೋಧನಾತ್ಮಕ ಕೃತಿಗಳು ಹೊರಬಂದಿವೆ. ಈ ನಿಟ್ಟಿನಲ್ಲಿ ಆ ಕೊರತೆಯನ್ನು ನಿಗಿಸುವಲ್ಲಿ ಪ್ರಸ್ತುತ ವಿಜಯಪುರ ಜಿಲ್ಲೆಯ ಶೈವ ಮತ ಎಂಬ ಸಂಶೋಧನಾ ವಿಷಯವನ್ನು ಆಯ್ದುಕೊಂಡು ಅಧ್ಯಯನ ಮಾಡಲಾಗಿದೆ.

ವಿಜಯಪುರ ಜಿಲ್ಲೆಯ ಶೈವಧರ್ಮವನ್ನು ಕುರಿತು ನೋಡುವುದು ಈ ಮಹಾಪ್ರಬಂಧದ ಪ್ರಮುಖ ಉದ್ದೇಶವಾಗಿದೆ. ಈ ಕುರಿತಾಗಿ ಜಿಲ್ಲೆಯಲ್ಲಿ ಇದುವರೆಗೂ ಹೆಚ್ಚಿನ ಅಧ್ಯಯನಗಳು ನಡೆದಿಲ್ಲ. ನಡೆದಿದ್ದರೂ ಬಿಡಿ ಲೇಖನಗಳು ಪ್ರಕಟಗೊಂಡಿವೆ. ಅಲ್ಲದೆ ಪುರಾತತ್ವದ ಮಹತ್ವದ ಆಕರಗಳೆನಿಸಿದ ಶಾಸನಗಳನ್ನು, ದೇವಾಲಯಗಳನ್ನು ಆಧರಿಸಿ ಯಾವುದೇ ಅಧ್ಯಯನಗಳು ನಡೆದಿಲ್ಲ ನಡೆದಿದ್ದರೂ ಒಂದು ರಾಜಮನೆತನವನ್ನು ಅನುಲಕ್ಷಿಸಿ ಅಧ್ಯಯನಗಳು ನಡೆದಿವೆ. ಆದ್ದರಿಂದ ಈ ಕೊರತೆಯನ್ನು ನೀಗಿಸಲು ಈ ಅಧ್ಯಯನವನ್ನು ಕೈಗೊಳ್ಳಬೇಕಾಗಿದೆ. ಈ ಜಿಲ್ಲೆಯ ಗ್ರಾಮಗಳಲ್ಲಿರುವ ಪ್ರಾಚೀನ ಪ್ರಮುಖ ಶೈವ ದೇವಾಲಯಗಳನ್ನು ಗುರುತಿಸಿ ಅವುಗಳಲ್ಲಿರುವ ವಿಭಿನ್ನ ವಾಸ್ತುಶಿಲ್ಪ, ಶಿಲ್ಪಕಲೆ, ಧರ್ಮ ಮುಂತಾದವುಗಳನ್ನು ಹೇಳಲು ಪ್ರಯತ್ನಿಸಲಾಗಿದೆ. ಒಟ್ಟಾರೆಯಾಗಿ ಒಂದೇ ವಾಕ್ಯದಲ್ಲಿ ಹೇಳಬೇಕೆಂದರೆ ಜಿಲ್ಲೆಯಾದ್ಯಂತ ದೊರೆತಿರುವ ಶಾಸನಗಳು, ದೇವಾಲಯಗಳು, ಸಾಹಿತ್ಯ ಆಕರಗಳು ಹಾಗೂ ಇತರೆ ಪುರಾತತ್ವೀಯ ಅವಶೇಷಗಳನ್ನು ಬಳಸಿಕೊಂಡು ವಿಜಯಪುರ ಜಿಲ್ಲೆಯ ಶೈವಮತ ಎಂಬ ಸಂಶೋಧನಾ ಪ್ರಬಂಧವನ್ನು ರಚಿಸಲಾಗಿದೆ.

ಅಧ್ಯಯನದ ಉದ್ದೇಶ

ಪ್ರತಿಯೊಂದು ಅಧ್ಯಯನಕ್ಕೂ ತನ್ನದೇ ಆದ ಕೆಲವು ಉದ್ದೇಶಗಳಿರುತ್ತವೆ. ಉದ್ದೇಶವಿಲ್ಲದೆ ಯಾವ ಅಧ್ಯಯನವನ್ನು ಕೈಗೊಳ್ಳಲಾಗುವುದಿಲ್ಲ. ಅಂತೆಯೇ ಈ ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಪ್ರಮುಖ ಉದ್ದೇಶಗಳಿವೆ.

ಶಾಸನಗಳು, ದೇವಾಲಯಗಳು ಹಾಗೂ ಇತರೆ ಪುರಾತತ್ವೀಯ ಅವಶೇಷಗಳು ನಮ್ಮ ಪ್ರಾಚೀನ ಕಾಲದ ಚರಿತ್ರೆಯನ್ನು ತಿಳಿಸುವಲ್ಲಿ ನಮಗೆ ದೊರೆತ ಮೂಲ ಆಕರಗಳೆನಿಸಿವೆ. ಅಷ್ಟೇ ಅಲ್ಲದೆ ಇವು ಅಂದಿನ ಸಮಾಜದ ರಾಜಕೀಯ, ಧಾರ್ಮಿಕ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳ ಮೇಲೆ ಬೆಳಕು ಚೆಲ್ಲುತ್ತವೆ. ಸಂಸ್ಕೃತಿ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಪುರಾತತ್ವೀಯ ಅವಶೇಷಗಳ ಪಾತ್ರ ಬಹಳ ದೊಡ್ಡದಾದರೂ ಅದರಲ್ಲಿ ಶಾಸನಗಳು ಪ್ರಭುತ್ವದ, ಪ್ರಭುತ್ವ ಸಂಬಂಧಿತ ಹಾಗೂ ಉಳ್ಳವರ ಬದುಕಿನ ವಿವರಗಳು ಮತ್ತು ಚರಿತ್ರೆಗೆ ಹೆಚ್ಚಿನ ಒತ್ತು ನೀಡಿರುತ್ತವೆ. ಹಾಗಾಗಿ ಪುರಾತತ್ವೀಯ ಹಾಗೂ ಸಾಹಿತ್ತಿಕ ಅಂಶಗಳ ಮೇಲೆ ಅಧ್ಯಯನವನ್ನು ಕೈಗೊಂಡಾಗ ಅದರಲ್ಲಿ ಹಲವಾರು ವಿಷಯಗಳು ನಮ್ಮ ಗಮನ ಸೆಳೆಯುತ್ತವೆ. ಅಂತಹ ವಸ್ತುವಿಷಯವನ್ನುಳ್ಳ ಅಂಶವೆಂದರೆ ಶೈವಧರ್ಮ. ಪ್ರಾಚೀನ ಭಾರತದಲ್ಲೂ, ಕರ್ನಾಟಕದಲ್ಲೂ ಆಚರಣೆಗೊಳ್ಳುತ್ತಿದ್ದ ಈ ಸಂಪ್ರದಾಯದ ಆಗು – ಹೋಗುಗಳನ್ನು ವಿಜಯಪುರ ಜಿಲ್ಲೆಯ ಭೌಗೋಳಿಕ ವ್ಯಾಪ್ತಿಯನ್ನು ಇಟ್ಟುಕೊಂಡು ಕ್ರಮಬದ್ಧವಾಗಿ ಅಧ್ಯಯನ ಮಾಡುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ. ಇತ್ತೀಚೆಗೆ ಚರಿತ್ರೆಯನ್ನು ವಿಭಿನ್ನವಾದ ದೃಷ್ಠಿಕೋನದಲ್ಲಿ ನೋಡುವ ಸಂಶೋದನಾ ಅಧ್ಯಯನಗಳು ಹೆಚ್ಚು ಹೆಚ್ಚು ನಡೆಯುತ್ತಲಿವೆ. ಆದರೆ ಪ್ರಾದೇಶಿಕ ಮತ್ತು ಸೂಕ್ಷ್ಮತೆಯ ವಿಷಯದೆಡೆ ಗಮನಹರಿಸುವದು ಅವಶ್ಯವಾಗಿದೆ. ಈ ಹಿನ್ನೆಲೆಯಲ್ಲಿ ವಿಜಯಪುರ ಜಿಲ್ಲೆಯ ಶೈವ ಮತದ ಅಧ್ಯಯನ ತೀರಾ ಮಹತ್ವವೆನಿಸಿಕೊಳ್ಳುತ್ತದೆ.

ಶೈವ ಧರ್ಮಕ್ಕೆ ಸಂಬಂಧಿಸಿದಂತೆ ನೂರಾರು ಶಾಸನಗಳು, ದೇವಾಲಯಗಳು ಹಾಗೂ ಮೂರ್ತಿಶಿಲ್ಪಗಳು ಜಿಲ್ಲೆಯಲ್ಲಿ ಕಂಡುಬರುತ್ತವೆ. ಅವುಗಳ ಕುರಿತಂತೆ ಇದುವರೆಗೂ ಹೆಚ್ಚಿನ ಅಧ್ಯಯನಗಳು ನಡೆದಿಲ್ಲ. ನಡೆದಿದ್ದರೂ ಬಿಡಿ ಲೇಖನಗಳು ಪ್ರಕಟಗೊಂಡಿವೆ. ಆದ್ದರಿಂದ ಈ ಕೊರತೆಯನ್ನು ನಿಗಿಸಲು ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಅಧ್ಯಯನಕ್ಕೆ ಜಿಲ್ಲೆಯಲ್ಲಿ ಕಂಡುಬರುವ ಶಾಸನಗಳು, ದೇವಾಲಯಗಳು, ಮೂರ್ತಿಶಿಲ್ಪಗಳು, ಸಾಹಿತ್ತಿಕ ಹಾಗೂ ಅಳಿವಿನ ಅಂಚಿನಲ್ಲಿರುವ ಅಥವಾ ಬದಲಾಗುತ್ತಿರುವ ಮೌಖಿಕ ನಂಬಿಕೆ ಮತ್ತು ಆಚರಣೆಗಳನ್ನು ಬಳಸಿಕೊಂಡು ಪ್ರಸ್ತುತ ಮಹಾಪ್ರಬಂಧವನ್ನು ಕಟ್ಟಿಕೊಡಲಾಗಿದೆ.

ಹೀಗೆ ಹತ್ತು ಹಲವು ಉದ್ದೇಶಗಳನ್ನಿಟ್ಟುಕೊಂಡು ಅಧ್ಯಯನ ಮುಖಿಯಾಗಿರುವ ಈ ಸಂಶೋಧನಾ ಮಹಾಪ್ರಬಂಧದಲ್ಲಿ ಲಭ್ಯವಾದ ಆಕರ ಸಾಮಗ್ರಿಗಳನ್ನು ಪರಾಮರ್ಶೆಗೆ ಒಳಪಡಿಸಿ, ಮಾರ್ಗದರ್ಶಕರೊಂದಿಗೆ ಚರ್ಚಿಸಿ, ಅವರ ಸಲಹೆ ಸೂಚನೆಗಳನ್ನು ಆಧರಿಸಿ ಹೊಸ ಹೊಸ ಸಂಗತಿಗಳನ್ನು ಅಳವಡಿಸಿಕೊಂಡಿದ್ದು, ಅವುಗಳನ್ನು ಮಹಾಪ್ರಬಂಧದ ಕೊನೆಯ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಅಧ್ಯಯನದ ವ್ಯಾಪ್ತಿ

ಯಾವುದೇ ಒಂದು ಅಧ್ಯಯನವು ಒಂದು ನಿರ್ದಿಷ್ಟ ಚೌಕಟ್ಟನ್ನು ಹೊಂದಿರುತ್ತದೆ. ಹಾಗೆಯೇ ಪ್ರಸ್ತುತ ಅಧ್ಯಯನವು ಸಹ ಒಂದು ನಿರ್ಧಿಷ್ಟ ವ್ಯಾಪ್ತಿಗೆ ಒಳಪಡಿಸಲಾಗಿದೆ. ಈ ಅಧ್ಯಯನಕ್ಕೆ ಎರಡೂ ಪ್ರಕಾರವಾಗಿ ಅಂದರೆ ಪ್ರಾದೇಶಿಕ ಮತ್ತು ಕಾಲಗಣನ ವ್ಯಾಪ್ತಿಯನ್ನು ಒಳಗೊಂಡಿದ್ದು, ಅದು ಈ ಕೆಳಗಿನಂತಿದೆ. ಪ್ರಸ್ತುತ ವಿಜಯಪುರ ಜಿಲ್ಲೆಯ ಶೈವಮತ ಅಧ್ಯಯನವು ನಿರ್ದಿಷ್ಟವಾದ ವ್ಯಾಪ್ತಿಯನ್ನು ಹೊಂದಿದ್ದು ಈ ಅಧ್ಯಯನದಲ್ಲಿ ಶೈವಧರ್ಮ ಎಂಬ ವಸ್ತುವಿಷಯವನ್ನೇ ಕೇಂದ್ರವಾಗಿರಿಸಿಕೊಳ್ಳಲಾಗಿದೆ.

ಈ ಅಧ್ಯಯನ ಶೀರ್ಷಿಕೆಯೇ ಸೂಚಿಸುವಂತೆ ಭೌಗೋಳಿಕವಾಗಿ ಜಿಲ್ಲೆಯ ವಿಜಯಪುರ, ಸಿಂದಗಿ, ಇಂಡಿ, ಬಸವನ ಬಾಗೇವಾಡಿ, ಮುದ್ದೇಬಿಹಾಳ ತಾಲೂಕುಗಳ ಪ್ರಾದೇಶಿಕ ವ್ಯಾಪ್ತಿಯನ್ನು ಪ್ರಸ್ತುತ ಅಧ್ಯಯನಕ್ಕೆ ಮಿತಿಗೊಳಿಸಲಾಗಿದೆ. ಆರಂಭದಿಂದ ೧೮ನೆಯ ಶತಮಾನದ ವರೆಗೆ ಕಾಲ ಮಿತಿಯನ್ನು ಹಾಕಿಕೊಂಡು ಈ ಜಿಲ್ಲೆಯಲ್ಲಿ ಆಳ್ವಿಕೆ ಮಾಡಿದ ಅರಸು ಮನೆತನಗಳ ಕಾಲಾವಧಿಯಲ್ಲಿ ಶೈವ ಧರ್ಮ ಬೆಳೆದು ಬಂದ ಬಗ್ಗೆ ಅವರು ಈ ನಾಡಿಗೆ ನೀಡಿದ ಕೊಡುಗೆಗಳು ಏನೆಂಬುದನ್ನು ಶೈವ ಶಾಸನಗಳು, ದೇವಾಲಯಗಳು, ಶಿಲ್ಪಗಳು, ಸಾಹಿತ್ಯ ಹಾಗೂ ಮೌಖಿಕ ಆಕರಗಳನ್ನು ಬಳಸಿಕೊಂಡು ವಿಜಯಪುರ ಜಿಲ್ಲೆಯ ಶೈವ ಮತದ ಚರಿತ್ರೆಯನ್ನು ಕಟ್ಟಿಕೊಡಲು ಪ್ರಯತ್ನಿಸಲಾಗಿದೆ.

ಈವರೆಗೂ ನಡೆದ ಅಧ್ಯಯನಗಳ ಸಮೀಕ್ಷೆ

ವಿಜಯಪುರ ಜಿಲ್ಲೆಯ ಶೈವ ಧರ್ಮದ ಕುರಿತು ಸ್ವತಂತ್ರ ಹಾಗೂ ಪ್ರತ್ಯೇಕ ಅಧ್ಯಯನ ಈ ವರೆಗೂ ಪ್ರಕಟಗೊಂಡಿಲ್ಲವಾದರೂ ಈ ಪ್ರದೇಶಕ್ಕೆ ಸಂಬಂಧಿಸಿದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಅಧ್ಯಯನಗಳು ನಡೆದಿವೆ. ಕರ್ನಾಟಕದ ಶೈವ ಧರ್ಮದ ಕುರಿತು ಪರಿಚಯಾತ್ಮಕ ಕೃತಿ, ಪಿಎಚ್.ಡಿ. ಮಹಾಪ್ರಬಂಧ, ಬಿಡಿಲೇಖನಗಳು ಪ್ರಕಟವಾಗಿವೆ. ಇವು ಪ್ರಸ್ತುತ ಸಂಶೋಧನಾ ವಿಷಯಕ್ಕೆ ಪೂರಕವಾದ ಮಾಹಿತಿಗಳನ್ನು ಒದಗಿಸುತ್ತವೆ.

ವಿಜಯಪುರ ಜಿಲ್ಲೆಯ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ತಿಳಿಯಪಡಿಸುವ ಕೃತಿಗಳನ್ನು ಈಗಾಗಲೇ ಪುರಾತತ್ವ ಮತ್ತು ಇತಿಹಾಸ ವಿದ್ವಾಂಸರುಗಳು ಪ್ರಕಟಿಸಿದ್ದಾರೆ. ಎಸ್.ಕೆ. ಕೊಪ್ಪಾ ಅವರ ತರ್ದವಾಡಿ ನಾಡು ಒಂದು ಅಧ್ಯಯನ, ವಾಸುದೇವ ಬಡಿಗೇರ ಅವರ ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ ಬಸವನ ಬಾಗೇವಾಡಿ, ವಿ.ಎಸ್. ಶೇಕದಾರ, ವಿಜಾಪುರ ಜಿಲ್ಲೆಯ ದೇಸಗತಿಗಳು, ಕೌಜಲಗಿ ಹನುಮಂತರಾಯರು, ವಿಜಾಪುರ ದರ್ಶನ, ಎಚ್.ಎಮ್. ಕಡಕೋಳ (ಸಂ.), ಬಿಜಾಪುರ ಜಿಲ್ಲಾ ಸಾಂಸ್ಕೃತಿಕ ಪರಂಪರೆ, ಕೃಷ್ಣ ಕೊಲ್ಹಾರಕುಲಕರ್ಣಿ ಅವರ ಬಿಜಾಪುರ ಆದಿಲ್‌ಶಾಹಿ ಕೃತಿಗಳು, ಸುಭಾಸ ರಾ. ಚಿಂಚೋಳಿ, ಪ್ರಾಕ್ತನ ಶಾಸ್ತ್ರದ ಹಿನ್ನೆಲೆಯಲ್ಲಿ ವಿಜಯಪುರ ಜಿಲ್ಲೆಯಲ್ಲಿರುವ ಕಲ್ಯಾಣ ಚಾಳುಕ್ಯರ ಕಾಲದ ವಾಸ್ತು ಮತ್ತು ಶಿಲ್ಪಕಲೆ, ಮುಸ್ತಾಕ್ ಅಹಮ್ಮದ, ಮಹಮ್ಮದ್ ಆದಿಲ್‌ಶಾಹನ ಜೀವನ ಮತ್ತು ಸಾಧನೆಗಳು, ಕೆ. ಚನ್ನಬಸಪ್ಪ, ಎರಡನೇ ಇಬ್ರಾಹಿಂ ಆದಿಲ್‌ಶಾಹನ ಜೀವನ ಮತ್ತು ಸಾಧನೆಗಳು ಎಂಬ ಪಿಎಚ್.ಡಿ ಮಹಾ ಪ್ರಬಂಧಗಳು ಮುಖ್ಯವಾಗಿ ರಾಜಕೀಯ ಇತಿಹಾಸವನ್ನು ಕುರಿತವಾದರೂ ಆ ಕಾಲದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಸ್ಥಿತಿ ಹಾಗೂ ಕಲೆ ಮತ್ತು ವಾಸ್ತುಶಿಲ್ಪವನ್ನು ನಿರೂಪಿಸುವವು. ಶೈವ ಧರ್ಮದ ಕುರಿತು ಸಾಕಷ್ಟು ಕೃತಿಗಳು ಹೊರಬಂದಿವೆ ಆದರೆ ವಿಜಯಪುರ ಜಿಲ್ಲೆಗೆ ಸಂಬಂಧಿಸಿದಂತೆ ಪ್ರತ್ಯೇಕ ಅಧ್ಯಯನಗಳು ನಡೆದಿಲ್ಲ. ಶೈವ ಧರ್ಮದ ಕುರಿತಾಗಿ ನಡೆದಿರುವ ಕೃತಿಗಳನ್ನು ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಳ್ಳಲಾಗಿದೆ.

ಗೋಪಿನಾಥ ಟಿ.ಎ., ರವರು Elements of Hindu Iconography, Vol-II, Part-I ಈ ಗ್ರಂಥವು ಶೈವ ಧರ್ಮದ ಪ್ರತಿಮಾಲಕ್ಷಣಗಳ ಕುರಿತು ಪೌರಾಣಿಕ ಹಿನ್ನಲೆ ಹಾಗೂ ಶಿಲ್ಪಗಳ ಮಾಹಿತಿಯನ್ನು ನೀಡುತ್ತದೆ. ಅಲ್ಲದೆ ಶೈವ ಧರ್ಮದ ಕುರಿತು ಲಿಂಗಗಳು ಮತ್ತು ಪ್ರಕಾರಗಳು ಶಿವನ ರೂಪಗಳಾದ ಅನುಗ್ರಹ, ಸಂಹಾರ, ಆಲಿಂಗನ, ನೃತ್ಯ, ದಕ್ಷಿಣಾ ಮೂರ್ತಿ, ಭಿಕ್ಷಾಟನಾ ಮೂರ್ತಿ, ಶಿವ ಪಾರ್ವತಿ ಇತ್ಯಾದಿ ವಿವರಗಳ ಕುರಿತು ಉಲ್ಲೇಖಿಸುವ ಗ್ರಂಥವಾಗಿದೆ. ಸುಧಾಕರ ಚಟ್ಟೋಪಾಧ್ಯಾಯರು Evolution of Hindu Sects ಗ್ರಂಥದಲ್ಲಿ ಶೈವ ಧರ್ಮದ ಹಿನ್ನಲೆ, ಲಕುಲೀಶ ಪಾಶುಪತದ ವಿವರಣೆ ಹಾಗೂ ಶಕ್ತಿ ದೇವತೆಗಳ ಕುರಿತು ಅಧ್ಯಯನ ಮಾಡಿದ್ದಾರೆ. ಆದರೆ ಶಿವನ ಶಿಲ್ಪಗಳ ಮಾಹಿತಿಯ ಕೊರತೆ ಕಂಡು ಬರುತ್ತದೆ. ಬ್ಯಾನರ್ಜಿ ಜೆ.ಎನ್. ರವರು Development of Hindu Iconography ಗ್ರಂಥವು ಪ್ರತಿಮಾ ಲಕ್ಷಣದ ಉಗಮ ಮತ್ತು ಬೆಳವಣಿಗೆಯ ಕುರಿತು ವಿವರಿಸುತ್ತದೆ. ಅದರಲ್ಲಿ ಶೈವ ಪ್ರತಿಮಾ ಲಕ್ಷಣದ ಕುರಿತು ಅಧ್ಯಾಯ ೧೧ ರಲ್ಲಿ ಚರ್ಚಿಸಿದ್ದಾರೆ. ನಂದೀಮಠ ಎಸ್.ಸಿ. ರವರು ಕನ್ನಡ ನಾಡಿನ ಚರಿತ್ರೆ (ಎರಡನೇ ಭಾಗ) ಕೃತಿಯಲ್ಲಿ ಕರ್ನಾಟಕದ ಧರ್ಮಗಳು ಶಿವ ಮತ್ತು ಹಿಂದು ಧರ್ಮದ ಸಂಕ್ಷಿಪ್ತ ಮಾಹಿತಿ ನೀಡಿದ್ದಾರೆ.

ಬಂಡಾರಕರ ಆರ್.ಜಿ., ರವರ Vaishnavism, Shaivism & Minor Religious Systems ಗ್ರಂಥದಲ್ಲಿ ರುದ್ರ-ಶಿವನ ಕಲ್ಪನೆ, ಮಹಾಭಾರತ, ಉಪನಿಷತ್ತುಗಳಲ್ಲಿ ಶಿವನ ವರ್ಣನೆ, ಲಿಂಗಪೂಜೆ, ಪಂಗಡಗಳು, ಪೂಜಾ ವಿಧಾನ, ಶೈವ ಪದ್ಧತಿ, ಕಾಪಾಲಿಕ, ಕಾಳಾಮುಖ, ಕಾಶ್ಮೀರಿ ಶೈವ ಧರ್ಮ ದ್ರಾವಿಡ ದೇಶಗಳಲ್ಲಿನ ಶೈವ ಧರ್ಮದ ಕುರಿತು ವಿವರಿಸುತ್ತದೆ.

ಡೇವಿಡ್ ಎನ್. ಲೋರಂಜನ್ ರವರು The Kapalikas & Kalamukhas Two Lost Shaiva Sects ಗ್ರಂಥದಲ್ಲಿ ಶೈವ ಪಂಥಗಳಾದ ಕಾಪಾಲಿಕಾ ಮತ್ತು ಕಾಳಾಮುಖರ ಕುರಿತು ಮಾಹಿತಿ ನೀಡುತ್ತದೆ. ನಾರಾಯಣ ಸಿ.ವಿ. ರವರ Early History of Shaivism in South India ಗ್ರಂಥದಲ್ಲಿ ದಕ್ಷಿಣ ಭಾರತದ ಶೈವ ಧರ್ಮದ ಕುರಿತು ಮತ್ತು ವೇದ ಕಾಲದ ರುದ್ರ-ಶಿವ-ಶಿವಲಿಂಗ ಕುರಿತು ಚರ್ಚಿಸಿದ್ದಾರೆ. ಕಪಟರಾಳ ಕೃಷ್ಣರಾಯರ ಕರ್ನಾಟಕ ಲಾಕುಳ – ಶೈವರ ಇತಿಹಾಸ ಗ್ರಂಥವು ಶೈವ ಧರ್ಮದ ಒಂದು ಪಂಥವಾದ ಲಾಕುಳ ಶೈವದ ಕುರಿತು ಶಿವಲಿಂಗ ಸ್ಥಾಪನೆಯ ಉದ್ದೇಶ, ದೇವ ಧರ್ಮದ ಸಂರಕ್ಷಣೆ, ಲಾಕುಳ ಸಂಪ್ರದಾಯ, ಪೂಜೆ ಹಾಗೂ ಕ್ರಿ.ಶ. ಸುಮಾರು ೭ನೇ ಶತಮಾನದಿಂದ ೧೫ನೇ ಶತಮಾನದವರೆಗಿನ ಶಾಸನಗಳಲ್ಲಿ ಕಂಡು ಬರುವ ಲಾಕುಳ ಪರಂಪರೆಯ ಹೆಸರುಗಳ ವಿವರಣೆ ಇದೆ. ಇದು ಕರ್ನಾಟಕದ ಲಾಕುಳ ಶೈವರ ಬಗ್ಗೆ ತಿಳಿಸುವ ಮೊದಲ ಗ್ರಂಥವಾಗಿದೆ. ವಿ.ಎಸ್. ಪಾಠಕ್ ರವರ History of Shaiva Cult in Northern India (ಕ್ರಿ.ಶ.೭೦೦ ರಿಂದ ಕ್ರಿ.ಶ.೧೨೦೪) ಗ್ರಂಥವು ಶಾಸನಗಳನ್ನು ಅವಲಂಬಿಸಿ ಉತ್ತರ ಭಾರತದ ಶೈವ ಧರ್ಮದ ಪಂತಗಳಾದ ಪಾಶುಪತ, ಕಾಳಾಮುಖ, ಶೈವಸಿದ್ಧಾಂತದ ಕುರಿತು ಮಾಹಿತಿ ನೀಡುತ್ತದೆ.

ಚಿದಾನಂದಮೂರ್ತಿ ಎಂ. ರವರು ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಎಂಬ ಕೃತಿಯನ್ನು ಬರೆದಿದ್ದು ಹದಿನಾಲ್ಕು ಅಧ್ಯಾಯಗಳನ್ನು ಒಳಗೊಂಡಿದೆ. ಆರನೆಯ ಅಧ್ಯಾಯದಲ್ಲಿ ಶೈವ ಧರ್ಮದ ಪ್ರಾಚೀನತೆ, ಶೈವ ಪಂಥಗಳು, ಶೈವ ದೇವಾಲಯಗಳು, ತಾಂತ್ರಿಕ ಆಚರಣೆಗಳು ಮೊದಲಾದವುಗಳನ್ನು ವಿವರಿಸಿದ್ದಾರೆ. ಶ್ರೀನಿವಾಸ ಅಯ್ಯಂಗಾರ್ ರವರ ಶೈವಾಗಮ ಗ್ರಂಥದಲ್ಲಿ ಶೈವ ಆಚಾರ , ವಿಧಿಗಳ ಬಗ್ಗೆ ಮಾಹಿತಿ ನೀಡುತ್ತದೆ . ನಾಗರಾಜು ಡಿ.ಎಮ್. ರವರು ಕಲ್ಯಾಣ ಚಾಲುಕ್ಯ ಆರನೇ ವಿಕ್ರಮಾದಿತ್ಯನ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಎಂಬ ಕೃತಿಯಲ್ಲಿ ಶೈವ ಧರ್ಮದ ಉಗಮ ಮತ್ತು ಶೈವ ಧರ್ಮಕ್ಕೆ ಆರನೇ ವಿಕ್ರಮಾದಿತ್ಯನು ನೀಡಿದ ಕೊಡುಗೆಯನ್ನು ಉಲ್ಲೇಖಿಸಿದ್ದಾರೆ.

ಕಡಪಟ್ಟಿ ಮಲ್ಲಪ್ಪನವರು ಪ್ರಾಚೀನ ಕರ್ನಾಟಕದಲ್ಲಿ ಶೈವ ಧರ್ಮ ಎಂಬ ಕೃತಿಯಲ್ಲಿ ಪ್ರಾಚೀನ ಕರ್ನಾಟಕದಲ್ಲಿದ್ದ ಹಲವಾರು ಧರ್ಮಗಳ ಜೊತೆಗೆ ಶೈವ ಧರ್ಮದ ಉಗಮ, ವಿಕಾಸ, ವಿವಿಧ ರಾಜ ಮನೆತನಗಳ ಕಾಲದಲ್ಲಿ ಶೈವ ಧರ್ಮದ ಸ್ಥಿತಿಗತಿ ಕುರಿತು ಚರ್ಚಿಸಿದ್ದಾರೆ. ಆದರೆ ಇವರ ಅಧ್ಯಯನ ಬಾದಾಮಿ ಚಾಲುಕ್ಯರವರೆಗೆ ಮಾತ್ರ ಕಂಡು ಬರುತ್ತದೆ. ಸುಶೀಲಾ ಎಸ್. ದೇಸಾಯಿ ರವರ ಶೈವ ಪರಂಪರೆ–ಕೊಪ್ಪಳ ಜಿಲ್ಲೆ ಇದರಲ್ಲಿ ಕೊಪ್ಪಳ ಜಿಲ್ಲೆಯ ಶೈವ ಪರಂಪರೆಯ ಕುರಿತು ಅಧ್ಯಯನ ಮಾಡಿದ್ದಾರೆ. ಸದ್ಯೋಜಾತ ಸ್ವಾಮೀಜಿಯವರ Shaiva & Veerashaiva Mathas in Karnataka ಕರ್ನಾಟಕದಲ್ಲಿ ಶೈವ ಮತ್ತು ವೀರಶೈವ ಮಠಗಳ ಕುರಿತು ವಿವರಿಸಿದ್ದಾರೆ. ಹಿರೇಮಠ ವಿ.ಆರ್. ರವರು Religious Condition during The Chalukyas of Kalyan ಗ್ರಂಥದ ನಾಲ್ಕನೇ ಅಧ್ಯಾಯದಲ್ಲಿ ಶೈವ ಧರ್ಮದ ಪ್ರಕಾರಗಳು ಶೈವ ಆಚಾರ್ಯರುಗಳು, ಶೈವ ಮಠ ದೇವಾಲಯಗಳ ಕುರಿತು ವಿವರಿಸಿದ್ದಾರೆ. ಬೋಳಾರ ವಿ.ಆರ್. ರವರ Temple of Karnataka An Epigraphical Study ಎಂಬ ಕೃತಿಯಲ್ಲಿ ಆರಂಭಿಕ ಕಾಲಘಟ್ಟದಿಂದ ಹಿಡಿದು ಕ್ರಿ.ಶ. ೧೦೫೦ ರ ವರೆಗಿನ ಶೈವ ಧರ್ಮದ ಬೆಳವಣಿಗೆಯ ಕುರಿತು ಮಾಹಿತಿ ನೀಡಿದ್ದಾರೆ, ಆದರೆ ಈ ಕೃತಿ ಕ್ರಿ.ಶ.೧೦೫೦ ಕ್ಕೆ ಸೀಮಿತಗೊಳ್ಳುವುದರ ಜೊತೆಗೆ ದೇವಾಲಯಗಳನ್ನು ಹಿನ್ನಲೆಯನ್ನಾಗಿಟ್ಟುಕೊಂಡು ಕೈಗೊಂಡ ಅಧ್ಯಯನವಾಗಿದೆ. ಕೆ. ವಸಂತ ಲಕ್ಷ್ಮೀ ಯವರು ಕರ್ನಾಟಕದ ಶೈವ ಶಿಲ್ಪಗಳು ಎಂಬ ಕೃತಿಯಲ್ಲಿ ಶೈವ ಶಿಲ್ಪಗಳ ಕುರಿತು ವಿವರಿಸಿದ್ದಾರೆ. ಡಾ. ವಾಸುದೇವ ಬಡಿಗೇರ ರವರ ಕರ್ನಾಟಕ ದೇವಾಲಯ ಕೋಶ ವಿಜಾಪುರ ಜಿಲ್ಲೆ ಎಂಬ ಕೃತಿಯಲ್ಲಿ ಜಿಲ್ಲೆಯಲ್ಲಿರುವ ದೇವಾಲಯಗಳ ಸಂಕ್ಷಿಪ್ತ ಮಾಹಿತಿ ಒದಗಿಸಿದ್ದಾರೆ. ಎಸ್.ಎಸ್.ಹಿರೇಮಠ ಅವರು ಪಾಶುಪತ ಮತ್ತು ಕಾಳಾಮುಖರ ಉಗಮದ ಕುರಿತಾದ ಅಧ್ಯಯನ ಕೈಗೊಂಡಿದ್ದಾರೆ.

ಹೀಗೆ ಪ್ರಸ್ತುತ ಅಧ್ಯಯನ ಪ್ರದೇಶದ ಬಗ್ಗೆ ಹಲವು ಪ್ರಮುಖ ಕೃತಿಗಳನ್ನು ಮಾತ್ರ ಉಲ್ಲೇಖಿಸಿದ್ದು, ಕರ್ನಾಟಕದ ಉದ್ದಕ್ಕೂ ಶೈವ ಧರ್ಮದ ಕುರಿತಾಗಿ ಇಡಿಯಾಗಿ ಅಲ್ಲದಿದ್ದರೂ ಅಲ್ಲಲ್ಲಿ ಅಲ್ಪ ಪ್ರಮಾಣದ ಅಧ್ಯಯನ ನಡೆದಿರುವುದು ಕಂಡು ಬರುತ್ತದೆ. ಅವುಗಳಲ್ಲಿ ಕೆಲವೊಂದು ಮಾತ್ರ ವಿಜಯಪುರ ಜಿಲ್ಲೆಯ ಶೈವ ಧರ್ಮದ ಕುರಿತಾಗಿ ಅಲ್ಪ ಮಾಹಿತಿಯನ್ನು ನೀಡುತ್ತಿದ್ದು, ನೇರವಾಗಿ ಜಿಲ್ಲೆಯ ಶೈವ ಧರ್ಮಕ್ಕೆ ಸಂಬಂಧಿಸಿದಂತೆ ವ್ಯವಸ್ಥಿತವಾದ ಅಧ್ಯಯನ ನಡೆಯದಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನದಲ್ಲಿ ಅಂತಹ ಒಂದು ಪ್ರಯತ್ನವನ್ನು ಮಾಡಲಾಗಿದೆ.

ಅಧ್ಯಯನದ ವಿಧಾನ

ಪ್ರತಿಯೊಂದು ಅಧ್ಯಯನಕ್ಕೂ ತನ್ನದೇ ಆದ ವಿಧಾನವೆಂಬುದು ಇದೆ. ಈ ಅಧ್ಯಯನವನ್ನು ಯಾವ ಬಗೆಯಲ್ಲಿ ಹೇಳಲಾಗಿದೆ, ಅಲ್ಲಿ ಅಧ್ಯಯನಕ್ಕೊಳಪಡಿಸಿದ ವಿಷಯವನ್ನು ವಿಶ್ಲೇಷಿಸಿದ ಬಗೆ ಯಾವುವು ಮತ್ತು ಅಧ್ಯಯನಕ್ಕೊಳಪಡಿಸಿದ ವಿಷಯವನ್ನು ಗುರುತಿಸುವ ಪರಿಯನ್ನು ಕುರಿತು ಹೇಳುವುದೇ ವಿಧಾನವಾಗಿದೆ. ಒಂದು ಸಂಶೋಧನಾ ಪ್ರಬಂಧವನ್ನು ರಚಿಸುವಲ್ಲಿ ಪೂರ್ವಯೋಜಿತ ಅಧ್ಯಯನ ಕ್ರಮವನ್ನು ಅನುಸರಿಸುವುದು ಅತೀ ಮುಖ್ಯ. ಇದು ಈ ಅಧ್ಯಯನವನ್ನು ವ್ಯವಸ್ಥಿತವಾಗಿ ಸುಲಭವಾಗಿ ಕಟ್ಟಿಕೊಡುವಲ್ಲಿ ಸಹಾಯಕವಾಗುತ್ತದೆ. ಒಂದೇ ಅರ್ಥದಲ್ಲಿ ಹೇಳುವುದಾದರೆ ಸಂಶೋಧನಾ ಪ್ರಬಂಧಕ್ಕೆ ಪ್ರಥಮ ಹಾಗೂ ಅಂತಿಮ ರೂಪವನ್ನು ಈ ಅಧ್ಯಯನ ಕ್ರಮವೇ ನೀಡುತ್ತದೆ ಎಂದು ಹೇಳಬಹುದು. ಪ್ರಸ್ತುತ ಅಧ್ಯಯನವು "ಶೈವಮತ: ಸಾಂಸ್ಕೃತಿಕ ಅಧ್ಯಯನ (ವಿಜಯಪುರ ಜಿಲ್ಲೆಯನ್ನು ಅನುಲಕ್ಷೀಸಿ)" ಎಂಬ ಶೀರ್ಷಿಕೆಯನ್ನು ಹೊಂದಿದ್ದು, ಈ ಮುಂದಿನ ಅಧ್ಯಯನ ಕ್ರಮವನ್ನು ಅನುಸರಿಸಲಾಗಿದೆ. ಪ್ರಪ್ರಥಮವಾಗಿ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಗ್ರಂಥಸೂಚಿಯನ್ನು ತಯಾರಿಸಿ ಅಕಾರದಿಯಾಗಿ ಜೋಡಿಸಿಕೊಳ್ಳಲಾಯಿತು. ಪ್ರಸ್ತುತ ಅಧ್ಯಯನಕ್ಕೆ ಶಾಸನಗಳು, ದೇವಾಲಯಗಳು ಪ್ರಾಥಮಿಕ ಆಕರಗಳಾಗಿದ್ದು ವ್ಯವಸ್ಥಿತವಾದ ಪೂರ್ವನಿಯೋಜಿತ ವಿಧಾನವನ್ನು ಅನುಸರಿಸಿ ಕ್ಷೇತ್ರಕಾರ್ಯವನ್ನು ಕೈಗೊಳ್ಳಲಾಯಿತು. ಮೊದಲನೆಯದಾಗಿ ಜಿಲ್ಲೆಗೆ ಸಂಭಂಧಿಸಿದಂತೆ ಇದುವರೆಗೆ ಆಗಿರುವ ಸಂಶೋಧನಾ ಕೃತಿಗಳನ್ನು ಸಂಗ್ರಹಿಸಿ ಜಿಲ್ಲೆಯ ಇತಿಹಾಸವನ್ನು ಮತ್ತು ಇಲ್ಲಿಯ ಧಾರ್ಮಿಕತೆಯನ್ನು ಕುರಿತು ಸಮಗ್ರವಾದ ಅಧ್ಯಯನ ಮಾಡಿ. ಅವಶ್ಯಕವಾದ ಮಾಹಿತಿಗಳನ್ನು ಟಿಪ್ಪಣಿ ಮಾಡಿಕೊಳ್ಳಲಾಯಿತು. ನಂತರ ಜಿಲ್ಲೆಗೆ ಸಂಬಂಧಿಸಿದ ಶಾಸನಗಳನ್ನು ಸಂಗ್ರಹಿಸಿ ಅದರಲ್ಲಿ ಶೈವ ಶಾಸನಗಳನ್ನು ವಿಭಜಿಸಿಕೊಳ್ಳಲಾಯಿತು. ನಂತರ ಜಿಲ್ಲೆಯ ಶೈವ ಧರ್ಮ ಎಂಬ ಅಧ್ಯಯನ ವಿಶ್ಲೇಷಣೆಯ ಸಂದರ್ಭದಲ್ಲಿ ಈ ಎಲ್ಲ ಶಾಸನಗಳನ್ನು ಬಳಸಿಕೊಂಡು ವಿವರಿಸಲಾಗಿದೆ. ನಂತರ ಈ ಜಿಲ್ಲೆಯಲ್ಲಿ ಕಂಡುಬರುವ ಪ್ರಮುಖ ದೇವಾಲಯಗಳಿಗೆ ಭೇಟಿಕೊಟ್ಟು ಪ್ರತಿ ಶೈವ ದೇವಾಲಯಗಳ ಲಕ್ಷಣಗಳು, ಅಲ್ಲಿಯ ಧಾರ್ಮಿಕ ವಿಧಿ ವಿಧಾನಗಳು ಹಾಗೂ ಆಚರಣೆಗಳನ್ನು ಕುರಿತು ಮಾಹಿತಿಯನ್ನು ಸಂಗ್ರಹಿಸಲಾಯಿತು. ನಂತರ ದೇವಾಲಯದ ಪ್ರತ್ಯೇಕ ಭಾಗಗಳ ಛಾಯಾಚಿತ್ರಗಳನ್ನು ತೆಗೆದುಕೊಳ್ಳಲಾಯಿತು. ಇದರಲ್ಲಿ ವಾಸ್ತುಶಿಲ್ಪದ ಸೂಕ್ಷ್ಮ ಅಧ್ಯಯನದ ದೃಷ್ಠಿಯಿಂದ ದೇವಾಲಯದ ಪ್ರತಿಭಾಗ ಅಂದರೆ ವಾಸ್ತುಶಿಲ್ಪದಲ್ಲಿ ಬರುವ ಷಡ್ವರ್ಗಗಳಾದ ಅಧಿಷ್ಠಾನ, ಭಿತ್ತಿ, ಪ್ರಸ್ತರ, ಗ್ರೀವ, ಶಿಖರ ಮತ್ತು ಸ್ತೂಪಿ ಮುಂತಾದ ಭಾಗಗಳು ಸರಿಯಾಗಿ ಗೋಚರಿಸುವಂತೆ ಛಾಯಾಚಿತ್ರಗಳನ್ನು ತೆಗೆದುಕೊಳ್ಳಲಾಯಿತು, ಹಾಗೂ ದೇವಾಲಯದ ಒಳ

ಭಾಗಗಳಾದ, ಕ್ರಮವಾಗಿ ಗರ್ಭಗೃಹ, ಅಂತರಾಳ, ನವರಂಗ, ಮುಖಮಂಟಪ, ಸಭಾಮಂಟಪ, ನಂದಿಮಂಟಪ ಮತ್ತು ಇವುಗಳಲ್ಲಿನ ಕಂಬಗಳು ಹಾಗೂ ಅವುಗಳ ಮೇಲೆ ಇರುವ ಉಬ್ಬುಕೆತ್ತನೆಯ ಶಿಲ್ಪಗಳ ಛಾಯಾಚಿತ್ರಗಳನ್ನು ತೆಗೆದುಕೊಳ್ಳಲಾಯಿತು. ದೇವಾಲಯದ ಪ್ರಾಕಾರದ ಒಳ ಆವರಣದಲ್ಲಿ ದೊರೆಯುವ ಶಾಸನಗಳು, ಬಿಡಿ ಶಿಲ್ಪಗಳ ಛಾಯಾಚಿತ್ರಗಳನ್ನು ತೆಗೆದುಕೊಳ್ಳಲಾಯಿತು. ನಂತರ ಅನುಷಂಗಿಕ ಆಕರಗಳಿಂದ ಸಂಗ್ರಹಿಸಿದ ಮಾಹಿತಿ, ಶಾಸನಗಳು, ದೇವಾಲಯಗಳು ಹಾಗೂ ಸ್ಥಳೀಯರಿಂದ ಸಂಗ್ರಹಿಸಿದ ನಂಬಿಕೆ, ಆಚರಣೆಗಳ ಕುರಿತಾಗಿರುವ ಎಲ್ಲ ವಿಷಯಗಳನ್ನು ಒಟ್ಟುಗೂಡಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಒಟ್ಟಾರೆಯಾಗಿ ಈ ಮಹಾಪ್ರಬಂಧವು ಅಧ್ಯಯನ, ಕ್ಷೇತ್ರಕಾರ್ಯ ಹಾಗೂ ವಿಶ್ಲೇಷಣಾ ವಿಧಾನವನ್ನು ಒಳಗೊಂಡಿದೆ. ಹೀಗೆ ಮೇಲಿನ ವಿಧಾನವನ್ನು ಅನುಸರಿಸಿ ಪ್ರಸ್ತುತ ಮಹಾಪ್ರಬಂಧವನ್ನು ಅಂತರ್‌ಶಿಸ್ತಿಯ ಅಧ್ಯಯನದ ಮೂಲಕ ಅಧ್ಯಯನವನ್ನು ಪೂರ್ಣಗೊಳಿಸಲಾಗಿದೆ.

ಅಧ್ಯಯನದ ಸ್ವರೂಪ

ಪ್ರತಿಯೊಂದು ಅಧ್ಯಯನವು ತನ್ನದೇ ಆದ ಸ್ವರೂಪವನ್ನು ಹೊಂದಿರುವಂತೆ ಪ್ರಸ್ತುತ ಅಧ್ಯಯನವು ಸಹ ವಿಷಯಕ್ಕೆ ಸಂಬಂಧಿಸಿದಂತೆ ಏಳು ಅಧ್ಯಾಯಗಳಾಗಿ ವಿಂಗಡಿಸಲಾಗಿದ್ದು ಪ್ರತಿಯೊಂದು ಅಧ್ಯಾಯವು ಉಪಶೀರ್ಷಿಕೆಗಳನ್ನೊಳಗೊಂಡಿದೆ.

ಮೊದಲನೆಯ ಅಧ್ಯಾಯವು ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ವಿಧಾನಕ್ಕೆ ಸಂಬಂಧಿಸಿದ್ದಾಗಿದ್ದು, ಈ ಅಧ್ಯಯನಕ್ಕೆ ಸಹಾಯಕವಾದ ಆಕರಗಳು ಸೇರಿದಂತೆ 'ಶೈವಮತ : ಸಾಂಸ್ಕೃತಿಕ ಅಧ್ಯಯನ (ವಿಜಯಪುರ ಜಿಲ್ಲೆಯನ್ನು ಅನುಲಕ್ಷಿಸಿ)' ಎಂಬ ವಿಷಯದ ಬಗ್ಗೆ ಈ ಹಿಂದೆ ನಡೆದಿರುವ ಅಧ್ಯಯನಗಳನ್ನು ಕುರಿತು ವಿವರಿಸಲಾಗಿದೆ. ಇಲ್ಲಿ ಪ್ರಸ್ತುತ ಸಂಶೋಧನ ಅಧ್ಯಯನಕ್ಕೆ ಅಗತ್ಯವಾದ ವಿಷಯಗಳನ್ನು ಚರ್ಚಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಭೌಗೋಳಿಕತೆ ಲಕ್ಷಣಗಳು, ಐತಿಹಾಸಿಕ ಹಿನ್ನೆಲೆ ಮತ್ತು ರಾಜಕೀಯ ಇತಿಹಾಸದ ಬಗ್ಗೆ ಚರ್ಚಿಸಲಾಗಿದೆ. ಪ್ರಾಗಿತಿಹಾಸ ಮತ್ತು ಮೌರ್ಯ ಸಾಮ್ರಾಜ್ಯದ ಕಾಲಾವಧಿಯಿಂದ ಬ್ರಿಟಿಷರ ಆಡಳಿತದವರೆಗಿನ ಇತಿಹಾಸವನ್ನು ಶಾಸನಗಳು ಹಾಗೂ ಸಾಹಿತ್ತಿಕ ಆಕರಗಳನ್ನು ಇಟ್ಟುಕೊಂಡು ಚರ್ಚಿಸಲಾಗಿದೆ.

ಮೂರನೆಯ ಅಧ್ಯಾಯವು ಶೈವಧರ್ಮದ ಪ್ರಾಚೀನತೆ ಎಂಬುದಾಗಿದ್ದು, ಇದರಲ್ಲಿ ಸಿಂಧೂ ನಾಗರಿಕತೆಯಿಂದ ಮೌರ್ಯರು ಮೊದಲ್ಗೊಂಡು ದಕ್ಷಿಣ ಭಾರತದಲ್ಲಿ ಮುಖ್ಯವಾಗಿ ಕರ್ನಾಟಕದಲ್ಲಿ

ಆಳಿದ ಹಲವು ಅರಸುಮನೆತನಗಳಲ್ಲಿ ಶೈವಧರ್ಮಕ್ಕೆ ದೊರಕಿದ ಪ್ರಾಮುಖ್ಯತೆಯನ್ನು ಹೇಳಲಾಗಿದೆ. ವೇದಗಳಲ್ಲಿ ಶೈವಾಗಮಗಳಲ್ಲಿ, ರಾಮಾಯಣ-ಮಹಾಭಾರತದ ಕಾವ್ಯಗಳಲ್ಲಿ, ಪುರಾಣಗಳಲ್ಲಿ ಶಿವನ ಉಲ್ಲೇಖಗಳು ಮತ್ತು ಪ್ರಾಚೀನತೆಯನ್ನು ವಿವರಿಸಲಾಗಿದೆ. ಅಲ್ಲದೆ ಶೈವಧರ್ಮದ ಪ್ರಕಾರಗಳು, ಪಂಗಡಗಳು ಕುರಿತು ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯವು ವಿಜಯಪುರ ಜಿಲ್ಲೆಯ ಶೈವ ಮತ ಎಂಬುದಾಗಿದ್ದು, ಶೈವ ಪರಂಪರೆಗೆ ಸಂಬಂಧಿಸಿದಂತೆ ಅದರ ಪ್ರಭೇಧಗಳು, ದಾನ ದತ್ತಿಗಳು, ಗುರು ಪರಂಪರೆ, ಸ್ಥಾನಾಚಾರ್ಯರು, ಮಠಗಳು, ಅವರ ಆಚರಣೆಗಳು ಮತ್ತು ಅವರು ನೀಡಿದ ಕೊಡುಗೆಗಳನ್ನು ವಿಶ್ಲೇಷಿಸಲಾಗಿದೆ.

ಐದನೆಯ ಅಧ್ಯಾಯವು ವಿಜಯಪುರ ಜಿಲ್ಲೆಯ ಪ್ರಮುಖ ಶೈವ ದೇವಾಲಯಗಳು ಎಂಬುದಾಗಿದ್ದು, ಜಿಲ್ಲೆಯಲ್ಲಿ ಕಂಡುಬರುವ ಪ್ರಮುಖ ಶೈವ ದೇವಾಲಯಗಳಿಗೆ ಭೇಟಿ ಕೊಟ್ಟು ಮಾಹಿತಿಯನ್ನು ಸಂಗ್ರಹಿಸಿ ಪ್ರಮುಖ ಶೈವ ದೇವಾಲಯಗಳನ್ನು ಅಧ್ಯಯನಕ್ಕೊಳಪಡಿಸಲಾಗಿದೆ. ಪ್ರತಿ ದೇವಾಲಯದ ಕಲೆ ಮತ್ತು ವಾಸ್ತುಶಿಲ್ಪವನ್ನು ಪರಿಚಯಿಸುವುದರ ಜೊತೆಗೆ ಶಾಸನೋಕ್ತ ದೇವಾಲಯಗಳನ್ನು ಕುರಿತು ಇಲ್ಲಿ ಪ್ರಸ್ತಾಪಿಸಲಾಗಿದೆ.

ಆರನೆಯ ಅಧ್ಯಾಯವು ನಂಬಿಕೆ ಮತ್ತು ಆಚರಣೆಗಳು ಎಂಬುದಾಗಿದ್ದು, ಜಿಲ್ಲೆಯ ಸಾಂಸ್ಕೃತಿಕ ಪರಂಪರೆಯಾದಂತಹ ನಂಬಿಕೆ, ಆಚರಣೆ, ಐತಿಹ್ಯ ಹಾಗೂ ಧಾರ್ಮಿಕ ವಿಧಿವಿಧಾನಗಳನ್ನು ಶಾಸನಗಳು ಮತ್ತು ಮೌಖಿಕ ಆಕರಗಳನ್ನಿಟ್ಟುಕೊಂಡು ಚರ್ಚಿಸಲಾಗಿದೆ.

ಏಳನೆಯ ಅಧ್ಯಾಯವು ಸಮಾರೋಪವಾಗಿದ್ದು, ಇದು ಒಟ್ಟಾರೆ ಅಧ್ಯಯನದ ಸಂಕ್ಷಿಪ್ತ ರೂಪ, ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಂಡ ಒಟ್ಟು ಫಲಿತಗಳನ್ನು ಹಾಗೂ ಅದರ ಮಿತಿಗಳ ಬಗ್ಗೆ ತಿಳಿಸಲಾಗಿದ್ದು, ಹಾಗೆಯೇ ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ಅನುಬಂಧದಲ್ಲಿ ಗ್ರಂಥಋಣ, ನಕ್ಷೆ, ಛಾಯಾಚಿತ್ರಗಳನ್ನು ನೀಡಲಾಗಿದೆ.

ಹೀಗೆ "ಶೈವಮತ : ಸಾಂಸ್ಕೃತಿಕ ಅಧ್ಯಯನ (ವಿಜಯಪುರ ಜಿಲ್ಲೆಯನ್ನು ಅನುಲಕ್ಷಿಸಿ)" ಎಂಬ ಶೀರ್ಷಿಕೆ ಅಡಿಯಲ್ಲಿ ಜಿಲ್ಲೆಯ ಶೈವ ಧರ್ಮದ ಬೆಳವಣಿಗೆಯ ಸಮಗ್ರ ಚಿತ್ರಣವನ್ನು ಕಟ್ಟಿಕೊಡುವ ಪ್ರಯತ್ನವನ್ನು ಈ ಮಹಾ ಪ್ರಬಂಧದಲ್ಲಿ ಮಾಡಲಾಗಿದೆ.

ಅಧ್ಯಾಯ-೨

ಭೌಗೋಳಿಕ ಲಕ್ಷಣ ಮತ್ತು ರಾಜಕೀಯ ಇತಿಹಾಸ

ವಿಜಯಪುರ ಜಿಲ್ಲೆಯು ಕರ್ನಾಟಕ ರಾಜ್ಯದ ಉತ್ತರದ ಗಡಿಯ ಜಿಲ್ಲೆಯಾಗಿದ್ದು, ಒಟ್ಟು ೧೦,೫೪೧ ಚ.ಕಿ.ಮೀ. ವಿಸ್ತೀರ್ಣವನ್ನು ಹೊಂದಿದೆ. ೧೬.೮೨° ಉತ್ತರ ಅಕ್ಷಾಂಶ ಹಾಗೂ ೭೫.೭೨° ಪೂರ್ವ ರೇಖಾಂಶದವರೆಗೆ ಹರಡಿದೆ. ೧೯೯೭ರ ಪೂರ್ವದಲ್ಲಿ ಈಗಿನ ಬಾಗಲಕೋಟ ಜಿಲ್ಲೆಯನ್ನು ಒಳಗೊಂಡಂತೆ ೧೭,೦೬೯ ಚ.ಕಿ.ಮೀ. ವಿಸ್ತೀರ್ಣವನ್ನು ಹೊಂದಿತ್ತು. ಆಡಳಿತದ ದೃಷ್ಟಿಕೋನದಿಂದ ವಿಜಯಪುರವನ್ನು ವಿಭಾಗಿಸಿ ಬಾಗಲಕೋಟೆ ಜಿಲ್ಲೆಯನ್ನು ರಚಿಸಲಾಯಿತು. ಪ್ರಸ್ತುತ ಜಿಲ್ಲೆಯು ವಿಜಯಪುರ, ಇಂಡಿ, ಸಿಂದಗಿ, ಬಸವನಬಾಗೇವಾಡಿ ಮತ್ತು ಮುದ್ದೇಬಿಹಾಳ ತಾಲೂಕುಗಳನ್ನು ಒಳಗೊಂಡಿದೆ. ಈ ಜಿಲ್ಲೆಯ ಉತ್ತರ ಮತ್ತು ವಾಯವ್ಯ ದಿಕ್ಕುಗಳಲ್ಲಿ ಮಹಾರಾಷ್ಟ್ರದ ಸೋಲ್ಲಾಪುರ ಮತ್ತು ಸಾಂಗ್ಲಿ, ಪೂರ್ವದಲ್ಲಿ ಗುಲ್ಬರ್ಗಾ, ದಕ್ಷಿಣದಲ್ಲಿ ಬಾಗಲಕೋಟೆ ಮತ್ತು ಪಶ್ಚಿಮದಲ್ಲಿ ಬೆಳಗಾವಿ ಜಿಲ್ಲೆಯ ಗಡಿ ಪ್ರದೇಶವನ್ನು ಹೊಂದಿದೆ. ಉತ್ತರಕ್ಕೆ ಭೀಮಾನದಿ ದಕ್ಷಿಣಕ್ಕೆ ಕೃಷ್ಣಾನದಿ ಮೇರೆಯಾಗಿದ್ದು ಒಟ್ಟು ೬೪೮ ಗ್ರಾಮಗಳನ್ನೊಳಗೊಂಡಿದೆ. ಜಿಲ್ಲೆಯ ಸಿಂದಗಿ ತಾಲೂಕಿನ ದೇವೂರಿನಲ್ಲಿ ದೊರೆತಿರುವ ಕಲ್ಯಾಣ ಚಾಳುಕ್ಯದೊರೆ ಎರಡನೇ ಜಯಸಿಂಹನ ಕ್ರಿ.ಶ. ೧೦೨೯ರ ಶಾಸನದಲ್ಲಿ ವಿಜಯಪುರವನ್ನು 'ವಿಜಯಾಪುರ' ವೆಂದು ಉಲ್ಲೇಖಿಸಿದ್ದು ಪ್ರಥಮ ದಾಖಲೆಯಾಗಿದೆ. ಇದರ ತರುವಾಯ ಕಲ್ಯಾಣ ಚಾಳುಕ್ಯ ಮನೆತನಕ್ಕೆ ಸಂಬಂಧ ಪಡುವಂತಹ ಇನ್ನೂ ಕೆಲವು ಶಾಸನಗಳಲ್ಲಿ 'ರಾಜಧಾನಿ ವಿಜಯಾಪುರ' ವೆಂದು ಕ್ರಿ.ಶ. ೧೦೩೩ರ ವಿಜಯಪುರ, ಕ್ರಿ.ಶ. ೧೦೭೪ರ ವಿಜಯಪುರ ವಸ್ತುಸಂಗ್ರಹಾಲಯದಲ್ಲಿರುವ, ಕ್ರಿ.ಶ ೧೧೫೧, ಕ್ರಿ.ಶ.. ೧೧೫೪ರ ವಿಜಯಾಪುರದ ಶಾಸನಗಳು ಉಲ್ಲೇಖಿಸುತ್ತವೆ. ಯಾದವರ ಕಾಲಕ್ಕೆ ಸಂಬಂಧಿಸಿದ ಕ್ರಿ.ಶ. ೧೧೯೬, ಕ್ರಿ.ಶ. ೧೨೦೮, ಕ್ರಿ.ಶ. ೧೨೩೪ರ ಶಾಸನಗಳು ಕೂಡಾ 'ವಿಜಯಾಪುರ' ಎಂದು ಉಲ್ಲೇಖಿಸುತ್ತವೆ.[೧] ಒಂದು ಹೇಳಿಕೆಯಂತೆ ಬಾದಾಮಿ ಚಾಳುಕ್ಯರ ಮಾಂಡಲಿಕನೊಬ್ಬ ವಿಜಯಪುರ ಪಟ್ಟಣವನ್ನು ಕಟ್ಟಿಸಿದನೆಂದು ಹಾಗೂ ಇನ್ನೊಂದು ಹೇಳಿಕೆಯಂತೆ ಬಿಜ್ಜನಹಳ್ಳಿಯು ಮಾಂಡಲಿಕನೊಬ್ಬನ ರಾಜಧಾನಿಯಾದಾಗ ಬಿಜ್ಜಪುರವಾಗಿ ಅದೇ ವಿದ್ಯಾಪುರವಾಗಿರಬಹುದು. ಗಜಕನಹಳ್ಳಿ, ಬಜಕನಹಳ್ಳಿ, ಚಂದನಕೇರಿ, ಕ್ಯಾದಗಿ, ಕಾತರಕೇರಿ, ಕುರುಬನಹಟ್ಟಿ ಮತ್ತು ಕುಜನಕುಟ್ಟಿ ಎಂಬ ಏಳು ಹಳ್ಳಿಗಳು ಸೇರಿ ಬಿಜ್ಜನಹಳ್ಳಿಯಾಯಿತೆಂದು ಸ್ಥಳೀಯವಾಗಿ ಹೇಳಲಾಗುತ್ತದೆ. ಅದೇ ಬಿಜ್ಜನಹಳ್ಳಿ

ಸಂಸ್ಕೃತೀಕರಣಗೊಂಡು ವಿದ್ಯಾಪುರವಾಗಿ, ವಿಜಯಪುರವಾಯಿತೆಂದು ಮುಂದೆ ವಿಜಾಪುರ ಅಥವಾ ಬಿಜಾಪುರ ಎಂದು ರೂಢಿಯಾಗಿರಬೇಕು.[೨] ೨೦೧೫ರಲ್ಲಿ ಕರ್ನಾಟಕ ಸರಕಾರ ಈ ಜಿಲ್ಲೆಗೆ 'ವಿಜಯಪುರ' ಎಂದು ಮತ್ತೊಮ್ಮೆ ನಾಮಕರಣ ಮಾಡಿತು.

ಒಂದು ಪ್ರದೇಶದ ಅಧ್ಯಯನವನ್ನು ಕೈಗೊಳ್ಳುವ ಮೊದಲು ಆ ಪ್ರದೇಶದ ಭೌಗೋಳಿಕ ವಿವರಗಳನ್ನು ತಿಳಿದುಕೊಳ್ಳುವುದು ಅವಶ್ಯಕ. ಏಕೆಂದರೆ ಆಯಾ ಪ್ರದೇಶದ ಸ್ವರೂಪ ಸ್ವಭಾವಗಳು ಹಾಗೂ ಭೌಗೋಳಿಕ ವೈಶಿಷ್ಟ್ಯತೆಗಳು ಮತ್ತು ಜನ ಜೀವನ ಸಾಂಸ್ಕೃತಿಕ ಚರಿತ್ರೆಯ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಈ ಹಿನ್ನೆಲೆಯಲ್ಲಿ ಆಯಾ ಪ್ರದೇಶದ ಇತಿಹಾಸ ಮತ್ತು ಸಂಸ್ಕೃತಿಯ ಬೆಳವಣಿಗೆಯಲ್ಲಿ ನಿಸರ್ಗ ಸಂಪತ್ತು ಮತ್ತು ವೈಶಿಷ್ಟ್ಯತೆಗಳು ಬಹುಮುಖ್ಯವಾದ ಪಾತ್ರ ವಹಿಸುತ್ತವೆ. ಆ ಪರಿಸರದ ರಾಜಕೀಯ ಸಾಮಾಜಿಕ ಹಾಗೂ ಆರ್ಥಿಕ ಅಂಶಗಳು ನೈಸರ್ಗಿಕ ಸಂಪತ್ತನ್ನು ಅವಲಂಬಿಸಿ ರೂಪುಗೊಂಡಿರುವ ಸಂಗತಿಗಳನ್ನು ತಿಳಿಯಬಹುದಾಗಿದೆ. ಆದ್ದರಿಂದ ಯಾವುದೇ ಪ್ರದೇಶದ ಅಧ್ಯಯನ ಕೈಗೊಳ್ಳುವ ಸಂದರ್ಭದಲ್ಲಿ ಭೌಗೋಳಿಕತೆಯನ್ನು ಮರೆತು ಇತಿಹಾಸವನ್ನು ರಚಿಸಲು ಸಾಧ್ಯವಿಲ್ಲವೆಂದು ಹೇಳಿದರೆ ತಪ್ಪಾಗಲಾರದು.

ಭೌಗೋಳಿಕ ಪರಿಸರ ಇತಿಹಾಸವನ್ನು ಮೂಡಿಸುವ ಮಾತೃಕೆ. ಪ್ರಕೃತಿಯ ಹಿನ್ನೆಲೆಯಲ್ಲಿ ಜರುಗುವ ಏಳು ಬೀಳುಗಳ ಚಿತ್ರಣವೇ ಚರಿತ್ರೆ. ಭೂಗೋಳಶಾಸ್ತ್ರ ಚರಿತ್ರೆಯ ಒಂದು ಕಣ್ಣು. ಕಾಲಮಾನ ಅದರ ಮತ್ತೊಂದು ಅಂಶ, ಕಾಲಮಾನದ ಚೌಕಟ್ಟಿನಲ್ಲಿ ಭೌಗೋಳಿಕ ನೆಲೆಗಟ್ಟಿನ ಮೇಲೆ ನಡೆಯುವ ಪ್ರಕ್ರಿಯೆ ಇತಿಹಾಸ, ಆದ್ದರಿಂದ ವಿಜಯಪುರ ಜಿಲ್ಲೆಯ ಭೌಗೋಳಿಕ ಪರಿಸರದ ಪರಿಚಯ ಕೊಡುವ ಒಂದು ಸ್ಥೂಲ ಸಮೀಕ್ಷೆಯಾಗಿದೆ.

ಭೌಗೋಳಿಕ ಸ್ಥಾನಮಾನ

ಕರ್ನಾಟಕದ ಉತ್ತರ ಭಾಗದಲ್ಲಿರುವ ವಿಜಯಪುರ ಜಿಲ್ಲೆ ರಾಜ್ಯದ ಪ್ರಮುಖ ಜಿಲ್ಲೆಗಳಲ್ಲೊಂದಾಗಿದೆ. ಇದು ಹೊಂದಿರುವ ಐತಿಹಾಸಿಕ ಮತ್ತು ಭೌಗೋಳಿಕ ಲಕ್ಷಣದ ಆಧಾರದ ಮೇಲೆ ರಾಜ್ಯದ ಪ್ರಮುಖ ಜಿಲ್ಲೆಗಳಲ್ಲಿ ಒಂದಾಗಿದೆ, ಭೌಗೋಳಿಕವಾಗಿ ದಖನ್ ಪ್ರಸ್ಥಭೂಮಿಯ ಒಣ ಮತ್ತು ಶುಷ್ಕ ವಾತಾವರಣ ಪ್ರದೇಶದಲ್ಲಿದೆ. ಕೃಷ್ಣಾನದಿಯ ಉತ್ತರ ಭಾಗ ದಖನ್ ಪದರುಕಲ್ಲುಗಳ ಪ್ರದೇಶವಾದರೆ ಅದರ ದಕ್ಷಿಣ ಬಾಗದಲ್ಲಿ ಕಲಾದಗಿ ಶಿಲಾವರ್ಗವಿದ್ದು ಆಗ್ನೇಯ ಭಾಗದಲ್ಲಿ ನೈಸ್ ಶಿಲಾಪ್ರದೇಶವಿದೆ. ಜಿಲ್ಲೆಯಲ್ಲಿ ಭೀಮಾ ಕಣಿವೆ, ಮಧ್ಯದ ಪ್ರಸ್ಥಭೂಮಿ, ಡೋಣಿ ಕಣಿವೆ, ವಿಜಯಪುರ ನಗರ ಪ್ರದೇಶ, ಕೃಷ್ಣಾನದಿ ಕಣಿವೆ ಪ್ರದೇಶ ಹೀಗೆ ಪ್ರಮುಖ ಭೌಗೋಳಿಕ

ವಿಭಾಗಗಳನ್ನು ಗುರುತಿಸಬಹುದು. ಜಿಲ್ಲೆಯು ಬಹುತೇಕವಾಗಿ ಕಪ್ಪು ಮಣ್ಣಿನಿಂದ ಕೂಡಿದ ಭೂಮಿಯಾಗಿದ್ದು, ಅಲ್ಲಲ್ಲಿ ಮರಳು ಮಿಶ್ರಿತ ಮಡ್ಡಿ ಭೂಮಿ, ಮುದ್ದೇಬಿಹಾಳ ತಾಲೂಕು ಪರಿಸರದಲ್ಲಿ ಅಪಾರ ಪ್ರಮಾಣದ ಸುಣ್ಣ ಶಿಲೆ ಕೂಡಾ ಕಂಡುಬರುತ್ತದೆ. ಹಾಗಾಗಿ ಕೃಷಿ ಹಾಗೂ ವಾಣಿಜ್ಯ ಬೆಳೆಗಳ ಚಟುವಟಿಕೆಗೆ ಉತ್ತೇಜನಕಾರಿಯಾಗಿದೆ. ವಿಶಾಲವಾದ ಬಯಲು ಪ್ರದೇಶವನ್ನು ಹೊಂದಿರುವ ಜಿಲ್ಲೆಯು ಅತಿ ಕಡಿಮೆ ಮಳೆ ಪಡೆಯುತ್ತದೆ ಆದಕಾರಣ ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಶೇ. ೪.೮೩ರಷ್ಟು ಪ್ರದೇಶವನ್ನು ಮಾತ್ರ ಅರಣ್ಯ ಪ್ರದೇಶವೆಂದು ಗುರುತಿಸಲಾಗಿದೆ.

- **ಭೂವಿನ್ಯಾಸ**

ವಿಜಯಪುರ ಜಿಲ್ಲೆಯು ಪರ್ಯಾಯ ದ್ವೀಪದ ಒಂದು ಭಾಗವಾಗಿದೆ. ಆದಿಜೀವಿಕಲ್ಪದ ಶಿಲಾ ಸಮುದಾಯಗಳು ಬೆಳಗಾವಿಯ ಸಮೀಪದಿಂದ ಗುಲಬರ್ಗಾ ಜಿಲ್ಲೆಯ ಚಿಂಚೋಳಿಯವರೆಗೂ ಕಿರಿದಾದ ಪ್ರದೇಶಗಳಲ್ಲಿ ಹೊರಹೊಮ್ಮಿರುತ್ತವೆ. ಇವು ವಿಜಯಪುರ ಪಕ್ಕದಲ್ಲಿರುವ ಕಲಾದಗಿ ಅಕ್ಕಪಕ್ಕದಲ್ಲಿ ಸ್ಪಷ್ಟವಾಗಿ ರೂಪುಗೊಂಡಿರುವುದು ಕಂಡು ಬಂದಿರುವುದರಿಂದ ಈ ಶಿಲಾ ಸಮುದಾಯಗಳನ್ನು ಕಲಾದಗಿ ಶಿಲಾಸ್ತೋಮಗಳೆಂದು ಕರೆಯುವುದು ರೂಢಿಯಲ್ಲಿದೆ. ಈ ಶಿಲಾಸ್ತೊಮವು ಪೆಂಟಿಕಲ್ಲು, ಮರಳು ಶಿಲೆ, ಷೇಲ್, ಸುಣ್ಣಶಿಲೆ ಮೊದಲಾದವುಗಳಿಂದ ರಚಿತವಾದ ಜಲಜ ಶಿಲೆಯಾಗಿದೆ. ಕಲಾದಗಿ ಶಿಲಾಸ್ತೋಮದ ಈಶಾನ್ಯಕ್ಕೆ ಜಿಲ್ಲೆಯ ಕೆಲವು ಪ್ರದೇಶಗಳಲ್ಲಿ ಭೀಮಾ ಶಿಲಾಸ್ತೋಮಗಳೆಂಬ ಮತ್ತೊಂದು ಕಿರಿಯ ಶಿಲಾಸಮುದಾಯವು ಕಂಡುಬರುತ್ತದೆ. ಇವುಗಳನ್ನು ಆದಿಜೀವಿಕಲ್ಪದ ಕೊನೆಯ ಹಂತದಲ್ಲಿ ರೂಪುಗೊಂಡ ಪುರಾತನ ಶಿಲೆಗಳೆಂದು ಪರಿಗಣಿಸಲಾಗಿದೆ. ಹೆಚ್ಚು ಕ್ಷೋಭೆಗೊಳಗಾಗದ ಮತ್ತು ಮಟ್ಟಸವಾಗಿ ಹರಡಿರುವ ಪದರ ಶಿಲೆಗಳ ಒಂದು ಗುಂಪು ಗುಲಬರ್ಗಾ ಜಿಲ್ಲೆಯಿಂದ ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನವರೆಗೂ ವಿಸ್ತರಿಸಿದೆ. ಈ ಜಲಜ ಶಿಲೆಯು ಭೀಮಾ ಪಾತ್ರದಲ್ಲಿ ಹೆಚ್ಚಾಗಿ ಕಾಣಬರುವುದರಿಂದ ಇದಕ್ಕೆ ಭೀಮಾ ವರ್ಗವೆಂದು ಹೆಸರು ಬಂದಿದೆ. ಈ ಭೀಮಾ ವರ್ಗದಲ್ಲಿ ಗುಂಡು ಶಿಲೆ, ಮರಳುಗಲ್ಲು ಮತ್ತು ಜೇಡಿ ಚಿಪ್ಪು ಶಿಲೆ, ಶಕ್ತಿ ಗುಂದಿದ ಘನಗಾತ್ರದ ಸುಣ್ಣ ಕಲ್ಲು ಮತ್ತು ಜೇಡಿ ಚಿಪ್ಪು ಶಿಲೆ ಕಂಡುಬರುತ್ತದೆ. ಈ ಪ್ರದೇಶದಲ್ಲಿ ಪ್ರಮುಖವಾಗಿ ಕಂಡುಬರುವ ಮತ್ತೊಂದು ಶಿಲಾಸ್ತೋಮ ದಖನ್ ಪದರುಗಲ್ಲು. ಇದು ದಖನ್ ಮತ್ತು ಗಟ್ಟಿಯಾಗಿರುವ ಬೆಸಾಲ್ಟ್ ಶಿಲೆಯಾಗಿದೆ. ದಖನ್ ಪದರುಗಲ್ಲುಗಳಿಗೆ ಗಟ್ಟಿತನ, ಭಾರ ಮತ್ತು ಬಾಳಿಕೆ ಬರುವ ಲಕ್ಷಣವಿರುವುದರಿಂದ ಕಟ್ಟಡಕ್ಕೆ ಉತ್ತಮ ಕಲ್ಲುಗಳಾಗಿವೆ. ಜಿಲ್ಲೆಯಲ್ಲಿ ಇಂದು ನಮಗೆ ಕಂಡುಬರುವ ಶಿಲಾ ಸಮೂಹಗಳು ಆದಿ ಜೀವಿಕಲ್ಪದ ಅಂತ್ಯದಲ್ಲಿ ಇದ್ದಂತೆಯೇ ಭೂ ಭಾಗವಾಗಿಯೇ ಉಳಿದಿವೆ.[೩]

ವಾಯುಗುಣ

ಕರ್ನಾಟಕ ರಾಜ್ಯದ ಉತ್ತರ ಭಾಗದ ಮಧ್ಯದಲ್ಲಿರುವ ವಿಜಯಪುರ ಜಿಲ್ಲೆಯು ಭಾರತದ ದಕ್ಷಿಣ ಪ್ರಸ್ಥಭೂಮಿಯಲ್ಲಿರುವ ಒಣ ಪ್ರದೇಶವಾಗಿದೆ. ವಾಯುಗುಣದ ದೃಷ್ಟಿಯಿಂದ ಪರಿಶೀಲಿಸಿದರೆ ಇದು ದಕ್ಷಿಣದಲ್ಲಿ ಸಮತಟ್ಟಾದ ಭೂ ಪ್ರದೇಶವನ್ನು ಹೊಂದಿದ್ದು, ಇಲ್ಲಿ ಉಷ್ಣವಲಯದ ಮಾನ್‌ಸೂನ್ ಮಾದರಿಯ ವಾಯುಗುಣ ಕಂಡುಬರುತ್ತದೆ.[೪]

ಬಯಲು ಸೀಮೆ ಎಂದು ಗುರುತಿಸಿಕೊಳ್ಳುವ ಈ ಪ್ರದೇಶದಲ್ಲಿ ಬೇಸಿಗೆಕಾಲ, ಮಳೆಗಾಲ, ಚಳಿಗಾಲಗಳನ್ನು ಗುರುತಿಸಬಹುದು. ಮಳೆಯ ಆಧಾರದಿಂದ ಹೇಳುವುದಾದರೆ ವರ್ಷದಲ್ಲಿ ಬೇಸಿಗೆ ಕಾಲವು ಫೆಬ್ರವರಿ ಮಧ್ಯಭಾಗದಿಂದ ಮೇ ತಿಂಗಳ ಕೊನೆಯವರೆಗೂ ಹಾಗೂ ಕೆಲವು ವರ್ಷಗಳಲ್ಲಿ ಜೂನ್ ತಿಂಗಳ ಮೊದಲನೇ ವಾರದವರೆಗೂ ವಿಸ್ತರಿಸುತ್ತದೆ. ಮುಂಗಾರು ಮಳೆಗಾಲದ ಅವಧಿಯು ಜೂನ್ ತಿಂಗಳಿಂದ ಸೆಪ್ಟೆಂಬರ್ ತಿಂಗಳ ಕೊನೆಯವರೆಗೂ ಇರುತ್ತದೆ. ಈ ಅವಧಿಯಲ್ಲಿ ಹವಾಮಾನವು ತಂಪಾಗಿರುತ್ತದೆ. ಮುಂಗಾರಿನ ನಂತರದ ಅವಧಿಯು ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಹರಡಿದ್ದು ಚಳಿಗಾಲವು ಡಿಸೆಂಬರ್ ತಿಂಗಳಿನಿಂದ ಫೆಬ್ರವರಿ ತಿಂಗಳವರೆಗೆ ಇರುತ್ತದೆ. ವರ್ಷದಿಂದ ವರ್ಷಕ್ಕೆ ಆಗುವ ಮಳೆಯಲ್ಲಿನ ಅಗಾಧ ವ್ಯತ್ಯಾಸವು ಜಿಲ್ಲೆಯು ಬರಗಾಲ ಹಾಗೂ ಕ್ಷಾಮಕ್ಕೆ ತುತ್ತಾಗುತ್ತಿರುವುದಕ್ಕೆ ಬಹುಮುಖ್ಯ ಕಾರಣವಾಗಿದೆ.[೫]

ಡಿಸೆಂಬರ್ ತಿಂಗಳಿನಿಂದ ಮೇ ತಿಂಗಳವರೆಗೆ ಒಣ ಹವಾಗುಣವಿದ್ದು, ಫೆಬ್ರವರಿ ಉತ್ತರಾರ್ಧದ ನಂತರ ಮೇ ತಿಂಗಳವರೆಗೆ ಉಷ್ಣತೆಯು ಒಂದೇ ರೀತಿಯಲ್ಲಿ ಹೆಚ್ಚಾಗುತ್ತಾ ಹೋಗುತ್ತದೆ. ಸಾಧಾರಣವಾಗಿ ಏಪ್ರಿಲ್ ಮತ್ತು ಮೇ ಮಾಹೆಯು ತಾಪಭರಿತ ಮಾಸವಾಗಿರುತ್ತದೆ. ವಾರ್ಷಿಕ ಸರಾಸರಿ ಅತಿ ಹೆಚ್ಚು ಉಷ್ಣತೆಯು ಮೇ ತಿಂಗಳಿನಲ್ಲಿ ೩೮.೫ಡಿಗ್ರಿ ಸೆಲ್ಸಿಯಸ್ ಎಂದು ದಾಖಲಾಗಿರುತ್ತದೆ. ಮುಂಗಾರು ಮಳೆಯ ನಂತರ ಹವಾಗುಣವು ತಂಪಾಗುತ್ತದೆ. ಜಿಲ್ಲೆಯಲ್ಲಿ ಇದುವರೆಗೆ ದಾಖಲಾಗಿರುವ ಅತಿ ಹೆಚ್ಚು ಉಷ್ಣತೆಯು ೧೯೭೨ರ ಮೇ ತಿಂಗಳ ೧೦ ರಂದು ವಿಜಯಪುರದಲ್ಲಿ ೪೪.೯ ಡಿಗ್ರಿ ಸೆಲ್ಸಿಯಸ್ ಎಂದು ದಾಖಲಾಗಿದೆ. ಮುಂಗಾರು ಮಳೆಯು ಜೂನ್ ತಿಂಗಳ ಮೊದಲನೇ ವಾರದಲ್ಲಿ ಜಿಲ್ಲೆಯಲ್ಲಿ ಪ್ರಾರಂಭವಾಗುತ್ತದೆ. ಜೂನ್, ಜುಲೈ ಮತ್ತು ಆಗಸ್ಟ್ ತಿಂಗಳುಗಳಲ್ಲಿ ಸುಮಾರು ಒಂದೇ ಪ್ರಮಾಣದ ಮಳೆ ಇದ್ದು, ಸೆಪ್ಟೆಂಬರ್ ತಿಂಗಳಿನಲ್ಲಿ ಮಳೆಯ ಪ್ರಮಾಣ ಹೆಚ್ಚುವುದು ಕಾಣಬರುತ್ತದೆ. ಈ ತಿಂಗಳಿನಲ್ಲಿ ವಾರ್ಷಿಕ ಮಳೆಯ ಶೇ. ೨೭ರಷ್ಟು ಮಳೆಯಾಗುತ್ತದೆ. ಜೂನ್‌ನಲ್ಲಿ ಬೀಸುವ ನೈಋತ್ಯ ಮಾನ್‌ಸೂನ್ ಮಾರುತಗಳಿಂದ ಉಷ್ಣತೆಯು

ಇಳಿಮುಖವಾಗುತ್ತದೆ. ಈ ಕಾಲದಲ್ಲಿ ದಟ್ಟವಾದ ಮೋಡಗಳು ಮೇಳೈಯಿಸಿದ್ದು ಸಂಜೆಯ ನಂತರ ಬಿರುಸಾದ ಮಳೆ ಸುರಿಯುತ್ತದೆ. ಕ್ರಮೇಣ ಹಿಂಗಾರಿನ ಅವಧಿಗೆ ಮೋಡಗಳ ದಟ್ಟತೆಯೂ ತೆಳುವಾಗುತ್ತಾ ಬರುತ್ತದೆ. ಜೊತೆಗೆ ನವೆಂಬರ್ ತಿಂಗಳ ಮಧ್ಯಭಾಗದಿಂದ ದಿನದ ರಾತ್ರಿಯ ಉಷ್ಣಾಂಶದಲ್ಲೂ ಗಣನೀಯವಾಗಿ ಇಳಿಮುಖವಾಗುತ್ತದೆ. ಡಿಸೆಂಬರ್ ತಿಂಗಳು ಅತಿ ತಂಪಾದ ತಿಂಗಳಾಗಿದ್ದು ೧೫.೨° ಸೆ.ನಷ್ಟು ಉಷ್ಣಾಂಶವನ್ನು ಹೊಂದಿರುತ್ತದೆ. ಒಟ್ಟು ವಾರ್ಷಿಕ ಮಳೆಯು ಶೇ. ೬೮ ರಷ್ಟು ಮಳೆಯು ಜೂನ್ ತಿಂಗಳಿನಿಂದ ಸೆಪ್ಟೆಂಬರ್ ತಿಂಗಳಿನವರೆಗೆ ಆಗುತ್ತದೆ. ವರ್ಷದಿಂದ ವರ್ಷಕ್ಕೆ ಆಗುವ ಮಳೆಯಲ್ಲಿನ ಅಗಾಧ ವ್ಯತ್ಯಾಸವು ಜಿಲ್ಲೆಯು ಬರಗಾಲ ಹಾಗೂ ಕ್ಷಾಮಕ್ಕೆ ತುತ್ತಾಗುತ್ತಿರುವುದಕ್ಕೆ ಬಹುಮುಖ್ಯ ಕಾರಣವಾಗಿದೆ. ಮುಂಗಾರು ಮತ್ತು ಹಿಂಗಾರು ಮಾರುತಗಳ ಮಳೆಯೇ ಜಿಲ್ಲೆಗೆ ಪ್ರಧಾನ ನೀರಿನ ಆಸರೆಯಾಗಿರುವುದರಿಂದ ಮಳೆಗಾಲದಲ್ಲಿ ಮಾತ್ರ ಅಧಿಕ ಪ್ರಮಾಣದಲ್ಲಿ ಕೃಷಿ ಚಟುವಟಿಕೆಗಳು ನಡೆಯುತ್ತವೆ.[೬]

ನದಿಜಾಲ

ಜಿಲ್ಲೆಯು ಸಮೃದ್ಧಮಯವಾದ ಜಲಸಂಪತ್ತನ್ನು ಹೊಂದಿದ್ದು ಜಿಲ್ಲೆಯು ವಿಭಜನೆಯಾಗುವ ಪೂರ್ವದಲ್ಲಿ ಇದನ್ನು ಕರ್ನಾಟಕದ ಪಂಜಾಬ್ ಅಥವಾ ಐದು ನದಿಗಳ ನಾಡೆಂದು ಕರೆಯಲಾಗುತ್ತಿತ್ತು. ಸದ್ಯ ಜಿಲ್ಲೆಯ ಗಡಿ ಮತ್ತು ಒಳಭಾಗದಲ್ಲಿ ಮೂರು ನದಿಗಳು ಮತ್ತು ಸಣ್ಣ ಹಳ್ಳಕೊಳ್ಳಗಳು ಹರಿಯುತ್ತವೆ. ಅವುಗಳಲ್ಲಿ ಭೀಮಾ, ಕೃಷ್ಣಾ ಮತ್ತು ಡೋಣಿ ನದಿಗಳು ಪ್ರಮುಖವಾದವುಗಳಾಗಿವೆ

ಕೃಷ್ಣಾನದಿ

ಕೃಷ್ಣಾನದಿಯು ಮಹಾರಾಷ್ಟ್ರದ ಸಹ್ಯಾದ್ರಿ ಪರ್ವತಗಳ ತಪ್ಪಲಿನಲ್ಲಿರುವ ಮಹಾಬಳೇಶ್ವರದಲ್ಲಿ ಹುಟ್ಟಿ ಕರ್ನಾಟಕ ಮತ್ತು ಆಂಧ್ರಪ್ರದೇಶಗಳ ಮೂಲಕ ಹರಿದು ಬಂಗಾಳಕೊಲ್ಲಿಯನ್ನು ಸೇರುತ್ತದೆ. ಮಹಾರಾಷ್ಟ್ರ ರಾಜ್ಯದ ಸಾತಾರ, ಸಾಂಗ್ಲಿ, ಕೊಲ್ಲಾಪುರ ಜಿಲ್ಲೆಗಳ ಮೂಲಕ ಹರಿದು ಕರ್ನಾಟಕವನ್ನು ಬೆಳಗಾವಿ ಜಿಲ್ಲೆಯ ಮೂಲಕ ಪ್ರವೇಶಿಸುತ್ತದೆ. ಇದು ವಿಜಯಪುರ ಜಿಲ್ಲೆಯ ವಿಜಯಪುರ, ಬಾಗೇವಾಡಿ ಮತ್ತು ಮುದ್ದೇಬಿಹಾಳ ತಾಲೂಕುಗಳಲ್ಲಿ ಬಾಗಲಕೋಟೆ ಜಿಲ್ಲೆಯ ಗಡಿರೇಖೆಯಾಗಿ ಪೂರ್ವಾಭಿಮುಖವಾಗಿ ಹರಿಯುತ್ತದೆ. ಕರ್ನಾಟಕದಲ್ಲಿ ಈ ನದಿಯನ್ನು ಕೃಷ್ಣಾ ಎಂದು, ಆಂಧ್ರಪ್ರದೇಶದಲ್ಲಿ ಕೃಷ್ಣವೇಣಿ ಎಂದು ಕರೆಯುತ್ತಾರೆ. ಕನ್ನಡ ಶಾಸನಗಳಲ್ಲಿ ಕೃಷ್ಣವೆಣ್ಣಾ, ಕ್ರಷ್ಣಬೆಣ್ಣಾ, ಕೃಷ್ಣಹೊಳೆ, ಕೃಷ್ಣವೆಣ್ಣೆ, ಕರಿಹೊಳೆ, ಹಿರಿಹೊಳೆ ಎಂದೂ ಕರೆಯಲಾಗಿದೆ. ಇದಕ್ಕೆ ಮುಂಗಾರು

ಮಳೆಯೇ ಪ್ರಧಾನ ನೀರಿನ ಆಸರೆಯಾಗಿದೆ. ಮಳೆಗಾಲದಲ್ಲಿ ಮಾತ್ರ ನದಿಯ ಪ್ರವಾಹ ಅಧಿಕವಾಗಿರುತ್ತದೆ. ಆದರೆ ಬೇಸಿಗೆ ದಿನಗಳಲ್ಲಿ ನದಿ ಸುಮಾರು ತಳಮುಟ್ಟಿ ಹರಿಯುತ್ತದೆ.[೭]

ಭೀಮಾನದಿ

ಈ ನದಿಯು ಮಹಾರಾಷ್ಟ್ರದ ಪಶ್ಚಿಮ ಘಟ್ಟಗಳ 'ಭೀಮಾಶಂಕರ' ಎಂಬಲ್ಲಿ ಉಗಮಿಸುತ್ತದೆ. ಆ ರಾಜ್ಯದ ಮೂಲಕ ಹರಿದು ವಿಜಯಪುರ ಜಿಲ್ಲೆಯ ಇಂಡಿ ತಾಲೂಕಿನ ದಸೂರಿನ ಬಳಿ ಕರ್ನಾಟಕವನ್ನು ಪ್ರವೇಶಿಸಿ ಪೂರ್ವಾಭಿಮುಖವಾಗಿ ಹರಿಯುತ್ತದೆ. ಇಂಡಿ ಹಾಗೂ ಸಿಂದಗಿ ತಾಲೂಕಿನ ಗಡಿರೇಖೆಯಾಗಿ ಹರಿದು ಶಹಾಪುರ ತಾಲೂಕಿನ ಸಂಗಮ ಎಂಬ ಸ್ಥಳದಲ್ಲಿ ಕೃಷ್ಣಾನದಿಯನ್ನು ಸೇರುತ್ತದೆ. ವಿಜಯಪುರ ಜಿಲ್ಲೆಗೆ ಸಂಬಂಧಿಸಿದಂತೆ ಒಟ್ಟು ಹರಿವಿನ ಉದ್ದ ಸುಮಾರು ೯೬ ಕಿ.ಮೀ.ಗಳು ಇದರಲ್ಲಿ ೪೪ ಕಿ.ಮೀ ಗಳ ದೂರ ವಿಜಯಪುರ ಮತ್ತು ಗುಲಬರ್ಗಾ ಜಿಲ್ಲೆಗಳ ಗಡಿರೇಖೆಯಾಗಿ ಹರಿಯುತ್ತದೆ. ಕ್ರಿ.ಶ. ೧೪೫೩ರ ತೇದಿಯ ಸಂಗಮ ಶಾಸನದಲ್ಲಿ ಇದನ್ನು 'ಭೀಮನದಿ' ಎಂದು ಕರೆಯಲಾಗಿದೆ. ಕ್ರಿ.ಶ. ೧೦೪೦ರ ಬೆಳಗುಂದಿಯ ಶಾಸನದಲ್ಲಿಯೂ ಇದೇ ಮಾಹಿತಿ ಇದೆ.[೮] ಈ ಪ್ರದೇಶದ ಭೂಮಿಯು ಫಲವತ್ತಾಗಿದ್ದು ನೀರಿನ ತೇವಾಂಶವನ್ನು ಬಹುಪಾಲು ಹಿಡಿದಿಟ್ಟುಕೊಳ್ಳಬಲ್ಲದು.

ಡೋಣಿನದಿ

ಡೋಣಿ ನದಿಯು ವಿಜಯಪುರ ಜಿಲ್ಲೆಯ ಪಶ್ಚಿಮಕ್ಕೆ ಇರುವ ಸಾಂಗಲಿ ಜಿಲ್ಲೆಯ ಜತ್ ಪಟ್ಟಣದ (ಮಹಾರಾಷ್ಟ್ರ ರಾಜ್ಯ) ದಕ್ಷಿಣಕ್ಕೆ ಏಳು ಕಿಲೋಮೀಟರುಗಳ ದೂರದಲ್ಲಿ ಉಗಮಿಸುತ್ತದೆ. ಜಿಲ್ಲೆಯ ವಿಜಯಪುರ, ಬಸವನಬಾಗೇವಾಡಿ, ಸಿಂದಗಿ, ಮುದ್ದೇಬಿಹಾಳ ತಾಲೂಕುಗಳಲ್ಲಿ ಪೂರ್ವಾಭಿಮುಖವಾಗಿ ಹರಿದು ಯಾದಗಿರಿ ಜಿಲ್ಲೆಯ ಜಮಾಲಪುರ ಬಳಿ ಕೃಷ್ಣಾನದಿಯನ್ನು ಸೇರುತ್ತದೆ. ಜಿಲ್ಲೆಯಲ್ಲಿಯೆ ೧೪೦ ಕಿ.ಮೀ. ಉದ್ದ ಹರಿಯುತ್ತದೆ. ಕ್ರಿ.ಶ. ೧೨೬೫ರ ಇಂಗಳೇಶ್ವರ ಶಾಸನ ಈ ನದಿಯನ್ನು 'ದೋಣಿ' ಎಂದು ಉಲ್ಲೇಖಿಸುತ್ತದೆ. ಭೂಮಿಯ ಫಲವತ್ತತೆಯನ್ನು ಕುರಿತಂತೆ 'ಡೋಣಿ ಬೆಳೆದರೆ ಓಣೆಲ್ಲ ಕಾಳು' ಎನ್ನುವ ನಾಣ್ಣುಡಿಯು ಚಾಲ್ತಿಯಲ್ಲಿರುವುದು. ಈ ನದಿಯು ಪ್ರವಾಹದಲ್ಲಿ ಹೊತ್ತು ತರುವ ಮೆಕ್ಕಲು ಮಣ್ಣಿನಿಂದ ಈ ಭೂಮಿ ಫಲವತ್ತಾಗಿದ್ದು ಕಡಿಮೆ ಪ್ರಮಾಣದ ಮಳೆ ಬಂದರೂ ದೀರ್ಘಾವಧಿಯವರೆಗೆ ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಗುಣವನ್ನು ಹೊಂದಿದೆ. ಹೀಗಾಗಿ ಅಧಿಕ ಪ್ರಮಾಣದ ಇಳುವರಿ ಕೂಡಾ ಈ ಡೋಣಿ ಪ್ರದೇಶದಲ್ಲಿ ಕಂಡುಬರುತ್ತದೆ.

ಈ ಮೂರು ಪ್ರಮುಖ ನದಿಗಳಲ್ಲದೆ ಜಿಲ್ಲೆಯಲ್ಲಿ ಅನೇಕ ಹಳ್ಳಕೊಳ್ಳಗಳು ಇದ್ದು. ಇವೆಲ್ಲವೂ ಮಳೆಗಾಲದಲ್ಲಿ ಮಾತ್ರ ತುಂಬಿ ಹರಿಯುತ್ತವೆ. ಉಳಿದ ಅವಧಿಯಲ್ಲಿ ಅಂತರ್ಜಲ ಬಳಕೆ ಅಧಿಕವಾಗಿದ್ದು, ಬಾವಿಗಳು, ಕೊಳವೆ ಬಾವಿಗಳು ಮತ್ತು ಇತರೆ ಮೂಲಗಳಿಂದ ನೀರನ್ನು ಕೃಷಿ ಹಾಗೂ ಮಾನವ ಬಳಕೆಗೆ ಉಪಯೋಗಿಸಲಾಗುತ್ತದೆ.

ವ್ಯವಸಾಯ

ಮನುಕುಲದ ಪ್ರಮುಖ ಕಸುಬಾದ ವ್ಯವಸಾಯದ ಅವಿಷ್ಕಾರದಿಂದ ಮಾನವ ಒಂದೆಡೆ ನೆಲೆಯಾಗಲು ನೆರವಾಯಿತು.ಅಷ್ಟೇ ಅಲ್ಲದೆ ಅವನ ಆಲೋಚನ ಶಕ್ತಿ ಬೆಳೆಯಲು ಮತ್ತು ಉತ್ತಮ ಸಂಸ್ಕೃತಿಯನ್ನು ರೂಪಿಸಿಕೊಳ್ಳಲು ಪ್ರೇರಣೆಯನ್ನು ನೀಡಿತು. ಇಂದಿಗೂ ಸಹ ಬಹುತೇಕ ರೈತರು ಪರಂಪರಾಗತವಾಗಿ ಬಂದ ಸಾಂಪ್ರದಾಯಿಕವಾದ ಕಂಠಸ್ಥ ಮೂಲದ ವ್ಯವಸಾಯ ಕ್ರಮದ ಕಡೆಗೆ ಹೆಚ್ಚಿನ ಒಲವು ತೋರಿಸುತ್ತಾರೆ. ಜಿಲ್ಲೆಯ ವಾರ್ಷಿಕ ಮಳೆಯ ಪ್ರಮಾಣ ೫೦ ಸೆಂ.ಮೀ. ನಿಂದ ೭೦ ಸೆಂ.ಮೀ ನಷ್ಟು ಕಡಿಮೆ. ಹೀಗಾಗಿ ಈ ಪ್ರದೇಶದಲ್ಲಿ ಕಪ್ಪುಮಣ್ಣಿನ ಫಲವತ್ತಾದ ಭೂಮಿ ಹೆಚ್ಚು ಪ್ರಮಾಣದಲ್ಲಿದ್ದು, ಉಳಿದಂತೆ ಮಡ್ಡಿ, ಮಸಾರಿ ಮಣ್ಣು ಕಂಡುಬರುತ್ತದೆ. ಜೋಳ, ಸಜ್ಜೆ, ಹತ್ತಿ, ತೊಗರಿ, ಗೋಧಿ, ಮೆಕ್ಕೆಜೋಳ, ಕುಸುಬೆ, ಹುರುಳಿ, ಹೆಸರು, ಕಡಲೆ, ನವಣೆ, ಸಾವೆ, ಶೇಂಗಾ, ಈ ಭಾಗದ ಪ್ರಮುಖ ಬೆಳೆಗಳಾಗಿದ್ದು. ಮಳೆಯಾಶ್ರಯದಲ್ಲಿ ಬೆಳೆಯುತ್ತಾರೆ.

ಅರಣ್ಯ ಪ್ರದೇಶ

ವಿಶಾಲವಾದ ಬಯಲು ಪ್ರದೇಶವನ್ನು ಹೊಂದಿರುವ ಜಿಲ್ಲೆಯು ಅತಿ ಕಡಿಮೆ ಮಳೆ ಪಡೆಯುತ್ತದೆ ಆದಕಾರಣ ಒಟ್ಟು ಭೌಗೋಳಿಕ ಪ್ರದೇಶದಲ್ಲಿ ಶೇ. ೪.೮೩ ರಷ್ಟು ಪ್ರದೇಶವನ್ನು ಮಾತ್ರ ಅರಣ್ಯ ಪ್ರದೇಶವೆಂದು ಗುರುತಿಸಲಾಗಿದೆ. ಈ ಅರಣ್ಯ ಪ್ರದೇಶವನ್ನು ಉಷ್ಣವಲಯದ ಒಣ ಮುಳ್ಳು ಗಿಡಗಂಟೆಗಳ ವಿಭಾಗಕ್ಕೆ ಸೇರಿಸಬಹುದು. ಇದರಲ್ಲಿ ಒಣ ಪ್ರದೇಶದ ಇಳಿಜಾರಿನಲ್ಲಿ ಸಣ್ಣ ಗಿಡಮರಗಳನ್ನು ಹಾಗೂ ಬಯಲು ಪ್ರದೇಶದಲ್ಲಿ ಉರುವಲು ಮತ್ತು ಬೇವಿನ ಮರಗಳನ್ನು ಕಾಣಬಹುದು. ಬೆಟ್ಟಗುಡ್ಡಗಳ ಮತ್ತು ನದಿ ತೀರದ ಅರಣ್ಯ ಪ್ರದೇಶದಲ್ಲಿ ಕಕ್ಕೆ, ದಿಂಡಲು, ಗಂಧದ ಮರಗಳನ್ನು ಮೈದಾನ ಪ್ರದೇಶದಲ್ಲಿ ಹೆಚ್ಚಾಗಿ ಜಾಲಿ ಮರಗಳನ್ನು ಕಾಣಬಹುದು. ಜೊತೆಗೆ ಬೇವು, ಹುಣಸೆ, ನೇರಳೆ, ಆಲ ಮುಂತಾದ ಮರಗಳು ಅಲ್ಲಲ್ಲಿ ಕಾಣಸಿಗುತ್ತವೆ. ವಿಜಯಪುರ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಅಧಿಕವಾಗಿ ಮೊಲ, ನವಿಲು, ತೋಳ, ನರಿ, ಚಿಗರೆ, ಹಂದಿ, ಮಂಗ, ಹೆಬ್ಬಾವು, ಕ್ಯಾರೆ ಹಾವು, ಚೆಂಗು ಹಾವು, ನಾಗರ ಮುಂತಾದ ಪ್ರಾಣಿ ಪಕ್ಷಿಗಳು ಕಂಡು ಬರುತ್ತವೆ.

ರಸ್ತೆ ಸಾರಿಗೆ

ಜಿಲ್ಲೆಯಲ್ಲಿ ಸಾರಿಗೆ ಸಂಪರ್ಕವು ಅಭಿವೃದ್ಧಿಯ ಪಥದತ್ತ ಸಾಗುತ್ತಿದೆ. ವರ್ಷದಿಂದ ವರ್ಷಕ್ಕೆ ರಸ್ತೆಗಳ ಗುಣಮಟ್ಟ ವರ್ಧಿಸುತ್ತಿದೆ. ಗ್ರಾಮೀಣ ಪ್ರದೇಶದ ಕೆಲವು ಮುಖ್ಯ ರಸ್ತೆಗಳು ಡಾಂಬರು ರಸ್ತೆಗಳಾಗಿ ಬದಲಾಗಿವೆ. ಜಿಲ್ಲೆಯಲ್ಲಿ ಸುಮಾರು ೧೭೬.೬೪ ಕಿ.ಮೀ. ಉದ್ದದ ರಾಷ್ಟ್ರೀಯ ಹೆದ್ದಾರಿ, ೩೮೮ ಕಿ.ಮೀ ಉದ್ದದ ರಾಜ್ಯ ಹೆದ್ದಾರಿಯನ್ನು ಹೊಂದಿದೆ. ಜಿಲ್ಲೆಯಲ್ಲಿನ ಎಲ್ಲ ಪಟ್ಟಣ ಮತ್ತು ಗ್ರಾಮಗಳು ಒಂದಿಲ್ಲ ಒಂದು ಮಾದರಿಯ ಜಿಲ್ಲಾ ರಸ್ತೆ ಅಥವಾ ಟಿ.ಡಿ.ಬಿ. ರಸ್ತೆಗಳಿಂದ ಒಳ್ಳೆಯ ಸಂಪರ್ಕವನ್ನು ಹೊಂದಿವೆ. ವಿಜಯಪುರ ಜಿಲ್ಲೆಯಲ್ಲಿ ೨೦ ರೈಲ್ವೆ ನಿಲ್ದಾಣಗಳಿದ್ದು ಸುಮಾರು ೬೭ ಕಿ.ಮೀ ನಷ್ಟು ಬ್ರಾಡಗೇಜ ಮತ್ತು ೬೩ ಕಿ.ಮೀ ನಷ್ಟು ಮೀಟರ್‌ಗೇಜ್ ರೈಲು ಮಾರ್ಗವಿದೆ. ಪ್ರಸ್ತುತ್ ಮೀಟರ್‌ಗೇಜ್ ಬ್ರಾಡಗೇಜಾಗಿ ಪರಿವರ್ತಿಸಲಾಗಿದೆ. ರೈಲ್ವೆ ಸಂಪರ್ಕವು ವಿಜಯಪುರ, ಬಸವನ ಬಾಗೇವಾಡಿ, ಇಂಡಿ ತಾಲೂಕುಗಳಲ್ಲಿ ಸೀಮಿತವಾಗಿದೆ. ಜಿಲ್ಲೆಯಲ್ಲಿ ೧೨೬೪ ಕಿ.ಮೀ. ಪಕ್ಕಾ ರಸ್ತೆಗಳು, ೨೩೬೫ ಕಿ.ಮೀ. ಇತರ ರಸ್ತೆಗಳು ಇವೆ. ಇವಲ್ಲದೇ ಜಿಲ್ಲೆಯಲ್ಲಿ ೨೦೦೨-೦೩ರ ಪ್ರಕಾರ ೪೦೭ ಅಂಚೆ ಕಛೇರಿಗಳು, ೧೯೪ ತಂತಿ ಕಛೇರಿಗಳು, ೧೧೨ ದೂರವಾಣಿ ವಿನಿಮಯ ಕೇಂದ್ರಗಳು ಸಂಪರ್ಕ ಸಾಧನವಾಗಿ ಕಾರ್ಯನಿರ್ವಹಿಸುತ್ತಿವೆ.[೯]

ಪ್ರವಾಸೋದ್ಯಮ

ಪ್ರವಾಸೋದ್ಯಮ ನಾಡಿನ ಮಾಲಿನ್ಯರಹಿತ ಉದ್ಯಮವಾಗಿದೆ. ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಿದರೆ ಜಿಲ್ಲೆಗೂ ಆದಾಯ ಹೆಚ್ಚುತ್ತದೆ. ಆದರೆ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಅಷ್ಟೇನು ಪ್ರಗತಿ ಸಾಧಿಸಿಲ್ಲ. ಈ ಜಿಲ್ಲೆಯಲ್ಲಿ ಬಹಳ ಆಕರ್ಷಣೀಯವಾದ ಪ್ರವಾಸಿ ತಾಣಗಳು ಮತ್ತು ಯಾತ್ರ ಸ್ಥಳಗಳನ್ನು ಕಾಣಬಹುದು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಆಲಮಟ್ಟಿ ಉದ್ಯಾನವನ, ಕೂಡಗಿ ಶಾಖೋತ್ಪನ್ನ ಕೇಂದ್ರ, ಬಸವನ ಬಾಗೇವಾಡಿಯ ಬಸವೇಶ್ವರ ದೇವಾಲಯ, ವಿಜಯಪುರ ನಗರದಲ್ಲಿರುವ ಗೋಲಗುಮಜ್, ಬಾರಾ ಕಮಾನ, ಉಪಲಿ ಬುರ್ಜು, ಇಬ್ರಾಹಿಂ ರೋಜಾ, ಜುಮ್ಮಾ ಮಸೀದಿ, ಜೋಡ ಗುಮ್ಮಟ, ಮಾಲಿಕ್-ಇ-ಮೈದಾನ್ ತೋಪು, ಸಿದ್ಧೇಶ್ವರ ದೇವಸ್ಥಾನ, ಜ್ಞಾನಯೋಗಾಶ್ರಮ, ಶಿವಗಿರಿ, ತೊರವಿಯ ಸಂಗೀತ ಮಹಲ್, ಇಂಡಿ ತಾಲೂಕಿನ ಹೊರ್ತಿ, ಚಡಚಣ ಸಿಂದಗಿ ತಾಲೂಕಿನ ಭಟ್ಟರಕಿ, ಕಡ್ಲೇವಾಡದಲ್ಲಿರುವ ಕಲ್ಯಾಣ ಚಾಲುಕ್ಯ ದೇವಾಲಯಗಳು ಇವು ಪ್ರಮುಖವಾದವು. ಇವುಗಳನ್ನು ವ್ಯವಸ್ಥಿತವಾಗಿ ಅಭಿವೃದ್ಧಿಪಡಿಸುವ ಮೂಲಕ ಮೂಲ ಸೌಕರ್ಯಗಳನ್ನು ನೀಡಿದರೆ ಪ್ರವಾಸಿಗರನ್ನು ಆಕರ್ಷಿಸಬಹುದಾಗಿದೆ. ಇವುಗಳ

ಸಮೀಪ ಉದ್ಯಾನವನಗಳನ್ನು ನಿರ್ಮಿಸುವುದರ ಮೂಲಕ ಪ್ರವಾಸಿ ತಾಣಗಳಾಗಿಸಿ ಆ ಮೂಲಕ ಜಿಲ್ಲೆಯ ಹೆಸರನ್ನು ನಾಡಿನಾದ್ಯಂತ ಪಸರಿಸುವಂತೆ ಮಾಡಬಹುದಾಗಿದೆ.

ಐತಿಹಾಸಿಕ ಹಿನ್ನೆಲೆ

ಇತಿಹಾಸವು ಮಾನವನ ಉಗಮ ಮತ್ತು ವಿಕಾಸದ ಬಗೆಗೆ ತಿಳುವಳಿಕೆ ನೀಡುವುದರ ಜೊತೆಗೆ ತಮ್ಮ ಪ್ರಾಚೀನ ಪರಂಪರೆಯ ಮೇಲೂ ಬೆಳಕು ಚೆಲ್ಲುತ್ತದೆ. ಒಂದು ಸಮಾಜದ ಸರ್ವತೋಮುಖ ಅಭಿವೃದ್ಧಿಯ ಒಟ್ಟು ಚಿತ್ರಣವನ್ನು ನೀಡುವ ಐತಿಹಾಸಿಕ ಜ್ಞಾನ ಮಾನವ ಜ್ಞಾನದ ಪೂರ್ವತೆಗೆ ಅವಶ್ಯಕವಾಗಿದ್ದು, ಈ ಕಾರಣಗಳಿಂದ ಒಂದು ಪ್ರದೇಶದ ಬಗ್ಗೆ ಅಧ್ಯಯನ ಮಾಡುವಾಗ ಆ ಪ್ರದೇಶದ ಐತಿಹಾಸಿಕ ಮಹತ್ವವನ್ನು ಅರಿಯುವುದು ಬಹಳ ಮುಖ್ಯ.

ಪ್ರಾಚೀನ ಭಾರತದ ಇತಿಹಾಸದ ಅಧ್ಯಯನವು ನಿರೀಕ್ಷಿಸುವಷ್ಟು ಸದೃಢವಾಗಿ ರೂಪುಗೊಂಡಿಲ್ಲ ಅಲ್ಲಲ್ಲಿ ದೊರೆಯುವ ಪ್ರಾಥಮಿಕ ಆಕರಗಳಾದ ಶಾಸನಗಳು, ಚಾರಿತ್ರಿಕ ಕಾವ್ಯಗಳು, ದೇವಾಲಯಗಳು, ಕೈಫಿಯತ್ತುಗಳು, ಹಸ್ತಪ್ರತಿಗಳು, ಕಲಾಕೃತಿಗಳು ವಿದೇಶಿ ಯಾತ್ರಿಕರ ವರ್ಣನೆಗಳು, ಸ್ಥಳನಾಮಗಳು, ಐತಿಹ್ಯಗಳು, ಪ್ರಾಚ್ಯವಸ್ತು ಸಂಶೋಧನಾ ವರದಿಗಳು, ಇವೇ ಮುಂತಾದ ಆಕಾರಗಳನ್ನು ಬಳಸಿಕೊಂಡು ಇವುಗಳ ಮೂಲಕ ಗತಕಾಲದ ಘಟನಾವಳಿಗಳನ್ನು ಅರ್ಥವತ್ತಾಗಿ ಕ್ರಮಬದ್ಧವಾಗಿ ಜೋಡಿಸಿ ಅಧ್ಯಯನ ಮಾಡುವುದರ ಮೂಲಕ ನಮ್ಮ ಇತಿಹಾಸ ಮತ್ತು ಸಂಸ್ಕೃತಿಗಳ ಬಗೆಗೆ ಬೆಳಕು ಚೆಲ್ಲಬೇಕಾಗಿದೆ.

ಈ ರೀತಿ ಇತಿಹಾಸದ ಪುನರ್ ರಚನೆಗೆ ಸಹಾಯಕವಾಗುವ ಮಾಹಿತಿಗಳಲ್ಲಿ ಪೂರ್ವಗ್ರಹ, ವೈಭವೀಕರಣ, ಅತಿರೇಕ ಮುಂತಾದ ಪರ ವಿರೋಧ ಭಾವನೆಗಳು ಹೆಚ್ಚಿನ ಮಟ್ಟದಲ್ಲಿದ್ದು, ಇವುಗಳನ್ನು ಉಪಯೋಗಿಸಿ ಕೊಳ್ಳುವಾಗ ವಸ್ತುನಿಷ್ಟ ದೃಷ್ಠಿ ಮತ್ತು ಆ ಕಾಲದ ತಾತ್ವಿಕ ಹಿನ್ನೆಲೆಯ ಅರಿವು ಮುಖ್ಯವಾಗುತ್ತದೆ.

ವಿಜಯಪುರ ಇತಿಹಾಸವು ಬಹು ಪ್ರಾಚೀನವಾದುದು. ಜಿಲ್ಲೆ ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳು ರಾಮಾಯಣ ಕಾಲದ ದಂಡಕಾರಣ್ಯದ ಒಂದು ಭಾಗವಾಗಿತ್ತೆಂದೂ ಹೇಳುತ್ತಾರೆ. ಆದರೆ ಈ ಭಾಗದ ಐತಿಹಾಸಿಕ ದಾಖಲೆಗಳು ಎರಡನೆಯ ಶತಮಾನದ ಈಜಿಪ್ಟಿನ ಖ್ಯಾತ ಭೂಗೋಳಶಾಸ್ತ್ರಜ್ಞ ಟಾಲೆಮಿಯು ಇಂಡಿ, ಹೂವಿನ ಹಿಪ್ಪರಗಿ, ಕಲಕೇರಿಗಳನ್ನು ತನ್ನ ಕೃತಿಯಲ್ಲಿ ಉಲ್ಲೇಖಿಸುತ್ತಾನೆ. ಜಿಲ್ಲೆಯ ಸಿಂದಗಿ ತಾಲೂಕಿನ ದೇವೂರಿನಲ್ಲಿ ದೊರೆತಿರುವ ಎರಡನೇ ಜಯಸಿಂಹನ ೧೧೨೯ರ ಶಾಸನದಲ್ಲಿ ವಿಜಯಾಪುರವೆಂದು ಉಲ್ಲೇಖಿಸಲಾಗಿದೆ. ಇದರ

ತರುವಾಯದ ಶಾಸನಗಳಲ್ಲಿ ರಾಜಧಾನಿ ವಿಜಯಾಪುರ ಎಂಬ ಉಲ್ಲೇಖವು ಕಂಡುಬರುತ್ತದೆ. ನಂತರ ಈ ಪ್ರದೇಶದಲ್ಲಿ ಅನೇಕ ರಾಜಮನೆತನಗಳು ಆಳ್ವಿಕೆ ನಡೆಸಿವೆ. ಅವರುಗಳೆಂದರೆ ಬಾದಾಮಿ ಚಾಳುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಳುಕ್ಯ, ಕಳಚುರಿ, ಯಾದವರು, ಬಹಮನಿ, ಆದಿಲ್‌ಶಾಹಿ ಸುಲ್ತಾನರು ಮತ್ತು ಮರಾಠರು ಹೀಗೆ ಅನೇಕ ಅರಸು ಮನೆತನಗಳು ಇಲ್ಲಿ ಆಳ್ವಿಕೆಯನ್ನು ನಡೆಸಿದ್ದಾರೆ. ರಾಜಕೀಯ ಚರಿತ್ರೆ ಇಲ್ಲದೆ ಯಾವುದೇ ಅಧ್ಯಯನವನ್ನು ಊಹಿಸಿಕೊಳ್ಳುವುದು ಕಷ್ಟವಾಗುತ್ತದೆ. ಒಂದು ರಾಜಮನೆತನ ಯಾವ ರೀತಿಯಲ್ಲಿ ಆರಂಭವಾಗಿ ಬೆಳೆದು ಅವನತಿಯನ್ನು ಹೊಂದಿತು ಎಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ. ರಾಜಕೀಯ ವ್ಯವಸ್ಥೆಯ ಸ್ಥಾಪನೆ ಪೋಷಣೆ ಮತ್ತು ರಕ್ಷಣೆ ಬಹಳ ಮುಖ್ಯ ಅಂಶಗಳಾಗಿ ನಾವು ಗಮನಿಸಬೇಕು. ಇದರ ಜೊತೆಗೆ ರಾಜ್ಯದಲ್ಲಿ ಜನಪದ ನೆಲೆಯೂರಿ ಪ್ರಭುತ್ವಕ್ಕೆ ನಿಷ್ಠೇ ತೋರಬೇಕಾದರೆ ಒಂದು ಸ್ಪಷ್ಟವಾದ ಆಡಳಿತ ವ್ಯವಸ್ಥೆ ಇರಬೇಕಾಗುತ್ತದೆ. ಈ ಪರಿಸರದಲ್ಲಿ ಆಳ್ವಿಕೆ ಮಾಡಿದ ಅರಸುಮನೆತನಗಳು. ಇವುಗಳನ್ನು ಕುರಿತು ವಿಜಯಪುರ ಜಿಲ್ಲೆಗೆ ಸಂಬಂಧಿಸಿದಂತೆ ಅನೇಕ ವಿಷಯಗಳನ್ನು ಮುಂದೆ ಚರ್ಚಿಸಲಾಗಿದೆ.

ಪ್ರಾಗಿತಿಹಾಸ

ಮಾನವನ ಇತಿಹಾಸವನ್ನು ಮುಖ್ಯವಾಗಿ ಎರಡು ವಿಭಾಗಗಳಾಗಿ ಮಾಡಲಾಗಿದೆ. ಮೊದಲನೆಯದು ಅಕ್ಷರ ಜ್ಞಾನವಿಲ್ಲದ ಹಂತ ಅಥವಾ ಪ್ರಾಗಿತಿಹಾಸ ಅಥವಾ ಇತಿಹಾಸ ಪೂರ್ವ ಕಾಲ ಎರಡನೆಯದು ಅಕ್ಷರ ಜ್ಞಾನವಿದ್ದ ಹಂತ ಅಥವಾ ರಾಜಮಹಾರಾಜನ ಕಾಲ ಅಥವಾ ಇತಿಹಾಸ ಕಾಲವೆಂದು ಹೇಳಬಹುದು. ಇವುಗಳಲ್ಲಿ ೫ ಲಕ್ಷ ವರ್ಷಗಳಿಂದ ಕ್ರಿಸ್ತಶಕೆಯ ಆರಂಭದವರೆಗಿನ ಕಾಲಮಾನವನ್ನು ಆಗ ನಿತ್ಯ ಬಳಕೆಯಲ್ಲಿದ್ದ ವಸ್ತುವಿನ ಆಧಾರದ ಮೇಲೆ ಶಿಲಾಯುಗ ಸಂಸ್ಕೃತಿ ಮತ್ತು ಲೋಹಯುಗ ಸಂಸ್ಕೃತಿ ಎಂದು ಎರಡು ವಿಭಾಗಗಳನ್ನಾಗಿ ಮಾಡಲಾಗಿದೆ.

ಶಿಲಾಯುಗ ಸಂಸ್ಕೃತಿಯ ಹಂತವನ್ನು ಅವಶೇಷ ಹಾಗೂ ಅವುಗಳ ಬೆಳವಣಿಗೆ ಮತ್ತು ಕುಶಲತೆಯನ್ನನುಸರಿಸಿ ಹಳೆಯ ಶಿಲಾಯುಗ ಸಂಸ್ಕೃತಿ, ಸೂಕ್ಷ್ಮಶಿಲಾಯುಗ ಸಂಸ್ಕೃತಿ ಮತ್ತು ನೂತನ ಶಿಲಾಯುಗ ಸಂಸ್ಕೃತಿ ಎಂದು ವರ್ಗೀಕರಿಸಲಾಗಿದೆ. ಅಧ್ಯಯನದ ತೀವ್ರತೆ ಹಾಗೂ ಪ್ರತಿಯೊಂದು ಹಂತಗಳಲ್ಲಾದ ಬದಲಾವಣೆಗಳನ್ನು ಗುರುತಿಸಿ ಹೊಸ ಹೊಸ ವಿಷಯಗಳ ಬಗ್ಗೆ ತಿಳಿಯಲು ಸಾಧ್ಯವಾಗಿದೆ. ಹಾಗೆಯೆ ಹಳೆ ಶಿಲಾಯುಗವನ್ನು ಮೂರು ಭಾಗಗಳಾಗಿ ವಿಭಾಗಿಸಲಾಗಿದೆ. ಅವುಗಳೆಂದರೆ ಆದಿ ಹಳೆಶಿಲಾಯುಗ, ಮಧ್ಯ ಹಳೆಶಿಲಾಯುಗ, ಅಂತ್ಯ ಹಳೆಶಿಲಾಯುಗ.

ಲೋಹಯುಗ ಸಂಸ್ಕೃತಿಯ ಆರಂಭದಲ್ಲಿ ಶಿಲೆಯ ಬಳಕೆಯ ಜೊತೆಗೆ ತಾಮ್ರದ ಬಳಕೆಯು ಇದ್ದದು ತಿಳಿಯುತ್ತದೆ. ಹಾಗಾಗಿ ಮೊದಲ ಹಂತವನ್ನು ಶಿಲಾ-ತಾಮ್ರ ಯುಗ ಸಂಸ್ಕೃತಿ ಎಂದು ನಂತರದ ಹಂತದಲ್ಲಿ ಕಬ್ಬಿಣವನ್ನು ಎಲ್ಲಾ ಕಾರ್ಯಗಳಿಗೂ ಬಳಸುವುದರ ಜೊತೆಗೆ ಬೃಹತ್ ಗಾತ್ರದ ಕಲ್ಲು ಚಪ್ಪಡಿಗಳನ್ನು ಬಳಸಿ ಸಮಾಧಿಗಳನ್ನು ರೂಪಿಸಿದ್ದು, ಈ ಹಂತವನ್ನು ಕಬ್ಬಿಣಯುಗದ ಬೃಹತ್ ಶಿಲಾಗೋರಿ ಸಂಸ್ಕೃತಿ ಎಂದು ಅಥವಾ ಬೃಹತ್ ಶಿಲಾಯುಗ ಸಂಸ್ಕೃತಿ ಎಂದು ಕರೆಯಲಾಗಿದೆ.

ಭಾರತದ ಪ್ರಾಗಿತಿಹಾಸದ ಅಧ್ಯಯನದ ಆರಂಭ ಕರ್ನಾಟಕದ ಪ್ರದೇಶದಿಂದಲೇ ಆಗಿದೆ ಎಂಬುದು ಒಂದು ಪ್ರಮುಖ ಸಂಗತಿಯಾಗಿದೆ. ಬ್ರಿಟಿಷ್ ಅಧಿಕಾರಿ ಕ್ಯಾಪ್ಟನ್ ಕೊಬೋಲ್ಡ್ ೧೮೩೬ರಲ್ಲಿ ಶೋಧಿಸಿದ ಕುಡತಿನಿ ಮತ್ತು ಕುಪ್ಪಗಲ್ ಬೂದಿದಿಬ್ಬ ನೆಲೆಗಳೆ ಪ್ರಥಮ ಶೋಧವಾಗಿದೆ.[೧೦] ಭಾರತದಲ್ಲಿ ಪ್ರಾಗಿತಿಹಾಸ ಕಾಲದ ಅಧ್ಯಯನಗಳಿಗೆ ಬುನಾದಿಯನ್ನು ಹಾಕಿದವರು ರಾಬರ್ಟ್ ಬ್ರೂಸ್‌ಫುಟ್. ೩೦ ಮೇ ೧೮೬೩ರಲ್ಲಿ ಚೆನ್ನೈ ಬಳಿಯ ಪಲ್ಲಾವರಮ್‌ದಲ್ಲಿ ಪ್ರಾಚೀನ ಶಿಲಾಯುಗಕ್ಕೆ ಸೇರಿದ ಉಪಕರಣವೊಂದನ್ನು ಪ್ರಥಮ ಬಾರಿಗೆ ಪತ್ತೆಹಚ್ಚಿದರು. ಹಾಗೆಯೇ ಕರ್ನಾಟಕದಲ್ಲಿ ೧೮೭೩ರಲ್ಲಿ ಮಲಪ್ರಭಾ ನದಿ ಪ್ರದೇಶದಲ್ಲಿಯ ಖ್ಯಾಡ್, ಢಾಣಕ ಶಿರೂರ, ಮೆಣಸಗಿಗಳಲ್ಲಿ ಮಾನವ ಸಂಸ್ಕೃತಿಯ ಅತ್ಯಂತ ಪ್ರಾಚೀನ ಹಂತದ ಸುಮಾರು ಎರಡು ಲಕ್ಷಕ್ಕೂ ಪೂರ್ವದ ಆದಿ ಹಳೆಶಿಲಾಯುಗ ಹಂತದ ಕಲ್ಲಿನ ಉಪಕರಣಗಳನ್ನು ಹೇರಳ ಸಂಖ್ಯೆಯಲ್ಲಿ ಶೋಧಿಸಿದರು. ಇವುಗಳನ್ನು ಗಮನದಲ್ಲಿಟ್ಟುಕೊಂಡು ೧೯೫೦ರ ದಶಕದಲ್ಲಿ ಆರ್.ವಿ. ಜೋಶಿಯವರು ಇಡೀ ನದಿಯ ಬಯಲು ಪ್ರದೇಶವನ್ನು ಅನ್ವೇಷಣೆ ಮಾಡಿ, ತೊರಗಲ್ಲಿನಿಂದ ಕೂಡಲ ಸಂಗಮದವರೆಗೆ ೨೦ಕ್ಕೂ ಹೆಚ್ಚು ನೆಲೆಗಳನ್ನು ಶೋಧಿಸಿದರು.[೧೧] ಸುಮಾರು ೧೯೫೭ರಲ್ಲಿ ಕೇಂದ್ರ ಸರಕಾರದ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಔರಂಗಬಾದ್ ವೃತ್ತವು ವಿಜಯಪುರ ಜಿಲ್ಲೆಯಲ್ಲಿ ಪ್ರತಿ ಹಳ್ಳಿಯಲ್ಲೂ ಕ್ಷೇತ್ರಕಾರ್ಯ ಕೈಗೊಂಡು ಮಧ್ಯ ಮತ್ತು ಅಂತ್ಯ ಹಳೆಶಿಲಾಯುಗ, ಸೂಕ್ಷ್ಮಶಿಲಾಯುಗ, ನೂತನ ಶಿಲಾ, ಶಿಲಾ-ತಾಮ್ರಯುಗ ಹಾಗೂ ಬೃಹತ್ ಶಿಲಾಯುಗದ ನೆಲೆಗಳನ್ನು ಬೆಳಕಿಗೆ ತಂದರು. ಅಲ್ಲದೆ ಇದರೊಂದಿಗೆ ಆದಿ ಇತಿಹಾಸ ಕಾಲದ ನೆಲೆಗಳು, ದೇವಾಲಯ, ಮಧ್ಯ-ಅಂತ್ಯ ಹಳೆ ಶಿಲಾಯುಗಕ್ಕೆ ಸಂಬಂಧಿಸಿದಂತೆ ಮುದ್ದೇಬಿಹಾಳ ತಾಲೂಕಿನ ೫ ನೆಲೆಗಳನ್ನು ಸಾಲವಾಡಗಿಯಲ್ಲಿ ಶೋಧಿಸಿದರು.[೧೨]

೧೯೭೦ರಲ್ಲಿ ಡೆಕ್ಕನ್ ಕಾಲೇಜಿನ ಸಂಶೋಧನಾ ವಿದ್ಯಾರ್ಥಿ ಆರ್.ಎಸ್. ಪಪ್ಪು ಅವರು ಕೃಷ್ಣಾನದಿ ಪ್ರದೇಶವನ್ನು ಪರಿಶೀಲನೆ ಮಾಡಿ ಅಲ್ಲಿಯ ಹಳೆಶಿಲಾಯುಗದ ಆದಿ ಮತ್ತು ಮಧ್ಯ ಹಂತಗಳ ಸಾಂಸ್ಕೃತಿಕ ನೆಲೆಗಳನ್ನು ಗುರುತಿಸಿದರು ಮತ್ತು ಬಾಗಲಕೋಟೆ ಸಮೀಪದಲ್ಲಿರುವ ಆದಿ

ಹಳೆಶಿಲಾಯುಗದ ನೆಲೆ ಅನಗವಾಡಿಯಲ್ಲಿ ಉತ್ಖನನವನ್ನು ಮಾಡಿದರು.[೧೩] ೧೯೯೨ರಲ್ಲಿ ವಾಸುದೇವ ಬಡಿಗೇರ ಅವರು ಬಸವನ ಬಾಗೇವಾಡಿ ತಾಲೂಕಿನ ಗ್ರಾಮಗಳಲ್ಲಿ ಸಂಶೋಧನೆ ಕೈಗೊಂಡು ಮಧ್ಯ-ಅಂತ್ಯ ಹಳೆಶಿಲಾಯುಗ, ಸೂಕ್ಷ್ಮಶಿಲಾಯುಗ, ಆದಿ ಮತ್ತು ಮಧ್ಯ ಇತಿಹಾಸ ಕಾಲದ ನೆಲೆಗಳನ್ನು ಪತ್ತೆಹಚ್ಚಿದರು. ೧೯೯೬ರಲ್ಲಿ ಅ. ಸುಂದರ ಅವರ ಮಾರ್ಗದರ್ಶನದಲ್ಲಿ ಆರ್. ಎಸ್. ಬಿರಾದಾರ ಅವರು ಇಂಡಿ, ಸಿಂದಗಿ, ಮತ್ತು ಮುದ್ದೇಬಿಹಾಳ ತಾಲೂಕುಗಳಲ್ಲಿ ಕೈಗೊಂಡ ಕ್ಷೇತ್ರಾನ್ವೇಷಣೆಯಿಂದ ಆದಿ-ಮಧ್ಯ ಹಳೆಶಿಲಾಯುಗ, ಸೂಕ್ಷ್ಮಶಿಲಾಯುಗ, ಬೃಹತ್‌ಶಿಲಾಯುಗ ಮತ್ತು ಆದಿ ಇತಿಹಾಸ ಕಾಲಕ್ಕೆ ಸೇರಿದ ನೆಲೆಗಳನ್ನು ಶೋಧಿಸಿದರು. ೨೦೦೮ ರಲ್ಲಿ ಅ. ಸುಂದರ ಅವರು ಬಸವನ ಬಾಗೇವಾಡಿಯಿಂದ ವಾಯವ್ಯ ಭಾಗಕ್ಕೆ ಸುಮಾರು ೫ ಕಿ.ಮೀ. ದೂರದಲ್ಲಿರುವ ಮಸಬಿನಾಳ ರಸ್ತೆಯ ಹೊಲದಲ್ಲಿ ಮಧ್ಯ ಮತ್ತು ಅಂತ್ಯ ಹಳೆಶಿಲಾಯುಗಕ್ಕೆ ಸೇರಿದ ಅವಶೇಷಗಳನ್ನು ಗುರುತಿಸಿದ್ದಾರೆ.[೧೪] ಮಾನವನ ಸಾಂಸ್ಕೃತಿಕ ಬೆಳವಣಿಗೆಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಆದಿ ಹಳೆಯ ಶಿಲಾಯುಗದಿಂದ ಪುರಾತತ್ವೀಯ ಅವಶೇಷಗಳು ಕಂಡುಬರುತ್ತವೆ. ಈ ಕಾಲಘಟ್ಟಕ್ಕೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಅನೇಕ ನೆಲೆಗಳು ಪತ್ತೆಯಾಗಿವೆ. ಪ್ರಮುಖವಾಗಿ ಇಂಡಿ ತಾಲೂಕಿನ ಚನ್ನೆಗಾಂವ., ಬಸವನ ಬಾಗೇವಾಡಿ ತಾಲೂಕಿನ ಅಮರಗೋಳ, ಆಲಮಟ್ಟಿ, ಇಂಗಳೇಶ್ವರ, ಕಾತರಕಿ, ಕೊಲ್ಹಾರ, ಸಾತಿಹಾಳ, ಮಸಬಿನಾಳ., ಮುದ್ದೇಬಿಹಾಳ ತಾಲೂಕಿನ ಕುಚಬಾಳ, ಯಲಗೂರು, ಶೆಲ್ಲಗಿ, ಸಾಲವಾಡಗಿ, ಸಿಂದಗಿ ತಾಲೂಕಿನ ಭಂಟನೂರು ಗ್ರಾಮಗಳಾಗಿವೆ. ಈ ಸಂಸ್ಕೃತಿಯ ಘಟ್ಟಕ್ಕೆ ಸಂಬಂಧಿಸಿದಂತೆ ಹೆರೆಚೆಕ್ಕೆ, ಮೊನೆ, ಇಬ್ಬದಿ ನೀಳಚಕ್ಕೆ, ಮಚ್ಚುಗತ್ತಿ, ಕೈಗೊಡಲಿ ಪತ್ತೆಯಾಗಿದ್ದು ಇವು ಜಾಸ್ಪರ್, ಕ್ವಾರ್ಟ್ಸೈಟ್, ಚರ್ಟ್ ಶಿಲೆಗಳಲ್ಲಿ[೧೫] ಕಂಡುಬರುತ್ತವೆ.

ಅಂತ್ಯ ಹಳೆಶಿಲಾಯುಗದ ಮುಂದಿನ ಹಂತವನ್ನು ಸೂಕ್ಷ್ಮಶಿಲಾಯುಗ ಎಂದು ಕರೆಯಲಾಗಿದೆ. ಈ ಹಂತದ ಕಲ್ಲಿನ ಉಪಕರಣಗಳು ಆದಿ ಹಳೆ ಶಿಲಾಯುಗದ ದೊಡ್ಡ ದೊಡ್ಡ ಕಲ್ಲಿನ ಉಪಕರಣಗಳಿಗೆ ಹೋಲಿಸಿದಾಗ ಅತಿ ಸೂಕ್ಷ್ಮವಾಗಿವೆ. ಈ ಹಂತಕ್ಕೆ ಸಂಬಂಧಿಸಿದ ನೆಲೆಗಳು ನಿಂಬಾಳ, ಸಾತಿಹಾಳ, ಗೊಳಸಂಗಿ, ಡೋಣೂರ, ಬೂದಿಹಾಳ, ಯತ್ನಾಳ, ಲೋಹಗಾಂವ, ಸಾರವಾಡ, ಹಳಗಣಿ, ಹೊನಗನಹಳ್ಳಿ, ಅರಸನಾಳ, ಇಂಚಗಾಳ, ಕಣಿಕೇರಿ, ಕವಡಿಮಟ್ಟಿ, ಕುಚಬಾಳ, ಜಂಗಮುರಾಳ, ಬೈಚ್‌ಬಾಳ, ಬಂಗಾರಗುಂಡ, ಮಟಕ ದೇವನಹಳ್ಳಿ, ಮಸಕನಾಳ, ಸಾಲವಾಡಗಿ, ಸಿದ್ದಾಪುರ, ಹೊಕ್ರಾಣಿ ಗ್ರಾಮಗಳಲ್ಲಿವೆ. ಡೋಣಿ ನದಿ ಮತ್ತು ಅದರ ಆಸುಪಾಸಿನಲ್ಲಿ ಸೂಕ್ಷ್ಮಶಿಲಾಯುಗದ ಶಿಲೆಯ ಉಪಕರಣಗಳು, ಮಡಿಕೆ ಚೂರು ಮತ್ತು ಮೊಳೆಯ ಚೂರುಗಳು ಕಂಡುಬಂದಿವೆ. ಈ ನೆಲೆಗಳಲ್ಲಿ ಕಾಣಸಿಗುವ ಶಿಲಾ ಉಪಕರಣಗಳು ಸಪೂರವಾದ ನೀಳವಾದ ಚಕ್ಕೆಗಳು, ಕೊರೆಯುವ ಉಪಕರಣಗಳು, ಬಾಣದ ಮೊನೆಗಳು ಹಾಗೂ ಅರ್ಧಚಂದ್ರಾಕೃತಿಯ,

ತ್ರಿಕೋನಾಕೃತಿಯ ಮತ್ತು ಟ್ರೆಪಿಜಿಯಮ್ ಆಕೃತಿಯ ಉಪಕರಣಗಳು ಮುಂತಾದವುಗಳನ್ನು ಚರ್ಟ್, ಬ್ಯಾಂಡೆಡ್, ಅಗೆಟ್, ಶಿಲೆಗಳಲ್ಲಿ ತಯಾರಿಸಲಾಗಿದೆ.[೧೬] ನೂತನ ಶಿಲಾ ಮತ್ತು ಶಿಲಾ ತಾಮ್ರಯುಗ ಮಾನವ ವಿಕಾಸದಲ್ಲಿ ಅತ್ಯಂತ ಮಹತ್ವದ ಹಂತ ಇದಾಗಿದ್ದು, ಉಜ್ಜಿ ನಯಗೊಳಿಸಿದ ಮೇಲ್ಮೈಯುಳ್ಳ ಕೊಡಲಿಗಳು, ಕೃಷಿ ವಿಸ್ತರಣೆ, ಅಧಿಕ ಆಹಾರ ಉತ್ಪಾದನೆ, ಪಶುಸಂಗೋಪನೆ, ಮಡಿಕೆಗಳ ತಯಾರಿಕೆಯಲ್ಲಿ ವೈವಿಧ್ಯತೆ, ಸಂಘಟಿತ ಸಮಾಜ ಹಾಗೂ ವ್ಯವಸ್ಥಿತ ಗ್ರಾಮೀಣ ಬದುಕನ್ನು ಸಾಧಿಸಿದ ಹಂತವೇ ಇದಾಗಿದೆ. ಈ ಹಂತಕ್ಕೆ ಸಂಬಂಧಪಟ್ಟ ಸುಮಾರು ೨೦ ಕ್ಕಿಂತಲೂ ಹೆಚ್ಚು ನೆಲೆಗಳು[೧೭] ಜಿಲ್ಲೆಯಲ್ಲಿ ಕಂಡುಬರುತ್ತವೆ. ಅಲ್ಲದೆ ಈ ನೆಲೆಗಳಲ್ಲಿ ಸೂಕ್ಷ್ಮಶಿಲಾಯುಗದ ಮುಂದುವರೆದ ಸಾಂಸ್ಕೃತಿಕ ಹಂತವನ್ನು ಇಂಗಳೇಶ್ವರ ಮತ್ತು ಕೆಲವು ನೆಲೆಗಳಲ್ಲಿ ಗುರುತಿಸಬಹುದು.[೧೮] ಉಜ್ಜಿ ನಯಗೊಳಿಸಿದ ಕೊಡಲಿಗಳು (ಟ್ರ್ಯಾಪ್ ಶಿಲೆಯಲ್ಲಿವೆ) ಇಬ್ಬದಿ ನೀಳಚಕ್ಕೆ, ಕೆಂಪುವರ್ಣದ ಮಡಕೆಯ ಮೇಲೆ ಕಪ್ಪುಬಣ್ಣದಲ್ಲಿ ಚಿತ್ರಿತವಾಗಿರುವ ಮಡಕೆ ಭಾಗ ದೊರೆತಿದ್ದು ಬ್ರಹ್ಮಗಿರಿ ಮತ್ತು ಜೋರ್ವೆ ಮಾದರಿಯಲ್ಲಿವೆ.

ದೊಡ್ಡ ದೊಡ್ಡ ಶಿಲಾಬಂಡೆಗಳನ್ನು ಬಳಸಿ ಶಿಲಾವೃತ್ತ, ಕಲ್ಮನೆ, ನಿಲಿಸುಗಲ್ಲುಗಳ ಸಮಾಧಿಗಳ ನಿರ್ಮಾಣ ಹೀಗೆ ಬೃಹತ್ ಶಿಲಾ ಗೋರಿಗಳನ್ನು ನಿರ್ಮಿಸುತ್ತಿದ್ದುದರಿಂದ ಈ ಸಂಸ್ಕೃತಿಯನ್ನು ಬೃಹತ್‌ಶಿಲಾಯುಗ ಸಂಸ್ಕೃತಿ ಎಂದು ಕರೆಯಲಾಗುತ್ತದೆ. ಕಬ್ಬಿಣ ತಯಾರಿಸುವ ತಂತ್ರಗಾರಿಕೆ ಈ ಸಂಸ್ಕೃತಿಯ ಮತ್ತೊಂದು ವಿಶಿಷ್ಟ ಲಕ್ಷಣ, ಈ ಹಂತಕ್ಕೆ ಸಂಬಂಧಿಸಿದಂತೆ ವಿಜಯಪುರ ಜಿಲ್ಲೆಯಲ್ಲಿ ತಾಳಿಕೋಟೆ, ಬೂದಿಹಾಳ, ಸಾಲವಾಡಗಿ, ಕುಮಶಿ, ಜಲಪುರ, ಮಾದನಹಳ್ಳಿಗಳಲ್ಲಿ ವಾಸ್ತವ್ಯದ ಮತ್ತು ಗೋರಿನೆಲೆಗಳು ಕಂಡುಬಂದಿವೆ. ಈ ಸಂಸ್ಕೃತಿಗೆ ಸಂಬಂಧಿಸಿದ ಕಲ್ಲುಗ್ಗೆಗಳು, ಶಿಲಾವೃತ್ತಗಳು, ಕಪ್ಪು-ಕೆಂಪು ಮಡಕೆ ಚೂರುಗಳ ಅವಶೇಷಗಳು ಈ ನೆಲೆಗಳಲ್ಲಿ ಪತ್ತೆಯಾಗಿವೆ. ಕಬ್ಬಿಣವು ಬಳಕೆಯಲ್ಲಿದ್ದುದರಿಂದ ದೊಡ್ಡ ಪ್ರಮಾಣದಲ್ಲಿ ಗಿಡ ಮರಗಳನ್ನು ಕಡಿದು ಭೂಮಿಯನ್ನು ವ್ಯವಸಾಯಕ್ಕೆ ಉಪಯೋಗಿಸಲು ಸಾಧ್ಯವಾಯಿತು. ಸಾಮಾಜಿಕ ಸಂಘಟನೆ ಹಾಗೂ ವ್ಯಾಪಾರೀಕರಣದಿಂದ ಆರ್ಥಿಕಾಭಿವೃದ್ಧಿಯಾಗಿ ಸಾಂಸ್ಕೃತಿಕ ಸುಧಾರಣೆ ಮತ್ತು ನಗರ ಪಟ್ಟಣಗಳ ಬೆಳವಣಿಗೆಯಾದವು.[೧೯]

ಒಟ್ಟಾರೆಯಾಗಿ ವಿಜಯಪುರ ಜಿಲ್ಲೆಯು ಪ್ರಾಗಿತಿಹಾಸದ ಕೆಲವು ನೆಲೆಗಳನ್ನು ಹೊಂದಿದ್ದು ಇದು ಕರ್ನಾಟಕದ ಪೂರ್ವ ಇತಿಹಾಸದಲ್ಲಿ ತನ್ನದೇ ಆದ ಸ್ಥಾನವನ್ನು ಹೊಂದಿದೆ. ಅಲ್ಲದೆ ಇಲ್ಲಿ ಕಂಡುಬಂದಿರುವ ಶಿಲಾಯುಗದ ಜನವಸತಿಯ ಅವಶೇಷಗಳು ಮತ್ತು ಇತಿಹಾಸ ಕಾಲದ ಶಾಸನಗಳು ಹಾಗೂ ದೇವಾಲಯಗಳು ಇದು ಜಿಲ್ಲೆಯಲ್ಲಿ ಸೂಕ್ಷ್ಮ ಶಿಲಾಯುಗದ ಕಾಲದಿಂದಲೂ

ಜನವಸತಿ ಇದ್ದುದನ್ನೂ ದೃಢಪಡಿಸುತ್ತದೆ. ಈ ಎಲ್ಲಾ ಆಧಾರಗಳಿಂದ ಈ ಜಿಲ್ಲೆಗೆ ಸಾವಿರಾರು ವರ್ಷಗಳ ಇತಿಹಾಸವಿರುವುದನ್ನು ತಿಳಿಯಬಹುದಾಗಿದೆ.

ಇತಿಹಾಸ ಕಾಲ

ಮನುಷ್ಯನು ಅಕ್ಷರ ಜ್ಞಾನ ಹೊಂದಿದ ಆರಂಭಿಕ ಕಾಲವನ್ನು ಇತಿಹಾಸ ಆರಂಭಕಾಲವೆಂದು ಕರೆಯಲಾಗಿದೆ. ಕರ್ನಾಟಕದಲ್ಲಿ ಇತಿಹಾಸ ಯುಗವು ಕ್ರಿ.ಪೂ. ೪–೩ನೆಯ ಶತಮಾನದಲ್ಲಿಯೇ ಆರಂಭವಾಗುತ್ತದೆ. ಪ್ರಸ್ತುತ ಅಧ್ಯಯನ ಪ್ರದೇಶವು ಸೇರಿದಂತೆ ಕರ್ನಾಟಕದ ಹಲವು ಭಾಗಗಳಲ್ಲಿ ಅದರಲ್ಲಿಯೂ ತುಂಗಭದ್ರಾ ಹಾಗೂ ಅದರ ಉಪನದಿಗಳ ಪಾತ್ರಗಳಲ್ಲಿ ಅಶೋಕನ ಶಾಸನಗಳು ದೊರೆತಿರುವುದು ಪರಿಚಿತ ವಿಚಾರವಾಗಿದ್ದು, ಈ ಶಾಸನಗಳು ಅಂದಿನ ರಾಜಕೀಯ, ಧಾರ್ಮಿಕ ಮತ್ತು ಕೆಲವು ಸಾಮಾಜಿಕ ಅಂಶಗಳನ್ನು ತಿಳಿಸುತ್ತವೇ ಹೊರತು ವಸ್ತು ಅವಶೇಷಗಳು ಕಡಿಮೆ ಸಂಖ್ಯೆಯಲ್ಲಿ ದೊರೆತಿವೆ. ಅಶೋಕನ ಶಾಸನಗಳಲ್ಲಿ ಅವನ ಹೆಸರು ಬಿರುದು ಹಾಗೂ ಅವನ ದಕ್ಷಿಣ ಪ್ರಾಂತ್ಯದ ಪ್ರಮುಖ ಕೇಂದ್ರಗಳಾದ ಸುವರ್ಣಗಿರಿ ಮತ್ತು ಇಸಿಲಾಗಳ ಉಲ್ಲೇಖಗಳಿವೆ.

ಯಾವುದೇ ಯುದ್ಧ ಹೂಡದೇ ಅಶೋಕ ಈ ಭಾಗದಲ್ಲಿ ತನ್ನ ಅಧಿಕಾರ ಸ್ಥಾಪಿಸಿದ್ದ ಆದರೆ ಇದು ಸಾಧ್ಯವಾದುದು ಆತನಿಗಿಂತ ಮೊದಲೇ ನಂದರ ಕೊನೆಯ ಅರಸನಾಗಿದ್ದ ಮಹಾಪದ್ಮನು ನಂದರ ರಾಜ್ಯವನ್ನು ಭದ್ರಬುನಾದಿಯ ಮೇಲೆ ನಿಲ್ಲಿಸಿದ್ದರಿಂದ ನಂದರ ರಾಜ್ಯ ದಖ್ಖನ್ ಹಾಗೂ ಅದಕ್ಕೂ ದಕ್ಷಿಣಕ್ಕೆ ಕೃಷ್ಣಾ ತುಂಗಭದ್ರಾ ಪ್ರದೇಶಗಳವರೆಗೆ ವಿಸ್ತರಿಸಲ್ಪಟ್ಟಿದ್ದಿತೆಂಬ ವಿವರಣೆಯಿದ್ದು, ನಂದರನ್ನು ಸೋಲಿಸಿದ ಮೌರ್ಯ ಸಾಮ್ರಾಜ್ಯವನ್ನು ಸ್ಥಾಪಿಸಿದ ಚಂದ್ರಗುಪ್ತನ ಕಾಲದಲ್ಲಿ ಕರ್ನಾಟಕದ ಕೆಲವು ಭಾಗಗಳು ಅವರ ಆಳ್ವಿಕೆಯ ವ್ಯಾಪ್ತಿಗೆ ಬಂದಿರಬಹುದೆಂದು ತಿಳಿಯಲಾಗಿದೆ. ಎಂ.ಹೆಚ್.ಕೃಷ್ಣರವರು ಅಶೋಕನ ಶಾಸನವನ್ನು ಉಲ್ಲೇಖಿಸುತ್ತ ದಖ್ಖನ್ನಿನ ಪೈಠಣ, ಆಂಧ್ರ (ನಾಗಾರ್ಜುನ ಕೊಂಡ) ಮತ್ತು ಪುಳಿಂದ (ಬನವಾಸಿ)ಗಳಲ್ಲಿ ನೆಲೆಗೊಂಡ ಜನವರ್ಗಗಳು ತನ್ನ ಸಾಮ್ರಾಜ್ಯದೊಳಗಣ ಪ್ರದೇಶದವರೆಂದು ಅಶೋಕ ಸಂಭೋಧಿಸಿರುವಂತೆಯೇ, ಸತಿಯಪುತ್ರರನ್ನು ತನ್ನ ಸಾಮ್ರಾಜ್ಯದ ಹೊರಗಡೆಯವರೆಂದು ಕರೆದಿರುವನೆಂದು ಪ್ರಸ್ತಾಪಿಸುತ್ತಾರೆ.

ಮೆಗಸ್ತನಿಸನು ತುಂಗಭದ್ರೆಯ ದಕ್ಷಿಣ ದಂಡೆಯ ಪ್ರದೇಶದಲ್ಲಿ ಕೆಲವು ಸಂನ್ಯಾಸಿಗಳನ್ನು ಕಂಡಿದ್ದನೆಂದು, ಆ ನಂತರದ ಕ್ರೈಸ್ತ ಬರವಣಿಗೆಯೊಂದರಲ್ಲಿ ಉಕ್ತಗೊಂಡಿರುವುದುಂಟು. ಈ ಹೇಳಿಕೆಯನ್ನು ಒಪ್ಪಿದರೂ ಚಂದ್ರಗುಪ್ತನ ಸಾಮ್ರಾಜ್ಯ ದಕ್ಷಿಣದವರೆಗೆ ಹಬ್ಬಿದ್ದಿತ್ತೆಂದು ತಿಳಿಯುವುದು ಕಷ್ಟವಾಗುತ್ತದೆಂಬುದು ಕೆಲವು ಚರಿತ್ರೆಕಾರರು ಅಭಿಪ್ರಾಯವಾಗಿದೆ. ಅಶೋಕನ ಕಾಲದಲ್ಲಿ ಆಂಧ್ರ

ಮತ್ತು ಕರ್ನಾಟಕದ ಹಲವಾರು ಪ್ರದೇಶಗಳು ಮೌರ್ಯ ಸಾಮ್ರಾಜ್ಯದ ಅಧೀನದಲ್ಲಿದ್ದುದು ಸ್ಪಷ್ಟ. ಈ ಪ್ರದೇಶಗಳನ್ನು ಪ್ರವೇಶಿಸಲು ಆತನಿಗೆ ಸಾಧ್ಯವಾದುದು ಪ್ರಾಚೀನ ವಾಣಿಜ್ಯ ಮಾರ್ಗಗಳ ಮೂಲಕವೇ ಎಂಬುದು ಧೃಡಪಡುತ್ತದೆ. ಬಳ್ಳಾರಿ ಜಿಲ್ಲೆಯ ನಿಟ್ಟೂರು ಮತ್ತು ಉದಯಗೊಳಂ, ಕೊಪ್ಪಳ ಜಿಲ್ಲೆಯ ಗವಿಮಠ ಮತ್ತು ಪಾಲ್ಕಿಗೊಂಡಂ, ಚಿತ್ರದುರ್ಗ ಜಿಲ್ಲೆಯ ಮಸ್ಕಿ, ಗುಲಬರ್ಗಾ ಜಿಲ್ಲೆಯ ಸನ್ನತಿಯಲ್ಲಿ ದೊರೆತಿರುವ ಶಾಸನಗಳು ಕರ್ನಾಟಕದಲ್ಲಿ ಇವರ ಆಳ್ವಿಕೆಯನ್ನು ಖಚಿತಪಡಿಸುತ್ತವೆ. ಆದರೆ ವಿಜಯಪುರ ಜಿಲ್ಲೆಯಲ್ಲಿ ಮೌರ್ಯರಿಗೆ ಸಂಬಂಧಿಸಿದ ಯಾವುದೇ ಪುರಾತತ್ವಿಯ ಅವಶೇಷಗಳು ಇದುವರೆಗೂ ಪತ್ತೆಯಾಗಿಲ್ಲ ಆದರೂ ಈ ಪ್ರದೇಶದ ಸುತ್ತಮುತ್ತಲಿರುವ ಜಿಲ್ಲೆಗಳಲ್ಲಿ ಮೌರ್ಯರ ಆಡಳಿತಾವಧಿಗೆ ಸಂಬಂಧಿಸಿದ ಅವಶೇಷಗಳು ಲಭಿಸಿರುವುದರಿಂದ ವಿಜಯಪುರ ಜಿಲ್ಲೆಯು ಕೂಡಾ ಇವರ ಆಡಳಿತಕ್ಕೆ ಒಳಪಟ್ಟಿತ್ತು ಎಂದು ತರ್ಕಿಸಬಹುದು.

ಶಾತವಾಹನರ ಕಾಲಘಟ್ಟಕ್ಕೆ ಸಂಬಂಧಿಸಿದಂತೆ ಶಾತವಾಹನರು ಮತ್ತು ಅವರ ನಂತರದ ಚುಟುಮಹಾರಥಿ ದೊರೆಗಳು ಕ್ರಿ.ಶ. ಪ್ರಾರಂಭ ಮತ್ತು ನಂತರದ ಒಂದೆರೆಡು ಶತಮಾನಗಳವರೆಗೆ ಈಗಿನ ಕರ್ನಾಟಕದ ಕೆಲವು ಭಾಗಗಳನ್ನು ತಮ್ಮ ಆಳ್ವಿಕೆಗೊಳಪಡಿಸಿಕೊಂಡಿದ್ದರು. ಮ್ಯಾಕ್‌ಡೋನಿ (ಬಳ್ಳಾರಿ ಜಿಲ್ಲೆ), ವಾಸನ (ಧಾರವಾಡ ಜಿಲ್ಲೆ), ವಡಗಾಂವ-ಮಾಧವಪುರ (ಬೆಳಗಾವಿ ಜಿಲ್ಲೆ) ನೆಲೆಗಳಲ್ಲಿ ಶಾತವಾಹನ ಅರಸರ ಹೆಸರಿನ ಶಾಸನಗಳು, ಸೀಸ ಮತ್ತು ಬೆಳ್ಳಿಯ ನಾಣ್ಯಗಳು ದೊರೆತಿವೆ. ಕೋಲೂರು, ಇಂಗಳದಾಳ, ಚಂದ್ರವಳ್ಳಿ, ಚಿತ್ರದುರ್ಗ, ಚಿಪಿನಕೆರೆ, ತಂಮ್ಮಟಕಲ್ಲು, ಜಟಿಂಗರಾಮೇಶ್ವರ, ಬ್ರಹ್ಮಗಿರಿ, ಬಾಗಳಿ, ನರಸಗೊಂಡನಹಳ್ಳಿ, ಇಟಗಿ, ಉಕ್ಕುಂದ, ಹಿರೇಬಿದರಿ, ಸನ್ನತಿ, ಮಸ್ಕಿ ನೆಲೆಗಳಲ್ಲದೆ ಇತರ ಅನೇಕ ನೆಲೆಗಳಲ್ಲಿಯೂ ಈ ಸಂಸ್ಕೃತಿಯ ಅವಶೇಷಗಳು ದೊರೆತಿವೆ.[೨೦] ಶಾತವಾಹನರ ಶಾಸನಗಳು ಮತ್ತು ನಾಣ್ಯಗಳು ಸಿಕ್ಕಿರುವ ಸ್ಥಳಗಳಿಂದ ಇವರು ತಮ್ಮ ರಾಜಕೀಯ ಚಟುವಟಿಕೆಗಳನ್ನು ದಖ್ಖನಿನ ಪಶ್ಚಿಮಭಾಗದಲ್ಲಿ ಆರಂಭಿಸಿ ಪೂರ್ವ ಮತ್ತು ದಕ್ಷಿಣದ ಕಡೆಗೆ ವಿಸ್ತರಿಸಿ ರಾಜಕೀಯ ಪ್ರಭಾವವನ್ನು ಸ್ಥಾಪಿಸಿದರೆಂಬ ಅಭಿಪ್ರಾಯವಿದೆ. ಈ ಭಾಗಗಳೇ ಕ್ರಮೇಣ ಆಂಧ್ರ, ಕರ್ನಾಟಕ ಎಂದು ಹೆಸರು ಪಡೆಯಿತು. ಸನ್ನತಿ ಮತ್ತು ವಡಗಾಂವ-ಮಾಧವಪುರ ನೆಲೆಗಳು ಶಾತವಾಹನರಿಗೆ ಸಂಬಂಧಿಸಿದ ಮುಖ್ಯ ನೆಲೆಗಳಾಗಿದ್ದು ಇವು ವಿಜಯಪುರ ಜಿಲ್ಲೆಗೆ ಹೊಂದಿಕೊಂಡಂತಿವೆ. ಹಾಗೆಯೇ ಕ್ರಿ.ಶ. ಎರಡನೆಯ ಶತಮಾನದಲ್ಲಿ ಟಾಲೆಮಿಯು ತನ್ನ "A Guide to Geography"ಯಲ್ಲಿ ವಿಜಾಪುರ ಮತ್ತು ಬಾಗಲಕೋಟ ಜಿಲ್ಲೆಯಲ್ಲಿರುವ ಇಂಡಿ, ಕಲಕೇರಿ, ಪಟ್ಟದಕಲ್, ಬಾದಾಮಿ, ಭೀಮಾನದಿಯನ್ನು ಉಲ್ಲೇಖಿಸಿದ್ದಾನೆ.[೨೧] ಹಾಗಾಗಿ ಜಿಲ್ಲೆಯಲ್ಲಿ ಇವರಿಗೆ ಸಂಬಂಧಿಸಿದ ಆಕರಗಳು ನೇರವಾಗಿ ಲಭ್ಯವಾಗದಿದ್ದರೂ ಸಹ ಅಧ್ಯಯನ ಕ್ಷೇತ್ರದ

ಸುತ್ತಲಿನ ಪ್ರದೇಶಗಳಲ್ಲಿ ಕಂಡುಬಂದಿರುವುದರಿಂದ ಈ ಪ್ರದೇಶವು ಶಾತವಾಹನರ ಆಳ್ವಿಕೆಗೆ ಒಳಪಟ್ಟಿತ್ತು ಎಂದು ಹೇಳಬಹುದು.

ಕದಂಬರು (ಕ್ರಿ.ಶ. ೩೨೫-೫೪೦)

ಬನವಾಸಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯಭಾರ ಮಾಡಿದ ಕನ್ನಡದ ಪ್ರಥಮ ವಂಶ ಕದಂಬರದು. ಇವರು ಮೊದಲು ಪಲ್ಲವರನ್ನು ಸೋಲಿಸಿ ನಂತರ ಶಾತವಾಹನರ ಸಂಬಂಧಿಕರೆನಿಸಿದ ಚುಟುಗಳನ್ನು ಹೊರ ಓಡಿಸಿ ಸ್ವತಂತ್ರ ಕನ್ನಡ ಸಾಮ್ರಾಜ್ಯವನ್ನು ಸ್ಥಾಪಿಸಿದರು. ಇವರ ರಾಜ್ಯವು ಕರ್ನಾಟಕದಲ್ಲಿ ಉತ್ತರ ಕನ್ನಡ, ಧಾರವಾಡ, ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ, ಬಳ್ಳಾರಿ, ವಿಜಯಪುರ ಮತ್ತು ಬೆಳಗಾವಿ ಜಿಲ್ಲೆಗಳಲ್ಲದೆ ನೆರೆಯ ದಕ್ಷಿಣ ಭಾಗದ ಮಹಾರಾಷ್ಟ್ರ ಮತ್ತು ಗೋವಾ ಪ್ರದೇಶಕ್ಕೆ ವಿಸ್ತರಿಸಿತ್ತು. ಮಯೂರಶರ್ಮನ ಕಾಲದಲ್ಲಿ ಕದಂಬರ ಆಳ್ವಿಕೆಯ ವ್ಯಾಪ್ತಿಯು ಪಶ್ಚಿಮ ಸಮುದ್ರದಿಂದ (ಅಪರಾರ್ಣವ) ಪ್ರೇಹಾರವರೆಗೆ (ಮಲಪ್ರಭಾ ನದಿ) ವಿಸ್ತರಿಸಿತ್ತು. ಸುಮಾರು ಕ್ರಿ.ಶ. ೩೨೫ ರಿಂದ ಕ್ರಿ.ಶ. ೫೪೦ರವರೆಗೆ ಆಳಿದ ಕದಂಬ ಅರಸು ಮನೆತನದಲ್ಲಿ ಮಯೂರಶರ್ಮ, ರಘುವರ್ಮ, ಕಾಕುಸ್ಥವರ್ಮ, ಮೃಗೇಶವರ್ಮ, ರವಿವರ್ಮ, ಭಾನುವರ್ಮ, ಹರಿವರ್ಮ ಮುಂತಾದ ಅರಸರ ಸಾಂಸ್ಕೃತಿಕ ಕೊಡುಗೆ ಅಪಾರ. ಆದರೆ ವಿಜಯಪುರ ಜಿಲ್ಲೆಯ ರಾಜಕೀಯ ಚಟುವಟಿಕೆಯಲ್ಲಿ ಕದಂಬರ ಕುರಿತಾಗಿ ಆಕರಗಳು ಅಸ್ಪಷ್ಟ.

ಬಾದಾಮಿ ಚಾಳುಕ್ಯರು

ಕದಂಬರನ್ನು ಸೋಲಿಸಿ ಕ್ರಿ.ಶ. ೫೪೦ ರಲ್ಲಿ ಅಧಿಕಾರಕ್ಕೆ ಬಂದ ಬದಾಮಿ ಚಾಳುಕ್ಯರು ಬಾಗಲಕೋಟೆ ಜಿಲ್ಲೆಯನ್ನು ಒಳಗೊಂಡಂತೆ ಹಳೆಯ ವಿಜಯಪುರ ಜಿಲ್ಲೆಯಲ್ಲಿ ಪ್ರಥಮ ಸ್ವತಂತ್ರ ಅರಸು ಮನೆತನ ಅಸ್ತಿತ್ವಕ್ಕೆ ಬಂದಿತು. ಇವರಲ್ಲಿ ಪ್ರಮುಖ ಅರಸರೆಂದರೆ ಮೊದಲನೇ ಪುಲಕೇಶಿ, ಕೀರ್ತಿವರ್ಮ, ಮಂಗಳೇಶ, ಇಮ್ಮಡಿ ಪುಲಕೇಶಿ, ವಿಕ್ರಮಾದಿತ್ಯ, ವಿನಯಾದಿತ್ಯ ಮತ್ತು ವಿಜಯಾದಿತ್ಯ ಇವರ ಸಾಮ್ರಾಜ್ಯವು ಉತ್ತರದ ನರ್ಮದದಿಂದ ದಕ್ಷಿಣದ ಕಾವೇರಿವರೆಗೆ ಹಬ್ಬಿತ್ತು. ಈ ಅರಸರು ಶೈವ, ವೈಷ್ಣವ, ಜೈನ ಹಾಗೂ ಬೌದ್ಧ ಧರ್ಮಗಳಿಗೆ ರಾಜ್ಯಾಶ್ರಯ ನೀಡಿ ಪ್ರೋತ್ಸಾಹಿಸಿದರು. ಇದರ ಕುರುಹಾಗಿ ಬಾದಾಮಿ, ಐಹೊಳೆ, ಪಟ್ಟದಕಲ್ಲು, ಸಂಡೂರು, ಆಲಂಪುರ (ಆಂಧ್ರಪ್ರದೇಶ) ಪ್ರದೇಶಗಳಲ್ಲಿ ನಿರ್ಮಿಸಿದ ಅನೇಕ ದೇವಾಲಯಗಳು ಕಂಡುಬರುತ್ತವೆ. ವೈಷ್ಣವ ಧರ್ಮದ ಪ್ರಮುಖ ಆರಾಧಕರಾದ ಚಾಳುಕ್ಯರು ತಮ್ಮ ಶಾಸನಗಳನ್ನು ವಿಷ್ಣುವಿನ ಅವತಾರವಾದ ವರಾಹದ ಸ್ತುತಿಯಿಂದಲೇ ಹೊರಡಿಸಿದ್ದಾರೆ. ಆದ್ದರಿಂದಲೇ ರಾಜರು ಭಾಗವತ, ಪರಮ ಭಾಗವತ, ಶ್ರೀ

ಪೃಥ್ವಿವಲ್ಲಭ, ಶ್ರೀವಲ್ಲಭ ಎಂಬ ಬಿರುದುಗಳನ್ನು ಪಡೆದಿದ್ದರು. ಮೊದಲನೆಯ ಪುಲಕೇಶಿಯೂ ಅಶ್ವಮೇಧ, ಅಗ್ನಿಸ್ತೋಮ, ಅಗ್ನಿಚಯನ, ವಾಜಪೇಯ, ಬಹುಸುವರ್ಣ ಮತ್ತು ಪೌಂಡರಿಕ ಯಜ್ಞಗಳನ್ನು ಮಾಡಿದನೆಂದು ಬಾದಾಮಿಯಲ್ಲಿರುವ ಗುಹಾಲಯ ಮತ್ತು ಇತರ ದೇವಾಲಯಗಳಲ್ಲಿ ವಿಷ್ಣು, ವರಾಹ, ಗೋವರ್ಧನರನ್ನು ಪ್ರತಿಷ್ಠಾಪನೆ ಮಾಡಿದನೆಂದು ತಿಳಿದುಬರುತ್ತದೆ.

ವೈಷ್ಣವ ಧರ್ಮಕ್ಕೆ ಕೊಟ್ಟ ಪ್ರೋತ್ಸಾಹದಷ್ಟೇ ಶೈವ ಧರ್ಮಕ್ಕೂ ಕೂಡಾ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಇವರ ಅನೇಕ ಶಾಸನಗಳು ಶಿವನ ಸ್ತುತಿಯಿಂದಲೇ ಪ್ರಾರಂಭವಾಗಿವೆ. ಪಟ್ಟದಕಲ್ಲು ಶೈವ ಆರಾಧನಾ ಕೇಂದ್ರವಾಗಿತ್ತು ಎಂದು ಹೇಳಲಾಗುತ್ತದೆ. ಒಂದನೆಯ ವಿಕ್ರಮಾದಿತ್ಯನು ಶಿವಮಂಡಲ ದೀಕ್ಷೆ ಪಡೆದು ಬ್ರಾಹ್ಮಣರಿಗೆ ಭೂದಾನ ನೀಡಿದ್ದನು. ವಿನಯಾದಿತ್ಯನ ಪುತ್ರ ಲೋಕಾದಿತ್ಯನು ತನ್ನ ತಾಯಿಯ ಸ್ಮರಣಾರ್ಥ ಆಲಂಪುರದಲ್ಲಿ ಬ್ರಹ್ಮ ದೇವಾಲಯವನ್ನು ನಿರ್ಮಾಣ ಮಾಡಿದನು. ಬಾದಾಮಿಯ ಶೈವ ಗುಹಾಲಯದ ನಿರ್ಮಾಣ ಕಾರ್ಯ ಮೊದಲನೆಯ ಪುಲಕೇಶಿಯಿಂದ ಪ್ರಾರಂಭವಾಯಿತು. ಇಲ್ಲಿ ಏಕಶಿಲಾ ನಿರ್ಮಿತ ಶಿವಲಿಂಗವಿದೆ. ಗುಹೆಯ ಗೋಡೆಗಳ ಮೇಲೆ ನಟರಾಜ, ಅರ್ಧನಾರೀಶ್ವರ ಮಹಿಷಮರ್ಧಿನಿ, ಗಣಪತಿ, ಕಾರ್ತಿಕೇಯ ಶಿಲ್ಪಗಳನ್ನು ಕೆತ್ತಲಾಗಿದೆ. ರಾವಳಪಢಿಯಲ್ಲಿ ಶಿವಗುಹಾಲಯ, ಮಹಾಕೂಟದಲ್ಲಿರುವ ಸಂಗಮೇಶ್ವರ, ಅರಿಕೇಶ್ವರ ಮತ್ತು ಮಲ್ಲಿಕಾರ್ಜುನ ದೇವಾಲಯಗಳು ನಿರ್ಮಾಣಗೊಂಡಿರುವುದು, ಇವರು ಶೈವ ಮತಕ್ಕೂ ಅಷ್ಟೇ ಪ್ರೋತ್ಸಾಹವನ್ನು ಕೊಟ್ಟಿದ್ದರು ಎಂದು ತಿಳಿದುಬರುತ್ತದೆ.

ರಾಷ್ಟ್ರಕೂಟರು

ಬಾದಾಮಿ ಚಾಳುಕ್ಯರ ಮಾಂಡಳಿಕರಾಗಿದ್ದ ದಂತಿದುರ್ಗ ಕ್ರಿ.ಶ. ೭೫೩ರಲ್ಲಿ ಕೀರ್ತಿವರ್ಮನನ್ನು ಸೋಲಿಸಿ ಸ್ವತಂತ್ರ ರಾಷ್ಟ್ರಕೂಟ ಮನೆತನವನ್ನು ಸ್ಥಾಪಿಸಿದನು. ಮಳಖೇಡವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಧ್ರುವ, ಮೂರನೆಯ ಗೋವಿಂದ, ಅಮೋಘವರ್ಷ, ಮೂರನೆಯ ಕೃಷ್ಣ ಈ ಮನೆತನದ ಪ್ರಮುಖ ಅರಸರು ಕ್ರಿ.ಶ. ೯೭೩ರ ವರೆಗೆ ಆಳಿದರು. ವಿಜಯಪುರ ಜಿಲ್ಲೆಯಲ್ಲಿ ಇವರ ಆಡಳಿತಕ್ಕೆ ಸಂಬಂಧಪಟ್ಟಂತೆ ಒಟ್ಟು ೮ ಶಾಸನಗಳು ದೊರೆತಿದ್ದು ಜಿಲ್ಲೆಯು ಇವರ ಆಡಳಿತಕ್ಕೆ ಒಳಪಟ್ಟಿದ್ದನ್ನು ಸ್ಪಷ್ಟಪಡಿಸುತ್ತವೆ. ಅಮೋಘವರ್ಷನ ಹೂವಿನ ಹಿಪ್ಪರಗಿ ಶಾಸನ ಇಲ್ಲಿಯ ಪ್ರಥಮ ದಾಖಲೆ. ರಾಷ್ಟ್ರಕೂಟ ಅರಸರಲ್ಲಿಯೇ ಮಹತ್ವಾಕಾಂಕ್ಷಿಯಾದ ಮೂರನೆಯ ಕೃಷ್ಣನ ಮೂರು ಶಾಸನಗಳು ಸಿಗುತ್ತವೆ. ಈತನ ಆಡಳಿತಾವಧಿಯಲ್ಲಿ ಆತನ ಪ್ರಧಾನಮಂತ್ರಿ ಸಂಧಿವಿಗ್ರಹಿ ನಾರಾಯಣನು ಸಾಲೋಟಗಿಯಲ್ಲಿ ತ್ರೈಪುರುಷ ದೇವಾಲಯವನ್ನು ಕಟ್ಟಿಸಿ ಬ್ರಹ್ಮ, ವಿಷ್ಣು, ಮಹೇಶ್ವರರ ವಿಗ್ರಹಗಳನ್ನು ಪ್ರತಿಷ್ಠಾಪಿಸುತ್ತಾನೆ. ಇದು ರಾಷ್ಟ್ರಕೂಟರ ಪ್ರಸಿದ್ಧ

ಘಟಿಕಾಸ್ಥಾನವಾಗಿತ್ತು. ತರ್ದವಾಡಿ ಸಾಸಿರ ಪ್ರಾಂತ ರೂಪುಗೊಂಡಿದ್ದು ಇವರ ಕಾಲದಲ್ಲಿಯೇ, ಇದು ಮುಂದೆ ಬಂದಂತಹ ಅರಸು ಮನೆತನಗಳಲ್ಲಿಯೂ ಮುಂದುವರೆಯಿತು. ಕಾರ್ಜೋಳ ಶಾಸನವು[೨೨] ಕೃಷ್ಣನು ಮೇಲ್ಪಾವಟಿಯಿಂದ ರಾಜ್ಯವಾಳುತ್ತಿದ್ದಾಗ, ತೈಲಪಯ್ಯ ಅವನ ಪಾದಪದ್ಮೋಪಜೀವಿಯಾಗಿ ಅಧಿಕಾರ ನಡೆಸುತ್ತಿದ್ದುದನ್ನು ಉಲ್ಲೇಖಿಸುತ್ತದೆ. ಮುಂದೆ ಕೆಲವೇ ವರ್ಷಗಳಲ್ಲಿ ಈ ತೈಲಪ ಚಾಲುಕ್ಯ ರಾಜ್ಯವನ್ನು ಸ್ಥಾಪಿಸುವಲ್ಲಿ ಯಶಸ್ವಿಯಾದನು. ಸಾಲೋಟಗಿಯ ಮೂರನೇ ಕೃಷ್ಣನ ಶಾಸನ ಸಾಲೋಟಗಿಯಲ್ಲಿ ತ್ರೈಪುರುಷ ದೇವಾಲಯವನ್ನು ಕಟ್ಟಿಸಿದುದರ ಬಗ್ಗೆ ಉಲ್ಲೆಖಿಸುತ್ತದೆ. ಅದೇ ರೀತಿ ಯಕಂಚಿಯಲ್ಲಿರುವ ಶೈವ ದೇವಾಲಯವು ಇವರು ಶೈವ ಧರ್ಮಕ್ಕೆ ಕೊಟ್ಟ ಕೊಡುಗೆಯನ್ನು ತಿಳಿಸಿಕೊಡುವಲ್ಲಿ ಸಹಾಯಕವಾಗಿವೆ.

ಕಲ್ಯಾಣ ಚಾಳುಕ್ಯರು

ದಕ್ಷಿಣ ಭಾರತದ ಪ್ರಬಲ ಅರಸು ಮನೆತನಗಳಲ್ಲಿ ಒಂದಾದ ಕಲ್ಯಾಣ ಚಾಳುಕ್ಯರು ಬಾದಾಮಿ ಚಾಳುಕ್ಯರ ವಂಶಸ್ಥರೆಂದು ವಿದ್ವಾಂಸರು ಪರಿಗಣಿಸಿದ್ದಾರೆ. ಕಲ್ಯಾಣವನ್ನು ಆಡಳಿತದ ಪ್ರಮುಖ ಕೇಂದ್ರವಾಗಿಟ್ಟುಕೊಂಡು. ಕ್ರಿ.ಶ. ೯೭೩ ರಿಂದ ಕ್ರಿ.ಶ. ೧೧೮೯ರ ವರೆಗೂ ಅಂದರೆ ಸುಮಾರು ೨೦೦ ವರ್ಷಗಳ ಕಾಲ ಕರ್ನಾಟಕ ಹಾಗೂ ದಖ್ಖನಿನ ಬಹುಭಾಗವನ್ನು ಆಳಿದರು. ಕನ್ನಡಿಗರಾದ ಇವರು ತಮ್ಮ ಆಡಳಿತಾತ್ಮಕ ಪ್ರಭಾವವನ್ನು ಕರ್ನಾಟಕದ ಹೊರಗೂ ವಿಸ್ತರಿಸಿದರು. ಭಾರತದಾದ್ಯಂತವಲ್ಲದೆ ಆಗ್ನೇಯ ಏಷ್ಯಾ ಭಾಗಗಳಲ್ಲಿ ಕನ್ನಡ ನಾಡಿನ ಸಂಸ್ಕೃತಿ ಹರಡುವಂತೆ ಮಾಡಿದ್ದಾರೆ. ವಿಜಯಪುರ ಜಿಲ್ಲೆಯಲ್ಲಿ ಇವರ ಕಾಲಾವಧಿಗೆ ಸಂಬಂಧಪಟ್ಟಂತೆ ಸುಮಾರು ೧೨೪ ಶಾಸನಗಳು ಇದುವರೆಗೆ ಲಭ್ಯವಾಗಿದ್ದು, ಅವು ಇವರ ಆಡಳಿತಾತ್ಮಕ ಮತ್ತು ಸಾಂಸ್ಕೃತಿಕ ಸಾಧನೆಗಳನ್ನು ಸಮರ್ಥಿಸುವಲ್ಲಿ ಉಪಯುಕ್ತವಾಗಿವೆ.

ಈ ಸಾಮ್ರಾಜ್ಯವು ಆರನೇ ವಿಕ್ರಮಾದಿತ್ಯನ ಮತ್ತು ಮುಮ್ಮಡಿ ಸೋಮೇಶ್ವರನ ಆಳ್ವಿಕೆಯ ಕಾಲದಲ್ಲಿ ರಾಜಕೀಯ ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ಅತ್ಯಂತ ಉತ್ತುಂಗ ಶಿಖರವನ್ನೇರಿದ ಕುರುಹುಗಳು ನಮಗೆ ದೊರೆಯುತ್ತವೆ. ಅಂದಿನ ಸಾಂಸ್ಕೃತಿಕ ಗತವೈಭವವನ್ನು ತಿಳಿಸುವ ಹಲವಾರು ಭಗ್ನಾವಶೇಷಗಳು ಕಲ್ಯಾಣ ಚಾಳುಕ್ಯರ ಬಹುಮುಖಿ ಸಂಸ್ಕೃತಿ ಪರಂಪರೆಯನ್ನು ಪ್ರತಿಬಿಂಬಿಸುತ್ತವೆ. ಇವುಗಳ ಕುರಿತಾಗಿ ಹಲವು ಕ್ಷೇತ್ರಗಳಲ್ಲಿ ವಿದ್ವಾಂಸರು ಅಧ್ಯಯನ ಸಂಶೋಧನೆಗಳು ನಡೆದರೆ ಮತ್ತಷ್ಟು ಹೊಸ ವಿಷಯಗಳ ಅಧ್ಯಯನಕ್ಕೆ ಸ್ಫೂರ್ತಿ ನೀಡುತ್ತವೆ. ಈ ನಿಟ್ಟಿನಲ್ಲಿ ಕಲ್ಯಾಣ ಚಾಳುಕ್ಯರ ಸಾಮಾಜಿಕ ಜೀವನವು ಹಲವು ವೈಶಿಷ್ಟ್ಯಗಳಿಂದ ಕೂಡಿದ ವಿಷಯಗಳನ್ನು ಗುರುತಿಸಬಹುದಾಗಿದೆ.

ದಕ್ಷಿಣ ಭಾರತದಲ್ಲಿ ರಾಷ್ಟ್ರಕೂಟರ ನಂತರ ಹೊಸ ರಾಜಕೀಯ ಶಕ್ತಿಯೊಂದು ಉದಯವಾಯಿತು. ಅದುವೇ ಕಲ್ಯಾಣ ಚಾಳುಕ್ಯ ಮನೆತನ. ರಾಷ್ಟ್ರಕೂಟ ಮೂರನೇ ಕೃಷ್ಣನ ಸಾಮಂತ ಚಾಳುಕ್ಯ ಎರಡನೆಯ ತೈಲಪನು ಕೃಷ್ಣನ ನಂತರದ ರಾಷ್ಟ್ರಕೂಟ ಅರಸರ ಆಳ್ವಿಕೆಯಲ್ಲಿ ಸ್ವತಂತ್ರಗೊಳ್ಳುವ ಯೋಜನೆಯನ್ನು ರೂಪಿಸಿದನು. ಪರಮಾರ ಅರಸ ಮಾನ್ಯಖೇಟದ ಮೇಲೆ ದಾಳಿಮಾಡಿದ ಸಮಯ ಸಾಧಿಸಿ ತೈಲಪನು ತಡಮಾಡದೆ ತನ್ನ ಯಜಮಾನಿಕೆಯ ಮೆಟ್ಟನ್ನು ತೊಟ್ಟು ನಡೆದೆಬಿಟ್ಟನು. ಮುಂದೆ ರಾಷ್ಟ್ರಕೂಟ ಎರಡನೆ ಕರ್ಕ ರಾಜನನ್ನು ಕ್ರಿ.ಶ. ೯೭೩ರಲ್ಲಿ ಸೋಲಿಸಿದ ತೈಲಪನು ಕಲ್ಯಾಣದಲ್ಲಿ ರಾಜ್ಯವನ್ನು ಸ್ಥಾಪಿಸಿದನು. ಹೀಗಾಗಿ ಇವರಿಗೆ ಕಲ್ಯಾಣದ ಚಾಲುಕ್ಯರೆಂದು ಹೆಸರು ಬಂದಿತು. ಕ್ರಿ.ಶ. ೯೭೩ರಲ್ಲಿ ತೈಲಪನಿಂದ ಪ್ರಾರಂಭಗೊಂಡ ಕಲ್ಯಾಣ ಚಾಲುಕ್ಯ ಮನೆತನ ಕ್ರಿ.ಶ. ೧೧೮೯ರ ವರೆಗೆ ಅಸ್ತಿತ್ವದಲ್ಲಿತ್ತು. ಸುಮಾರು ಎರಡು ಶತಮಾನಗಳ ಕಾಲ ದಕ್ಷಿಣ ಭಾರತದ ಪ್ರಸ್ತಭೂಮಿಯ ಮೇಲೆ ಅಧಿಕಾರ ನಡೆಸಿದ ಕಲ್ಯಾಣ ಚಾಳುಕ್ಯರು ರಾಜಕೀಯವಾಗಿ, ಆಡಳಿತಾತ್ಮಕವಾಗಿ, ಸಾಂಸ್ಕೃತಿಕವಾಗಿ ಹಾಗೂ ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರಗಳ ಅಭ್ಯುದಯಕ್ಕೆ ಕಾರಣೀಭೂತರಾಗಿದ್ದಾರೆ.

ಎರಡನೆ ತೈಲಪ ಮೂಲತಃ ಬಾದಾಮಿ ಚಾಳುಕ್ಯ ಮನೆತನಕ್ಕೆ ಸೇರಿದವನೆಂಬುದನ್ನು ದಾಖಲೆಗಳು ಸ್ಪಷ್ಟಪಡಿಸುತ್ತಿದ್ದು, ಎರಡು ಮನೆತನಗಳ ಮಧ್ಯವಿರುವ ಸಂಬಂಧದ ವಂಶವೃಕ್ಷವನ್ನು ನೀಡುತ್ತವೆ. ರನ್ನ ತನ್ನ 'ಗದಾಯುದ್ಧ'ದಲ್ಲಿ ಬಾದಾಮಿ ಚಾಳುಕ್ಯ ವಿಜಯಾದಿತ್ಯನಿಂದ ಎರಡನೆ ತೈಲಪನವರೆಗಿರುವ ವಂಶವೃಕ್ಷವನ್ನು ನೀಡುತ್ತಾನೆ. 'ವಿಕ್ರಮಾಂಕದೇವ ಚರಿತ್ರೆ' ಯನ್ನು ಬರೆದ ಕಾಶ್ಮೀರ ಪಂಡಿತ ಕವಿ ಬಿಲ್ಹಣನು ಸಹ ಎರಡು ಮನೆತನದ ಮಧ್ಯದ ವಂಶಾನುಕ್ರಮಣಿಕೆಯನ್ನು ನೀಡುತ್ತಾನೆ. ಕ್ರಿ.ಶ. ೧೦೧೫ರ ಅಯ್ಯಣದೇವನ ರೂಗಿ ಶಾಸನವು[೨೩] ಬಾದಾಮಿ ಚಾಳುಕ್ಯ ಮನೆತನದ ಮೂಲಪುರುಷ ಜಯಸಿಂಹನಿಂದ ಹಿಡಿದು ಕಲ್ಯಾಣ ಚಾಳುಕ್ಯ ಅಯ್ಯಣದೇವನವರೆಗೂ ಎರಡು ಮನೆತನಗಳ ಅರಸರ ಹೆಸರುಗಳನ್ನು ಉಲ್ಲೇಖಿಸುತ್ತದೆ. ಇವಲ್ಲದೆ ಹಲವಾರು ಶಾಸನಗಳು ಎರಡು ಮನೆತನಗಳ ಅರಸರು ಒಂದೇ ಮನೆತನಕ್ಕೆ ಸಂಬಂಧಿಸಿದವರೆಂಬುದನ್ನು ಸ್ಪಷ್ಟಪಡಿಸುತ್ತವೆ.[೨೪] ವಿಜಯಪುರ ಜಿಲ್ಲೆಯಲ್ಲಿ ಇವರ ಕಾಲಾವಧಿಗೆ ಸಂಬಂಧಪಟ್ಟಂತೆ ಸುಮಾರು ೧೨೪ ಶಾಸನಗಳು ಇದುವರೆಗೆ ಲಭ್ಯವಾಗಿದ್ದು, ಅವು ಇವರ ಆಡಳಿತಾತ್ಮಕ ಮತ್ತು ಸಾಂಸ್ಕೃತಿಕ ಸಾಧನೆಗಳನ್ನು ಸಮರ್ಥಿಸುವಲ್ಲಿ ಉಪಯುಕ್ತವಾಗಿವೆ.

ಎರಡನೆಯ ತೈಲಪ

ಕ್ರಿ.ಶ. ೯೫೭ರ ಕಾರ್ಜೋಳ ಶಾಸನ ರಾಷ್ಟ್ರಕೂಟ ಕೃಷ್ಣನು ಮೇಲ್ಪಾಟಿಯಲ್ಲಿದ್ದಾಗ, ಇವನ ಸಾಮಂತನಾಗಿ ತೈಲಪಯ್ಯನು ನಾಡನ್ನು (ನಾಡಿನ ಹೆಸರನ್ನು ತಿಳಿಸಿಲ್ಲ) ಆಳುತ್ತಿದ್ದ ಎಂದು, ಮುಂದೆ ಕ್ರಿ.ಶ. ೯೬೫ರ ನರಸಲಗಿ ಶಾಸನವು ಸಾಮಂತನಾದ ತೈಲಪರಸನು ತರ್ದವಾಡಿ ಸಾವಿರವನ್ನು ಅಣುಗ ಜೀವಿತದಿಂದ ಆಳುತ್ತಿದುದನ್ನು ಸ್ಪಷ್ಟಪಡಿಸುತ್ತದೆ.[೨೫] ಇದೇ ವೇಳೆಯಲ್ಲಿ ರಾಷ್ಟ್ರಕೂಟ ಕೊನೆಯ ದೊರೆ ಕರ್ಕನನ್ನು ಸೋಲಿಸಿ ಸ್ವತಂತ್ರವನ್ನು ಘೋಷಿಸಿಕೊಳ್ಳುತ್ತಾನೆ. ಎರಡನೇ ಜಗದೇಕಮಲ್ಲನ ಮುತ್ತಗಿಯ ಶಾಸನ "ಸುವರ್ಣ್ನದಾನಿ ಅವಧೀರಿತ ವೈರಿಬಲಾವಶೇಷ ಅಜಿಲೋಲುಪ ಕಲಿತೈಲ ಕುಂತಳ ದೇಶವನ್ನು ನಿಜಭುಜಾಬಳದಿಂದ ಸಮರಧಾರಿಣಿಯಲ್ಲಿ ರಾಷ್ಟ್ರಕೂಟ ಭೂಕಾಂತರನ್ನು ಕಾದಿಕೊಂದು ಗೆಲ್ದುದಾಗಿ" ಹೇಳಿದೆ.[೨೬] ತೈಲಪನು ಸ್ವತಂತ್ರ ಘೋಷಿಸಿಕೊಂಡ ಮೇಲೆ ಮಾನ್ಯಖೇಟದಿಂದಲೇ ಆಳ್ವಿಕೆ ಮಾಡುತ್ತಿದ್ದನು ಎಂದು ಕ್ರಿ.ಶ. ೯೯೫ರ ಕಾಖಂಡಕಿ ಶಾಸನ ತಿಳಿಸುತ್ತದೆ.[೨೭] ತೈಲಪನಿಗೆ ಸಂಬಂಧಿಸಿದ ಇನ್ನೊಂದು ಶಾಸನ ಕಾರ್ಜೋಳದಲ್ಲಿದ್ದು, ತೆರಿಗೆ ನಿಗದಿಗೊಳಿಸಿದ ಬಗ್ಗೆ ತಿಳಿಸುತ್ತದೆ.[೨೮]

ಸತ್ಯಾಶ್ರಯ

ಎರಡನೇ ತೈಲಪನ ತರುವಾಯ ಈತನ ಹಿರಿಯಮಗ ಸತ್ಯಾಶ್ರಯ ಅಧಿಕಾರಕ್ಕೆ ಬಂದನು. ತಂದೆಯ ಜೊತೆಗೆ ಅನೇಕ ಯುದ್ಧಗಳಲ್ಲಿ ಭಾಗಿಯಾಗಿ ಅನುಭವವನ್ನು ಪಡೆದ ಸತ್ಯಾಶ್ರಯ ಸಿಂಹಾಸನದ ಮೇಲೆ ಕುಳಿತ ನಂತರವೂ ನಿರಂತರವಾಗಿ ಯುದ್ಧಗಳಲ್ಲಿ ತೊಡಗಿ ರಾಜ್ಯವನ್ನು ರಕ್ಷಿಸಿದನು. ೧೧ ವರ್ಷಗಳ ಕಾಲ ಆಡಳಿತವನ್ನು ನಡೆಸಿದ ಸತ್ಯಾಶ್ರಯನು 'ಅಕಲಂಕಚರಿತ', 'ಇರಿವಬೆಡಂಗ', 'ಸತ್ತಿ', 'ಸತ್ತಿಮ', 'ಅಹವಮಲ್ಲ', 'ಸಾಹಸಭೀಮ', 'ಅಕಾಲವರ್ಷ' ವೆಂಬ ಹಲವಾರು ಬಿರುದುಗಳನ್ನು ಹೊಂದಿದ್ದನು.[೨೯] ಸತ್ಯಾಶ್ರಯನಿಗೆ ಸಂಬಂಧಿಸಿದ ಒಂದು ಶಾಸನ ತುಂಬಗಿಯಲ್ಲಿ ದೊರೆತಿದೆ. ಈತನ ಪಾದಪದ್ಮೋಪಜೀವಿಯಾದ ಬ್ರಹ್ಮಯ್ಯನು ಪಗಲಟ್ಟಿ ೩೦೦ರ ಬಳಿಯ ಅಗ್ರಹಾರ ತುಂಬಿಗೆಯ ಪೊಸಳದೇವರಿಗೆ ದಾನ ಕೊಟ್ಟಿದ್ದನ್ನು ತಿಳಿಸುತ್ತದೆ. ಶಾಸನ ತ್ರುಟಿತವಾಗಿರುವುದರಿಂದ ಹೆಚ್ಚಿನ ವಿಷಯಗಳು ತಿಳಿದುಬರುವುದಿಲ್ಲ.[೩೦]

ಅಯ್ಯಣದೇವ

ಸತ್ಯಾಶ್ರಯನಿಗೆ ಮಕ್ಕಳಿರದ ಕಾರಣ ಇವನ ಸಹೋದರ ದಶವರ್ಮನ ಮಗ ಐದನೆಯ ವಿಕ್ರಮಾದಿತ್ಯ ಕಲ್ಯಾಣದ ಸಿಂಹಾಸನಕ್ಕೆ ಬಂದನು. ಈತನ ನಂತರ ಅಯ್ಯಣದೇವನು

ಸಿಂಹಾಸನವನ್ನೇರಿ ಒಂದು ವರ್ಷ ಕಾಲ ರಾಜ್ಯಭಾರ ಮಾಡಿದನು. ಇದನ್ನು ಸಮರ್ಥಿಸುವ ಕ್ರಿ.ಶ. ೧೦೧೫ರ ರೂಗಿ ಶಾಸನವು ಬಾದಾಮಿ ಚಾಲುಕ್ಯರಿಂದ ಕಲ್ಯಾಣ ಚಾಳುಕ್ಯ ಅಯ್ಯಣನವರೆಗಿನ ವಂಶಾವಳಿಯನ್ನು ಹಾಗೂ ಅವನಿಗೆ ಅಯ್ಯಣದೇವ ವಸುದೈಕ ಮಲ್ಲನೆಂಬ ಬಿರುದನ್ನು ತಿಳಿಸುತ್ತದೆ.[೩೧]

ಇಮ್ಮಡಿ ಜಯಸಿಂಹ

ಅಯ್ಯಣದೇವನ ಆಳ್ವಿಕೆಯ ನಂತರ ಈತನ ತಮ್ಮ ಇಮ್ಮಡಿ ಜಯಸಿಂಹ ಸಿಂಹಾಸನವೇರಿದನು. ಜಗದೇಕಮಲ್ಲ ಎಂಬುದು ಅವನ ಬಿರುದಾಗಿದ್ದರೂ ರೂಢಿಯಲ್ಲಿ ಅದೇ ಹೆಸರಿನಿಂದ ಕರೆಯಲಾಗುತ್ತಿದೆ. ಜಗದೇಕಮಲ್ಲನ ಕಾಲಾವಧಿಯು ಯುದ್ಧದಿಂದಲೇ ತುಂಬಿಕೊಂಡಿದ್ದರೂ, ಸಾಮ್ರಾಜ್ಯದ ಆಡಳಿತ ಶಾಂತಿಯುತವಾಗಿತ್ತು. ಈತನಿಗೆ ಸಂಬಂಧಿಸಿದ ಹಲವಾರು ಶಾಸನಗಳು ಈ ಜಿಲ್ಲೆಯಲ್ಲಿ ಲಭ್ಯವಾಗಿವೆ. ಕ್ರಿ.ಶ. ೧೦೧೯ರ ರೂಗಿ ಶಾಸನವು ಜಯಸಿಂಹನು (ಜಗದೇಕಮಲ್ಲ) ಏತಗಿರಿ ನೆಲವೀಡಿನಿಂದ ಆಳುತ್ತಿದ್ದನೆಂದು ಹೇಳಿದೆ. ಎಂದು ಇವನ ಮಗನಾದ ಹಾಗೂ ಮಹಾಸಾಮಂತನಾದ ದಾಸರಸನು ತರ್ದ್ದವಾಡಿ ಸಾಸಿರದ ನಾಡಿನಲ್ಲಿ ರೂವಿಗೆ ಮುಂತಾದ ಹದಿನೆಂಟು ಅಗ್ರಹಾರಗಳನ್ನು ಆಳುತ್ತಿದ್ದನೆಂದು. ಜಯಸಿಂಹನನ್ನು 'ರಾಜೇಂದ್ರ ಚೋಳ ಮದಭಂಜನ', 'ಬೋಜಕುಳಕಾಳಾನಳಂ', 'ಗೂರ್ಜರವಜ್ರಪಾತಂ', 'ಮಾಳವನಿರ್ಮೂಳನಂ ಜಗದೇಕಮಲ್ಲಂ', ಎಂದು ಉಲ್ಲೇಖಿಸುತ್ತದೆ.[೩೨]

ಒಂದನೆಯ ಸೋಮೇಶ್ವರ (ಕ್ರಿ.ಶ. ೧೦೪೪-೧೦೬೮)

ಜಯಸಿಂಹನ ನಂತರ ಅವನ ಮಗ ಒಂದನೇ ಸೋಮೇಶ್ವರನು ಪಟ್ಟವೇರಿದನು. ಈತನು ಸುಮಾರು ೨೪ ವರ್ಷಗಳ ಕಾಲ ಆಡಳಿತ ನಡೆಸಿದನು. 'ಅಹಮಲ್ಲ', 'ತ್ರೈಲೋಕ್ಯಮಲ್ಲ' ನೆಂಬ ಬಿರುದಾಂಕಿತನಾದ ಸೋಮೇಶ್ವರ ಕಲ್ಯಾಣ ನಗರವನ್ನು ಕಟ್ಟಿಸಿದನೆಂದು ಬಿಲ್ಹಣನು ತನ್ನ ಗ್ರಂಥದಲ್ಲಿ ಹೇಳುತ್ತಾನೆ.[೩೩] ಈತನ ಕಾಲಾವಧಿಯಲ್ಲಿಯೇ ಕಲ್ಯಾಣವು ಇವರ ರಾಜಧಾನಿಯಾಯಿತು. ಇಮ್ಮಡಿ ಜಯಸಿಂಹನ ಕಾಲದ ವಿಜಯಪುರ ಪ್ರದೇಶದಲ್ಲಿರುವ ಶಾಸನಗಳನ್ನು ನೋಡಿದಾಗ ಕೆಲವು ಶಾಸನಗಳು ಈತನು ಕಲ್ಯಾಣದ ನೆಲವೀಡಿನಿಂದ ರಾಜ್ಯಭಾರ ಮಾಡುತ್ತಿದ್ದ ಎಂದು, ಇನ್ನೂ ಕೆಲವು ಶಾಸನಗಳು ಪೊಟ್ಟಳಕೆರೆಯಿಂದ ರಾಜ್ಯಭಾರ ಮಾಡುತ್ತಿದ್ದ ಎಂದು ತಿಳಿಸುತ್ತವೆ. ಬಹುಶ ಜಯಸಿಂಹನ ಕಾಲಕ್ಕಾಗಲೆ ಕಲ್ಯಾಣವು ಉಪರಾಜಧಾನಿಯಾಗಿದ್ದು, ಅದನ್ನು ಪ್ರಮುಖ ರಾಜಧಾನಿಯನ್ನಾಗಿ ಮಾಡುವ ಪ್ರಯತ್ನ ನಡೆದಿತ್ತು ಎಂಬುದು ತಿಳಿದುಬರುತ್ತದೆ. ಇದು ಒಂದನೇ

ಸೋಮೇಶ್ವರನ ಅವಧಿಯಲ್ಲಿ ಪೂರ್ಣಗೊಂಡಿತು. ಈತನಿಗೆ ಸಂಬಂಧಿಸಿದ ಶಾಸನಗಳು ಈ ಪ್ರದೇಶದಲ್ಲಿ ಹಲವಾರು ಕಡೆ ಕಂಡುಬರುತ್ತವೆ.[೩೪] ಕ್ರಿ.ಶ. ೧೦೪೪ರ ಆಲಮೇಲ್ ಶಾಸನ ಚಾಳುಕ್ಯರಾಜ ತ್ರೈಲೋಕ್ಯಮಲ್ಲನು ಆಳುತ್ತಿದ್ದಾಗ, ಮಹಾಸಾಮಂತ ತಗರ ನಗರಾಧೀಶ್ವರ ಏಳಮೇಲವನ್ನು ಆಳುತ್ತಿದ್ದ ಎಂದು ಉಲ್ಲೇಖಿಸುತ್ತದೆ.[೩೫] ಕ್ರಿ.ಶ. ೧೦೪೯ರ ಬಾಗೇವಾಡಿ ಶಾಸನ ಇವನ ಪತ್ನಿ ಪಿರಿಯರಸಿ ಮೈಲಳದೇವಿಯನ್ನು,[೩೬] ಕ್ರಿ.ಶ. ೧೦೬೨ರ ಹೊನವಾಡ ಶಾಸನ ಈತನ ಮತ್ತೋರ್ವ ಪತ್ನಿ ಕೇತಲದೇವಿಯನ್ನು ಉಲ್ಲೇಖಿಸುತ್ತವೆ.[೩೭] ಕ್ರಿ.ಶ. ೧೦೬೪ರ ದೇವೂರು[೩೮] ಮತ್ತು ಕ್ರಿ.ಶ. ೧೦೬೬ರ ಮಾರಸನಹಳ್ಳಿ[೩೯] ಶಾಸನಗಳು ತ್ರೈಲೋಕ್ಯಮಲ್ಲನು ಕಲ್ಯಾಣದಿಂದ ರಾಜ್ಯಭಾರ ಮಾಡುತ್ತಿದ್ದಾಗ ಅವನ ಸಾಮಂತನಾಗಿ ಆತನ ಮಗ ಜಯಸಿಂಹದೇವನು ತರ್ದವಾಡಿ ನಾಡನ್ನು ಆಳುತ್ತಿದ್ದನು. ಇಷ್ಟೇ ಅಲ್ಲದೆ ಜಿಲ್ಲೆಯ ಅನೇಕ ಶಾಸನಗಳು ಈತನ ಆಳ್ವಿಕೆಯನ್ನು ಸ್ಪಷ್ಟಪಡಿಸುತ್ತವೆ.

ಎರಡನೆಯ ಸೋಮೇಶ್ವರ (ಕ್ರಿ.ಶ. ೧೦೬೮-೧೦೭೬)

ಒಂದನೇ ಸೋಮೇಶ್ವರನ ನಂತರ ಅವನ ಮಗ ಭುವನೈಕಮಲ್ಲ (ಎರಡನೆಯ ಸೋಮೇಶ್ವರ) ಅಧಿಕಾರಕ್ಕೆ ಬಂದನು. ಈತನ ಆಡಳಿತಾವಧಿಯು ಅಲ್ಪಾವಧಿಯದಾಗಿದ್ದು, ಒಂದು ಕಡೆಯಿಂದ ವೈರಿಗಳ ಯುದ್ಧದ ಭೀತಿ, ಮತ್ತೊಂದು ಕಡೆ ಸಹೋದರ ವಿಕ್ರಮಾದಿತ್ಯನ ದಂಗೆಗಳಿಂದ ಸೋಮೇಶ್ವರನ ಕಾಲ ಅರಾಜಕತೆಯಿಂದ ಕೂಡಿತ್ತು. ಈತನಿಗೆ ಸಂಬಂಧಿಸಿದಂತೆ ಕ್ರಿ.ಶ. ೧೦೬೯ರ ಕಾಖಂಡಕಿ ಶಾಸನವು ಭುವನೈಕಮಲ್ಲನು ಸಂಕನಕೆಜ಼ೆವೂರ ನೆಲೆವೀಡಿನಿಂದ ರಾಜ್ಯಂಗೆಯುತ್ತಿದ್ದನು ಎಂದು ತಿಳಿಸುತ್ತದೆ. ಈ ಶಾಸನದಲ್ಲಿ ಬರುವ ಮಧುವರಸನನ್ನು ಚಾಳುಕ್ಯ ರಾಜ್ಯಾಭ್ಯುದಯ ಕಾರಣನೆಂದು ಕರೆಯಲಾಗಿದೆ.[೪೦] ರೂಗಿ ಶಾಸನವು ಮಹಾಮಂಡಳೇಶ್ವರ ಪಾಯ್ಯರಸನು,[೪೧] ನಂತರ ಕ್ರಿ.ಶ. ೧೦೭೪ರ ವಿಜಾಪುರ ವಸ್ತುಸಂಗ್ರಹಾಲಯದಲ್ಲಿರುವ ಶಾಸನ ಈತನ ದಂಡನಾಯಕ ನಾಕಿಮಯ್ಯ ತರ್ದವಾಡಿನಾಡನ್ನು,[೪೨] ಕ್ರಿ.ಶ. ೧೦೭೧ರ ನಾಗಾವಿ ಬಿ.ಕೆ. ಶಾಸನವು ಏಳಮೇಲವನ್ನು ವಂಗರಸನು ಆಳುತ್ತಿದ್ದನೆಂದು,[೪೩] ತಿಳಿಸುತ್ತವೆ. ಈ ಶಾಸನಗಳು ಜಿಲ್ಲೆಯಲ್ಲಿ ಈತನ ಆಳ್ವಿಕೆಯನ್ನು ಸ್ಪಷ್ಟಪಡಿಸುತ್ತವೆ.

ಆರನೆಯ ವಿಕ್ರಮಾದಿತ್ಯ (ಕ್ರಿ.ಶ. ೧೦೭೬-೧೧೨೬)

ಎರಡನೆಯ ಸೋಮೇಶ್ವರನ ಕಾಲಾವಧಿಯಲ್ಲಿ ವಿವಿಧ ಪ್ರಾಂತಗಳ ಆಡಳಿತ ನಡೆಸುತ್ತಿದ್ದ ವಿಕ್ರಮಾದಿತ್ಯನು ಸಹೋದರನ ಅಸಮರ್ಥ ಆಡಳಿತದಿಂದ ಬೇಸತ್ತು ದಂಗೆಯೆದ್ದನು. ತನ್ನ ಅಧಿಕಾರವನ್ನು ಬಲಪಡಿಸಿಕೊಂಡು ಸಹೋದರನನ್ನು ಬದಿಗೆ ತಳ್ಳಿ ಸ್ವತಂತ್ರವನ್ನು

ಘೋಷಿಸಿಕೊಂಡನು. ಸಿಂಹಾಸವನ್ನೇರಿದ ತಕ್ಷಣ ವಿಕ್ರಮಾದಿತ್ಯನು ತನ್ನ ಸಾಮ್ರಾಜ್ಯದಲ್ಲಿರುವ ಸಾಮಂತರ, ಮಾಂಡಲಿಕರ ಶಕ್ತಿ ಸಾಮರ್ಥ್ಯಗಳನ್ನು, ಅಧಿಕಾರಗಳನ್ನು ಕೊನೆಗಾಣಿಸಿ ಅವರ ಮೇಲೆ ತನ್ನ ಅಧಿಕಾರವನ್ನು ಸ್ಥಿರಗೊಳಿಸಿ ಶಾಂತಿ ನೆಲೆಸುವಂತೆ ಮಾಡಿದನು. ಈತನು ತಾನು ಅಧಿಕಾರಕ್ಕೆ ಬಂದಂದಿನಿಂದ ಶಕವರುಷದ ಏಣಿಕೆಯನ್ನು ಬಿಟ್ಟು ಹೊಸದಾಗಿ ವಿಕ್ರಮ ಶಕೆಯನ್ನು ಜಾರಿಗೆ ತಂದನು. ವಿಜಾಪುರ ಜಿಲ್ಲೆಯ ಕ್ರಿ.ಶ. ೧೧೦೦ರ ಮಲಘಾಣ ಶಾಸನವು[೪೪] ಕೂಡ ಈ ವಿಷಯವನ್ನು ಸ್ಪಷ್ಟಪಡಿಸುತ್ತದೆ. ಈತನ ಕಾಲಾವಧಿಗೆ ಸಂಬಂಧಿಸಿದ ಹಲವಾರು ಶಾಸನಗಳು ಜಿಲ್ಲೆಯಲ್ಲಿ ಕಂಡುಬಂದಿದ್ದು ಈತನ ಆಳ್ವಿಕೆಯನ್ನು ಕುರಿತಾಗಿ ತಿಳಿಸುತ್ತವೆ. ಕ್ರಿ.ಶ. ೧೦೭೭ರ ಕುಳೇಕುಮಟಗಿ ಶಾಸನವು ಆರನೇ ವಿಕ್ರಮಾದಿತ್ಯನಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಸಿಗುವ ಮೊದಲ ಶಾಸನವಾಗಿದೆ. ಇದು ತ್ರಿಭುವನಮಲ್ಲನು ಪೊನಗುಪ್ಪೆಯ ಪಯಣದ ಬೀಡಿನಲ್ಲಿದ್ದದನ್ನು ತಿಳಿಸುತ್ತದೆ.[೪೫] ಕ್ರಿ.ಶ. ೧೦೮೩ರ ವಿಜಾಪುರ ವಸ್ತುಸಂಗ್ರಹಾಲಯದಲ್ಲಿರುವ ಶಾಸನ ಮಹಾಮಂಡಳೇಶ್ವರ ಭೀಮಣದೇವನು[೪೬] ಈತನ ನಂತರ ಕ್ರಿ.ಶ. ೧೦೯೫ರ ಹೆಬ್ಬಾಳ,[೪೭] ಕ್ರಿ.ಶ. ೧೧೧೨ರ ದಿಂಡವಾರ,[೪೮] ಕ್ರಿ.ಶ. ೧೧೧೫ರ ನಿಡೋಣಿ[೪೯] ಶಾಸನಗಳು ತ್ರಿಭುವನಮಲ್ಲನ ಮಗ ಯುವರಾಜ ಮಲ್ಲಿಕಾರ್ಜುನನು ಹಾಗೂ ಕಾಲದ ಉಲ್ಲೇಖವಿಲ್ಲದ ಕ್ರಿ.ಶ. ಹನ್ನೊಂದನೆಯ ಶತಮಾನದ ಮಣ್ಣೂರು ಶಾಸನ ಕುಮಾರ ಸತ್ಯಾಶ್ರಯದೇವನು[೫೦] ಕ್ರಮವಾಗಿ ತರ್ದವಾಡಿ ಸಾಸಿರವನ್ನು ಆಳುತ್ತಿದ್ದರು ಎಂದು ಈ ಶಾಸನಗಳಿಂದ ತಿಳಿದುಬರುತ್ತದೆ.

ವಿಕ್ರಮಾದಿತ್ಯನಿಗೆ ೧೨ ಕ್ಕೂ ಹೆಚ್ಚು ರಾಣಿಯರಿದ್ದರು. ಈ ಪ್ರದೇಶದಲ್ಲಿನ ಶಾಸನಗಳು ಮೂವರು ರಾಣಿಯರನ್ನು ಉಲ್ಲೇಖಿಸುತ್ತವೆ. ಕ್ರಿ.ಶ. ೧೦೭೭ರ ಕುಳೇಕುಮಟಗಿ ಶಾಸನವು ಆತನ ರಾಣಿಯಾದ ಕೇತಲದೇವಿಯನ್ನು,[೫೧] ಕನ್ನೊಳ್ಳಿ ಶಾಸನವು ಅವನ ಪಟ್ಟಮಹಾದೇವಿಯಾದ ಮೈಳಲದೇವಿಯನ್ನು,[೫೨] ಖೇಡಗಿ ಶಾಸನವು ಅವನ ರಾಣಿ ಲಕ್ಷ್ಮಾದೇವಿಯನ್ನು[೫೩] ಮತ್ತು ಪ್ರಿಯಾಂಗನೆ ಮಲ್ಲಣಿದೇವಿಯರನ್ನು[೫೪] ಹೆಸರಿಸುತ್ತವೆ. ಅಲ್ಲದೆ ಕ್ರಿ.ಶ. ೧೦೯೮ರ ಮುತ್ತಗಿ ಶಾಸನವು ಆರನೇ ವಿಕ್ರಮಾದಿತ್ಯನ ಮೊಮ್ಮಗಳು ಯುವರಾಜ ಮಲ್ಲಿಕಾರ್ಜುನನ ಮಗಳೆಂದು ಕೊಂಮಳದೇವಿಯನ್ನು[೫೫] ಉಲ್ಲೇಖಿಸಿದೆ. ಜಿಲ್ಲೆಯ ಇನ್ನೂ ಹಲವಾರು ಶಾಸನಗಳು ತ್ರಿಭುವನಮಲ್ಲನು ರಾಜಧಾನಿ ಕಲ್ಯಾಣದಿಂದ ಮತ್ತು ಜಯಂತಿಪುರ(ಬನವಾಸಿ)ದಿಂದ ಆಳುತ್ತಿದ್ದನು ಎಂದು ತಿಳಿಸುತ್ತವೆ. ಅವು ಕಣ್ಣೂರು, ತಾಳಿಕೋಟೆ, ಕುಳೇಕುಮಟಗಿ, ಸಿಂದಗಿ, ಕಕ್ಕಳಮೇಲ, ಯರಗಲ್, ವಿಜಾಪುರ (ಎರಡು ಶಾಸನ), ಕಣ್ಣೂರು, ಕಾಖಂಡಕಿ, ಮಲಘಾಣ, ಕೊಂಡಗೂಳಿ(ಮೂರು ಶಾಸನ), ಶಿರ್ಕನಳ್ಳಿ, ಕೋಳುರು, ಚಾಂದಕವಟೆ, ಆಲಮೇಲ್[೫೬] ಶಾಸನಗಳು ಈ ಪ್ರದೇಶದಲ್ಲಿ ಈತನ ಆಳ್ವಿಕೆಯನ್ನು ಸ್ಪಷ್ಟಪಡಿಸುತ್ತವೆ.

ಮೂರನೆಯ ಸೋಮೇಶ್ವರ (ಕ್ರಿ.ಶ. ೧೧೨೭-೧೧೩೯)

ಮೂರನೆಯ ಸೋಮೇಶ್ವರನು ಆರನೇ ವಿಕ್ರಮಾದಿತ್ಯನ ನಂತರ ಅಧಿಕಾರಕ್ಕೆ ಬಂದನು. ಸಿಂಹಾಸನಕ್ಕೆ ಬಂದ ಸೋಮೇಶ್ವರ 'ಭೂಲೋಕಮಲ್ಲ', 'ಸರ್ವಜ್ಞಚಕ್ರವರ್ತಿ' ಯೆಂಬ ಬಿರುದುಗಳನ್ನು ಧರಿಸಿದನು. ಈತನು ಕವಿಯೂ, ವಿದ್ವಾಂಸನೂ ಆಗಿದ್ದು ಜಗದಾಚಾರ್ಯ ಗ್ರಂಥವೆಂದು ಹೆಸರುಗೊಂಡು ಖ್ಯಾತವಾದ ವಿಶ್ವಕೋಶ 'ಅಭಿಲಾಷಿತಾರ್ಥ ಚಿಂತಾಮಣಿ' (ಮಾನಸೋಲ್ಲಾಸ) ಮತ್ತು 'ವಿಕ್ರಮಾಂಕಾಭ್ಯುದಯ' ಎಂಬ ಚಾರಿತ್ರಿಕ ಚಂಪು ಕಾವ್ಯಗಳನ್ನು ರಚಿಸಿ ಬಹುಶ್ರುತ ಪಂಡಿತನೆಂದು ಪ್ರಸಿದ್ಧನಾಗಿದ್ದ. ಹೀಗಾಗಿ ಈತನನ್ನು ಸರ್ವಜ್ಞ ಚಕ್ರವರ್ತಿಯೆಂದು ಕ್ರಿ.ಶ. ೧೧೭೪ರ ನಾದ (ಕುರ್ದ್), ಕ್ರಿ.ಶ. ೧೧೩೭ರ ಇಂಗಳೇಶ್ವರ, ಕ್ರಿ.ಶ. ೧೧೩೯ರ ಶಿರಸಗಿ ಶಾಸನಗಳು ಉಲ್ಲೇಖಿಸುತ್ತವೆ.[೫೭] ಜಿಲ್ಲೆಯಲ್ಲಿನ ಈತನ ಕಾಲಾವಧಿಗೆ ಸಂಬಂಧಿಸಿದ ಶಾಸನಗಳು ಮೂರನೇ ಸೋಮೇಶ್ವರ ಆಳ್ವಿಕೆಮಾಡುತ್ತಿದ್ದಾಗ ತರ್ದವಾಡಿ ನಾಡನ್ನು ಆಳುತ್ತಿದ್ದ ಆಡಳಿತಾಧಿಕಾರಿಗಳನ್ನು, ಮಹಾಮಂಡಳೇಶ್ವರರನ್ನು ಕುರಿತು ಹೇಳುತ್ತವೆ. ಈ ಎಲ್ಲ ಶಾಸನಗಳು ಈತನ ಆಳ್ವಿಕೆಯನ್ನು ತಿಳಿಸುತ್ತವೆ.

ಎರಡನೆಯ ಜಗದೇಕಮಲ್ಲ (ಕ್ರಿ.ಶ. ೧೧೩೯-೧೧೪೯)

ಮೂರನೆಯ ಸೋಮೇಶ್ವರನ ನಂತರ ಆತನ ಹಿರಿಯಮಗ ಎರಡನೆಯ ಜಗದೇಕಮಲ್ಲನು ಅಧಿಕಾರಕ್ಕೆ ಬರುತ್ತಾನೆ. ಈತನು ತನ್ನ ಅಜ್ಜ ಆರನೆಯ ವಿಕ್ರಮಾದಿತ್ಯನ ಕಾಲದಿಂದಲೇ ಆಡಳಿತದಲ್ಲಿ ಭಾಗವಹಿಸುತ್ತಿದ್ದನು. ಇದನ್ನು ಚಟ್ಟರಕಿ ಶಾಸನ ಸ್ಪಷ್ಟಪಡಿಸುತ್ತದೆ.[೫೮] ಶಾಸನಗಳಲ್ಲಿ ಈತನನ್ನು ಪ್ರತಾಪ ಚಕ್ರವರ್ತಿ ಜಗದೇಕಮಲ್ಲನೆಂದು ಕರೆದು ಪ್ರಸಿದ್ಧಿಪಡಿಸಿದೆ. ದೇವರನಾವದಗಿ ಶಾಸನ 'ಪೆರ್ಮಾಡಿನೃಪ'[೫೯] ಎಂದು ಹೆಸರಿಸಿದೆ. ಇತನ ಮೂಲ ಹೆಸರು ಜಯಸಿಂಹನೆಂದಾಗಿದ್ದರೂ, ಶಾಸನಗಳು 'ಪೆರ್ಮ್ಮಾಡಿ', 'ಜಗದೇಕಮಲ್ಲ', 'ಜಯಸಿಂಹ ದೇವ', 'ಪ್ರತಾಪ ಚಕ್ರವರ್ತಿ' ಎಂದು ಕರೆಯುತ್ತವೆ. ಈತನಿಗೆ ಸಂಬಂಧಿಸಿದಂತೆ ಹಲವಾರು ಶಾಸನಗಳು ಜಿಲ್ಲೆಯಲ್ಲಿ ಕಂಡುಬಂದಿವೆ. ದೇವರನಾವದಗಿ, ಮುತ್ತಗಿ,[೬೦] ಶಾಸನಗಳು ಜಗದೇಕಮಲ್ಲನು ಮಗಧ, ಮಾಳವ, ಚೋಳ, ಗುರ್ಜರನ್ನು ಸೋಲಿಸಿದಂತೆ ತಿಳಿಸುತ್ತವೆ. ಮುತ್ತಗಿಯ ಇನ್ನೊಂದು ಶಾಸನವು ಜಗದೇಕಮಲ್ಲನ ಅಣತಿಯಂತೆ ಬರ್ಮ್ಮಣ ದಂಡನಾಥನು ಹೊಯ್ಸಳರ ಮೇಲೆ ಯುದ್ಧಮಾಡಿದಂತೆ ಹೇಳಿದೆ.[೬೧] ಈತನ ಕಾಲಕ್ಕಾಗಲೇ ಕಳಚುರಿ ವಂಶದ ಬಿಜ್ಜಳ ಮಹಾಮಂಡಳೇಶ್ವರನಾಗಿದ್ದನ್ನು ಮತ್ತು ದಕ್ಷಿಣ ಭಾಗದಲ್ಲಿ ಹೊಯ್ಸಳರು ಕೂಡಾ ಕ್ರಮೇಣ ಪ್ರಭಾವಶಾಲಿ ಯಾಗುತ್ತಿರುವುದನ್ನು ಮುತ್ತಗಿ ಶಾಸನಗಳಿಂದ ತಿಳಿದುಬರುತ್ತದೆ. ಕಳಚುರ್ಯ ಅಹಮಲ್ಲ ದೇವವರ್ಷ, ಕಳಚುರ್ಯ

ಭುಜಮಲ್ಲದೇವ ವರ್ಷ ಎಂದು ಕಕ್ಕಳಮೇಲಿ ಶಾಸನವು ಕೂಡ ಉಲ್ಲೇಖಿಸುತ್ತದೆ.[೬೨] ಎರಡನೆಯ ಜಗದೇಕಮಲ್ಲನ ವಿಜಾಪುರ, ಮನಗೂಳಿ, ಮುತ್ತಗಿ, ನಾಲತವಾಡ, ಮಲಘಾಣ[೬೩] ಶಾಸನಗಳು ಈತನು ಕಲ್ಯಾಣದಿಂದ ರಾಜ್ಯಭಾರ ಮಾಡುತ್ತಿದ್ದುದನ್ನು ಸ್ಪಷ್ಟಪಡಿಸುತ್ತವಲ್ಲದೆ. ಇವನ ಆಳ್ವಿಕೆ ವ್ಯಾಪಾರ-ಉದ್ಯೋಗಗಳಿಂದ ಸುಖ ಸಮೃದ್ಧಿ ಪಡೆದಿತ್ತೆನಲು ಈ ಎಲ್ಲಾ ಶಾಸನಗಳು ಸಾಕ್ಷಿಯನ್ನೊದಗಿಸುತ್ತವೆ.

ಮೂರನೆಯ ತೈಲಪ (ಕ್ರಿ.ಶ. ೧೧೪೯–೧೧೬೨)

ಜಗದೇಕಮಲ್ಲನ ನಂತರ ಇತನ ಸಹೋದರನಾದ ತೈಲಪ ಮೂರನೆಯವನು ಚಾಳುಕ್ಯ ಸಿಂಹಾಸನವೇರಿದನು. ಸಿಂಹಾಸನವನ್ನೇರಿದ ಮರುಕ್ಷಣವೇ ತೈಲಪ ಹಲವಾರು ತೊಂದರೆಗಳನ್ನು ಎದುರಿಸಬೇಕಾಯಿತು. ಈತನ ಆಳ್ವಿಕೆಗೆ ಸಂಬಂಧಿಸಿದಂತೆ ಅನೇಕ ಶಾಸನಗಳು ಜಿಲ್ಲೆಯಲ್ಲಿ ಕಂಡುಬಂದಿದ್ದು ಈತನು ಕಲ್ಯಾಣದ ನೆಲವೀಡಿನಿಂದ ಆಳುತ್ತಿದ್ದನೆಂದು ತಿಳಿಸುತ್ತವೆ. ಆದರೆ ಈತನು ಅಸಮರ್ಥನಾಗಿದ್ದುದರಿಂದ ಅನೇಕ ಸಾಮಂತರು ಸ್ವತಂತ್ರರಾಗಲು ಪ್ರಯತ್ನಿಸಿದರು. ಕ್ರಿ.ಶ. ೧೧೫೦ರ ಸಂಖ ಮತ್ತು ಕಣ್ಣೂರು ಶಾಸನಗಳು ಬಿಜ್ಜಳನು ಚಾಳುಕ್ಯರ ಬಿರುದಾವಳಿಗಳನ್ನು ಧರಿಸಿ ಮಂಗಳವೇಡದಿಂದ ರಾಜ್ಯಭಾರ ಮಾಡುತ್ತಿದ್ದನು ಎಂದು ತಿಳಿಸುತ್ತವೆ (ಅದೇ, ಸಂ.೬೯, ಪು.೨೧೩., ಸಂ.೭೧, ಪು.೧೦೭) ಹಾಗೂ ಈ ಶಾಸನಗಳಲ್ಲಿ ಚಾಳುಕ್ಯರ ಯಾವ ಅರಸನ ಹೆಸರನ್ನು ಉಲ್ಲೇಖಿಸದೆ ಸ್ವತಂತ್ರ ಮನೋಭಾವನೆಯನ್ನು ತಳೆದಿದ್ದ ಎಂದು ತಿಳಿದುಬರುತ್ತದೆ. ಕ್ರಿ.ಶ. ೧೧೫೮ರ ಕಡ್ಲೇವಾಡ ಶಾಸನ ಈತನ ಅಳ್ವಿಕೆಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಸಿಗುವ ಕೊನೆಯ ಶಾಸನವಾಗಿದೆ.[೬೪]

ಈ ವೇಳೆಗಾಗಲೆ ಸ್ವತಂತ್ರ ಮನೋವೃತ್ತಿಯನ್ನು ಹೊಂದಿದ್ದ ಬಿಜ್ಜಳ, ಶಿಲಾಹಾರರು, ಕಾಕತೀಯರು ಮತ್ತು ಹೊಯ್ಸಳರು ತೈಲಪನ ದುರ್ಬಲತೆಯನ್ನು ಕಂಡು ದಂಗೆ ಏಳತೊಡಗಿದರು. ಕೊನೆಗೆ ಹೊಯ್ಸಳ ಮೊದಲನೆಯ ನರಸಿಂಹ ಬಂಡೆದ್ದು ತೈಲಪನನ್ನು ಹತ್ಯೆಗೈದನು. ಈತನ ಮರಣದೊಂದಿಗೆ ಚಾಳುಕ್ಯ ಸಾಮ್ರಾಜ್ಯ ಕೊನೆಗೊಂಡಿತು. ಆದರೆ ತೈಲಪನ ನಂತರ ಅವನ ಮಗ ನಾಲ್ಕನೇ ಸೋಮೇಶ್ವರ ಅಧಿಕಾರಕ್ಕೆ ಬಂದನಾದರೂ ಅದು ಅಲ್ಪಕಾಲಾವಧಿಯಲ್ಲೆ ಕೊನೆಗೊಂಡಿತು.

ನಾಲ್ಕನೆಯ ಸೋಮೇಶ್ವರ

ನಾಲ್ಕನೆಯ ಸೋಮೇಶ್ವರನು ಮೂರನೇ ತೈಲಪನ ನಂತರ ಸಿಂಹಾಸನಕ್ಕೆ ಬಂದನು. ಕಲ್ಯಾಣ ಚಾಳುಕ್ಯ ಮನೆತನದ ಕೊನೆಯ ಶ್ರೇಷ್ಠ ದೊರೆಯಾದ ಸೋಮೇಶ್ವರ ಕಳೆದುಕೊಂಡ ರಾಜ್ಯವನ್ನು ಮರಳಿ ಪಡೆಯುವಲ್ಲಿ ಮಾಡಿದ ಕಾರ್ಯ ಸುತ್ಯಾರ್ಹವಾಗಿದೆ. ತೈಲಪನ ನಂತರ

ಚಾಳುಕ್ಯ ಸಾಮ್ರಾಜ್ಯ ಸುಮಾರು ಕ್ರಿ.ಶ. ೧೧೬೨ ರಿಂದ ಕ್ರಿ.ಶ. ೧೧೮೩ರ ವರೆಗೆ ಸುಮಾರು ೨೦ ವರ್ಷಗಳ ಕಾಲ ರಾಜಕೀಯದಿಂದ ಕಣ್ಮರೆಯಾಗಿತ್ತು. ಈ ೨೦ ವರ್ಷಗಳ ಕಾಲ ಸೋಮೇಶ್ವರನು ಚಾಳುಕ್ಯ ಸಾಮಂತರಾಗಿದ್ದ ನಿಡುಗಲ್ಲು ಚೋಳ, ಉಚ್ಚಂಗಿಯ ಪಾಂಡ್ಯ ಮತ್ತು ಸಾಂತಾರರ ರಾಜ್ಯಗಳಲ್ಲಿ ತೆರೆಮರೆಯ ಜೀವನ ನಡೆಸಿದನು. ಕಲಚುರಿಯರಸರ ಅಸಮರ್ಥತೆಯ ಲಾಭ ಪಡೆದು ಕ್ರಿ.ಶ. ೧೧೮೩ರಲ್ಲಿ ಸಾಮಂತರ ಸಹಾಯವನ್ನು ಪಡೆದು ಮತ್ತೊಮ್ಮೆ ಚಾಳುಕ್ಯ ರಾಜ್ಯವನ್ನು ಮರಳಿ ಪಡೆಯುವಲ್ಲಿ ಯಶಸ್ವಿಯಾದನು.[೬೫] ಕ್ರಿ.ಶ. ೧೧೮೬ರ ಕಡ್ಲೇವಾಡದ ಶಾಸನ ಸೋಮೇಶ್ವರನು ಗೋಕಾಗೆಯ ನೆಲವೀಡಿನಲ್ಲಿ ಬೀಡು ಬಿಟ್ಟಿದ್ದ ಎಂದು ಅವನ ದಂಡನಾಥ, ಮಹಾಪ್ರಧಾನಿ ಕುಮಾರ ಬೊಮ್ಮಿದೇವರಸನು ರಾಯದಂಡನಾಥ, ಗಂಡ, ಪೆಂಡಾರ, ರಣರಂಗ ಭೀಮ, ಕಳಚುರ್ಯ್ಯ ರಾಜ್ಯ ನಿರ್ಮೂಳನಃ, ಚಾಳುಕ್ಯರಾಜ್ಯ ಸಮುದ್ಧರಣಂ ಎಂಬ ಬಿರುದುಗಳನ್ನು ಧರಿಸಿದ್ದನು. ಹೀಗಾಗಿ ಸೋಮೇಶ್ವರನನ್ನು ಅಧಿಕಾರಕ್ಕೆ ತರುವಲ್ಲಿ ಈತನು ಭಾಗವಹಿಸಿದಂತೆ ತೋರುತ್ತದೆ. ಅಲ್ಲದೆ ಯೆಳಮೇಲವನ್ನು ಆಳುತ್ತಿದ್ದ ಸಿಳಾರವಂಶದ ಆನೆಮರಸನನ್ನು ಉಲ್ಲೇಖಿಸುತ್ತದೆ.[೬೬]

ಆದರೆ ಈಗಾಗಲೆ ಚಾಳುಕ್ಯ ಸಾಮಂತರಾಗಿದ್ದ ಸೇವುಣರು, ಕಾಕತೀಯರು, ಹೊಯ್ಸಳರು ಬಲಿಷ್ಠರಾಗಿದ್ದರು. ಸೋಮೇಶ್ವರನ ಆಡಳಿತಾವಧಿಯಲ್ಲಿ ಹೆಚ್ಚು ಪ್ರಸಿದ್ಧಿಗೆ ಬಂದವನೆಂದರೆ ಸೇವುಣರಸ ಭಿಲ್ಲಮ. ಭಿಲ್ಲಮನು ಕ್ರಿ.ಶ. ೧೧೮೬ರಲ್ಲಿ ಕಲ್ಯಾಣವನ್ನು ಮುತ್ತಿ ಸೋಮೇಶ್ವರನನ್ನು ಸೋಲಿಸಿ ಅದನ್ನು ವಶಪಡಿಸಿಕೊಂಡನು. ಸೋತು ಸಿಂಹಾಸನ ಕಳೆದುಕೊಂಡ ಸೋಮೇಶ್ವರ ಕ್ರಿ.ಶ. ೧೧೯೮ರ ವರೆಗೆ ಗೋವೆಯ ಕದಂಬರಸರಲ್ಲಿ ಆಶ್ರಯ ಪಡೆದನು. ಇಲ್ಲಿಗೆ ಸುಮಾರು ೨೦೦ ವರ್ಷಗಳ ಕಾಲ ಸಾಮ್ರಾಜ್ಯ ಕಟ್ಟಿ ಆಡಳಿತ ನಡೆಸಿದ ಕಲ್ಯಾಣ ಚಾಳುಕ್ಯ ಮನೆತನ ಕೊನೆಗೊಂಡಿತು.

ದೇವರಸನ ಕಾಲದ ಇಂಡಿಯ ನಗರೇಶ್ವರ, ಜಯಸಿಂಹನ ಕಾಲದ ರೂವಿಗೆಯ ನಗರೇಶ್ವರ, ಗೊಲಗೇರಿಯ ಮಲ್ಲಿಕಾರ್ಜುನ, ದೇವೂರಿನ ರಾಮೇಶ್ವರ, ಮುದ್ದೇಬಿಹಾಳದ ಶಿವಾಲಯ, ಬೆನಕನವಟ್ಟಿಗೆಯ ಮೂಲಸ್ಥಾನ ದೇವರು, ಕನ್ನವಳ್ಳಿಯ ಬೋಗೇಶ್ವರ, ತ್ರೈಲೋಕ್ಯ ಮಲ್ಲನ ಕಾಲದ ಏಳಮೇಲದ ನಗರೇಶ್ವರ, ರೂವಿಗೆಯ ನಖರೇಶ್ವರ ಮತ್ತು ಕೇದಾರೇಶ್ವರ, ಬಾಗೇವಾಡಿಯ ಸೋಮೇಶ್ವರ, ಭುವನೈಕ್ಯಮಲ್ಲನ ಕಾಲದ ಪೊನ್ನವಾಡದ ಸಿದ್ಧೇಶ್ವರ, ಏಳಮೇಲದ ಉತ್ತರೇಶ್ವರ, ನಾಗರ ಭಾವಿಯ ಬಲ್ಲೇಶ್ವರ, ಕಾಖಂಡಿಕೆಯ ಸಿದ್ಧೇಶ್ವರ, ಕಕ್ಕಳಮೇಲಿಯ ಮಲ್ಲಿಕಾರ್ಜುನ, ವಿಜಯಪುರದ ಸ್ವಯಂಭು ಸಿದ್ಧೇಶ್ವರ ದೇವಾಲಯಗಳು, ಆರನೇ ವಿಕ್ರಮಾದಿತ್ಯನ ಕಾಲದ ಕುಂಬಿಟ್ಟಿಗೆಯ ಚಂಡೇಶ್ವರ, ಸಿರಮಲಗೆಯ ಸಕಳೇಶ್ವರ, ಮುತ್ತಿಗೆಯ ತೀಕೇಶ್ವರ, ಸಿಂದಗಿಯ ಮೂಲಸ್ಥಾನ ದೇವರು, ದಿಂಡಾವುರದ ಮಾಳೇಶ್ವರ, ಖೇಡದ ಸ್ವಯಂಭುದೇವರು, ದೇಸೂರಿನ

ಮೂಲಸ್ಥಾನ ದೇವರು, ಕಡಲೆವಾಡದ ಸ್ವಯಂಭು ಸೋಮೇಶ್ವರ, ಸೊನ್ನಲಿಗೆಯ ಕಪಿಲಸಿದ್ಧ ಮಲ್ಲಿಕಾರ್ಜುನ, ಇಂಗಳೇಶ್ವರದ ನೀಲಕಂಠೇಶ್ವರ ದೇವಸ್ಥಾನ, ಕೊಳೂರಿನ ಸ್ವಯಂಭು ಮೂಲಸ್ಥಾನ ದೇವರು, ಖೇಡಗೆಯ ಕಂಕೇಶ್ವರ, ಮಣೂರಿನ ಕಾಮೇಶ್ವರ, ಭೂಲೋಕಮಲ್ಲನ ಕಾಲದ ಮಲಘಾಣದ ಸ್ವಯಂಭು ದೇವರು, ಜಗದೇಕಮಲ್ಲನ ಇಂಗಳೇಶ್ವರದ ತ್ರಿಕೂಟ ದೇವಾಲಯ, ಬೇಲೂರಿನ ಮೂಲಸ್ಥಾನ ದೇವಾಲಯ, ಎರಂಗಲ್ಲಿನ ಸ್ವಯಂಭು ರಾಮೇಶ್ವರ, ಮುತ್ತಗೆಯ ತ್ರಿಕೂಟಾಚಲ, ನಾಲತವಾಡದ ಕಲಿದೇವರು, ಮಲಘಾಣದ ಮಾಧವೇಶ್ವರ, ಮೂರನೇ ತೈಲಪನ ಕಾಲದ ಮಿಣಜಗಿಯ ತ್ರಿಕೂಟ ದೇವಾಲಯ, ತಾಳಿಕೋಟೆಯ ವೀರ ಬಯ್ಸೇಶ್ವರ, ಕುಮ್ಮಟಗಿಯ ಮೂಲಸ್ಥಾನ, ಭೋಗೇಶ್ವರ, ಕುಮ್ಮಟಗಿಯ ಶ್ರೀ ಚನ್ನ ಬ್ರಹ್ಮೇಶ್ವರ, ಕನ್ನವೂರಿನ ಸ್ವಯಂಭು ಚಂಡೇಶ್ವರ ದೇವಾಲಯಗಳು ಇವರ ಕಾಲದ ಉಲ್ಲೇಖಾರ್ಹವಾದ ಶೈವ ದೇವಾಲಯಗಳಾಗಿವೆ. ಚಾಳುಕ್ಯ ಅರಸರು ಇವುಗಳನ್ನು ನಿರ್ಮಿಸಿದರಷ್ಟೇ ಅಲ್ಲದೆ ಅನೇಕ ದಾನ ದತ್ತಿಗಳನ್ನು ಕೊಡುವುದರ ಮೂಲಕ ಶೈವ ಧರ್ಮವನ್ನು ಪ್ರೋತ್ಸಾಹಿಸಿಕೊಂಡು ಬಂದರೆಂದು ತಿಳಿದು ಬರುತ್ತದೆ.

ಕಳಚುರಿಗಳು

ಕಳಚುರಿಗಳು ಅಲ್ಪಾವಧಿಯ ರಾಜ್ಯಭಾರ ಮಾಡಿದರೂ ಸಹ ತಮ್ಮದೇ ಆದ ಕುರುಹುಗಳನ್ನು ಬಿಟ್ಟು ಹೋಗಿದ್ದಾರೆ. ಇವರು ಹಿಂದಿನ ಕಾಲದಿಂದಲೂ ರಾಜ್ಯಾಡಳಿತದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು ಎನ್ನುವುದಕ್ಕೆ ಅವರ ಹಲವಾರು ಸಾಕ್ಷ್ಯಾಧಾರಗಳು ದೊರಕಿವೆ. ಇವರು ಪ್ರಾರಂಭದಲ್ಲಿ ಕಳಚೂರಿ, ಕಲಟ್ಚೂರಿ, ಕಲಿಚೂರಿಗಳೆಂದು ತಮ್ಮ ಶಾಸನಗಳಲ್ಲಿ ಕರೆದು ಕೊಂಡಿದ್ದಾರೆ. ಮಧ್ಯಕಾಲೀನ ಕರ್ನಾಟಕದ ಇತಿಹಾಸದಲ್ಲಿ ಕಲ್ಯಾಣದ ಚಾಳುಕ್ಯರ ಸಾಮಂತರಾಗಿ ಬಂಧುಗಳಾಗಿ ರಾಜ್ಯಾಡಳಿತದಲ್ಲಿ ಉತ್ತಮ ಸ್ಥಾನವನ್ನು ಹೊಂದಿದ್ದರು. ಇವರು ಮೂರನೇ ಸೋಮೇಶ್ವರನ ಆಳ್ವಿಕೆಯ ನಂತರದಲ್ಲಿ ಕ್ರಮೇಣವಾಗಿ ಮಾಂಡಲೀಕತ್ವವನ್ನು ಪಡೆದುಕೊಂಡು ಚಾಳುಕ್ಯರ ವಿರುದ್ಧ ಅಸಮಾಧಾನದ ಸಾಮಂತರನ್ನು ತಮ್ಮೆಡೆಗೆ ಕರೆದುಕೊಂಡರು. ರಾಜ್ಯಾಡಳಿತದಲ್ಲಿ ಪ್ರಾಮುಖ್ಯತೆಯನ್ನು ಪಡೆಯುತ್ತ, ಮೂರನೇ ತೈಲಪನ ಕಾಲದಲ್ಲಿ ಉಂಟಾದ ರಾಜಕೀಯ ಕ್ಷೋಭೆಯ ಲಾಭವನ್ನು ಪಡೆದುಕೊಂಡು ಕಲ್ಯಾಣದ ಚಾಳುಕ್ಯರನ್ನು ಪದಚ್ಯುತಿಗೊಳಿಸುತ್ತ ಎರಡನೇ ಬಿಜ್ಜಳನ ನೇತೃತ್ವದಲ್ಲಿ ಕಳಚುರಿಗಳು ಸಾಮ್ರಾಜ್ಯವನ್ನು ಕಟ್ಟಿಕೊಂಡರು. ಇವರ ಆಳ್ವಿಕೆಯು ಅಲ್ಪಾವಧಿಯಾಗಿದ್ದರೂ ಸಹ ಯದುಕುಲ ಸಂಜಾತರೆಂದು ಕರೆದುಕೊಂಡ ತಮ್ಮ ಶಾಸನಗಳಲ್ಲಿ ಕಾಳಂಜರಾಪುರವರಾಧೀಶ್ವರರು ಎಂಬ ಅನುವಂಶೀಯ ಬಿರುದುಗಳೊಂದಿಗೆ ವೃಷಭವನ್ನು ರಾಜ ಲಾಂಛನವನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿದ್ದಾರೆಂದು ತಿಳಿಯಬಹುದಾಗಿದೆ.[೬೭]

ಕ್ರಿ.ಶ.೧೧ನೇ ಶತಮಾನದಿಂದ ಆರಂಭವಾಗುವ ಇವರ ಆಡಳಿತದಲ್ಲಿ ಉಚಿತನೆಂಬುವನು ಪ್ರಥಮ ರಾಜನಾಗಿದ್ದನೆಂದು ತಿಳಿಯುತ್ತದೆ. ಈತನು ಕ್ರಿ.ಶ. ೯೨೫ರಲ್ಲಿದ್ದನೆಂದು, ತದನಂತರ ಈತನ ಮಗ ಎರಡನೇ ಅಸಗ ಕ್ರಿ.ಶ. ೯೫೦ರ ತರುವಾಯ ಈತನ ಮಗ ಕನ್ನರನನ್ನು[೬೮] ತದನಂತರ ಈತನ ಮಗ ಎರಡನೇ ಅಸಗ (ಕ್ರಿ.ಶ.ಸು. ೧೦೦೦) ತರುವಾಯ ಈತನ ಮಗನಾದ ಎರಡನೇರಾಜ (ಕ್ರಿ.ಶ.ಸು. ೧೦೨೫) ಅನುಕ್ರಮವಾಗಿ ಆಡಳಿತ ಮಾಡಿದ್ದಾರೆ. ಇವರಲ್ಲಿ ಕೆಲವರು ಸಾಮಂತರಾಗಿ, ಮಾಂಡಲೀಕರಾಗಿ, ಆಡಳಿತ ಮಾಡಿದರೆಂದು ತಿಳಿಯುತ್ತದೆ. ಈ ಮೇಲ್ಕಂಡ ಅರಸರ ಬಗ್ಗೆ ಈ ಜಿಲ್ಲೆಯಲ್ಲಿ ಇದುವರೆಗೂ ಒಂದು ಶಾಸನವು ಲಭ್ಯವಾಗಿಲ್ಲ. ಆದರೆ ತರುವಾಯ ಅಧಿಕಾರಕ್ಕೆ ಬಂದ ಒಂದನೇ ಬಿಜ್ಜಳನ ಕಾಲಕ್ಕೆ ಸೇರಿದ ಶಾಸನವು ಈ ಜಿಲ್ಲೆಯಲ್ಲಿ ಅಂದರೆ ಈತನು ಒಂದನೇ ಸೋಮೇಶ್ವರನಿಗೆ ಮಹಾಮಂಡಳೇಶ್ವರನಾಗಿದ್ದ ಅಂಶವು ಚಡಚಣದ ಶಾಸನದಿಂದ ತಿಳಿಯುತ್ತದೆ.[೬೯] ಈತನ ತರುವಾಯ ಎರಡನೇ ಕನ್ನಮನು ಅಧಿಕಾರಕ್ಕೆ ಬಂದನು. ಎರಡನೇ ಕನ್ನಮನಿಗೆ ಕನ್ನರ, ಕೃಷ್ಣ ಎಂಬ ಹೆಸರುಗಳು ಇದ್ದವು. ಕ್ರಿ.ಶ. ೧೦೬೭ರಲ್ಲಿ ಮಹಾಮಂಡಲೀಕನಾದ ಈತನು, ನಿಷ್ಠಾವಂತ ಸಾಮಂತನಾಗಿದ್ದ ಈ ವಿಷಯವನ್ನು ಕ್ರಿ.ಶ. ೧೦೬೭ರಲ್ಲಿ ದಾಖಲಾಗಿರುವ ಚಡಚಣದ ಪರಮಾನಂದ ದೇವರಗುಡಿ ಶಾಸನವು ತಿಳಿಸುತ್ತಾ ಕನ್ನರನು ಮಂಗಳವೇಡ ಪ್ರದೇಶವನ್ನು ಆಳುತ್ತಿದ್ದ ವಿಷಯವನ್ನು ತಿಳಿಸುತ್ತದೆ.[೭೦] ಈತನ ತರುವಾಯ ಜೋಗಮಯ್ಯನು ತರಿಕಾಡು ಪ್ರದೇಶದ ಮಹಾಮಾಂಡಲಿಕನಾಗಿ ಚಾಳುಕ್ಯರ ನಿಷ್ಠಾವಂತ ಅಧಿಕಾರಿಯಾಗಿದ್ದು, ಈ ವಂಶದ ಕೀರ್ತಿಯನ್ನು ಉನ್ನತಿಗೆ ಕೊಂಡೊಯ್ದನು. ಇವನು ತನ್ನ ಮಗಳಾದ ಸಾವಳದೇವಿಯನ್ನು ಚಾಳುಕ್ಯರ ದೊರೆ ಆರನೇ ವಿಕ್ರಮಾದಿತ್ಯನಿಗೆ ಕೊಟ್ಟು ವಿವಾಹ ಮಾಡಿದನು.[೭೧] ಇವನ ನಂತರ ಈತನ ಮಗನಾದ ಪೆರ್ಮಾಡಿದೇವನು ಅಧಿಕಾರ ರೂಢನಾಗಿ ಆರನೇ ವಿಕ್ರಮಾದಿತ್ಯ ಮತ್ತು ಚಂದಲಾದೇವಿಯರ ಮಗಳಾದ ಕುಮಾರಿ ನಾಗಲಾದೇವಿಯನ್ನು ವಿವಾಹವಾದನು. ಈ ವೈವಾಹಿಕ ಸಂಬಂಧದಿಂದ ಕಳಚೂರಿಗೆ ರಾಜಕೀಯ ಪ್ರಾಬಲ್ಯವು ಹೆಚ್ಚಾಯಿತ್ತೆಂದು ಹೇಳಬಹುದು.[೭೨] ಇವನ ತರುವಾಯ ಈತನ ಮಗನಾದ ಎರಡನೇ ಬಿಜ್ಜಳನು ಅಧಿಕಾರಕ್ಕೆ ಬಂದನು.

ಎರಡನೆಯ ಬಿಜ್ಜಳನು (ಕ್ರಿ.ಶ. ೧೧೩೦-೬೭) ಅಧಿಕಾರಕ್ಕೆ ಬರುವ ಮುನ್ನ ಇವನ ತಂದೆ ಪೆರ್ಮಾಡೆಯು ಮತ್ತು ಮೂರನೇ ಸೋಮೇಶ್ವರನು ಸಮವಯಸ್ಕರಾದುದರಿಂದ ಕಲ್ಯಾಣದ ಚಾಳುಕ್ಯರಲ್ಲಿ ಗಣನೀಯವಾದ ಸ್ಥಾನವನ್ನು ದೊರಕಿಸಿಕೊಂಡನು. ಇದೇ ಸ್ಥಾನವು ಎರಡನೇ ಬಿಜ್ಜಳನಿಗೂ ದೊರೆಕಿತು. ಪೆರ್ಮಾಡೆಯೂ ಜೀವಿತವಾಗಿದ್ದಾಗಲೇ ಇವನಿಗೆ ಮಹಾಮಂಡಳೇಶ್ವರ ಪದವಿ ದೊರಕಿತ್ತು. ಈ ನಡುವೆ ಎರಡನೇ ಜಗದೇಕಮಲ್ಲ ಮತ್ತು ಮೂರನೇ ತೈಲಪನು ಸೇರಿ,

ಬಿಜ್ಜಳನನ್ನು ದಮನಮಾಡಲು ಮುಂದಾಗಿ ಅಸಮರ್ಥರಾದರು. ಈ ಸಮಯದಲ್ಲಿ ಎರಡನೇ ಬಿಜ್ಜಳನು ಚಾಲುಕ್ಯ ಸಾಮ್ರಾಜ್ಯವನ್ನು ತನ್ನ ಅಧೀನಕ್ಕೆ ತೆಗೆದುಕೊಂಡನು. ಇವನ ಕಾಲಕ್ಕೆ ಸೇರಿದ ೨೦ಕ್ಕೂ ಹೆಚ್ಚು ಶಾಸನಗಳು ಈ ಜಿಲ್ಲೆಯಲ್ಲಿ ದೊರೆತಿವೆ. ಈತನ ಈ ಶಾಸನಗಳಿಂದ ವಿಜಯಪುರ ಜಿಲ್ಲೆಯಲ್ಲಿ ಕಳಚುರಿಗಳ ಕಾಲದ ರಾಜಕೀಯ ಸ್ಥಿತಿಗತಿಯೂ ಹೇಗಿತ್ತು ಎನ್ನುವುದನ್ನು ತಿಳಿಯಬಹುದಾಗಿದೆ. ನಚಿದರಗಿ[೭೩] ಮತ್ತು ಸಂಖ[೭೪] ಶಾಸನಗಳು ಬಿಜ್ಜಳನನ್ನು ಮಹಾಮಂಡಲೇಶ್ವರನೆಂದು ಹೇಳಿದರೆ ಉಳಿದ ಎಲ್ಲಾ ಶಾಸನಗಳು ಈತನನ್ನು ಚಕ್ರವರ್ತಿ ಎಂದು ಪ್ರತಿಬಿಂಬಿಸುತ್ತವೆ. ಇವನ ತರುವಾಯ ಈತನ ಮಗನಾದ ರಾಯಮುರಾರಿ ಸೋವಿದೇವನು ಅಧಿಕಾರಕ್ಕೆ ಬಂದನು. ಈ ನಡುವೆ ಎರಡನೇ ಬಿಜ್ಜಳನ ತಮ್ಮಂದಿರಾದ ಮೂರನೇ ರಾಜ ಮತ್ತು ಮೈಲುಗಿಯರ ಬಗ್ಗೆ ತಿಳಿಯುವುದು ಸೂಕ್ತ. ಮೂರನೇ ರಾಜನ ಬಗ್ಗೆ ಮಾಹಿತಿ ಇರುವುದಿಲ್ಲ. ಆದರೆ ಮೈಲುಗಿ ಮತ್ತು ಎರಡನೇ ಬಿಜ್ಜಳನ ಮಗನಾದ ವಜ್ರದೇವನ ಮಗನಾದ ಕರ್ಣ ಹಾಗೂ ಸೋವಿದೇವರ ನಡುವೆ ಕಳಚೂರಿ ಸಿಂಹಾಸನಕ್ಕೆ ಕಾಳಗ ಮಾಡಲು ಮುಂದಾಗಿ ಈ ಕಾಳಗದಲ್ಲಿ ಸೋವಿದೇವನು ಗೆದ್ದು ಕಳಚೂರಿ ಸಿಂಹಾಸನವನ್ನೇರಿದನು.

ರಾಯಮುರಾರಿ ಸೋವಿದೇವನು ಅಧಿಕಾರಕ್ಕೆ ಬರುತಿದ್ದಂತೆ ಹಲವಾರು ರೀತಿಯ ಪ್ರತಿರೋಧವನ್ನು ಎದುರಿಸಬೇಕಾಗಿತ್ತು. ಅದೃಷ್ಟವಶಾತ್ ಮಾಧವ ದಂಡನಾಯಕರಿಂದ ಈ ಎಲ್ಲಾ ಪ್ರತಿರೋಧವು ದಮನವಾಯಿತು. ಈ ನಡುವೆ ಶರಣರ ಕ್ರಾಂತಿಯ ಕಲ್ಯಾಣದಿಂದ ದಿಕ್ಕಾಪಾಲು ಮಾಡಿದನಾದರೂ ಈ ಯಶಸ್ವಿಯೂ ಇವನ ಅವನತಿಗೆ ಕಾರಣವಾಯಿತು. ಜಿಲ್ಲೆಯಲ್ಲಿ ಈತನ ಕಾಲಾವಧಿಗೆ ಸಂಬಂಧಿಸಿದಂತೆ ಹೆಚ್ಚಿನ ಪ್ರಮಾಣದಲ್ಲಿ ದಾನಶಾಸನಗಳೇ ಕಂಡುಬರುತ್ತವೆ. ಈತನ ತರುವಾಯ ಅಧಿಕಾರಕ್ಕೆ ಬಂದ ಮಲ್ಲಿಕಾರ್ಜುನ ಐತಿಹ್ಯವನ್ನು ಅಧ್ಯಯನ ಮಾಡುವ. ಮಲ್ಲಿಕಾರ್ಜುನ ಮತ್ತು ಅವನ ಅಣ್ಣನಾದ ಸೋವಿದೇವನ ರಾಜ್ಯದ ಕೆಲವು ಭಾಗವನ್ನು ಸ್ವತಂತ್ರಾಗಿ ಆಳ್ವಿಕೆ ಮಾಡುತ್ತಿದ್ದರು. ಈತನ ಕಾಲಕ್ಕೆ ಸೇರಿದ ಎರಡು ಶಾಸನಗಳು ತೆನಹಳ್ಳಿ[೭೫] ಮತ್ತು ರೂಗಿಯಿಂದ[೭೬] ವರದಿಯಾಗಿದೆ. ಈ ಎರಡು ಶಾಸನಗಳು ದಾನ ಶಾಸನವಾಗಿವೆ. ಈತನ ತರುವಾಯ ಎರಡನೇ ಸಂಕಮನು ಅಧಿಕಾರಕ್ಕೆ ಬಂದಾಗಲೂ ಈತನು ಸಹಾ ತನ್ನ ಅಣ್ಣನಾದ ಸೋವಿದೇವ ರಾಜ್ಯದ ಕೆಲವು ಪ್ರದೇಶವನ್ನು ಸ್ವತಂತ್ರದಿಂದ ಆಳ್ವಿಕೆ ಮಾಡಿದನೆಂಬುದು ಸ್ಪಷ್ಟವಾಗುತ್ತದೆ. ಈತನ ಕಾಲಕ್ಕೆ ಸೇರಿದ ಹಲವಾರು ಶಾಸನಗಳು ಈ ಜಿಲ್ಲೆಯಲ್ಲಿ ದೊರೆತಿವೆ. ಮನಗೂಳಿಯ ಹನುಮಂತ ದೇವರ ಗುಡಿಯ ಶಾಸನವು ಸಂಕಮರಸನು ನವಿಲೆಯ ನೆಲೆವೀಡಿನಿಂದ ತನ್ನ ಸಾಮಂತ ಪ್ರದೇಶವನ್ನು ಆಳುತ್ತಿದ್ದ ವಿಷಯವನ್ನು ತಿಳಿಸುತ್ತದೆ.[೭೭] ಅದಲ್ಲದೆ

ನಿಂಬಾಳದ ತಾಮ್ರ ಶಾಸನವು ಕ್ರಿ.ಶ. ೧೧೭೦ರ ಕಾಲಕ್ಕೆ ಸೇರಿದ್ದು, ಇದರಲ್ಲಿ ಮಲ್ಲಿಕಾರ್ಜುನನು ನಿಂಬವೂರಿನ ಕೊಲಿವಿ ಶಂಕರ ದೇವರ ಸೇವೆಗೆಂದು ಅಂಕುಲಗೆ-೫೦ರ ಬೊಬ್ಬುಲವಾಡೆ ಗ್ರಾಮವನ್ನು ದಾನ ಬಿಟ್ಟ ವಿಷಯ ತಿಳಿದುಬರುತ್ತದೆ.[೭೮] ಈ ರೀತಿಯಾಗಿ ಈತನ ಕಾಲದ ಶಾಸನಗಳು ಈ ಜಿಲ್ಲೆಯ ಬಗೆಗೆ ಮಾಹಿತಿ ನೀಡುತ್ತವೆ. ಈತನ ತರುವಾಯ ಅಹಮಲ್ಲನು ಅಧಿಕಾರಕ್ಕೆ ಬಂದನು.

ಅಹಮಲ್ಲನು ಅಧಿಕಾರಕ್ಕೆ ಬರುತ್ತಿದ್ದಂತೆ ಕಳಚೂರಿಗಳ ಪ್ರಾಬಲ್ಯವು ಕ್ಷೀಣಿಸತೊಡಗಿತು. ಚಾಲುಕ್ಯರ ಮೂರನೇ ತೈಲಪನ ಮಗನಾದ ನಾಲ್ಕನೇ ಸೋಮೇಶ್ವರನು ಚೇತರಿಸಿಕೊಂಡು ಚಾಲುಕ್ಯರ ಪ್ರಾಬಲ್ಯವನ್ನು ಪುನರ್ ಸ್ಥಾಪನೆ ಮಾಡಿದ. ಅಲ್ಲದೆ ಸಿಂದುಗಿನ ಕೊನೆಯ ಮಗನಾದ ಸಿಂಘಣನು ಸೋತು ಸೋಮೇಶ್ವರನಿಗೆ ಶರಣಾದನು. ಅಹವಮಲ್ಲನ ಕಾಲಕ್ಕೆ ಸೇರಿದ ಎರಡು ಶಾಸನಗಳು ಈ ಜಿಲ್ಲೆಯಲ್ಲಿ ದೊರೆತಿವೆ. ತಾಳಿಕೋಟೆಯ ರಾಮಸ್ವಾಮಿ ಗುಡಿಯಲ್ಲಿರುವ ಕ್ರಿ.ಶ. ೧೧೮೧ರ ಕಾಲಕ್ಕೆ ಸೇರಿದ ಶಾಸನವು, ಮಹಾಪ್ರಧಾನ ಲಾಳಬಂಡೆಯಕಾರನ ಬೇಡಿಕೆಯಂತೆ ಹಗರಟಗೆ ನಾಡಾಧಿಕಾರಿ ಪದ್ಮರಸ, ಹಗರಟ್ಟಿಗೆ-೩೦೦ರ ಒಂದು ಗ್ರಾಮವನ್ನು ದಾನ ನೀಡಿದ ವಿಷಯವನ್ನು ತಿಳಿಸಿದರೆ[೭೯] ಯಾಳವಾರದ ಚಾವಡಿಯ ಎದುರು ಇರುವ ಶಾಸನವು ತ್ರುಟಿತವಾಗಿದ್ದು ಅದರಲ್ಲಿ ಅರಸನ ಹೆಸರು, ಪ್ರಶಸ್ತಿ ಮಾತ್ರ ಕಂಡುಬರುತ್ತದೆ.[೮೦]ಈ ರೀತಿಯ ಕಳಚುರಿಯರು ಕೇವಲ ೨೬ ವರ್ಷಗಳ ಕಾಲ ಆಳ್ವಿಕೆ ಮಾಡಿ ದಖನ್ನಿನ ಇತಿಹಾಸದಲ್ಲಿ ತಮ್ಮದೇಯಾದ ಕೊಡುಗೆಗಳನ್ನು ನೀಡಿ ಕಣ್ಮರೆಯಾಗಿದ್ದಾರೆ. ಕಳಚೂರಿಗಳ ಪ್ರಾಬಲ್ಯವು ಚಾಲುಕ್ಯ ಸಾಮ್ರಾಜ್ಯ ಪತನಕ್ಕೆ ಕಾರಣವಾಯಿತು. ಅದಲ್ಲದೆ ದೇವಗಿರಿಯ ಯಾದವರ ಮತ್ತು ದ್ವಾರಸಮುದ್ರದವರ ಏಳಿಗೆಗೆ ಅವಕಾಶ ಮಾಡಿಕೊಟ್ಟಿತು.

ಕಳಚೂರಿಗಳು ಸ್ವತ ಕೆಲವೊಂದು ದೇವಾಲಯಗಳನ್ನು ನಿರ್ಮಾಣ ಮಾಡಿದ್ದರಲ್ಲದೆ, ತಮ್ಮ ಆಳ್ವಿಕೆಯ ಪೂರ್ವದಲ್ಲಿ ನಿರ್ಮಾಣವಾದ ದೇವಾಲಯಗಳನ್ನು ಜೀರ್ಣೋದ್ಧಾರ ಗೊಳಿಸಿ ಅವುಗಳಿಗೆ ಅನೇಕ ದಾನ ದತ್ತಿಗಳನ್ನು ಕೊಟ್ಟು ಶೈವ ಧರ್ಮದ ಆಧ್ಯ ಪ್ರವರ್ತಕರಾಗಿ ಕಂಡುಬರುತ್ತಾರೆ. ಅಂತವುಗಳಲ್ಲಿ ಹೆಮ್ಮಾಡಿ ಕಾಲದಲ್ಲಿ ಏಳಲಾಪುರದ ಗವರೇಶ್ವರ, ಮುತ್ತಗೆಯ ತೀಕೇಶ್ವರ, ಮನಗೂಳಿಯ ಕಲಿದೇವರ, ಕನ್ನವೂರಿನ ಚಂಡೇಶ್ವರ, ಕಡಲೇವಾಡದ ಸ್ವಯಂಭು ಸೋಮನಾಥ, ಕನ್ನವಳ್ಳಿಯ ಚಿಕೇಶ್ವರ, ಮುತ್ತಗೆಯ ರಾಮೇಶ್ವರ ಕೊಂಡಗೂಳಿಯ ಸೋಮನಾಥ, ಹಲಸಂಗಿಯ ಸ್ವಯಂಭುದೇವರು, ರಾಯಮುರಾರಿ ಸೋವಿದೇವನ ಕಾಲದ ಮುತ್ತಗೆಯ ತೀಕೇಶ್ವರ ದೇವಾಲಯ ಬಾಗೇವಾಡಿಯ ಮಲ್ಲಿಕಾರ್ಜುನ ದೇವರ, ಖೇಡದ ಕೈಲಾಸೇಶ್ವರ, ನಿಡೋಣಿಯ ಗವರೇಶ್ವರ, ತಂಬದ ಮೂಲಸ್ಥಾನ, ಭೂಯಾರದ ಕೂಡಲ ದೇವರು, ಜಕನಹಳ್ಳಿಯ ಮಹಾಲಿಂಗ, ನಿಂಭಾಳದ

ಕೋಟೆ ಶಂಕರಲಿಂಗ, ಗೋಟಖಿಂಡ್ಕಿಯ ಗಂಗೇಶ್ವರ, ಹಡಗಿನಾಳದ ದ್ರುವೇಶ್ವರ ಆಲಮೇಲದ ತ್ರೈಪುರುಷ, ಮಲ್ಲುಗಿಯ ಕಾಲಾವಧಿಯಲ್ಲಿ ಚಿಕ್ಕರೂವಿಗೆಯ ನಾಗೇಶ್ವರ ಮತ್ತು ಸೋಮನಾಥ, ಸಂಕಮನ ಕಾಲದಲ್ಲಿ ಮನಗೂಳಿಯ ಶಂಬಿಕೇಶ್ವರ, ಅಹವಮಲ್ಲನ ಕಾಲದಲ್ಲಿ ತಾಳಿಕೋಟೆಯ ಸ್ವಯಂಭು ಸೋಮನಾಥ ಮುಂತಾದ ದೇವಾಲಯಗಳು ಉಲ್ಲೇಖಾರ್ಹವಾಗಿವೆ. ಈ ಕಾಲವಧಿಯಲ್ಲಿ ಶೈವ ಧರ್ಮದಲ್ಲಿ ಕೆಲವೊಂದು ಬದಲಾವಣೆಗಳು ಉಂಟಾಗಿರುವುದನ್ನು ಕಾಣುತ್ತೇವೆ. ಅಲ್ಲದೆ ಶೈವ ಧರ್ಮವು ವೀರಶೈವ ಪಂಥದ ಮೂಲಕ ಮತ್ತೆ ಸ್ಥಾನ ಪಡೆಯಿತು.

ಸೇವುಣರು

ದೇವಗಿರಿಯ ಯಾದವ ಅಥವಾ ಸೇವುಣರು ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯರ ಸಾಮಂತರಾಗಿ ಪ್ರಾಂತೀಯ ಆಡಳಿತವನ್ನು ನಡೆಸುತ್ತ ಹನ್ನೆರಡನೆಯ ಶತಮಾನದ ಹೊತ್ತಿಗೆ ರಾಜಕೀಯ ಮುಖ್ಯ ಬೂಮಿಕೆಯಲ್ಲಿ ಬಂದು ನಿಂತರು. ಸಾಮಂತರಾಗಿ ನಂತರ ಸ್ವತಂತ್ರರಾಗಿ ಮಹಾರಾಷ್ಟ್ರವೊಳಗೊಂಡು ಉತ್ತರ ಕರ್ನಾಟಕದ ಬಹುಭಾಗದ ಮೇಲೆ ಆಡಳಿತ ನಡೆಸಿದರು.[೮೧] ಸೇವುಣ ಮನೆತನದಲ್ಲಿ ಅನೇಕ ಅರಸರು ಆಳ್ವಿಕೆ ಮಾಡಿದ್ದು, ಅಂತವರಲ್ಲಿ ಭಿಲ್ಲಮ, ಜೈತುಗಿ, ಸಿಂಘಣ ಹಾಗೂ ರಾಮಚಂದ್ರರು ಪ್ರಮುಖರು. ಭಿಲ್ಲಮ ಸೇವುಣ ಮನೆತನಕ್ಕೆ ಸ್ವತಂತ್ರ ಸತ್ಯೆಯನ್ನು ತಂದುಕೊಟ್ಟರೆ, ಸಿಂಘಣ ಮತ್ತು ರಾಮಚಂದ್ರರು ಸೇವುಣ ಸಾಮ್ರಾಜ್ಯದ ನಿರ್ಮಾಪಕರು.

ಸೇವುಣ ಭಿಲ್ಲಮನು ಕ್ರಿ.ಶ. ೧೧೮೭ರಲ್ಲಿ ಕಲ್ಯಾಣ ಸೋಮೇಶ್ವರನನ್ನು ಸೋಲಿಸಿ ಸ್ವತಂತ್ರ ಸೇವುಣ ಮನೆತನಕ್ಕೆ ಬುನಾದಿಯನ್ನು ಹಾಕಿದನು. ಈ ಘಟನೆಯನ್ನು ಸಮರ್ಥಿಸುವ ದಾಖಲೆಯೊಂದು ಅಧ್ಯಯನದ ವ್ಯಾಪ್ತಿಯುಲ್ಲಿ ದೊರೆಯುತ್ತದೆ. ತೇದಿಯಿಲ್ಲದ ಹಂಡರಗಲ್ಲ ಶಾಸನವು ಚಾಲುಕ್ಯ ದಂಡನಾಯಕ ತೊಂಡಯ್ಯನನ್ನು ಸೇವುಣ ದಂಡನಾಯಕ ಸೋಮಯ್ಯನು ಸೋಲಿಸಿ ಸೇವುಣ ರಾಜ್ಯವನ್ನು ಪ್ರತಿಷ್ಠಾಪಿಸಿದನೆಂದು ಹೇಳುವ ಮಹತ್ವದ ದಾಖಲೆಯಾಗಿದೆ.[೮೨] ಚಾಳುಕ್ಯರಿಂದ ಸ್ವತಂತ್ರಗೊಂಡು ಸಾರ್ವಭೌಮ ಆಡಳಿತ ನಡೆಸಿದ ಸೇವುಣ ಮನೆತನ ೧೪ನೆಯ ಶತಮಾನದ ಪ್ರಾರಂಭದ ದಶಕದಲ್ಲಿ ಉತ್ತರ ಭಾರತದ ಮುಸ್ಲಿಂ ದಾಳಿಕೋರರಿಗೆ ತುತ್ತಾಗಿ ಕೊನೆಗೊಂಡಿತು.

ಸೇವುಣರನ್ನು ಶಾಸನಗಳಲ್ಲಿ ಸೇವುಣ, ಸೇಗು, ಸೇಉಣ, ಸೇಮುಣ, ಸೇಗುಣ್ಣ ಯಾದವರು ಎಂದು ಉಲ್ಲೇಖಿಸಲಾಗಿದೆ. ಮಹಮ್ಮದೀಯ ಚರಿತ್ರೆಕಾರರು ಕೂಡ ಇವರನ್ನು ಯಾದವರೆಂದು ಕರೆದಿದ್ದಾರೆ. ಇವರ ರಾಜ್ಯವು ಬಹುಮಟ್ಟಿಗೆ ಕನ್ನಡದ ಜಿಲ್ಲೆಗಳನ್ನೇ ಒಳಗೊಂಡಿತ್ತು. ಶಿವಮೊಗ್ಗ,

ಹಾಸನ, ಚಿತ್ರದುರ್ಗ, ಧಾರವಾಡ, ವಿಜಯಪುರ, ರಾಯಚೂರು, ಬೀದರ ಮತ್ತು ಬಳ್ಳಾರಿ ಜಿಲ್ಲೆಗಳು ಅಥವಾ ಅವುಗಳ ಕೆಲವು ಭಾಗಗಳು ಸೇವುಣರ ರಾಜ್ಯದಲ್ಲಿ ಸೇರಿದ್ದವು. ಕಲ್ಯಾಣದ ಚಾಲುಕ್ಯರ ಅಧೀನದಲ್ಲಿದ್ದ ಕೆಲವು ಮಾಂಡಳಿಕರು ಇವರ ಕಾಲದಲ್ಲೂ ಮುಂದುವರೆದರು ಅವರಲ್ಲಿ ಪ್ರಮುಖವಾಗಿ ಕರ್ನಾಟಕದ ಸಿಂದರು, ಸಾಂತಾರರು, ರಟ್ಟರು, ಗುತ್ತರು, ಹೈಹೆಯರು, ಸೇವುಣರ ಅಧೀನರಾಗಿ ಆಳಿದರು.[೮೩]

ಭಿಲ್ಲಮ (ಕ್ರಿ.ಶ. ೧೧೮೦–೧೧೯೨)

ಭಿಲ್ಲಮನು ಸೇವುಣರ ಸ್ವತಂತ್ರ ಸಾಮ್ರಾಜ್ಯಕ್ಕೆ ನಾಂದಿ ಹಾಡಿದನು. ಭಿಲ್ಲಮನ ಕಾಲಕ್ಕೆ ಸೇರಿದ ಅನೇಕ ದಾನ ಶಾಸನಗಳು ಈ ಜಿಲ್ಲೆಯಲ್ಲಿ ದೊರಕಿವೆ. ಸೇವುಣ ಭಿಲ್ಲಮನು ಕ್ರಿ.ಶ. ೧೧೮೬ರಲ್ಲಿ ಕಲ್ಯಾಣ ಚಾಳುಕ್ಯ ನಾಲ್ಕನೆಯ ಸೋಮೇಶ್ವರನನ್ನು ಸೋಲಿಸಿ ಸೇವುಣ ರಾಜ್ಯಕ್ಕೆ ಶ್ರೀಕಾರ ಹಾಕಿದನು. ಮುದ್ದೇಬಿಹಾಳ ತಾಲೂಕಿನ ಹಂಡರಗಲ ವಂಶದ ಆಳ್ವಿಕೆಯನ್ನು ಸ್ಥಾಪಿಸಿದ ಭಿಲ್ಲಮನು ಕ್ರಿ.ಶ. ೧೧೮೦ರಲ್ಲಿ ಅಧಿಕಾರಕ್ಕೆ ಬಂದನು ಆದರೆ ಈತನಿಗೆ ಸಂಬಂಧಿಸಿದಂತೆ ಕ್ರಿ.ಶ. ೧೧೮೭ರ ನಿಂಬಾಳ ಶಾಸನ ಜಿಲ್ಲೆಯಲ್ಲಿ ದೊರೆತ ಮೊದಲ ಶಾಸನವಾಗಿದ್ದು, ಅದು ಯಾದವನಾರಾಯಣ ಪ್ರತಾಪಚಕ್ರವರ್ತಿ ಭಿಲ್ಲಮದೇವ ತಡವಲಗೆಯ ನೆಲೆವೀಡಿನಿಂದಾಳುತ್ತಿದ್ದುದನ್ನೂ, ಅವನ ಪ್ರಧಾನ ದಂಡನಾಯಕ ಮಾಯಿದೇವನಾಗಿರುವುದನ್ನು ಹೇಳಿದೆ.[೮೪] ಈತನ ಆಳ್ವಿಕೆಯ ಎರಡು ಮತ್ತು ಮೂರನೇ ವರ್ಷದಲ್ಲಿ ಹೊರಡಿಸಿದ ಕ್ರಿ.ಶ. ೧೧೮೭ರ ಬೆಕ್ಕಿನಾಳ,[೮೫] ಕ್ರಿ.ಶ. ೧೧೮೮ರ ಹಳ್ಳೂರು ಶಾಸನಗಳು[೮೬] ಹಿರಿಯದಂಡನಾಯಕ ವಿಕ್ರಮಾದಿತ್ಯನನ್ನು, ಕ್ರಿ.ಶ. ೧೧೯೧ರ ಪೀರಾಪುರ, ಶಾಸನಗಳು[೮೭] ಮಹಾಪ್ರಧಾನಿ ಲಖ್ಮಿದೇವನಾಯಕ ಮತ್ತು ಮಹಾಮಂಡಳೇಶ್ವರ ವಿರುಪದೇವರಸನನ್ನು ಉಲ್ಲೇಖಿಸುತ್ತವೆ. ಕ್ರಿ.ಶ. ೧೧೯೧ರ ಮುತ್ತಗಿ ಶಾಸನ ಭಿಲ್ಲಮನು ತೆನೆವಲಗೆಯ ನೆಲೆವೀಡಿನಲ್ಲಿದ್ದಂತೆಯೂ ಈತನು ಬಾಹುವಿಕ್ರಮದಿಂದ ರಾಜ್ಯವನ್ನು ಪ್ರತಿಪಾಳಿಸುತ್ತಿದ್ದನೆಂದು ಹೇಳುವುದಲ್ಲದೆ. ಅವನ ಪ್ರಧಾನ ಹಾಗೂ ಬಾಹತ್ತರ ನಿಯೋಗಾಧಿಪತಿಯಾಗಿ ಪೇಯಿಯ ಸಾಹಣಿ ಇದ್ದಂತೆಯೂ ತಿಳಿಸುತ್ತದೆ.[೮೮] ಕ್ರಿ.ಶ. ೧೧೯೦ರ ವಿಜಾಪುರ ವಸ್ತುಸಂಗ್ರಹಾಲಯದಲ್ಲಿರುವ ಶಾಸನ ದಂಡನಾಯಕ ಮಯಿದೇವರಸನಿದ್ದ ಇವನ ಕೈಕೆಳಗೆ ತಂಬದ ಆರು ಗ್ರಾಮಗಳನ್ನು ಆಳುತ್ತಿದ್ದ ದಂಡನಾಯಕ ವೈಜರಸನನ್ನು ಉಲ್ಲೇಖಿಸುತ್ತದೆ.[೮೯] ಕ್ರಿ.ಶ. ೧೧೯೦ರ ಚೊರಗಿ ಶಾಸನವು ತರ್ದವಾಡಿನಾಡಿನ ಮಹಾಮಂಡಳೇಶ್ವರ ವೀರ ಬಂದುಗಿದೇವರಸ, ಮಹಾಪ್ರಧಾನಿ ಮಾಯಿದೇವ ದಣ್ಣಾಯಕ ಮೊದಲಾದವರನ್ನು ಹೆಸರಿಸುತ್ತದೆ.[೯೦] ಕ್ರಿ.ಶ. ೧೧೯೦ರ ಹಿರೇಬೇವಿನೂರು ಶಾಸನ "ಚೋಳಾಂಭೋರಾಶಿ ಯೌರ್ವ್ವಾನಳನಹಿತ ತುರು:

ಕಾದ್ರಿ ಸಂಘಾತ ವಜ್ರಂ ಗೌಳಾಂಭೋದಾಳಿ ಝುಂಝಾನಿಳನತುಳ ಬಳಂ ಗೂರ್ಜ್ಜರೇಬೇಂದ್ರಸಿಂಹಂ ಕಾಳಿಂಗಾನಂಗ ಗೌರೀವರ ನೆನಿಪೆಸೆವೆಂ ತಾಳ್ದಿದೀ ಭಿಲ್ಲಮೋರ್ಬ್ಬೀ ಪಾಳಂಗಾರ್ಪಡಿ" ಎಂದು ಪ್ರಶ್ನಿಸಿ ಆತನ ಅಧಿಕಾರಿ ಮಾಯಿದೇವನಿಂದ ಯಾದವರಾಜ್ಯ ಲಕ್ಷ್ಮೀಶೋಭಿಸುವುದೆಂದಿದೆ.[೯೧] ಸಾಲೋಟಗಿ ಶಾಸನ ಗೂರ್ಜರಾವನಿಪಾಳ ಕರೀಂದ್ರಸಿಂಹ ಕಳಚೂರ್ಯ್ಯಕುಳಾರ್ಣ್ಣವ ಬಡವಾಗ್ರಿಶ್ವರ ಬಂದರಸನ ವಂಶಾವಳಿಯನ್ನು ಹೇಳಿದೆ.[೯೨] ಕ್ರಿ.ಶ. ೧೧೯೨ರ ಹಿಪ್ಪರಗಿ ಶಾಸನ ಭಿಲ್ಲಮದೇವನ ರಾಜ್ಯಲಕ್ಷ್ಮೀಯೊಳು ಪದುಳದೆ ತರ್ದವಾಡಿಯಿದ್ದು ಪಟ್ಟಸಾಹಣಿ, ಪೆಯಿಯ ಸಾಹಣಿ, ಸೇಲಾರವಂಶದ ಮಹಾಮಂಡಳೇಶ್ವರ ಗೋಣರಸ ಮತ್ತು ತರ್ದವಾಡಿನಾಡನ್ನು ಆಳುತ್ತಿದ್ದ ಮಲ್ಲೆಯ ಸಾಹಣಿಯರನ್ನು ಉಲ್ಲೇಖಿಸುತ್ತದೆ.[೯೩] ಕ್ರಿ.ಶ. ೧೧೯೦ರ ಮದಭಾವಿ, ಕ್ರಿ.ಶ. ೧೧೯೧ರ ಬೈರವಾಡಗಿ, ಕ್ರಿ.ಶ. ೧೧೯೨ರ ಮುತ್ತಗಿ ಶಾಸನಗಳು ಭಿಲ್ಲಮನ ಆಳ್ವಿಕೆಯನ್ನು ತಿಳಿಸುತ್ತವೆ.[೯೪] ಜಿಲ್ಲೆಯಲ್ಲಿರುವ ಈ ಎಲ್ಲ ಶಾಸನಗಳನ್ನು ಗಮನಿಸಿದಾಗ ವೀರ ಸೋಮೇಶ್ವರನು ಆಳುತ್ತಿದ್ದ ಕಾಲದಲ್ಲಿಯೇ ಈತ ಸ್ವತಂತ್ರವನ್ನು ಘೋಷಿಸಿಕೊಂಡಿರಬೇಕು. ಎಂಬುದು ತಿಳಿದುಬರುತ್ತದೆ. ಭಿಲ್ಲಮನಿಗೆ ಪ್ರಬಲ ಎದುರಾಳಿ ಹೊಯ್ಸಳರ ಎರಡನೆಯ ಬಲ್ಲಾಳ ರಾಜ್ಯ ವಿಸ್ತರಣೆಗಾಗಿ ಸೊರಟೂರಿನಲ್ಲಿ ಇಬ್ಬರಿಗೂ ಭೀಕರ ಕದನವೇರ್ಪಟ್ಟು (ಕ್ರಿ.ಶ. ೧೧೮೯-೯೦) ಭಿಲ್ಲಮ ಅಲ್ಲಿಂದ ಹಿಮ್ಮೆಟ್ಟಬೇಕಾಯಿತು. ವ್ಯವಹಾರಗಣಿತ ಬರೆದ ರಾಜಾದಿತ್ಯ "ವಾಜಿಸಹಿತಂ ಕೊಟ್ಟೋಡಿದಂ ಭಿಲ್ಲಮಂ" ಎಂದಿದ್ದಾನೆ. ಫ್ಲೀಟ್ ಆತ ಮಡಿದನೆಂದು ಭಾವಿಸಿದ್ದರು. ಆದರೆ ಆತ ಜೀವಂತವಾಗಿ ರಾಜ್ಯವಾಳಿದುದಕ್ಕೆ ತರ್ದವಾಡಿನಾಡಿನ ಶಾಸನಗಳಲ್ಲಿ ಆಧಾರವಿದೆ.[೯೫] ಭಿಲ್ಲಮನು ತನ್ನ ಮಗ ಜೈತುಗಿಗೆ ಕ್ರಿ.ಶ. ೧೧೯೧ರಲ್ಲಿ ರಾಜ್ಯವಹಿಸಿಕೊಟ್ಟನು. ಕ್ರಿ.ಶ. ೧೧೯೩ರಲ್ಲಿ ಅವನು ಕಾಲವಾಗಲು ಜೈತುಗಿಯು ಸಿಂಹಾಸನವನ್ನೇರಿದನು.[೯೬]

ಜೈತುಗಿ (ಕ್ರಿ.ಶ. ೧೧೯೨-೧೨೦೦)

ಭಿಲ್ಲಮನ ನಂತರ ಅವನ ಮಗ ಜೈತುಗಿ ಅಧಿಕಾರಕ್ಕೆ ಬಂದನು. ಕಡ್ಲೇವಾಡದಲ್ಲಿ ದೊರೆತ ಕ್ರಿ.ಶ. ೧೧೯೨ರ ಶಾಸನವು ಈತನಿಗೆ ಸಂಬಂಧಿಸಿದ ಪ್ರಥಮ ಶಾಸನವಾಗಿದೆ. ಇದು ಜೈತುಗಿಪಾಳನು ದೇವಗಿರಿಯಿಂದ ಆಳ್ವಿಕೆ ಮಾಡುತ್ತಿದ್ದ ಎಂದು ತಿಳಿಸುತ್ತದೆ.[೯೭] ವಿಜಾಪುರ ಶಾಸನವು ಇದೇ ವಿಷಯವನ್ನು ತಿಳಿಸುತ್ತದಲ್ಲದೆ ಕಿರುವಿಂಡಿಯಲ್ಲಿ ಬ್ರಾಹ್ಮಣರಲ್ಲದೆ ಜೈನ, ಬೌದ್ಧ, ಗೊರವರು ಇದ್ದರು ಎಂದು ಉಲ್ಲೇಖಿಸುತ್ತದೆ.[೯೮] ಕ್ರಿ.ಶ. ೧೧೯೬ರ ವಿಜಾಪುರದ ಇನ್ನೊಂದು ಶಾಸನ ಈತನ ಮಂತ್ರಿ ಹಾಗೂ ಸೇನಾಧಿಪತಿಯಾದ ಸಂಕರಸ ದಂಡನಾಯಕ, ಕರಣ ಕೇಸಿಯಣಯ್ಯನಾಯಕರು ತರ್ದವಾಡಿ ಸಾವಿರವನ್ನು ಆಳುತ್ತಿದ್ದರು ಎಂದು ಹೇಳುತ್ತದೆ.[೯೯]

ಕ್ರಿ.ಶ. ೧೧೯೯ರ ದೇವಣಗಾಂವ ಶಾಸನವು ಭಿಲ್ಲಮನನ್ನು "ದ್ವಾರಾವತಿ ಪುರವರಾಧೀಶ್ವರಂ ಯದುವಂಶಾಂಬ ರದ್ಯುಮಣಿ ಯಾದವ ಕುಳಕಮಳಕಳಿಕಾ ವಿಕಾಸಬಾಸ್ಕರ ಅರಿರಾಯವು(ರ)ಸಲ್ಲ ಗೂರ್ಜರಭಯಜ್ವರ ಮಾಳವರಾಯದಿಸಾಪಟ್ಟ ತೆಲುಂಗರಾಯ ಕಠೋರ ವಲ್ಲೀಕುಠರ" ಎಂದು ಬಿರುದುಗಳನ್ನು ತಿಳಿಸುತ್ತದೆ. ಅಲ್ಲದೆ ಅವನ ಮಹಾಪ್ರಧಾನ ಮಗರ ಮುರಾರಿ ಸೋಯಿದೇವನಾಯಕನನ್ನು ಉಲ್ಲೇಖಿಸಿದೆ.[೧೦೦] ಮನಗೂಳಿ ಶಾಸನ ಕುಂತಳದೇಶವನ್ನು ಭಿಲ್ಲಮನ ಮಗನಾದ ಜೈತುಗಿ ಆಳುತ್ತಿದ್ದನೆಂದು, ಈತನು ಮಾಳವ ಕಳಿಂಗ, ತುರುಷ್ಕ, ನೇಪಾಳ ಮುಂತಾದ ದೇಶಗಳನ್ನು ನಡುಗಿಸುತ್ತಿದ್ದನೆಂದು ಉಲ್ಲೇಖಿಸುತ್ತದೆ.[೧೦೧] ಕ್ರಿ.ಶ. ೧೧೯೯ರ ಬಾಗೇವಾಡಿ ಶಾಸನ ಜಯಿತಪಾಳದೇವನ ಎಂಟನೆಯ ವರ್ಷದ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ.[೧೦೨] ಈ ಶಾಸನಗಳಲ್ಲದೆ ವಿಜಾಪುರ, ದೇವೂರು, ಸಂಖ, ನಾದ ಶಾಸನಗಳು[೧೦೩] ಈತನ ಆಳ್ವಿಕೆಯನ್ನು ಕುರಿತಾಗಿ ವಿವರಿಸುತ್ತವೆ. ಆದರೆ ಜೈತುಗಿಯ ಆಳ್ವಿಕೆಯು ಭಿಲ್ಲಮನ ಆಳ್ವಿಕೆಯಷ್ಟು ಮಹತ್ವದಿಂದ ಕೂಡಿರಲಿಲ್ಲ ಎಂದು ಹೇಳಬಹುದು. ಕ್ರಿ.ಶ. ೧೨೦೦ರಲ್ಲಿ ಜೈತುಗಿ ಮರಣ ಹೊಂದಿದ ಮೇಲೆ ಅವನ ಮಗ ಸಿಂಘಣನು ಅಧಿಕಾರಕ್ಕೆ ಬಂದನು.

ಸಿಂಘಣ (ಕ್ರಿ.ಶ. ೧೨೦೦–೧೨೪೭)

ಜೈತುಗಿ ಮತ್ತು ಚೇಲಾದೇವಿಯರ ಮಗ ಸಿಂಘಣನು ಅಧಿಕಾರಕ್ಕೆ ಬಂದನು ಈತನಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಒಟ್ಟು ೨೯ ಶಾಸನಗಳು ಕಂಡುಬಂದಿವೆ. ಕಲ್ಯಾಣ ಚಾಳುಕ್ಯ ಆರನೆಯ ವಿಕ್ರಮಾದಿತ್ಯನ ನಂತರ ಅಂತಹದೆ ಘನತೆ, ಸ್ಥೈರ್ಯವನ್ನು ಸೇವುಣ ರಾಜ್ಯಕ್ಕೆ ತನ್ನ ಐವತ್ತು ವರ್ಷಗಳ ದೀರ್ಘ ಆಳ್ವಿಕೆಯಿಂದ ಈತ ಒದಗಿಸಿಕೊಟ್ಟ.[೧೦೪]

ಸಿಂಘಣನ ರಾಜ್ಯವು ದಕ್ಷಿಣಾಪಥದ ಬಹುಭಾಗಗಳನ್ನು ಒಳಗೊಂಡಿತ್ತು. ಉತ್ತರದಲ್ಲಿ ನರ್ಮದಾ ನದಿಯಿಂದ ದಕ್ಷಿಣದಲ್ಲಿ ಕಾವೇರಿಯವರೆಗೂ ವಿಜಯಯಾತ್ರೆಗಳನ್ನು ಕೈಕೊಂಡಿದ್ದನು. ಪೂರ್ವದಲ್ಲಿ ಚಾಂದವರೆಗೆ ಅವನ ರಾಜ್ಯ ಹಬ್ಬಿತ್ತು. ಆಂಧ್ರದ ಪಶ್ಚಿಮಭಾಗ ಎರಡು ದಶಕಗಳ ಕಾಲ ಇವನ ಆಳ್ವಿಕೆಗೆ ಸೇರಿದ್ದಿತ್ತು.[೧೦೫]

ಕ್ರಿ.ಶ. ೧೨೦೦ರ ಕುಮಠೆ ಶಾಸನವು ಸಿಂಘಣನ ಆಳ್ವಿಕೆಯ ಕುರಿತ ಪ್ರಥಮ ಶಾಸನವಾಗಿದ್ದು ಈತನ ಆಳ್ವಿಕೆಯ ಎರಡನೆಯ ವರ್ಷದಲ್ಲಿ ಹೊರಡಿಸಲಾಗಿದೆ.[೧೦೬] ಇದೇ ಗ್ರಾಮದ ಇನ್ನೊಂದು ಕ್ರಿ.ಶ. ೧೨೦೧ರ ಶಾಸನ ಈತನ ಮೂರನೆಯ ವರ್ಷದ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ.[೧೦೭] ಹೀಗಾಗಿ ಕ್ರಿ.ಶ. ೧೧೮೮ ರಲ್ಲಿಯೇ ಸಿಂಘಣನು ಅಧಿಕಾರಕ್ಕೆ ಬಂದಿರಬಹುದು ಎಂದು

ಹೇಳಬಹುದು. ಕ್ರಿ.ಶ. ೧೨೦೪ರ ಕಡ್ಲೇವಾಡದ ಶಾಸನವು ಸಿಂಘಣನ ಬಿರುದಾವಳಿಗಳನ್ನು ತಿಳಿಸುವುದಲ್ಲದೆ ಈತನ ತಾಯಿ ಚೀಲಾದೇವಿಯನ್ನು ಉಲ್ಲೇಖಿಸುತ್ತದೆ.[೧೦೮] ಕ್ರಿ.ಶ. ೧೨೦೭ ರ ಅರ್ಜುನಗಿ, ಕನ್ನೊಳ್ಳಿ, ಕ್ರಿ.ಶ. ೧೨೦೮ರ ಪಡಗಾನೂರು, ಯರಗಲ್, ಕ್ರಿ.ಶ. ೧೨೨೨ರ ಯಾಳವಾರ, ಬಿಜ್ಜೂರು ಕ್ರಿ.ಶ. ೧೨೨೩ರ ಕೊಲ್ಹಾರ ಶಾಸನಗಳು[೧೦೯] ಸಿಂಘಣನು ದೇವಗಿರಿಯಿಂದ ಆಳ್ವಿಕೆಯನ್ನು ಮಾಡುತ್ತಿದ್ದ ಎಂದು ಉಲ್ಲೇಖಿಸುತ್ತವೆ. ಇದೇ ಪಡಗಾನೂರು ಶಾಸನವು ಈ ವೇಳೆಗೆ ತರ್ದ್ದವಾಡಿ ನಾಡನ್ನು ಕಪಿಲದೇವ ದಂಡನಾಯಕನು ಆಳುತ್ತಿದ್ದನು ಎಂದು ಹೇಳಿದೆ. ಕ್ರಿ.ಶ. ೧೨೨೫ರ ತಾಳಿಕೋಟೆ ಶಾಸನವು ಸಿಂಘಣದೇವನ ಉಪ್ಪರವಟ್ಟದ ಠಾಣಾಧಿಪತಿ ಮಗರ ಮುರಾರಿ ಜಯಿತಪಾಳದೇವ ಹಾಗೂ ಮಾಣಿಕಾದೇವಿಯನ್ನು ಉಲ್ಲೇಖಿಸಿ ಜಯಪಾಳನಾಯಕನು ಹಗರಟ್ಟಿಗೆ ನಾಡ ಮೇಲೆ ದಾಳಿಮಾಡಲು ಬಂದಾಗ ತಾಳಿಕೋಟೆಯ ಶ್ರೀ ಸ್ವಯಂಭು ಸೋಮನಾಥದೇವರಿಗೆ ದಾನಕೊಟ್ಟಿದ್ದನ್ನು ಉಲ್ಲೇಖಿಸುತ್ತದೆ.[೧೧೦] ಕ್ರಿ.ಶ. ೧೨೨೬-೨೭ರ ಚಡಚಣ ಶಾಸನ ಸಿಂಘಣನನ್ನು ಹೊಯಿಸಣ ಬಲ್ಲಾಳ ಗಂಧವಾರಣ ಎಂದು ಉಲ್ಲೇಖಿಸಿದೆ.[೧೧೧]

ಕ್ರಿ.ಶ. ೧೨೩೪ರ ವಿಜಾಪುರ ಶಾಸನ ತಿಕ್ಕರಸನು, ಕ್ರಿ.ಶ. ೧೨೪೪ರ ವಿಜಾಪುರ ವಸ್ತುಸಂಗ್ರಹಾಲಯದಲ್ಲಿರುವ ಶಾಸನವು ಭಾಗುಬಾಯಿ ಎಂಬುವವರು ತದ್ದವಾಡಿ, ಹೆಡ, ಕಣಂಬಡೆಗಳನ್ನು ಎಂಬ ಮೂರು ನಾಡುಗಳನ್ನು ಕ್ರಮವಾಗಿ ಆಳ್ವಿಕೆ ಮಾಡಿದ್ದರ ಬಗ್ಗೆ ತಿಳಿಸುತ್ತವೆ.[೧೧೨]

ಕ್ರಿ.ಶ. ೧೨೪೪ರ ಕಲಕೇರಿ ಶಾಸನವು ಕುಂತಳದೇಶವನ್ನಾಳಿದ ಯಾದವ ವಂಶದ ಭಿಲ್ಲಮನಿಂದ ಆರಂಭಿಸಿ ಸಿಂಘಣನವರೆಗೆ ವಂಶಾವಳಿಯನ್ನು ಹೇಳಿದೆ. ಇವನ ಪ್ರಧಾನಿಗಳು ಚಿಕ್ಕದೇವನ ಮಕ್ಕಳು ಮಲ್ಲ ಮತ್ತು ಬೀಚ ಎಂಬುವವರು ಬೀಚನನ್ನು ದೋರಸಮುದ್ರವನ್ನು ಮುತ್ತಿ ಗೆದ್ದಂತೆ ಶಾಸನ ತಿಳಿಸುತ್ತದೆ.[೧೧೩]

ತದ್ದೆವಾಡಿ, ಬಟ್ಟುಗಣಿಕೆ, ಕಪ್ಪನಿಂಬರಗಿ, ಕನ್ನೊಳ್ಳಿ, ನಿಡೋಣಿ, ಸರೂರಿನ ಎರಡು, ಕೋರವಾರ, ವಿಜಾಪುರ, ಕುಮಟಗಿ, ನಾಗೂರು, ಕಡ್ನಿ, ಹೆಬ್ಬಾಳ, ಯರಗಲ್, ದೇವಣಗಾಂವ ಶಾಸನಗಳು[೧೧೪] ಜಿಲ್ಲೆಯಲ್ಲಿ ಸಿಂಘಣನ ಆಡಳಿತವನ್ನು ಕುರಿತು ತಿಳಿಸುವ ಶಾಸನಗಳಾಗಿವೆ.

ಕನ್ನರ ಅಥವಾ ಕೃಷ್ಣ (ಕ್ರಿ.ಶ. ೧೨೪೭ –೧೨೬೧)

ಸಿಂಘಣನ ನಂತರ ಈತನ ಮೊಮ್ಮಗ ಜಯಿತಪಾಳನ ಮಗ ಕನ್ನರ ಅಥವಾ ಕೃಷ್ಣನು ಅಧಿಕಾರಕ್ಕೆ ಬಂದನು. ಜಿಲ್ಲೆಯ ಶಾಸನಗಳು ಈತನನ್ನು ಕಂಹ್ನರ, ಕನ್ನರ, ಕಂನ್ನರ, ಕಹ್ನರದೇವ

ಎಂದು ಉಲ್ಲೇಖಿಸುತ್ತವೆ. ಕ್ರಿ.ಶ. ೧೨೪೮ರ ಅಗರಖೇಡ ಶಾಸನವು ಯಾದವ ನಾರಾಯಣ ಪ್ರತಾಪ ಭುಜಬಳ ಚಕ್ರವರ್ತಿ ಶ್ರೀ ಕಂಹ್ನರದೇವ ಎಂದು ಉಲ್ಲೇಖಿಸಿದ್ದು ಜಿಲ್ಲೆಯಲ್ಲಿ ಈತನಿಗೆ ಸಂಬಂಧಿಸಿದ ಮೊದಲ ಶಾಸನವಾಗಿದೆ.[೧೧೫] ಕಾಲದ ಉಲ್ಲೇಖವಿಲ್ಲದ ಟಾಕಳಿ ಶಾಸನವು ಕನ್ನರದೇವನವರೆಗಿನ ಸೇವುಣರ ವಂಶಾವಳಿಯನ್ನು ತಿಳಿಸುತ್ತದೆ.[೧೧೬]

ಸಾಲವಾಡಗಿಯ ಕ್ರಿ.ಶ. ೧೨೫೧ರ ಶಾಸನ ಯಾದವ ಕನ್ನರದೇವನು ರಾಜ್ಯಭಾರ ಮಾಡುತ್ತಿದ್ದಾಗ ಅವನ ಮಹಾಪ್ರಧಾನಿ ಮತ್ತು ರಾಯದಂಡಾಧಿಕಾರಿಯಾಗಿದ್ದ ಚವುಡಿಸೆಟ್ಟಿ ಎಂಬುವವನು ಬೆಳುವೊಲ, ಬನವಾಸಿ, ಪಾಂಡ್ಯನಾಡು, ಹಾನುಂಗಲ್, ಕೊಂಡಿನಾಡು, ತರ್ದವಾಡಿ ಮುಂತಾದ ಹಲವು ಮುಖ್ಯ ಗ್ರಾಮಗಳನ್ನು ಆಳುತ್ತಿದ್ದ. ಜೊತೆಗೆ ಇವನ ಮಾವ ರಂಗರಸನು ಸಾಳವಾಡಿಗೆ, ಬಾಗವಾಡಿ ಮುಖ್ಯವಾದ ಹಲವು ಗ್ರಾಮಗಳನ್ನು ಆಳುತ್ತಿದ್ದ ಎಂದು ಉಲ್ಲೇಖಿಸುತ್ತದೆ. ತುಂಗಭದ್ರಾನದಿಯ ದಕ್ಷಿಣ ಭಾಗದ ಪ್ರದೇಶವು ಈತನ ಆಳ್ವಿಕೆಗೆ ಒಳಪಟ್ಟಿತ್ತು ಎಂಬುದು ಈ ಶಾಸನದಿಂದ ತಿಳಿದುಬರುತ್ತದೆ.[೧೧೭] ಇದೇ ಶಾಸನವು ಮಾಳವರಾಯ ಮದನ ತ್ರಿಣೇತ್ರ, ಗೂರ್ಜ್ವರ ರಾಯಭಯಂಕರಂ ತೆಲುಂಗರಾಯಸ್ತಾಪನಾಚಾರ್ಯ್ಯ ಇತ್ಯಾದಿ ಬಿರುದುಗಳನ್ನು ಹೇಳಿದೆ. ಕ್ರಿ.ಶ. ೧೨೫೭ರ ಫಡೇಕನೂರ ಶಾಸನ "ಮಾಳವೀಮಲ್ಲ ಅರಿರಾಯವುರಸೆಲ್ಲ ಗೂರ್ಜ್ವರ ವಾರಣಾಂಕುಸ ತೆಲಂಗುರಾಯ ಸಿರಃ ಕಮಳನಾಳ ಮೂಳೋತ್ಪಾಟನ ಪುನರಪಿಸ್ಥಾಪನಾಚಾರ್ಯ್ಯ ಹಮ್ಮಿರರಾಯ ನಿರ್ಮೂಳಭೇದ ಭೂದುರ್ಗ್ಗ, ಗಿರಿದುರ್ಗ್ಗ, ಜಲದುರ್ಗ್ಗ, ವನದುರ್ಗ್ಗ ಪ್ರಮುಖ್ಯ ನಾನಾದುರ್ಗ್ಗವಿದ್ರಾವಣ ಸುವರ್ಣ ಕೀರ್ತಿಗರುಡಧ್ವಜ ಶ್ರೀಮತು ಪ್ರತಾಪಚಕ್ರವರ್ತಿ ಕಲಿಕಹ್ನರದೇವ ಎಂದು ಪ್ರಶಸ್ತಿಯನ್ನು ನೀಡಿದೆ.[೧೧೮] ಮಾಳವ, ಗೂರ್ಜ್ವರ, ತೆಲುಂಗರೊಂದಿಗೆ ಹೋರಾಡಿದ ಈತ ಬಹುಶಃ ತೆಲುಂಗರಾಯನಿಗೆ ಮರಳಿ ಅಧಿಕಾರವನ್ನೊದಗಿಸಿ ಆತನ ಆಳ್ವಿಕೆ ಭದ್ರಪಡಿಸಿದಂತೆ ತೋರುತ್ತದೆ.[೧೧೯] ನಿಡೋಣಿಯ ಕ್ರಿ.ಶ. ೧೨೫೫ರ ಶಾಸನದಲ್ಲಿ ಕನ್ನರದೇವ ಮತ್ತು ಅವನ ತಮ್ಮ ಮಹಾದೇವನ ಉಲ್ಲೇಖವೂ ಬಂದಿದೆ. ಈ ಶಾಸನದ ಕಾಲಕ್ಕೆ ಮಹಾದೇವ ರಾಜನಾಗಿರಲಿಲ್ಲ. ಆದರೆ ಈ ಶಾಸನವು ಇಬ್ಬರು ದೇವಗಿರಿಯ ನೆಲೆವೀಡಿನಿಂದ ಆಳ್ವಿಕೆ ಮಾಡುತ್ತಿದ್ದುದಾಗಿ ತಿಳಿಸುತ್ತವೆ. ಹೀಗಾಗಿ ಇಬ್ಬರ ಹೆಸರನ್ನು ಉಲ್ಲೇಖಿಸಿದೆ.[೧೨೦] ಕ್ರಿ.ಶ. ೧೨೫೭ರ ಪಡೇಕನೂರು ಶಾಸನ ಬಸರಿಕೋಡದ ಮಹಾಪ್ರಭು ನೂಲರಸನನ್ನು ಉಲ್ಲೇಖಿಸುತ್ತದೆ.[೧೨೧] ಇನ್ನುಳಿದಂತೆ ಜಟ್ಟಗಿ, ಸಾಯನಳ್ಳಿ, ಕಲಕೇರಿ, ವಿಜಾಪುರ ಶಾಸನಗಳು[೧೨೨] ಜಿಲ್ಲೆಯಲ್ಲಿ ಈತನ ಆಳ್ವಿಕೆಯನ್ನು ಸ್ಪಷ್ಟಪಡಿಸುತ್ತವೆ.

ಮಹದೇವ (ಕ್ರಿ.ಶ. ೧೨೬೦-೧೨೭೧)

ಈ ಮೊದಲು ಸಹೋದರನಾದ ಕನ್ನರದೇವನ ಜೊತೆ ಸಂಯುಕ್ತ ಆಳ್ವಿಕೆ ಮಾಡಿದ್ದನ್ನು ನಿಡೋಣಿ ಶಾಸನವು ಉಲ್ಲೇಖಿಸುತ್ತದೆ. ಈತನ ಸ್ವತಂತ್ರ ಆಳ್ವಿಕೆಗೆ ಸಂಬಂಧಿಸಿದಂತೆ ಕ್ರಿ.ಶ. ೧೨೬೪ರ ಇಂಗಳೇಶ್ವರ ಶಾಸನವು ಜಿಲ್ಲೆಯಲ್ಲಿ ಸಿಗುವ ಒಂದೇ ಒಂದು ಶಾಸನವಾಗಿದೆ. ಮಹದೇವನು ದೇವಗಿರಿಯಿಂದ ಆಳ್ವಿಕೆ ಮಾಡುತ್ತಿದ್ದನೆಂದು ಮತ್ತು ತರ್ದ್ದವಾಡಿಯ ಸುಂಕಾಧಿಕಾರಿಯಾಗಿ ಬಸವರಸನು ಇದ್ದ ಎಂದು ತಿಳಿಸುತ್ತದೆ.[೧೨೩]

ರಾಮಚಂದ್ರ (ಕ್ರಿ.ಶ. ೧೨೭೧-೧೩೧೨)

ಮಹದೇವನ ನಂತರ ಮಗ ಆಮಣನನು ಪಟ್ಟಕ್ಕೆ ಬಂದನು. ಆದರೆ ಕನ್ನರನ ಮಗ ರಾಮಚಂದ್ರನು ಈತನನ್ನು ಕೊಂದು ತಾನೇ ಅಧಿಕಾರಕ್ಕೆ ಬಂದನು. ಯಾದವರ ಆಳ್ವಿಕೆಯ ಕೊನೆಯ ವೇಳೆಗೆ ದಕ್ಷಿಣ ಭಾರತದ ಮೇಲೆ ಮುಸ್ಲಿಂರ ದಾಳಿಗಳು ತೀವ್ರಸ್ವರೂಪ ಪಡೆದುಕೊಂಡವು. ಸುಮಾರು ೪೦ ವರ್ಷಗಳ ದೀರ್ಘ ಆಳ್ವಿಕೆಯ ಕಾಲದಲ್ಲಿ ರಾಮಚಂದ್ರನು ಹೊಯ್ಸಳ, ಕಾಕತೀಯ ಮತ್ತು ಮಹಮ್ಮದೀಯರೊಡನೆ ನಿರಂತರ ಯುದ್ಧಗಳಲ್ಲಿ ತೊಡಗಿದ್ದನು.

ಅಲ್ಲಾವುದ್ದೀನ್ ಖಿಲ್ಜಿ ತನ್ನ ದಂಡನಾಯಕ ಮಲ್ಲಿಕಾಫರನ ನೇತೃತ್ವದಲ್ಲಿ ಕ್ರಿ.ಶ. ೧೨೯೬ ಮತ್ತು ಕ್ರಿ.ಶ. ೧೩೦೬ರಲ್ಲಿ ಸೇವುಣರಾಜ ರಾಮಚಂದ್ರನನ್ನು ಸೋಲಿಸುವುದರ ಮೂಲಕ ಅವನ ಮೇಲೆ ತಮ್ಮ ಸಾರ್ವಭೌಮತ್ವವನ್ನು ಸ್ಥಾಪಿಸಿ ಸಾಮಂತನನ್ನಾಗಿರಿಸಿದರು. ಆದರೆ ಕ್ರಿ.ಶ. ೧೩೧೩ರ ವೇಳೆಗೆ ರಾಮಚಂದ್ರನ ಮಗ ಶಂಕರದೇವನು ಅಧಿಕಾರಕ್ಕೆ ಬಂದು ಮತ್ತೆ ಸ್ವತಂತ್ರ ಘೋಷಿಸಿಕೊಂಡನು. ಆದರೆ ಈ ವೇಳೆಗೆ ಮತ್ತೊಮ್ಮೆ ಮಲ್ಲಿಕಾಫ್‌ರ ದಾಳಿಮಾಡಿ ಶಂಕರದೇವನನ್ನು ಕೊಂದು ಇಡೀ ಯಾದವ ಸಾಮ್ರಾಜ್ಯವನ್ನು ಸುಲ್ತಾನನ ನೇರ ಆಡಳಿತಕ್ಕೆ ಒಳಪಡಿಸಿದನು. ಹೀಗಾಗಿ ವಿಜಯಪುರ ಪ್ರದೇಶವು ಕೂಡ ಮುಸ್ಲಿಂರ ಅಧೀನಕ್ಕೊಳಪಟ್ಟಿತು.

ವಿಜಾಪುರ ಜಿಲ್ಲೆಯು ಯಾದವರ ಕಾಲದಲ್ಲಿ ತರ್ದವಾಡಿ ೧೦೦೦, ಮೂವತ್ತಾರುಂಬಾಡ (ವಿಜಾಪುರ ತಾಲೂಕಿನ ಮೂವತ್ತಾರು ಹಳ್ಳಿಗಳನ್ನೊಳಗೊಂಡ ಸಣ್ಣ ಪ್ರಾಂತ್ಯ) ಹಗರ್ತಗೆನಾಡು (ವಿಜಾಪುರ ಜಿಲ್ಲೆಯ ಮುದ್ದೇಬಿಹಾಳ ಮತ್ತು ರಾಯಚೂರಿನ ಲಿಂಗಸೂಗೂರಿನ ವಾಯುವ್ಯ ಭಾಗಗಳನ್ನು ಒಳಗೊಂಡ ಪ್ರದೇಶ) ಪ್ರಾಂತಗಳಲ್ಲಿ ಹಂಚಿಹೋಗಿತ್ತು. ಈ ಎಲ್ಲ ಪ್ರದೇಶಗಳು ಯಾದವರ ಪತನದೊಂದಿಗೆ ದೆಹಲಿ ಸುಲ್ತಾನರ ಅಧಿಪತ್ಯದಲ್ಲಿ ವಿಲೀನವಾದವು. ಯಾದವರು

ಕೂಡಾ ಜಿಲ್ಲೆಯ ಅನೇಕ ಶೈವ ದೇವಾಲಯಗಳನ್ನು ಜೀರ್ಣೋದ್ಧಾರಗೊಳಿಸಿದ್ದಾರಲ್ಲದೆ ಅನೇಕ ದಾನ ದತ್ತಿಗಳನ್ನು ನೀಡಿ ಇವರು ಕೂಡಾ ಶೈವ ಧರ್ಮಕ್ಕೆ ಕೊಡುಗೆಯನ್ನು ಕೊಟ್ಟಿದ್ದಾರೆ.

ಬಹಮನಿ ಮತ್ತು ಆದಿಲ್‌ಶಾಹಿಗಳು

ದಕ್ಷಿಣ ಭಾರತದಲ್ಲಿ ಇಸ್ಲಾಮಿಕ್ ಅರಸರುಗಳ ಆಳ್ವಿಕೆ ಆರಂಭವಾದುದು ಕ್ರಿ.ಶ. ೧೩ನೇ ಶತಮಾನದಿಂದಲೇ ಎಂಬುದು ತಿಳಿದುಬರುವುದು. ಉತ್ತರ ಭಾರತದಲ್ಲಿ ಪ್ರಬಲವಾಗುತ್ತಿದ್ದ ದೆಹಲಿಯ ಸುಲ್ತಾನರ ಆಳ್ವಿಕೆಯು ಅಲ್ಲಾವುದ್ಧೀನ ಖಿಲ್ಜಿಯಿಂದ ದಕ್ಷಿಣ ಭಾರತಕ್ಕೂ ಪಸರಿಸುವಂತಾಯಿತು. ದಕ್ಷಿಣದ ದೇವಗಿರಿಯ ಮೇಲೆ ಅಲ್ಲಾವುದ್ಧೀನನು ತನ್ನ ಸೈನ್ಯದೊಂದಿಗೆ ದಾಳಿಯಿಟ್ಟನು. ನಂತರ ವಾರಂಗಲ್‌ದ ರಾಜ ಪ್ರತಾಪರುದ್ರನ ಮೇಲೆ ಕ್ರಿ.ಶ. ೧೩೧೦ರ ಜನೆವರಿ ೧೯ ರಂದು ಮಲ್ಲಿಕಾಫರನ ಮೂಲಕ ದಾಳಿಯಿಟ್ಟು ಸೋಲಿಸಿ ಅಪಾರ ಸಂಪತ್ತನ್ನು ಪಡೆದುಕೊಂಡು ದೆಹಲಿಗೆ ಹಿಂತಿರುಗಿದನು. ನಂತರ ಕ್ರಿ.ಶ. ೧೩೧೧ ಫೆಬ್ರುವರಿ ೩ ರಂದು ಪುನಃ ದೇವಗಿರಿ ಮೇಲೆ ಕ್ರಿ.ಶ. ೧೩೧೧ ಫೆಬ್ರವರಿ ೨೫ ರಂದು ದ್ವಾರಸಮುದ್ರದ ಮೇಲೆ ದಾಳಿ ಮಾಡಿ ಯಶಸ್ವಿಯಾದನು. ಕ್ರಿ.ಶ. ೧೩೧೧ ಮಾರ್ಚ ೧೦ ರಂದು ಮಧುರೆಯ ಪಾಂಡ್ಯ ರಾಜಕುಮಾರನಾದ ಸುಂದರಪಾಂಡ್ಯನ ಮೇಲೆ ಮಲ್ಲಿಕಾಫರ್ ದಾಳಿಮಾಡಿ ಸುಂದರಪಾಂಡ್ಯ ಮತ್ತು ಅವನ ಚಿಕ್ಕಪ್ಪನಾದ ವಿಕ್ರಮಪಾಂಡ್ಯನ ಸೈನಿಕರ ಕೈಯಲ್ಲಿ ಸೋಲನ್ನು ಅನುಭವಿಸಿದನು. ಆದರೂ ದಕ್ಷಿಣದ ಅಪಾರ ಸಂಪತ್ತಿನೊಂದಿಗೆ ದೆಹಲಿಗೆ ಬಂದ ಮಲ್ಲಿಕಾಫರನ ಸಾಹಸವನ್ನು ಮೆಚ್ಚಿದ ಅಲ್ಲಾವುದ್ದೀನನು ಕ್ರಿ.ಶ. ೧೩೧೧ರ ಅಕ್ಟೋಬರ್ ೨೮ರಂದು ಗೌರವದಿಂದ ಅಹ್ವಾನಿಸಿಕೊಂಡು ಸನ್ಮಾನಿಸಿದನು.[೨೪] ೧೩೩೫ರಲ್ಲಿ ಮಧುರೆಯಲ್ಲಿ ಮಹಮ್ಮದ ಬಿನ್ ತುಘಲಕ್‌ನ ಪ್ರಾಂತಾಧಿಕಾರಿಯಾದ ಜಲಾಲುದ್ಧೀನ್ ಅಶನ್‌ಖಾನ್ ಎಂಬ ಯೋಧನು ಸ್ವತಂತ್ರ ಘೋಷಿಸಿಕೊಂಡು ಆಳಲಾರಂಭಿಸಿದನು. ಅದುವೇ ದಕ್ಷಿಣ ಭಾರತದ ಪ್ರಥಮ ಮುಸ್ಲಿಂ ರಾಜ್ಯವಾಯಿತು. ಕ್ರಮೇಣ ಈ ಮಧುರೆಯ ಸ್ವಾತಂತ್ರ್ಯತೆಯಿಂದ ಪ್ರೇರೇಪಿತನಾದ ದೌಲತಾಬಾದಿನ ಪ್ರಾಂತಾಧಿಕಾರಿಯಾದ ಮತ್ತು ೨೦೦೦ ಹಳ್ಳಿಗಳ ಅಮೀರನೂ ಆಗಿದ್ದ ನಸೀರುದ್ಧೀನ್ ಇಸ್ಮಾಯಿಲ್‌ನು ಕ್ರಿ.ಶ. ೧೩೪೬ರಲ್ಲಿ ಸುಲ್ತಾನನ ಆಳ್ವಿಕೆಯನ್ನು ಕಡೆಗಣಿಸಿ ಸ್ವಾತಂತ್ರ್ಯತೆಯನ್ನು ಘೋಷಿಸಿಕೊಂಡನು. ಇಸ್ಮಾಯಿಲ್‌ನ ಅಮೀರನಾದ ಹಸನ್ ಎಂಬ ಯೋಧನು ಅವನಿಂದ 'ಅಮಿರುಲ್ ಉಮರ್' ಮತ್ತು 'ಜಾಫರ್‌ಖಾನ್' ಎಂಬ ಬಿರುದಾವಳಿಗಳಿಂದ ವರ್ಣಿತನಾಗಿದ್ದನು. ಹಸನ್ನನು ಸುಲ್ತಾನ ಮಹಮ್ಮದಬಿನ್ ತುಘಲಕ್‌ನ ಆಧೀನದಲ್ಲಿದ್ದ ಸಗರದ ಮೇಲೆ ದಾಳಿಯಿಟ್ಟು ಅಲ್ಲಿರುವ ಸುಲ್ತಾನನ ಅಮೀರರನ್ನು ಪರಾಭವಗೊಳಿಸಿ ಸಗರವನ್ನು ಪಡೆದುಕೊಂಡನು. ನಂತರ ಕ್ರಮೇಣ ಪ್ರಬಲನಾಗುತ್ತಾ ಬಂದ ಹಸನ್ನನು ಕ್ರಿ.ಶ. ೧೩೪೭ ಅಗಷ್ಟ

೩ರಂದು ದೌಲತಾಬಾದಿನಲ್ಲಿಯೆ ಬಹುಮನಿ ರಾಜ್ಯವನ್ನು ಸ್ಥಾಪಿಸಿ ಅದನ್ನೇ ತನ್ನ ರಾಜಧಾನಿಯಾಗಿಸಿಕೊಂಡು ಆಳಲಾರಂಭಿಸಿದನು. ಮುಂದೆ ದೌಲತಾಬಾದಿನಿಂದ ಗುಲ್ಬರ್ಗಕ್ಕೆ ರಾಜಧಾನಿಯನ್ನು ವರ್ಗಾಯಿಸಿಕೊಂಡು ಆಡಳಿತವನ್ನು ಮುಂದುವರೆಸಿದನು.

ದಕ್ಷಿಣ ಭಾರತದಲ್ಲಿ ಹಿಂದೂ ಧರ್ಮ ಸಂರಕ್ಷಣೆಯ ಗುರಿಯನ್ನಿಟ್ಟುಕೊಂಡು ತುಂಗಭದ್ರಾ ನದಿಯ ದಡದ ಮೇಲೆ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೊಂಡರೆ; ಅದರ ಪ್ರತಿಸ್ಪರ್ಧಿಯಾಗಿ ಮಹಮ್ಮದ ಬಿನ್ ತುಘಲಕ್‌ನ ದಖನ್ ಪ್ರಾಂತಾಧಿಕಾರಿಯಾದ ಅಲ್ಲಾವುದ್ದೀನ ಮಹಮ್ಮದ ಹಸನ್ ಗಂಗು ಎಂಬುವವನು ಮಹಮ್ಮದ-ಬಿನ್-ತುಘಲಕ್‌ನ ದುರ್ಬಲವಾದ ಆಳ್ವಿಕೆಯ ಲಾಭವನ್ನು ಪಡೆದುಕೊಂಡು ಸ್ವತಂತ್ರವಾದ ಬಹಮನಿ ಸಾಮ್ರಾಜ್ಯವನ್ನು ಕ್ರಿ.ಶ. ೧೩೪೭ರಲ್ಲಿ ಸ್ಥಾಪಿಸಿದನು. ಹಸನ್ ಗಂಗುವಿನಿಂದ ಉದಯವಾದ ಈ ಸಾಮ್ರಾಜ್ಯ ೧೪೮೧ರವರೆಗೆ ವೈಭವದಿಂದ ವಿಜಯನಗರದೊಂದಿಗೆ ಸಂಘರ್ಷದೊಂದಿಗೆ ಬೆಳೆದುಕೊಂಡು ಬಂದಿತು. ಆದರೆ ಕೊಂಡಪಲ್ಲಿ ಪ್ರದೇಶದಲ್ಲಿ ಪ್ರಧಾನಿ ಮಹಮ್ಮದ್ ಗವಾನನ ಶಿರವನ್ನು ಕತ್ತರಿಸುವುದರೊಂದಿಗೆ ಬಹಮನಿ ರಾಜ್ಯ ಪತನದ ಅಂಚನ್ನು ತಲುಪಿತು. ಮುಂದೆ ಬಹಮನಿ ಸುಲ್ತಾನ ಮೂರನೇ ಮಹಮ್ಮದನು ತನ್ನ ತಪ್ಪಿನ ಅರಿವಾಗಿ ಅದೇ ಚಿಂತೆಯಲ್ಲಿ ನರಳುತ್ತಾ ಕ್ರಿ.ಶ. ೧೪೮೨ರಲ್ಲಿ ಮರಣಹೊಂದಿದನು. ಈತನ ಮರಣದ ನಂತರ ಬಹುಮನಿ ರಾಜ್ಯವು ಒಡೆದು ಐದು ಶಾಹಿ ರಾಜ್ಯಗಳಾದವು. ಅವುಗಳೆಂದರೆ ವಿಜಯಪುರದ ಆದಿಲ್‌ಶಾಹಿಗಳು, ಗೋಲ್ಕೊಂಡದ ಕುತುಬ್‌ಶಾಹಿಗಳು, ಅಹಮ್ಮದನಗರದ ನಿಜಾಂಶಾಹಿಗಳು, ಬೀದರಿನ ಬರೀದಶಾಹಿಗಳು, ಬಿರಾರಿನ ಇಮಾದ್ ಶಾಹಿಗಳು. ಇವರಲ್ಲಿ ವಿಜಯಪುರದ ಆದಿಲ್‌ಶಾಹಿಗಳ ಆಳ್ವಿಕೆಯು ಕರ್ನಾಟಕದ ಚರಿತ್ರೆಯಲ್ಲಿ ಚಿರಸ್ಮರಣೀಯವಾಗಿದೆ. ಈ ಮನೆತನವು ಕ್ರಿ.ಶ. ೧೪೮೯ರಲ್ಲಿ ಯುಸುಫ್ ಆದಿಲ್‌ಶಾಹಿಯಿಂದ ಸ್ಥಾಪಿತಗೊಂಡು ಸಿಕಂದರ್ ಆದಿಲ್‌ಶಾಹಿಯವರೆಗೆ ಅಂದರೆ ಕ್ರಿ.ಶ. ೧೬೮೬ರವರೆಗೆ ವಿಜಯಪುರವನ್ನು ರಾಜಧಾನಿಯನ್ನಾಗಿಸಿಕೊಂಡು ಆಳ್ವಿಕೆ ಮಾಡಿದರು. ಈ ಮನೆತನದ ಅರಸರುಗಳಲ್ಲಿ ಎರಡನೆಯ ಇಬ್ರಾಹಿಂ ಆದಿಲ್‌ಶಾಹಿಯ ಆಳ್ವಿಕೆಯು ಸರ್ವಧರ್ಮಿಯರ ಪ್ರೀತಿಗೂ ಪಾತ್ರವಾಗಿತ್ತು.

ಆ ಶಾಹಿ ಮನೆತನಗಳಲ್ಲಿಯೇ ಪ್ರಸಿದ್ಧವಾದುದು ವಿಜಯಪುರದ ಆದಿಲ್‌ಶಾಹಿ ಮನೆತನವಾಗಿದೆ. ಈ ಮನೆತನವು ಯುಸುಫ್ ಆದಿಲ್‌ಖಾನ್‌ನಿಂದ ಕ್ರಿ.ಶ. ೧೪೮೯ರಲ್ಲಿ ಸ್ಥಾಪಿತವಾಯಿತು. ಅಂದು ಆರಂಭವಾದ ವಿಜಯಪುರ ಆದಿಲ್‌ಶಾಹಿಗಳ ಆಳ್ವಿಕೆಯು ಕ್ರಿ.ಶ. ೧೬೮೬ರವರೆಗೆ ದಕ್ಷಿಣ ಭಾರತದ ಚರಿತ್ರೆಯಲ್ಲಿ ವೈಭವದಿಂದ ಮೆರೆದಿದೆ.

ಯುಸುಫ್ ಆದಿಲ್‌ಖಾನ್ (ಕ್ರಿ.ಶ. ೧೪೮೯ ರಿಂದ ೧೫೧೦)

ಬಹಮನಿ ಸುಲ್ತಾನರ ಕಾಲಾವಧಿಯಲ್ಲಿ ವಿಜಯಪುರ ಭಾಗದ ತರಫ್‌ದಾರನಾಗಿ[೧೨೫] ಕಾರ್ಯನಿರ್ವಹಿಸಿದ ಯುಸುಫ್ ಆದಿಲ್‌ಖಾನ್‌ನು ಬಹುಮನಿ ರಾಜ್ಯದ ಅಸ್ಥಿರವಾದ ರಾಜಕೀಯ ವ್ಯವಸ್ಥೆಯ ಲಾಭವನ್ನು ಪಡೆದುಕೊಂಡು ಸ್ವತಂತ್ರ್ಯತೆಯನ್ನು ಘೋಷಿಸಿಕೊಂಡನು. ಮುಂದೆ ಪೋರ್ಚುಗೀಸ್‌ರೊಂದಿಗೆ ಈತನು ಮಾಡಿದ ಹೋರಾಟಗಳು ಪ್ರಮುಖವಾಗಿ ಕಂಡುಬರುತ್ತವೆ. ಮುಖ್ಯವಾಗಿ ಕ್ರಿ.ಶ. ೧೫೦೬ ರ ಕಾಲದಲ್ಲಿ ಪೋರ್ಚುಗೀಸ್ ನಾಯಕನಾದ ಅಲ್ಬುರ್ಕರ್ನು ಭಾರತಕ್ಕೆ ಬಂದು ಅಂದಿನ ಪ್ರಮುಖ ವ್ಯಾಪಾರಿ ಕೇಂದ್ರ ಹಾಗೂ ಬಂದರು ಸ್ಥಳವೂ ಆಗಿದ್ದ ಗೋವೆಯನ್ನು ಪಡೆಯುವ ಸಂಚು ರೂಪಿಸಿದ್ದನು. ಇದೇ ವೇಳೆಗೆ ಮಲಬಾರ ಕರಾವಳಿ ತೀರದಲ್ಲಿ ಕಾರ್ಯನಿರ್ವಹಿಸುತ್ತಿದ್ದ ವಿಜಯನಗರದ ಪ್ರಾಂತಾಧಿಕಾರಿಯಾದ ತಿಮ್ಮೋಜನು[೧೨೬] ಪೋರ್ಚುಗೀಸ್‌ರಿಗೆ ಬೆಂಬಲವನ್ನು ನೀಡಲು ಮುಂದಾದನು. ಇದನ್ನರಿತ ಯುಸುಫ್ ಆದಿಲ್‌ಶಹಾನು ಸೈನ್ಯ ಸಿದ್ಧಪಡಿಸತೊಡಗಿದನು. ಅಲ್ಬುರ್ಕರ್ನ ಸೈನ್ಯವು ಪಣಜಿಯತ್ತ ಬಂದು ಪಣಜಿಯನ್ನು ಕೈವಶಮಾಡಿಕೊಂಡಿತು. ಕ್ರಿ.ಶ. ೧೫೧೦ ರ ಮೇ ತಿಂಗಳಲ್ಲಿ ಜರುಗಿದ ಕದನದಲ್ಲಿ ಪೋರ್ಚುಗೀಸ್ ಸೈನ್ಯವು ಪರಾಭವಗೊಳ್ಳವುದರ ಮೂಲಕ ಗೋವೆ ಆದಿಲ್‌ಶಾಹಿಗಳ ರಾಜ್ಯದಲ್ಲಿಯೆ ಉಳಿಯಿತು. ಆದರೆ ಕೆಲವೆ ದಿನಗಳಲ್ಲಿ ಗೋವೆ ಆದಿಲ್‌ಶಾಹಿಗಳಿಂದ ಕೈತಪ್ಪಿ ಹೋಯಿತು. ಮರಾಠ ನಾಯಕನಾದ ಮುಕುಂದರಾವ್‌ನನ್ನು ಪರಾಭವಗೊಳಿಸಿ ಅವನ ಸಹೋದರಿಯನ್ನು ವಿವಾಹವಾಗುವುದರ ಮೂಲಕ ಮರಾಠರೊಂದಿಗೆ ಸ್ನೇಹ ಭಾವನೆ ಹೊಂದಿದನು. ಹೀಗೆ ನಿರಂತರವಾಗಿ ರಾಜ್ಯಾಭಿವೃದ್ಧಿಗೆ ಶ್ರಮಿಸಿದ ಯುಸುಫ್‌ಖಾನನು ಕ್ರಿ.ಶ. ೧೫೧೦ ರಲ್ಲಿ ಮರಣ ಹೊಂದಿದನು.[೧೨೭]

ಇಸ್ಮಾಯಿಲ್ ಆದಿಲ್‌ಖಾನ್ (ಕ್ರಿ.ಶ. ೧೫೧೦-೧೫೩೪)

ಯುಸುಫ್ ಆದಿಲ್‌ಖಾನ್‌ನಿಗೆ ಮೂವರು ಜನ ಪುತ್ರಿಯರು ಮತ್ತು ಓರ್ವ ಪುತ್ರನಿದ್ದನು. ಮಗನಾದ ಇಸ್ಮಾಯಿಲ್ ಆದಿಲ್‌ಖಾನನ್ನು ತನ್ನ ಉತ್ತರಾಧಿಕಾರಿಯೆಂದು ಘೋಷಣೆ ಮಾಡಿದ್ದನು. ಬಾಲ್ಯದಿಂದಲೂ ಇಸ್ಮಾಯಿಲ್‌ನು ಆಡಳಿತಾತ್ಮಕ ಮತ್ತು ಸೈನಿಕ ತರಬೇತಿಯನ್ನು ಪಡೆಯುತ್ತಲೆ ಬಂದವನಾಗಿದ್ದನು. ಆದುದರಿಂದಲೇ ಯುಸುಫ್ ಆದಿಲ್‌ಖಾನನು ಈತನನ್ನು ವಿಜಯಪುರದ ಸಿಂಹಾಸನದ ಮೇಲೆ ಕೂಡಿಸಿ ತನ್ನ ನಂಬಿಗಸ್ತ ಮಂತ್ರಿಯಾದ ಕಮಾಲ್‌ಖಾನ್ ಎಂಬುವವನಿಗೆ ಆಡಳಿತದ ಸಂಪೂರ್ಣ ಜವಾಬ್ದಾರಿಯನ್ನು ನೀಡಿ ಅವನನ್ನು ಇಸ್ಮಾಯಿಲ್‌ನ ರಕ್ಷಕನನ್ನಾಗಿ ನೇಮಿಸಿದ್ದನು ಆದರೆ ಈತನು ಮೋಸದಿಂದ ವಿಜಯಪುರದ ಸಿಂಹಾಸನವನ್ನೇರಲು ಸಿದ್ಧತೆಯನ್ನು

ಮಾಡತೊಡಗಿದಾಗ ಇಸ್ಮಾಯಿಲ್‌ನ ಚಿಕ್ಕಮ್ಮ ದಿಲ್-ಷದ್-ಅಘಾಲು ತನ್ನ ಓರ್ವ ನಂಬಿಗಸ್ತ ಸೇವಕನಾದ ಯುಸುಫ್‌ಟರ್ಕ್ ಎಂಬುವನ ಮುಂದಾಳತ್ವದಲ್ಲಿ ಸೈನ್ಯವನ್ನು ಕಳುಹಿಸಿ ಕಮಾಲ್‌ಖಾನನ್ನು ಕೊಲೆ ಮಾಡಿಸಿದಳು ಯುಸುಫ್‌ನ ಸಾಧನೆಯನ್ನು ಮೆಚ್ಚಿ ಅವನಿಗೆ ಬೆಳಗಾವಿಯನ್ನು ಜಹಗೀರನ್ನಾಗಿ ನೀಡಿದಳು. ಕಮಾಲ್‌ಖಾನನ ಹೆಂಡತಿ ತನ್ನ ಮಗನಾದ ಸಫದರ್‌ಖಾನ್‌ನ ಮೂಲಕ ತನ್ನ ಪತಿಗೆ ಇಸ್ಮಾಯಿಲ್‌ನಿಂದಾದ ಸೋಲಿನ ಸೇಡನ್ನು ತೀರಿಸಿಕೊಳ್ಳಲು ಸೈನ್ಯವನ್ನು ಕೊಟ್ಟು ಕಳುಹಿಸಿದಳು. ಆದರೆ ಇಸ್ಮಾಯಿಲ್‌ನ ಸರದಾರರು ಸಫದರ್‌ಖಾನ್‌ನ್ನು ಕೊಂದುಹಾಕಿದರು. ಇಸ್ಮಾಯಿಲ್ ಆದಿಲ್‌ಶಾಹಿಯು ಕ್ರಿ.ಶ. ೧೫೩೪ರಲ್ಲಿ ಗೋಲ್ಕೊಂಡದ ಮೇಲೆ ದಂಡೆತ್ತಿ ಹೋದಾಗ ಅನಾರೋಗ್ಯಕ್ಕೆ ತುತ್ತಾಗಿ ಕ್ರಿ.ಶ. ೧೫೩೪ರ ಅಗಸ್ಟ್ ೨೭ರಂದು ಮೃತನಾದನು. ಕಲೆಯ ಆರಾಧಕನಾದ ಇಸ್ಮಾಯಿಲ್‌ನು ಚಂದಾಪುರ ಎಂಬ ಗ್ರಾಮವನ್ನು ಕ್ರಿ.ಶ. ೧೫೧೯-೨೦ರಲ್ಲಿ ಮತ್ತು ಚಂಪಾಮಹಲನ್ನು ಕ್ರಿ.ಶ. ೧೫೨೦-೨೧ ರಲ್ಲಿ ನಿರ್ಮಿಸಿದನು.[೧೨೮] ಈ ಸುಲ್ತಾನನು ಸೈನ್ಯದ ಗಣತಿ ಮಾಡುವ ಪದ್ಧತಿಯನ್ನೂ ವಿಜಯಪುರದಲ್ಲಿ ಆರಂಭಿಸಿದನು. ಅಂದು ಒಟ್ಟು ೧,೪೦,೦೦೦, ಯೋಧರೂ ಮತ್ತು ೧೧೬ ಆನೆಗಳಿದ್ದವು ಎಂಬುದು ಬಸಾತಿನ್ ಸಲಾತೀನ್ ಉಲ್ಲೇಖಿಸುತ್ತದೆ.

ಮಲ್ಲು ಆದಿಲ್‌ಖಾನ್ (ಕ್ರಿ ಶ. ೧೫೩೪-೩೫)

ಇಸ್ಮಾಯಿಲ್ ಆದಿಲ್‌ಶಾಹಿಯ ತರುವಾಯ ಅವನ ಹಿರಿಯ ಮಗನಾದ ಮಲ್ಲು ಆದಿಲ್‌ಖಾನ್ ಅಧಿಕಾರಕ್ಕೆ ಬಂದನಾದರೂ ಹೆಚ್ಚು ದಿನಗಳ ಕಾಲ ಆಡಳಿತ ನಡೆಸಲಿಲ್ಲ. ಹಾಗಾಗಿ ಒಂದನೆಯ ಇಬ್ರಾಹಿಂನನ್ನು ಸಿಂಹಾಸನದ ಮೇಲೆ ಕೂಡಿಸಿದನು.[೧೨೯]

ಒಂದನೆಯ ಇಬ್ರಾಹಿಂ ಆದಿಲ್‌ಶಹ : (ಕ್ರಿ.ಶ. ೧೫೩೫-೧೫೫೮)

ಮಲ್ಲುಖಾನನ ದಬ್ಬಾಳಿಕೆಯ ಆಳ್ವಿಕೆಯಿಂದ ವಿಜಯಪುರದ ರಾಜಕೀಯ ವಲಯದಲ್ಲಿ ಅಸ್ಥಿರತೆಯ ವಾತಾವರಣ ಸೃಷ್ಟಿಯಾಯಿತಲ್ಲದೆ ವಿಜಯಪುರದ ಸುಲ್ತಾನರು ತಮ್ಮ ಪ್ರಜೆಗಳ ಪ್ರೀತಿಯಿಂದಲೂ ದೂರವಾಗುವ ಪರಿಸ್ಥಿತಿ ಉಂಟಾಗಿತ್ತು. ಅಂತಹ ಸಂದರ್ಭದಲ್ಲಿ ಕಿರಿಯ ವಯಸ್ಸಿನ ಪ್ರತಿಭಾವಂತ ಯುವಕನೂ ಅನುಭವಿಯೂ ಆದ ಇಬ್ರಾಹಿಂನು ಸುಲ್ತಾನ ಪದವಿಯನ್ನು ಅಲಂಕರಿಸಿದನಲ್ಲದೆ ಮೊದಲ ಬಾರಿಗೆ 'ಶಹಾ' ಎಂಬ ಪದವನ್ನು ತಮ್ಮ ಹೆಸರಿನೊಂದಿಗೆ ಸೇರಿಸಿಕೊಂಡ ಸುಲ್ತಾನನಾದನು. ಅಧಿಕಾರವನ್ನು ವಹಿಸಿಕೊಂಡ ಕೂಡಲೇ ಒಂದನೇ ಇಬ್ರಾಹಿಂ ಆದಿಲ್‌ಶಹಾನು ಪರ್ಷಿಯನ್ ಭಾಷೆಯನ್ನು ಆಡಳಿತದ ಭಾಷೆಯನ್ನಾಗಿಸಿದನು.[೧೩೦] ಮತ್ತು ಇಬ್ರಾಹಿಂನು ರಾಜ್ಯದಲ್ಲಿ ಇದುವರೆಗೂ ಆಚರಣೆಯಲ್ಲಿದ್ದ 'ಷಿಯಾ' ಪಂಥವನ್ನು ಕಡೆಗಣಿಸಿ 'ಸುನ್ನಿ'

ಪಂಥವನ್ನು ಆಚರಣೆಗೆ ತಂದನು. ಈತ ಸ್ಥಳೀಯ ಜನರಿಗೆ ಆದ್ಯತೆ ನೀಡಿದನಲ್ಲದೇ ಸೈನ್ಯದಲ್ಲಿ ಬದಲಾವಣೆ ತಂದ. ಸ್ಥಳೀಯ ಭಾಷೆಗೆ ಆದ್ಯತೆ ನೀಡಿ ಎಲ್ಲ ವ್ಯವಹಾರಗಳನ್ನು ಸ್ಥಳೀಯ ಭಾಷೆಯಲ್ಲಿಯೇ ನಡೆಸತೊಡಗಿದ. ಅನೇಕ ಬ್ರಾಹ್ಮಣರು ಹಗೂ ಇನ್ನಿತರ ಹಿಂದುಗಳಿಗೆ ಮಹತ್ವದ ಹುದ್ದೆ ನೀಡಲಾಯಿತು. ಕೆಳ ದರ್ಜೆಯ ಜನರಿಗೆ ಸರಕಾರಿ ಕುದುರೆಗಳನ್ನು ಕೊಟ್ಟು ಅವರಿಗೆ 'ಬಾರ್‌ಗೀರ್' ಹುದ್ದೆ ನೀಡಿದ. ಈತ ಅಹಮ್ಮದ್ ನಗರದ ಬುರ್ಹಾನ್ ನಿಜಾಮ ಹಾಗೂ ವಿಜಯನಗರದ ಅರಸುರುಗಳ ಜೊತೆ ನಡೆದ ಯುದ್ಧದಲ್ಲಿ ಅನೇಕ ಬಾರಿ ಸೋಲನನ್ನನುಭವಿಸಿದರೂ ಅವರೊಡನೆ ಒಪ್ಪಂದ ಮಾಡಿಕೊಂಡ. ಏನಿದ್ದರೂ ಇಬ್ರಾಹಿಂ ಓರ್ವ ಶೂರ ಸಿಪಾಯಿಯಾಗಿದ್ದ. ಸಂಶಯ ಸ್ವಭಾವದ ಈತ ನೂರಾರು ಹಿಂದು, ಮುಸ್ಲಿಮ್ ಗಣ್ಯರನ್ನು ಗಲ್ಲಿಗೇರಿಸಿದ. ಈತನು ಅನಾರೋಗ್ಯದಿಂದ ಕ್ರಿ.ಶ. ೧೫೫೮ರ ವೇಳೆಗೆ ಮೃತನಾದನು. ಸುಲ್ತಾನ ಇಬ್ರಾಹಿಂನ ಮೃತ ದೇಹವನ್ನು ಗೂಗಿ ಗ್ರಾಮದಲ್ಲಿ ಅವನ ಪೂರ್ವಜರ ಸಮಾಧಿ ಸ್ಥಳದಲ್ಲಿಯೇ ಸಂಸ್ಕಾರ ಮಾಡಲಾಯಿತು. ಕಲೆಯ ಆರಾಧಕನಾದ ಇಬ್ರಾಹಿಮ್ ವಿಜಾಪುರ ಪಟ್ಟಣದ ಸನಿಹದಲ್ಲಿಯೆ ನವನಗರವನ್ನು ನಿರ್ಮಿಸಿ ಅದಕ್ಕೆ ಇಬ್ರಾಹಿಂಪುರವೆಂದು ನಾಮಕರಣ ಮಾಡಿದನು. ಅದರೊಂದಿಗೆ ಅಲ್ಲಿಯೇ ಸೋಲಾಕಂಬ ಮಹಲ್‌ನ್ನು ಮತ್ತು ಜುಮ್ಮಾ ಮಸೀದಿಯನ್ನು ನಿರ್ಮಿಸಿದನು.

ಒಂದನೆಯ ಅಲಿ ಆದಿಲ್‌ಶಹಾ : (ಕ್ರಿ.ಶ. ೧೫೫೮–೧೫೮೦)

ಇಬ್ರಾಹಿಮನ ಇಬ್ಬರು ಮಕ್ಕಳು ಶಿಯಾ ಪಂಥದತ್ತ ಒಲವು ತೋರಿಸಿದ್ದರಿಂದ ತಂದೆಯ ಅಸಂತೋಷಕ್ಕೆ ಕಾರಣರಾಗಿದ್ದರು. ಹೀಗಾಗಿ ಇಬ್ರಾಹಿಮನ ಸಾವು ಹತ್ತಿರವಾಗುತ್ತಿದ್ದಂತೆ ಅಸದ್‌ಖಾನನ ಮಗ ಮಹಮ್ಮದ್ ಕಿಶ್ವರಖಾನ್ ಮಿರಜದವರೆಗೆ ಹೋಗಿ ಇಬ್ರಾಹಿಮನ ಮಗ ಅಲಿಯನ್ನು ತಂದು ಸಿಂಹಾಸನದ ಮೇಲೆ ಕುಳ್ಳಿರಿಸಿದ. ಈ ಸಂದರ್ಭದ ಸ್ಮರಣೆಗಾಗಿ ಅಲಿ ಆದಿಲ್‌ಶಾಹ ವಿಜಯಪುರದ ವಾಯವ್ಯಕ್ಕೆ ಶಾಹಪುರ ಪಟ್ಟಣವನ್ನು ನಿರ್ಮಿಸಿ. ಕಿಶ್ವರ್‌ಖಾನನನ್ನು ಪ್ರಧಾನ ದಂಡನಾಯಕನನ್ನಾಗಿ ನೇಮಿಸಿದ.

ವಿಜಯನಗರದ ರಾಮರಾಯನ ಮಗ ಸತ್ತಾಗ ಶ್ರದ್ಧಾಂಜಲಿ ಸಲ್ಲಿಸಲು ಹೋದಾಗ ರಾಮರಾಯನ ಹೆಂಡತಿ ಈತನನ್ನು ದತ್ತು ಪುತ್ರನನ್ನಾಗಿ ಸ್ವೀಕರಿಸಿದಳು. ರಾಮರಾಯನ ಜೊತೆಗೂಡಿ ಈತ ಅಹಮ್ಮದ್‌ನಗರದ ಮೇಲೆ ದಾಳಿ ಮಾಡಿ ಯಶಸ್ಸುಗಳಿಸಿಕೊಂಡ. ರಾಮರಾಯನ ಪ್ರಾಬಲ್ಯ ಹೆಚ್ಚುತ್ತಲೇ ಇತ್ತು. ಅಹಮ್ಮದನಗದ ಮೇಲೆ ದಾಳಿ ಮಾಡಿ ಹಿಂತಿರುಗುತ್ತಿದ್ದಾಗ ರಾಮರಾಯ ಬಾಗಲಕೋಟೆಯನ್ನು ವಶಪಡಿಸಿಕೊಂಡಾಗ ಅಲಿ ಆದಿಲ್‌ಶಹಾನಿಗೆ ಕಿರಿಕಿರಿಯಾಯಿತು. ಹೇಗಾದರು

ಮಾಡಿ ರಾಮರಾಯನ ಪ್ರಾಬಲ್ಯ ಅಡಗಿಸಲು ಈ ಅಹಮ್ಮದ್ ನಗರದ ರಾಜ ಹುಸೇನ್‌ನಿಜಾಮ್‌ಶಾಹ ಹಾಗೂ ಇತರ ಸುಲ್ತಾನರ ಜೊತೆ ಒಪ್ಪಂದ ಮಾಡಿಕೊಂಡ ರಾಮರಾಯನ ಜೊತೆ ಯುದ್ಧಕ್ಕೆ ಇಳಿದ ಅದೇ ಕ್ರಿ.ಶ. ೧೫೬೫ರ ತಾಳಿಕೋಟೆ ಕದನ. ಈ ಯುದ್ಧದಲ್ಲಿ ವಿಜಯನಗರ ಸೈನ್ಯ ಸೋತು ಆ ಸಾಮ್ರಾಜ್ಯವೇ ಅವನತಿಯ ಹಾದಿ ಹಿಡಿಯಿತು. ಕ್ರಿ.ಶ. ೧೫೮೦ರಲ್ಲಿ ಒಂದು ಸಣ್ಣ ಯುದ್ಧದಲ್ಲಿ ಒಂದನೇ ಅಲಿ ಆದಿಲ್‌ಶಾಹನು ಮರಣ ಹೊಂದಿದನು. ಸರಳ ಸ್ವಭಾವನಾದ ಈತನು ವಿಜಯಪುರದಲ್ಲಿ ಜಾಮಾ ಮಸೀದೆ ಹಾಗೂ ಚಾಂದಬಾವಡಿಗಳನ್ನು ನಿರ್ಮಿಸಿದ್ದನೆಂದು ತಿಳಿದುಬರುತ್ತದೆ.

ಎರಡನೆಯ ಇಬ್ರಾಹಿಂ ಆದಿಲ್‌ಶಹ: (ಕ್ರಿ.ಶ. ೧೫೮೦-೧೬೨೭)

ಅಲಿ ಆದಿಲ್‌ಶಾಹನಿಗೆ ಮಕ್ಕಳಿಲ್ಲದ ಕಾರಣ ಈತನ ಮರಣದ ನಂತರ ಸಹೋದರ ಥಮಾಸ್ಪನ ಮಗ ಇಬ್ರಾಹಿಮ್ (ಎರಡನೆಯ ಇಬ್ರಾಹಿಮ್ ಆದಿಲ್‌ಶಾಹ) ತನ್ನ ಒಂಭತ್ತನೆಯ ವಯಸ್ಸಿನಲ್ಲಿ ಪಟ್ಟಕ್ಕೆ ಬಂದನು.[೧೩೧] ತನ್ನ ೧೯ನೆಯ ವಯಸ್ಸಿನಲ್ಲಿ ಎಲ್ಲ ರೀಜೆಂಟರ ಆಳ್ವಿಕೆಯನ್ನು ಕೊನೆಗಾಣಿಸಿ ರಾಜ್ಯದ ವ್ಯವಹಾರಗಳನೆಲ್ಲ ಸ್ವತಂತ್ರವಾಗಿ ನೋಡಿಕೊಳ್ಳತೊಡಗಿದನು.

ಈತನು ಅಧಿಕಾರವನ್ನು ನೇರವಾಗಿ ತನ್ನ ಕೈಗೆ ತೆಗೆದುಕೊಂಡ ಮೇಲೆ ಸಾಮ್ರಾಜ್ಯವನ್ನು ಸುಭದ್ರಗೊಳಿಸಿದನಲ್ಲದೆ, ಕಲೆ ಮತ್ತು ಸಾಹಿತ್ಯಕ್ಕೂ ಅಮೋಘವಾದ ಕೊಡುಗೆಯನ್ನು ನೀಡಿದನು. ಸ್ವತಂತ್ರ ಆಳ್ವಿಕೆಯನ್ನು ಪ್ರಾರಂಭಿಸಿದ ಎರಡನೆಯ ಇಬ್ರಾಹಿಮ್‌ನು ಮೊದಲು ಸರ್ವಾಧಿಕಾರತ್ವವನ್ನು ಹೊಂದಿದ್ದ ಕೊನೆಯ ರೀಜೆಂಟ್ ದಿಲಾವರ್ ಖಾನ್‌ನ ಕಣ್ಣುಕೀಳಿಸಿ ಸೆರೆಮನೆಗಟ್ಟಿದನು. ನಂತರ ದಿಲಾವರ್‌ಖಾನ್‌ನಿಗೆ ಸಹಾಯ ನೀಡಿದ ಅಹ್ಮದನಗರದ ಬುರ್ಹಾಣ ನಿಜಾಮ್‌ಶಾಹನ ಮೇಲೆ ದಂಡೆತ್ತಿಹೋಗಿ ಆತನನ್ನು ಸೋಲಿಸಿದನು. ಇಬ್ರಾಹಿಮನು ಮಂಜುಖಾನ್‌ನ ನೇತೃತ್ವದಲ್ಲಿ ಸೈನ್ಯವನ್ನು ಕಳುಹಿಸಿ ಸಿರಾ, ಮೈಸೂರುಗಳಂತಹ ಕೆಲವು ಕರ್ನಾಟಕದ ಪಾಳೆಗಾರರು ಮತ್ತೆ ಕಪ್ಪು ಕಾಣಿಕೆ ಕೊಡುವಂತೆ ಮಾಡಿದನು. ನಂತರ ಸಿಂಹಾಸನಕ್ಕಾಗಿ ಸಹೋದರ ಇಸ್ಮಾಯಿಲ್‌ನ ದಂಗೆಯನ್ನು, ಅಕ್ಬರನ ಮಗ ದನಿಯಾಲನ ನೇತೃತ್ವದಲ್ಲಿ ದಕ್ಷಿಣದ ಮೇಲೆ ನಡೆದ ದಂಡಯಾತ್ರೆಯನ್ನು ತನ್ನ ರಾಜನೈತಿಕತೆಯಿಂದ ವಿಜಯಪುರವನ್ನು ರಕ್ಷಿಸಿದನು. ಆದರೆ ಅಹಮದನಗರದ ಮಲಿಕ್ ಅಂಬರನ ದಾಳಿಗಳಿಂದ ವಿಜಯಪುರವು ಹಾನಿಗೊಳಗಾಯಿತು.[೧೩೨] ಇಬ್ರಾಹಿಮ್‌ನು ಸುಲ್ತಾನ ಮಿರ್ಜಾ ಅಲೀ ಬರೀದ್‌ನನ್ನು ಸೋಲಿಸಿದನಲ್ಲದೆ. ಬೀದರದ ಎಲ್ಲ ಪ್ರದೇಶಗಳನ್ನು ಆದಿಲ್‌ಶಾಹಿ ಸಾಮ್ರಾಜ್ಯದಲ್ಲಿ ಸೇರಿಸಿಕೊಳ್ಳಲಾಯಿತು. ಇದರೊಂದಿಗೆ ಕ್ರಿ.ಶ. ೧೬೧೯ರ ಹೊತ್ತಿಗೆ ಬೀದರದ ಬರೀದ್‌ಶಾಹಿಯ ಮನೆತನ ಅಂತ್ಯಗೊಂಡಿತು.

ಎರಡನೇ ಇಬ್ರಾಹಿಮ್ ಆದಿಲ್‌ಶಾಹನು ಯುದ್ಧಗಳಿಂದ ಸಾಧಿಸಿದಕ್ಕಿಂತ ಮಿಗಿಲಾಗಿ ಕಲೆ ಮತ್ತು ಸಾಹಿತ್ಯಕ್ಕೆ ಕೊಟ್ಟಕೊಡುಗೆಯಿಂದ ಆದಿಲ್‌ಶಾಹಿ ಸುಲ್ತಾನರಲ್ಲೆ ಶ್ರೇಷ್ಠಮಟ್ಟದ ಸುಲ್ತಾನನಾಗಿದ್ದಾನೆ. ಅವನು ಸಂಗೀತ ಮತ್ತು ಚಿತ್ರಕಲೆಗಳ ಪ್ರೇಮಿಯಾಗಿದ್ದನು. ವಿದ್ವಾಂಸರ ಮತ್ತು ಕವಿಗಳ ಉದಾರ ಪೋಷಕನಾಗಿದ್ದನು. ಅರಮನೆಗಳು, ಮಸೀದಿಗಳು ಮತ್ತು ನಗರಗಳ ನಿರ್ಮಾಪಕನಾಗಿದ್ದನು. ಅಲ್ಲದೆ ಸರ್ವಧರ್ಮವನ್ನು ಸಮಾನತೆಯಿಂದ ಕಾಣುತ್ತಿದ್ದನು. ಹೀಗಾಗಿ ಅವನಿಗೆ ಪ್ರಜೆಗಳು 'ಜಗದ್ಗುರು' ಎಂಬ ಬಿರುದನ್ನು ಕೊಟ್ಟಿದ್ದರು. ೪೭ ವರ್ಷಗಳ ಕಾಲ ಸುದೀರ್ಘ ಆಳ್ವಿಕೆಯನ್ನು ಮಾಡಿ ಕ್ರಿ.ಶ. ೧೬೨೭ರಲ್ಲಿ ನಿಧನನಾದನು. ಈತನು ನಿರ್ಮಿಸಿದ ಇಬ್ರಾಹಿಮ್ ರೊಜಾದಲ್ಲಿಯೆ ಈತನನ್ನು ದಫನ್ ಮಾಡಲಾಯಿತು.[೧೩೩]

ಮಹಮ್ಮದ್ ಆದಿಲ್‌ಶಾಹ (ಕ್ರಿ.ಶ. ೧೬೨೭ ರಿಂದ ೧೬೫೬)

ಇಬ್ರಾಹಿಮ್ ಆದಿಲ್‌ಶಾಹನ ಇಚ್ಛೆಯಂತೆ ಮಹಮ್ಮದ ಆದಿಲ್‌ಶಾಹನು ತಂದೆಯ ಮರಣದ ನಂತರ ತನ್ನ ಹದಿನಾರನೆಯ ವಯಸ್ಸಿನಲ್ಲಿಯೇ ಪಟ್ಟಕ್ಕೆ ಬಂದನು.[೨೫೬] ಈತನ ಆಳ್ವಿಕೆಯಲ್ಲೂ ಸಾಂಸ್ಕೃತಿಕವಾಗಿ ಮತ್ತು ರಾಜಕೀಯವಾಗಿ ಆದಿಲ್‌ಶಾಹಿ ರಾಜ್ಯದ ವೈಭವವು ಮತ್ತಷ್ಟು ಪ್ರಸಿದ್ಧಿಯನ್ನು ಪಡೆಯಿತು. ಈತನು ಅಧಿಕಾರಕ್ಕೆ ಬಂದ ವರ್ಷವೇ ಅಹಮದ್‌ನಗರದ ಬುರ್ಹಾನ ನಿಜಾಮ್‌ಶಾಹನು ಆದಿಲ್‌ಶಾಹಿ ರಾಜ್ಯದ ಮೇಲೆ ಎರಡು ಸಲ ದಾಳಿಮಾಡಿ ಸೋತು ಹಿಂತಿರುಗಿದನು. ದಖ್ಖನ್ ಮೇಲೆ ಮೊಗಲರ ದಾಳಿಗಳು ನಿರಂತರವಾಗಿ ನಡೆದವು. ಷಹಾಜಹಾನ್‌ನ ಆಡಳಿತಾವಧಿಯಲ್ಲಿ ಮೊಘಲರು ಮತ್ತೆ ದಖ್ಖನ ಮೇಲೆ ಅನೇಕ ದಾಳಿಗಳನ್ನು ಕೈಗೊಂಡರಾದರೂ ವಿಜಯಪುರದ ಮೇಲೆ ಅವರ ಹಿಡಿತ ಸಂಪೂರ್ಣವಾಗಿ ಯಶಸ್ವಿಯಾಗಲಿಲ್ಲ. ಕ್ರಿ.ಶ. ೧೬೩೬ರಲ್ಲಿ ಮೊಗಲರು ಮತ್ತು ಮಹಮ್ಮದ್ ಆದಿಲ್‌ಶಾಹನ ನಡುವೆ ಶಾಂತಿ ಒಪ್ಪಂದವೇರ್ಪಟ್ಟು ತತ್ಕಾಲದವರೆಗೆ ಮೊಗಲರ ದಾಳಿಯಿಂದ ವಿಜಯಪುರವು ದೂರ ಉಳಿಯಿತು.

ಮಹಮ್ಮದನ ಆಳ್ವಿಕೆಯ ಕೊನೆಯ ಕಾಲಘಟ್ಟದಲ್ಲಿ ಶಹಾಜಿಯ ಮಗ ಶಿವಾಜಿಯು ಮರಾಠರನ್ನು ಒಗ್ಗೂಡಿಸಿ ಕ್ರಿ.ಶ. ೧೬೪೫ ರಿಂದ ೧೬೪೮ರ ವರೆಗೆ ಸತತ ದಾಳಿ ಮಾಡಿ ಅನೇಕ ಜಹಗೀರುಗಳನ್ನು ವಶಪಡಿಸಿಕೊಂಡನು. ಮಹಮ್ಮದನು ಈತನ ದಾಳಿಗಳನ್ನು ಎದುರಿಸಬೇಕಾಯಿತು. ಯುಸೂಫ್ ಆದಿಲ್‌ಖಾನನಿಂದ ಹುಟ್ಟಿಕೊಂಡ ಪೋರ್ಚುಗೀಸರೊಂದಿಗಿನ ವೈರತ್ವ ಈತನ ಆಳ್ವಿಕೆಯಲ್ಲೂ ಮುಂದುವರೆಯಿತು. ಕ್ರಿ.ಶ. ೧೬೫೪ರಲ್ಲಿ ನಡೆದ ಕಲಹದಲ್ಲಿ ಪೋರ್ಚುಗೀಸರ ಮೇಲೆ ಆದಿಲ್‌ಶಾಹಿ ಸೈನ್ಯ ವಿಜಯಸಾಧಿಸಿತ್ತಾದರೂ ಇಬ್ಬರ ನಡುವೆ ಆದ ಶಾಂತಿ ಒಪ್ಪಂದದಿಂದ ಅಷ್ಟಕ್ಕೆ ಸ್ಥಗಿತಗೊಂಡಿತು. ಕ್ರಿ.ಶ. ೧೬೫೬ರಲ್ಲಿ ಮಹಮ್ಮದನು ಮರಣ ಹೊಂದಿದ ನಂತರ ಆದಿಲ್‌ಶಾಹಿ

ರಾಜ್ಯವು ಅವನತಿಯ ಹಾದಿಯನ್ನು ಹಿಡಿಯಿತು. ಈತನು ತನ್ನ ರಾಜಕೀಯ ವಲಯದಲ್ಲಿ ಪ್ರಭಾವಬೀರಿದಷ್ಟೆ ಕಲೆ ಮತ್ತು ವಾಸ್ತುಶಿಲ್ಪಕ್ಕೂ ಅಮೋಘವಾದ ಕೊಡುಗೆಯನ್ನು ನೀಡಿದ್ದಾನೆ. ಮಹಮ್ಮದನು ಕಟ್ಟಿಸಿದ ಗೋಲ್‌ಗುಂಬಜ್ ಜಗತ್ಪ್ರಸಿದ್ಧಿಯನ್ನು ಪಡೆದಿದೆ. ದೌಲತಪುರ ಪಟ್ಟಣ, ಬೇಗಮ ತಲಾಬ ಕೆರೆ ನಿರ್ಮಾಣ ಮತ್ತು ಅಸಾರ್‌ಮಹಲ್ ಕಟ್ಟಡದ ನಿರ್ಮಾಣದ ಕಾರ್ಯವನ್ನು ಪೂರ್ಣಗೊಳಿಸಿದ್ದು ಈತನ ಕೊಡುಗೆಯಾಗಿದೆ.[೧೩೪]

ಎರಡನೆಯ ಅಲಿ ಆದಿಲ್‌ಶಾಹ (ಕ್ರಿ.ಶ. ೧೬೫೬ ರಿಂದ ೧೬೭೨)

ಮಹಮ್ಮದ ಆದಿಲ್‌ಶಾಹನ ನಂತರ ಆತನ ೧೯ ವರ್ಷದ ಮಗ ಅಲಿ ಆದಿಲ್‌ಶಾಹನು ಅಧಿಕಾರಕ್ಕೆ ಬಂದನು. ಈತನು ಅಧಿಕಾರಕ್ಕೆ ಬಂದ ಮೇಲೆ ಮತ್ತಷ್ಟು ಬಾಹ್ಯದಾಳಿಗಳು ವಿಪರೀತಗೊಂಡವು. ಅದರಲ್ಲಿ ಮೊಗಲರು ದಖನ್ ರಾಜ್ಯಗಳನ್ನು ಸಂಪೂರ್ಣವಾಗಿ ನಾಶಮಾಡಬೇಕೆಂಬ ಮಹತ್ವಾಕಾಂಕ್ಷೆ, ಶಿವಾಜಿಯ ಅಭ್ಯುದಯ, ದಕ್ಷಿಣದಲ್ಲಿ ಪಾಳೆಗಾರರ ದಂಗೆಗಳು ಇಂಥಹ ಪರಿಸ್ಥಿತಿಯಲ್ಲಿ ಎದೆಗುಂದದೆ ಸಾಮ್ರಾಜ್ಯ ರಕ್ಷಣೆಗೆ ಕೊನೆಯವರೆಗೂ ಶ್ರಮಿಸಿದನು.

ಮಹಮ್ಮದ್ ಆದಿಲ್‌ಶಾಹನ ನಂತರ ಆದಿಲ್‌ಶಾಹ ರಾಜ್ಯವು ಬಾಹ್ಯದಾಳಿಗಳಿಂದ ಪದೇ ಪದೇ ತುತ್ತಾಗುತಿತ್ತು. ಹೀಗಾಗಿ ರಾಜ್ಯವು ಅವನತಿಯತ್ತ ಸಾಗುತ್ತಿದ್ದರೂ ಅದನ್ನು ಸ್ಥಿರವಾದ ನೆಲೆಯಲ್ಲಿ ರಕ್ಷಣೆ ಮಾಡಿ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡಿದನು. ಕ್ರಿ.ಶ. ೧೬೭೨ರಲ್ಲಿ ಪಾರ್ಶ್ವವಾಯು ಪೀಡಿತನಾಗಿ ಮರಣ ಹೊಂದಿದನು. ಸ್ವತಃ ಕವಿಯೂ ಆಗಿದ್ದ ಅಲಿ ಆದಿಲ್‌ಶಾಹನು ಆಸ್ಥಾನದಲ್ಲಿ ಕವಿಗಳಿಗೆ, ಪಂಡಿತರಿಗೆ ಆಶ್ರಯನೀಡಿದ್ದನು. ಈತನು ಫಾರಸಿ ಭಾಷೆಗಿಂತ ಆಡಳಿತದಲ್ಲಿ ದಖನಿ ಭಾಷೆಗೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿದ್ದನು.

ಸಿಕಂದರ್ ಆದಿಲ್‌ಶಾಹ (ಕ್ರಿ.ಶ. ೧೬೭೨ ರಿಂದ ೧೬೮೬)

ಅಲಿ ಆದಿಲ್‌ಶಾಹ ಮರಣ ಹೊಂದಿದ ನಂತರ ಅಪ್ರಾಪ್ತವಯಸ್ಕನಾಗಿದ್ದ ಸಿಕಂದರ್ ಆದಿಲ್‌ಶಾಹನನ್ನು ಸಿಂಹಾಸನದ ಮೇಲೆ ಕುಳ್ಳಿರಿಸಲಾಯಿತು. ಈತನು ವಿಜಯಪುರ ರಾಜ್ಯದ ಕೊನೆಯ ಸುಲ್ತಾನನಾಗಿದ್ದ. ಈತನ ಆಳ್ವಿಕೆಯ ಅವಧಿಯಲ್ಲಿ ರಾಜಕೀಯ ಅಂತಃಕಲಹಗಳಿಂದ ರಾಜ್ಯದ ಪರಿಸ್ಥಿತಿಯು ದಿನದಿನಕ್ಕೂ ಅಧೋಗತಿಗಿಳಿಯಿತು ಇಂತಹ ಪರಿಸ್ಥಿತಿಯಲ್ಲಿ ಕ್ರಿ.ಶ. ೧೬೮೫ರ ಏಪ್ರಿಲ್‌ನಲ್ಲಿ ಮೊಗಲರು ವಿಜಯಪುರದ ಕೋಟೆಗೆ ಮುತ್ತಿಗೆ ಹಾಕಿ ೧೬೮೬ರಲ್ಲಿ ದಾಳಿಮಾಡಿ ವಿಜಯಪುರವನ್ನು ವಶಪಡಿಸಿಕೊಂಡು ಸಿಕಂದರನು ಶರಣಾಗುವಂತೆ ಮಾಡಿದನು. ಸಿಕಂದರನು ಅಜೀವ ಸೆರೆಮನೆಯ ವಾಸವನ್ನು ಅನುಭವಿಸಿ ಕ್ರಿ.ಶ. ೧೭೦೦ ಏಪ್ರಿಲ್‌ನಲ್ಲಿ ಮರಣಹೊಂದಿದನು.

ಇದರೊಂದಿಗೆ ವಿಜಯಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸುಮಾರು ಎರಡು ಶತಮಾನಗಳ ಕಾಲ ಆಳ್ವಿಕೆ ಮಾಡಿದ ಆದಿಲ್‌ಶಾಹಿ ರಾಜ್ಯವು ಕೊನೆಗೊಂಡಿತು.

ಆದಿಲ್‌ಶಾಹಿ ಸುಲ್ತಾನರು ಸರ್ವಧರ್ಮ ಸಹಿಷ್ಣುಗಳಾಗಿದ್ದು ಇವರ ಕಾಲಘಟ್ಟದಲ್ಲಿಯೂ ಸಹ ಇತರ ಧರ್ಮಗಳಿಗೆ ಸಂಬಂಧಿಸಿದ ದೇವಾಲಯಗಳಿಗೆ ದಾನ ದತ್ತಿಗಳನ್ನು ಕೊಟ್ಟಿದ್ದಾರೆ. ಎರಡನೇ ಇಬ್ರಾಹಿಂ ಆದಿಲ್ ಶಾಹ ಗಣೇಶ, ಸರಸ್ವತಿ, ನರಸಿಂಹನ ಆರಾಧಕನಾಗಿದ್ದನು ಎಂದು ಆತ ರಚಿಸಿದ ಕಿತಾಬ್ ಎ ನವರಸ್ ಎಂಬ ಕೃತಿಯಿಂದ ತಿಳಿದುಬರುತ್ತದೆ. ಅಲ್ಲದೆ ಮಹಮ್ಮದ್ ಆದಿಲ್ ಶಾಹ ಸಾಲೋಟಗಿಯ ಶಿವಯೋಗೇಶ್ವರ ದೇವಾಲಯವನ್ನು ಮರು ನಿರ್ಮಿಸಿದ್ದಲ್ಲದೆ ಅದಕ್ಕೆ ದಾನ ದತ್ತಿಗಳನ್ನು ಕೊಟ್ಟು ಆ ದೇವರಲ್ಲಿ ಭಕ್ತಿಯನ್ನಿರಿಸಿದ್ದು ತಿಳಿದು ಬರುತ್ತದೆ. ಅಲ್ಲದೇ ಶೈವ ಧರ್ಮದ ನಂಬಿಕೆಯನ್ನಿರಿಸಿದ ಅನೇಕ ದೇಸಗತಿ ಮನೆತನಗಳು ಇವರ ಸ್ಥಳೀಯ ಆಡಳಿತದಲ್ಲಿ ಪ್ರಮುಖ ಪಾತ್ರವಹಿಸಿದ್ದು ತಿಳಿದುಬರುತ್ತದೆ. ಈ ರೀತಿಯಾಗಿ ಶಾಹಿ ಸುಲ್ತಾನರು ಸಹ ಸರ್ವಧರ್ಮ ಸಹಿಷ್ಣುಗಳಾಗಿದ್ದರಲ್ಲದೆ ಶೈವ ಧರ್ಮ ಉಳಿದುಕೊಂಡು ಬರಲು ತಮ್ಮದೇ ಆದ ಕೊಡುಗೆಯನ್ನು ಕೊಟ್ಟಿದ್ದಾರೆ.

ಮೊಘಲರು

ಔರಂಗಜೇಬನು ವಿಜಯಪುರವನ್ನು ವಶಪಡಿಸಿಕೊಂಡ ಮೇಲೆ ಅದನ್ನು ಮೊಘಲ್ ಸಾಮ್ರಾಜ್ಯದ ಪ್ರಾಂತವನ್ನಾಗಿ ಸೇರಿಸಿಕೊಂಡನು. ಆದಿಲ್‌ಶಾಹಿ ಆಡಳಿತದಲ್ಲಿದ್ದ ಅಧಿಕಾರಿಗಳನ್ನು ಕೆಲಸದಿಂದ ತೆಗೆದು ಹಾಕದೆ ದೆಹಲಿ ಸೇವೆಗೆ ಸೇರಿಸಿಕೊಂಡನು. ಅಲ್ಲದೆ ಅವರವರ ಯೋಗ್ಯತೆಯನ್ನು ಗುರುತಿಸಿ ಪದೋನ್ನತಿ ಕೊಟ್ಟು ಸಂತೋಷಪಡಿಸಿದನು. ಔರಂಗಜೇಬನು ೧೬೮೬ರ ವರೆಗೆ ವಿಜಯಪುರದಲ್ಲೆ ಉಳಿದು ದೂರದ ದಕ್ಷಿಣ ಪ್ರಾಂತಗಳನ್ನು ಸ್ವಾಧೀನ ಪಡಿಸಿಕೊಳ್ಳುವತ್ತ ಗಮನ ಹರಿಸಿದನು. ಈ ಅವಧಿಯಲ್ಲಿ ವಿಜಯಪುರ ಪ್ರಾಂತದ ಆಡಳಿತ ನಿರ್ವಹಣೆಗೆಂದು ಫೌಜದಾರ್ ಹಾಗೂ ಖಾಲ್ಸ್ ದಿವಾನರೆಂಬ ಈರ್ವರು ಅಧಿಕಾರಿಗಳನ್ನು ನೇಮಿಸಿದನು. ರೊಹುಲ್ಲಾಖಾನನಿಗೆ ಪಂಜ ಹಜಾರೀ ಬಿರುದನ್ನು ನೀಡಿದನಲ್ಲದೆ, ನಾಲ್ಕು ಸಾವಿರ ಕುದುರೆ ಸವಾರರನ್ನು ಅವನ ಸ್ವಂತಕ್ಕೆ ಕೊಟ್ಟು ವಿಜಯಪುರ ಸುಬೇದಾರಿಯ ಹುದ್ದೆಯನ್ನು ನೀಡಿ ಗೌರವಿಸಿದನು. ಮಹಮ್ಮದ್ ರಫಿಯನ್ನು ದಿವಾನನ್ನಾಗಿ ನೇಮಿಸಲಾಯಿತು. ವಿಜಯಪುರ ರಾಜ್ಯವು ಮೊಘಲರ ಅಧೀನಕ್ಕೆ ಬಂದ ಮೇಲೆ ವಿಜಯಪುರ ರಾಜ್ಯದ ಅಧೀನದಲ್ಲಿದ್ದ ಎಲ್ಲ ಕೋಟೆಗಳ ದಂಡನಾಯಕರು, ಸಂಬಂಧಪಟ್ಟ ಸಾಮ್ರಾಜ್ಯಾಧಿಕಾರಿಗಳಿಗೆ ತಮ್ಮ ಕೋಟೆಗಳನ್ನು ಒಪ್ಪಿಸಿ ಕೊಡಬೇಕು ಮತ್ತು ಸಾಮ್ರಾಟನಿಗೆ ಭೇಟಿಯಾಗಿ ವಂದನೆ ಸಲ್ಲಿಸಬೇಕು ಎಂದು ರಾಜಾಜ್ಞೆಯನ್ನು

ಹೊರಡಿಸಲಾಯಿತು. ಅವರಿಗೆಲ್ಲ ಇನಾಮುಗಳನ್ನು ಮತ್ತು ಉನ್ನತ ದರ್ಜೆಯ ಮನಸಬ್‌ಗಳನ್ನು ಕೊಡಲಾಗುವುದೆಂದು ಭರವಸೆ ನೀಡಲಾಯಿತು. ಈ ಮೊದಲು ಆದಿಲ್‌ಶಾಹಿ ಅಧೀನದಲ್ಲಿದ್ದ ಎಲ್ಲ ಕೋಟೆಗಳನ್ನು ಗೆಲ್ಲುವುದಕ್ಕಾಗಿ ನಾಯಕ ಘಾಜಿ ಉದ್‌ದಿನ್ ಖಾರ್ನ್ ಬಹದೂರನ ನಾಯಕತ್ವದಲ್ಲಿ ಬಹುದೊಡ್ಡ ಸೈನ್ಯವನ್ನು ನೀಡಿ ಕೋಟೆಗಳನ್ನು ಕೈವಶಮಾಡಿಕೊಳ್ಳಲು ಕಳುಹಿಸಲಾಯಿತು. ಆದಿಲ್‌ಶಾಹಿ ಮನೆತನದ ಪತನದ ನಂತರ ಕ್ರಿ.ಶ. ೧೬೮೭ರಲ್ಲಿ ಗೊಲ್ಕಂಡ್ ರಾಜ್ಯಕ್ಕೆ ಮುತ್ತಿಗೆ ಹಾಕಿ ಅದನ್ನು ವಶಪಡಿಸಿಕೊಂಡನು. ಈ ಎರಡು ರಾಜ್ಯಗಳ ಸ್ವಾಧೀನದೊಂದಿಗೆ ದಖಿನ್‌ನಲ್ಲಿಯ ಮೊಘಲ್ ಪ್ರಾಂತಗಳ ಸಂಖ್ಯೆ ನಾಲ್ಕರಿಂದ ಆರಕ್ಕೆ ಏರಿತು. ಔರಂಗಜೇಬನ ಆಳ್ವಿಕೆಯಲ್ಲಿ ವಿಜಯಪುರವು 'ಸುಭಾ' ಆಗಿದ್ದು ಅದರಲ್ಲಿ ೧೮ ಸರ್ಕಾರಗಳನ್ನು ಆಡಳಿತದ ಅನುಕೂಲಕ್ಕಾಗಿ ೨೮೧ ಪರಗಣ ಅಥವಾ ಮಹಲ್‌ಗಳನ್ನಾಗಿ ವಿಂಗಡಿಸಲಾಗಿತ್ತು. ಆ 'ಸುಭಾ'ದ ೧೮ ಸರ್ಕಾರಗಳಲ್ಲಿ ವಿಜಯಪುರವು ಒಂದು ಸರ್ಕಾರ ಆಗಿದ್ದು ಅದರಲ್ಲಿ ೩೦ 'ಮಹಲ್' ಗಳಿದ್ದವು ಅವುಗಳಲ್ಲಿ ವಿಜಯಪುರ ಮಹಲ್‌ನಲ್ಲಿ ೭೬೫ 'ಕಸಬಾ' ಗಳಿದ್ದು ಅವು ಆಡಳಿತದ ಕೆಳಸ್ತರದ ಘಟಕಗಳಾಗಿದ್ದವು. ಆದಿಲ್‌ಶಾಹಿ ದಫ್ತರ್ ಮತ್ತು ಅಸಜಾಹೀ ದಫ್ತರ್‌ಗಳಲ್ಲಿ ಹೇಳಿದಂತೆ ಇವುಗಳಿಂದ ಒಟ್ಟು ವಾರ್ಷಿಕ ಕಂದಾಯ ಏಳುಕೋಟಿ ಎಂಬತ್ನಾಲ್ಕು ಲಕ್ಷ ಅರವತ್ತೊಂದು ಸಾವಿರ ಎಂಟುನೂರದ ಹದಿನೇಳು ರೂಪಾಯಿ ಒಂದುವರೆ ಆಣೆ ಬರುತಿತ್ತು. ಇದಲ್ಲದೆ ವಿಜಯಪುರ ಸರ್ಕಾರದ ಅಧೀನದಲ್ಲಿ ಅನೇಕ ಬಂದರುಗಳಿದ್ದವು, ಅವುಗಳಿಂದಲೂ ಕಂದಾಯ ಬರುತಿತ್ತು.

ಕ್ರಿ.ಶ. ೧೬೮೯ರ ಕೊನೆಯ ವೇಳೆಗೆ ಔರಂಗಜೇಬನು ವಿಜಯಪುರ, ಗೊಲ್ಕಂಡಗಳನ್ನು ವಶಪಡಿಸಿಕೊಂಡನಲ್ಲದೆ, ಮರಾಠರ ಪ್ರಾಬಲ್ಯವನ್ನು ಮುರಿದು ದಖ್ಖನ್ನಿನ ಅಜೇಯ ಚಕ್ರವರ್ತಿಯಾಗಿ ಉಳಿದನು. ಇದೇ ವೇಳೆಗೆ ವಿಜಯಪುರದಲ್ಲಿ ಹರಡಿದ ಪ್ಲೇಗ್‌ರೋಗದಿಂದ ಒಂದುವರೆ ಲಕ್ಷ ಜನ ಸತ್ತರು. ಔರಂಗಜೇಬನ ಜೊತೆಗೆ ಬಂದಿದ್ದ ಅಧಿಕಾರಿ ವರ್ಗ ಮತ್ತು ಬಾದಶಾಹನ ಸ್ತ್ರೀ ಔರಂಗಬಾದಿ ಅವರಲ್ಲಿ ಘಾಜೀಖಾನ್, ಕಾಜಿ, ಮುತಿಫಿ ಕರೀಬ ಮುಂತಾದ ಇಮಾಮಗಿರಿ ಮಾಡುವ ಕಾಮಗಾರರು ಮತ್ತು ರಾಜಾ ಜಸವಂತನ ಮಗ ಮಹಮದೀರಾಜ ಮೊದಲಾದವರು ಮರಣ ಹೊಂದಿದರು. ಅದರ ತೀವ್ರತೆ ಎಷ್ಟಿತ್ತೆಂದರೆ ಸತ್ತವರನ್ನು ಸಂಸ್ಕಾರ ಮಾಡುವಷ್ಟು ವ್ಯವಧಾನವಿಲ್ಲದೆ ಶವಗಳನ್ನು ಚಕ್ಕಡಿಗಳಲ್ಲಿ ಹೇರಿಕೊಂಡು ಪಟ್ಟಣದಾಚೆ ಸಾಗಿಸಬೇಕಾಯಿತೆಂದು ಹೇಳಲಾಗುತ್ತದೆ. ಇದರಿಂದಾಗಿ ಔರಂಗಜೇಬನು ಅನಿವಾರ್ಯವಾಗಿ ವಿಜಯಪುರವನ್ನು ತ್ಯಜಿಸಬೇಕಾಯಿತು. ಮೂರು ತಿಂಗಳ ನಂತರ ವಿಜಯಪುರ ಪ್ಲೇಗ್ ಭೀತಿಯಿಂದ ಮುಕ್ತವಾಯಿತು. ಪ್ಲೇಗ್ ಬೇನೆಯ ಅನಂತರ ಔರಂಗಜೇಬನು ದಖಿನ್‌ನಿಂದ ದೆಹಲಿಗೆ ಹೋಗುವಾಗ ಇಲ್ಲಿಯ ಜನಸಂಖ್ಯೆಯನ್ನು ಒಂಭತ್ತು ಲಕ್ಷ ಐವತ್ನಾಲ್ಕು ಸಾವಿರ ಎಂದು ಗುರುತಿಸಿದ್ದಾನೆ. ಕ್ರಿ.ಶ. ೧೭೧೦

ಮತ್ತು ೧೭೧೭ರಲ್ಲಿ ಬಿದ್ದ ಬರದಿಂದ ವಿಜಯಪುರ ಜನಸಂಖ್ಯೆ ಮತ್ತೆ ಇಳಿಮುಖವಾಯಿತು.[೧೩೫] ಇದರಿಂದ ವಿಜಯಪುರ ನಗರವೆಲ್ಲ ಪೂರ್ತಿಯಾಗಿ ವಿನಾಶವಾದಂತಾಯಿತು.

ಶಿವಾಜಿಯ ಮರಣದ ನಂತರ ರಾಜರಾಮನ ನಾಯಕತ್ವದಲ್ಲಿ ಮತ್ತೆ ಬಲಿಷ್ಠರಾದ ಮರಾಠರು ಶಾಂತಾಜಿ ಘೋರ್ಪಡೆಯ ದಂಡನಾಯಕತ್ವದಲ್ಲಿ ವಿಜಯಪುರ ಪ್ರದೇಶದ ಮೇಲೆ ದಾಳಿ ಮಾಡಿದರು. ಮರಾಠರ ಮುನ್ನಡೆಯನ್ನು ನಿಯಂತ್ರಿಸಲು ವಿಜಯಪುರದಿಂದ ಬೃಹತ್ ಸೈನ್ಯವನ್ನು ರವಾನಿಸಲಾಯಿತಾದರೂ ಮರಾಠರು ಗೆರಿಲ್ಲಾ ಯುದ್ಧ ತಂತ್ರದ ಮೂಲಕ ಮೊಘಲರಿಗೆ ಆಘಾತವನ್ನುಂಟು ಮಾಡಿದರು. ಇಂತಹ ಸಂದರ್ಭದಲ್ಲಿ ಚಿನ್ ಕಿಲಿಚ್‌ಖಾನ್‌ನನ್ನು ಕ್ರಿ.ಶ. ೧೭೦೩ರಲ್ಲಿ ವಿಜಯಪುರ ಸುಭಾದ ರಾಜ್ಯಪಾಲನನ್ನಾಗಿ ನಿಯೋಜಿಸಲಾಯಿತು. ಔರಂಗಜೇಬನು ತಾನು ಸಾಯುವುದಕ್ಕಿಂತ ಸ್ವಲ್ಪ ಮುಂಚಿತವಾಗಿ ತನ್ನ ಮೂರನೆಯ ಮಗ ಕಾಮ್‌ಭಕ್ಷನನ್ನು ವಿಜಯಪುರ ಗೌರ್ನರ್‌ನನ್ನಾಗಿ ನೇಮಿಸಿದನು. ೧೭೦೭ರಲ್ಲಿ ಔರಂಗಜೇಬನು ಅಹಮದನಗರದಲ್ಲಿ ನಿಧನ ಹೊಂದಿದ ನಂತರ ಅವನ ಮಕ್ಕಳಾದ ಮುಜೀಮ್, ಆಜಮ್ ಮತ್ತು ಕಾಮ್‌ಭಕ್ಷರ ನಡುವೆ ಉತ್ತರಾಧಿಕಾರಕ್ಕಾಗಿ ಪೈಪೋಟಿ ನಡೆಯಿತು. ಉತ್ತರದಲ್ಲಿ ಪ್ರಬಲನಾಗಿದ್ದ ಆಜಮ್ ಸೆರೆಯಲ್ಲಿದ್ದ ಮರಾಠದೊರೆ ಶಾಹುನನ್ನು ಬಂಧಮುಕ್ತಗೊಳಿಸಿ ದಖನ್ ಪ್ರಾಂತಗಳಲ್ಲಿ ಚೌತ್ ಮತ್ತು ಸರ್ದೇಶಮುಖ್ ತೆರಿಗೆಗಳನ್ನು ಸಂಗ್ರಹಿಸಲು ಅನುಮತಿ ನೀಡಿದನು.[೧೩೬] ಸಾತಾರ ಶಾಹುವಿನ ಆಡಳಿತ ಕೇಂದ್ರವಾಯಿತು. ಉತ್ತರದಲ್ಲಿ ದಂಗೆಯೆದ್ದ ಆಜಮ್‌ನನ್ನು ಸದೆಬಡಿದು ಮುಜೀಮ್ ಬಹದ್ದೂರ್‌ಷಾ ಎಂಬ ಬಿರುದಿನೊಂದಿಗೆ ಅಧಿಕಾರಕ್ಕೆ ಬಂದು ಕೇವಲ ಐದು ವರ್ಷ ಮಾತ್ರ ಆಡಳಿತ ನಡೆಸಿದನು. ದಕ್ಷಿಣದಲ್ಲಿ ಮರಾಠರನ್ನು ತನ್ನ ಹತೋಟಿಯಲ್ಲಿ ಇಟ್ಟುಕೊಳ್ಳಲು ಈತನು ವಿಫಲನಾದನು. ಕ್ರಿ.ಶ. ೧೭೧೨ರಲ್ಲಿ ಬಹದ್ದೂರ್‌ಷಾನ ಮರಣಾನಂತರ ಅವನ ಮಕ್ಕಳು ಸಿಂಹಾಸನಕ್ಕಾಗಿ ಹೋರಾಟ ಮುಂದುವರೆಸಿದರು. ಈ ಆಂತರಿಕ ಅಂತಕಲಹಗಳ ಲಾಭ ಪಡೆದುಕೊಂಡ ಹಲವಾರು ಪ್ರಾಂತಗಳು ಮೊಘಲರೊಂದಿಗೆ ತಮ್ಮ ಸಂಬಂಧವನ್ನು ಕಳೆದುಕೊಂಡರು. ದಖನ್‌ನಲ್ಲಿ ಮರಾಠರು ಪ್ರಬಲರಾಗಿ ಮೊಘಲ್ ಅಧಿಪತ್ಯೆಯನ್ನು ಕೊನೆಗೊಳಿಸಲು ಪ್ರಯತ್ನಿಸಿದರು. ಕ್ರಿ.ಶ. ೧೭೨೪ರಲ್ಲಿ ಸ್ಥಾಪನೆಯಾದ ಹೈದರಬಾದ್ ನಿಜಾಮ್ ಮನೆತನವೂ ಕೂಡಾ ಮರಾಠರೊಂದಿಗೆ ಪೈಪೋಟಿಗಿಳಿದು ಈ ಪ್ರದೇಶದಲ್ಲಿ ತಮ್ಮ ಅಧಿಪತ್ಯವನ್ನು ಸ್ಥಾಪಿಸುವಲ್ಲಿ ಯಶಸ್ವಿಯಾಯಿತು.[೧೩೭]

ಹೈದರಾಬಾದ್ ನಿಜಾಮರು

ಔರಂಗಜೇಬನು ತನ್ನ ಆಳ್ವಿಕೆಯ ಕೊನೆಯ ಅವಧಿಯಲ್ಲಿ ಚಿನ್ ಕಿಲಿಚ್ ಖಾನ್ (ನಿಜಾಮ್-ಉಲ್-ಮುಲ್ಕ್)ನನ್ನು ವಿಜಾಪುರ ಸುಭಾದ ರಾಜ್ಯಪಾಲನನ್ನಾಗಿ ನೇಮಿಸಿದ್ದ. ಬಹಾದ್ದೂರ್ ಷಾ ಅವನನ್ನು ೧೭೦೭ರ ಅವಧಿಯಲ್ಲಿ ಅವಧದ ಪ್ರಾಂತಪಾಲ ಹಾಗೂ ಗೋರಖಪುರದ ಫೌಜಧಾರನನ್ನಾಗಿ, ನಂತರ ಫರುಖ್‌ಸಿಯರ್‌ನನ್ನು ೧೭೧೩ರಲ್ಲಿ ದಖ್ಖನಿನ ಆರು ಸುಭಾಹಗಳ ಪ್ರಾಂತಪಾಲನನ್ನಾಗಿ ನೇಮಿಸಿದ್ದನು. ತುಂಬಾ ಮಹತ್ವಾಕಾಂಕ್ಷಿಯಾಗಿದ್ದ ಇವನು ಮೊಘಲ್ ಸಿಂಹಾಸನಕ್ಕಾಗಿ ಮತ್ತು ರಾಜಕೀಯ ವೈಫಲ್ಯಕ್ಕಾಗಿ ರಾಜಧಾನಿ ದೆಹಲಿಯಲ್ಲಿ ನಡೆದ ಅಂತಃಕಲಹಗಳ ಲಾಭ ಪಡೆದುಕೊಂಡು ಮೊಘಲರಿಂದ ಸ್ವತಂತ್ರನಾಗಿ ೧೭೨೪ರಲ್ಲಿ ಹೈದರಾಬಾದ್‌ನಲ್ಲಿ ನಿಜಾಮ್ ಮನೆತನವನ್ನು ಸ್ಥಾಪಿಸಿದನು. ಇದರೊಂದಿಗೆ ವಿಜಯಪುರ ಪ್ರಾಂತವು ಹೈದರಾಬಾದ್ ನಿಜಾಮನ ಅಧೀನಕ್ಕೊಳಪಟ್ಟಿತು. ದಖ್ಖನಿನಲ್ಲಿ ಚಕ್ರಾಧಿಪತ್ಯವನ್ನು ಸ್ಥಾಪಿಸುವ ಇವನ ಧೋರಣೆಗೆ ಮರಾಠರು ಪ್ರತಿರೋಧವಾಗಿದ್ದರು. ಹೈದರಾಬಾದಿನ ನಿಜಾಮನು ೧೭೪೪ರ ವರೆಗೆ ಕೃಷ್ಣೆಯ ಉತ್ತರ ಭಾಗದ ಆಡಳಿತದ ಹೊಣೆಯನ್ನು ನಾಸಿರಜಂಗನಿಗೂ ದಕ್ಷಿಣ ಭಾಗದ ಆಡಳಿತವನ್ನು ಸವಣೂರ ನವಾಬನಿಗೂ ವಹಿಸಿದ್ದನು. ಸುಮಾರು ೧೭೪೬ರ ಒಪ್ಪಂದದಂತೆ ಮರಾಠ ಪೇಶ್ವೆಗಳಿಗೆ ಒಪ್ಪಿಸಬೇಕಾಯಿತು. ನಿಜಾಮ್-ಉಲ್-ಮುಲ್ಕ್‌ನು ೧೭೪೮ರಲ್ಲಿ ನಿಧನ ಹೊಂದುವುದರೊಂದಿಗೆ ಹೈದರಾಬಾದಿನ ಗಾದಿಗಾಗಿ ಅಂತಃಕಲಹ ಉದ್ಭವಿಸಿತು. ನಿಜಾಮ್ ಸಲಬತ್ ಜಂಗನು ೧೭೫೯ರಲ್ಲಿ ವಿಜಯಪುರದ ಜಮಿನ್ದಾರರನ್ನು ಅಧಿಕ ಹಣಕ್ಕಾಗಿ ಒತ್ತಾಯಿಸಿದಾಗ ಬಾಲಾಜಿ ಪೇಶ್ವೆ ಹಾಗೂ ಸದಾಶಿವ ಭಾವುಗಳ ಮುಂದಾಳತ್ವದಲ್ಲಿ ಮುನ್ನುಗ್ಗಿದ ಮರಾಠ ಸೈನ್ಯ ನಿಜಾಮ್ ಸಲಾಬತ್ ಜಂಗ್ ಹಾಗೂ ಅವನ ಸಹೋದರ ಅಲಿಯನ್ನು ಉದಯಗಿರಿ ಬಳಿಯಲ್ಲಿ ಸೋಲಿಸಿತು. ತತ್ಪರಿಣಾಮವಾಗಿ ಏರ್ಪಟ್ಟ ಒಪ್ಪಂದದಂತೆ ನಿಜಾಮರ ಅಧೀನದಲ್ಲಿದ್ದ ವಿಜಯಪುರ ಪ್ರಾಂತದ ಹೆಚ್ಚಿನ ಪ್ರದೇಶಗಳು ಮರಾಠರಿಗೆ ವರ್ಗಾಯಿಸಲ್ಪಟ್ಟವು.[೧೩೮]

ಹೈದರಾಲಿ-ಟಿಪ್ಪುಸುಲ್ತಾನ್

ಹೈದರನ ವಿರುದ್ಧ ಮರಾಠರ ಶತ್ರುತ್ವ ಸಾಧನೆಗೆ ಪ್ರೇರಣೆಯಾಗಿದ್ದು ಅವರ ಕೊಳ್ಳೆಹೊಡೆಯುವ ನೀತಿ ಜೊತೆಗೆ ಪ್ರಬಲವಾಗಿ ಬೆಳೆಯುತ್ತಿರುವ ಹೈದರನ ಶಕ್ತಿಯನ್ನು ಮೊಟಕುಗೊಳಿಸಬೇಕೆಂಬ ಉದ್ದೇಶ ಅಲ್ಲದೆ ಅವನು ಏಳಿಗೆ ಹೊಂದುವುದಕ್ಕಿಂತಲೂ ಮೊದಲಿನಿಂದಲೇ ಮೈಸೂರು ಮರಾಠರಿಗೆ ದಂಡಯಾತ್ರೆಯ ವಲಯವಾಗಿದ್ದಿತು. ಮೊದಲು ವಿಜಯಪುರವು ಮೈಸೂರಿನ ಮೇಲೆ ತನ್ನ ಪ್ರಭುತ್ವವನ್ನು ಸ್ಥಾಪಿಸಿದ್ದಿತಷ್ಟೆ. ಈಗ ತಾವು

ವಿಜಯಪುರದ ವಾರಸುದಾರರೆಂದು ಹೇಳಿಕೊಂಡ ಮರಾಠರು ನ್ಯಾಯವಾಗಿ ಸಲ್ಲಬೇಕಾದ ಚೌತ್‌ಅನ್ನು ಪದೇ ಪದೇ ಬಂದು ಮೈಸೂರಿನಿಂದ ಕಿತ್ತುಕೊಂಡು ಹೋಗುತ್ತಿದ್ದರು. ಅದು ಅವರ ಪ್ರಭುತ್ವದ ಕುರುಹಾಗಿತ್ತು. ಎರಡು ವರ್ಷಗಳಿಂದ ಚೌತ್‌ನ್ನು ಕೊಡದಿದ್ದಕ್ಕಾಗಿ ಅವರುಗಳ ಮಧ್ಯ ಶತ್ರುತ್ವ ಬೆಳೆಯಲು ಕಾರಣವಾಯಿತು.

೧೭೬೧ರಲ್ಲಿ ನಡೆದ ಪಾಣಿಪತ್ ಯುದ್ಧದಲ್ಲಿ ಮರಾಠರು ಸೋತು ರಾಜಕೀಯ ಪ್ರಾಬಲ್ಯತೆಯನ್ನು ಕಳೆದುಕೊಂಡರು. ಆದರೆ ಮತ್ತೆ ಪೇಶ್ವೆ ಮಾಧವರಾವನ ನೇತೃತ್ವದಲ್ಲಿ ಚೇತರಿಸಿಕೊಂಡ ಮೇಲೆ ಮರಾಠ, ನಿಜಾಮ ಮತ್ತು ಹೈದರಾಲಿ-ಟಿಪ್ಪುವಿನ ಮಧ್ಯ ತ್ರಿಕೋನ ಸ್ಪರ್ದೆ ಏರ್ಪಟ್ಟು ಹಲವಾರು ಯುದ್ಧಗಳು ಸಂಭವಿಸಿದವು. ಈ ಯುದ್ಧಗಳು ಕೃಷ್ಣಾ ಮತ್ತು ತುಂಗಭದ್ರಾ ನದಿಗಳ ಮಧ್ಯದ ಪ್ರದೇಶದಲ್ಲಿಯೇ ಕಂಡುಬರುವುದರಿಂದ ಕೃಷ್ಣಾ ನದಿಯ ಉತ್ತರಭಾಗದಲ್ಲಿ ಯಾವುದೇ ನೇರವಾದ ಪರಿಣಾಮ ಉಂಟುಮಾಡಲಿಲ್ಲ. ೧೭೮೭ರ ವೇಳೆಗೆ ಮರಾಠರು, ನಿಜಾಮ ಮತ್ತು ಬ್ರಿಟಿಷರ ಬೆಂಬಲದಿಂದ ಹೈದರಾಲಿ ಮತ್ತು ಟಿಪ್ಪುವಿನ ದಂಗೆಗಳನ್ನು ಸಂಪೂರ್ಣವಾಗಿ ಸೆದೆಬಡೆದರು. ಆದರೆ ಬ್ರಿಟಿಷರ ಒಡೆದಾಳುವ ಕುಟಿಲ ನೀತಿಯನ್ನು ಅರಿತುಕೊಂಡು ಇಬ್ಬರು ವೈರಿಗಳು ಪರಸ್ಪರ ಮಿತ್ರರಾಗಿ ಒಂದುಗೂಡುತ್ತಾರೆ. ೧೭೮೦ರಲ್ಲಿ ಭಾರತೀಯ ಶಕ್ತಿಗಳು ಬ್ರಿಟಿಷರ ವಿರುದ್ಧವಾಗಿ ಒಕ್ಕೂಟ ರಚಿಸಿಕೊಂಡದ್ದೊಂದೇ ಹದಿನೆಂಟನೆಯ ಶತಮಾನದ ಭಾರತೀಯ ರಾಜಕಾರಣದ ಪ್ರಮುಖ ಅಂಶವಾಗಿ ಕಂಡುಬರುತ್ತದೆ.

ಮರಾಠರು.

ಬಾಳಾಜಿ ಬಾಜಿರಾಯನು ಪೇಶ್ವೆಯಾಗಿದ್ದಾಗ ೧೭೬೦ರಲ್ಲಿ ಸದಾಶಿವರಾವ್ ಭಾವು, ರಘುನಾಥರಾವ್, ಮುಂತಾದವರು ಕೂಡಿ ನಿಜಾಮ್ ಅಲಿಖಾನನನ್ನು ಉದಗೀರ್ ಯುದ್ಧದಲ್ಲಿ ಸಂಪೂರ್ಣವಾಗಿ ಪರಾಭವಗೊಳಿಸಿ ಅವನ ಮೇಲೆ ೬೦ಲಕ್ಷ ಉತ್ಪನ್ನದ ಪ್ರಾಂತವನ್ನು ಪೇಶ್ವೆಯರಿಗೆ ಬಿಟ್ಟುಕೊಡಬೇಕೆಂದು ಒಪ್ಪಂದವನ್ನು ಹೇರಲಾಯಿತು. ಆದರೆ ೧೭೬೧ರಲ್ಲಿ ಅಹಮ್ಮದ ಷಾ ಅಬ್ದಾಲಿಯಿಂದ ಪಾಣಿಪತ್ ಕದನದಲ್ಲಿ ಸೋತ ಮರಾಠರು ಸಾಕಷ್ಟು ಹಾನಿಗೊಳಗಾದರು. ಈ ಒಂದು ಸಂದರ್ಭವನ್ನು ಉಪಯೋಗಿಸಿಕೊಂಡ ನಿಜಾಮ್ ಅಲಿಖಾನನು ಹಿಂದೆ ಆದ ಒಪ್ಪಂದವನ್ನು ಮುರಿದನು. ಪಾಣಿಪತ್ ಕಾಳಗದಿಂದ ಉತ್ತರ ಭಾರತದಲ್ಲಿ ಮರಾಠ ಪ್ರಭಾವಕ್ಕೆ ಭಾರಿ ಪೆಟ್ಟುಕೊಟ್ಟಿತು. ಆದರೂ ಅವರು ಉತ್ತರದಲ್ಲಿ ಕಳೆದುಕೊಂಡಿದ್ದನ್ನು ದಕ್ಷಿಣದಲ್ಲಿ ಗಳಿಸಲು ಪ್ರಯತ್ನಿಸಿದರು. ಅವರ ಅದೃಷ್ಟವೆಂಬಂತೆ ಈ ವೇಳೆಗೆ ಪೇಶ್ವೆ ಮಾಧವರಾಯನ ನೇತೃತ್ವದಲ್ಲಿ ಮತ್ತೆ ತಲೆಯೆತ್ತಿದ ಮರಾಠರು ಈ ಬಾರಿ 'ರಾಕ್ಷಸ್ ಭುವನ' ಎಂಬ ಸ್ಥಳದಲ್ಲಿ ನಿಜಾಮ್ ಅಲಿಖಾನನ್ನು

ಪುನಃ ಸೋಲಿಸಿದ್ದಲ್ಲದೆ ಹಿಂದಿನ ಒಪ್ಪಂದದಂತೆ ೬೦ ಲಕ್ಷ ಉತ್ಪನ್ನದ ಪ್ರದೇಶದ ಜೊತೆ ಇನ್ನೂ ೨೨ ಲಕ್ಷದ ಪ್ರಾಂತವನ್ನು ಮತ್ತು ಶತ್ರುಗಳು ದಾಳಿಮಾಡಿದಾಗ ಪರಸ್ಪರ ಸಹಾಯ ಮಾಡಬೇಕೆಂದು ಒಪ್ಪಂದದಲ್ಲಿ ತಿಳಿಸಲಾಯಿತು.[೧೭೯] ಸುರಪುರದ ಪಶ್ಚಿಮ ಭಾಗವು ಪೇಶ್ವೆಯರ ವಶಕ್ಕೆ ಬಂದಿತು. ೧೭೬೫ರಲ್ಲಿ ಪೇಶ್ವೆ ಸರಕಾರವು ತಮ್ಮ ಕಡೆಯಿಂದ 'ಸರಂಜಾಮಿ' ಯ ಸಲುವಾಗಿ ರಾಸ್ತೆ ಎಂಬ ಅಡ್ಡ ಹೆಸರಿನ ಸರದಾರರನ್ನು ನೇಮಿಸಿಕೊಂಡಿತು. ಆನಂದರಾವ ಭಿಕಾಜಿ ರಾಸ್ತೆ ಎಂಬುವನಿಗೆ ತಾಳಿಕೋಟೆ, ನಾಲ್ವತ್ವಾಡ ಮುಂತಾದ ಪರಗಣೆಗಳು ಕೊಡಲ್ಪಟ್ಟವು. ೧೭೯೦-೯೧ರಲ್ಲಿ ಮತ್ತೊಮ್ಮೆ ಉಂಟಾದ ಬರಗಾಲ ಮತ್ತು ಮರಾಠರು ವಿಧಿಸುತ್ತಿದ್ದ ಭಾರವಾದ ತೆರಿಗೆಯಿಂದ ಈ ಪ್ರದೇಶ ಅಶಾಂತಿಯ ಆಗರವಾಯಿತು. ತೆರಿಗೆಯ ಹೊಡೆತಕ್ಕೆ ಹೆದರಿ ರೈತರು ಗುಳೆಹೋದರು. ಇದೇ ಪರಿಸ್ಥಿತಿ ೧೮೧೮ರ ವರೆಗೂ ಮುಂದುವರೆಯಿತು.[೧೮೦]

ಮರಾಠರ ಕೊನೆಯ ಪೇಶ್ವೆ ಬಾಜಿರಾಯನ (೧೭೯೭-೧೮೧೭) ಅಧಿಕಾರವಧಿಯಲ್ಲಿ ಸುಲಿಗೆ ಲೂಟಿಗಳು ದೈನಂದಿನ ಚಟುವಟಿಕೆಗಳಾಗಿದ್ದು ಅಶಾಂತಿ ತಾಂಡವವಾಡುತ್ತಿತ್ತು. ಅದೂ ಸಾಲದೆಂಬಂತೆ ಪೇಶ್ವೆಗಳ ಅಧೀನರಾದ ಜಾಗೀರದಾರರು ತಮ್ಮ ತಮ್ಮಲ್ಲೇ ಕಚ್ಚಾಡುತ್ತಿದ್ದರು. ಬಾದಾಮಿಯ ಮಾಧವರಾಯ ರಾಸ್ತಿಯ, ಆಲಮೇಲ, ಇಂಡಿ, ತಂಬಗಳ ಮೂಲಾಜಿ ಘೋರ್ಪಡೆ, ಬಾಗೇವಾಡಿ ವಿಜಯಪುರಗಳ ಪರಶುರಾಮ ಪಂಡಿತ ಪ್ರತಿನಿಧಿ, ಮದಕವಿ, ಹುನಗುಂದಗಳ ಗಣಪತಿರಾವ್ ಪೆನ್ಸೆ ಹಾಗೂ ಗಜೇಂದ್ರಗಢದ ದೌಲತ್‌ರಾವ ಘೋರ್ಪಡೆಗಳೇ ಕಚ್ಚಾಟದಲ್ಲಿ ತೊಡಗಿದ್ದ ಪ್ರಮುಖ ಮರಾಠ ಅಧಿಕಾರಿಗಳಾಗಿದ್ದರು.

ಸುರಪುರದ ನಾಯಕರು ೧೮೦೨ರಲ್ಲಿ ನಾಲತವಾಡಕ್ಕೆ ನುಗ್ಗಿ ಲೂಟಿ ಮಾಡಿದರು. ನಾನಾ ಫಡ್ನವಿಸ್‌ಗೆ ಸೇರಿದ್ದ ಬಾಗೇವಾಡಿ, ವಿಜಾಪುರ ಮುಂತಾದ ಜಹಗೀರುಗಳ ವಾರಸುದಾರಿಕೆ ತನ್ನದೆಂದು ಪರಶುರಾಮ ಶ್ರೀನಿವಾಸ ಪ್ರತಿನಿಧಿ ೧೮೦೬ರಲ್ಲಿ ಘೋಷಿಸಿದನು. ಇವನ ಹಕ್ಕನ್ನು ಅವನ ತಾಯಿ ಪ್ರಶ್ನಿಸಿ, ಪೇಶ್ವೆ ಬಾಜಿರಾಯನ ನೆರವಿನೊಂದಿಗೆ ನಿಯಂತ್ರಿಸಲು ಯತ್ನಿಸಿದಳು. ಆದರೆ ಪರಶುರಾಮನು ಬಾಜಿರಾಯನ ಗೌರ್ನರನಾದ ಬಾಬು ಗೋಖಲೆಗೆ ಸೋತು ಕೈಸೆರೆಯಾದನು. ಬಾಜಿರಾಯನಿಗೆ ನಿಷ್ಠೆ ತೋರಲು ಒಪ್ಪಿದ ಇವನು ತನ್ನ ಜಹಗೀರಿನ ಸ್ವಲ್ಪ ಭಾಗವನ್ನು ಪಡೆದನು. ಬಾಬು ಗೋಖಲೆಗೆ ಬಾಗೇವಾಡಿ ಜಹಗೀರು ಲಭಿಸಿತು. ಅವನು ತನ್ನ ಜಹಗೀರನಲ್ಲಿ ದುರಾಡಳಿತದಲ್ಲಿ ತೊಡಗಿದ್ದರ ಪರಿಣಾಮವಾಗಿ ಗ್ರಾಮಗಳು ಪಾಳುಬಿದ್ದವು. ಸುಮಾರು ೧೮೦೮ರಲ್ಲಿ ವಿಜಯಪುರಕ್ಕೆ ಭೇಟಿ ನೀಡಿದ್ದ ಸರ್ ಜೇಮ್ಸ್ ಮ್ಯಾಕಿನ್‌ತೋಷನು ಉತ್ತರ ವಿಜಯಪುರ ಪ್ರದೇಶ ಬರಡು ಬಿದ್ದಿದ್ದ ಅಂಶವನ್ನು ದಾಖಲಿಸಿದ್ದಾನೆ ಮತ್ತೆ ಬ್ರಿಟಿಷ ಸರಕಾರದ ಸಲಹೆಯಂತೆ,

ಬಾಗೇವಾಡಿ, ಮಸಕನಾಳ ಹಾಗೂ ಗಿರಿನಾಳಗಳನ್ನು ಹೊರತುಪಡಿಸಿ ಬಾಗೇವಾಡಿ ಪ್ರದೇಶವನ್ನು ಪರಶುರಾಮನಿಗೆ ಪುನಃ ಜಹಗೀರಾಗಿ ಮರಾಠರು ನೀಡಬೇಕಾಯಿತು. ೧೮೧೭ರ ಪೂನಾ ಒಪ್ಪಂದದ ನಂತರ ಮಾಧವರಾವ ರಾಸ್ತಿಯನಿಗೆ ಮುದ್ದೇಬಿಹಾಳ ಹಾಗೂ ಉತ್ತರ ವಿಜಯಪುರಗಳಲ್ಲಿದ್ದ ಅವನ ಜಹಗೀರುಗಳನ್ನು ಮತ್ತೆ ನೀಡಲಾಯಿತು. ಒಂದು ಸ್ಥಿರವಾದ ಕೇಂದ್ರ ಪ್ರಭುತ್ವ ಇಲ್ಲದ ಈ ಪ್ರದೇಶದಲ್ಲಿ ಮರಾಠರ ಹಾಗೂ ನಿಜಾಮರ ಆಡಳಿತದಲ್ಲಿ ಅವರ ಸೈನ್ಯದ ದಾಳಿ, ಜಹಗೀರುದಾರರ ಸುಲಿಗೆ, ಕಂದಾಯ ಗುತ್ತಿಗೆದಾರರ ಕಾಟ, ಮತ್ತು ಬಲತ್ಕಾರದ ಅಹಿತಕರ ಚಟುವಟಿಕೆಗಳಿಂದ ವಿಜಾಪುರ ಪ್ರದೇಶದಲ್ಲಿ ಅಶಾಂತಿಯು ತಲೆದೂರಿತ್ತು.[೧೮೧] ಬುಸಾತಿನೆ ಸಲಾತೀನ ಗ್ರಂಥದಲ್ಲಿ ಬುದ್ಧಿವಂತರು, ತಿಳವಳಿಕೆ ಉಳ್ಳವರು ಮತ್ತು ನ್ಯಾಯದಿಂದ ನಡೆಯುವವರೂ ಆದ ಇಂಗ್ರೇಜಿ ಸರಕಾರದ ಕೈಗೆ ವಿಜಯಪುರ ಪ್ರದೇಶವು ಒಳಪಟ್ಟಿದ್ದು ನೆಮ್ಮದಿಯ ನಿಟ್ಟುಸಿರು ಬಿಟ್ಟಂತಾಗಿದೆ ಎಂದು ಒಂದುಕಡೆ ಗ್ರಂಥಕಾರನು ಉಲ್ಲೇಖಿಸುತ್ತಾನೆ. ಇದರಿಂದ ಮರಾಠರ ಆಡಳಿತಾವಧಿಯಲ್ಲಿ ರಾಜಕೀಯ ಅವ್ಯವಸ್ಥೆ ಎಷ್ಟು ಕ್ರೂರವಾಗಿತ್ತು ಎಂದು ತಿಳಿಯಬಹುದು.

ಪ್ರಾದೇಶಿಕ ಸಂಸ್ಥಾನಗಳು

ಮರಾಠ ಮತ್ತು ನಿಜಾಮರ ಅವಧಿಯಲ್ಲಿ ಅಸ್ಥಿತ್ವದಲ್ಲಿ ಬಂದ ಕೆಲವು ಸಂಸ್ಥಾನಗಳು ಸ್ವಾತಂತ್ರ್ಯ ಪೂರ್ವದಲ್ಲಿ ವಿಜಯಪುರದ ವಿವಿಧ ಭಾಗಗಳಲ್ಲಿ ರಾಜಕೀಯ ಪ್ರಾಬಲ್ಯತೆಯನ್ನು ಹೊಂದಿದ್ದವು. ಅವುಗಳಲ್ಲಿ ಜಮಖಂಡಿ, ಮುಧೋಳ ಮತ್ತು ಸವಣೂರು ಮುಖ್ಯವಾಗಿದ್ದವು. ಇವುಗಳಲ್ಲದೆ ಅವಿಭಜಿತ ಜಿಲ್ಲೆಯ ತೇರದಾಳ, ರಬಕವಿ ಸೇರಿದಂತೆ ೧೩ ಗ್ರಾಮಗಳು ಸಾಂಗಲಿ ಸಂಸ್ಥಾನಕ್ಕೆ, ೧೭ ಹಳ್ಳಿಗಳು ಚಾಂದ್ ಸಂಸ್ಥಾನಕ್ಕೆ, ೯ ಗ್ರಾಮಗಳು ಹಿರಿಯ ಕುರಂದವಾಡ ಸಂಸ್ಥಾನಕ್ಕೆ ಮತ್ತು ಕೆಲವು ಭಾಗ ರಾಮದುರ್ಗ ಸಂಸ್ಥಾನಕ್ಕೂ ಸೇರಿದ್ದವು.[೧೮೩] ಇವೆಲ್ಲವೂ ಮರಾಠಿ ಮೂಲದ ಸಂಸ್ಥಾನಗಳಾಗಿದ್ದವು. ಸಹಜವಾಗಿ ಅಲ್ಲಿ ಮರಾಠಿ ಭಾಷೆಯು ಆಳುವ ವರ್ಗದ ಭಾಷೆಯಾಗಿತ್ತು. ರಾಜಕೀಯ ಅಸ್ಥಿರತೆ, ಆರ್ಥಿಕ ಅಭದ್ರತೆಗಳ ಜೊತೆ ವಿಜಯಪುರ ಪ್ರದೇಶವು ಭಾಷಾ ದಬ್ಬಾಳಿಕೆಗೂ ಒಳಗಾಯಿತು.

ಬ್ರಿಟಿಷರ್ ಆಡಳಿತ

ಬ್ರಿಟಿಷರು ಸುಮಾರು ೧೮೦೦ರ ವೇಳೆಗೆ ಭಾರತದಲ್ಲಿ ಪ್ರಬಲ ರಾಜಕೀಯ ಶಕ್ತಿಯಾಗಿ ರೂಪಿತಗೊಂಡಿದ್ದರು. ೧೮೧೮ ಮೇ ೧೭ರಂದು ಜನರಲ್ ಮನ್ರೋ ಪ್ರಬಲ ಸೈನ್ಯದೊಂದಿಗೆ ಮರಾಠರ ಮೇಲೆ ಮುತ್ತಿಗೆಹಾಕಿ ಸೋಲಿಸಿದನು. ಇದರೊಂದಿಗೆ ವಿಜಯಪುರ ಪ್ರದೇಶವು

ಸಂಪೂರ್ಣವಾಗಿ ಬ್ರಿಟಿಷರ ವಶವಾಯಿತು. ವಸಾಹತುಶಾಹಿ ಆಳ್ವಿಕೆಯಲ್ಲೂ ವಿಜಯಪುರ ಪ್ರದೇಶವು ಅನೇಕ ಬಗೆಯ ರಾಜಕೀಯ ಮತ್ತು ಆಡಳಿತಾತ್ಮಕ ಬದಲಾವಣೆಗಳಿಗೆ ಒಳಗಾಗಬೇಕಾಯಿತು. ಕ್ರಿ.ಶ. ೧೮೧೮ರಲ್ಲಿ ಪೇಶ್ವೆಗಳ ಅವನತಿಯಿಂದಾಗಿ ವಿಜಯಪುರ ಪ್ರದೇಶ ಸಾತಾರ ರಾಜನ ಅಧೀನವಾಯಿತು. ಸಾತಾರದ ರಾಜ ಛತ್ರಪತಿ ಶಹಜಿಯು ಗಂಡು ಸಂತತಿ ಇಲ್ಲದೆ ಕ್ರಿ.ಶ. ೧೮೪೮ರಲ್ಲಿ ಮರಣಹೊಂದಿದಾಗ ಈ ಪ್ರದೇಶವೆಲ್ಲ ಬ್ರಿಟಿಷರ ವಶವಾಯಿತು ಹಾಗೂ ಸಾತಾರ ಜಿಲ್ಲೆಯಲ್ಲಿಯ ವಿಜಯಪುರ ಒಂದು ಹಳ್ಳಿ ಎನಿಸಿತು. ಆಡಳಿತದ ದೃಷ್ಟಿಯಿಂದಾಗಿ ಸಾತಾರ ಜಿಲ್ಲೆಯ ವಿಜಯಪುರ ಹಳ್ಳಿಯು ಕ್ರಿ.ಶ. ೧೮೬೩ರಲ್ಲಿ ಸೋಲಾಪುರ ಜಿಲ್ಲೆಗೆ ವರ್ಗಾವಣೆಯಾಯಿತು. ಮರುವರುಷ ದಕ್ಷಿಣ ವಿಭಾಗಗಳ ಕಂದಾಯ ವಿಭಾಗಾಧಿಕಾರಿಯಾಗಿ ಆಗಮಿಸಿದ ಮಿ॥ ಡಬ್ಲು ಹಾರ್ಥ್ ಎಂಬ ಬ್ರಿಟಿಷ್ ಅಧಿಕಾರಿಯು ಆಡಳಿತದ ಅನುಕೂಲತೆಗಾಗಿ ಹೊಸ ಜಿಲ್ಲೆಯ ರಚನೆಗಾಗಿ ಶಿಫಾರಸ್ಸು ಮಾಡಿದನು. ಆತನ ಶಿಫಾರಸ್ಸಿನಂತೆ ದಿನಾಂಕ: ೦೧.೧೨.೧೮೬೪ರಲ್ಲಿ ಎಂಟು ತಾಲೂಕುಗಳುಳ್ಳ ಕಲಾದಗಿ ಜಿಲ್ಲೆ ನಿರ್ಮಾಣವಾಯಿತು. ಹೊಸ ಜಿಲ್ಲಾ ವ್ಯಾಪ್ತಿಗೊಳಪಟ್ಟ ತಾಲೂಕುಗಳೆಂದರೆ ಹಿಪ್ಪರಗಿ, ಮನಗೂಳಿ, ಇಂಡಿ, ವಿಜಯಪುರ, ಬಾದಾಮಿ, ಬಾಗಲಕೋಟ, ಮುದ್ದೇಬಿಹಾಳ ಹಾಗೂ ಹುನಗುಂದಗಳು. ವಿಜಯಪುರದಲ್ಲಿ ಹಾಳು ಬಿದ್ದ ವಿಶಾಲ ಕಟ್ಟಡಗಳನ್ನು ಅಂದಿನ ದಕ್ಷಿಣ ವಿಭಾಗದ ಸುಪರೀಟೆಂಡೆಂಟ್ ಇಂಜಿನಿಯರ್ ಕರ್ನಲ್ ಸೇಂಟ್ ಕ್ಲೇರ್ ವಿಲ್ಕಿನ್ಸ್ ಎಂಬುವನು ಕ್ರಿ.ಶ. ೧೮೭೬ರಲ್ಲಿ ವಿಜಯಪುರ ನಗರವನ್ನು ಜಿಲ್ಲಾ ಸ್ಥಳಕ್ಕಾಗಿ ಶಿಫಾರಸ್ಸು ಮಾಡಿದ. ಅಲ್ಲಿಯ ಕಟ್ಟಡಗಳನ್ನು ದುರಸ್ತಿಮಾಡಿಸಿ ಕೊನೆಗೆ ಕ್ರಿ.ಶ. ೧೮೮೫ರಲ್ಲಿ ವಿಜಯಪುರವು ಜಿಲ್ಲಾ ಸ್ಥಳವಾಗಿ ಮಾರ್ಪಪಟ್ಟಿತು.[೧೪೩]

ಸಿಂದಗಿ ಬಂಡಾಯ

ಸಿಂದಗಿಯಲ್ಲಿ ೧೮೨೪ರಲ್ಲಿ ಬ್ರಿಟಿಷರ ಕಂದಾಯ ನೀತಿಯ ವಿರುದ್ಧ ಚಿದಂಬರ ದೀಕ್ಷಿತರ ಮುಂದಾಳತ್ವದಲ್ಲಿ ಬಂಡಾಯ ಬಾವುಟ ಹಾರಿಸಲಾಯಿತು. ಈಸ್ಟ್ ಇಂಡಿಯಾ ಕಂಪನಿ ಆಡಳಿತ ಕೊನೆಗೊಂಡಿದೆ ಈಗ ನಾವು ಸ್ವತಂತ್ರರು ಎಂದು ಘೋಷಿಸುವುದರ ಮೂಲಕ ಸಿಂದಗಿಯ ಜನರಲ್ಲಿ ಪ್ರತಿಭಟನೆಗೆ ಉತ್ಸಾಹ ತುಂಬಿದರು. ಚಿದಂಬರ ದೀಕ್ಷಿತ್ ಅವರ ಮಗ ದಿವಾಕರ ದೀಕ್ಷಿತ, ರಾವಜಿ ರಾಸ್ತಿಯ, ಬಾಳಪ್ಪ ದೇಶಪಾಂಡೆ, ಟಕ್ಕಳಿಯ ಶೆಟ್ಟಿಯಪ್ಪ ಮಂತಾದವರು ಈ ಬಂಡಾಯದಲ್ಲಿ ಪ್ರಧಾನ ಪಾತ್ರ ವಹಿಸಿದ್ದರು. ಆದರೆ ಸ್ಥಳೀಯ ವ್ಯಕ್ತಿ ಅಣ್ಣಪ್ಪ ಪಟ್ನೆ ನೀಡಿದ ಮಾಹಿತಿಯನ್ನಾಧರಿಸಿ ಧಾರವಾಡದ ಕಲೆಕ್ಟರ ದಿಕ್ಷೀತರನ್ನು ಬಂಧಿಸಿದರು. ಅಣ್ಣಪ್ಪ ಆಂಗ್ಲರಿಗೆ ಸಹಕರಿಸಿದ್ದಾನೆಂಬ ಕಾರಣದಿಂದ ದಂಗೆಕೋರರು ಆತನನ್ನು ಕೊಂದರು.[೧೪೪]

೧೮೫೭ ರ ಬಂಡಾಯ

೧೮೫೭ರ ಬಂಡಾಯದ ಪ್ರತಿಧ್ವನಿಯು ಕರ್ನಾಟಕದಲ್ಲಿಯೂ ಮೊಳಗಿತು. ಈ ಸಂದರ್ಭದಲ್ಲಿ ಮುಂಬೈ ಕರ್ನಾಟಕದಲ್ಲಿ ನರಗುಂದದ ಬಾಬಾ ಸಾಹೇಬ್, ಸುರಪುರದ ವೆಂಕಟಪ್ಪ ನಾಯಕ, ಜಮಖಂಡಿಯ ಭೋಟುಸಿಂಗ ಮುಂತಾದವರ ಮೂಲಕ ದಂಗೆ ತಯಾರಿ ಗುಪ್ತಗಾಮಿಯಾಗಿ ನಡೆದಿತ್ತು. ಸುರಪುರ ವೆಂಕಟಪ್ಪ ನಾಯಕನ ಸಲಹೆಯಂತೆ ವಿಜಯಪುರದ ಜಂಬಗಿ ಮತ್ತು ಕೋಟ್ನಾಳದ ಬಸಲಿಂಗಪ್ಪ ದೇಶಮುಖರು ಕ್ರಾಂತಿಕಾರರಿಗೆ ಬೆಂಬಲ ಮತ್ತು ಮದ್ದುಗುಂಡುಗಳನ್ನು ಸರಬರಾಜು ಮಾಡಲು ಒಪ್ಪಿಕೊಂಡರು. ದುರಾದೃಷ್ಟವಶಾತ್ ೧೮೫೮ರ ಜನೇವರಿ ಸುಮಾರಿನಲ್ಲಿ ಸೋಲಾಪುರ ಕಲೆಕ್ಟರಗೆ ವಿಷಯಗೊತ್ತಾಗಿ ಜಂಬಗಿ ದೇಶಮುಖ ಬಸಲಿಂಗಪ್ಪ ಮತ್ತು ಆತನ ಮಗ ಇಬ್ಬರನ್ನು ಬಂಧಿಸಿ. ಸೋಲಾಪುರದಲ್ಲಿ ಗಲ್ಲಿಗೇರಿಸಲಾಯಿತು.[೧೮೫]

ಸ್ವಾತಂತ್ರ್ಯ ಸಂಗ್ರಾಮ

೧೮೧೮ರ ಆರಂಭದ ಅವಧಿಯಲ್ಲಿ ಮರಾಠ, ನಿಜಾಮರಿಂದ ಬೇಸತ್ತಿದ್ದ ಜನತೆಗೆ ಈ ಬದಲಾವಣೆ ಆರಂಭದಲ್ಲಿ ಅಪ್ಯಾಯಮಾನವೆನಿಸಿದರೂ ಅವರ ವಸಾಹತುಶಾಹಿ ಧೋರಣೆಗಳು ಕ್ರಮೇಣ, ಜನರಲ್ಲಿ ಬ್ರಿಟಿಷ್ ವಿರೋಧಿ ಭಾವನೆಗಳನ್ನು ರೂಪಿಸುವಲ್ಲಿ ನೆರವಾದವು. ಬ್ರಿಟಿಷರ ಆಡಳಿತಾತ್ಮಕ ಕ್ರಮಗಳು ಪ್ರತ್ಯಕ್ಷವಾಗಿ ಅಲ್ಲದಿದ್ದರೂ, ಪರೋಕ್ಷವಾಗಿ ಸ್ಥಳೀಕರಲ್ಲಿ ರಾಷ್ಟ್ರೀಯ ಜಾಗೃತಿಯನ್ನು ಮೂಡಿಸುವಲ್ಲಿ ನೆರವಾದವು. ಹೀಗೆ ರೂಪಿತಗೊಂಡ ಬ್ರಿಟೀಷ ವಿರೋಧಿ ಭಾವನೆಗಳಿಂದ ವಿಜಯಪುರ ಜಿಲ್ಲೆಯಾದ್ಯಂತ ಚಳುವಳಿ ಹರಡಿಕೊಂಡಿತು.

ವಿಜಯಪುರ ಜಿಲ್ಲೆಯಲ್ಲಿ ಸ್ವರಾಜ್ಯ ಅಥವಾ ಸ್ವಾತಂತ್ರ್ಯ ಚಳುವಳಿಗೆ ಓಂ ಪ್ರಥಮ ಶ್ರೀಕಾರ ಹಾಕಿದವರು ಶ್ರೀನಿವಾಸ ಕೌಜಲಗಿಯವರು. ಇವರು ವಿಜಯಪುರ ವಿಭಾಗದಲ್ಲಿ ಬ್ರಿಟಿಷರಿಗೆ ಸಿಂಹಸ್ವಪ್ನವಾಗಿ ಮೆರೆದರು. ಗಾಂಧೀ ಅಸಹಕಾರ ಚಳುವಳಿ ಸಾರಿದ ಕೂಡಲೆ ವಕೀಲಿ ವೃತ್ತಿಗೆ ಶರಣು ಹೊಡೆದು ಚಳುವಳಿ ಪ್ರಚಾರಕ್ಕೆಂದೆ ಸಂಪೂರ್ಣ ತಮ್ಮನ್ನು ಮೀಸಲಾಗಿಟ್ಟುಕೊಂಡು ಕರ್ನಾಟಕದ ಎಲ್ಲ ಸ್ಥಳಗಳಿಗೂ ಬೇಟಿ ನೀಡುತ್ತ ಸ್ವಾತಂತ್ರ ಚಳುವಳಿಯ ಜಾಗೃತಿಯನ್ನುಂಟು ಮಾಡಿದರು. ಇವರ ಪ್ರೇರಣೆಯಿಂದ ಮುದ್ದೇಬಿಹಾಳದಲ್ಲಿ ದೊಡ್ಡಿಹಾಳ ಅಣ್ಣಾರಾವ್, ವಿಜಯಪುರದಲ್ಲಿ ಹಣಮಂತರಾವ್ ಕೌಜಲಗಿ, ತಿಳಗೂಳ ರಂಗರಾವ ಮತ್ತು ಜಯರಾವ್ ದೇಶಪಾಂಡೆ ಮೊದಲಾದವರು ವಕೀಲಿ ವೃತ್ತಿ ಬಿಟ್ಟು ಚಳುವಳಿಯಲ್ಲಿ ಧುಮುಕಿದರು. ಕೌಜಲಗಿ ಹಣಮಂತರಾಯರು ಗಾಂಧೀ ಚಳುವಳಿಯ ಇನ್ನೊಂದು ಮುಖವಾದ ಚರಕಾ, ಖಾದಿ, ಸ್ವದೇಶಿ

ವಸ್ತುಗಳ ಬಳಕೆ ಕುರಿತು ವ್ಯಾಪಕ ಪ್ರಚಾರ ಮಾಡಿದರು. ಇದೇ ಕಾಲಾವಧಿಯಲ್ಲಿ ಮೊಹರೆ ಹಣಮಂತರಾಯರೇ ಜಿಲ್ಲೆಯ ನಾಯಕರಾಗಿ, ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ, ಕಾರ್ಯದರ್ಶಿಯಾಗಿ ಹೋರಾಟದ ಶಾಂತಿಕಾಲದಲ್ಲಿ ಕಾಂಗ್ರೆಸ್ ಸಂಘಟನೆಯ ಮೂಲಕ ಚಳುವಳಿಯನ್ನು ನಡೆಸಿಕೊಂಡು ಬಂದರು. ಇವರು ಬೆಳಗಾವಿಯಲ್ಲಿ ಸಂಯುಕ್ತ ಕರ್ನಾಟಕ ಪತ್ರಿಕೆಯ ಸಂಪಾದಕರಾಗಿ ವಿಶಾಲವಾದ ಕ್ಷೇತ್ರದ ಸೇವೆಗೆ ಹೊರಟುಹೋದರು. ಅನಂತರ ವಿಜಯಪುರದಲ್ಲಿ ಹೊಸ ಧುರೀಣತ್ವದ ಸಮೀಕರಣ ನಡೆದು ಚನ್ನಬಸಪ್ಪಾ ಅಂಬಲಿ, ಸ.ಚ. ಮಿರ್ಜಿ, ರಾಜಾರಾಮ ದುಬೆ, ಮರುಳಾರಾಧ್ಯ ಶಾಸ್ತ್ರಿ ಇವರುಗಳು ಧುರೀಣತ್ವವನ್ನು ವಹಿಸಿ ಕಾಂಗ್ರೆಸ್ ಕಮಿಟಿ ಅಧ್ಯಕ್ಷ, ಕಾರ್ಯದರ್ಶಿಗಳಾಗಿ ಚಳುವಳಿಯನ್ನು ಮುಂದುವರೆಸಿಕೊಂಡು ಬಂದರು. ಇವರಿಂದ ಚಳುವಳಿಯಲ್ಲಿ ಮೆಲ್ಲಗೆ ಜನಸಾಮಾನ್ಯರು ಕೂಡಾ ಭಾಗವಹಿಸುವಂತಾಯಿತು. ಹೀಗಾಗಿ ಇಂಡಿ ಭಾಗದಲ್ಲಿ ಸುರಪುರ ಮಲ್ಲಪ್ಪ, ಜೀವರಾಜ ಜೋಶಿ, . ವಿಜಯಪುರದಲ್ಲಿ ಗಣಪತಚಂದ ಶಹಾ, ಎಮ್.ಎನ್. ಶಹಾ, ಹಿರಾಲಾಲ್ ಶಹಾ, ತಾಳಿಕೋಟೆಯಲ್ಲಿ ಶಿವಬಸವ ಪಟ್ಟದದೇವರು, ಮುದ್ದೇಬಿಹಾಳದಲ್ಲಿ ಮೋಟಗಿ ವರ್ತಕರು, ಮೊದಲಾದ ಕಾರ್ಯಕರ್ತರು ಉದ್ಭವಿಸಿ ಸ್ವಾತಂತ್ರ ಚಳುವಳಿಗೆ ವಿಸ್ತೃತವಾದ ಆಳವಾದ ನೆಲೆಯನ್ನುಂಟು ಮಾಡಿದರು.[೧೪೬] ಈ ಎಲ್ಲ ಊರುಗಳಲ್ಲಿ ಗಾಂಧೀ ಚಳುವಳಿಯ ಕಾರ್ಯಕ್ರಮಗಳಲ್ಲಿ ಅಸಹಕಾರದಲ್ಲಿ ಶಾಲೆ ಬಿಡುವುದು, ಖಾದಿ ಧರಿಸುವುದು, ರಾಟಿ ಸಂಖ್ಯೆ ಹೆಚ್ಚಿಸುವುದು, ಈಚಲಗಿಡ ಕಡಿಯುವುದು, ಉಪ್ಪು ತಯಾರಿಸುವುದು ಇವೇ ಮೊದಲಾದ ಎಲ್ಲ ಕಾರ್ಯಕ್ರಮಗಳನ್ನು ಒಳ್ಳೆ ಧೈರ್ಯದಿಂದ ಆಸ್ಥೆಯಿಂದ ನಡೆಸಿ ಹಿಂಡು ಗಟ್ಟಲೆ ಜನರು ಜೈಲಿಗೆ ಹೋಗುವುದು ಸಾಮಾನ್ಯವಾಗಿತ್ತು. ೧೯೪೭ ಆಗಸ್ಟ್ ೧೫ರಂದು ಭಾರತ ಸ್ವಾತಂತ್ರ್ಯಗಳಿಸಿತು ಅಂದು ನಾಡಿನಾದ್ಯಂತ ಗ್ರಾಮ ಪಟ್ಟಣಗಳಲ್ಲಿ ತ್ರಿವರ್ಣ ಧ್ವಜ ಹಾರಾಡಿದವು. ಕಾಕಾ ಕಾರಖಾನೀಸರು ವಿಜಯಪುರದ ರೇಡಿಯೋ ಮೈದಾನದಲ್ಲಿ ತ್ರಿವರ್ಣ ಧ್ವಜ ಹಾರಿಸಿ ಭಾಷಣ ಮಾಡಿದ ಸಂಧರ್ಭದಲ್ಲಿ ಸುಗಂದಿ ಮುರುಗೆಪ್ಪ, ಕಮುನಿಸ್ಟ್ ನಾಯಕ ಎನ್.ಕೆ. ಉಪಾಧ್ಯಾಯ ಮುಂತಾದವರು ಸಭೆಯಲ್ಲಿದ್ದರು. ಜಿಲ್ಲೆಯಾದ್ಯಂತ ಎಲ್ಲೆಡೆ ಸಂಭ್ರಮದಿಂದ ಸಭೆಗಳು ನಡೆದು ಧ್ವಜಾರೋಹಣ ಮಾಡಲಾಯಿತು.

ಸ್ವಾತಂತ್ರ್ಯಾನಂತರ ಮುಂಬೈ ಪ್ರಾಂತದ ಭಾಗವಾಗಿದ್ದ ವಿಜಯಪುರ ಜಿಲ್ಲೆಯು ೧೯೫೬ರಲ್ಲಿ ಏಕೀಕರಣೋತ್ತರ ಕರ್ನಾಟಕಕ್ಕೆ ವರ್ಗಾವಣೆಯಾಯಿತು. ಭೌಗೋಳಿಕ ವಿಸ್ತೀರ್ಣದಲ್ಲಿ ರಾಜ್ಯದಲ್ಲಿ ವಿಜಯಪುರವು ಅತಿ ದೊಡ್ಡ ಜಿಲ್ಲೆಯಾಗಿತ್ತು. ಜಿಲ್ಲೆಯ ಅಭಿವೃದ್ಧಿ ದೃಷ್ಟಿಯಿಂದ ಒಟ್ಟು ಹನ್ನೊಂದು ತಾಲೂಕುಗಳನ್ನು ಹೊಂದಿದ್ದ ವಿಜಯಪುರ ಜಿಲ್ಲೆಯನ್ನು ೧೯೯೭ರಲ್ಲಿ ವಿಭಜಿಸಲಾಯಿತು. ಬಸವನಬಾಗೇವಾಡಿ, ವಿಜಯಪುರ, ಇಂಡಿ, ಮುದ್ದೇಬಿಹಾಳ ಮತ್ತು ಸಿಂದಗಿ ತಾಲೂಕುಗಳನ್ನು

ಸೇರಿಸಿ ವಿಜಯಪುರ ಜಿಲ್ಲೆಯನ್ನು ಉಳಿದ ಬದಾಮಿ, ಜಮಖಂಡಿ, ಮುಧೋಳ, ಬೀಳಗಿ ಹುನಗುಂದ ಮತ್ತು ಬಾಗಲಕೋಟೆ ತಾಲೂಕುಗಳನ್ನು ಸೇರಿಸಿ ಬಾಗಲಕೋಟೆ ಜಿಲ್ಲೆಯನ್ನು ರಚಿಸಲಾಯಿತು.

ಕೊನೆ ಟಿಪ್ಪಣಿಗಳು

೧. ಮಂಜುನಾಥ ಎಸ್. ಪಾಟೀಲ, ೨೦೧೭, ವಿಜಾಪುರ ಜಿಲ್ಲೆಯ ರಕ್ಷಣಾ ವಾಸ್ತುಶಿಲ್ಪ, ಪು. ೨೦

೨. ಮುನಿಸ್ವಾಮಿ ಆರ್. (ಸಂ.), ೧೯೯೯, ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ವಿಜಾಪುರ ಜಿಲ್ಲೆ, ಪು.೨೬

೩. ಮುನಿಸ್ವಾಮಿ ಆರ್. (ಸಂ.), ೧೯೯೯, ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ವಿಜಾಪುರ ಜಿಲ್ಲೆ, ಪು. ೦೬ ರಿಂದ ೧೬

೪. www.wikimapia

೫. ಮುನಿಸ್ವಾಮಿ ಆರ್. (ಸಂ.), ೧೯೯೯, ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ವಿಜಾಪುರ ಜಿಲ್ಲೆ, ಪು. ೩೦

೬. ಅದೇ, ಪು.

೭. ಮಂಜುನಾಥ ಎಸ್. ಪಾಟೀಲ, ೨೦೧೭, ಪೂರ್ವೋಕ್ತ, ಪು.೧೫

೮. ಮಂಜುನಾಥ ಎಸ್. ಪಾಟೀಲ, ೨೦೧೭, ಪೂರ್ವೋಕ್ತ, ಪು.

೯. ಕಡಕೋಳ ಎಚ್.ಎಮ್., (ಸಂ.), ೨೦೧೦, ಬಿಜಾಪುರ ಜಿಲ್ಲಾ ಸಾಂಸ್ಕೃತಿಕ ಪರಂಪರೆ, ಪು.೧೩

೧೦. ಶಿವತಾರಕ್, ಕೆ.ಬಿ., ೨೦೦೧, ಕರ್ನಾಟಕದ ಪುರಾತತ್ವ ನೆಲೆಗಳು, ಪು.೪

೧೧. ಮಂಜುನಾಥ ಎಸ್. ಪಾಟೀಲ, ೨೦೧೭, ಪೂರ್ವೋಕ್ತ, ಪು.

೧೨. ವಾಸುದೇವ ಬಡಿಗೇರ (ಸಂ.), ೨೦೧೦, ಬಸವನ ಬಾಗೇವಾಡಿ, ಪು.೫

೧೩. ಕಡಕೋಳ ಎಚ್.ಎಂ. (ಸಂ.), ೨೦೧೦, ಬಿಜಾಪುರ ಜಿಲ್ಲಾ ಸಾಂಸ್ಕೃತಿಕ ಪರಂಪರೆ, ಪು.೩೦

೧೪. ವಾಸುದೇವ ಬಡಿಗೇರ (ಸಂ.), ೨೦೧೦, ಪೂರ್ವೋಕ್ತ, ಪು.೪

೧೫. ಶಿವತಾರಕ ಕೆ.ಬಿ., ೨೦೦೧, ಪೂರ್ವೋಕ್ತ, ಪು.೪೧೮–೪೫೦

೧೬. ವಾಸುದೇವ ಬಡಿಗೇರ (ಸಂ.), ೨೦೧೦, ಪೂರ್ವೋಕ್ತ, ಪು.೭–೮

೧೭. ಶಿವತಾರಕ ಕೆ.ಬಿ., ೨೦೦೧, ಪೂರ್ವೋಕ್ತ, ಪು.೪೫೩–೪೫೯

೧೮. ವಾಸುದೇವ ಬಡಿಗೇರ (ಸಂ.), ೨೦೧೦, ಪೂರ್ವೋಕ್ತ, ಪು.೯

೧೯. ವಾಸುದೇವ ಬಡಿಗೇರ (ಸಂ.), ೨೦೧೦, ಪೂರ್ವೋಕ್ತ, ಪು.೧೨

೨೦. ರಮೇಶ ಹೆಚ್., ೨೦೧೭, ಹರಿಹರ ತಾಲೂಕಿನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ, ಪು.೨೮

೨೧. ಮಂಜುನಾಥ ಎಸ್. ಪಾಟೀಲ, ೨೦೧೭, ಪೂರ್ವೋಕ್ತ, ಪು.

೨೨. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂ.೧೦, ಸಂ.೮೪, ಪು.೧೨೯

೨೩. ಕ.ವಿ.ಶಾ.ಸಂ., ಸಂ.೬೧, ಪು. ೨೦೪

೨೪. ಸುಭಾಸ ರಾ. ಚಿಂಚೋಳಿ, ೧೯೯೧, ಪ್ರಾಕ್ತನ ಶಾಸ್ತ್ರದ ಹಿನ್ನೆಲೆಯಲ್ಲಿ ಬಿಜಾಪುರ ಜಿಲ್ಲೆಯಲ್ಲಿರುವ ಕಲ್ಯಾಣ ಚಾಲಕ್ಯರ ಕಾಲದ ವಾಸ್ತು ಮತ್ತು ಶಿಲ್ಪಕಲೆಯ ಅಧ್ಯಯನ, ಪು.೫೦

೨೫. ಕ.ವಿ.ಶಾ.ಸಂ.೧೦., ಸಂ.೭೨, ಪು.೫೦೧

೨೬. ವಾಸುದೇವ ಬಡಿಗೇರ (ಸಂ.), ೨೦೧೦, ಪೂರ್ವೋಕ್ತ, ಪು.೩೯

೨೭. SII., Vol.XVIII, No.೪೦

೨೮. ಕ.ವಿ.ಶಾ.ಸಂ.೧೦., ಸಂ.೮೫, ಪು.೧೩೦

೨೯. ಸುಭಾಸ ರಾ. ಚಿಂಚೋಳಿ, ೧೯೯೯, ಪೂರ್ವೋಕ್ತ, ಪು.೫೧

೩೦. ಕ.ವಿ.ಶಾ.ಸಂ.೧೦., ಸಂ.೪೩, ಪು.೫೫೬

೩೧. ಅದೇ, ಸಂ.೬೧, ಪು.೨೦೪

೩೨. ಕ.ವಿ.ಶಾ.ಸಂ.೧೦., ಸಂ.೬೦, ಪು.೨೦೨

೩೩. ಯಜ್ದಾನಿ ಜಿ., (ಸಂ.), ದಿ ಅರ್ಲಿ ಹಿಸ್ಟರಿ ಆಫ್ ದಿ ಡೆಕ್ಕನ್, ಪು. ೩೩೦

೩೪. ಮಂಜುನಾಥ ಎಸ್. ಪಾಟೀಲ, ೨೦೧೭, ಪೂರ್ವೋಕ್ತ, ಪು.

೩೫. ಅದೇ, ಸಂ.೧೦, ಪು.೨೬೭

೩೬. ಅದೇ, ಸಂ.೨೩, ಪು.೪೧೨

೩೭. ಅದೇ, ಸಂ.೮೨, ಪು.೧೨೬

೩೮. ಅದೇ, ಸಂ.೭೯, ಪು.೩೪೦

೩೯. ಅದೇ, ಸಂ.೫೪, ಪು.೧೯೪

೪೦. ಕ.ವಿ.ಶಾ.ಸಂ.೧೦., ಸಂ.೭೫, ಪು.೧೧೩

೪೧. ಅದೇ, ಸಂ.೫೯, ಪು.೨೦೦

೪೨. ಅದೇ, ಸಂ.೭, ಪು.೧೫

೪೩. ಅದೇ, ಸಂ.೮, ಪು.೨೪೭

೪೪. ಅದೇ, ಸಂ.೬೫, ಪು.೩೨೩

೪೫. ಅದೇ, ಸಂ.೫೪, ಪು.೩೦೮

೪೬. ಅದೇ, ಸಂ.೧೩, ಪು.೨೫

೪೭. ಅದೇ, ಸಂ.೫೩, ಪು.೪೭೬

೪೮. ಅದೇ, ಸಂ.೧೩, ಪು.೪೦೩

೪೯. ಅದೇ, ಸಂ.೭೯, ಪು.೧೨೧

೫೦. ಅದೇ, ಸಂ.೭೭, ಪು.೩೩೮

೫೧. ಅದೇ, ಸಂ.೫೪, ಪು.೩೦೮

೫೨. ಅದೇ, ಸಂ.೧೫, ಪು.೨೫೪

೫೩. ಅದೇ, ಸಂ.೧೫, ಪು.೧೫೪

೫೪. ಕೊಪ್ಪಾ ಎಸ್.ಕೆ., ೧೯೯೦, ಪೂರ್ವೋಕ್ತ, ಪು.೬೦

೫೫. ಕ.ವಿ.ಶಾ.ಸಂ.೧೦., ಸಂ.೪೮, ಪು.೪೬೦

೫೬. ಅದೇ, ಸಂ.೬೯, ಪು.೧೦೩., ಸಂ.೫೩, ಪು.೫೬೮., ಸಂ.೫೩, ಪು.೩೦೭., ಸಂ.೧೦೫, ಪು.೩೮೦., ಸಂ.೫೮, ಪು.೩೧೩., ಸಂ.೬, ಪು.೨೪೫., ಸಂ.೩೭, ಪು.೬೫., ಸಂ.೪೨, ಪು.೭೧., ಸಂ.೭೪, ಪು.೧೧೨., ಸಂ.೬೨, ಪು.೩೧೮., ಸಂ.೯೯, ಪು.೩೭೩., ಸಂ.೧೦೦, ಪು.೩೭೪., ಸಂ.೧೦೧, ಪು.೩೭೬., ಸಂ.೬೭, ಪು.೨೧೧., ಸಂ.೯, ಪು.೫೧೭., ಸಂ.೨೩, ಪು.೨೬೪., ಸಂ.೩೧, ಪು.೨೭೦

೫೭. ಅದೇ, ಸಂ.೩೪, ಪು.೧೭೩, ಸಂ.೨, ಪು.೩೮೭., ಸಂ.೫೨ ಪು.೩೦೬

೫೮. ಅದೇ, ಸಂ.೨೦, ಪು.೨೬೦

೫೯. ಕೊಪ್ಪಾ ಎಸ್.ಕೆ., ೧೯೯೦, ಪೂರ್ವೋಕ್ತ, ಪು.೨೬೦

೬೦. ಕ.ವಿ.ಶಾ.ಸಂ.೧೦., ಸಂ.೫೧, ಪು.೩೦೦., ಸಂ.೪೯, ಪು.೪೬೪

೬೧. ಅದೇ, ಸಂ.೫೧, ಪು.೪೬೯

೬೨. ಅದೇ, ಸಂ.೫೬, ಪು.೩೧೧

೬೩. ಅದೇ, ಸಂ.೧, ಪು.೧., ಸಂ.೨, ಪು.೨., ಸಂ.೩೨, ಪು.೪೨೦., ಸಂ.೪೨, ಪು.೪೪೨., ಸಂ.೬೫, ಪು.೫೮೧., ಸಂ.೬೪, ಪು.೩೨೦

೬೪. SII., Vol.XX, No.೧೩೬

೬೫. ಸುಭಾಸ ರಾ. ಚಿಂಚೋಳಿ., ೧೯೯೯, ಪೂರ್ವೋಕ್ತ, ಪು.೫೪

೬೬. ಅದೇ, ಸಂ.೪೨, ಪು.೨೮೪

೬೭. SII Vol-XV P-೧೩೯

೬೮. ಸುಭಾಸ ರಾ. ಚಿಂಚೋಳಿ., ೧೯೯೯, ಪೂರ್ವೋಕ್ತ, ಪು.೫೪

೬೯. SII Vol-XX P–೪೦

೭೦. SII Vol-XX P-೧೭೦

೭೧. ಸಂಕನಗೌಡ ಎಸ್.ಬಿ. ಮತ್ತು ರವೀಂದ್ರಕೊಪ್ಪ, ೧೯೯೪, ಕರ್ನಾಟಕ ಇತಿಹಾಸ, ಭಾಗ–೧ ಪು.೧೬೦

೭೨. SII Vol-XX P–೧೭೧

೭೩. SII Vol-XX P–೧೯೦

೭೪. SII Vol-XX P–೧೯೧–೯೨

೭೫. SII Vol-XX P-೨೦೬–೦೭

೭೬. SII Vol-XX P–೧೭೦

೭೭. Epigraphia Indica Vol.V P.೨೬

೭೮. Epigraphia Indica Vol.XXXIV P.೨೨೭

೭೯. SII Vol-XV P-೧೮೬–೮೭

೮೦. SII Vol-XV P-೧೮೭–೮೮

೮೧. ದೇಸಾಯಿ. ಪಿ.ಬಿ., ಎ ಹಿಸ್ಟರಿ ಆಫ್ ಕರ್ನಾಟಕ, ಪು.೪೭

೮೨. SII Vol-XV, ನಂ.೪೫)

೮೩. ಮಂಜುನಾಥ ಎಸ್. ಪಾಟೀಲ, ೨೦೧೭, ಪೂರ್ವೋಕ್ತ, ಪು.

೮೪. ಕೊಪ್ಪಾ ಎಸ್.ಕೆ., ೧೯೯೦, ಪೂರ್ವೋಕ್ತ, ಪು.೬೯

೮೫. SII., Vol.XX, No.೧೭೩

೮೬. ಕ.ವಿ.ಶಾ.ಸಂ.೧೦., ಸಂ.೨೮, ಪು.೫೩೬

೮೭. ಅದೇ, ಸಂ.೪೮, ಪು.೫೬೦, ಸಂ.೫೧, ಪು೫೬೨., ಸಂ.೭೧, ಪು.೫೮೫

೮೮. ಅದೇ, ಸಂ.೪೫, ಪು.೪೫೪

೮೯. ಅದೇ, ಸಂ.೨೫, ಪು.೪೯

೯೦. ಅದೇ, ಸಂ.೨೩, ಪು.೧೬೨

೯೧. ಅದೇ, ಸಂ.೭೭, ಪು.೨೨೪

೯೨. SII., Vol.XX, No.೧೭೯

೯೩. ಕ.ವಿ.ಶಾ.ಸಂ.೧೦., ಸಂ.೭೧, ಪು.೩೩೧

೯೪. ಅದೇ, ಸಂ.೫೯, ಪು.೯೧., ಸಂ.೫೨, ಪು.೪೭೪

೯೫. ಕೊಪ್ಪಾ ಎಸ್.ಕೆ., ೧೯೯೦, ಪೂರ್ವೋಕ್ತ, ಪು.೭೦

೯೬. ಕರ್ನಾಟಕ ಪರಂಪರೆ ಸಂ.೧, ೨೦೧೪, ಪು.೪೮೦

೯೭. ಕ.ವಿ.ಶಾ.ಸಂ.೧೦., ಸಂ.೪೬, ಪು.೨೯೧

೯೮. ಅದೇ, ಸಂ.೨೩, ಪು.೪೫

೯೯. ಅದೇ, ಸಂ.೪೬, ಪು.೭೭

೧೦೦. ಅದೇ, ಸಂ.೩೫, ಪು.೨೭೪

೧೦೧. ಅದೇ, ಸಂ.೩೫, ಪು.೪೩೧

೧೦೨. ಅದೇ, ಸಂ.೨೬, ಪು.೪೧೬

೧೦೩. ಅದೇ, ಸಂ.೪೬, ಪು.೭೭, ಸಂ.೭೮, ಪು.೩೨೯., ಸಂ.೬೮, ಪು.೨೧೧., ಸಂ.೩೫, ಪು.೧೭೪

೧೦೪. ಕೊಪ್ಪಾ ಎಸ್.ಕೆ., ೧೯೯೦, ಪೂರ್ವೋಕ್ತ, ಪು.೧೮೮

೧೦೫. ನರಸಿಂಹಮೂರ್ತಿ ಎ.ವಿ., ೨೦೧೦, ಕರ್ನಾಟಕದ ಸೇವುಣರ ಇತಿಹಾಸ, ಪು.೭೭

೧೦೬. ಕ.ವಿ.ಶಾ.ಸಂ.೧೦., ಸಂ.೫೪, ಪು.೮೫

೧೦೭. ಅದೇ, ಸಂ.೫೫, ಪು.೮೭

೧೦೮. ಅದೇ, ಸಂ.೩೯, ಪು.೨೭೯

೧೦೯. ಅದೇ, ಸಂ.೫೩, ಪು.೮೪., ಸಂ.೧೯, ಪು.೨೫೯., ಸಂ.೭೪, ಪು.೩೩೫., ಸಂ.೨, ಪು.೨೩೯., ಸಂ.೫೬, ಪು.೪೮೦., ಸಂ.೭೪, ಪು.೫೦೩., ಸಂ.೬೭, ಪು.೫೮೨

೧೧೦. ಅದೇ, ಸಂ.೫೨, ಪು.೫೬೭

೧೧೧. ಅದೇ, ಸಂ.೧೯, ಪು.೧೫೮

೧೧೨. ಅದೇ, ಸಂ.೩೮, ಪು.೬೬., ಸಂ.೯, ಪು.೧೯

೧೧೩. ಅದೇ, ಸಂ.೮೫, ಪು.೩೪೯

೧೧೪. ಅದೇ, ಸಂ.೩೦, ಪು.೧೬೯, ಸಂ.೪೯, ಪು.೧೮೮., ಸಂ.೧೩, ಪು.೧೫೦., ಸಂ.೮೧, ಪು.೧೨೫., ಸಂ.೫೮, ಪು.೫೭೪., ಸಂ.೫೯, ಪು.೫೭೫., ಸಂ.೮೩, ಪು.೩೪೬, ಸಂ.೨೮, ಪು.೫೪., ಸಂ.೬೨, ಪು.೯೪., ಸಂ.೫೭, ಪು.೫೭೩., ಸಂ.೩೨, ಪು.೨೭೦., ಸಂ.೭, ಪು.೨೪೭

೧೧೫. ಅದೇ, ಸಂ.೪, ಪು.೧೪೩

೧೧೬. ಅದೇ, ಸಂ.೨೫, ಪು.೧೬೪

೧೧೭. ಅದೇ, ಸಂ.೬೦, ಪು.೪೮೭

೧೧೮. ಅದೇ, ಸಂ.೩೩, ಪು.೫೪೦

೧೧೯. ಕೊಪ್ಪಾ ಎಸ್.ಕೆ., ೧೯೯೦, ಪೂರ್ವೋಕ್ತ, ಪು.೭೨

೧೨೦. ಕ.ವಿ.ಶಾ.ಸಂ.೧೦., ಸಂ.೮೦, ಪು.೧೨೩

೧೨೧. ಅದೇ, ಸಂ.೩೩, ಪು.೫೪೦

೧೨೨. ಅದೇ, ಸಂ.೨೧, ಪು.೫೨೮, ಸಂ.೧೦೮, ಪು.೩೮೨., ಸಂ.೮೬, ಪು.೩೫೬., ಸಂ.೫೧, ಪು.೮೨.,

೧೨೩. ಅದೇ, ಸಂ.೧೨, ಪು.೪೦೧

೧೨೪. ಕುಲಕರ್ಣಿ ಕೃಷ್ಣ ಕೋಲಾರ ಬಿಜಾಪುರದ ಆದಿಲ್ ಶಾಹಿಗಳು, ಪುಟ–೧೫

೧೨೫. ಕುಲಕರ್ಣಿ ಕೃಷ್ಣ ಕೋಲಾರ ಬಿಜಾಪುರದ ಆದಿಲ್ ಶಾಹಿಗಳು, ಪುಟ–೩೨

೧೨೬. ಅದೇ, ಪು–೪೮

೧೨೭. ಕೋಲಾರ ಕುಲಕರ್ಣಿ ಕೃಷ್ಣ, ಬಿಜಾಪುರದ ಆದಿಲ್‌ಶಾಹಿ–ಪು–೪೯–೫೦

೧೨೮. ಕೋಲಾರ ಕುಲಕರ್ಣಿ ಕೃಷ್ಣ, ಬಿಜಾಪುರದ ಆದಿಲ್‌ಶಾಹಿ ಪು–೬೪

೧೨೯. ಕುಲಕರ್ಣಿ ಕೃಷ್ಣ ಕೊಲ್ಹಾರ –ಬುಸಾತಿನ್ ಸಲಾತೀನ್ ಪು.೪೨

೧೩೦. Verma, D.C., History of Bijapur, p.೨೦

೧೩೧. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಮಹಬೂಬುಕರ್ ರಹಮಾನ್ ಮದನಿ (ಅನು.), ೨೦೧೪, ಗುಲ್‌ದಸ್ತಾಯೆ ಬಿಜಾಪುರ, ಪು.೧೩೨

೧೩೨. ಷೇಕ್ ಅಲಿ ಬಿ. (ಸಂ.), ೧೯೯೭, ಕರ್ನಾಟಕ ಚರಿತ್ರೆ, ಸಂ.೧, ಪು.೧೦೭

೧೩೩. ಮಂಜುನಾಥ ಎಸ್. ಪಾಟೀಲ, ೨೦೧೭, ಪೂರ್ವೋಕ್ತ, ಪು.

೧೩೪. ಮಂಜುನಾಥ ಎಸ್. ಪಾಟೀಲ, ೨೦೧೭, ಪೂರ್ವೋಕ್ತ, ಪು.

೧೩೫. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಮೌಲಾನಾ ಮಹಬೂಲ್ಕರ್ ರಹಮಾನ್ ಮದನಿ, (ಅನು), ಗುಲದಸ್ತಾಯೆ ಬಿಜಾಪುರ, ಪು.

೧೩೬. ಮಜುಂದಾರ್ ಆರ್. ಸಿ., (ಸಂ), ನರಸಿಂಹಮೂರ್ತಿ ಎ. ವಿ.,(ಕ.ಅ.ಸಂ), ಭಾರತೀಯ ಜನತೆಯ ಇತಿಹಾಸ ಮತ್ತು ಸಂಸ್ಕೃತಿ ಸಂ–೧೪, ಪು.

೧೩೭. ಮುನಿಸ್ವಾಮಿ ಆರ್., (ಮು.ಸಂ), ವಿಜಾಪುರ ಜಿಲ್ಲಾ ಗ್ಯಾಸೆಟಿಯರ್, ಪು.೧೬೮

೧೩೮. ಕೃಷ್ಣ ಕೊಲ್ಹಾರಕುಲಕರ್ಣಿ, (ಅನು), ಬಸಾತೀನೆ ಸಲಾತೀನ, ಪು.೩೮೬

೧೩೯. ಅದೇ, ಪು.೩೮೭

೧೪೦. ಅದೇ, ಪು.೩೮೭

೧೪೧. ಅದೇ, ಪು.೩೮೮

೧೪೨. ಮುನಿಸ್ವಾಮಿ ಆರ್., (ಮು.ಸಂ), ವಿಜಾಪುರ ಜಿಲ್ಲಾ ಗ್ಯಾಸೆಟಿಯರ್, ಪು.೧೬೯

೧೪೩. ಅದೇ, ಪು.೧೬೯

೧೪೪. ಸೂರ್ಯನಾಥ ಕಾಮತ್, (ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಪು.

೧೪೫. ಅದೇ, ಪು.೧೭೦

೧೪೬. ಅದೇ, ಪು.೧೭೨

ಅಧ್ಯಾಯ ಮೂರು

ಶೈವ ಧರ್ಮದ ಉಗಮ ಮತ್ತು ವಿಕಾಸ

ಮಾನವನ ವಿಕಾಸ ಮಾರ್ಗದಲ್ಲಿ ಧರ್ಮದ ಪಾತ್ರ ಮಹತ್ತರವಾದುದಾಗಿದೆ. ಇದು ಜಗತ್ತಿನ ಎಲ್ಲ ದೇಶಗಳ, ಎಲ್ಲ ಜನಾಂಗದ, ಎಲ್ಲ ಕಾಲದ ಮಾನವನ ಬದುಕಿಗೆ ತೋರುದಾರಿಯಾಗಿದೆ. ಜಗತ್ತಿನ ಎಲ್ಲ ಭಾಗದ ಜನರು ತಮ್ಮ ತಮ್ಮ ಆತ್ಮತೃಪ್ತಿಗಾಗಿ ಧರ್ಮವನ್ನು ರೂಪಿಸಿಕೊಂಡಂತೆ ಭಾರತವೂ ಕೂಡ ಧರ್ಮವನ್ನು ರೂಪಿಸಿಕೊಂಡಿದೆ. ಅಷ್ಟೇ ಅಲ್ಲ, ಅದನ್ನು ಇಡೀ ಬದುಕಿನ ಸಾರಸರ್ವಸ್ವವನ್ನಾಗಿಸಿಕೊಂಡಿದೆ. ಪ್ರಾಗೈತಿಹಾಸಿಕ ಕಾಲದಿಂದಲೂ ಭಾರತವು ಬೌದ್ಧ, ಜೈನ, ಪಾರಸಿ, ಸಿಖ್ ಮುಂತಾದ ಧರ್ಮಗಳು ಪ್ರಚಲಿತದಲ್ಲಿವೆ. ಅದರಲ್ಲಿ ಹಿಂದೂ ಧರ್ಮದಲ್ಲಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಕ್ತಿವಿಶಿಷ್ಟಾದ್ವೈತ ಮುಂತಾದ ಸಿದ್ಧಾಂತಗಳು ರೂಪುಗೊಂಡು ಮನುಷ್ಯನ ಬದುಕಿಗೆ ಹೊರಬೆಳಕನ್ನು ನೀಡುತ್ತಲೇ ಬಂದಿವೆ.[1]

ಪ್ರಾಚೀನ ಕಾಲದಿಂದಲೂ ಅನೇಕ ಧರ್ಮಗಳು ಹುಟ್ಟಿ, ಬೆಳೆದು, ಉಳಿದುಕೊಂಡು ಬಂದಿರುವವು. ಕೆಲವು ಆದರೆ ಇನ್ನೂ ಕೆಲವು ನಶಿಸಿದ್ದರೂ ತಮ್ಮ ಅಸ್ತಿತ್ವವನ್ನು ಹೇಳುತ್ತಾ ಬಂದಿವೆ. ಅದರಲ್ಲೂ ಹಿಂದೂ ಧರ್ಮದಲ್ಲಿ ಶೈವ, ವೈಷ್ಣವ, ಶಾಕ್ತ ಪಂತಗಳು ಅನಂತರದಲ್ಲಿ ಅವುಗಳಲ್ಲಿ ಅನೇಕ ಪ್ರಭೇದಗಳಾಗಿರುವುದನ್ನು ಸಹ ನಾವು ಕಾಣುತ್ತೇವೆ. 'ಧರ್ಮ' ಎಂಬ ಮಾತಿನ ಅರ್ಥ ಮತ್ತು ಇಲ್ಲಿ ಅದನ್ನು ಉಪಯೋಗಿಸಿಕೊಂಡಿರುವ ವ್ಯಾಪ್ತಿಯನ್ನು ಕುರಿತು ಒಂದೆರಡು ಮಾತುಗಳನ್ನು ಹೇಳಿ ಮುಂದೆ ಸಾಗೋಣ.

'ಧರ್ಮ' ಎಂಬ ಪದ ಸಂಸ್ಕೃತದ 'ಧೃ' ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ ಎಂದು ಹೇಳುತ್ತಾರೆ. ಧರಿಸು, ಎತ್ತಿಹಿಡಿ, ಪೋಣಿಸು ಇತ್ಯಾದಿ ಅರ್ಥಗಳನ್ನು ಇದಕ್ಕೆ ಹೇಳಲಾಗಿದೆ. 'ಧ್ರೀಯತೇ ಅನೇನ ಇತಿ ಧರ್ಮಃ', 'ಧಾರಣಾದ್ಧರ್ಮಮಿತ್ಯಾಹುಃ' ಈ ಮೊದಲಾದ ಸೂತ್ರಗಳು ಇದನ್ನೇ ಸೂಚಿಸುತ್ತವೆ. ಎತ್ತಿಹಿಡಿಯುವಂತಹುದು, ಧರಿಸುವಂತಹದು. ಅಂದರೆ ಸ್ಥಿರವಾಗಿ ನಿಲ್ಲಿಸುವಂತಹ ಸಾಮರ್ಥ್ಯ. ಈ ಎಲ್ಲ ಅರ್ಥದ ಛಾಯೆಯನ್ನು ಈ ಮಾತು ಒಳಗೊಂಡಿದೆ. ಸಮಾಜವನ್ನು ವ್ಯಕ್ತಿಯನ್ನು ಒಳ್ಳೆಯ ಸ್ಥಿತಿಯಲ್ಲಿ ಎತ್ತಿ ಹಿಡಿಯುವ ಶಕ್ತಿ ಎಂದು ಇದನ್ನು ಹೇಳಬಹುದು. 'ಧರ್ಮ' ಶಬ್ದವನ್ನು ಬೇರೆ ಬೇರೆ ಅರ್ಥಗಳಲ್ಲಿಯೂ ಉಪಯೋಗಿಸಿರುವುದು ಕಂಡುಬರುತ್ತದೆ ಕರ್ತವ್ಯ, ಸ್ವಭಾವ, ಆಚಾರ ಈ ಎಲ್ಲ

ಅರ್ಥಗಳೂ ಇದಕ್ಕೆ ಬಂದಿವೆ. ಮೀಮಾಂಸಾ ಸೂತ್ರಗಳು, ವೇದೋಕ್ತವಾದ ಯಾಗಾದಿ ಕರ್ಮಗಳನ್ನೇ ಧರ್ಮವೆಂದು ಕರೆದಿರುವುದು ಕಾಣುತ್ತದೆ.

ಶ್ರುತಿಸ್ಮೃತಿಸ್ಯದಾಚಾರಃ ಸ್ವಸ್ಯ ಚ ಪ್ರಯಾಮಾತ್ಮನಃ ।

ಏತಚ್ಚತುರ್ವಿಧಂ ಪ್ರಾಹುಃ ಸಾಕ್ಷಾದ್ಧರ್ಮಸ್ಯ ಲಕ್ಷಣಂ ॥ (ಮನು ೧-೧೨)

ಶ್ರುತಿ (ವೇದ), ಸ್ಮೃತಿ, ಸದಾಚಾರ ಮತ್ತು ಆತ್ಮಪ್ರಿಯತೆಗಳು ಧರ್ಮದ ಲಕ್ಷಣ ಎಂಬ ಮಾತು ಧರ್ಮವು ಪಡೆಯಬಹುದಾದ ವ್ಯಾಪಕ ಸ್ವರೂಪವನ್ನು ಸೂಚಿಸುತ್ತದೆ.[೨]

ಈ ಧರ್ಮಗಳಲ್ಲಿ ಶಿವೋಪಾಸನೆಯನ್ನು ಮಾಡುವವರು ಶೈವರು, ವಿಷ್ಣುವನ್ನು ಉಪಾಸನೆ ಮಾಡುವವರು ವೈಷ್ಣವರು, ಶಕ್ತಿಯನ್ನು ಉಪಾಸಿಸುವವರು ಶಾಕ್ತರು. ಶೈವ ಧರ್ಮವು ಅತ್ಯಂತ ಪ್ರಾಚೀನ ಧರ್ಮಗಳಲ್ಲಿ ಒಂದಾಗಿತ್ತೆಂಬುದು ನಮಗೆ ಅನೇಕ ಆಧಾರಗಳಿಂದ ತಿಳಿದುಬರುತ್ತದೆ.

"ಮೊಹೆಂಜೋದಾರೋ ಹರಪ್ಪಾ ನಮಗಾಗಿ ಗರ್ಭೀಕರಿಸಿಕೊಂಡಿದ್ದ ಅನೇಕ ಪ್ರಕಟಣೆಗಳಲ್ಲಿ ಶೈವಧರ್ಮದ ಇತಿಹಾಸವು ಚಾಲ್ಕೊಲಿಥಿಕ್ ಯುಗದವರೆಗೆ ಅಥವಾ ಅದಕ್ಕೂ ಪೂರ್ವ ಹೋಗುತ್ತದೆಯೆಂಬ ಶೋಧನೆಯಷ್ಟು ಮಹತ್ವವಾದುದು ಇನ್ನಾವುದೂ ಇಲ್ಲ. ಹೀಗೆ ಶೈವವು ಜಗತ್ತಿನ ಅತ್ಯಂತ ಪ್ರಾಚೀನವಾಗಿ ಇಂದಿಗೂ ಜೀವಂತವಾಗಿರುವ ಧರ್ಮವೆನಿಸಿದೆ'.

ಅವರೇ ಮುಂದುವರೆದು;

"ಈ ವಿಷಯವಾಗಿ ನೀಡಬಲ್ಲ ಒಂದೇ ಒಂದು ವಿವರಣೆಯೆಂದರೆ ಅವು ಒಂದು ಬಗೆಯ ಪವಿತ್ರ ವಸ್ತುಗಳಾಗಿದ್ದವು. ಗಾತ್ರದಲ್ಲಿ ಹಿರಿದಾಗಿರುವವು. ಒಂದು ಪಂಗಡದ ಜನರ ಸಲುವಾಗಿ ಉಪಯೋಗವಾಗುತ್ತಿರಬೇಕು. ಚಿಕ್ಕ ಲಿಂಗಗಳನ್ನು ಈಗಿನ ಕೆಲವು ಶೈವರಂತೆ ಜನರು ದೇಹದ ಮೇಲೆ ಧಾರಣ ಮಾಡುತ್ತಿರಬೇಕು"

ಅದೇ ಗ್ರಂಥದ ಅಡಿಟಿಪ್ಪಣಿಯಲ್ಲಿ ಅವರು ಹೀಗೆ ಬರೆದಿರುವರು:

"ಶಿಲೆ, ಕಾಜು ಮತ್ತು ಇತರ ಪದಾರ್ಥಗಳಿಂದ ಮಾಡಿದ ಕಿರಿಯ ಲಿಂಗಗಳನ್ನು ಶೈವರು ಧರಿಸುತ್ತಾರೆ. ವಿಶೇಷವಾಗಿ ಲಿಂಗಾಯತರೆಂಬ ಶೈವ ಪಂಗಡದವರು ಈ ಲಿಂಗಗಳನ್ನು ಚೌಕ ಇಲ್ಲವೆ ಗುಂಡುಗಡಿಗೆಯಲ್ಲಿಟ್ಟು ಎದೆಯ ಮೇಲೆ ಧಾರಣ ಮಾಡುವವರು. ಇದರಿಂದ ಶೈವಧರ್ಮ ಹಾಗೂ ಲಿಂಗಧಾರಣೆಯ ಪ್ರಾಚೀನತೆ ಸ್ಪಷ್ಟವಾಗುತ್ತದೆ."

ಶೈವ ಧರ್ಮದ ಪ್ರಾಚೀನತೆಯನ್ನು ಕುರಿತು ಸರ್‌ಜಾನ್ ಮಾರ್ಷಲ್ ಅವರು "Among the many revelations that Mohenjodaro and Harappa have had in store for us none perhaps is more remarkable than the discovery that Shaivism has a history going back to the Chalcolithic Age or perhaps even further still and that it thus takes its place as the most ancient living path in the world"[3]
ಅವರೆ ಮುಂದುವರೆದು "Indeed the only explanation applicable to them all is that they were sacred objects of some sorts, the larger ones serving as aniconic agalamala for cult purposes, the smaller as amulets to be carried on the person just at miniature lingas are carried by shaivit's today."[೪] "Miniature lingas made of stone, glass and other materials are frequently carried by shaivites and invariably by members of the Shaiva sect of the lingayats who wear them in a little casket suspended round the neck".[೫]

ಮೊಹೆಂಜೋದಾರೋ ಹರಪ್ಪ ಉತ್ಖನನದಲ್ಲಿ ಸಿಕ್ಕಿರುವ ಸಾಮಗ್ರಿಗಳಿಂದ ಅವರು ಮೇಲಿನ ಮಾತುಗಳನ್ನು ಹೇಳಿದ್ದಾರೆ. ಹೀಗಾಗಿ ಶೈವ ಧರ್ಮದ ಇತಿಹಾಸವು ಮೊಹೆಂಜೋದಾರೋ ಹರಪ್ಪ ಸಂಸ್ಕೃತಿಯ ಕಾಲದವರೆಗೂ ಅಥವಾ ಅದಕ್ಕೂ ಪೂರ್ವದವರೆಗೂ ಹೋಗುತ್ತದೆ ಎಂದು ಹೇಳಿದ್ದಾರೆ. ಅಲ್ಲದೇ ಇಂದಿನವರೆಗೂ ಜೀವಂತ ಇರುವ ಧರ್ಮಗಳಲ್ಲಿ ಒಂದಾಗಿದೆ.

ಹರಪ್ಪ-ಮೊಹೆಂಜೋದಾರೋ ಸಂಸ್ಕೃತಿಯ ನಂತರದಲ್ಲಿ ವೇದ, ಆಗಮ, ಉಪನಿಷತ್ತು, ಪುರಾಣಗಳಲ್ಲಿಯೂ ಶಿವನ ಪರಿಕಲ್ಪನೆಯ ಕುರಿತು ಕೆಲವು ವಿಚಾರಗಳು ಅಭಿವ್ಯಕ್ತವಾಗಿರುವುದು ತಿಳಿದು ಬರುತ್ತದೆ.

ಋಗ್ವೇದದಲ್ಲಿ ಮೂರು ಪೂರ್ಣ ಸೂಕ್ತಗಳಲ್ಲಿ[೬] ಮತ್ತು ಇತರ ದೇವತೆಗಳಿಗೆ ಮೀಸಲಾದ ಸೂಕ್ತಗಳ ಕೆಲವು ಮಂತ್ರಗಳಲ್ಲಿ ರುದ್ರನ ಪ್ರಸ್ತಾಪ ಬರುತ್ತದೆ. ವೈದಿಕ ಗಾಯಕನು ಅವನನ್ನು ಹೀಗೆ ಸ್ತುತಿಸುತ್ತಾನೆ. "ಓ ರುದ್ರಾ! ಕೋಪದಿಂದ ನಮ್ಮ ಮಕ್ಕಳನ್ನು ನಮ್ಮ ಸಂತತಿಯನ್ನು, ನಮ್ಮ ಜನರನ್ನು, ನಮ್ಮ ದನಕರುಗಳನ್ನು, ನಮ್ಮ ಮನೆಗಳನ್ನು ಹಿಂಸಿಸಬೇಡ, ನಮ್ಮ ಜನರನ್ನು ಕೊಲ್ಲಬೇಡ. ಕಾಣಿಕೆಗಳನ್ನರ್ಪಿಸಿ ನಿನ್ನನ್ನು ಸ್ತುತಿಸುತ್ತೇವೆ.[೭]

ಋಗ್ವೇದದಲ್ಲಿ ರುದ್ರನನ್ನು ಕುರಿತು ಹಾಡಿರುವ ಸೂಕ್ತಗಳು ಕೆಲವೇ ಆಗಿದ್ದರೂ, ಅವನೊಬ್ಬ ಅಪ್ರಧಾನ ದೇವತೆಯೆಂದು ಪರಿಗಣಿತನಾಗಿದ್ದರೂ ಅವನಿಗೆ ಸರ್ವೋಚ್ಚ ಅಧಿಕಾರವನ್ನು ಆರೋಪಿಸುವುದಕ್ಕೆ ತಕ್ಕಷ್ಟು ಸೂಚನೆಯಿದೆಯೆಂಬುದು ಸ್ಪಷ್ಟವಾಗುತ್ತದೆ.[೮] ಯಜುರ್ವೇದದಲ್ಲಿ ರುದ್ರನ ಕಲ್ಪನೆ ಇನ್ನಷ್ಟು ವಿಕಾಸಗೊಂಡಿರುವುದನ್ನು ಕಾಣಬಹುದು. ಶತರುದ್ರೀಯವು (ಅ. ೫.೧೬) ರುದ್ರನನ್ನು ಕೆಡುಕಿನ ದೇವತೆಯೆಂದು ಕಾಣುವ ಬದಲಿಗೆ ಶುಭಕರ ದೇವತೆಯ ರೂಪದಲ್ಲಿ ಕಂಡಿರುವಂತಿದೆ. ಶತಪಥ ಬ್ರಾಹ್ಮಣ ಮತ್ತು ಕೌಶೀತಕಿ ಬ್ರಾಹ್ಮಣಗಳಲ್ಲಿ ಪ್ರಜಾಪತಿಯು ರುದ್ರನಿಗೆ ಎಂಟು ಹೆಸರುಗಳನ್ನು ಕೊಟ್ಟನೆಂದು ಹೇಳಿದೆ. ಈ ಎಂಟರಲ್ಲಿ ನಾಲ್ಕು-ರುದ್ರ, ಶರ್ವ, ಉಗ್ರ, ಅಶನಿ ಎಂಬವು ರುದ್ರನ ವಿನಾಶಕಾರೀ ಶಕ್ತಿಯನ್ನು ಸೂಚಿಸಿದರೆ, ಭಾವ, ಪಶುಪತಿ, ಮಹಾದೇವ, ಈಶಾನ ಎಂಬ ನಾಲ್ಕು ಹಿತಕರ ರೂಪವನ್ನು ಸೂಚಿಸುತ್ತವೆ. ಗೃಹ್ಯಸೂತ್ರದಲ್ಲಿ ಹರ, ಮಹಾದೇವ, ಶಿವ, ಭೀಮ, ಶಂಕರ ಎನ್ನುವ ಐದು ಹೆಸರುಗಳು ದೊರೆಯುತ್ತವೆ. ಪರಾಶರ ಗೃಹ್ಯಸೂತ್ರದಲ್ಲಿ ಇಂದ್ರಾಣಿ, ರುದ್ರಾಣಿ, ಶರ್ವಾಣಿ, ಭಾವನಿ ಎಂಬ ಹೆಸರುಗಳು ದೊರೆಯುತ್ತವೆ. ಇವರು ಕ್ರಮವಾಗಿ ಇಂದ್ರ, ರುದ್ರ, ಶಿವನ ಮತ್ತು ಭವ ಎಂಬುವವರ ಪತ್ನಿಯರು.[೯] ಉಪನಿಷತ್ತುಗಳ ಕಾಲಕ್ಕೆ ಶಿವನ ಪೂರ್ಣ ಸ್ವರೂಪ ಕಂಡುಬರುತ್ತದೆ. ಶ್ವೇತಾಶ್ವತರ ಉಪನಿಷತ್ತಿನಲ್ಲಿ ಶಿವನನ್ನು (ರುದ್ರನನ್ನು) ಸರ್ವೇಶ್ವರನೆಂದು ಹೇಳಲಾಗಿದೆ. "ಈ ಲೋಕಗಳನ್ನೆಲ್ಲಾ ತನ್ನ ಪ್ರಭಾವಶಕ್ತಿಯಿಂದ ಆಳುವವನು ಯಾರೋ, ಎಲ್ಲಾ ಮಾನವರಿಗೂ ಅಂತರಾತ್ಮನು ಯಾರೋ, ಸಮಸ್ತ ಪ್ರಾಣಿಗಳನ್ನು ಸೃಷ್ಟಿಸಿ ರಕ್ಷಿಸುವವನು ಯಾರೋ ಆತನು ರುದ್ರನೊಬ್ಬನೇ; ಬೇರೆ ಯಾರೂ ಅಲ್ಲ, ಬೇರೆ ಯಾರನ್ನೂ ಹಾಗೆಂದು ಅವರು ಅಂಗೀಕರಿಸುವುದಿಲ್ಲ, ಯಾರೂ ಅವನನ್ನು ಕಣ್ಣಿನಿಂದ ಕಾಣಲಾರರು. ಅವನು ಹೃದಯಮಂದಿರದಲ್ಲಿ ವಾಸಮಾಡುತ್ತಿರುವುದನ್ನು ತಮ್ಮ ಅಂತರಂಗಾನುಭೂತಿಯಿಂದ ಯಾರು ಕಂಡುಕೊಳ್ಳುತ್ತಾರೋ ಅವರು ಅಮರ್ತ್ಯರಾಗುತ್ತಾರೆ. (IV-೨೦) ಅದೇ ಉಪನಿಷತ್ತಿನಲ್ಲಿ ಮುಂದುವರೆದು ಶಿವನನ್ನು 'ಅಣೋರಣೆಯಾನ್ ಮಹತೋ ಮಹೀಯಾನ್' ಮಾಯೆಯೇ ಪ್ರಕೃತಿ ಆ ಮಾಯೆಯನ್ನು ಬಳಸಿ ಸೃಷ್ಟಿಗೆ ಕಾರಣನಾದವನು ಶಿವ (III-೧೦) ಎಂಬ ಮಾತುಗಳ ಮೂಲಕ ಯಾವ ಒಂದು ವರ್ಗಕ್ಕೂ ಶಾಖೆಗೂ ಸೇರಿದವನಾಗದೆ ಪರಬ್ರಹ್ಮ ಸ್ವರೂಪಕ್ಕೆ ಪ್ರತಿರೂಪವಾಗಿದ್ದಾನೆ. "...ಹಿಂದೂ ಧರ್ಮದ ದೈವಿಕ ಅನುಭವಕ್ಕೆ 'ಶಿವ' ಎಂಬ ಮಾತು ಶಕ್ತಿಪೂರ್ಣವಾದ ಸಂಕೇತವಾಗಿ ಪರಿಣಮಿಸಿದುದರಲ್ಲಿ ಈ ಉಪನಿಷತ್ತಿನ ಪ್ರಭಾವ ಮುಖ್ಯವಾದುದೆಂದು ಹೇಳಬಹುದು.[೧೦] ಅಥರ್ವ ಶಿರೋಪನಿಷತ್ತಿನಲ್ಲಿ ರುದ್ರನು ಅದ್ವಿತೀಯನೆಂದೂ ಈಶಾನ, ಭಗವಂತ, ಮಹಾದೇವ, ಮಹೇಶ್ವರ ಎಂದು ಮುಂತಾಗಿ ಹೇಳಲಾಗಿದೆ.

ರಾಮಾಯಣ ಮತ್ತು ಮಹಾಭಾರತ ಕಾವ್ಯಗಳಲ್ಲಿ ರುದ್ರನ ಬದಲಾಗಿ ಸರ್ವೋಚ್ಚ ದೇವನಾಗಿ, ಪರಮೇಶ್ವರನಾಗಿ ಶಿವನನ್ನು ಕಾಣುತ್ತೇವೆ. ಅಲ್ಲಿ ಅವನನ್ನು ಮಹಾದೇವ, ಮಹೇಶ್ವರ, ಶಂಕರ, ತ್ರೈಂಬಕ ಮೊದಲಾದ ಹೆಸರುಗಳಿಂದ ಕರೆಯಲಾಗಿದೆ. ಅಲ್ಲದೇ ರಾಮಾಯಣದಲ್ಲಿ ಶಿವನನ್ನು ಸೌಮ್ಯ ಸ್ವರೂಪದಲ್ಲಿ ಕಾಣಲಾಗಿದೆ. ಶ್ರೀರಾಮನು ಲಂಕೆಯ ಮೇಲೆ ದಾಳಿಯನ್ನು ಮಾಡುವ ಸಂದರ್ಭದಲ್ಲಿ ಶಿವಲಿಂಗ ಪೂಜೆಯನ್ನು ನಿರ್ವಹಿಸಿದ್ದನು. ಅದು ಇಂದಿನ ರಾಮೇಶ್ವರಲಿಂಗವೆಂದು ಇಂದಿಗೂ ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದೆಂದು ಭಾವಿಸಿ ಹಿಂದೂಗಳು ಪೂಜಿಸುವರು. ಮಹಾಭಾರತದಲ್ಲಿಯ ಶಿವನನ್ನು ಸರ್ವೋಚ್ಚನಾದ ದೇವರು ಪರಮೇಶ್ವರ ಅವನನ್ನು ಸದಾ ಕಾಲವೂ, ವರ್ತಮಾನ, ಭೂತ, ಭವಿಷ್ಯತ್ ಕಾಲಗಳಲ್ಲೆಲ್ಲಾ ಪೂಜಿಸುತ್ತಿರಬೇಕು. (ಕರ್ಣಪರ್ವ, ೨೪–೬೨) ಅವನಿಗೆ ಎಲ್ಲೆ ಕಟ್ಟುಗಳಿಲ್ಲ. ಅವನು ಅಸೀಮ, ಯೋಚಿಸಿ ತಿಳಿಯಲಿಕ್ಕಾಗದವನು. ಅಂತ್ಯ ಸಮೀಪಿಸಲಾಗದವನು, ಅವಧಿಗಮ್ಯ (ಅನುಶಾಸನ ಪರ್ವ ೨೩–೨೭) ಅವನಿಗೆ ಈಶಾನ ಮಹೇಶ್ವರ, ಮಹಾದೇವ, ಭಗವಾನ್, ಶಿವ ಎಂಬ ಹೆಸರುಗಳಿವೆ. ರಾಮಾಯಣ ಮತ್ತು ಮಹಾಭಾರತಗಳ ಕಾಲದಲ್ಲಿ ಶಿವನಲ್ಲಿ ಭಕ್ತಿ ರಾಮನು ಶಿವನನ್ನು ಪೂಜಿಸಿದ್ದು, ರಾವಣನು ಶಿವನ ಆತ್ಮಲಿಂಗವನ್ನು ಪಡೆದು ಇಟ್ಟು ಪೂಜಿಸುವುದು, ಅವನನ್ನು ಗೌರವ ಆದರಗಳಿಂದ ಆರಾಧಿಸುವುದನ್ನು ಕಾಣುತ್ತೇವೆ.

ಪುರಾಣಗಳ ಕಾಲಕ್ಕೆ ಬಂದರೆ ಶಿವನ ಪಾರಮ್ಯವನ್ನು ಹೇಳುವ ಅನೇಕ ಪುರಾಣಗಳು ಹುಟ್ಟಿಕೊಂಡವು. ಅಲ್ಲದೆ ಸೃಷ್ಟಿ, ಸ್ಥಿತಿ, ಲಯಗಳಿಗೆ ಶಿವನೆ ಕಾರಣನಾದವನು. ಅವನೇ ಸರ್ವಶಕ್ತನಾದ ಪರಮದೇವತೆಯೆಂದು ವಾಯುಪುರಾಣ ಹೇಳುತ್ತದೆ. (೬೬–೧೦೮), (ಲಿಂಗಪುರಾಣ ೧:೧:೧) ಸೌರಪುರಾಣವು (೭, ೧೦ ;೩೮, ೧: ೩೩, ೯೦) ಶಿವನೇ ಪರಬ್ರಹ್ಮ ಪರಮಪುರುಷ, ಸರ್ವೋಚ್ಚ ದೇವತೆ, ಅವನು ವಿಶ್ವಕ್ಕೆ ಮೂಲ ಕಾರಣ, ಅವನ ಮಹಿಮೆಗಳನ್ನು ಹೇಳಲಾಗಿದೆ.

ಪದ್ಮಪುರಾಣದ ಒಂದು ಶ್ಲೋಕವು ಶೈವಧರ್ಮದ ಉಗಮ ಬೆಳವಣಿಗೆ ಮತ್ತು ಅವಸಾನವನ್ನು ಹೀಗೆ ಹೇಳಿದೆ.

ಉತ್ಪನ್ನಾ ದ್ರಾವಿಡೇ ಚಾಹಂ ವೃದ್ಧಿಂ ಕರ್ನಾಟಕೇ ಗತಾ ।

ಕ್ವಚಿತ್ ಕ್ವಚಿತ್ ಮಹಾರಾಷ್ಟ್ರೇ ಗುರ್ಜರೇ ಜೀರ್ಣಕಂಗತಿ । (ಪದ್ಮಪುರಾಣ ೧–೪೮)

ದಕ್ಷಿಣ ಭಾರತದ ತಮಿಳುನಾಡಿನಲ್ಲಿ ಹುಟ್ಟಿ ಕರ್ನಾಟಕದಲ್ಲಿ ಅಭಿವೃದ್ಧಿ ಹೊಂದಿ ಅಲ್ಪ ಸ್ವಲ್ಪ ಮಹಾರಾಷ್ಟ್ರದಲ್ಲಿಳಿದು, ಗುಜರಾತದಲ್ಲಿ ಅವಸಾನ ಹೊಂದಿತು ಎಂದು ಇದು ಶೈವಧರ್ಮದ

ಇತಿಹಾಸವನ್ನೇ ಸ್ಥೂಲವಾಗಿ ಸೂಚಿಸುತ್ತದೆ. ಆದರೆ ಇದರಲ್ಲಿ ಉಲ್ಲೇಖವಾಗಿರುವ ಮಹಾರಾಷ್ಟ್ರ ಎಂಬ ಪದವನ್ನು ಗಮನಿಸಿದರೆ ಇದು ಇತ್ತೀಚಿನದಾಗಿರಬೇಕೆನಿಸದಿರದು. ಆಗಮಗಳ ಕಾಲಕ್ಕೆ ಬಂದರೆ ಶೈವಧರ್ಮವು ಅತ್ಯಂತ ಪರಾಕಾಷ್ಠೆ ತಲುಪಿರುವುದನ್ನು ಕಾಣುತ್ತೇವೆ. ಆಗಮಶಾಸ್ತ್ರವೂ ಪ್ರಾಚೀನ ಶಾಸ್ತ್ರಗಳಲ್ಲಿ ಒಂದು. ಶತಮಾನಗಳಿಂದ ಬೆಳೆದುಬಂದ ಆಗಮ ಸಾಹಿತ್ಯ ಪರಂಪರೆಗೆ ಭಾರತೀಯ ತತ್ತ್ವಶಾಸ್ತ್ರಗಳಲ್ಲಿ ಒಂದು ವಿಶಿಷ್ಟವಾದ ಸ್ಥಾನವಿದೆ. ಸತ್ವಪೂರ್ಣವಾದ ಮೌಲಿಕ ವಿಚಾರಗಳಿಂದ ಅದು ಬೆಳೆದುಬಂದಿದೆ.

'ಗಮ್' ಧಾತುನಿಷ್ಪನ್ನವಾದ 'ಗಮ' ಎಂಬ ಪದವು 'ಆ' ಎಂಬ ಉಪಸರ್ಗದೊಡನೆ ಕೂಡಿ ಸಂಪೂರ್ಣವಾದ ಅರಿವು, ಪರಿಪೂರ್ಣವಾದ ಜ್ಞಾನ ಎಂಬ ಅರ್ಥವನ್ನು ಕೊಡುತ್ತದೆ.

ಆಗಮ ಸಾಹಿತ್ಯದ ಕಾಲದ ವಿಚಾರದಲ್ಲಿ ಅನೇಕ ಭಿನ್ನಾಭಿಪ್ರಾಯಗಳಿವೆ. ಕ್ರಿ.ಶ. ೧ನೆಯ ಶತಮಾನದಿಂದ ೧೨ನೆಯ ಶತಮಾನದವರೆಗೆ ಇದನ್ನು ಗುರುತಿಸುವುದುಂಟು.[೧೧] ಆಗಮ ಸಾಹಿತ್ಯವು (೧) ಶೈವಾಗಮ, (೨) ಶಾಕ್ತಾಗಮ, (೩) ವೈಷ್ಣವಾಗಮ ಎಂದು ಮೂರು ಬಗೆಯಾಗಿದೆ. ಈ ಮೂರೂ ವಿಭಾಗಗಳಲ್ಲಿ ಅನುಕ್ರಮವಾಗಿ ಶಿವ, ಶಕ್ತಿ ಮತ್ತು ವಿಷ್ಣು ಈ ಮೂರು ದೇವತೆಗಳ ಹಾಗೂ ಆ ಧರ್ಮ ಸಿದ್ಧಾಂತಗಳ ವಿವರಣೆ, ವಿಶ್ಲೇಷಣೆ ಇದೆ. ವಾಸ್ತವವಾಗಿ ಶೈವಾಗಮ, ಶಾಕ್ತಾಗಮ ಒಂದೇ ನಿಟ್ಟಿಗೆ ಸೇರುತ್ತವೆ. ಇವೆರಡನ್ನೂ ಶಿವನು ಪಾರ್ವತಿಗೆ ಹೇಳಿದನೆಂದು ಅವುಗಳಲ್ಲಿ ವಿಧಿತವಾಗಿದೆ.[೧೨]

ಶಿವಾಗಮಗಳು ಕಾಮಿಕಾದಿ ವಾತುಲ ಪರ್ಯಂತ ೨೮ ಎಂದು ಪ್ರಸಿದ್ಧವಾಗಿವೆ. ಇವುಗಳಿಗೆ ಶೈವ ಸಿದ್ಧಾಂತ ಸಂಹಿತೆಗಳೆಂಬ ಹೆಸರೂ ಉಂಟು. ಕಾರಣಾಗಮ, ಸುಪ್ರಭೇದಾಗಮ, ವಿವೇಕ ಚಿಂತಾಮಣಿ, ಶಿವತತ್ವ ರತ್ನಾಕರ ಗ್ರಂಥಗಳಲ್ಲಿ ಶಿವಾಗಮಗಳ ಹೆಸರುಗಳು ಹೀಗೆ ಉಕ್ತವಾಗಿವೆ. (೧) ಕಾಮಿಕ, (೨) ಯೋಗಜ, (೩) ಅಂತ್ಯ, (೪) ಕಾರಣ, (೫) ಅಜಿತ, (೬) ದೀಪ್ತ, (೭) ಸೂಕ್ಷ್ಮ, (೮) ಸಹಸ್ರ, (೯) ಅಂಶುಮಾನ್, (೧೦) ಸುಪ್ರಭೇದ, (೧೧) ವಿಜಯ, (೧೨) ನಿಶ್ವಾಸ, (೧೩) ಸ್ವಯಂಭು, (೧೪) ಅನಿಲ, (೧೫) ವೀರ, (೧೬) ರೌರವ, (೧೭) ಮಕುಟ, (೧೮) ವಿಮಲ, (೧೯) ಚಂದ್ರಜ್ಞಾನ, (೨೦) ಬಿಂಬ, (೨೧) ಲಲಿತ, (೨೨)ಲಲಿತ (೨೩) ಸಿದ್ದ, (೨೪) ಸರ್ವೋತ್ತರ, (೨೫) ಸಂತಾನ, (೨೬) ಪಾರಮೇಶ್ವರ, (೨೭) ಕಿರಣ, (೨೮) ವಾತುಲ.[೧೩] ಒಂದೊಂದು ಆಗಮವನ್ನೂ ಸಾಮಾನ್ಯವಾಗಿ ನಾಲ್ಕು ಪಾದಗಳಾಗಿ ಜ್ಞಾನ, ಕ್ರಿಯಾ, ಯೋಗ ಮತ್ತು ಚರ್ಯಾ ಎಂದು ವಿಂಗಡಿಸಲಾಗುತ್ತಿದೆ. ಈ ಒಂದೊಂದು ಪಾದದಲ್ಲಿ ಚರ್ಚಿತವಾದ ವಿಷಯ ಹೀಗಿವೆ: ಜ್ಞಾನಪಾದದಲ್ಲಿ ಮಹೇಶ್ವರನ ಸ್ವರೂಪ, ಪ್ರಶುಪ್ರಭೇದ, ಪಂಚಪಾಶಗಳ ಸ್ವರೂಪ, ಜೀವನು ಮಲತ್ರಯಗಳಿಂದ ಮುಕ್ತನಾಗಿ ಶಿವಪದವನ್ನು ಸೇರುವ ಬಗೆ, ಲೋಕಗಳು, ಪ್ರಳಯ ಇತ್ಯಾದಿ ಕ್ರಿಯಾಪಾದದಲ್ಲಿ ಮಂತ್ರಗಳ ಉಚ್ಚಾರಣಾಕ್ರಮ, ಸಂಧ್ಯಾವಂದನ, ಜಪ ಹೋಮಾದಿಗಳ ವಿವರಣೆ

ಇದೆ. ಯೋಗಪಾದದಲ್ಲಿ ಮೂಲಾಧಾರಾದಿ ಚಕ್ರಗಳ ವಿವರಣೆ, ಯೋಗಕ್ಕೆ ಸಂಬಂಧಿಸಿದ ವಿಷಯಗಳಿವೆ. ಚರ್ಯಾಪಾದದಲ್ಲಿ ಪವಿತ್ರಾರೋಪಣ, ದೇವತಾ ಪ್ರತಿಷ್ಠೆ ಇತ್ಯಾದಿ ವಿಷಯ ನಿರೂಪಿತವಾಗಿವೆ.[೧೪]

ಬೌದ್ಧ ಸಾಹಿತ್ಯದಲ್ಲಿ ದೊರೆಯುವ ಶಿವನ ಸಂಬಂಧವಾದ ಸಂಗತಿಗಳನ್ನು ಪರಿಶೀಲಿಸಿದರೆ ಆ ಕಾಲದಲ್ಲಿ ಶೈವಮತವು ವಿಕಾಸ ಹೊಂದಿದ ರೂಪದಲ್ಲಿತ್ತೆಂದೂ ಅದೊಂದು ಪ್ರಮುಖ ಮತವಾಗಿತ್ತೆಂದೂ ಕಂಡುಬರುತ್ತದೆ. ತ್ರಿಪೀಟಕಗಳಲ್ಲಿ, ಜಾತಕಗಳಲ್ಲಿ ಮತ್ತು ದೀಘನಿಕಾಯದಲ್ಲಿ ಶಿವನ ಪ್ರಸ್ತಾಪವಿದೆ. ಬುದ್ಧನು ಮರಣಶಯ್ಯೆಯಲ್ಲಿದ್ದಾಗ ಅಲಾಲಕುಮಾರ ಎಂಬ ಶೈವ ಋಷಿಯು ಅವನ ಬಳಿ ಬಂದು ಕೆಲವು ಉಪದೇಶದ ವಾಕ್ಯಗಳನ್ನು ಪಡೆದನೆಂದು ತಿಳಿದುಬರುತ್ತದೆ. ಅಶ್ವಘೋಷನು ಬುದ್ಧಚರಿತದಲ್ಲಿ ಶಿವನನ್ನು ವೃಷಭಧ್ವಜನೆಂದೂ (೧೦-೩) ಭವನೆಂದೂ (೧-೯೨) ಪಾರ್ವತಿಯನ್ನು ಸ್ಕಂದಮಾತೆಯೆಂದೂ (೧.೬೬) ಕರೆದಿದ್ದಾನೆ.[೧೫]

ಪಾಣಿನಿಯು ಮಹಾಶಿವಭಕ್ತನಾಗಿದ್ದನು. ಅವನ ಅಷ್ಟಾಧ್ಯಾಯದಲ್ಲಿ ಶಿವನ ಬಗೆಗೆ ಸ್ಪಷ್ಟ ಸಂಗತಿಗಳು ದೊರೆಯುತ್ತವೆ. ಪತಂಜಲಿಯು ಶಿವಧರ್ಮಾನುಯಾಯಿಗಳನ್ನು ಶಿವಭಾಗವತರೆಂದು ಕರೆದಿದ್ದಾನೆ. ಗೊಂಡೊಪರ್ನೆಸನ ಒಂದು ನಾಣ್ಯದ ಮೇಲೆ ನಿಂತಿರುವ ಶಿವನ ಒಂದು ಮೂರ್ತಿಯಿದೆ. ಅವನಿಗೆ ಎರಡು ಕೈಗಳು. ಒಂದು ಕೈಯಲ್ಲಿ ತ್ರಿಶೂಲವನ್ನು ಹಿಡಿದುಕೊಂಡಿದೆ.[೧೬]
ಕುಶಾನ ರಾಜ ವೇಮಕಾಡ್‌ಫಿಸಿಸನ ಎರಡು ಚಿನ್ನದ ನಾಣ್ಯಗಳು ಗಮನೀಯವಾಗಿವೆ. ಒಂದರ ಮೇಲಿರುವ ಶಿವನ ಮೂರ್ತಿಗೆ ಒಂದು ಕೈಯಲ್ಲಿ ತ್ರಿಶೂಲವೂ ಇನ್ನೊಂದರಲ್ಲಿ ಕಮಂಡಲವೂ ಇದೆ. ಇನ್ನೊಂದು ನಾಣ್ಯದ ಮೇಲೆ ಶಿವನ ಪಕ್ಕದಲ್ಲಿ ಒಂದು ಗೂಳಿ (ವೃಷಭ)ನಿಂತುಕೊಂಡಿದೆ.[೧೭] ಈ ಎರಡು ನಾಣ್ಯಗಳಲ್ಲಿನ ಶಿವನ ಮೂರ್ತಿಗೆ ಎರಡು ಕೈಗಳಿವೆ. ನಾಣ್ಯಗಳ ಮೇಲಿನ ಬರಹವನ್ನು ಮಹೇಶ್ವರ ಎಂದು ಓದಿದ್ದಾರೆ.

ಕನಿಷ್ಕನಿಗೆ ಸಂಬಂಧಿಸಿದ ಚಿನ್ನದ ಮತ್ತು ತಾಮ್ರದ ನಾಣ್ಯಗಳ ಮೇಲೆ ಶಿವನ ಮೂರ್ತಿಗಳಿಗೆ ನಾಲ್ಕು ಕೈಗಳಿವೆ. ಅವು ತ್ರಿಶೂಲ, ಡಮರು, ಕಮಂಡಲ ಮತ್ತು ಪಾಶಗಳನ್ನು ಹಿಡಿದುಕೊಂಡಿವೆ; ಅವನಿಗೆ ನಾಲ್ಕು ಸುತ್ತಿನ ಪ್ರಭಾವಳಿಯಿದೆ.[೧೮] ಶಾತವಾಹನ ದೊರೆ ಹಾಲನು ರಚಿಸಿದ 'ಗಾಥಾಸಪ್ತಸತಿ' ಎಂಬ ಕೃತಿಯಲ್ಲಿ ಶೈವಧರ್ಮಕ್ಕೆ ಸಂಬಂಧಿಸಿದಂತೆ ೯ ಗಾಹೆಗಳು ಇದ್ದು, ಅದರಲ್ಲಿ ಆರು ಗಾಹೆಗಳು ಶಿವ-ಪಾರ್ವತಿಯರಿಗೆ ಸಂಬಂಧಿಸಿದಂತೆ ಇದೆ. ಒಂದು ಕಾಪಾಲಿಕರಿಗೆ ಸಂಬಂಧಿಸಿದಂತೆ ಇದ್ದರೆ ಇನ್ನುಳಿದ ಎರಡು ಗಾಹೆಗಳು ಗಣೇಶನ ಕುರಿತ ಉಲ್ಲೇಖಗಳಿವೆ. ಕೃತಿಯ ಆರಂಭದ ಒಂದನೆಯ ಗಾಹೆ ಹಾಗೂ ಕೃತಿಯಲ್ಲಿ ಕೊನೆಯಲ್ಲಿರುವ ೭೦೦ನೆಯ ಗಾಹೆಗಳು ಶಿವ-

ಪಾರ್ವತಿಯರನ್ನು ಕುರಿತಾಗಿವೆ. ಇದರಿಂದ ಶಾತವಾಹನರ ಕಾಲದಲ್ಲಿ ಶೈವ ಧರ್ಮವೂ ಪ್ರಾಮುಖ್ಯತೆಯನ್ನು ಪಡೆದುಕೊಂಡಿತೆಂದು ಗುರುತಿಸಬಹುದಾಗಿದೆ.[೧೯]

ಶೈವ ಪ್ರಭೇಧಗಳು :

ಶಿವೋಪಾಸನಾ ಧರ್ಮ ಪ್ರಭೇದಗಳ ಕುರಿತಂತೆ ಆಗಮಾದಿಗಳಲ್ಲಿ ಹಲವಾರು ಉಲ್ಲೇಖಗಳಿವೆ. ಈ ಸಂಬಂಧವಾಗಿ ಡಾ. ಆರ್.ಸಿ. ಹಿರೇಮಠ ಅವರು ತಮ್ಮ 'ಮಹಾಯಾತ್ರೆ' (ಪು. ೮೩-೮೭) ಎಂಬ ಗ್ರಂಥದಲ್ಲಿ ಸುದೀರ್ಘವಾಗಿ ಚರ್ಚಿಸಿದ್ದಾರೆ. ಅದು ಈ ಕೆಳಗಿನಂತಿದೆ.[೨೦]

ಶೈವಾಗಮಗಳಲ್ಲಿ ಉಕ್ತವಾದುದು ಶೈವಧರ್ಮ. ಸಾಮಾನ್ಯವಾಗಿ ಸಪ್ತಶೈವಗಳ ಉಲ್ಲೇಖ ಹಲವೆಡೆ ಕಂಡುಬರುತ್ತದೆ. ಪಾರಮೇಶ್ವರಾಗಮದಲ್ಲಿ ವೀರಶೈವ, ಅನಾದಿಶೈವ, ಆದಿಶೈವ, ಅನುಶೈವ, ಮಹಾಶೈವ, ಯೋಗಶೈವ, ಜ್ಞಾನಶೈವ ಎಂದು ಸಪ್ತವಿಧ ಶೈವಗಳನ್ನು ಹೇಳಲಾಗಿದೆ. ಇದೇ ಪಾರಮೇಶ್ವರ ತಂತ್ರದಲ್ಲಿ ತಂತ್ರಗಳು ಷಡ್ವಿಧವಾಗಿವೆಯೆಂದು ಹೇಳಲಾಗಿದೆ. ಮೊದಲನೆಯ ವಿಭಜನೆ ಆಯಾ ಶೈವಗಳಲ್ಲಿ ಅಡಕವಾಗಿರುವ ಜಾತಿಗಳ ಆಧಾರದ ಮೇಲೆ ನಿಂತಿದೆ.

ಏವಂ ಪ್ರೋಕ್ತಾಶೈವಭೇದಾ ಜಾತ್ಯನುಕ್ರಮಶೋಮಯಾ (ಸೂಕ್ಷ್ಮಾಗಮ ಪ. ೭, ಶ್ಲೋಕ ೧೬)

ಜಾತಿನಿಷ್ಠವಾದ ಅಂದರೆ ವರ್ಣಗಳ ಆಧಾರದ ಮೇಲೆ ಒಂದು ವಿಭಜನೆ ನಿಂತಿದೆ. ದರ್ಶನಗಳನ್ನು ಆಧರಿಸಿ ಇನ್ನೊಂದು ವಿಭಜನೆ ತಲೆದೋರಿದೆ.

ತಂತ್ರಂ ತು ಷಡ್ವಿಧಂಪ್ರೋಕ್ತಂ ಷಡ್ದರ್ಶನ ವಿಭೇದತಃ
ಶೈವ, ವೈಷ್ಣವಂ ಚ ಶಾಕ್ತಂ ಶೌರಂ ವಿನಾಯಕಂ
ಕಾಪಾಲಿಕಮಿತಿ ಜ್ಞೇಯಂ ದರ್ಶನಾಷಾಡೇವರಿ
(ಪಾರಮೇಶ್ವರ ಆಗಮ. ಪ. ೧, ಶ್ಲೋಕ ೧೫-೧೬)

ಶೈವ, ವೈಷ್ಣವ, ಶಾಕ್ತ, ಸೌರ, ವಿನಾಯಕ, ಕಾಪಾಲಿಕ ಎಂದು ದರ್ಶನವನ್ನು ಆಧರಿಸಿದ ಆರು ಬೇಧಗಳನ್ನು ವಿವರಿಸಲಾಗಿದೆ. ಅಲ್ಲದೆ ಶೈವದ ಚತುರ್ವಿದ ಭೇದಗಳನ್ನು ಹೀಗೆ ಉಲ್ಲೇಖಿಸುತ್ತದೆ. ಶೈವಂ, ಪಾಶುಪತಂ, ಸೋಮಂ ನಕುಲಂಚ ಚತುರ್ವಿಧಃ (ಪಾರಮೇಶ್ವರ ಆಗಮ ಪ. ೧-೨೪)

ಮೇಲೆ ನಿರ್ದೇಶಿಸಿದ ಷಡ್ವಿಧ ಶೈವಗಳು ವರ್ಣಾಶ್ರಮಗಳ ಆಧಾರದ ಮೇಲೆ ನಿಂತಿವೆ. ಎರಡನೆಯದು ದರ್ಶನಗಳನ್ನು ಆಧರಿಸಿದೆ. ಶೈವದಲ್ಲಿ ಹೇಳಿದ ವಾಮಶಕ್ತಿ ಪರವಾದುದು, ದಕ್ಷಿಣ ಭೈರವ ಪರವಾದುದು ಮಿಶ್ರ ಸಿದ್ಧಾಂತ ಪರಶಿವಪರವಾಗಿದೆ.

ಪಾರಮೇಶ್ವರವು ಉಲ್ಲೇಖಿಸುವ ಅನಾದಿಶೈವ, ಆದಿಶೈವವೆಂಬ ವರ್ಣವ್ಯವಸ್ಥೆಯ ಮೇಲೆ ನಿಂತುದನ್ನು ವಿವರಿಸಲಾಗಿದೆ. ಸೂಕ್ಷ್ಮ, ವೀರ ಮೊದಲಾದ ಆಗಮಗಳಲ್ಲಿ ಅನಾದಿಶೈವ, ಆದಿಶೈವ, ಮಹಾಶೈವ, ಅನುಶೈವ, ಆವಾಂತರ ಶೈವ, ಪ್ರವರಶೈವ, ಅಂತ್ಯಶೈವ ಎಂದು ಶೈವದ ಸಪ್ತ ಪ್ರಭೇದಗಳನ್ನು ಉಲ್ಲೇಖಿಸಲಾಗಿದೆ. (ಸೂಕ್ಷ್ಮಾಗಮ ಪ. ಶ್ಲೋಕ ೮–೧೬)

'ವೀರಶೈವ ವಿಜಯ' ಎಂಬ ಗ್ರಂಥದಲ್ಲಿ ಅನಾದಿಶೈವ, ಆದಿಶೈವ, ವಿಶುದ್ಧಶೈವ, ಕೇವಲಶೈವ, ಮಿಶ್ರಶೈವ ಎಂಬ ಆರು ಬಗೆಯ ಶೈವದ ಉಲ್ಲೇಖವಿದೆ. ಸೂಕ್ಷ್ಮಾಗಮವು ಏಳು ಬಗೆಯ ಶೈವಗಳನ್ನು ವಿವರಿಸಿದರೆ ಕಾರಣಾಗಮವು ಹತ್ತು ಬಗೆಯ ಶೈವಗಳನ್ನು ಹೇಳುತ್ತದೆ. ಹದಿನೈದು ಬಗೆಯ ಶೈವಗಳನ್ನು ಉಲ್ಲೇಖಿಸುವ ಗ್ರಂಥಗಳೂ ಉಂಟು.

ವರ್ಣವ್ಯವಸ್ಥೆಯ ಮೇಲೆ ನಿಂತ ವಿಭಜನೆಯಲ್ಲಿ ಆದಿಶೈವರೆಂದರೆ ದ್ವಿಜರು. ಸೂಕ್ಷ್ಮಾಗಮದಲ್ಲಿ ಈ ವಿಷಯವನ್ನು ಹೀಗೆ ಪ್ರಸ್ತಾಪಿಸಲಾಗಿದೆ.

ಆದಿ ಶೈವಾಸ್ತು ವಿಜ್ಞೇಯಾಃ ಕೌಶಿಕಾದ್ಯಾ ನಗಾತ್ಮ ಜೇ
ಕೌಶಿಕಾಃ ಕಾಶ್ಯಪಶ್ಚೈವ ಭಾರದ್ವಾಜಾತ್ರಿ ಗೌತಮಾಃ
ಅದೇವೇತಿ ಮಹಾದೇವಿ ಪಂಚವಕ್ತ್ರೇಷ್ಠಾ ದೀಕ್ಷಿತಾಃ
ಸದ್ವಂಶಾನಾಂ ಪುನರ್ದೀಕ್ಷಾನಾಸ್ತಿ...
ಪಿತ್ರಾದಿಭಿಶ್ಚೋಪದೇಶ್ಯಾ ಮಮಮಂತ್ರಾದಿಕಾಃ ಕ್ರಿಯಾಃ
ಏತೇ ಶಿವದ್ವಿಜಾಃ ಪ್ರೋಕ್ತಾ ... ಶೈವದೀಕ್ಷೋಕ್ರಮಾರ್ಗೇನಾ
ದೀಕ್ಷಿತಾ ಬ್ರಾಹ್ಮಣಾಃ (ಸೂಕ್ಷ್ಮಾಗಮ ಪ. ೭, ಶ್ಲೋಕ ೮–೧೬)

ಕೌಶಿಕ, ಕಾಶ್ಯಪ, ಅತ್ರಿ, ಗೌತಮ ಈ ಋಷಿವಂಶಜರು ದ್ವಿಜರೆಂದೂ ಅವರು ಆದಿಶೈವರೆಂದೂ ಇದರಿಂದ ವಿಧಿತವಾಗುತ್ತವೆ.

ನಿಜಗುಣ ಶಿವಯೋಗಿಗಳು ಶಿವನ ಪಂಚವಕ್ತ್ರದಿಂದ ದೀಕ್ಷಿತರಾದ ಕೌಶಿಕ, ಕಾಶ್ಯಪ, ಭಾರದ್ವಾಜ, ಅತ್ರಿ, ಗೌತಮ ಈ ಋಷಿಗಳನ್ನು ಮಾತ್ರ ಆದಿಶೈವರೆಂದು ಕರೆದಿರುವರು. ಈ ಋಷಿವಂಶಜರಾಗಿ ದೀಕ್ಷಿತರಾದ ದ್ವಿಜರನ್ನು ಸಹ ಸೂಕ್ಷ್ಮಾಗಮವು ಆದಿಶೈವರಲ್ಲಿ ಸೇರಿಸಿದರೆ ನಿಜಗುಣರು ಅವರನ್ನು ಮಹಾಶೈವರೆಂದು ಕರೆದಿರುವರು.

ಸೂಕ್ಷ್ಮಾಗಮದನ್ವಯ ಮಹಾಶೈವರೆಂದರೆ ಕ್ಷತ್ರಿಯರು (ಶಿವದೀಕ್ಷೆ ಸಂಸ್ಕಾರ ಹೊಂದಿದವರು) ಶಿವದೀಕ್ಷಾ ಸಂಪನ್ನರಾದ ವೈಶ್ಯರನ್ನು ಸೂಕ್ಷ್ಮಾಗಮವು ಅನುಶೈವರೆಂದು ಕರೆಯುತ್ತದೆ. ನಿಜಗುಣರು ಅವರನ್ನು ಆವಾಂತರ ಶೈವರೆಂದು ಸಂಬೋಧಿಸಿದರೆ ಇವರನ್ನೇ ನಿಜಗುಣ ಶಿವಯೋಗಿಗಳು ಪ್ರವರ

ಶೈವರೆಂದು ಕರೆದಿರುವರು. ಸೂಕ್ಷ್ಮಾಗಮವು ಶಿವದೀಕ್ಷಾಯುಕ್ತರಾದ ಶೂದ್ರಾಂಬಷ್ಠ ಕುಲಾದಿಗಳನ್ನು ಪ್ರವರ ಶೈವರೆಂದು ಸಂಭೋದಿಸಿದೆ. ಅನ್ಯೇಷಾಮಂತ್ಯ ಶಾಲೇನಾಂ ಅಂತ್ಯಶೈವಿಧೀಯತೇ ಎಂದು ಸೂಕ್ಷ್ಮಾಗಮವು ಹೇಳಿದರೆ, ದೀಕ್ಷೆಯಿಂದುಳಿದ ಅಂತ್ಯಜಾತಿಯವರೇ ಅಂತ್ಯಶೈವರೆಂದು ಹೇಳುತ್ತಾರೆ ನಿಜಗುಣರು.[೨೧] (ಸೂಕ್ಷ್ಮಾಗಮ ಪ. ೭, ಶ್ಲೋಕ ೮–೧೬) ಅನಾದಿಶೈವವೆಂದರೆ ಶಿವ; ಅನಾದಿ ಶೈವವೊಂದನ್ನು ಬಿಟ್ಟು ಉಳಿದ ಆರು ಶೈವಗಳು ವರ್ಣನಿಷ್ಠವಾದುವೆಂದು ಸ್ಪಷ್ಟವಾಗುತ್ತದೆ.

ಈ ವರ್ಣನಿಷ್ಠ ಶೈವಗಳನ್ನು ಉಲ್ಲೇಖಿಸುವಲ್ಲಿ ಸ್ವಲ್ಪ ವ್ಯತ್ಯಾಸ ಕಂಡುಬರುತ್ತದೆ. ಮೇಲೆ ನಿರ್ದೇಶನದ ವ್ಯತ್ಯಾಸಗಳಲ್ಲದೆ ಇನ್ನೂ ಒಂದು ಬಗೆಯ ವ್ಯತ್ಯಾಸ ಅಲ್ಲಿ ಕಂಡುಬರುತ್ತದೆ. ಸೂಕ್ಷ್ಮ ವೀರಗಳಲ್ಲಿ ಬರುವ ಮೊದಲಿನ ನಾಲ್ಕನ್ನು ಅಂದರೆ ಅನಾದಿಶೈವ, ಆದಿಶೈವ, ಮಹಾಶೈವ, ಅನುಶೈವ ಇವುಗಳನ್ನು ಹೇಳಿ ಪಾರಮೇಶ್ವರವು ವೀರಶೈವ, ಜ್ಞಾನಶೈವ, ಯೋಗಶೈವ ಈ ಮೂರನ್ನೂ ಸೇರಿಸಿ ಆವಾಂತರಶೈವ, ಪ್ರವರಶೈವ, ಅಂತ್ಯಶೈವಗಳನ್ನು ಬಿಟ್ಟಿದೆ. ಆದರೆ ನಿಜಗುಣ ಶಿವಯೋಗಿಗಳು, ವಿವೇಕ ಚಿಂತಾಮಣಿಯಲ್ಲಿ ಅನಾದಿಶೈವ, ಆದಿಶೈವ, ಮಹಾಶೈವ, ಅನುಶೈವ, ಆವಾಂತರಶೈವ, ಪ್ರವರಶೈವ, ಅಂತ್ಯ (ಅಂತರ) ಶೈವವೆಂಬ ಸಪ್ತ ಶೈವಗಳನ್ನು ಹೇಳುತ್ತಾರೆ. ಅಣದಿಶೈವವೆಂದರೆ ಶಿವನೆಂದು ಹೇಳಿ ಮಿಕ್ಕ ಶೈವ ಪ್ರಭೇದಗಳಲ್ಲಿ ಬರುವ ವರ್ಣಗಳನ್ನು ಅವಲೋಕಿಸಿದರೆ ನಿಜಗುಣರ ಈ ಪಟ್ಟಿಯಲ್ಲಿ ವೀರಶೈವ ಇಲ್ಲವೆಂಬುದು ಸ್ಪಷ್ಟವಾಗುತ್ತದೆ. ಆದರೆ ತೋಂಟದ ಸಿದ್ಧಲಿಂಗ ಶಿವಯೋಗಿಗಳು ಅನಾದಿಶೈವವನ್ನು ಹೇಳದೆ ಅದರ ಸ್ಥಳದಲ್ಲಿ ವೀರಶೈವವನ್ನು ಉಲ್ಲೇಖಿಸಿರುವರು.

ಶೈವಭೇದಗಳ ವಿಷಯದಲ್ಲಿ ಬೇರೆ ಬೇರೆ ಅಭಿಪ್ರಾಯಗಳು ವ್ಯಕ್ತವಾಗಿವೆ. ಶೈವ, ಪಾಶುಪತ, ಕಾಪಾಲ, ಕಾಳಾಮುಖ ಇವು ನಾಲ್ಕು ಬಗೆಯ ಶಿವಾಗಮಗಳೆಂದು ಒಂದೆಡೆ ವ್ಯಕ್ತವಾಗಿದ್ದರೆ, ವಾಮನ ಪುರಾಣದಲ್ಲಿ ಕಾಪಾಲಿಕ, ಕಾಲದಮನ, ಮಹಾವ್ರತಿನ್, ಕಾಳಾಮುಖ ಎಂದು ನಾಲ್ಕು ಶೈವ ಪ್ರಭೇದಗಳೆಂದು ಹೇಳಿದ್ದಾರೆ.

ವರುಣಪುರಾಣ(VI–೮೬–೯೨)ದ ನಿರೂಪಣೆಗಳು ಎಲ್ಲಕ್ಕೂ ಹೆಚ್ಚು ಕುತೂಹಲಕಾರಿಯಾಗಿವೆ. ಅದರ ಹೇಳಿಕೆ; ಬ್ರಹ್ಮನು ಹರ(ಶಿವ)ನನ್ನು ಪೂಜಿಸಲೆಂದು ನಾಲ್ಕು ಸಂಪ್ರದಾಯಗಳನ್ನು ನಿರ್ಮಿಸಿ ಪ್ರತಿಯೊಂದಕ್ಕೆ ಒಂದೊಂದು ಶಾಸ್ತ್ರವನ್ನು ನೀಡಿದನು. ಈ ಸಂಪ್ರದಾಯಗಳೆಂದರೆ ಮೊದಲನೆಯದು ಶೈವ, ತರುವಾಯ ಪಾಶುಪತ ಕಾಲದವನ ಹಾಗೂ ನಾಲ್ಕನೆಯದು ಕಾಪಾಲಿಕ. ವಾಮನಪುರಾಣ (IXVII–೧.೪೦)ವು ಗಣಗಳ ಹಾಗೂ ಪ್ರಮಥರ ಬೆಂಬಲವಿರುವ ಶಿವ ಮತ್ತು ಅಸುರರ ನಡುವೆ ನಡೆದ ಒಂದು ಕಾಳಗವನ್ನು ಕುರಿತು ಉಲ್ಲೇಖಿಸುತ್ತಾ, ಶೈವರು, ಪಾಶುಪತರು, ಕಾಳಾಮುಖರು, ಮಹಾವ್ರತಿಗಳು ನಿರಾಶ್ರಯರು ಹಾಗೂ

ಮಹಾಪಾಶುಪತರೆಲ್ಲ ಶಿವನ ಮೈತ್ರಿಕೂಟವನ್ನು ಸೇರಿದವರು. ಶಿವನ ಕೊನೆಯ ಗುಂಡನ್ನು ವಿಶೇಷವಾಗಿ ಬರಮಾಡಿಕೊಳ್ಳಲು ಕಾರಣ ಅವರು ಶಿವ ಹಾಗೂ ವಿಷ್ಣುವಿನ ನಡುವೆ ಯಾವುದೇ ಬೇಧವನ್ನೂ ಕಲ್ಪಿಸುತ್ತಿರಲಿಲ್ಲ. ಇಲ್ಲಿ ಪಾಶುಪತ ಹಾಗೂ ಮಹಾಪಾಶುಪತಿಗಳು ಎರಡು ಬೇರೆ ಗುಂಪುಗಳಾಗಿ ಕಾಣುತ್ತವೆ.[೨೨] ಶ್ರೀ ರಾಮಾನುಜರು ತಮ್ಮ ಭಾಷ್ಯದಲ್ಲಿ ಮೊದಲಿನ ನಾಲ್ಕು ಪಂಗಡ (ಶೈವ, ಪಾಶುಪತ, ಕಾಪಾಲ, ಕಾಲಾಮುಖ)ಗಳನ್ನೇ ವಿಲೋಮದಿಂದ ಹೆಸರಿಸಿದ್ದಾರೆ.

ಮಧ್ವಾಚಾರ್ಯರು ತಮ್ಮ ಸರ್ವದರ್ಶನ ಸಂಗ್ರಹದಲ್ಲಿ ಲಕುಲೀಶ, ಪಾಶುಪತ, ಶೈವ ಅಥವಾ ಮಾಹೇಶ್ವರ ಪ್ರತ್ಯಧಿಜ್ಞಾನಪಂಥ, ರಸೇಶ್ವರ ಎಂಬ ನಾಲ್ಕು ಪಂಥಗಳನ್ನು ಹೇಳಿದ್ದರೆ ಹರಿಭದ್ರ ಸೂರಿಯ 'ಷಡ್ದರ್ಶನಸಮುಚ್ಚಯ' ವ್ಯಾಖ್ಯಾನಕಾರ ಹರಿಭದ್ರನು ಶೈವ, ಪಾಶುಪತ, ಮಹಾವ್ರತಧಾರ, ಕಾಳಾಮುಖಿಗಳು ಶೈವದ ನಾಲ್ಕು ಶಾಖೆಗಳು ಎಂದಿದ್ದಾರೆ. ಯಮುನಾಚಾರ್ಯರ ಆಗಮ ಪ್ರಮಾಣ್ಯದಲ್ಲಿ ಶೈವ, ಪಾಶುಪತ, ಕಾಪಾಲಿಕ, ಕಾಳಾಮುಖಿರ ಹೆಸರಿವೆ. ಸೂತಸಂಹಿತೆಯಲ್ಲಿ ಕಾಪಾಲಿಕ, ಲಾಕುಲ, ಪಾಶುಪತ, ಸೋಮ, ಭೈರವರ ಉಲ್ಲೇಖವಿದೆ. 'ಸಾಯಣ–ಮಾಧವರು' ಲಕುಲೀಶ–ಪಾಶುಪತವನ್ನು ಹೇಳಿದ್ದಾರೆ. ಆದರೆ ಕಾಳಾಮುಖಿರ ಹೆಸರಿಲ್ಲ.

ಒಟ್ಟಾರೆಯಾಗಿ ಆಗಮಗಳಲ್ಲಿಯ ಶೈವ ಪ್ರಭೇದಗಳನ್ನು ಹೀಗೆ ಗುರುತಿಸಬಹುದು.

೧. ಚಂದ್ರಜ್ಞಾನಾಗಮದಲ್ಲಿ : ಅನಾದಿಶೈವ, ಆದಿಶೈವ, ಪೂರ್ವಶೈವ, ಮಿಶ್ರಶೈವ, ಶುದ್ಧಶೈವ, ಮಾರ್ಗಶೈವ, ಸಾಮಾನ್ಯಶೈವ ಹಾಗೂ ವೀರಶೈವ ಎಂಬ ಎಂಟು ಪ್ರಭೇದಗಳನ್ನು ಹೇಳಿದೆ. (ಅದರಲ್ಲಿಯೇ ವೀರಶೈವದ ಸಾಮಾನ್ಯ, ವಿಶೇಷ, ನಿರಾಭಾರಿ ಎಂಬ ಮೂರು ಪ್ರಭೇದಗಳನ್ನು ಹೇಳಿದೆ) (ಕ್ರಿಯಾಪಾದ ೧೦–೪೦೫)

೨. ಪಾರಮೇಶ್ವರ ಆಗಮದಲ್ಲಿ : ಆದಿಶೈವ, ಅನಾದಿಶೈವ, ಮಹಾಶೈವ, ಯೋಗಶೈವ, ಜ್ಞಾನಶೈವ, ವೀರಶೈವ, ಅನುಶೈವ ಎಂಬ ಏಳು ಪ್ರಕಾರಗಳನ್ನು ಹೇಳಿದೆ.

೩. ಸೂಕ್ಷ್ಮಾಗಮದಲ್ಲಿ ಏಳನೆಯ ಪಟಲದಲ್ಲಿ ಶೈವಮತದ ಪ್ರಭೇದಗಳನ್ನು ಕುರಿತು ವಿಸ್ತಾರವಾದ ವಿವರಣೆ ಇದೆ.[೨೩] ಹನ್ನೊಂದು ಪ್ರಭೇದಗಳನ್ನು ಹೇಳಿದ್ದು ಅವು ಇಂತಿವೆ. ಅನಾದಿಶೈವ, ಆದಿಶೈವ, ಮಹಾಶೈವ, ಅನುಶೈವ, ಅವಾಂತರ ಶೈವ, ಪ್ರವರಶೈವ, ಅಂತ್ಯಶೈವ, ಸಾಮಾನ್ಯಶೈವ, ಮಿಶ್ರಶೈವ, ಶುದ್ಧಶೈವ, ವೀರಶೈವ.

೪. ಸುಪ್ರಭೇದಾಗಮದಲ್ಲಿ : ದಕ್ಷಿಣಶೈವ, ಮಿಶ್ರಶೈವ, ವಾಮಶೈವ ಮತ್ತು ಸಿದ್ಧಾಂತಶೈವ ಎಂಬ ನಾಲ್ಕು ಪ್ರಕಾರಗಳನ್ನು ಉಲ್ಲೇಖಿಸಿದೆ.

೫. ವೀರಾಗಮವು : ೨೮ ಶೈವ ಪ್ರಭೇದಗಳನ್ನು ಉಲ್ಲೇಖಿಸಿದೆ. ಅವುಗಳೆಂದರೆ, ಶುದ್ಧಶೈವ, ಕ್ರಿಯಾಶೈವ, ರೂಪಶೈವ, ಮಿಶ್ರಮಾರ್ಗಶೈವ, ತಾಂತ್ರ್ಯಶೈವ, ಉನ್ನತ್ತಶೈವ, ಸ್ವರಶೈವ, ಗುಣಶೈವ, ಬಿಂಬಶೈವ, ಭಕ್ತಶೈವ, ಕರ್ಮಕ್ರಿಯಾಶೈವ, ಮಠಶೈವ, ಜಾತಿಶೈವ, ಕ್ರಿಯೋಪಾಧಿಶೈವ, ಭೋಗಶೈವ, ಮಹಾತ್ಮಶೈವ.

ವಚನಕಾರರು ಶೈವ ಪ್ರಭೇದಗಳನ್ನು ಕುರಿತು ತಮ್ಮ ವಚನಗಳಲ್ಲಿ ಪ್ರಸ್ತಾಪಿಸಿರುವುದುಂಟು. ಪ್ರಸಾದಿ ಭೋಗಣ್ಣನು ತನ್ನದೊಂದು ವಚನದಲ್ಲಿ ಆರುಶೈವಗಳನ್ನು ಕುರಿತು ಹೇಳಿದ್ದರೆ (ಅರಿ.ಮಾ.ತಂ. ಸ.ವ.ಸಂ.೧, ಪು. ೧೮೯, ವ. ೪೬೮), ಮೋಳಿಗೆಯ ಮಾರಯ್ಯ (ಅದೇ ಸಂ. ೩, ಪು. ೩೭೭, ವ. ೨೦೦೧), ಕೆಲಕೇತಯ್ಯ (ಅದೇ ಸಂ. ೩, ಪು. ೧೮, ವ. ೪೧) ಮೊದಲಾದವರು ಷಡ ಶೈವಗಳ ಉಲ್ಲೇಖವಿದೆ.

ಅರಿವಿನ ಮಾರಿತಂದೆ ತನ್ನ ಎರಡು ವಚನಗಳಲ್ಲಿ ಇತರ ಶೈವರನ್ನು ನಿರಾಕರಿಸುವುದು ಹೀಗೆ:

ಯೋಗಿ, ಜೋಗಿ, ಶ್ರಾವಕ, ಸನ್ಯಾಸಿ, ಪಾಶುಪತಿ, ಕಾಳಾಮುಖಿ
ಆರು ಭೇದ ಮೂರರಲ್ಲಿ ಅಡಗಿ ಎರಡು ಅಳಿವಿಂಗೆ ಒಳಗಾಗಿತ್ತ
ಒಂದು ನಿಂದು ಸಮಯ ರೂಪವಾಗಿತ್ತು.
ಸಮಯಕ್ಕೆ ಹೊರಗಾದುದು ಸದಾಶಿವಮೂರ್ತಿಲಿಂಗಕ್ಕೆ ಶಕ್ತಿ
ನಾಮವಿಲ್ಲ (ಅದೇ, ಸಂಪುಟ.೧, ಪು. ೧೭೬, ವ. ೫೯೩)

ಇಲ್ಲಿ ಆರು ಸಮಯಗಳು ಮೂರರಲ್ಲಿ ಅಡಗಿವೆ. ಎರಡು ನಾಶವಾಗಿವೆ. ಒಂದು ಮಾತ್ರ ಸಮಯ ರೂಪ ಪಡೆದಿದೆ. ಅದು ಕೂಡಾ ಶಕ್ತಿನಾಮವಿಲ್ಲದ್ದರಿಂದ ನಿಜವಾದ ಸಮಯದಿಂದ (ವೀರಶೈವ) ಹೊರಗಾಗಿದೆ ಎಂಬುದು ಇದರ ಅರ್ಥ. ಯೋಗಿ-ಜೋಗಿ, ಶ್ರಾವಕ-ಸನ್ಯಾಸಿ, ಪಾಶುಪತಿ-ಕಾಳಾಮುಖಿ ಎಂಬ ದ್ವಯಗಳನ್ನು ಇಲ್ಲಿ ಕಲ್ಪಿಸಲಾಗಿದೆ. ಇನ್ನೊಂದು ವಚನದಲ್ಲಿ;

ಯೋಗಿ ಪಾಶುಪತಿ ಕಾಳಾಮುಖಿ ಈ ಮೂರು ಶೈವಪಕ್ಷವಾಗಿಹವು
ಜೋಗಿ ತ್ರಿದಂಡಿ ಬೌದ್ಧ ಈ ಮೂರು ವಿಷ್ಣು ಪಕ್ಷಬಾಗಿಹವು
ಇಂತೀ ಆರು ಅವತಾರಕ್ಕೆ ಸಂಬಂಧವಾಗಿಹವು
ಆರರಿಂದ ಮೀರಿದ ದರ್ಶನಕ್ಕೆ ತೋರಲಿಲ್ಲದ ಸುವಸ್ತು ತಾನಾಗಿ
ರೂಪಿಂಗೆಡೆಯಲ್ಲಿ ಸದಾಶಿವ ಮೂರ್ತಿಲಿಂಗವು ತಾನಾಗಿ[೨೪]
ಚನ್ನಬಸವಣ್ಣನ ಒಂದು ವಚನದಲ್ಲಿ;

ಗುರುಲಿಂಗ ಜಂಗಮ...

ಯೋಗಿ ಜೋಗಿ ಶ್ರವಣ ಸನ್ಯಾಸಿ ಕಾಳಾಮುಖಿ ಪಾಶುಪತಿ

ಎಂಬ ಷಡುದರ್ಶನದ ಶೈವ ಕರ್ಮಿಗಳ

ಗುರುವೆಂಬುದಕ್ಕೆ ನಾಚದವರನೆನೆಂಬೆನಯ್ಯ[೨೫]

ಅರಿವಿನ ಮಾರಿತಂದೆಗಳ ವಚನದಲ್ಲಿರುವ ಹೆಸರುಗಳೇ ಇಲ್ಲಿ ಪುನರಾವರ್ತನೆಯಾಗಿರುವುದನ್ನು ಕಾಣಬಹುದು. ಅವರದೇ ಇನ್ನೊಂದು ವಚನದಲ್ಲಿ;

ಕಕ್ಷೆಯಲ್ಲಿ ಲಿಂಗ ಧರಿಸಿಕೊಂಬಾತ ಬ್ರಹ್ಮ

ಕರಸ್ಥಲದಲ್ಲಿ ಲಿಂಗದ ಧರಿಸಿಕೊಂಬಾತ ವಿಷ್ಣು

. . . .

ಬ್ರಹ್ಮಪಾಶುಪತಿಯಾಗಿ ಸಲುಳಿದ, ವಿಷ್ಣು ಜೋಗಿಯಾಗಿನುಸುಳಿದ

ರುದ್ರ ಶ್ರವಣನಾಗಿ ಸುಳಿದ, ಪರಮೇಶ್ವರ ಕಾಳಾಮುಖಿಯಾಗಿ

ಸುಳಿದ[೨೬]

ಅವರದೇ ಮತ್ತೊಂದು ವಚನದಲ್ಲಿ;

ಶೈವ ಸೈವೆರಗಾದ, ಪಾಶುಪತಿ ಪಥವರಿಯ, ಕಾಳಾಮುಖಿ ಕಂಗೆಟ್ಟ

ಮಹಾವ್ರತಿ ಮದವೇರಿದ, ಸನ್ಯಾಸಿ ಪಾಷಂಡಿಯಾದ

ಕಾಪಾಲಿ ಮರುಳಾಗಿ ತಿರುಗಿದ ಈ ಆರುಭಕ್ತಿಪಥಕ್ಕೆ

ಸಲ್ಲವು ಕೇಳಿರಣ್ಣ[೨೭]

ಇಲ್ಲಿ ಆತ ಮೇಲಿನ ಶೈವ ಮತಗಳಿಂದ ವೀರಶೈವ ಹೇಗೆ ಭಿನ್ನ ಹಾಗೂ ಶ್ರೇಷ್ಠ ಎಂಬುದನ್ನು ಸಾಧಿಸಲು ಪ್ರಯತ್ನಿಸಿದ್ದಾರೆ.

ಸಿದ್ಧರಾಮನು, ಬಸವಣ್ಣನು ಭೂಮಿಗೆ ಅವತರಿಸುವುದಕ್ಕೆ ಕಾರಣವನ್ನು ಈ ರೀತಿ ಹೇಳಿದ್ದಾನೆ.

ಜೈನ ಚಾರ್ವಾಕ ಕಾಳಾಮುಖ ಎನಿಸುವ ಷಡ್‌ದರ್ಶನಾದಿಗಳು ಹೆಚ್ಚಿ

ವಿಭೂತಿ ರುದ್ರಾಕ್ಷಿ ಪಂಚಾಕ್ಷರವನರಿಯದೆ ನರಕಕ್ಕೆ ಭಾಜನವಾಗಿ

ಪಾಡರೆಂದು... ದೇವರು ನಂದೀಕೇಶ್ವರ ಮುಖ ನೋಡಲು

ಆತ ಬಸವಣ್ಣನಾಗಿ ಭೂಮಿಗೆ ಬಂದ ಎಂದಿದ್ದಾನೆ.

ಹೀಗೆ ವಚನಕಾರರು ಷಡದರ್ಶನ ಎಂಬ ಪದವನ್ನು ಸಂಖ್ಯಾದಿ ಪ್ರಾಚೀನ ದರ್ಶನಗಳಿಗೆ ಹೇಳದೆ ತಮ್ಮ ಕಾಲದ ಸಮಯಗಳನ್ನು ಷಡ್‌ದರ್ಶನ ಎಂದಿರುವುದು ಸ್ಪಷ್ಟವಾಗುತ್ತದೆ.

ವಚನಕಾರರು ಶೈವ ಪ್ರಭೇದಗಳಾದ ಕಾಪಾಲಿಕ ಪಾಶುಪತ ಮತ್ತು ಕಾಳಾಮುಖರನ್ನು ಖಂಡಿಸಿದುದೇಕೆ ಎಂಬ ಪ್ರಶ್ನೆಗಳು ಏಳುವುದು ಸಹಜ.

ಕಾಪಾಲಿಕರು ಶಿವನನ್ನು ಉಗ್ರಭೈರವನ ಸ್ವರೂಪದಲ್ಲಿ ಕಾಣುತ್ತಾರೆ. ಇವರ ವಾಮಮಾರ್ಗಿಯ ಆಚರಣೆಗಳು, ಬೀಭತ್ಸ್ಯ ವರ್ತನೆಗಳು ವಚನಕಾರರ ಉಗ್ರ ಟೀಕೆಗೆ ಒಳಗಾಗಿರುವುದು ಅವರ ವಚನಗಳಿಂದ ತಿಳಿದುಬರುತ್ತದೆ. ಅಲ್ಲಮಪ್ರಭುವು ಕಾಪಾಲಿಕರ ಭೈರವನನ್ನು ಭಯಂಕರ ಸ್ವರೂಪಿಯಾದ ಶಿವನೆಂದು ಕರೆಯುವವರನ್ನು ಶಿವದ್ರೋಹಿಗಳು, ಗುರುದ್ರೋಹಿಗಳು ಎಂದಿರುವನು.[೨೮] ಇಂತಹ ಅನೇಕ ವಚನಗಳು ನಮಗೆ ಸಿಗುತ್ತವೆ.

ಇನ್ನು ಸೌಮ್ಯ ಸ್ವರೂಪಿಗಳೆಂದು ಕರೆಯಿಸಿಕೊಂಡ ಕಾಳಾಮುಖ ಹಾಗೂ ಪಾಶುಪತರ ನಡಾವಳಿಯನ್ನು ಸಹ ಅನೇಕ ವಚನಕಾರರನ್ನು ಟೀಕಿಸಿರುವರು. ಚನ್ನಬಸವಣ್ಣನು ಕಾಳಾಮುಖ ಪಾಶುಪತರನ್ನು ಷಡುದರ್ಶನದ ಶೈವಕರ್ಮಿಗಳ ಪಟ್ಟಿಯಲ್ಲಿ ಸೇರಿಸುವನು. ಇವರು ಗುರುವೆಂದೂ ಮಹಾಘನ ಗುರುಲಿಂಗಕ್ಕೆ ಸಮನಾಗಿ ಭಾವಿಸಿದರೆ, ಒಂದೇ ಎಂದರೆ ಅಘೋರನರಕ ಎಂದು ಎಚ್ಚರಿಸುವನು (ವ. ೪೬೬) ಮತ್ತೊಂದೆಡೆ ಶೈವ ಸನ್ಯಾಸಿ ಕಾಳಾಮುಖಿಯ ಗುರುವೆಂಬ ಅನಾಮಿಕನ ಮಾತನಾಡಿಸಲಾಗದು ಎನ್ನುವನು. (ವ. ೩೬೬)

ಕಾಳಾಮುಖರ ದೇವಾಲಯ ನಿರ್ಮಾಣ ಹಾಗೂ ಸ್ಥಾವರಲಿಂಗ ಪ್ರತಿಷ್ಠಾಪನಾಕಾರ್ಯಗಳು ವಚನಕಾರರು ಅವರನ್ನು ಖಂಡಿಸಲು ಮುಖ್ಯ ಕಾರಣಗಳಾಗಿರಬಹುದು.

ಪಾಶುಪತರು ದಿನದಲ್ಲಿ ಮೂರು ವೇಳೆ ಭಸ್ಮಸ್ನಾನ ಆಹಾ ಆಹಾ ಎಂದು ಕೂಗುವುದು, ಭಗವಂತನ ನಾಮವನ್ನು ಸ್ಮರಿಸುವುದು, ಕುಣಿಯಡು, ಹುಡುಕ್ಕಾರ ಎಂಬ ಶಬ್ದವನ್ನು ಮಾಡುವುದು ನಮಸ್ಕರಿಸುವುದು ಈ ಬಗೆಯ ವ್ರತಗಳು. ಹುಚ್ಚರಂತೆ ವರ್ತಿಸುವುದು, ನಿದ್ದೆಯಿಲ್ಲದಿದ್ದರೂ ನಿದ್ದೆ ಬಂದವರಂತೆ, ಲಕ್ವ ಹೊಡೆದವನಂತೆ, ವಾಯುರೋಗಪೀಡಿತರಂತೆ, ಕುಂಟರಂತೆ, ಕಾಮುಕರಂತೆ ನಟಿಸುವ ವಿಚಿತ್ರ ತರವಾದ ಆಚರಣೆಗಳು ಬಹುಷಃ ವಚನಕಾರರಿಗೆ ಹಿಡಿಸಿರಲಿಕ್ಕಿಲ್ಲ. ಅದಕ್ಕಾಗಿ ಅವರನ್ನಿ ಟೀಕಿಸಿರಬೇಕು.

ಶಾಸನಗಳಲ್ಲಿ ಶೈವ ಪ್ರಭೇದಗಳು :

ಕರ್ನಾಟಕದ ಕೆಲವು ಶಾಸನಗಳಲ್ಲಿಯಾದರೂ ಶೈವ ಪ್ರಭೇದದ ಉಲ್ಲೇಖಗಳಿರುವುದನ್ನು ಗಮನಿಸಬಹುದಾಗಿದೆ. ಅದರಲ್ಲಿ ಸಗರದ ಕ್ರಿ.ಶ. ೧೦೧೭ರ ಶಾಸನ, ಶಿರಸಂಗಿಯ ಕ್ರಿ.ಶ. ೧೧೪೮ರ

ಶಾಸನ, ನೇಸರಗಿಯ ಕ್ರಿ.ಶ. ೧೨೧೯ರ ಶಾಸನಗಳು ಶೈವದ ನಾಲ್ಕು ಪ್ರಭೇದಗಳನ್ನು ಉಲ್ಲೇಖಿಸುತ್ತವೆ.


ಶಿರಸಂಗಿಯ (ಕ್ರಿ.ಶ. ೧೧೪೮) ಮತ್ತು ನೇಸರಗಿಯ (ಕ್ರಿ.ಶ. ೧೨೧೯) ಶಾಸನಗಳಲ್ಲಿ ಕಂಡುಬರುವ ಪುನರುಕ್ತ ಕಂದಪದ್ಯದಲ್ಲಿ ನಾಲ್ಕು ಶೈವಗಳ ಉಲ್ಲೇಖ ಇಂತಿದೆ.

ನೆಗರ್ದ್ದ ಮಹಾವ್ರತಿಗಳೊಳಂ
ನೆಗರ್ದ್ದ ಮಹಾಪಾಸುಪತದೊಳ್ ಸ್ರೋತ್ರೀಯದೊಳಂ ।
ನೆಗರ್ದ್ದುದಗಣಿತಮೆನಳ್ಕೆ
ನೆಗರ್ದ್ದ ಕಾಳಾಮುಖ ಸುಧರ್ಮ೦ ಪ್ರಮುಖಂ ॥[೨೯]

ಇಲ್ಲಿ ಮಹಾವ್ರತಿ, ಪಾಶುಪತ, ಶ್ರೋತ್ರೀಯ, ಕಾಳಾಮುಖವೆಂಬ ಶಾಖೆಗಳನ್ನು ಸೂಚಿಸಲಾಗಿದೆ. ಇವುಗಳಲ್ಲಿ ಶ್ರೋತ್ರೀಯವು ಹೆಚ್ಚು ವೇದನಿಷ್ಠವಾಗಿರಬಹುದು.

ಯಾದಗಿರಿ ಜಿಲ್ಲೆಯ ಸಗರದ ಕ್ರಿ.ಶ. ೧೦೭೧ ರ ಶಾಸನದಲ್ಲಿ ಅನಂತಶಕ್ತಿಯನ್ನು ಕುರಿತು ಹೇಳಲಾದ "ಕಾಳಾಮುಖ, ಮಹಾವ್ರತ, ಪಾಶುಪತ ಶಿವಸಮಯ ಸಮಾನ ಪಕ್ಷಪಾತಕ' ಎಂಬ ಉಲ್ಲೇಖವು ಗಮನಿಸುವಂತಹದ್ದಾಗಿದೆ. ಇಲ್ಲಿ ಮೇಲಿನ ಸಿರಸಂಗಿ ಹಾಗೂ ನೇಸರಗಿಯ ಶಾಸನಗಳಲ್ಲಿ ಉಲ್ಲೇಖವಾಗಿರುವ ಶ್ರೋತ್ರೀಯ ಪದಕ್ಕೆ ಪರ್ಯಾಯವಾಗಿ ಶಿವಸಮಯವೆಂಬುದನ್ನು ಉಪಯೋಗಿಸಲಾಗಿದೆ. ಇಲ್ಲಿಯ ಇನ್ನೊಂದು ಪದ 'ಸಮಾನ ಪಕ್ಷಪಾತಕ' ಎಂಬುದು ನಾಲ್ಕು ಶೈವಗಳಲ್ಲಿ ಅಷ್ಟಾಗಿ ವ್ಯತ್ಯಾಸವಿಲ್ಲವೆಂಬುದು. ಬಹುಶಃ ಇವು ಒಂದೇ ಮೂಲ ಶಾಖೆಗಳೆಂಬುದನ್ನು ಸೂಚಿಸುತ್ತವೆ. ಈ ನಾಲ್ಕು ಶೈವಗಳಲ್ಲಿ ಕರ್ನಾಟಕದ ಶಾಸನಗಳು ಲಕುಲೀಶ, ಪಾಶುಪತಗಳನ್ನು ಮಹಾವ್ರತಿ (ಕಾಪಾಲಿಕ), ಶ್ರೋತ್ರೀಯ (ಶಿವಸಮಯ)ಗಳನ್ನು ಉಲ್ಲೇಖಿಸುತ್ತದೆ.

ಶ್ರೋತ್ರೀಯ ಶೈವವು ಶಾಖೋಪಶಾಖೆಗಳಾಗಿ ಬೆಳೆದಿದ್ದು ಅವರ ಒಟ್ಟು ಚಿತ್ರಣವನ್ನು ಎಂ.ಎಂ. ಕಲಬುರ್ಗಿಯವರು ಹೀಗೆ ನೀಡಿದ್ದಾರೆ.



ಈ ನಾಲ್ಕು ಶಾಖೆಗಳು (ಕಾಳಾಮುಖ, ಪಾಶುಪತ, ಕಾಪಾಲಿಕ, ಶ್ರೋತ್ರೀಯ ಶೈವ) ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರ ಲಿಂಗಾಯತದೊಳಗೆ ಲೀನವಾಗಿ ಹೋದವು. ಹೀಗಿದ್ದೂ ಅವುಗಳ ಮಠಾಧೀಶರು ಕರ್ನಾಟಕದಲ್ಲಿ ಬಸವ ಪರಂಪರೆಯ 'ಜಂಗಮ'ರಾಗಿ ಆಂಧ್ರಪ್ರದೇಶದಲ್ಲಿ ವೈದಿಕ ಪರಂಪರೆಯ 'ಆರಾಧ್ಯ'ರಾಗಿ ರೂಪುಗೊಂಡರು. ಜೊತೆಗೆ ಈ ಆರಾಧ್ಯರಲ್ಲಿ ಜನಿವಾರ+ಇಷ್ಟಲಿಂಗದ ಆರಾಧ್ಯರು, ಇಷ್ಟಲಿಂಗದ ಆರಾಧ್ಯರು ಎಂಬ ಎರಡು ಶಾಖೆಗಳು ಬೆಳೆದುಬಂದವು. ಈಗಲೂ ಮೈಸೂರಿನಲ್ಲಿ ಈ ಎರಡು ಬಗೆಯ ಆರಾಧ್ಯರನ್ನು ಕಾಣಬಹುದು[೩೧] ಎಂದು ಹೇಳಿದ್ದಾರೆ. ಇದರ ಚರ್ಚೆ ಇಲ್ಲಿ ಅಪ್ರಸ್ತುತ.

ಆಗಮಗಳಲ್ಲಿ, ವಚನಗಳಲ್ಲಿ, ಶಾಸನಗಳಲ್ಲಿ ಉಲ್ಲೇಖವಾಗಿರುವ ಶೈವ ಪ್ರಭೇದಗಳನ್ನು ಅವಲೋಕಿಸಿದರೆ ಅವುಗಳಲ್ಲಿ ಅತ್ಯಂತ ಪ್ರಭಾವಪೂರ್ಣವಾಗಿರುವ ನಾಲ್ಕು ಪ್ರಬೇದ ಶೈವ ಪ್ರಭೇದಗಳೆಂದರೆ ಪಾಶುಪತ, ಕಾಳಾಮುಖ, ಕಾಪಾಲಿಕ ಮತ್ತು ಶ್ರೋತ್ರೀಯ ಶೈವ ಇವುಗಳನ್ನು ಕುರಿತು ಸಂಕ್ಷಿಪ್ತವಾಗಿ ಹೀಗೆ ಹೇಳಬಹುದು.

ಪಾಶುಪತ

ಇದು ಶೈವಧರ್ಮದ ಪ್ರಾಚೀನ ಶಾಖೆ. ಪಶುಪತಿ ಈ ತತ್ವವನ್ನು ಹೇಳಿದನೆಂದು ಹೇಳುತ್ತಾರೆ. ಇದಕ್ಕೆ ನಕುಲೀಶ ಅಥವಾ ಲಕುಲೀಶ ಮತವೆಂದು ಕರೆಯುವ ವಾಡಿಕೆ ಇದೆ. ಸಿಂಧೂ ನಾಗರಿಕತೆಯಲ್ಲಿ ಇದರ ಉಲ್ಲೇಖಗಳು ಸಿಗುತ್ತವೆ. ಇಲ್ಲಿ ದೊರೆತಿರುವ ಮುದ್ರೆಯೊಂದರ ಮೇಲೆ ಯೋಗಿರೂಪಿ ಮಾನವಾಕೃತಿಯನ್ನು 'ಪಶುಪತಿ' ಎಂದು ಗುರುತಿಸಲಾಗಿದ್ದು, ಆ ವ್ಯಕ್ತಿಯ ತಲೆಯಲ್ಲಿ ಮೂರು ಕೊಂಬು, ಎದೆಯ ಮೇಲೆ ಯೋನಿಗಳನ್ನು ಸಂಕೇತಿಸುವ ತ್ರಿಕೋನಾಕಾರಗಳು, ಸುತ್ತ ಆನೆ, ಹುಲಿ, ಘೇಂಡಾಮೃಗ, ಎಮ್ಮೆ, ಜಿಂಕೆಗಳಿವೆ.

ಮಹಾಭಾರತದಲ್ಲಿ ಹೇಳಿರುವ ಐದು ಸಿದ್ಧಾಂತಗಳಲ್ಲಿ ಪಾಶುಪತವೂ ಒಂದು. ಅರ್ಜುನನು ಶಿವನ ಕೃಪೆಯಿಂದ ಪಾಶುಪತಾಸ್ತ್ರವನ್ನು ಪಡೆದ ವಿಷಯ ತಿಳಿದುದಾಗಿದೆ. ಹೀಗೆ ಶೈವಧರ್ಮದ ಒಂದು ಪ್ರಭೇದವಾದ ಪಾಶುಪತವು ಅತ್ಯಂತ ಪ್ರಾಚೀನವಾದುದು. ಅಲ್ಲಿಂದ ಪುರಾಣಗಳಲ್ಲಿ, ಆಗಮಗಳಲ್ಲಿ, ವಚನಗಳಲ್ಲಿ, ಶಾಸನಗಳಲ್ಲಿ ಪಾಶುಪತದ ಉಲ್ಲೇಖವನ್ನು ಗಮನಿಸುತ್ತೇವೆ. ಅದರಂತೆ ನೇಪಾಳದ ಕಾಟಮಾಂಡುವಿನಲ್ಲಿರುವ ಪಶುಪತಿ ದೇವಾಲಯವು ಇಂದಿಗೂ ಪೂಜೆಗೊಳ್ಳುತ್ತಿದ್ದು ಜೀವಂತ ಸಾಕ್ಷಿಯಾಗಿದೆ.

ಕ್ರಿ.ಶ. ೬೪೨ ರ ಸುಮಾರಿಗೆ ಭಾರತಕ್ಕೆ ಭೇಟಿಯನ್ನು ನೀಡಿದ್ದ ಚೀನಿ ಪ್ರವಾಸಿ ಹುಯೆನ್‌ತ್ಸಾಂಗನು ಪಾಶುಪತದ ಹೆಸರನ್ನು ಸುಮಾರು ೧೨ ಸಾರಿ ಉಲ್ಲೇಖಿಸಿದ್ದಾನೆ. ಅಲ್ಲದೆ

ಮಹೇಶ್ವರ ದೇವಸ್ಥಾನಗಳು ಕೆಲವೆಡೆ ಇದ್ದವೆಂದೂ, ಅಲ್ಲಿ ಪಾಶುಪತರು ಧ್ಯಾನ ಮಾಡುತ್ತಿದ್ದರೆಂದೂ ಹೇಳಿದ್ದಾನೆ. ದೇಹಕ್ಕೆ ಭಸ್ಮವನ್ನು ಬಳಿದು, ಜಟೆಯನ್ನು ಗಂಟಾಗಿಕಟ್ಟಿ ನಗ್ನರಾಗಿದ್ದುಕೊಂಡು ದೇವನನ್ನು ಉಪಾಸನೆ ಮಾಡುತ್ತಿದ್ದ ಸನ್ಯಾಸಿಗಳನ್ನು ವಾರಣಾಸಿಯಲ್ಲಿ ಕಂಡುದುದಾಗಿ ಹೇಳುತ್ತಾನೆ.[೬]

ಪಾಶುಪತರ ಸಿದ್ಧಾಂತ ಹಾಗೂ ಆಚರಣಾ ವಿಧಿಗಳು ಮೂಲತಃ ಬೇರೆ ಬೇರೆಯವು. 'ಪಾಶುಪತ ಸೂತ್ರ' ಈ ಮದ ಪ್ರಾಚೀನ ಹಾಗೂ ಮೂಲ ಕೃತಿಯಾಗಿರಬಹುದು. ಇದರಲ್ಲಿ ಸಂಪೂರ್ಣವಾಗಿ ಆಚರಣಾವಿಧಿಗಳಿಗೆ ಹೆಚ್ಚಿನ ಗಮನಕೊಟ್ಟು ರಚಿಸಿರುವಂತಹದ್ದಾಗಿದೆ. ಕೌಂಡಿನ್ಯನ 'ಪಂಚಾರ್ಥಭಾಷ್ಯ'ದಲ್ಲಿ ಪಾಶುಪತ ಸಿದ್ಧಾಂತವನ್ನು ಒಂದು ವ್ಯವಸ್ಥಿತ ರೂಪದಲ್ಲಿ ನೀಡಲಾಗಿದೆ. ಪಾಶುಪತ ಸೂತ್ರದಲ್ಲಿ ಆಚರಣಾವಿಧಿಗಳು ಬಿಗಿಯಾದ ಕ್ರಮದಲ್ಲಿಲ್ಲ. ಕೌಂಡಿನ್ಯ ಹಾಗೂ ಅವನ ನಂತರದವರು ಈ ಕೊರತೆಯನ್ನು ಪರಿಹರಿಸಲು ಮತ್ತು ಸಿದ್ಧಾಂತ ಹಾಗೂ ಆಚರಣಾವಿಧಿಗಳನ್ನು ಒಂದು ಸೈದ್ಧಾಂತಿಕ ಶಿಸ್ತಿಗೆ ಒಳಪಡಿಸಲು ಪ್ರಯತ್ನಿಸಿದರು.[೩೨]

ಕೌಂಡಿನ್ಯನು ಪಾಶುಪತ ಸಿದ್ಧಾಂತವನ್ನು ಕಾರ್ಯ, ಕಾರಣ, ಯೋಗ, ವಿಧಿ ಹಾಗೂ ದುಃಖಾಂತ ಹೀಗೆ ಐದು ವಿಭಾಗಗಳಾಗಿ ವಿಂಗಡಿಸಿ ವಿವರಿಸಿರುವನು.[೩೩] ಪಾಶುಪತ ವ್ರತಾಚರಣೆಯಿಂದಾಗಿ ಶೈವರಲ್ಲಿ ಎರಡು ಗುಂಪು ಕಾಣಿಸಿಕೊಂಡವು. ಕೂರ್ಮಪುರಾಣವು ಶ್ರೌತಪಾಶುಪತ ಮತ್ತು ಅಶ್ರೌತ ಪಾಶುಪತರು ಎಂದು ವರ್ಗೀಕರಿಸುತ್ತದೆ.[೩೪] ಬ್ರಾಹ್ಮಣರು ಶ್ರೌತ ಪಾಶುಪತವನ್ನು ಅನುಸರಿಸಿದಂತೆ ತೋರುತ್ತದೆ. ಬ್ರಾಹ್ಮಣೇತರ ಶಿವಭಕ್ತರು ಅಶ್ರೌತ ಪಾಶುಪತರೆನಿಸಿರಬೇಕು. ನಂತರ ಲಕುಲೀಶ ಪಾಶುಪತ ಪಂಥವು ಕಾಣಿಸಿಕೊಂಡಾಗ ಇವರು ಇದನ್ನು ಸ್ವೀಕರಿಸಿದಂತೆ ತೋರುತ್ತದೆ.[೩೫]

ಕರ್ನಾಟಕದ ಶಾಸನಗಳಲ್ಲಿ ಮೊಟ್ಟ ಮೊದಲ ಬಾರಿಗೆ ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲೂಕಿನ ಕಿಗ್ಗದ ಶಾಸನದಲ್ಲಿ[೩೬] 'ಸ್ವಸ್ತಿ... ಪೂರ್ವ ಮರಿಯಾದೆಯಾ ಕಮ್ಮಲಕ ಪಾಶುಪತ ಮರಿಯಾದೆಯಾ ಉಳ್ಳದಲ್ಲಿ..." ಎಂಬ ಉಲ್ಲೇಖವಿದೆ.

ಕಾಳಾಮುಖ

ಮುಖದ ಮೇಲೆ ಕರಿಯಗೆರೆಗಳನ್ನು ಹಚ್ಚಿಕೊಳ್ಳುತ್ತಿದ್ದುದರಿಂದ ಇವರನ್ನು ಕಾಳಾಮುಖರೆಂದು ಕರೆಯುತ್ತಿದ್ದರೆಂಬ ಅಭಿಪ್ರಾಯವಿದೆ. ವೃತ್ತವಿಲಾಸನ ಧರ್ಮಪರೀಕ್ಷೆಯಲ್ಲಿ ಇದನ್ನು ಬೆಂಬಲಿಸುವ ಆಧಾರವಿದೆ.[೩೭] ತಮಿಳುನಾಡಿನ ಶಾಸನವೊಂದು ಇವರನ್ನು ಕಪ್ಪುಮುಖದವರೆಂದು ಕರೆದಿದೆ.[೩೮] ಶಿಷ್ಯರೆಂಬ ಜಾತಕಕುಲಕ್ಕೆ 'ವರ್ಷಾಕಾಳಾಮುಖ'ರೆಂದು

ಕಾಳಾಮುಖ ಗುರುಗಳೊಬ್ಬರನ್ನು ಕನ್ನಡ ಶಾಸನಗಳಲ್ಲಿ ಹೊಗಳಲಾಗಿದೆ.[೩೯] ಮುಖಕ್ಕೆ ಪವಿತ್ರವಾದ ಕಪ್ಪುವಸ್ತುವನ್ನು ಬಳೆದುಕೊಳ್ಳುವ ಪದ್ಧತಿಯನ್ನು ಕ್ರಿ.ಶ. ೧೧೮೮ರ ಹಾವೇರಿ ತಾಲೂಕಿನ ಹರಳಹಳ್ಳಿ ಶಾಸನ[೪೦] 'ಕಾಳಾಮುಖದಿಂದಮೆ' ಎಂಬ ಮಾತಿನಿಂದ ಸ್ಪಷ್ಟಪಡಿಸುತ್ತದೆ. ಆದರೆ ಶಿವಪೂಜಾ ಪದ್ಧತಿಯನ್ನು ವಿವರಿಸುವ 'ಪಂಚಾವರಣಪೂಜಾಪದ್ಧತಿ' ಎಂಬ ಕೃತಿ 'ಕಲೆಗಳನ್ನು ಪ್ರತಿಷ್ಠಾಪಿಸಿ ಅವುಗಳನ್ನು ಆರಾಧಿಸುವವರೇ ಕಾಳಾಮುಖರು. ಅಂದರೆ ಕಲಾಮುಖದೊಂದಿಗೆ ಸಂಬಂಧ ಹೊಂದಿ ಆ ಸಿದ್ಧಾಂತವನ್ನು ಆಚರಿಸುವವರು ಕಾಳಾಮುಖರು. ಈ ಕಲೆಗಳೆಂದರೆ ನಿವೃತ್ತಿ ಪ್ರತಿಷ್ಠಾ ವಿದ್ಯಾ, ಶಾಂತಿ ಮತ್ತು ಶಾಂತ್ಯಾತೀತ, ಶಿವನ ಪಂಚಮುಖಗಳು. ಈ ಐದು ಕಲೆಗಳೊಡನೆ ಸಂಬಂಧ ಹೊಂದಿದ್ದು ಆ ಕಲೆಗಳೊಡನೆ ಅವಿನಾಭಾವ ಸಂಬಂಧ ಹೊಂದಿದ ಶಿವನ ಆರಾಧಕರೇ ಕಾಳಾಮುಖರು.[೪೧] ರಾಮಾನುಜರು ಕಾಳಾಮುಖರು ಕಾಪಾಲಿಕರ ಗುಂಪಿಗೆ ಸೇರಿದವರೆಂದು ಹೇಳಿರುವುದನ್ನು ಆಧಾರವಾಗಿಟ್ಟುಕೊಂಡ ಆರ್.ಜಿ. ಭಂಡಾರಕರ್ ಅವರು ಕಾಳಾಮುಖರು ಕಾಪಾಲಿಕರು ಒಂದೇ ಎಂದು ಪ್ರತಿಪಾದಿಸುತ್ತಾರೆ. ಆದರೆ ಇದಕ್ಕೆ ಯಾವ ಆಧಾರವೂ ಇಲ್ಲ. ಕಾಪಾಲಿಕರದು ಸಂಪೂರ್ಣವಾಗಿ ವಾಮಾಚಾರಗಳ ಪಂಥವಾದರೆ ಕಾಳಾಮುಖರದು ಶುದ್ಧ ಸಾತ್ವಿಕಾಚಾರಣೆಗಳ ಪಂಥ. ಕನ್ನಡ ಶಾನಸಗಳನ್ನು ಅಧ್ಯಯನ ಮಾಡಿದರೆ ಎಲ್ಲಿಯೂ ಕಾಳಾಮುಖರನ್ನು ಕಾಪಾಲಿಕರೆಂದು ಕರೆದಿಲ್ಲವೆಂಬುದು ಗೋಚರವಾಗುತ್ತದೆ.[೪೨]

ಕಾಪಾಲಿಕ

ದೇವತೆಗಳಲ್ಲಿ ರುದ್ರ-ಶಿವನ ಕಲ್ಪನೆ ಪ್ರಾಚೀನವಾದುದು. ಸೃಷ್ಟಿ. ಸ್ಥಿತಿ, ಲಯಕರ್ತನಾದ ರುದ್ರನು ದೇವತೆಗಳಲ್ಲಿಯೇ ರೌದ್ರ ಹಾಗೂ ಭೀಕರ ಆದಿ ಮಾನವನ ಉಪಾಸ್ಯದೇವತೆಯ ಮೊದಲ ರೂಪವೇ ರುದ್ರ. ಬೇಟೆ ಸಂಸ್ಕೃತಿಯ ಪ್ರತೀಕವಾಗಿ ಮೂಡಿಬಂದ ಈ ರೌದ್ರದೇವತೆಯ ಮತ್ತೊಂದು ಹೆಸರೇ ಭೈರವ.

ಎಂದಿನಿಂದಲೂ ದೇವರನ್ನು ತನ್ನಂತೆ ಕಾಣುವ ಸ್ವಭಾವ ಮನುಷ್ಯರದು. ಆದ್ದರಿಂದ ಬೇಟೆಗಾರನಾಗಿದ್ದ ಕಾಡು ಮಾನವನು ಅದಕ್ಕೆ ಅನುಗುಣವಾಗಿ ರುಂಡಮಾಲೆ, ಖಡ್ಗಾಯುಧಗಳಿಂದಲಂಕರಿಸಿ, ತಾನು ಆಹಾರ ಸೇವನೆಗೆ ತಲೆಬುರುಡೆ ಉಪಯೋಗಿಸುತ್ತಿದ್ದ ಕೈಯಲ್ಲಿ ಕೊಟ್ಟ ಪಕ್ಕಕ್ಕೆ ಬೇಟೆನಾಯಿಯನ್ನು ನಿಲ್ಲಿಸಿ, ರಕ್ತ ಮಾಂಸಗಳನ್ನರ್ಪಿಸಿ ಧನ್ಯವಾದುದು ಸಹಜ. ಈ ಮುಂತಾದ ಸಂಕೇತವುಳ್ಳ ಮೂರ್ತಿಶಿಲ್ಪಗಳನ್ನು ಭೈರವಮೂರ್ತಿಗಳೆಂದು ಕರೆಯಲಾಗುತ್ತದೆ. ಈ ಭೈರವನನ್ನು ಆರಾಧನೆ ಕಾರಣವಾಗಿ ಭೈರವರು, ಭೈರವಾಚನಕರೆಂದು ಕಪಾಲ ಅಥವಾ ತಲೆಬುರುಡೆಯಲ್ಲಿ ಆಹಾರ ಸೇವನೆ ಮಾಡುತ್ತಿದ್ದುದರಿಂದ ಕಾಪಾಲಿಕರೆಂದು

ಕರೆದಿರುವ ಸಾಧ್ಯತೆ ಇದೆ. ಇದು ಆರಾಧ್ಯದೇವತೆ ಹಾಗೂ ಆಚರಣೆಯ ಹಿನ್ನೆಲೆಯಲ್ಲಿ ಸಹಜವಾದದ್ದು.

ಮಾನವನು ಬೇಟೆ ಸಂಸ್ಕೃತಿಯಿಂದ ಕೃಷಿ ಸಂಸ್ಕೃತಿಗೆ ಕಾಲಿಟ್ಟಾಗಲೂ ಕಾಪಾಲಿಕರು ತಮ್ಮ ಆರಾಧನೆ-ಆಚರಣೆಯ ವಿಧಾನಗಳನ್ನು ಯಥಾವತ್ತಾಗಿಯೇ ಮುಂದುವರೆಸಿಕೊಂಡು ಬಂದುದು. ಒಂದು ಪಂಥವಾಗಿ ಕಾಲಾಂತರದಲ್ಲಿ ತಾತ್ವಿಕ ವಿಚಾರಗಳು ಸೇರ್ಪಡೆಯಾಗಿ ಉಗ್ರ ಶೈವಾರಾಧನೆಯಾಗಿ ಬೆಳೆದು ನಿಂತುದನ್ನು ಕಾಣಬಹುದಾಗಿದೆ.

ಕಪಾಲದ ಬಳಕೆಯು ಒಂದು ಆಚರಣಾ ವಿಧಾನವಾಗಿ ಪರಿಣಮಿಸಿದಂತೆ ಕಪಾಲಧಾರಿ ಭೈರವನು ಕಾಪಾಲೇಶ್ವರನೆನಿಸಿಕೊಂಡನು. ಕಾಪಾಲೇಶ್ವರನ ಉಪಾಸಕರಾದ ಕಾಪಾಲಿಕರು ಸ್ವಂತ ಅವನಂತೆಯೇ ಆಗಲು ಗೈದ ಸಾಧನೆ, ಅನುಸರಿಸಿದ ಮಾರ್ಗಗಳು ಲೋಕವಿಲಕ್ಷಣವೆನಿಸಿದರೂ, ಅದು ಮನುಷ್ಯನ ನಿಸರ್ಗ ಸಹಜ ಹಂಬಲಗಳನ್ನು ಹತ್ತಿಕ್ಕದೆ ಪೂರೈಸಿಕೊಳ್ಳುವುದೇ ಕಾಪಾಲಿಕ ಶಿವನ ಉಪಾಸನೆಯ ಮುಖ್ಯ ಆಚರಣೆಯಾಗಿ ನಿಂತಿದೆ.[೪೩] ಕಾಪಾಲಿಕ ಮತ್ತು ಕಾಳಾಮುಖರ ಮಧ್ಯೆ ಎದ್ದು ಕಾಣುವ ಒಂದು ದೊಡ್ಡ ಅಂತರವೆಂದರೆ ಕಾಳಾಮುಖರಂತೆ ಕಾಪಾಲಿಕರು ಸಮಾಜದ ಒಂದು ಅಂಗವಾಗಿ ತಮ್ಮ ಮತಪ್ರಚಾರ ಮಾಡಲಿಲ್ಲವೆಂಬುದು ಅವರು ಸಮಾಜದಿಂದ ದೂರ ಸಿಡಿದು, ಕಾಡುಬೆಟ್ಟಗಳಲ್ಲಿ ಕೇಂದ್ರಗಳನ್ನು ಸ್ಥಾಪಿಸಿಕೊಂಡು ತಮ್ಮ ಧಾರ್ಮಿಕ ನಿಯಮಗಳನ್ನು ಪಾಲಿಸಿಕೊಂಡು ಬಂದರು.[೪೪]

ಮಹಾವ್ರತ :

ಕಾಳಾಮುಖ ಅಥವಾ ಪಾಶುಪತರ ಶಾಸನ ಓದುತ್ತಿರುವಾಗ ನಾವು ಅನೇಕ ಸಲ ಮಹಾವ್ರತಿ, ಮಹಾವ್ರತ ಎಂಬ ಪದವನ್ನು ಕಾಣುತ್ತೇವೆ. ಕಾಳಾಮುಖ, ಪಾಶುಪತ ಯತಿಗಳಲ್ಲಿ ಕೆಲವರು ಮಹಾವ್ರತಿಗಳಾಗಿರುತ್ತಿದ್ದರು. ಆಚಾರ್ಯ ಶ್ರೀರಾಮಾನುಜರೇ ಹೇಳುವಂತೆ ಮಹಾವ್ರತಿ ಎಂದರೆ ದೊಡ್ಡ ವ್ರತಗಳನ್ನಾಚರಿಸುವವರು ಎಂದು. ಆಚಾರ್ಯರೇ ಮುಂದೆ ಈ ದೊಡ್ಡವ್ರತದ ಬಗ್ಗೆ ಹೇಳುತ್ತಾ ಈ 'ವ್ರತಿಗಳಲ್ಲಿ ಎಲ್ಲವನ್ನೂ ತ್ಯಜಿಸಿ, ಮೈತುಂಬಾ ಭಸ್ಮ ಬಳಿದುಕೊಂಡು ಕೈಯಲ್ಲಿ ಮನುಷ್ಯ ಕಪಾಲ ಹಿಡಿದುಕೊಂಡು ಅದರಲ್ಲಿಯೇ ಭಿಕ್ಷಾನ್ನವನ್ನು ಸ್ವೀಕರಿಸುವರು.'[೪೫] ಪದ್ಮಪುರಾಣದಲ್ಲಿ ಮಹಾವ್ರತದ ಕುರಿತು ಹೆಚ್ಚಿನ ವಿವರಗಳಿವೆ. ಮುಖ್ಯವ್ರತಗಳಿಂದ ಉಂಟಾಗಿರುವುದರಿಂದ ಇದರ ಹೆಸರು ಮಹಾವ್ರತವಾಗಿದೆ. ದುಃಖವನ್ನು ಹುಟ್ಟಿಸುವ ಕಾರಣಗಳನ್ನು ಚಿಂತಿಸಿದ ತರುವಾಯ ವ್ರತಧಾರಿಯು ಚರ್ಯಾಂಗವನ್ನು ಅನುಸರಿಸಬೇಕು. ಹುಟ್ಟು, ವೃದ್ಧಾಪ್ಯ ಮತ್ತು ಸಾವುಗಳು ದುಃಖ ಜನರಪಾಲಾಗಿವೆ. ಚರ್ಯೆಯನ್ನನುಸರಿಸುವ ವ್ರತಧಾರಿಯು ಅಹಿಂಸೆ,

ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಕಲ್ಪಣಾ, ಆಕ್ರೋಧ, ಗುರುಶುಶ್ರೂಷೆ, ಶೌಚ, ಸಂತೋಷ, ಅರ್ಜವ ಎಂಬ ಹತ್ತು ವಿಧಿಗಳನ್ನು ಅನುಸರಿಸುತ್ತಾನೆ. ಈ ಹತ್ತನ್ನು ಸಾಧಿಸಿದವನು 'ಮಹಾವ್ರತಿ'ಯಾಗುತ್ತಾನೆ.[೪೬]

ಶುದ್ಧಶೈವ: ಶುದ್ಧಶೈವಕ್ಕೆ ಪರ್ಯಾಯವಾಗಿ ಶ್ರೋತ್ರೀಯ ಶಿವಸಮಯ ಎಂಬ ಪರ್ಯಾಯ ಮಾನಗಳಿರುವುದನ್ನು ಶಾಸನಗಳ ಸಹಾಯದಿಂದ ತಿಳಿಯಬಹುದಾಗಿದೆ. ಡಾ. ಎಸ್.ಸಿ. ನಂದಿಮಠ ಅವರು ಈ ಶುದ್ಧಶೈವದ ಬಗ್ಗೆ ವಿಸ್ತಾರವಾಗಿ ಬರೆದಿದ್ದಾರೆ. ಅವರ ಪ್ರಕಾರ ಕಾಶ್ಮೀರದಲ್ಲಿ ಉಗಮವಾದ ಇದರ ಬಗ್ಗೆ ಸಿದ್ಧಸೋಮಾನಂದನ (೧೧ ನೆಯ ಶತಮಾನ) ಶಿವದ್ವಜವೃತ್ತಿ ಮತ್ತು ತಂತ್ರಲೋಕ ಟೀಕೆಗಳಲ್ಲಿ ಬರುವ ವಿಷಯ ಹೀಗಿದೆ.

ಮೊದಲು ಋಷಿಮುಖದಲ್ಲಿದ್ದ ಈ ಧರ್ಮದ ತತ್ವಗಳು ಕಲಿಯುಗದಲ್ಲಿ ವಿಚ್ಛಿನ್ನವಾಗಲು, ಕೈಲಾಸದಲ್ಲಿ ಶ್ರೀಕಂಠ ರೂಪದಿಂದ ಸಂಹರಿಸುತ್ತಿದ್ದ ಶಿವನು, ಶಾಸ್ತ್ರೋಪನಿಷತ್ತುಗಳ ಸಾರಭೂತವಾದ ತ್ರಿಕಮತ (ಕಾಶ್ಮೀರಶೈವ, ಪ್ರತ್ಯಭಿಜ್ಞ)ನನ್ನು ಪ್ರಚಾರಮಾಡಲು ದೂರ್ವಾಸನಿಗೆ ಆಜ್ಞಾಪಿಸಿದನು. ಅವನು ಅಮರ್ದಕ, ಶ್ರೀನಾಥ, ತ್ರ್ಯಂಬಕ ಹೆಸರಿನ ಮೂವರು ಮಾನಸಪುತ್ರನನ್ನು ಸೃಷ್ಟಿಸಿ, ಅವರಿಗೆ ದ್ವಯ, ದ್ವಯಾದ್ವಯ, ಅದ್ವಾಯಮತಗಳನ್ನು ಪ್ರಸಾರ ಮಾಡಲು ಹೇಳಿದನು. ಇವುಗಳಲ್ಲಿ ಅದ್ವಯ ರೂಪದ ತ್ರ್ಯಂಬಕನ ಸಂಪ್ರದಾಯವೇ ತ್ರಕಮತವೆಂದು ಪ್ರಸಿದ್ಧಿ ಪಡೆದಿವೆ. ಈ ಮತವು ಕರ್ನಾಟಕದಲ್ಲಿ ಪ್ರಸಾರಗೊಂಡಿದ್ದಿತೆಂಬುದಕ್ಕೆ ಗೋಕಾಕ ತಾಲೂಕಿನ ಕುರುಬೆಟ್ಟ (೧೨೪೫) ಮೊದಲಾದ ಶಾಸನಗಳು ನೇರ ಸಾಕ್ಷಿಯಾಗಿವೆ. ಕುರುಬೆಟ್ಟ ಶಾಸನದ ಮೇಲೆ ಉಲ್ಲೇಖಿಸಿದ ಶೈವಗಳ ನಂತರದಲ್ಲಿ ನಮ್ಮ ಗಮನಕ್ಕೆ ಬರುವ ಇನ್ನೆರಡು ಶೈವಗಳ ಕುರಿತು ಉಲ್ಲೇಖಿಸದಿದ್ದರೆ ಪೂರ್ಣವೆನಿಸಲಾರದು. ಅವುಗಳೆಂದರೆ 'ಕಾಶ್ಮೀರಶೈವ' ಮತ್ತು 'ತಮಿಳುಶೈವ'.

ಕಾಶ್ಮೀರ ಶೈವ : ವಸುಗುಪ್ತನಿಗೆ (ಕ್ರಿ.ಶ. ೮೦೦) ಕಾಶ್ಮೀರ ಶೈವಸಿದ್ಧಾಂತಕ್ಕೆ ತಳಹದಿಯಾಗಿರುವ ಶಿವಸೂತ್ರವನ್ನು ಶಿವನೇ ಲೋಕೋಪಕಾರಕ್ಕಾಗಿ ಕನಸಿನಲ್ಲಿ ಬೋಧಿಸಿದನೆಂದು ಹೇಳಲಾಗಿದೆ. ಅದನ್ನು ವಸುಗುಪ್ತನು ತನ್ನ ಶಿಷ್ಯನಾದ ಕಲ್ಲಟನಿಗೆ ಬೋಧಿಸಿದನು. ಅನಂತರ ಅಭಿನವಗುಪ್ತ, ಕ್ಷೇಮರಾಜ, ಭಟ್ಟಭಾಸ್ಕರ ಮೊದಲಾದವರು ಪ್ರತ್ಯೇಕವಾಗಿ ವ್ಯಾಖ್ಯಾನಗಳನ್ನು ಬರೆದರು. ಈ ಸೂತ್ರಗಳ ಪ್ರಮುಖ ಉದ್ದೇಶ ಕಾಶ್ಮೀರ ಶೈವಸಿದ್ಧಾಂತದ ತತ್ವಗಳನ್ನು ಹೇಳುವುದಲ್ಲದೆ, ಮನುಷ್ಯನಿಗೆ ಸ್ವಂತ ಅನುಭವದಿಂದ ಜೀವಿಯೂ ಪರಮಾತ್ಮನೂ ವಿಭಿನ್ನ ಎಂದು ಮನವರಿಕೆ ಮಾಡುವುದಾಗಿದೆ. ಶಾಂಭವ, ಶಾಕ್ತ, ಆಣವ ಎಂಬ ಮೂರು ಉಪಾಯಗಳ ಮೂಲಕ ಈ ದಿವ್ಯಜ್ಞಾನವನ್ನು

ಪಡೆಯಬಹುದು. ಹೀಗೆ ರೂಪುಗೊಂಡ ಕಾಶ್ಮೀರ ಶೈವಸಿದ್ಧಾಂತವು ಮುಂದೆ ಸೋಮಾನಂದ, ಕಲ್ಲಟ ಮೊದಲಾದವರಿಂದ ಪರಿಷ್ಕರಿಸಲ್ಪಟ್ಟು ತನ್ನದೇ ಆದ ದರ್ಶನವನ್ನು ರೂಪಿಸಿತು.[೪೭]

ತಮಿಳುಶೈವ : ತಮಿಳುನಾಡಿನಲ್ಲಿ ಭಕ್ತಿಪಂಥವು ಶೈವ-ವೈಷ್ಣವ ಧರ್ಮಗಳೆನ್ನುವ ಎರಡು ಟಿಸಿಲಿನಲ್ಲಿ ಶಿವ-ವಿಷ್ಣು ಪಾರಮ್ಯವನ್ನು ಪ್ರತಿಪಾದಿಸಲು ಹೊರಟು, ಜಾತಿ, ಮತ, ಕುಲಗಳನ್ನು ಗಣನೆಗೆ ತಾರದೆ, ಲಿಂಗ ಭೇದವಿಲ್ಲದೆ, ಶಿವ ಹಾಗೂ ವಿಷ್ಣುವಿನ ಅನುಗ್ರಹಕ್ಕೆ ಸೃಷ್ಟಿಯ ಎಲ್ಲ ಜೀವರೂ ಪಾತ್ರರೆಂಬ ಲೋಕೋತ್ತರ ತತ್ವವನ್ನು ಪ್ರಚುರಪಡಿಸಿದರು. ಇವರಲ್ಲಿ ಶಿವನ ನಿಷ್ಠಾವಂತ ಭಕ್ತರಾದ ೬೩ ಮಂದಿ ಶೈವ ನಾಯನ್ಮಾರರೂ ವಿಷ್ಣುವಿನಲ್ಲಿ ಆಳವಾದ ಭಕ್ತಿಯನ್ನು ಹೊಂದಿದ್ದ ೧೨ ಮಂದಿ ಆಳ್ವಾರರೂ ಪ್ರಮುಖರು. ಇವರ ಕಾಲ ಕ್ರಿ.ಶ. ಸು. ೪೫೦ ರಿಂದ ೧೦ನೆಯ ಶತಮಾನ ಇವರು ಜನರಾಡುವ ಭಾಷೆಯಲ್ಲಿ ತಮ್ಮ ಭಕ್ತಿ-ಅನುಭಾವವನ್ನು ಮನೋಜ್ಞವಾಗಿ ತಿಳಿಯಪಡಿಸಿ ಜನರಿಗೆ ಹತ್ತಿರವಾದರು. ಹೀಗಾಗಿ ತಮಿಳು ಶೈವವು ಪ್ರಭಾವಪೂರ್ಣವಾಗಿ ಬೆಳೆಯಿತು.[೪೮]

ತಮಿಳುನಾಡಿನ ಶೈವ ಸಿದ್ಧಾಂತವು ಆಗ ಪ್ರಚಲಿತವಿದ್ದ ಕಾಶ್ಮೀರಶೈವ, ಪಾಶುಪತ, ಕಾಳಾಮುಖ, ಕಾಪಾಲಿಕ ಮೊದಲಾದ ಶೈವಶಾಖೆಗಳಿಂದ ಬೇರೆಯಾಗಿ ರೂಪತಳೆದಿದೆ. ತಮಿಳುನಾಡಿನ ೬೩ ಮಂದಿ ಪುರಾತನರು ಪಾಶುಪತ, ಕಾಳಾಮುಖ ಪಂಥಗಳಲ್ಲಿ ಬಳಕೆಯಲ್ಲಿದ್ದ ಶಿವನ ಉಗ್ರರೂಪವನ್ನು ನಿವಾರಿಸಿ ಪರಮಪ್ರೇಮರೂಪಿಯಾದ, ಜ್ಯೋತಿಸ್ವರೂಪಿಯಾದ, ಭಕ್ತರ ಬಂಧುವಾದ ಕರುಣಾಸಿಂಧುವಾದ ಶಿವನ ಸ್ವರೂಪವನ್ನು ತಮ್ಮ ಹಾಡು/ಸ್ತೋತ್ರಗಳಲ್ಲಿ ಹೇಳಿ ಜನಮನದಲ್ಲಿ ಈ ಸಾತ್ವಿಕರೂಪದ ಶಂಕರನ ಬಗೆಗೆ ಭಕ್ತಿ ಮೂಡುವಂತೆ ಮಾಡಿದರು.[೪೯]

ಮಾನವ ತನ್ನ ಅಲೆಮಾರಿ ಬದುಕನ್ನು ಬಿಟ್ಟು ಒಂದು ನಿರ್ದಿಷ್ಟ ಸ್ಥಳದಲ್ಲಿ ಬದುಕನ್ನು ಕಟ್ಟಿಕೊಳ್ಳಲು ಆರಂಭಿಸಿದ ನಂತರ ಕ್ರಮೇಣ ಬೆಂಕಿಯ ಬಳಕೆ,ಒಕ್ಕಲುತನ,ಲೋಹದ ಬಳಕೆ,ಪಶುಪಾಲನೆ ಮತ್ತು ಕುಂಬಾರ ಚಕ್ರ ಹೀಗೆ ಮುಂತಾದ ಅನೇಕ ರೀತಿಯ ನಾಗರಿಕ ವಿಧಾನಗಳನ್ನು ಕಂಡುಕೊಂಡ[೫೦] ಇದಾದ ನಂತರ ದೈಹಿಕ ಅವಶ್ಯಕತೆಗಿಂತ ಮಾನಸಿಕ ಸಂತೋಷ ಪಡುವ ಸುಸಂಸ್ಕೃತ ಬದುಕನ್ನು ಸಾಗಿಸುವ ದಾರಿಯಲ್ಲಿ ಪಯಣಿಸಲು ಬಯಸಿದ. ಅಂತಹ ಬಯಕೆಯ ಫಲ ಶೃತಿಯಾಗಿ ಬಂಡೆಗಳ ಮೇಲೆ ಇದ್ದಿಲನ್ನು ಬಳಸಿ ರೇಖೆಗಳ ಮೂಲಕ ಎದುರಿಗೆ ಕಾಣುತ್ತಿದ್ದ ಪ್ರಾಣಿ-ಪಕ್ಷಿಗಳ ಚಿತ್ರವನ್ನು ಬಿಡಿಸಲು ಪ್ರಾರಂಬಿಸಿದ. ಈ ಹಂತದ ಬೆಳವಣಿಗೆ ಮುಂದುವರೆದು ಚಿತ್ರಗಳಿಗೆ ಬಣ್ಣ ಲೇಪಿಸಿ ಸಹಜತೆಗೆ ಸಮೀಪವಾಗುವಂತೆ ನೋಡಿಕೊಂಡ ಹಾಗೆಯೇ ಅವನ ದೃಷ್ಟಿಕೋನ ಬೆಳೆದಂತೆ ಲೋಹಗಳನ್ನು ಬಳಸಿ ಉಬ್ಬು ತಗ್ಗು ಇರುವಂತೆ ನೋಡಿಕೊಂಡ ನಂತರ ಮಣ್ಣಿನಿಂದ,ಕಲ್ಲಿನಿಂದ ಸಹಜವಾಗಿ ಕಾಣುವಂತೆ ದುಂಡು ಶಿಲ್ಪ ರಚಿಸುವಷ್ಟರ ಮಟ್ಟಿಗೆ ಮಾನವನ ಕೌಶಲ್ಯ ವೃದ್ಧಿಯಾಯಿತು.

ಆರಂಭಿಕ ಹಂತದಲ್ಲಿ ಭಯಪೀಡಿತ ಬದುಕನ್ನು ಸಾಗಿಸುತ್ತದ್ದ ಮಾನವ ನಿಸರ್ಗದಲ್ಲಿ ತನ್ನಂತೆ ಬದುಕುತ್ತಿದ್ದ ಪ್ರಾಣಿಗಳಿಗೆ ಹೆದರುತ್ತಿದ್ದ ನಂತರ ಅದಕ್ಕಿಂತಲೂ ಅಗೋಚರ ಶಕ್ತಿ ಒಂದಿದೆ ಎಂಬುದನ್ನು ಅಂತ ಅದನ್ನು ಸಂತುಷ್ಠಗೊಳಿಸಲು ಆರಾಧನೆ ಅಥವಾ ಪೂಜೆಯ ಹಂತಕ್ಕೆ ಬಂದು ತಲುಪಿದ ಭಯನೇ ಮುಂದಿನ ಸಮಾಜದ "ಧಾರ್ಮಿಕ ವಿಕಾಸಕ್ಕೆ" ಅಡಿಪಾಯವನ್ನು ಕಾಕಿತು ಎನ್ನಬಹುದು[೨](ಶಿವರುದ್ರಪ್ಪ,ಧರ್ಮ ಮತ್ತು ಸಮಾಜ,ಪು.೪)

ಹರಪ್ಪ ಸಂಸ್ಕೃತಿಯಲ್ಲಿ ಶೈವ ಧರ್ಮ (ಕ್ರಿಪೂ ೩೦೦೦–೧೭೫೦)

ಶೈವ ಸಂಸ್ಕೃತಿಯ ಅಧ್ಯಯನವೆಂದರೆ "ಭಾರತದ ಸಾಮಾಜಿಕ ಜೀವನದ ನಿರಂತರ ವಿಕಾಸದ ಅಧ್ಯಯನ" ಎಂದೇ ಹೇಳಬೇಕಾಗುತ್ತದೆ.[೫೧] ಭಾರತದ ಪ್ರಾಚೀನ ಸಂಸ್ಕೃತಿಯು ಶೈವ ಸಂಸ್ಕೃತಿಯ ಹೊರತಾಗಿಲ್ಲ. ಈ ಶೈವ ಸಂಸ್ಕೃತಿಯ ಮೂಲವನ್ನು ಸಿಂಧೂ ಸಂಸ್ಕೃತಿಯಲ್ಲಿಯೇ ಕಂಡಿದ್ದಾರೆ.[೫೨] (ಮಾರ್ಷಲ್ ಜೆ.ಮೊಹೊಂಜೊದಾರೊ) ಆದ್ದರಿಂದ ಶೈವ ಧರ್ಮದ ಮೂಲವನ್ನು ಹರಪ್ಪಾ ಸಂಸ್ಕೃತಿಯಿಂದ ಅಧ್ಯಯನ ಮಾಡಬೇಕಾದ ಅವಶ್ಯಕತೆಯಿದೆ.

ಪಶುಪತಿ:

ಶೈವ ಧರ್ಮದ ಉಲ್ಲೇಖಕ್ಕೆ ಬಹುಮುಖ್ಯವಾದದ್ದು ಸುಮಾರು ನಾಲ್ಕು ಸೆಂ.ಮೀ. ಅಳತೆಯ ಚೌಕಾಕಾರದ ಮೃದುಕಲ್ಲಿನ ಒಂದು ಮುದ್ರೆ[೫೩] ಈ ಮುದ್ರೆಯಲ್ಲಿ ಕತ್ತರಿಗಾಲು ಹಾಕಿ ಸಿದ್ದಾಸನದಲ್ಲಿ ಕುಳಿತಿರುವ ಯೋಗಿ (ಪಶುಪತಿ) ಎಮ್ಮೆಯ ಕೊಂಬಿನ ಶಿರಸ್ತ್ರಾಣವನ್ನು ಧರಿಸಿದ್ದಾನೆ. ಈ ಯೋಗಿಯ ಸುತ್ತಲೂ ಕೆತ್ತಲಾಗಿರುವ ಆನೆ, ಹುಲಿ, ಹುಲಿ, ಎಮ್ಮೆ, ಮತ್ತು ಏಕಶೃಂಗಿಗಳು ಈ ತನ್ನತ್ತ ನೋಡುತ್ತಿರುವುದಲ್ಲದೆ ಪೀಠದ ಕೆಳ ಭಾಗದಲ್ಲಿ ಎರಡು ಜಿಂಕೆಗಳ ಕೆತ್ತನೆ ಇದೆ. ಈ ಯೋಗಿಯು ಎಮ್ಮೆಯ ಕೊಂಬುಗಳನ್ನು ಹೊಂದಿದ್ದು ಮಧ್ಯದಲ್ಲಿಕಿರೀಟದಂತೆ ಅಳವಡಿಸಿರುವ ಜಟೆಯು ಶಿವನ ತ್ರಿಶೂಲದ ಆಕಾರಕ್ಕೆ ಮೂಲ ಎನ್ನುವುದು ತಜ್ಞನ ಅಭಿಪ್ರಾಯ. ಎಮ್ಮೆಯು ಪ್ರಾಚೀನ ಭಾರತದಲ್ಲಿ ಸುಪ್ತ ಶಕ್ತಿಯ ಸಂಕೇತವಾಗಿದ್ದು ಗೂಳಿಯು ಬಾಹ್ಯ ಶಕ್ತಿಯ ಸೂಚಕವಾಗಿದೆ.[೫೪] ಇಲ್ಲಿ ಕಂಡುಬಂದಿರುವ ಯೋಗಿಯ ಸುತ್ತಲೂ ಪ್ರಾಣಿಗಳ ಸಮೂಹದಿಂದಾಗಿ ವಿದ್ವಾಂಸರು ಇದನ್ನು 'ಪಶುಪತಿ' ಎಂದು ಗುರುತಿಸಿದ್ದಾರೆ.[೫೫] ಇದೇ ಮುದ್ರೆಯಲ್ಲಿರುವ ಹುಲಿ ಮತ್ತು ಜಿಂಕೆಗಳ ಚಿತ್ರವಿರುವುದರಿಂದ ಈ ಸಂಬಂಧಗಳು ಶಿವನ ಸಂಕೇತಗಳಾಗಿ ನಂತರದಲ್ಲಿ ಮುಂದುವರೆದಿದೆ.[೫೬] ಈ ಎಲ್ಲ ಲಕ್ಷಣಗಳಿಂದಾಗಿ ಮುದ್ರೆಯಲ್ಲಿರುವ ಮೂರ್ತಿಯನ್ನು ಪಶುಪತಿಯ (ಶಿವನ)

ಉಗಮರೂಪ ಎಂದು ಗುರ್ತಿಸಲಾಗಿದೆ.[೫೭] ಒಟ್ಟಾರೆಯಾಗಿ ಶೈವ ಧರ್ಮದ ಮೂಲವನ್ನು ಸಿಂಧೂ ಸಂಸ್ಕೃತಿಯ ಅಧ್ಯಯನದೊಂದಿಗೆ ಆರಂಭಿಸುವದು ಸೂಕ್ತವಾಗಿದೆ.

ವೇದಗಳಲ್ಲಿ ರುದ್ರ–ಶಿವ:

ಶೈವ ಸಂಸ್ಕೃತಿಯ ಉಗಮವನ್ನು ಸಿಂಧೂ ಸಂಸ್ಕೃತಿಯಲ್ಲೇ ಕಾಣಬಹುದಾದರೂ ಅಲ್ಲಿ ಕಂಡು ಬರುವುದು ಒಂದು ಭ್ರೂಣವಾಗಿ ಮಾತ್ರ. ಶೈವ ಧರ್ಮದ ಅಧ್ಯಯನವೆಂದರೆ– ಅದು ಸಮಗ್ರ ಭಾರತದ ನಿರಂತರ ಸಾಮಾಜಿಕ ಬೆಳವಣಿಗೆಯ ಚಿಂತನೆಯಾಗಿದೆ. ಭಾರತೀಯ ಸಮಾಜದ ಬೆಳವಣಿಗೆಯ ಪ್ರತಿ ಮೆಟ್ಟಿಲುಗಳಲ್ಲಿ ಶೈವ ಸಂಸ್ಕೃತಿಯ ಕುರುಹು ಕಾಣಬಹುದಾಗಿದೆ. ಅಂದರೆ ಆರ್ಯೇತರ ಮೂಲದಿಂದ ಉಗಮಗೊಂಡದ್ದು ಶಿವನ ಕಲ್ಪನೆಗೆ ವೈದಿಕ ಸಾಹಿತ್ಯವು ಸೇರಿ ಅಧ್ಯಯನಕ್ಕೆ ಜಿವಂತಿಕೆ ನೀಡಿರುವುದರಿಂದ ಶಿವನ ಇಂದಿನ ರೂಪದ ಬಗ್ಗೆ ಅಧ್ಯಯನ ಮಾಡಲು ಸಾಧ್ಯವಾಗಿದೆ[೫೮] ಅಗ್ನಿಯ ರೌದ್ರ ರೂಪವೇ 'ರುದ್ರ' ಅವನ ಶಾಂತರೂಪವೇ 'ಶಿವ' [೫೯] ದಂಡದಾರಕನೇ ರುದ್ರ, ಪ್ರಾಣವಾಯುವೇ ಶಿವ.(ಋಗ್ ವೇದ ೧,೧೧೪:೧.) ವೇದಗಳಲ್ಲಿ ರುದ್ರನು ವೈದ್ಯ(ಭಿಷಕ್,ಋಗ್ವೇದ ೧,೧೧೪:೩.) ನರ್ತನ ಶಿವನಾದ ನಟರಾಜನ ಕೈಗಳಲ್ಲಿ ಇಂದಿಗೂ ಅಗ್ನಿಕರಂಡವು ಕಂಡುಬರುವುದನ್ನು ಗಮನಿಸಬಹುದಾಗಿದೆ. ಆರ್ಯರು ಬರುವದಕ್ಕಿಂತ ಮುಂಚೆ ಭಾರತೀಯರ "ದೇವರು" ಒಬ್ಬರಾದರೆ,ವೇದಕಾಲದಲ್ಲಿ ಇಂದ್ರನೇ ಪರಮದೇವ ಮುಂದೆ ಕ್ರಮೇಣ ಇಂದ್ರನು ಹಿಂದೆ ಸರಿದು ಅವನ ಸ್ಥಾನವನ್ನು ರುದ್ರ ಆಕ್ರಮಿಸುತ್ತಾನೆ[೬೦]

ಭಾರತೀಯರ ಪೂರ್ವ ಸಂಸ್ಕೃತಿ ಮತ್ತು ಆರ್ಯ ಸಂಸ್ಕೃತಿ ವಿಲೀನದ ನಂತರ ನಮಗೆ ಇಂದಿನ "ಶಿವ" ಲಭ್ಯವಾದ ಎಂದೇ ಹೇಳಬಹುದು.

ವೇದೋತ್ತರ ಕಾಲದಲ್ಲಿ ಶಿವ (ಕ್ರಿ.ಪೂ ೮೦೦–೫೦೦)

ಆರಂಭಿಕ ಸಾಹಿತ್ಯ ಕೃತಿಗಳಲ್ಲಿ ಇಂದ್ರ ಪ್ರಧಾನ ದೇವತೆಯಾಗಿಯೂ, ಪಂಚಭೂತಗಳಾದ ಭೂಮಿ,ನೀರು,ಅಗ್ನಿ,ಗಾಳಿ ಆಕಾಶ ಮುಂತಾದವುಗಳು ದೇವರುಗಳೆಂದು ಪೂಜೆಗೆ ಒಳಪಡುತ್ತಿದ್ದವು. ಉತ್ತರ ವೇದಗಳ ಸಾಹಿತ್ಯದ ಕಾಲದಲ್ಲಿ ದೇವರ ಕಲ್ಪನೆಗಳು ಮತ್ತಷ್ಟು ಸಂಕೀರ್ಣಗೊಂಡಿದ್ದು ಕಂಡು ಬರುತ್ತದೆ.[೬೧] ನಂತರ "ಪರಬ್ರಹ್ಮ" ಎಂಬ (ಚತುರ್ಮುಖ ಬ್ರಹ್ಮನಲ್ಲ) ಏಕದೇವೋಪಾಸನೆಯ ನಂಬಿಕೆಯು ತಲೆಎತ್ತಿ ನಿಂತಿತು.

ಶಿವ,ಪರಮೇಶ್ವರ, ಮಹಾದೇವ, ಈಶ, ಸಹಸ್ರಕ್ಷ, ಶಿಪಿವಷ್ಟ, ಹಿರಣ್ಯಗರ್ಭ ಮುಂತಾದ ಹೆಸರುಗಳನ್ನು ಪರಬ್ರಹ್ಮನಿಗೆ ಪರ್ಯಾಯವಾಗಿ ಬಳಸಲಾಗಿದೆ.[೬೨] ನಂತರ ಅಂದರೆ ಉಪನಿಷತ್ತುಗಳ ಕೊನೆಯ ಕಾಲದಲ್ಲಿ ಪರಬ್ರಹ್ಮ ಒಬ್ಬನಾದರೂ ಅವನ ಮೂರು ಗುಣಗಳ (ಸತ್ವ,ರಜಸ್ ಮತ್ತು ತಮಸ್) ಸೃಷ್ಠಿ,ಸ್ಥಿತಿ,ಮತ್ತು ಲಯಗಳ ತನ್ನ ಕಾರ್ಯ ನಿರ್ವಹಿಸುತ್ತಿದ್ದಾನೆಂದು ತಿಳಿದು ನಂತರ ಪುರಾಣ ಯುಗದ ತ್ರಿಮೂರ್ತಿಗಳ ವಿಭಜನೆಗೆ ಇದೆ ಮೂಲವಾಯ್ತು.[೬೩] ನಂತರದ ಅವಧಿಯಲ್ಲಿ ಪಂಥೀಯ ಬಳವಣಿಗೆ ಆರಂಭವಾಯ್ತು ಅದು ಕ್ರಿ.ಶ ೬-೭ನೇ ಶತಮಾನಗಳ ಪಲ್ಲವರ ಕಾಲದಲ್ಲಿ ಹೆಚ್ಚಾಗಿ ಕಾಣಬಹುದಾಗಿದೆ. ಶಿವನ ಹೆಸರನ್ನು ಶೈವ ಮತ್ತು ವೈಷ್ಣವ ಪಂಥಗಳು ತಮ್ಮಲ್ಲೆ ಹಂಚಿಕೊಂಡು ಮುಂದುವರೆದಿರುವುದನ್ನು ಕಾಣಬಹುದಾಗಿದೆ.[೬೪] ರುದ್ರನ ಲಯಕಾಂತ ಚಟುವಟಿಕೆಗಳನ್ನು ಶಾಂತರೂಪದಲ್ಲಿ ಕಂಡು ಅವನನ್ನು "ಶಿವ" ಅಥವಾ ಶಂಕರ ಎಂದು ಆರಾದಿಸಲು ಪ್ರಾರಂಭವಾಯ್ತು.

ವೇದಗಳ ಕಾಲದಿಂದ ಉಪನಿಷತ್ತಿನ ಕಾಲದಲ್ಲಿ ರುದ್ರ,ಶಿವ ನಂತರ ಇಂದ್ರ,ಅಗ್ನಿ,ವಾಯು,ನಂತರ ಪಂಚಭೂತಗಳು ಅದಾದ ಮೇಲೆ ಅಗೋಚರ ಶಕ್ತಿಯನ್ನು ಗುರ್ತಿಸಿ ಅದಕ್ಕೆ ಶಿವ,ಪರಮೇಶ್ವರ,ಮಹಾದೇವ ಎಂಬ ಹೆಸರು ನೀಡಿದ್ದರಿಂದ ಭವ್ಯ ಶೈವ ಸಂಸ್ಕೃತಿಗೆ ಸ್ಪಷ್ಠತೆ ಸಿಕ್ಕಿತು.

ಮಹಾಕಾವ್ಯಗಳಲ್ಲಿ ಶಿವ (ಕ್ರಿ.ಪೂ ೫೦೦-೪೦೦)

ಭಾರತದ ಪ್ರಾಚೀನ ಮಹಾಕಾವ್ಯಗಳಾದ ರಾಮಾಯಣ ಮತ್ತು ಮಹಾಭಾರತಗಳು ಭಾರತದ ಸಂಸ್ಕೃತಿಯನ್ನು ಪ್ರತಿನಿಧಿಸುತ್ತವೆ. ರಾಮಾಯಣದಲ್ಲಿ ಶಿವನ ಉಲ್ಲೇಖ ಅನೇಕ ಪ್ರಸಂಗಗಳಲ್ಲಿ ಕಾಣಬಹುದಾಗಿದೆ. ಸೀತಾ ಸ್ವಯಂವರದ ಸಂದರ್ಭದಲ್ಲಿ ಶ್ರೀರಾಮನು ಶಿವಧನಸ್ಸನ್ನು ಮುರಿದ ಪ್ರಸಂಗ[೬೫] ನಂತರ ರಾವಣ ಸೀತೆಯನ್ನು ಅಪಹರಿಸಿ ಒಯ್ದ ಮೇಲೆ ರಾಮ ಅವಳನ್ನು ಹುಡುಕುತ್ತಾ ಹೊರಟಾಗ ರಾಮೇಶ್ವರದ ಬಳಿ ಮರುಳಿನ ಶಿವಲಿಂಗವನ್ನು ಪ್ರತಿಷ್ಠಾಪಿಸಿದ್ದು ಶಿವನಿಂದ ತಂದ ಆತ್ಮಲಿಂಗ ಗೋಕರ್ಣದ ಬಳಿ ಪ್ರತಿಷ್ಠಾಪನೆಯಾದ ಪ್ರಸಂಗ[೬೬] ಮಹತ್ವಪೂರ್ಣವಾಗಿದೆ.

ಮಹಾಭಾರತದಲ್ಲಿ ಪರಶಿವನ ವರ್ಣನೆ ಅದ್ಭುತವಾಗಿ ಮೂಡಿ ಬಂದಿರುವುದನ್ನು ಕಾಣಬಹುದಾಗಿದೆ. ಅರ್ಜುನ ಶಿವನನ್ನು ಕುರಿತು ತಪಸ್ಸು ಮಾಡಿ ಪಾಶುಪತಾಸ್ತ್ರವನ್ನು ಪಡೆಯುವ ಪ್ರಸಂಗ ಭೀಷ್ಮಪರ್ವದಲ್ಲಿ ನಮೂದಿತವಾಗಿದೆ.[೬೭] ದ್ರೋಣಪರ್ವದಲ್ಲಿ ಕೃಷ್ಣ-ಅರ್ಜುನ ಜೊತೆಯಾಗಿ ಕೈಲಾಸಕ್ಕೆ ತೆರಳಿ, "ಹುಟ್ಟು-ಸಾವುಗಳಿಲ್ಲದವನು,ಬದಲಾವಣೆಯಿಂದ ಹೊರತಾದ ನಿರಂತನು

ಮುಂತಾದ ವರ್ಣನೆಗಳಿಂದ ಶಿವನನ್ನು ಸ್ತುತಿಸುವ ಅಂಶ ದಾಖಲಾಗಿದೆ.[೬೮] ಈ ರೀತಿಯಾಗಿ ವಿಷ್ಣುವನ್ನು ವೈಷ್ಣವರು ಪೂಜಿಸುವುದಕ್ಕಿಂತ ಮುಂಚೆಯೇ ಶಿವ ಪೂಜಿಸಲ್ಪಟ್ಟ ಅಂಶ ಸ್ಪಷ್ಟವಾಗುತ್ತದೆ.

ಪುರಾಣಗಳಲ್ಲಿ ಶೈವ ಸಂಸ್ಕೃತಿ

ಕ್ರಿ.ಪೂ೫೦೦ರಿಂದಲೇ ಪುರಾಣಗಳ ರಚನೆ ಆರಂಭವು ಆಗಿರಲು ಸಾಕು ಹಾಗೂ ಅದು ಕ್ರಿ.ಶ ೬೦೦ರವರೆಗೂ ಮುಂದುವರೆದಿರುವುದನ್ನು ಅನೇಕ ವಿದ್ವಾಂಸರು ಉಲ್ಲೇಖಿಸಿದ್ದಾರೆ.[೬೯] ಪುರಾಣಗಳು ದೇವರ ಕಥೆಗಳು ಅಂದರೆ ದೇವರನ್ನು ವೈಭವೀಕರಿಸಿ ಕಥನ ರೂಪದಲ್ಲಿ ಹೇಳುತ್ತಾ ಸಾಗುತ್ತದೆ. ಪುರಾಣಗಳನ್ನು ಮೂರು ಬಗೆಯಾಗಿ ವಿಂಗಡಿಸಿದ್ದಾರೆ (೧)ಶೈವ (೨)ವೈಷ್ಣವ(೩)ಶಾಕ್ತಪುರಾಣ ಇವುಗಳಲ್ಲದೆ ಅನೇಕ ಉಪಪುರಾಣಗಳು ಕೂಡಾ ರಚನೆಯಾಗಿವೆ.[೭೦] ವಾಯುಪುರಾಣ ಪ್ರಾಚೀನ ಪುರಾಣವಾಗಿದೆ.ವೇದಗಳಲ್ಲಿನ ರುದ್ರ ಸಂಪೂರ್ಣವಾಗಿ ಶಿವನಾಗಿದ್ದು ಪುರಾಣಗಳಲ್ಲಿಯೇ ಕಾಣುತ್ತೇವೆ.

ಕಬ್ಬಿಣದ ಉಗಮ ಕಾಲದಲ್ಲಿ ಶಿವ

ಕ್ರಿ.ಶ ಪೂರ್ವದ ಮೊದಲಲ್ಲಿ ಕಬ್ಬಿಣ ಆವಿಷ್ಕಾರಗೊಂಡು ಶಿಲ್ಪಕಲೆಯಲ್ಲಿ ಮಹಾ ಕ್ರಾಂತಿಯನ್ನೆ ಹುಟ್ಟುಹಾಕಿತು. ಇದರ ಜೊತೆಗೆ ಮಾನವನ ಬದುಕಿನಲ್ಲಿಯ ಎಲ್ಲ ಕ್ಷೇತ್ರಗಳಲ್ಲಿ ಬದಲಾವಣೆಯ ಪರ್ವಕಾಲ ಆರಂಭವಾಯ್ತು ಅದರ ಪರಿಣಾಮ ಶೈವ ಸಂಸ್ಕೃತಿ ಮತ್ತು ಶೈವ ಕಲೆಗಳ ಮೇಲೂ ಆಯಿತು. ಅಶೋಕನ ಶಾಸನಗಳಿಂದ ಲಿಪಿಯ ಬಳಕೆ ಪ್ರಾರಂಭವಾಗಿದೆ ಎಂದು ವಿದ್ವಾಂಸರ ಅಭಿಪ್ರಾಯವಾಗಿದೆ.[೭೧] ಕ್ರಿ.ಪೂ ೪ನೇ ಶತಮಾನದಲ್ಲಿ ಭಾರತದ ನೆಲದಲ್ಲಿ ಪಾಶ್ಚಿಮಾತ್ಯ ಪ್ರಭಾವದ ಕಲೆಯೊಂದು ಅನಾವರಣಗೊಂಡಿತು ಅದನ್ನು ಇತಿಹಾಸಕಾರರು "ಗಾಂಧಾರ ಕಲೆ" ಎಂದು ಕರೆದಿದ್ದಾರೆ. ಈ ಕಾಲದಲ್ಲಿ ಶೈವ ಶಿಲ್ಪಗಳಾದ ನಂದಿ,ಎಮ್ಮೆ,ಶಕ್ತಿ ಮತ್ತು ಶಿವನ ಮಾನವ ರೂಪದ ಚಿತ್ರಣವನ್ನು ಕಾಣಬಹುದಾಗಿದೆ.[೭೨] ಅಲಹಾಬಾದಿನ ಭೀಟಾ ಎಂಬಲ್ಲಿ ದೊರೆತಿರುವ ಐದು ಮುಖಗಳನ್ನು ಹೊಂದಿರುವ ಲಿಂಗವನ್ನು ಸಿ.ಶಿವರಾಮ ಮೂರ್ತಿಯವರು ಪಂಚಮುಖಲಿಂಗನೆಂದು ಗುರ್ತಿಸಿದ್ದಾರೆ. ಇದೊಂದು ಪ್ರಾಚೀನ ಕುರುಹು ಆಗಿದೆ. ಕ್ರಿ.ಶ ಆರಂಭದ ಕಾಲದಲ್ಲಿ ಭಾರತವನ್ನು ಆಳಿದ ಕುಶಾನರ ದೊರೆ ಕಡಫೈಸಿಸ್ ಕಾಲದ ನಾಣ್ಯಗಳ ಮೇಲೆ ಸ್ಪಷ್ಟವಾದ ಶಿವನ ಚಿತ್ರ ಮೂಡಿಬಂದಿದೆ.[೭೩]

ಗುಪ್ತರ ಕಾಲದಲ್ಲಿ ಶಿವ ಕ್ರಿಶ ೨೪೦-೫೭೦

ಗುಪ್ತರ ಕಾಲವನ್ನು ಹಿಂದೂ ಸಂಸ್ಕೃತಿಯ ಪುನರುತ್ಥಾನದ ಕಾಲ ಎಂದು ಕರೆಯಲಾಗಿದೆ. ಈ ಅವಧಿಯಲ್ಲಿ ಕಲ್ಲಿನ ದೇವಾಲಯಗಳು ನಿರ್ಮಾಣವಾಗೊಂಡವು ಶಿವ ಹಾಗೂ ವಿಷ್ಣುವಿನ ದೇವಾಲಯ ಆರಂಭವಾಯ್ತು

ಎರಡನೆ ಚಂದ್ರಗುಪ್ತನ ಮಥುರಾ ಸ್ತಂಭಶಾಸನದಲ್ಲಿ ಶೈವ ಗುರುಗಳಾದ ಉಪಮಿತ ಮತ್ತು ಕಪಿಲರ ಮೂರ್ತಿಗಳನ್ನು ಗುರುವಾಯುತನದಲ್ಲಿ ಸ್ಥಾಪಿಸಿದ ವಿವರಗಳು ಲಭ್ಯವಾಗಿವೆ.[೨೪] ಪ್ರಖ್ಯಾತ ಖಗೋಳಶಾಸ್ತ್ರಜ್ಞನಾದ ವರಾಹಮಿಹಿರನು ತನ್ನು ಗ್ರಂಥದಲ್ಲಿ "ಶೈವ ದೇವಾಲಯದ ವಿಗ್ರಹವು ಶೈವ ಬ್ರಾಹ್ಮಣರಿಂದಲೇ ಸ್ಥಾಪಿತವಾಬೇಕು ಎಂದು ಹೇಳಿದ್ದಾನೆ.[೨೫] ನಾಸಿಕದ ಬಳಿಯಲ್ಲಿ ಕ್ರಿಶ ೬೧೦-೩೯ರ ಕಾಲದ ಶಾಸನವೊಂದು ಐಗತಿಪುರ ಎಂಬಲ್ಲಿ ದೊರತಿದೆ. ಅದರಲ್ಲಿ ಕಾಳಾಮುಖ ಪಂಥದ ಮಹಾವ್ರತಿಗಳಿಗೆ ಕಪಾಲೀಶ್ವರ ದೇಗುಲಕ್ಕಾಗಿ ದಾನ ನೀಡಿದ ವಿವರವಿದೆ.[೨೬] ಹೀಗೆ ವೇದಕಾಲದ ರುದ್ರ ಉಪನಿಷತ್ತುಗಳ ಕಾಲದಲ್ಲಿ ಪರಮೇಶ್ವರನಾಗಿ ಗುಪ್ತರ ಅವಧಿಗೆ ಶಿವನಾಗಿ ಶೈವ ಪರಂಪರೆಯ ನಿರ್ದಿಷ್ಠ ರೂಪ ತಳೆದ.

ಆಗಮಗಳಲ್ಲಿ ಶಿವ

ಶಿವ ಪಾರ್ವತಿಗೆ ವಿವರಿಸಿದ ಕಥೆಗಳೇ ಆಗಮಗಳು ಎಂಬ ನಂಬಿಕೆ ಇದೆ. ಆಗಮಗಳಲ್ಲಿ ಶೈವಾಗಮ, ವೈಷ್ಣವಾಗಮ,ಮತ್ತು ಶಕ್ತಾಗಮಗಳು ಎಂದು ಮೂರು ಪ್ರಕಾರಗಳನ್ನು ಕಾಣಬಹುದಾಗಿದೆ ಅವುಗಳಲ್ಲಿ ಶೈವಾಗಮವು ಅತ್ಯಂತ ಪ್ರಾಚೀನ ಆಗಮವಾಗಿದೆ[೨೭] ಆಗಮಗಳಲ್ಲಿ ದೇವಾಲಯ ನಿರ್ಮಾಣ ಶಿಲ್ಪ ರಚನೆಯ ನಿರ್ದಿಷ್ಠ ಸೂತ್ರಗಳು ಮತ್ತು ದೇವತಾ ಪೂಜಾ ವಿಧಾನಗಳು ಹೀಗೆ ಶಾಸ್ತ್ರೀಯ ಅಂಶಗಳನ್ನು ಕಾಣಬಹುದಾಗಿದೆ. ಶಿವನ ಚಟುವಟಿಕೆಗಳು ಅವನ ಲೀಲಾ ಮೂರ್ತಿಗಳ ರೂಪದಲ್ಲಿ ವರ್ಣಿತವಾಗಿವೆ. ಶಿವನ ೨೫ ಲೀಲಾ ಮೂರ್ತಿಗಳು.[೨೮] ಭಿತ್ತಿ ಶಿಲ್ಪಗಳು ಮತ್ತು ಬಿಡಿ ಶಿಲ್ಪಗಳು ಭಾರತದಾದ್ಯಂತ ಕಂಡು ಬರುತ್ತವೆ. ಅಖಂಡ ಭಾರತದಲ್ಲಿ ವಿಷ್ಣು,ದೇವಿ ಮತ್ತು ಇತರ ಶಿಲ್ಪಗಳನ್ನು ರಚಿಸಿದರು ಅವರು ಶೈವರೇ ಆಗಿದ್ದಾರೆ. ಈ ರೀತಿ ಶೈವಾಚರಣೆಯ ಅಂಶ ಎದ್ದು ಕಾಣುತ್ತದೆ.

ಸಂಘಂ ಯುಗದಲ್ಲಿ ಶಿವ:

ಸಂಘಂ ಸಾಹಿತ್ಯದಲ್ಲಿ ಅಗಸ್ತನ ವಿವರಣೆ ಬರುತ್ತದೆ ಅಂದರೆ ಕ್ರಿ.ಪೂ. ೧೦೦೦ರ ಹೊತ್ತಿಗೆ ಆರ್ಯ ಸಂಸ್ಕೃತಿಯ ಸಂಪರ್ಕವು ದಕ್ಷಿಣದತ್ತ ಹಂತ ಹಂತವಾಗಿ ಬೆಳವಣಿಗೆ ಹೊಂದುತ್ತಿರುವ

ಅಂಶವನ್ನು ತಿಳಿಯಬಹುದಾಗಿದೆ.[೭೯] ತಾತ್ಕಾಲಿಕವಾಗಿ ದಕ್ಷಿಣಕ್ಕೆ ಬಂದ ಅಗಸ್ತ್ಯ ತಾನು ಮತ್ತೆ ಉತ್ತರಕ್ಕೆ ಹೋಗಲು ಅಡ್ಡಿಯಾಗದಂತೆ "ಬೆಳೆಯಬೇಡ" ಎಂದು ಹೇಳಿ ದಕ್ಷಿಣಕ್ಕೆ ಬರುತ್ತಾನೆ. ಆದರೆ ಅಗಸ್ತ್ಯ ಮತ್ತೆ ಉತ್ತರಕ್ಕೆ ಹೋಗಲೇ ಇಲ್ಲ.[೮೦] ಸಂಘಂ ಸಾಹಿತ್ಯ ದಕ್ಷಿಣದಲ್ಲಿ ಪಲ್ಲವರ ಉದಯಕ್ಕೆ ಮುಂಚಿನ ಸ್ಥಿತಿಗತಿಗಳನ್ನು ವಿವರಿಸುವ ಸಾಹಿತ್ಯವಾಗಿದೆ. ಯಜ್ಞಯಾಗ,ಶಿವನ ಪೂಜೆ ಮತ್ತು ನಂದಿಯ ಅಸ್ತಿತ್ವ,ಸುಬ್ರಹ್ಮಣ್ಯ (ಮುರುಗ)ನ ಆರಾಧನೆ ಹೀಗೆ ಸಮ್ಮಿಶ್ರ ಸಂಸ್ಕೃತಿಯ ಬೆಳವಣಿಗೆಯನ್ನು ಕಾಣಬಹುದಾಗಿದೆ.ಸಂಘಂ ಸಾಹಿತ್ಯದಲ್ಲಿ ಬರುವ 'ಚೇರನ್ ಸೆಂಗುಟ್ಟನ್' ಎಂಬುವವ ಶೈವನಾಗಿದ್ದು; ನಾಯಕ 'ನನ್ನನ್' ಎಂಬುವವನೂ ಒಬ್ಬ ಶೈವ. ನನ್ನನ್ ನನ್ನು ಸಾಹಿತ್ಯಿಕ ಕೃತಿಗಳಲ್ಲಿ 'ನವಿರಮೆಲೈ' ಶೈವ ದೇಗುಲ ರಕ್ಷಕ ಎಂದು ವರ್ಣಿಸಿವೆ.[೮೧] 'ಶಿಲಪ್ಪಾಧಿಕಾರಂ' ದಲ್ಲಿ ಶಿವನ ಪಂಚಾಕ್ಷರ ಮಂತ್ರ "ನಮಃ ಶಿವಾಯ" ದ ಉಲ್ಲೇಖವಿದೆ.[೮೨]

ಶಾತವಾಹನರಲ್ಲಿ ಶಿವ

ಮೌರ್ಯರ ಅವನತಿಯ ನಂತರ ಅವರ ಸಾಮಂತರಾದ (ಆಂದ್ರ ಭೃತ್ಯರು) ಶಾತವಾಹನರು ಸ್ವತಂತ್ರರಾದರು.ಅವರು ಶಿವನನ್ನು ಪರಮದೇವನೆಂದು ಹಾಗೂ ಅವನೊಟ್ಟಿಗೆ ವಿಷ್ಣು ಮತ್ತಿತರ ಪರಿವಾರ ದೇವತೆಗಳನ್ನು ಆರಾಧಿಸುವ ಸಂಪ್ರದಾಯವನ್ನೇ ಆರಂಭಿಸಿತು. ಶಾತವಾಹನರಲ್ಲಿ ತಮ್ಮ ಹೆಸರಿನ ಆರಂಭದಲ್ಲಿ ಶಿವನ ಹೆಸರು ಉಳಿಸಿಕೊಂಡು ಕರೆದುಕೊಳ್ಳುತ್ತಿದ್ದರು.ಉದಾ:– 'ಶಿವಶ್ರೀ ಪುಳುಮಾವಿ', 'ಶಿವಶ್ರೀ ಶಾತಕರ್ಣಿ' ಶಾತವಾಹನ ದೊರೆ 'ಹಾಲ'ನ ಗಾಥಾ ಸಪ್ತಶತಿಯಲ್ಲಿ ಶಿವ ಪಾರ್ವತಿಯರ ಮಂಗಳ ಸ್ತುತಿಯೊಂದಿಗೆ ಸಾಹಿತ್ಯ ಆರಂಭವಾಗುತ್ತದೆ.[೩೮](ಹಾಲನ ಗಾಥಾ ಸಪ್ತಶತಿ ಶಿವಸ್ತುತಿಯೊಂದಿಗೆ ಪ್ರಾರಂಭವಾಗುತ್ತದೆ.) ದಕ್ಷಿಣ ಭಾರತದ ತಿರುಪತಿಯ ಬಳಿ ಇರುವ 'ಗುಡಿಮಲ್ಲಂ' ಎಂಬ ಹಳ್ಳಿಯಲ್ಲಿರುವ 'ಪರಶುರಾಮೇಶ್ವರ ಗುಡಿ' ಎಂಬ ಲಿಂಗ ದೇವಾಲಯ ಶಾತವಾಹನರ ಶೈವದ ಪ್ರತೀಕವಾಗಿದೆ.[೮೩] ಲಿಂಗದಂಡದಲ್ಲಿ ಮಾನವಾಕಾರದಲ್ಲಿ ಶಿವನು ಸಮಭಂಗಿಯಲ್ಲಿ ನಿಂತಿದ್ದು; ಬಿಲ್ಲು ಬಾಣಗಳೊಂದಿಗೆ ಮೃಗವೊಂದನ್ನು ಕೈಯಲ್ಲಿ ಹಿಡಿದಿದ್ದಾನೆ. ಶಿವನ ಕಾಲಿನ ಕೆಳಗೆ ಯಕ್ಷನಂತಹ ಕುಬ್ಜನೊಬ್ಬ ಕುಳಿತಿದ್ದು ಶಿವನು ಅವನನ್ನು ಮೆಟ್ಟಿ ನಿಂತಿದ್ದಾನೆ. ಇದು ದಕ್ಷಿಣ ಭಾರತದ ಅತೀ ಪ್ರಾಚೀನ ಲಿಂಗವಾಗಿದ್ದು ಶೈವ ಸಂಸ್ಕೃತಿಯ ಪ್ರಾಚೀನತೆಯನ್ನು ಸ್ಪಷ್ಟ ಪುರಾತತ್ವ ಆಧಾರದೊಂದಿಗೆ ದೃಢಪಡಿಸುತ್ತದೆ. ಇದನ್ನು ಇತಿಹಾಸಕಾರರು "ಲಿಂಗರೂಪಿ ಶಿವ" ಎಂದು ಕರೆದಿದ್ದಾರೆ.

ಪಲ್ಲವರಲ್ಲಿ ಶಿವ:

ಪಲ್ಲವರ ಇತಿಹಾಸವು ಸಿಂಹವರ್ಮನಿಂದ ಪ್ರಾರಂಭವಾದರೂ; ಐತಿಹಾಸಿಕ ಮಾಹಿತಿ ಲಭ್ಯವಾಗುವುದು ಕ್ರಿ.ಶ.೨೭೫-೩೦೦ರ ಅವಧಿಯ ಶಿವಸ್ಕಂದ ವರ್ಮನಿಂದ. ಈತನ ಹೆಸರಿನಲ್ಲಿಯೇ 'ಶಿವ' ಎಂಬ ಪದ ಅಡಗಿರುವದರಿಂದ ಆರಂಭದಲ್ಲಿಯೇ ಪಲ್ಲವರು ಶೈವ ಸಂಸ್ಕೃತಿಯಿಂದ ಪ್ರಭಾವಿತರಾದವರು ಎಂಬುದು ಸ್ಪಷ್ಟವಾಗುತ್ತದೆ. ಇವರು ಪ್ರಾರಂಭಿಕ ಹಂತದಲ್ಲಿ ಗುಹಾಂತರ ದೇವಾಲಯಗಳನ್ನು ಮಹಾಬಲಿಪುರದ (ಮಾಮಲ್ಲಪುರಂ) ಪರಿಸರದಲ್ಲಿ ನಿರ್ಮಿಸಿದರು. ರಾಜಧಾನಿ ಕಂಚಿಯಲ್ಲಿ ಭವ್ಯವಾದ ದೇವಾಲಯ ನಿರ್ಮಿಸಿದರು.[೮೪] ಈ ಬೆಳವಣಿಗೆ ಮುಂದುವರೆದು ಕಂಚಿಯಲ್ಲಿ ಕೈಲಾಸನಾಥ ಮತ್ತು ವೈಕುಂಠ ಪೆರುಮಾಳ್ ದೇಗುಲಗಳು ಪಲ್ಲವರ ಕಾಲದ ಪಂಥಾತೀಥ ನಂಬಿಕೆಯ ಶಿವ-ವಿಷ್ಣು ದೇಗುಲಗಳಾಗಿವೆ.

ಖ್ಯಾತ ವಿದ್ವಾಂಸರಾದ ಕೆ.ಎ.ನೀಲಕಂಠಶಾಸ್ತ್ರಿಗಳು 'ಕ್ರಿ.ಶ.೬ನೇ ಶತಮಾನದ ಪಲ್ಲವರವರೆಗೆ ದಕ್ಷಿಣ ಭಾರತದಲ್ಲಿ ಪಂಥಿಯ ಬೆಳವಣಿಗೆ ಕಂಡು ಬರುವದಿಲ್ಲ. ಶಿವನನ್ನೆ ಪರದೈವವಾಗಿದ್ದಾನೆ. ಎಂದು ಹೇಳಿದ್ದಾರೆ ಇದು ಶೈವ ಧರ್ಮದ ಪ್ರಭಾವ ತಿಳಿಸುತ್ತದೆ.[೮೫]

ಚೋಳರಲ್ಲಿ ಶಿವ

ಕ್ರಿ.ಶ ೮೫೦ ರಿಂದ ಕ್ರಿ.ಶ ೧೨೭೯ರ ವರೆಗೆ ಸುದೀರ್ಘ ಆಡಳಿತ ನಡೆಸಿದ ತಮಿಳುನಾಡಿನ ಚೋಳರ ಕಾಲವನ್ನು ಶೈವ ಸಂಸ್ಕೃತಿಯ ಸುವರ್ಣಯುಗವೆಂದು ಖ್ಯಾತ ಇತಿಹಾಸ ವಿದ್ವಾಂಸರಾದ ಕೆ.ಎ.ನೀಲಕಂಠಶಾಸ್ತ್ರಿಯವರ ಅಭಿಪ್ರಾಯ ಪಟ್ಟಿದ್ದಾರೆ. ಶಿವಾಲಯಗಳು ಪಲ್ಲವರು ಆರಂಭಿಸಿದರೂ ಶಿವಶಿಲ್ಪ ಮತ್ತು ದೇವಾಲಯಗಳು ಪರಿಪಕ್ವತೆ ಪಡೆದದ್ದು ಚೋಳರ ಕಾಲದಲ್ಲಿಯೇ ಎನ್ನಬೇಕು. ಕ್ರಿ.ಶ ೯ನೇ ಶತಮಾನದಲ್ಲಿ ಚೋಳನಾಡಿನಲ್ಲಿ ನಿರ್ಮಾಣವಾದ ದೇವಾಯಗಳಲ್ಲಿ ೨೭೫ ಶಿವ ದೇವಾಲಯಗಳಾದರೆ ೧೦೮ ವಿಷ್ಣು ದೇವಾಲಯಗಳಾಗಿವೆ ಎಂದು ವಿದ್ವಾಂಸರು ಗುರುತಿಸಿದ್ದಾರೆ[೮೬] ನಾಯನ್ಮಾರರಿಂದ ಶ್ರೀಮಂತಗೊಳಿಸಲಾಗಿದ್ದ ಅಪಾರ ಶೈವ ಸಾಹಿತ್ಯಕ್ಕೆ ಚೋಳರು ತಮ್ಮ ಶಿಲ್ಪ ಮತ್ತು ವಾಸ್ತುಗಳ ಮೂಲಕ ಸಾಕಾರ ರೂಪ ನೀಡಿದರು.

ತಂಜಾವೂರನ್ನು ಕೇಂದ್ರವನ್ನಾಗಿ ಹೊಂದಿದ್ದ ಚೋಳ ಸಾಮ್ರಾಜ್ಯದಲ್ಲಿ ಮಾತ್ರವಲ್ಲದೆ ಅವರು ಹೊಸದಾಗಿ ಆಕ್ರಮಿಸಿಕೊಂಡ ಪ್ರದೇಶಗಳಲ್ಲಿಯೂ ಸಹ ಅನೇಕ ಶಿವಾಲಯಗಳನ್ನು ನಿರ್ಮಿಸಿದ ಕೀರ್ತಿ ಚೋಳರಿಗೆ ಸಲ್ಲಬೇಕು. ಕ್ರಿ.ಶ.೮೫೦-೯೦೦ರ ನಡುವಿನ ಮೊದಲನೆ ಆದಿತ್ಯನ ತಾಮ್ರ ಪತ್ರವೊಂದರಲ್ಲಿ ಈತನು ಕಾವೇರಿ ತೀರದಲ್ಲಿ ಉಗಮ ಸ್ಥಳದಿಂದ ಹಿಡಿದು ಸಾಗರದವರೆಗೆ ಅನೇಕ

ಬೃಹತ್ ಶಿವ ದೇವಾಲಯಗಳನ್ನು ನಿರ್ಮಿಸಿದುದಾಗಿ ವಿವರಿಸಲಾಗಿದೆ.[೮೭] ಅವನ ಉತ್ತರಾಧಿಕಾರಿಗಳು ಅದನ್ನೆ ಮುಂದುವರೆಸಿದರು. ಅವೆಲ್ಲ ಶೈವ ಸಿದ್ಧಾಂತದ ಕೇಂದ್ರ ಸ್ಥಾನಗಳಾಗಿ ಪ್ರಸಿದ್ಧಿ ಪಡೆದಿವೆ. ದಕ್ಷಿಣ ಭಾರತದ ಅತಿ ಎತ್ತರ ಹಾಗೂ ಅತಿ ವಿಸ್ತಾರವಾದ ತಂಜಾವೂರಿನ ಬೃಹದೀಶ್ವರ ದೇವಾಲಯವು ಬೃಹತ್ತಾದ ಲಿಂಗವೊಂದನ್ನು ಒಳಗೊಂಡಿದೆ. ಗಂಗೈಕೊಂಡ ಚೋಳಪುರಂನಲ್ಲಿನ ಮತ್ತೊಂದು ಶಿವ ದೇವಾಲಯವೂ ಸಹ ತನ್ನ ಪರಿಸರದಲ್ಲಿ ಶಿವನ ಅನೇಕ ತರಹದ ಲೀಲಾಮೂರ್ತಿಗಳನ್ನು ಹೊಂದಿರುವ ದೇವಾಲಯವಾಗಿದೆ. ಇದು ಬೃಹದೀಶ್ವರ ದೇವಾಲಯದ ಪ್ರತಿರೂಪವಾಗಿದ್ದು ಗಾತ್ರದಲ್ಲಿ ಕಿರಿದಾಗಿದೆ ಹಾಗೂ ಶೈವ ಶಿಲ್ಪಗಳನ್ನು ಹೆಚ್ಚು ಹೊಂದಿದೆ. ಈ ಕಾರಣದಿಂದಲೇ ಪಾಶ್ಚಾತ್ಯ ವಿದ್ವಾಂಸರಾದ ಪರ್ಸಿಬ್ರೌನ್ ಅವರು ಗಂಗೈಕೊಂಡ ಚೋಳಪುರಂ ದೇವಾಲಯವು ಬೃಹದೀಶ್ವರ ದೇಗುಲದ ಪತ್ನಿ ಎಂದು ಕರೆದಿದ್ದಾರೆ.[೮೮]

ಒಟ್ಟಾರೆ ಚೋಳರ ಕಾಲವು ಶೈವ ಸಂಸ್ಕೃತಿಯಲ್ಲಿಯೇ ಒಂದು ಸ್ವರ್ಣಯುಗ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಹಾಗೇಯೇ ಸುತ್ತಮುತ್ತಲಿನ ಶೈವ ಸಂಸ್ಕೃತಿಯ ಮೇಲೂ ಮಹತ್ತರ ಪರಿಣಾಮ ಬೀರಿದ್ದನ್ನು ಕೂಡಾ ಕಾಣಬಹುದಾಗಿದೆ.

ಕದಂಬರ ಕಾಲದಲ್ಲಿ ಶೈವಧರ್ಮ :

ಕರ್ನಾಟಕದ ಇತಿಹಾಸ ಪ್ರಾರಂಭವಾಗುವುದೇ ಕದಂಬರಿಂದ ಅವರ ಮೂಲಪುರುಷ 'ಮಯೂರ ಶರ್ಮ' ಆದರೆ ಇತ್ತೀಚಿಗೆ ಶಿವಮೊಗ್ಗ ಜಿಲ್ಲೆಯ 'ಮಳವಳ್ಳಿ' ಎಂಬಲ್ಲಿ ದೊರೆತ ಶಾಸನದಲ್ಲಿ ಮಯೂರಶರ್ಮನ ತಂದೆಯಾದ 'ಬಂಧುಸೇಣನ' ಉಲ್ಲೇಖವಿರುವದರಿಂದ ಈತನೆ ಕದಂಬರ ಮೂಲಪುರುಷ ಎಂದು ಇತಿಹಾಸಕಾರರ ಅಭಿಪ್ರಾಯವಾಗಿದೆ.[೮೯] ಪಲ್ಲವರ ಆಧೀನದಲ್ಲಿದ್ದ ಕದಂಬರು ಅವರ ಉಪಟಳ ತಡೆಯದೆ ಸ್ವಾತಂತ್ರ್ಯ ಘೋಸಿಸಿಕೊಂಡ ಮಾಹಿತಿಯನ್ನು ನಾವು ಕ್ರಿ.ಶ.೪೫೦ರ ಕದಂಬ ಶಾಂಮತಿವರ್ಮನ ಶಾಸದಿಂದ ತಿಳಿಯಬಹುದಾಗಿದೆ.[೯೦] ಕರ್ನಾಟಕವನ್ನು ಆಳಿದ ಕದಂಬರು ತಮ್ಮ ಆಡಳಿತದ ಅವಧಿಯಲ್ಲಿ ಶೈವ ಸಂಸ್ಕೃತಿಯನ್ನು ಉಳಿಸಿ,ಬೆಳೆಸಿದ ಬಗೆಯನ್ನು ತಿಳಿಯಲು ಅವರ ಕಾಲದಲ್ಲಿ ರಚನೆಯಾದ ೪೪ ಸಂಸ್ಕೃತ ಶಾಸನಗಳಿಂದ ಮಾಹಿತಿ ದೊರೆಯುತ್ತದೆ.[೯೧] ಕದಂಬರ ಕಾಲದ ಧಾರ್ಮಿಕ ಜೀವನ ಅಧ್ಯಯನ ಮಾಡಿದರೆ ಅವರು ಯಾವುದೇ ಪಂಥದ ಸೋಂಕಿಲ್ಲದೆ ಪಂಥಪೂರ್ವ ಧಾರ್ಮಿಕ ಜೀವನ ಅನುಸರಿಸಿದ್ದನ್ನ ನಾವು ಕಾಣಬಹುದಾಗಿದೆ. ಹಲಸಿ, ಲನವಾನೆ, ಸನ್ನತಿ ಇನ್ನೂ ಅನೇಕ ಕಡೆ ವಿಷ್ಣು,ಸ್ಕಂದ ನರಸಿಂಹ,ಹೀಗೆ ಬೇರೆ ಬೇರೆ ದೇವತೆಗಳ ಶಿಲ್ಪವು ಕದಂಬರ ಕಾಲದ ವೈಶಿಷ್ಟ್ಯಪೂರ್ಣ ಕಲೆಗೆ ಸಾಕ್ಷಿಯಾಗಿವೆ. ವೈದಿಕ

ಸಂಸ್ಕೃತಿಯ ಬಹುದೇವೋಪಾಸನೆ ಕಂಡುಬರುತ್ತದೆ ಮತ್ತು ಎಲ್ಲದಕ್ಕೂ ಶಿವನೆ ಪರಮ ದೇವತೆಯಾಗಿದ್ದನು.

ಕ್ರಿ.ಶ.೪೫೦ರ ಕಾಲದ ಕದಂಬ ಶಾಂತಿವರ್ಮನ ಶಾಸನವಿರುವ 'ಪ್ರಣವೇಶ್ವರ ದೇವಾಲಯ'ವು ಕರ್ನಾಟಕದ ಪ್ರಾಚೀನ ಶಿವ ದೇವಾಲಯವಾಗಿದೆ.[೬೨] ಈ ದೇವಾಲಯವು ಇವರ ಕಾಲದಲ್ಲಿ ಜಿರ್ಣೋದ್ಧಾರಗೊಂಡಿರುವುದು ಸ್ಪಷ್ಟವಾಗುತ್ತದೆ. ಕದಂಬ ಶಾಂತಿವರ್ಮನನ್ನು ಗುಡ್ನಾಪುರ ಸ್ತಂಭಶಾಸನವು 'ಕಾರ್ತಿಕೇಯ ಲಬ್ಧವರ ಪ್ರಸಾದ' ಎಂದು ಸ್ಪಷ್ಟಪಡಿಸುತ್ತದೆ.[೬೩] ಕ್ರಿ.ಶ.೮ನೇ ಶತಮಾನದಿಂದ ಸೇರಿದ ಬೀರೂರು ಶಾಸನವು ತ್ರಿಮೂರ್ತಿಗಳನ್ನು ಸ್ತುತಿಸಿ ಆ ಕಾಲದ ತ್ರೈಪುರುಷಾರಾಧನೆಯ ಬಗ್ಗೆ ತಿಳಿಸುತ್ತದೆ.[೬೪] ಈ ಎಲ್ಲ ಅಂಶಗಳಿಂದ ಕದಂಬರು ಇತರೆ ದೇವತೆಗಳೊಂದಿಗೆ ಶಿವನನ್ನು ಲಿಂಗರೂಪದಲ್ಲಿ ಆರಾಧಿಸುತ್ತಿದ್ದರು ಎಂಬುದು ಸ್ಪಷ್ಟವಾಗುತ್ತದೆ.

ಗಂಗರ ಕಾಲದ ಶೈವ ಸಂಸ್ಕೃತಿ:

ಸುಮಾರು ೭೨೫ ವರ್ಷಗಳ ಕಾಲ ಸುದೀರ್ಘವಾಗಿ ಕರ್ನಾಟಕವನ್ನು ಆಳಿದ ಗಂಗರು ಕದಂಬರ ನಂತರ ಶೈವ ಸಂಸ್ಕೃತಿಗೆ ಸಾಕ್ಷಿಯಾಗಿದ್ದಾರೆ. ಅವರ ಕಾಲವನ್ನು 'ಶಿವ ಪಾರಮ್ಯದ ಕಾಲ' ಎಂದು ಕರೆಯಬಹುದಾಗಿದೆ. ಗಂಗರ ಪ್ರಾರಂಭಿಕ ನೆಲೆಯಾದ ಕೋಲಾರ ನಂತರದ ತಲಕಾಡುಗಳಲ್ಲಿ ಅನೇಕ ಶಿವ ದೇವಾಲಯಗಳನ್ನು ಕಾಣಬಹುದಾಗಿದೆ. ಅವರದೇ ಆದ ಪ್ರತ್ಯೇಕ ವಾಸ್ತುಶೈಲಿ ಇಲ್ಲವಾದರೂ ಉತ್ತರದ ಚಾಳುಕ್ಯ, ನೊಳಂಬ, ದಕ್ಷಿಣದ ಪಲ್ಲವರ ಪ್ರಭಾವವನ್ನು ಅವರ ವಾಸ್ತು ಮತ್ತು ಶಿಲ್ಪಗಳಲ್ಲಿ ಕಾಣಬಹುದಾಗಿದೆ.[೬೫] ಗಂಗರ ಕಾಲದ್ದು ಎನ್ನಬಹುದಾದ ಕೋಲಾರದ ಲೋಮೇಶ್ವರ,ಮಣ್ಣೆಯ ಕಪಿಲೇಶ್ವರ,ನರಸಮಂಗಲದ ರಾಮೇಶ್ವರ ಮತ್ತು ತಲಕಾಡಿನ ಪಾತಾಳೇಶ್ವರ ಮತ್ತು ವೈದ್ಯೇಶ್ವರ ಪ್ರಮುಖವಾಗಿವೆ. ಗಂಗರು ಶೈವ ಸಂಸ್ಕೃತಿಯೊಂದಿಗೆ ವೈಷ್ಣವ ಮತ್ತು ಜೈನ ಸಂಸ್ಕೃತಿಯನ್ನು ಪೋಷಿಸಿಕೊಂಡು ಬಂದರೂ ಕೂಡಾ ಶೈವ ಸಂಸ್ಕೃತಿಗೆ ಪ್ರಮುಖ ಸ್ಥಾನವಿರುವುದನ್ನು ಇಂದಿಗೂ ಅಸ್ತಿತ್ವದಲ್ಲಿರುವ ಶೈವ ದೇವಾಲಯಗಳೇ ಸಾಕ್ಷೀಕರಿಸುತ್ತವೆ.

ಬಾದಾಮಿ ಚಾಲುಕ್ಯರ ಕಾಲದಲ್ಲಿ ಶೈವ ಸಂಸ್ಕೃತಿ:

ಕರ್ನಾಟಕವನ್ನು ಆಳಿದ ಚಾಲುಕ್ಯರು ಕಲೆಗೆ ಅತಿ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದರು.ಅವರ ಕಾಲದ ಪ್ರಮುಖ ಕೇಂದ್ರಗಳಾದ ಬಾದಾಮಿ,ಪಟ್ಟದಕಲ್ಲು ಮತ್ತು ಐಹೊಳೆ ಹಾಗೂ ಮಹಾಕೂಟಗಳಲ್ಲಿ ಅನೇಕ ಶಿವದೇವಾಲಯಗಳು ಮತ್ತು ಶಿವ ಶಿಲ್ಪಗಳನ್ನು ಕಾಣಬಹುದಾಗಿದೆ. ಚಾಲುಕ್ಯರ ಕಾಲದಲ್ಲಿ ಶಿವ,ವಿಷ್ಣು,ಕಾರ್ತಿಕೇಯ ಮತ್ತು ತ್ರಿಮೂರ್ತಿಗಳ ಅನೇಕ ದೇವಾಲಯ

ಕಂಡುಬಂದರೂ ಶಿವನ ದೇವಾಲಯಗಳೇ ಅತಿ ಹೆಚ್ಚು ಕಾಣಲು ಸಾಧ್ಯ.[೯೬] ಬಾದಾಮಿ ಚಾಲುಕ್ಯರ ಕಾಲದಲ್ಲಿ ಶಿವದೇಗುಲ ಮತ್ತು ಶಿಲ್ಪಗಳಿಗೆ ಸಂಬಂಧಿಸಿದಂತೆ ಕ್ರಾಂತಿಕಾರಿ ಪ್ರಯೋಗಗಳು ನಡೆದು ಕಲಾ ಸಾಮ್ರಾಜ್ಯಕ್ಕೆ ಮುನ್ನುಡಿ ಬರೆದಂತಾಗಿದೆ. ಬಾದಾಮಿಯ ಮೊದಲ ಗುಹೆಯಲ್ಲಿನ ಶಿವ-ನಟರಾಜನ ಶಿಲ್ಪವು ದಕ್ಷಿಣ ಭಾರತದ ಮೊಟ್ಟ ಮೊದಲ ನಟರಾಜನ ಶಿಲ್ಪವಾಗಿದೆ.ಬಾದಾಮಿ ಚಾಲುಕ್ಯರ ಶೈವ ಸಂಸ್ಕೃತಿ ಕುರಿತು ಸಾಕಷ್ಟು ಅಧ್ಯಯನವಾಗಿದೆ.

ರಾಷ್ಟ್ರಕೂಟರ ಕಾಲದ ಶೈವ ಸಂಸ್ಕೃತಿ:

ಕ್ರಿ.ಶ.೮ನೇ ಶತಮಾನದಿಂದ ೧೦ನೇ ಶತಮಾನದ ಕೊನೆಯವರೆಗೆ (ಕ್ರಿ.ಶ.೭೩೭-೯೩) ಕರ್ನಾಟಕ ಮತ್ತು ಮಹಾರಾಷ್ಟ್ರದ ಕೆಲವು ಭಾಗ ಆಳಿದ ರಾಷ್ಟ್ರಕೂಟರು ಶೈವ ಸಂಸ್ಕೃತಿಯನ್ನು ಮುಂದುವರೆಸಿಕೊಂಡು ಹೋದರು ಚಾಲುಕ್ಯರಿಗಿಂತಲೂ ತುಸು ಬಿನ್ನವಾದ ಅಂದರೆ ಹೆಚ್ಚು ಅಲಂಕೃತವಾದ ಶಿಲ್ಪಗಳನ್ನು ನಿರ್ಮಿಸಿದರು. ಬಾದಾಮಿ ಚಾಲುಕ್ಯರಂತೆ ಗುಹಾಲಯಗಳನ್ನು ಮುಂದುವರೆಸಿದರು ಎಂಬುದಕ್ಕೆ ಕ್ರಿ.ಶ. ೮ನೇ ಶತಮನದ ದಂತಿದುರ್ಗನ ಎಲ್ಲೋರಾದ ದಶಾವತಾರ ಗುಹೆ ಆಧಾರವಾಗಿದೆ. ವಾಸ್ತವವಾಗಿ ಇದೊಂದು ಶಿವ ದೇವಾಲಯವಾಗಿದ್ದು ಮೂಲ ಸ್ಥಾವದಲ್ಲಿ ಶಿವಲಿಂಗವಿದ್ದು ಸುತ್ತಲು ಹಿಂದೂ ಪುರಾಣಗಳ ಶಿಲ್ಪಗಳು ಮೂಡಿಬಂದಿವೆ. ರಾಷ್ಟ್ರಕೂಟರ ಮತ್ತೊಂದು ಗುಹಾವಾಸ್ತುವೆಂದರೆ, ಎಲಿಫೆಂಟಾದ ಮಹಾದೇವ ದೇವಾಲಯ ಅಲ್ಲಿರುವ ಮೂರು ಮುಖಗಳ ಬೃಹತ್ ಶಿವನ ಶಿಲ್ಪ ಪ್ರಮುಖವಾಗಿದೆ. ಇತ್ತೀಚೆಗೆ ರಾಷ್ಟ್ರಕೂಟರ ಅನೇಕ ದೇವಾಲಯಗಳು ಸಂಶೋಧನೆಯಿಂದ ಗುರ್ತಿಸಲ್ಪಟ್ಟಿದ್ದು ಅವುಗಳಲ್ಲಿ ಅತಿ ಹೆಚ್ಚು ಶಿವನ ದೇವಾಲಯಗಳಾಗಿವೆ.[೯೭] ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಾಣವಾದ ದೇವಾಲಯಗಳಲ್ಲಿ ಗುರ್ತಿಸಿರುವ ಶಿಲ್ಪಗಳಲ್ಲಿ ಯೋಗಿಶಿವ, ರಾವಣಶಿಲ್ಪ, ತ್ರಿಪುರಾಂತಕ ಶಿವ, ಕಿರಾತಾರ್ಜುನೀಯ ಶಿಲ್ಪ, ಭೂವರಾಹ, ನರಸಿಂಹ, ಜ್ಯೋತಿರ್ಲಿಂಗ, ಗಬಾರಿಮೂರ್ತಿ, ಬ್ರಹ್ಮ, ವಿಷ್ಣು ಮುಂತಾದವು ಪ್ರಮುಖವಾಗಿವೆ ಮತ್ತು ರಾಷ್ಟ್ರಕೂಟರ ಕಾಲದಲ್ಲಿ ದ್ವಿಕೂಟ ಮತ್ತು ತ್ರಿಕೂಟ ದೇವಾಲಯಗಳೂ ಕೂಡಾ ನಿರ್ಮಾಣವಾದವು. ರಾಷ್ಟ್ರಕೂಟರ ಕೃಷ್ಣನನ್ನು ಶಾಸನಗಳು 'ಶೈವ ಸಿದ್ಧಾಂತ ಸಾರ್ವಭೌಮ' ಎಂದು ವರ್ಣಿಸಿವೆ.[೯೮] ಬಾದಾಮಿ ಚಾಲುಕ್ಯರಿಂದ ಪಡೆದ ಶೈವ ಸಂಸ್ಕೃತಿಯನ್ನು ರಾಷ್ಟ್ರಕೂಟರು ಮುಂದುವರೆಸಿ ಬೆಳೆಸಿದರು ಎಂಬುದು ಸ್ಪಷ್ಟವಾಗಿದೆ.

ಕಲ್ಯಾಣ ಚಾಲುಕ್ಯರ ಶೈವ ಸಂಸ್ಕೃತಿ :

ರಾಷ್ಟ್ರಕೂಟರ ನಂತರ ಅಧಿಕಾರಕ್ಕೆ ಬಂದ ಕಲ್ಯಾಣದ ಚಾಲುಕ್ಯರು ಶೈವ ಧರ್ಮಕ್ಕೆ ವಿಶೇಷವಾದ ಸ್ಥಾನ ಕಲ್ಪಿಸಿಕೊಟ್ಟರು. ಕರ್ನಾಟಕದಲ್ಲಿ ಅತಿ ಹೆಚ್ಚಿನ ಶಾಸನಗಳು ರಚನೆಯಾಗಿದ್ದು ಇವ ಕಾಲದಲ್ಲೇ. ಈ ಶಾಸನಗಳು ತಿಳಿಸುವಂತೆ ಕಲ್ಯಾಣ ಚಾಲುಕ್ಯರ ನಾಡಿನಲ್ಲಿ ಕಾಳಾಮುಖ, ಪಾಶುಪತ ಮತ್ತು ಕಾಪಾಲಿಕ ಶೈವ ಪಂಥಗಳು ಅಸ್ತಿತ್ವದಲ್ಲಿದ್ದು; ಅನೇಕ ಮಠಮಾನ್ಯಗಳನ್ನು ಮತ್ತು ದೇವಾಲಗಳನ್ನು ನಿಯಂತ್ರಿಸುತ್ತಿದ್ದವು ಎಂಬುದು ತಿಳಿದು ಬರುತ್ತದೆ.[೯೯]

ಇವರ ಕಾಲದ ಆರಂಬಿಕ ಧರ್ಮ ಮತ್ತು ಕಲೆ ರಾಷ್ಟ್ರಕೂಟರದ್ದೇ ಆದರೂ ಒಂದನೇ ಸೋಮೇಶ್ವರನ ಕಾಲದಿಂದ ವಾಸ್ತು ಮತ್ತು ಕಲೆಯಲ್ಲಿ ಹೊಸ ಆಯಾಮ ಪ್ರಾರಂಭವಾಯ್ತು. ಆ ತರಹದ ಎಲ್ಲ ಲಕ್ಷಣಗಳನ್ನು ಕುಕ್ಕನೂರಿನ ಕಲ್ಲೇಶ್ವರ, ರೋಣದ ರಾಚಿಗುಡಿ, ಬಾದಾಮಿಯ ಮಲ್ಲಿಕಾರ್ಜುನ ದೇವಾಲಯ ಎಂಬಲ್ಲಿ ಕಾಣಬಹುದಾಗಿದೆ. ರಾಷ್ಟ್ರಕೂಟರ ಕಾಲದಲ್ಲಿ ಜಾರಿಯಲ್ಲಿದ್ದ ಗುಹಾ ದೇವಾಲಯಗಳ ನಿರ್ಮಾಣ ಕೈಬಿಟ್ಟು ನಿರ್ಮಿತ ವಾಸ್ತು ಶೈಲಿಯನ್ನು ಆರಂಭಿಸಿದರು. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಏಕಕೂಟ ಮತ್ತು ತ್ರಿಕೂಟ ದೇವಾಲಯಗಳು ಅಪಾರ ಸಂಖ್ಯೆಯಲ್ಲಿ ನಿರ್ಮಾಣವಾದವು. ಕ್ರಿ.ಶ. ೯೮೦ರಲ್ಲಿ ನಿರ್ಮಾಣವಾದ ಧಾರವಾಡ ಜಿಲ್ಲೆಯ ಹರಳಹಳ್ಳಿಯ ಸ್ವಯಂಭೂ ಸೋಮನಾಥ ದೇವಾಲಯವು ನಂತರ ಕ್ರಿ.ಶ.೧೧೮೮ರಲ್ಲಿ ತ್ರಿಕೂಟ ದೇವಾಲಯವಾಗಿ ಪರಿವರ್ತಿತವಾಗಿರುವುದು ಅಧ್ಯಯನದಿಂದ ತಿಳಿದುಬರುತ್ತದೆ.[೧೦೦] ಇದು ಶೈವ ಪಂಥದ ಬೆಳವಣಿಗೆಯನ್ನು ತಿಳಿಸುತ್ತದೆ. ಅಂದರೆ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಮರುಕಳಿಸಿರುವುದು ಸ್ಪಷ್ಟವಾಗುತ್ತದೆ.

ಹೀಗೆ ಕಲ್ಯಾಣ ಚಾಲುಕ್ಯರ ಕಾಲವು ಶೈವ ಧರ್ಮ ಮತ್ತು ಶೈವ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಒಂದು ಪರ್ವಕಾಲವಾಗಿ ತೋರುತ್ತದೆ. ಶೈವ ಧರ್ಮವು ವಿವಿಧ ಪಂಥಗಳಾಗಿ ಕವಲೊಡೆದು ಕ್ರಿ.ಶ.೧೧೫೦ರ ವೇಳೆಯಲ್ಲಿ ಬಸವಣ್ಣನವರ ಪ್ರಭಾವದಿಂದ ಶೈವ ಧರ್ಮವು 'ವೀರಶೈವ' ಎಂಬ ಹೊಸ ಹೆಸರನ್ನು ಪಡೆದು ಮುಂದುವರೆಯಿತು ಎಂಬುದು ಅಧ್ಯಯನದಿಂದ ತಿಳಿದು ಬರುತ್ತದೆ.

ಕಳಚೂರಿಗಳ ಕಾಲದ ಶೈವ ಸಂಸ್ಕೃತಿ:

ಈ ಅವಧಿಯಲ್ಲಿ ಶೈವ, ಜೈನ ಮತಗಳು ಬಲಿಷ್ಠವಾದ ಭೂಮಿಕೆಯಲ್ಲಿದ್ದವು. ಅದರಲ್ಲಿ ಜೈನ ಧರ್ಮವು ಪದಸ್ಥಿತ ನಾಯಕ ಮತ್ತು ಅಧಿಕಾರಿ ವರ್ಗಗಳಲ್ಲಿ ಈ ಮತಕ್ಕೆ ಮನ್ನಣೆ ದೊರೆಯುತ್ತಿದ್ದಿತು. ಜನತೆಯಲ್ಲಿಯೂ ಅದು ತನ್ನ ವರ್ಚಸ್ಸನ್ನು ಬೀರಿದ್ದಿತು. ಈ ಅಂಶವು ಈ

ಕಾಲದ ಶಾಸನಗಳನ್ನು ಅವಲೋಕಿಸಿದರೆ ವೇದ್ಯವಾಗುತ್ತದೆ. ಆದರೆ ಇದೇ ಸಮಯದಲ್ಲಿ ಏಕಾಂತದ ರಾಮಯ್ಯನಂತಹ ಕೆಲ ಉತ್ಸಾಹಿ ಶಿವಭಕ್ತರು ಜೈನಮತದ ಮೇಲೆ ಏರಾಟವನ್ನು ಪ್ರಾರಂಭಿಸಿ ಅದರ ಪರಾಭವದ ತಳಹದಿಯನ್ನು ಹಾಕುತ್ತಿದ್ದ ಸನ್ನಿವೇಶವು ಅಬಲೂರು ಶಾಸನದಲ್ಲಿಯ ವಿಷಯಗಳಿಂದ[೧೦೧] ತಿಳಿಯಬಹುದಾಗಿದೆ. ಈ ಕಾಲಾವಧಿಯಲ್ಲಿ ಶೈವ ಮತದಲ್ಲಿ ಅನೇಕ ಪ್ರಭೇದಗಳು ಇದ್ದಂತೆ ಕಂಡು ಬರುತ್ತದೆ. ಒಂದು, ಕಾಶ್ಮೀರ ಶೈವ ಪಂಥ; ಕಾಶ್ಮೀರದಿಂದ ಬಂದು ಕರ್ನಾಟಕದಲ್ಲಿ ನೆಲಸಿದ ಅನೇಕ ಶೈವ ಆಚಾರ್ಯರ ಉಲ್ಲೇಖಗಳು ಶಾಸನಗಳಲ್ಲಿ ಸಿಕ್ಕುತ್ತವೆ. ಇನ್ನೊಂದು, ಲಕುಳೀಶನ ಲಾಕುಳ ಇಲ್ಲವೆ ಪಾಶುಪತ ಎಂಬ ಸಂಪ್ರದಾಯ. ಈ ಮತವು ಹೆಚ್ಚಿನ ಪ್ರಾಶಸ್ತ್ಯವನ್ನು ಪಡೆದಿದ್ದಿತು. ಈ ಮತದ ಅನೇಕ ಮಠಗಳು ಸ್ಥಾಪಿತವಾಗಿದ್ದು, ಈ ಪರಂಪರೆಯ ಯತಿಗಳು ಮನ್ನಣೆಗೆ ಪಾತ್ರರಾಗಿದ್ದರು. ಮತ್ತೊಂದು, ಶಂಕರಾಚಾರ್ಯರ ಅದ್ವೈತ ಶೈವಮಾರ್ಗ, ಮಗದೊಂದು, ಶಕ್ತಿದೇವತೆಗೆ ಪ್ರಾಮುಖ್ಯತೆಯನ್ನು ಸಲ್ಲಿಸುವ, ತಾಂತ್ರಿಕ ಎಂಬ ಹೆಸರಿನ, ಶಕ್ತಿ ಪ್ರಧಾನ ಶೈವ ಪಂಗಡ, ಈ ಪಂಗಡದ ವಿಚಾರದಲ್ಲಿ ಶಾಸನಾದಿ ಆಧಾರಗಳು ದೊರೆಯುತ್ತವೆ.[೧೦೨]

ಕೊನೆ ಟಿಪ್ಪಣಿಗಳು :

೧. ನರೋಡೆ ಅಶೋಕ ಮತ್ತು ವಿಜಯಕುಮಾರ ಕಟಗಿಹಳ್ಳಿಮಠ, 'ನಿರುಪಾಧಿ', ಮರೆಗುದ್ದಿಯ ಪೂಜ್ಯ ಶ್ರೀ ನಿರುಪಾಧೀಶ ಮಹಾಸ್ವಾಮಿಗಳ ಅಭಿನಂದನ ಸಮಿತಿ, ಮುಧೋಳ, ಬಾಗಲಕೋಟ, ೨೦೦೬, ಪು. ೩೨೧

೨. ತಿಪ್ಪೇರುದ್ರಸ್ವಾಮಿ, ಎಚ್., ವಚನಗಳಲ್ಲಿ ವೀರಶೈವ ಧರ್ಮ, ಡಿ.ವಿ.ಕೆ. ಮೂರ್ತಿ, ಮೈಸೂರು, ೧೯೮೨, ಪು.೫

೩. John Marshal : Mohenjodaro and Indus Civilization, Vol.I, p. 59

೪. ಅದೇ, Vol.I, p. 59

೫. ಅದೇ, Vol.I, p. 59

೬. ಋಗ್ವೇದ I-114; II-33.4, vii-46.3

೭. Bhandarkar, R.G., Vaisnavism, Saivism and Minor Religious Systems, Asian Educational Services, New Delhi, 1983, p. 146

೮. ಅದೇ, p. 146

೯. ಅದೇ, p. 146

೧೦. ಅದೇ, p. 146

೧೧. ಅದೇ, p. 146

೧೨. ಅದೇ, p. 25

೧೩. ಅದೇ, p. 25

೧೪. ಶಿರೂರ, ಬಿ.ವ್ಹಿ., ಕರ್ನಾಟಕದ ಪ್ರಾಚೀನ ಶೈವ ಶಾಖೆಗಳು, ಪು. ೫

೧೫. ಅದೇ, ಪು. ೬.

೧೬. Catalogue of Indian Coins, British Museum, Class 1, Group 3, Plate XII, p. 75, Plate 2 etc

೧೭. Lahore Museum Catalogue of Coins (Whitchead), Plate XXII, Nos. 31;33 Calcutta Museum Catalogue of Coins (Smith); p. 68, Nos. I, 12

೧೮. ಅದೇ, p. 74, Nos.64, 77

೧೯. ಬಡಿಗೇರ, ಪಿ.ಬಿ., ೧೯೯೧, ಗಾಥಾಸಪ್ತಸತಿ, ಅಭಿನಂದನ ಪ್ರಕಾಶನ, ಮೈಸೂರು

೨೦. ಆರ್.ಸಿ. ಹಿರೇಮಠ ಅವರು ತಮ್ಮ 'ಮಹಾಯಾತ್ರೆ' ಪು. ೮೩-೮೭

೨೧. ವಿವೇಕ ಚಿಂತಾಮಣಿ ಪ್ರ.-೨ ಪು. ೩೯

೨೨. ಲೊರೆಂಜಸ್ ಪು. ೧೬

೨೩. ಡಾ. ಫ.ಗು. ಹಳಕಟ್ಟಿಯವರು ತಮ್ಮ ಶಿವಾನುಭವ ಶಬ್ದಕೋಶದಲ್ಲಿ ಅದರ ವಿವರಗಳನ್ನು ನೀಡಿದ್ದಾರೆ. ಪು. ೨೦೭-೨೦೮

೨೪. ಸ.ವ.ಸಂ.೧, ಪು. ೧೭೭, ವ. ೫೯೫

೨೫. ಅದೇ. ಪು. ೪೦೩, ವ. ೧೨೦೭

೨೬. ಅದೇ, ಪು. ೩೮೬, ವ. ೧೧೨೨

೨೭. ಅದೇ, ಪು. ೧೮೧, ವಚನ. ೫೯೭

೨೮. ಹಿರೇಮಠ ಆರ್.ಸಿ. ಮತ್ತು ಸುಂಕಾಪುರ ಎಂ.ಎಸ್. (ಸಂ.) ಅಲ್ಲಮಪ್ರಭುದೇವರ ವಚನಗಳು, ೧೯೭೬, ವಚನ ೧೦೨೮

೨೯. K.I. Vol. I, No. p.

೩೦. ಕಲಬುರ್ಗಿ ಎಂ.ಎಂ., ಮಾರ್ಗ, ಸಂಪುಟ-೩, ಪು. ೩೭೦.

೩೧. ಅದೇ, ಪು. ೩೭೧.

೩೨. ಡೇವಿಡ್ ಎಸ್. ಲೋರೆಂಜಸ್, ದ ಕಾಪಾಲಿಕಾಸ್ ಆ್ಯಂಡ್ ಕಾಳಾಮುಖಾಸ್, ಪು. ೧೮೪.

೩೩. ಡೇವಿಡ್ ಎಸ್. ಲೋರೆಂಜಸ್, ದ ಕಾಪಾಲಿಕಾಸ್ ಆ್ಯಂಡ್ ಕಾಳಾಮುಖಾಸ್

೩೪. Karmarkar, A.P., The Religions of India, p. 232

೩೫. ಪತ್ತಾರ ಶೀಲಾಕಾಂತ, ಬಾದಾಮಿ : ಸಾಂಸ್ಕೃತಿಕ ಅಧ್ಯಯನ, ಪು. ೧೫೬

೩೬. ಪತ್ತಾರ ಶೀಲಾಕಾಂತ, ಬಾದಾಮಿ : ಸಾಂಸ್ಕೃತಿಕ ಅಧ್ಯಯನ, ಪು. ೧೫೬

೩೭. ಕ.ಚ. ೧, ಪು. ೪೯೪

೩೮. Hanuhak, K.K, Yashastilaka and Indian Culture, p. 510

೩೯. (EC VII, SK. 99, 1113)

೪೦. (SII, XVIII, No. 296, p. 385)

೪೧. ವಸುಂಧರಾ ಫಿಲಿಯೋಜಾ (ಅನು) ಗೋಗಿ ಹನುಮಾಕ್ಷಿ, ಧಾರವಾಡ ಜಿಲ್ಲೆಯ ಕಾಳಾಮುಖ ಮತ್ತು ಪಾಶುಪತ ದೇವಾಲಯಗಳು, ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೭, ಪು. ೭

೪೨. ಚಿದಾನಂದಮೂರ್ತಿ, ಎಂ.ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು. ೧೪೨

೪೩. ನರೋಡೆ ಅಶೋಕ ಮತ್ತು ವಿಜಯಕುಮಾರ ಕಟಗಿಹಳ್ಳಿಮಠ, 'ನಿರುಪಾಧಿ', ಮರೆಗುದ್ದಿಯ ಪೂಜ್ಯ ಶ್ರೀ ನಿರುಪಾಧೀಶ ಮಹಾಸ್ವಾಮಿಗಳ ಅಭಿನಂದನ ಸಮಿತಿ, ಮುಧೋಳ, ಬಾಗಲಕೋಟ, ೨೦೦೬, ಪು. ೩೭೦-೭೧

೪೪. ಶೆಟ್ಟರ ಷ., ಭಾರತೀಯ ಹಿನ್ನೆಲೆಯಲ್ಲಿ ಕರ್ನಾಟಕದ ಧಾರ್ಮಿಕ ಸಾಮಾಜಿಕ ಜೀವನ, (ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಸಂ.೩, ಬೆಂಗಳೂರು ವಿಶ್ವವಿದ್ಯಾಲಯ, ಪು. ೩೦.

೪೫. ವಸುಂಧರಾ ಫಿಲಿಯೋಜಾ (ಅನು) ಗೋಗಿ ಹನುಮಾಕ್ಷಿ, ಪೂರ್ವೋಕ್ತ, ಪು. ೩೨

೪೬. ವಸುಂಧರಾ ಫಿಲಿಯೋಜಾ (ಅನು) ಗೋಗಿ ಹನುಮಾಕ್ಷಿ, ಪೂರ್ವೋಕ್ತ, ಪು. ೩೩

೪೭. ವಿದ್ಯಾಶಂಕರ ಎಸ್., ವೀರಶೈವ ಸಾಹಿತ್ಯ ಚರಿತ್ರೆ, ಸಂಪುಟ. ೧, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ಪು. ೭೫-೭೬

೪೮. ಅದೇ, ಪು. ೮೩-೮೪

೪೯. ಅದೇ, ಪು. ೮೪

೫೦. Childe V.G what happened in History? Preface,p.8

೫೧. Bhattacharya B.,Saivism and the Phallic World,Vol.2,p.559

೫೨. Marshall J., Mohenjo-daro and Indian civilization, 1931, Vol.I, Introduction

೫೩. ಅದೇ, p-40

೫೪. Stella Kramarisch,The Presence of Siva,New Delhi,1981,p.14

೫೫. Hiltebeitel A., The Indian Valley Proto-Siva-re-examined through reflection on the

೫೬. Hiltebeitel A., ಪೂರ್ವೋಕ್ತ ಕೃತಿ.

೫೭. Hiltebeitel A., ಪೂರ್ವೋಕ್ತ ಕೃತಿ.

೫೮. Nilkanta sSastri K.A. and Shrinivaschari,advanced History of India, p.31.

೫೯. ವೆಂಕಟಾಚಲ ಶಾಸ್ತ್ರಿ ಟಿ.ವಿ., ಶಿವಾರ್ಪಣಂ, ಪೀಠಿಕೆ.

೬೦. Bhandarkar R.G., ಪೂರ್ವೋಕ್ತ ಕೃತಿ,p.೨೨೯

೬೧. Bhandarkar R.G., ಪೂರ್ವೋಕ್ತ ಕೃತಿ,p.೨೨೯

೬೨. ಶ್ವೇತಾಶ್ವತರ ಉಪನಿಷತ್ತು.೧.೪;೧೧೧,೨೦

೬೩. ಏಕೈಕಮೂರ್ತಿ: ಬಿಬಿಧೇ ತ್ರಿಧಾ ಸಾ ಸಾಮಾನ್ಯಮೇತಾಂ ಪ್ರಥಮಾವರತ್ವಂ–ಕಾಳಿದಾಸ,ಕುಮಾರ ಸಂಭಮ,ಶ್ಲೋಕ.

೬೪. ಉಪನಿಷತ್ತಿನ ಪರಬ್ರಹ್ಮನ ಹೆಸರುಗಳು ಶಿವ ಮತ್ತು ವಿಷ್ಣುಸಹಸ್ರನಾಮಗಳಲ್ಲಿ ಕಂಡುಬರುತ್ತವೆ.

೬೫. ಶಿವಧನುಸ್ಸನ್ನು ಮುರಿದ ಪ್ರಸಂಗ,ವಾಲ್ಮೀಕಿ ರಾಮಾಯಣ,ಬಾಲಕಾಂಡ.

೬೬. Ramayana 7:31:42,Kumarpurana,xxl:48.

೬೭. ಭಿಷ್ಮಪರ್ವ,ಅದ್ಯಾಯ,೮೦:೮೧.

೬೮. Mahabharatha VII:31:42 and Kurmapurana,XXI:48

೬೯. Bhattacharya,p 755

೭೦. Bhattacharya,p 563

೭೧. Raj Bali Pandey,Indian Paleography (Second Edition),1957,p.35.

೭೨. Sarma I.K., Development of Earlyy Shaiva Art & Architecture, p.169, Ref.DHI., New Delhi,1982,p.152

೭೩. Supplementary catalogue of Coins of Indian Museum,New Delhi,p.40

೭೪. Epi.Ind.,XX,p.1-9

೭೫. Gopinatha Rao T.A., Vo.I, Part-1,Delhi,1993,p.25

೭೬. Ramachandra Rao S.K., Vol.II,New Delhi,1990,p.21

೭೭. ಮಲ್ಲೇದೇವರು ಹೆಚ್.ಪಿ., ವಾತುಲಶುದ್ಧಾಗಮ, ಮುನ್ನುಡಿ.

೭೮. Nilakanta Sastri K.A., History of South India, 8th Edition, Madras, 1988, p.73

೭೯. Nilakanta Sastri K.A., History of South India, 8th Edition, Madras, 1988, p.73

೮೦. Nilakanta Sastri K.A., History of South India, 8th Edition, Madras, 1988, p.73

೮೧. ಪುರಾನೂರು–ಪ್ರಾರ್ಥನಾ ಪದ್ಯ,೬೦,ಕುರುವಿ,ತೊಗೈ,೩೦೭

೮೨. Subramanyam K.R., The Origin of Saivism,p.27

೮೩. ರಾಮಚಂದ್ರ ರಾವ್ ಎಸ್.ಕೆ., ಮೂರ್ತಿಶಿಲ್ಪ– ನೆಲೆ ಹಿನ್ನಲೆ, ಬೆಂಗಳೂರು,೧೯೭೫,ಪು.೨೯.

೮೪. Nilakanta Sastri K.A., ಪೂರ್ವೋಕ್ತ ಕೃತಿ, p.೯೯.

೮೫. Nilakanta Sastri K.A., ಪೂರ್ವೋಕ್ತ ಕೃತಿ, p.೪೨೨.

೮೬. S.R.Balasubramanyam, Early Chola Temples, Madras 1971, p.XV,Introduction.

೮೭. Nilakanta Sastri K.A., ಪೂರ್ವೋಕ್ತ ಕೃತಿ, p.೬೪೧.

೮೮. Percy Brown,Indian Architecture,p.120.

೮೯. Gai G.S., Inscription of the early kadambas,NewDelhi,p.159.

೯೦. Gai G.S., Inscription of the early kadambas,NewDelhi,p.159.

೯೧. Gai G.S., Inscription of the early kadambas,NewDelhi,p.159.

೯೨. Rice B.L., Epigraphia carnatica,Vol.Vii,p.p.200

೯೩. Epi. Ind.vol.VIII.

೯೪. Gai G.S., p.131.

೯೫. Sarma I.K.,The Temples of Gangas of Karnataka,Delhi,p.26

೯೬. Ramesh K.V., chalukyas of vatapi, Delhi,1984,p.12.

೯೭. ಸಿಂದಗಿ ರಾಜಶೇಖರ, 'ಕಲೆ ಮತ್ತು ವಾಸ್ತುಶಿಲ್ಪ', ಕರ್ನಾಟಕ ಚರಿತ್ರೆ,ಸಂ.೨,(ಸಂ) ಷೇಕ್ ಅಲಿ ಪ್ರೊ,೧೯೯೭,ಪು.೨೫೦,ಹಂಪಿ.

೯೮. Ramachandra Rao S.K ಪೂರ್ವೋಕ್ತ ಕೃತಿ,ಪು.೨೩

೯೯. Ramachandra Rao S.K., ಪೂರ್ವೋಕ್ತ ಕೃತಿ p.೨೪

೧೦೦. SII.,Vol.VIII,Harahalli (Haralahalli).

೧೦೧. Epi. Ind, Vol, V, pp. 237

೧೦೨. ದೇಸಾಯಿ ಪಾಂಡುರಂಗರಾಯರು, ೧೯೮೩, ಕರ್ನಾಟಕದ ಕಲಚುರಿಗಳು, ಪು. ೧೦೭

ಅಧ್ಯಾಯ ನಾಲ್ಕು

ವಿಜಯಪುರ ಜಿಲ್ಲೆಯಲ್ಲಿ ಶೈವಮತ

ಕನ್ನಡ ನಾಡಿನ ಇತಿಹಾಸದೊಂದಿಗೆ ಚತುಸ್ಸಮಯಗಳಾದ ಬೌದ್ಧ, ಜೈನ, ವೈಷ್ಣವ ಹಾಗೂ ಶೈವ ಧರ್ಮಗಳು ಕಾಣಿಸಿಕೊಳ್ಳುತ್ತವೆ. ಈ ಚತುಸ್ಸಮಯಗಳಲ್ಲಿ ಕಷ್ಟವಾದರೂ ತೀರ ಪ್ರಾಚೀನ ಕಾಲಕದಲ್ಲಿಯೇ ಕರ್ನಾಟಕ ವೈದಿಕ ಸಂಸ್ಕೃತಿಯು ಗಾಢ ಪ್ರಭಾವಕ್ಕೆ ಒಳಗಾಗಿತ್ತು. ಆದರೆ ವೈದಿಕ ಸಂಸ್ಕೃತಿಯ ಚಾತುರ್ವರ್ಣ ಪದ್ಧತಿಯಿಂದ ಕ್ರಮೇಣ ಜಾತಿಗಳಾಗಿ ಶೋಷಣೆ ಹೆಚ್ಚಿದಂತೆ ಬೌದ್ಧ, ಜೈನಧರ್ಮಗಳು ಜನ್ಮತಾಳಿ ತಮ್ಮ ಕ್ರಿಯಾಶೀಲತೆಯನ್ನು ಹೆಚ್ಚಿಸಿಕೊಂಡವು. ಕಾಲ ಗತಿಸಿದಂತೆ ಸ್ಥಳೀಯ ಮತ ಪ್ರಭೇದಗಳು ಇವುಗಳೊಂದಿಗೆ ಕೂಡಿದವು. ಕೊನೆಗೊಮ್ಮೆ ಇವುಗಳಿಂದ ಬೇಸತ್ತ ಜನತೆಗೆ ಹನ್ನೆರಡನೆಯ ಶತಮಾನದ ಶಿವಶರಣರು ಹೊಸ ಸಿದ್ಧಾಂತವನ್ನು ಮುಂದಿಟ್ಟರು. ಅದೇ ವೀರಶೈವ ಸಿದ್ಧಾಂತ. ಈ ಎಲ್ಲ ಛಾಯೆಯನ್ನು ಕರ್ನಾಟಕದ ಧಾರ್ಮಿಕ ಇತಿಹಾಸದಲ್ಲಿ ಗುರುತಿಸುವಾಗ ಅದನ್ನು ಪ್ರಾಚೀನ ಮತ್ತು ಮಧ್ಯಕಾಲೀನ ವಿಜಯಪುರ ಜಿಲ್ಲೆಗೂ ಅನ್ವಯಿಸಬಹುದು. ಆದರೆ ವಿಜಯಪುರದ ಆದಿಲ್‌ಷಾಹಿಗಳ ಆಡಳಿತಕ್ಕೆ ಒಳಪಟ್ಟಾಗಲೂ ಸಹ ಈ ಜಿಲ್ಲೆಯ ಧಾರ್ಮಿಕ ವ್ಯವಸ್ಥೆಯಲ್ಲಿ ಅಂತಹ ಕ್ರಾಂತಿಕಾರಕ ಬದಲಾವಣೆಗಳೇನು ಉಂಟಾಗಲಿಲ್ಲ. ಮುಂದೆ ಆಧುನಿಕ ಕಾಲಕ್ಕೆ ಬಂದರೆ ಇತರ ಜಿಲ್ಲೆಗಳಂತೆ ಈ ಜಿಲ್ಲೆಯೂ ಸಹ ಹಿಂದೂ, ಮುಸ್ಲಿಂ, ಜೈನ, ಕ್ರೈಸ್ತ, ಧರ್ಮಗಳು ಇಲ್ಲಿ ಪ್ರಮುಖವಾಗಿ ಕಂಡುಬಂದಿರುವುದನ್ನು ಗಮನಿಸಬಹುದಾಗಿದೆ.

ಪ್ರಸ್ತುತ ಅಧ್ಯಾಯದಲ್ಲಿ ವಿಜಯಪುರ ಜಿಲ್ಲೆಯ ಶೈವ ಧರ್ಮದ ವಿಜಯವನ್ನು ಕುರಿತಾಗಿದ್ದು. ಹಾಗಾಗಿ ಈ ಅಧ್ಯಾಯದಲ್ಲಿ ಶೈವ ಧರ್ಮವನ್ನು ಕುರಿತಾಗಿ ವಿಶ್ಲೇಷಿಸಲಾಗಿದೆ. ಪ್ರಾಚೀನ ಧರ್ಮಗಳಲ್ಲಿ ಒಂದಾದ ಶೈವ ಧರ್ಮವು ದಕ್ಷಿಣ ಭಾರತದಲ್ಲೂ ಇತಿಹಾಸ ಪೂರ್ವ ಕಾಲದಿಂದಲೂ ಬೆಳೆದು ಬಂದಿದ್ದು ಈ ಧರ್ಮದಲ್ಲಿ ಅನೇಕ ಪ್ರಭೇದಗಳಿರುವುದನ್ನು ಪ್ರಾಚೀನ ದರ್ಶನ ಶಾಸ್ತ್ರಕಾರರು ಗುರುತಿಸಿದ್ದಾರೆ. ಕರ್ನಾಟಕ ಶೈವ ಇತಿಹಾಸದಲ್ಲಿ ಕಾಪಾಲಿಕರ ಸಂಖ್ಯೆ ಇಲ್ಲವೆನ್ನುವಷ್ಟು ಕಡಿಮೆ, ಪಾಶುಪತ ಕಾಳಾಮುಖರು ಸಾಕಷ್ಟು ಪ್ರಮುಖ ಹಾಗೂ ವೀರಶೈವರು ಅತ್ಯಂತ ಪ್ರಭಾವೀ ಪಾತ್ರ ವಹಿಸಿರುವುದು ಸ್ಪಷ್ಟವಾಗುತ್ತದೆ. ಜಿಲ್ಲೆಯ ಶಾಸನಗಳು, ದೇವಾಲಯಗಳು ಹೀಗೆ ಸಾಂಸ್ಕೃತಿಕ ಅಂಶಗಳನ್ನು ಗುರುತಿಸ ಹೋದರೆ ವಿಜಯಪುರ ಜಿಲ್ಲೆಯಲ್ಲಿ ದೊರೆಯುವ ಉದಾಹರಣೆಗಳು ಅಪಾರ. ಅಸಂಖ್ಯಾತ ದೇವಾಲಯಗಳು, ಶಾಸನಗಳು ಈ ಜಿಲ್ಲೆಯಾದ್ಯಂತ

ಕಂಡುಬರುತ್ತವೆ. ಶಾಸನಗಳನ್ನೇ ಗಮನಿಸಿದಾಗ ಇದುವರೆಗೆ ಜಿಲ್ಲೆಯಲ್ಲಿ ಪ್ರಕಟವಾದ ಶಾಸನಗಳ ಸಂಖ್ಯೆ ಸುಮಾರು ೪೧೯. ಪ್ರಸ್ತುತ ಅಧ್ಯಯನವನ್ನು ವಿಜಯಪುರ ಜಿಲ್ಲೆಯ ಶಾಸನಗಳನ್ನು ಸೀಮಿತವಾಗಿಸಿರಿಕೊಂಡು ನೋಡಲಾಗಿದೆ. ಮೇಲಿನ ೪೧೯ ಶಾಸನಗಳಲ್ಲಿ ಸುಮಾರು ೧೫೯ಶಾಸನಗಳು ಶೈವ ಧರ್ಮಕ್ಕೆ ಸಂಬಂಧಪಟ್ಟ ಶಾಸನಗಳಾಗಿವೆ. ಈ ಮೇಲಿನ ಅಂಶಗಳನ್ನು ನೋಡಿದಾಗ ಸಿಗುವ ಒಂದು ನೋಟವು ಈ ಕೆಳಗಿನಂತಿದೆ.

ತಾಲೂಕಾವಾರು ಶೈವ ಶಾಸನಗಳು

ತಾಲೂಕು	ಒಟ್ಟು ಶಾಸನಗಳು	ಶೈವ ಶಾಸನಗಳು
ವಿಜಯಪುರ	೮೬	೨೬
ಇಚಿಡಿ	೭೯	೩೮
ಸಿಂದಗಿ	೧೦೮	೩೮
ಮುದ್ದೇಬಿಹಾಳ	೭೧	೨೭
ಬಾಗೇವಾಡಿ	೭೫	೩೦
ಒಟ್ಟು ಶಾಸನಗಳು	೪೧೯	೧೫೯

ಈ ಮೇಲಿನ ಅಂಶಗಳನ್ನು ಗಮನಿಸಿದಾಗ ಇಂಡಿ ಮತ್ತು ಸಿಂದಗಿ ಪ್ರದೇಶಗಳು ಶೈವ ಧರ್ಮದ ಪ್ರಮುಖ ಕೇಂದ್ರಗಳಾಗಿ ಕಂಡುಬರುತ್ತವೆ. ಈ ಎರಡೂ ಪ್ರದೇಶಗಳಲ್ಲಿ ದೊರೆತಿರುವ ೩೮ ರಷ್ಟು ಶಾಸನಗಳು ಇದನ್ನು ಧೃಡಪಡಿಸುತ್ತವೆ. ಇನ್ನುಳಿದಂತೆ ವಿಜಯಪುರದಲ್ಲಿ ೨೬ ಮುದ್ದೇಬಿಹಾಳದಲ್ಲಿ ೨೭ ಬಾಗೇವಾಡಿಯಲ್ಲಿ ೩೦ ಶಾಸನಗಳು ಶೈವ ಧರ್ಮವನ್ನು ಉಲ್ಲೇಖಿಸುತ್ತವೆ.

ಇನ್ನು ವಿಜಯಪುರ ಜಿಲ್ಲೆಯಲ್ಲಿ ದೊರೆತಿರುವ ಶೈವ ಶಾಸನಗಳು ಬೇರೆ ಬೇರೆ ಕಾಲಘಟ್ಟದ ಬೇರೆ ಬೇರೆ ರಾಜ ಮನೆತನಗಳಿಗೆ ಸೇರಿವೆ. ಅವುಗಳ ಪಟ್ಟಿ ಈ ಕೆಳಗಿನಂತಿದೆ.

ಸಾಮ್ರಾಜ್ಯವಾರು ಶೈವ ಶಾಸನಗಳು

ಸಾಮ್ರಾಜ್ಯಗಳು	ಒಟ್ಟು ಶಾಸನಗಳು	ಶೈವ ಶಾಸನಗಳು
ರಾಷ್ಟ್ರಕೂಟ	೭	೦೨

ಕಲ್ಯಾಣ ಚಾಲುಕ್ಯ	೧೨೫	೬೬
ಕಳಚೂರಿ	೪೬	೩೨
ಯಾದವ	೬೨	೪೦
ಇತರೆ	೧೭೯	೧೯

ಮೇಲಿನ ಶಾಸನಗಳ ಯಾದಿಯನ್ನು ಗಮನಿಸಿದಾಗ ರಾಷ್ಟ್ರಕೂಟರ ಕಾಲಕ್ಕೆ ವಿಜಯಪುರ ಜಿಲ್ಲೆಯಲ್ಲಿ ಶೈವ ಧರ್ಮವು ಅತೀ ಕನಿಷ್ಠ ಮಟ್ಟದಲ್ಲಿ ಇದ್ದುದನ್ನು ಕಾಣಬಹುದು. ಕೇವಲ ಎರಡು ಶಾಸನಗಳು ಮಾತ್ರ ಇವರ ಕಾಲದಲ್ಲಿ ಶೈವಧರ್ಮವನ್ನು ಕುರಿತು ಉಲ್ಲೇಖಿಸುತ್ತವೆ. ಆದರೆ ಕಲ್ಯಾಣ ಚಾಳುಕ್ಯರ ಕಾಲಕ್ಕೆ ಶೈವ ಧರ್ಮ ಉತ್ಕರ್ಷವನ್ನು ಪಡೆದಿರುವುದನ್ನು ಗುರುತಿಸಬಹುದು. ಸುಮಾರು ೬೬ ಶಾಸನಗಳು ಶೈವಧರ್ಮವನ್ನು ಉಲ್ಲೇಖಿಸುತ್ತವೆ. ಇವರ ಶಾಸನಗಳೇ ವಿಜಯಪುರ ಜಿಲ್ಲೆಯಲ್ಲಿ ಅಧಿಕತಮ ಸಂಖ್ಯೆಯಲ್ಲಿ ಕಂಡು ಬರುವುದರಿಂದ ಈ ಪ್ರದೇಶದಲ್ಲಿ ಕಲ್ಯಾಣ ಚಾಳುಕ್ಯರೇ ಶೈವಧರ್ಮವನ್ನು ಪ್ರೋತ್ಸಾಹಿಸಿದ್ದರು ಎಂದು ಊಹಿಸಬಹುದು. ಇನ್ನು ಕಳಚೂರಿಗಳ ಕಾಲಕ್ಕೆ ಸೇರಿದ ೩೨ ಮತ್ತು ಯಾದವರ ಕಾಲಕ್ಕೆ ೪೦ ಶಾಸನಗಳು ಶೈವಧರ್ಮವನ್ನು ಉಲ್ಲೇಖಿಸಿವೆ.

ವಿಜಯಪುರ ಜಿಲ್ಲೆಯಲ್ಲಿಯ ಶಾಸನಗಳಲ್ಲಿ ಶೈವ ಪಂಥಗಳು:

ಕರ್ನಾಟಕ ಪ್ರದೇಶದ ಶಾಸನಗಳನ್ನು ಗಮನಿಸಿದಾಗ ಶೈವ ಧರ್ಮಕ್ಕೆ ಸಂಬಂಧಿಸಿದಂತೆ ಹಲವಾರು ಪಂಥಗಳು ಇರುವುದನ್ನು ಗುರುತಿಸಬಹುದು. ಕಾಳಾಮುಖ, ಪಾಶುಪತ, ಕಾಪಾಲಿಕ, ಕೌಳ, ಶೈವ, ಶುದ್ಧಶೈವ, ವೀರಶೈವ ಹೀಗೆ ಹಲವಾರು ಪಂಥಗಳನ್ನು ಶೈವ ಶಾಖೆಗಳಾಗಿ ಕಾಣುತ್ತೇವೆ. ಆದರೆ ಶಾಸನಗಳನ್ನು ಅವಲೋಕಿಸಿದಾಗ ಕರ್ನಾಟಕದಲ್ಲಿ ನಮಗೆ ಕಾಳಾಮುಖ, ಪಾಶುಪತ ಮತ್ತು ಕಾಪಾಲಿಕ ಪಂಥಗಳು ಮಾತ್ರ ಕಂಡುಬರುತ್ತವೆ. ವಿಜಯಪುರ ಜಿಲ್ಲೆಗೆ ಸೀಮಿತಗೊಳಿಸಿ ನೋಡಿದಾಗ ಕಾಳಾಮುಖ ಮತ್ತು ಪಾಶುಪತ ಪಂಥಗಳು ಮಾತ್ರ ಕಾಣಸಿಗುತ್ತವೆ.

ಕಾಳಾಮುಖ:

ಈಗಾಗಲೇ ಶೈವ ಧರ್ಮದ ಉಗಮ ಮತ್ತು ವಿಕಾಸ ಎಂಬ ಅಧ್ಯಾಯದಲ್ಲಿ ಶೈವ ಧರ್ಮದ ವಿವಿಧ ಪಂಥಗಳು ಯಾವವು ಅವುಗಳ ಉಗಮ ಹೇಗಾಯಿತು ಅವುಗಳ ಅರ್ಥ ಏನು ಎಂಬುದನ್ನು ಈಗಾಗಲೇ ನೋಡಿದ್ದೇವೆ. ಈ ಅಧ್ಯಾಯದಲ್ಲಿ ಶಾಸನಗಳನ್ನು ಆಧರಿಸಿ ಪಂಥಗಳು ಹೇಗಿದ್ದವು ಎಂಬುದನ್ನು ಮಾತ್ರ ವಿವೇಚಿಸಲಾಗಿದೆ.

ಶೈವಮತದ ಪ್ರಮುಖ ಶಾಖೆಯಾದ ಕಾಳಾಮುಖ ಪಂಥವು ಬಾದಾಮಿ ಚಾಳುಕ್ಯರ ಕಾಲಕ್ಕಾಗಲೇ ಕರ್ನಾಟಕದಲ್ಲಿ ಕಾಣಿಸಿಕೊಳ್ಳುತ್ತದೆ. ವಿಜಯಪುರ ಜಿಲ್ಲೆಯಲ್ಲಿ ದೊರೆತಿರುವ ಕಾಳಾಮುಖ ಶಾಸನಗಳ ಸಂಖ್ಯೆ ಕಡಿಮೆ ಎಂದೇ ಹೇಳಬಹುದು. ಅಲ್ಲದೇ ನೇರವಾಗಿ 'ಕಾಳಾಮುಖ' ಎಂಬ ಉಲ್ಲೇಖವಿರುವ ಶಾಸನಗಳನ್ನು ಮಾತ್ರ ಇಲ್ಲಿ ಗಮನಿಸಲಾಗಿದೆ. ಒಟ್ಟಾರೆ ಕಾಳಾಮುಖ ಉಲ್ಲೇಖವಿರುವ ಸುಮಾರು ೦೫ ಶಾಸನಗಳಷ್ಟೇ ಈ ಜಿಲ್ಲೆಯಲ್ಲಿ ಕಂಡುಬರುತ್ತವೆ.

ಮೊದಲ ಕಾಳಾಮುಖ ಶಾಸನ ಕಂಡು ಬರುವುದು ವಿಜಯಪುರ ತಾಲೂಕಿನಲ್ಲಿ. ಕ್ರಿ.ಶ. ೧೦೭೪ರ ಬಿಜಾಪುರ[೧] ಶಾಸನದಲ್ಲಿ. ಎರಡನೆಯ ಸೋಮೇಶ್ವರನ ದಂಡನಾಯಕನಾಗಿದ್ದ ನಾಕಿಮಯ್ಯ ವಿಜಯಪುರದಲ್ಲಿ ಸ್ವಯಂಭು ಸಿದ್ದೇಶ್ವರ ದೇವಾಲಯವನ್ನು ನಿರ್ಮಿಸಿ ಕಾಳಾಮುಖ ಪರಂಪರೆಯ ಮುನಿಯಾದ ಯೋಗೀಶ್ವರ ಪಂಡಿತನ ಕಾಲನ್ನು ತೊಳೆದು ದಾನವನ್ನು ನೀಡಿರುವುದನ್ನು ಹೇಳಿದೆ. ಶಾಸನವು ಗುರು ಪರಂಪರೆಯನ್ನು ನೀಡಿದ್ದು ಅದು ಈ ಕೆಳಗಿನಂತಿದೆ

ಭುಜಂಗದೇವಾಚಾರ್ಯ

↓

ತ್ರೈಲೋಕ್ಯಚನದೇವ

↓

ಭೈರವ ಪಂಡಿತ

↓

ಯೋಗೀಶ್ವರದೇವ

ಶಾಸನವು ಎಲ್ಲ ಮುನಿಗಳನ್ನು ಸಾಕಷ್ಟು ಸ್ತುತಿಸಿರುವುದನ್ನು ಕಾಣಬಹುದು. ಈ ಪರಂಪರೆಯ ಮೊದಲ ಮುನಿಯಾದ ಭುಜಂಗದೇವಾಚಾರ್ಯನನ್ನು ಈ ಕೆಳಗಿನಂತೆ ವರ್ಣಿಸಲ್ಪಟ್ಟಿದೆ. ತಪಃ ಪ್ರಭಾವದಿಂದ ಸಾಕ್ಷಾತ್ ಪರಮೇಶ್ವರನೂ, ಕಾಳಾಮುಖ ಮುಖ ತಿಲಕನೂ, ಸ್ವಸಮಯ ಸಂಪಾದನೆಯ ಆನಂದಿತನೂ, ಸ್ತ್ರೀ ವಶೀಕರಣ ಮಂತ್ರಾತ್ಮನೂ, ದ್ವಾದಶ ಸ್ಥಾನಿಯ ವಿದ್ಯೆ ತಿಳಿದವನೂ, ಕಾಳಾಮುಖಾಗ್ರೇಸರ, ಗುಣೋಪೇತ, ಮುನಿಪುಂಗವನಾದವನೇ ಭುಜಂಗದೇವಾಚಾರ್ಯ. ಈತನ ಶಿಷ್ಯನಾದ ತ್ರಿಲೋಚನ ನಾಲ್ಕು ವೇದಗಳನ್ನು ಲಾಕುಳಾಪ್ತಾಗಮವನ್ನು ತಿಳಿದವನಾಗಿದ್ದನು. ಈತನ ಶಿಷ್ಯನಾದವನು ಭೈರವ ಪಂಡಿತದೇವ ಈತ ಸಾಂಖ್ಯ ಮಿಮಾಂಸ ತಿಳಿದವನೂ, ದ್ವಾದಿಸ್ಥಾನೋ ವಿಶೇಷನೂ ಆಗಿದ್ದನು. ಇವನ ಶಿಷ್ಯನಾದವನೇ

ಸಿದ್ದೇಶ್ವರ ದೇವಾಲಯದ ಸ್ಥಾನಾಚಾರ್ಯನಾದ ಯೋಗೀಶ್ವರ ಪಂಡಿತ. ಈತನು ಹಿಮಾದ್ರಿಯ ಮಧ್ಯದ ಗಂಗಾ ಪ್ರವಾಹದಂತೆ ಶುದ್ಧನಾದವನು ಸಮಸ್ತ ಲೋಕದಿಂದ ಊರ್ಜಿತನಾದವನು, ಕಾಳಾಮುಖ ಮುಖಕಮಲನು ಶಿಷ್ಟ ಜನರ ಅಭೀಷ್ಟೆಯನ್ನು ಈಡೇರಿಸುವವನು, ಚಿತ್ತ ಸಾಧಕನೂ ಆಗಿದ್ದನು.

ಎರಡನೆಯ ಉಲ್ಲೇಖವು ಕ್ರಿ.ಶ.೧೧೨೦ ರ ಬಿಜಾಪುರ[೨] ಶಾಸನದಲ್ಲಿ ಕಂಡು ಬರುತ್ತದೆ. ಮಹಾಮಂಡಳೇಶ್ವರನಾದ ಸಿಂಗರಸನ ಪ್ರಶಸ್ತಿಯನ್ನು ಹೇಳಬೇಕಿದ್ದಾಗ ಕಾಳಾಮುಖದ ಉಲ್ಲೇಖವು ಶಾಸನದಲ್ಲಿ ಕಂಡು ಬರುತ್ತದೆ. ಅದು ಹೀಗಿದೆ. 'ಚೋಳಕುಳ ವಿಳಯಕಾಳಂ ಕಾಳಾಮುಖ ಪ್ರಾಹೊತೋದ್ಧತಾಹಿ ತಮಾರಂ ಮಾಳವರಾಜಕ ಸೂಳಂ ಸೂಳೆಯುವಚರಣ ಕಮಳಭ್ರಿಘಂ ಸಿಂಗ' ಬಹುಶಃ ಸಿಂಗರಸನು ಕಾಳಾಮುಖ ಪಂಥದ ಬೆಂಬಲಿಗನಾಗಿದ್ದಂತೆ ತೋರುತ್ತದೆ.

ಮೂರನೆಯ ಉಲ್ಲೇಖವು ಬಾಗೇವಾಡಿ ತಾಲೂಕಿನ ಮನಗೂಳಿ[೩] ಶಾಸನದಲ್ಲಿ ಕಂಡು ಬರುತ್ತದೆ. ಕಾಳಾಮುಖರ ಒಂದು ಪಂಗಡವಾದ ಭುಜಂಗಾವಳಿ ಶಾಖೆಯ ಉಲ್ಲೇಖವನ್ನು ಈ ಶಾಸನವು ನೀಡುತ್ತದೆ. ಮಣಿಗವಳ್ಳಿಯ ಮಹಾಜನರ ಭಿನ್ನಹದಂತೆ ಚಾಲುಕ್ಯ ರಾಜನಾದ ಎರಡನೆಯ ಜಗದೇಕಮಲ್ಲ ಗ್ರಾಮದ ಸಿದ್ದಲಿಂಗಕಲಿದೇವರ ಸೇವೆಗೆ ಭೂಮಿಯನ್ನು ಭುಜಂಗಾವಳಿ ಕುಳತಿಲಕ ಮತ್ತು ಕಾಳಾಮುಖ ನೈಷ್ಠಿಕ ತಪೋನಿಷ್ಠನಾದ ಬಾಳಬ್ರಹ್ಮಚಾರಿ ಸದ್ಯೋಜಾತ ಪಂಡಿತನ ಕಾಲನ್ನು ತೊಳೆದು ದಾನ ನೀಡುತ್ತಾನೆ.

ನಾಲ್ಕನೆಯ ಶಾಸನವು ಅದೇ ಬಾಗೇವಾಡಿ ತಾಲೂಕಿನ ಸಾಲವಾಡಗಿ[೪] ಗ್ರಾಮದಲ್ಲಿ ಕಂಡು ಬರುತ್ತದೆ. ಶಾಸನವು ಕಾಳಾಮುಖ ಮುನಿಯಾದ ಮೂರುಜಾವಿ ಮುನಿಯನ್ನು ಉಲ್ಲೇಖಿಸಿದ್ದು ಈ ಮೂರುಜಾವಿ ಮುನಿಯು ಹೊರಯಮೇಶ್ವರ ದೇವಾಲಯವನ್ನು ನವೀಕರಿಸಿದ್ದಲ್ಲದೇ ಅದೇ ದೇವಾಲಯದಲ್ಲಿ ಸಿದ್ದೇಶ್ವರ ಮತ್ತು ಪಾಪವಿನಾಶಿ ದೇವರಿಗಾಗಿ ಗರ್ಭಗೃಹಗಳನ್ನು ನಿರ್ಮಿಸುತ್ತಾನೆ.

ಐದನೆಯ ಉಲ್ಲೇಖವನ್ನು ಸಿಂದಗಿ ತಾಲೂಕಿನ ಹಿಪ್ಪರಗಿ[೫] ಶಾಸನವು ನೀಡುತ್ತದೆ. ಶಾಸನವು ಭುಜಂಗಾವಳಿ ಶಾಖೆಯ ಮುನಿಯಾದ ರಾಜಗುರುದೇವನನ್ನು ಉಲ್ಲೇಖಿಸುತ್ತದೆ. ಈತ ಹಿಪ್ಪರಗೆಯ ಕಲಿದೇವರ ಸೇವೆಗೆಂದು ಹಲವು ದಾನಗಳನ್ನು ಸ್ವೀಕರಿಸಿದ್ದಾನೆ. ಅಲ್ಲದೇ ಶಾಸನವು ಮುನಿಯನ್ನು "ಪರಮಾನಂದ ಮುನೀಂದ್ರರುಂ ನೆನಿಸಲು ದೇವಾಂಶದಿಂ ಪೆಂಪಿನಿಂದ ಸ್ಥಿರಚಾರಿತ್ರ ತಪಪ್ರಭಾವದೊಳು ತಾಂ ಸೂರ್ಯ್ಯ ಪ್ರಭಾಲೋಕನೋತ್ಕರದಿಂದ ಭುಜಗಾವಳೀ ಕುಳದೊಳಂ ಶ್ರೀ ಸಾರದಾದೇವಿಯೋಳು ವರದಂ ರಾಜಗುರುರ್ಮ್ಮುನಿಶನೆಸೆದಂ ಲೋಕೈಕ ವಿಖ್ಯಾತಿಯಂ॥ ಆ ರಾಜಗುರು ಮುನೀಶರ ಚಾರುಚರಿತ್ರ ಬ್ರತಕೆ ಶೌಚರ ಪೆಂಪಧಾರಣಿ ಬಣ್ಣಿಸೆ ಸಕಳಾಧಾರಮೆನಿಪ್ಪುದು

ಮಹತ್ವಗುಣಗಂಭೀರಂ॥ ಅನ್ತಾ ಭುಜಂಗಾವಳೀ ಕುಳತಿಲಕರಪ್ಪ ರಾಜಗುರುದೇವರ ಪಾದಪ್ರಕ್ಷಾಳನಂ ಮಾಡಿ" ಎಂದು ವರ್ಣಿಸಿದೆ.

ಇನ್ನು ಸಿಂಘಣನ ಆಳ್ವಿಕೆಯ ಕಾಲಘಟ್ಟದ ಕ್ರಿ.ಶ. ೧೨೪೪ರ ಬಿಜಾಪುರ[೬] ಶಾಸನವು ರಾಜಗುರುವಾದ ವಾಮಶಕ್ತಿಯನ್ನು ಉಲ್ಲೇಖಿಸುತ್ತದೆ. ಶಾಸನವು ವಾಮಶಕ್ತಿಯನ್ನು 'ಮಹಾವ್ರತಿಯಾದ' ವಾಮಶಕ್ತಿ ಎಂದು ಉಲ್ಲೇಖಿಸುತ್ತದೆ. ಮಹಾವ್ರತಿ ಎಂಬ ಉಲ್ಲೇಖವು ಸಾಮಾನ್ಯವಾಗಿ ಕಾಪಾಲಿಕ ಮತ್ತು ಪಾಶುಪತ ಪಂಥವನ್ನು ಧ್ವನಿಸುತ್ತಾದರೂ ಈ ಮಹಾವ್ರತಿಯಾದ ವಾಮಶಕ್ತಿ ಕಾಳಾಮುಖನೇ ಆಗಿದ್ದನು ಎಂದು ಊಹಿಸಬಹುದು. ಏಕೆಂದರೆ ವಾಮಶಕ್ತಿ ಎಂಬ ಹೆಸರೇ ನಮಗೆ ಪರಂಪರೆಯೋಪಾದಿಯಲ್ಲಿ ಶಾಸನಗಳಲ್ಲಿ ಕಂಡು ಬರುತ್ತದೆ. ಅಲ್ಲದೇ ಬಹುತೇಕ ವಾಮಶಕ್ತಿ ಉಲ್ಲೇಖವಿರುವ ಶಾಸನಗಳು ಬಳ್ಳಿಗಾವೆಯ ಮೂವರ ಕೋಣೆಯ ಸಂತತಿಯ ವಾಮಶಕ್ತಿಯನ್ನೇ ಉಲ್ಲೇಖಿಸುತ್ತದೆ. ಅಲ್ಲದೇ ಪಾಶುಪತ ಮತ್ತು ಕಾಪಾಲಿಕ ಪರಂಪರೆಯಲ್ಲಿ ವಾಮಶಕ್ತಿ ಹೆಸರಿನ ಪ್ರಸ್ತಾಪವನ್ನು ಕಾಣುವದಿಲ್ಲ. ಇದರಿಂದ ಶಾಸನೋಲ್ಲೇಖಿತ ಮಹಾವ್ರತಿಯಾದ ವಾಮಶಕ್ತಿಯು ಕಾಳಾಮುಖನೇ ಆಗಿದ್ದಾನೆ ಎಂದು ಹೇಳಬಹುದಾಗಿದೆ.

ಕಾಳಾಮುಖ ಶಾಸನಗಳು:

ಅ.ಸಂ	ಗ್ರಾಮ	ತಾಲೂಕು	ಮುನಿ	ಕಾಲ	ರಾಜ	ಉಲ್ಲೇಖ
೦೧	ವಿಜಯಪುರ	ವಿಜಯಪುರ	ಭುಜಂಗದೇವಾಚಾರ್ಯ ತ್ರಿಲೋಚನದೇವ ಭೈರವಪಂಡಿತ ಯೋಗೀಶ್ವರ ಪಂಡಿತ	ಕ್ರಿ.ಶ.೧೦೭೪	ಎರಡನೆಯ ಸೋಮೇಶ್ವರ	ಕ.ವಿ.ವಿ.ಶಾ.ಸಂ–೧೦ ಸಂ–೦೭
೦೨	ವಿಜಯಪುರ	ವಿಜಯಪುರ	–	ಕ್ರಿ.ಶ.೧೧೨೦	ಆರನೆಯ ವಿಕ್ರಮಾದಿತ್ಯ	ಕ.ವಿ.ವಿ.ಶಾ.ಸಂ–೧೦ ಸಂ–೩೧
೦೩	ಮನಗೂಳಿ	ಬಾಗೇವಾಡಿ	ಸದ್ಯೋಜಾತ ಪಂಡಿತ	ಕ್ರಿ.ಶ.೧೧೪೨	ಎರಡನೆಯ ಜಗದೇಕಮಲ್ಲ	ಕ.ವಿ.ವಿ.ಶಾ.ಸಂ–೧೦ ಸಂ–೩೨
೦೪	ಸಾಲವಾಡಗಿ	ಬಾಗೇವಾಡಿ	ಮೂರುಜಾವಿ ಮುನಿ	ಹನ್ನೆರಡನೆಯ ಶತಮಾನ	.. ..	ಎಸ್.ಆಯ್.ಆಯ್–೨೦ ಸಂ–೪೬
೦೫	ಒಪ್ಪರಗಿ	ಸಿಂದಗಿ	ರಾಜಗುರುದೇವ	ಕ್ರಿ.ಶ.೧೧೯೨	ಭಿಲ್ಲಮ	ಕ.ವಿ.ವಿ.ಶಾ.ಸಂ–೧೦ ಸಂ–೭೧
೦೬	ವಿಜಯಪುರ	ವಿಜಯಪುರ	ವಾಮಶಕ್ತಿ ದೇವರು	ಕ್ರಿ.ಶ.೧೨೪೪	ಸಿಂಘಣ	ಕ.ವಿ.ವಿ.ಶಾ.ಸಂ–೧೦ ಸಂ–೦೯

ಮೇಲಿನ ಅಂಶಗಳನ್ನು ಗಮನಿಸಲಾಗಿ ಕಂಡುಬರುವ ವಿಷಯವೇನೆಂದರೆ ವಿಜಯಪುರ ಜಿಲ್ಲೆಯು ಕಾಳಾಮುಖರ ಭುಜಂಗಾವಳಿ ಶಾಖೆಗೆ ಸೇರಿದ ಮುನಿಗಳ ನೆಲೆಯಾಗಿತ್ತು ಎನ್ನುವುದು. ದೊರೆತ ೫ ಶಾಸನಗಳಲ್ಲಿ ೨ ಶಾಸನಗಳು ಭುಜಂಗಾವಳಿಯನ್ನು ಉಲ್ಲೇಖಿಸಿವೆ.

ಪಾಶುಪತ:

ಉತ್ತರ ಭಾರತದಲ್ಲಿ ಹುಟ್ಟಿಕೊಂಡ ಪಾಶುಪತ ಶಾಖೆಯ ಏಳನೇಯ ಶತಮಾನದಲ್ಲಿ ಕರ್ನಾಟಕದಲ್ಲಿ ಆಚರಣೆಯಲ್ಲಿದ್ದ ಬಗ್ಗೆ ಚಿಕ್ಕಮಗಳೂರು ಜಿಲ್ಲೆಯ ಕಿಗ್ಗ ಶಾಸನದಲ್ಲಿ ಇದರ ಮೊದಲ ಉಲ್ಲೇಖ ಕಂಡುಬರುತ್ತದೆ. ಶೃಂಗೇರಿ ಹತ್ತಿರದ ಕಿಗ್ಗ ಗ್ರಾಮದ ಋಷ್ಯಶೃಂಗೇಶ್ವರ ದೇವಾಲಯದಲ್ಲಿರುವ ಈ ಶಾಸನದಲ್ಲಿ ಪಾಶುಪಥ ಪಂಥದ ಉಲ್ಲೇಖ ಕಂಡುಬರುತ್ತದೆ.

ಪಾಶುಪತರು ಉತ್ತರೇಶ್ವರ ದೇವರ ಆರಾಧಕರಾಗಿದ್ದರು. ಈ ಪಂಥ ಬಾದಾಮಿ ಚಾಳುಕ್ಯರ ನಂತರ ವಿಜಯಪುರ ಮತ್ತು ಕಲಬುರಗಿ ಪರಿಸರದಲ್ಲಿ ಹೆಚ್ಚುಕಂಡುಬರುತ್ತದೆ. ಇದರ ಮೂಲನೆಲೆ ಸಿಂದಗಿ ಹತ್ತಿರದ ಆಲಮೇಲ ಗ್ರಾಮ ಹಿಂದೆ ಇದನ್ನು ಎಳಮೇಲ ಎಂದು ಕರೆಯುತ್ತಿದ್ದು ಗ್ರಾಮದ ಸುತ್ತ ಮುತ್ತಲಿನ ಶಾಸನಗಲ್ಲಿ ಉತ್ತರೇಶ್ವರ ದೇವಸ್ಥಾನ ವಿದ್ದ ಬಗ್ಗೆ ಮಾಹಿತಿ ಇದೆ. ಕ್ರಿ.ಶ. ೧೦೬೬ ಇಂಡಿ ತಾಲೂಕಿನ ಮಾರಸನಳ್ಳಿ ಶಾಸನದಲ್ಲಿ ಶ್ರೀಮದೆಳಮೇಲ ಉತ್ತರೇಶ್ವರ ದೇವರ ಮಠದಲೋದುವ ಕೇಳುವ ತಪೋಧನರಿಗೆ ಬಟ್ಟೆ, ವಸತಿ, ಆಹಾರ, ಔಷದಿಗಳಿಗೆ ಮತ್ತು ಮಠದ ಸತ್ರಕ್ಕಾಗಿ ಪಾಶುಪತ ಯೋಗಾಚಾರ್ಯರಿಗೆ ದತ್ತಿಬಿಟ್ಟ ಉಲ್ಲೇಖ ಬರುತ್ತದೆ. ಆಲಮೇಲ ಹಾಗೂ ಕಡ್ಲೇವಾಡದ ಶಾಸನಗಲ್ಲಿ ಉತ್ತರೇಶ್ವರ ದೇವರ ಕುರುತ ಪ್ರಸ್ತಾಪವಿದೆ. ಈ ಭಾಗದಲ್ಲಿಆಳ್ವಿಕೆಮಾಡುತ್ತಿದ್ದ ಶಿಲಾಹಾರ ವಂಶದ ಅರಸರು ಉತ್ತರೇಶ್ವರ ದೇವರ ಆರಾಧಕರಾಗಿದ್ದರು.

ಪಾಶುಪತ ಪರಂಪರೆಯ ಮಲೆಯಾಳ ಪಂಡಿತನಿಂದ ಆರಂಭವಾಗುತ್ತದೆ. ಕಿಗ್ಗ ಶಾಸನವಿರುವುದು ಮಲೆನಾಡಿನಲ್ಲಿ ಈ ಶಾಸನದಲ್ಲಿ ಪೂರ್ವಮರಿಯಾದೆಯಾ ಕಮ್ಮರರ ಪಾಶುಪತ ಮರುಯಾದೆಯಾ ಉಳ್ಳದಲ್ಲ ಎತ್ತಕೊಳ್ವೋನ್ವಙ್ಚ ಮಹಾಪಾತನಕ್ಕಂ' ಎಂಬ ವಿಷಯವಿದೆ. ಇದರಿಂದ ಕುಶಲಕರ್ಮಿಗಳು ಪಾಲಿಸಿಕೊಂಡು ಬಂದಿದ್ದ ಈ ಸಂಪ್ರದಾಯವನ್ನು ಬೇರೆಯವರು ಅಪಹರಿಸುತ್ತಿರುವಂತೆ ಮತ್ತು ಅದು ತನ್ನ ನಿಲುವನ್ನು ಬದಲಾಯಿಸುತ್ತಿರುವುದು ಇದರಿಂದ ಸ್ಪಷ್ಟವಾಗುತ್ತದೆ. ಇದರಿಂದ ತಿಳಿದು ಬರುವುದು ಏನೆಂದರೆ ಪಾಶುಪತ ಪರಂಪರೆಯು ಪ್ರಾರಂಭದಲ್ಲಿ ಮಲೆನಾಡಿನಲ್ಲಿದ್ದು ನಂತರ ಬಯಲು ಪ್ರದೇಶಕ್ಕೆ ಹರಡಿರಬಹುದು. ಪಾಶುಪತ ಪಂಡಿತ ಅಲ್ಲಿಂದ ನೇರವಾಗಿ ಇಂದಿನ ಸಿಂದಗಿ ಹತ್ತಿರದ ಆಲಮೇಲ (ಏಳಮೇಲ) ಗ್ರಮಕ್ಕೆ ಬರುತ್ತಾನೆ. ಉತ್ತರೇಶ್ವರ ದೇವರ ಆರಾಧಕನಾದ ಈತನ್ನು ಶಾಸನಗಳು ಮಲೆಯಾಳ ಪಂಡಿತನೆಂದು ಕರೆದಿವೆ. ಈ ಪರಂಪರೆಯು ಇದೇ ಪರಿಸರಕ್ಕೆ ಹೋದಮಿಕೊಂಡಂತಿರುವ ಜೇವರಗಿ ತಲೂಕಿನ ಯಡ್ರಾಮಿ ಮತ್ತು ಸುರಪುರ ತಾಲೂಕಿನ ಮುದನೂರುಗಳಲ್ಲಿ ವಿಸ್ತರಿಸಿಕೊಳ್ಳುತ್ತದೆ. ಕ್ರಮೇಣ ವೈದಿಕರ ಪ್ರಭಾವಕ್ಕೆ ಒಳಗಾದ ಇವರು ಉತ್ತರೆಶ್ವರ ದೇವರ ಬದಲಾಗಿ ರಮೇಶ್ವರ ಆರಾಧಕ ರಾಗುತ್ತಾರೆ. ಇದೇ

ವೇಳೆಯಲ್ಲಿ ಪಾಶುಪಥವು ಅಭಿನವ ಪಾಶುಪತವಾಗಿ ಬದಲಾಗುತ್ತದೆ. ಎಳಮೇಲ ಮಲೆಯಾಳ ಪಂಡಿತರ ಪರಂಪರೆಯ ಮುದನೂರು ತೀರ್ಥದ ರಾಮೇಶ್ವರ ದೇವರ ಶಿಷ್ಯವರ್ಗದವರು ಎಂದು ತಾವು ಯಾವುದೇ ದೇವಾಲಯಗಳಿಗೆ ಸ್ಥಾನಾಚಾರ್ಯರು ಆಗಿ ನೇಮಕವಾದ ಸಂದರ್ಭದಲ್ಲಿ ಹೇಳಿಕೊಮಡಿದ್ದಾರೆ. ಈ ನಂತರದಲ್ಲಿಯೇ ತರ್ದವಾಡಿ ಹಾಗೂ ಸಗರ ನಾಡುಗಳಲ್ಲಿ ರಾಮೇಶ್ವರ ಮತ್ತು ಲಕ್ಷ್ಮಣೇಶ್ವರ ದೇವಾಲಯಗಳು ಹೆಚ್ಚಿನ ಸಂಖ್ಯೆಯಲ್ಲಿ ನಿರ್ಮಾಣವಾದವು. ಮುದನೂರು, ಯಡ್ರಾಮಿ, ಯರಗಲ್, ಕುಮಶಿ, ಮುತ್ತಗಿ, ಮುದ್ದೇಬಿಹಾಳ ಮೊದಲಾದ ಕಡೆ ರಾಮೇಶ್ವರ ದೇವಾಲಯಗಳು ನಿರ್ಮಾಣವಾದವು. ಇನ್ನೂ ಕೆಲವು ಕಡೆ ಕೆಲವು ದೇವಾಲಯಗಳು ನಿರ್ಮಾಣವಾದವು ಇನ್ನೂ ಕೆಲವು ಕಡೆ ಕೆಲವು ದೇವಾಲಯಗಳ ಮೂಲ ಹೆಸರಿನ ಬದಲಿಗೆ ರಾಮೇಶ್ವರವೆಂದು ಬದಲಾದವು ಪಾಶುಪಥ ತಪೋಧನರು ತಮ್ಮನ್ನು ಶ್ರೀ ಮದ್ದೇಳಮೇಲ ಸಿಂಹ ಪರುಷನ್ಮಂಡಳಿಯ ಮಲಿಯಾಳ ದೇವರ ಶಿಷ್ಯರೆಂದು ಕರೆದು ಕೊಂಡಿದ್ದಾರೆ.

ಉತ್ತರ ಭಾರತದಲ್ಲಿ ಜನಿಸಿ ನಂತರದಲ್ಲಿ ದಕ್ಷಿಣ ಭಾರತಕ್ಕೆ ಬಂದು ಅದರಲ್ಲಿಯೂ ಕರ್ನಾಟಕ ಪ್ರದೇಶದಲ್ಲಿ ತನ್ನ ವ್ಯಾಪಕ ಹರವನ್ನು ಕಂಡುಕೊಂಡಿತು. ಮುಖ್ಯವಾಗಿ ಕಲ್ಯಾಣ ಚಾಲುಕ್ಯರ ಆಳ್ವಿಕೆಯ ಕಾಲಘಟ್ಟದಲ್ಲಿ ಇದು ಸಾಕಷ್ಟು ಪ್ರೋತ್ಸಾಹವನ್ನು ಪಡೆದಿದ್ದನ್ನು ಶಾಸನಗಳಿಂದ ತಿಳಿದು ಬರುವ ಸಂಗತಿಯೇ ಆಗಿದೆ. ವಿಜಯಪುರ ಜಿಲ್ಲೆಯಲ್ಲಿ ಪಾಶುಪತ ಪಂಥದ ಚಟುವಟಿಕೆಗಳನ್ನು ಶಾಸನಗಳ ಮೂಲಕ ಕಂಡುಕೊಳ್ಳಬಹುದಾಗಿದೆ. ಅಲ್ಲದೇ ಪಾಶುಪತ ಉಲ್ಲೇಖವಿರುವ ಶಾಸನಗಳಲ್ಲಿ ಕಂಡು ಬರುವ ದೇವಾಲಯಗಳು ಇಂದಿಗೂ ವಿಜಯಪುರ ಜಿಲ್ಲೆಯಲ್ಲಿ ಉಳಿದುಕೊಂಡು ಬಂದಿದೆ. ಉದಾಹರಣೆಗೆ ಸಿಂದಗಿ ತಾಲೂಕಿನ ಮಾರಸಿಂಗೇಶ್ವರ ದೇವಾಲಯ. ವಿಜಯಪುರದ ಜಿಲ್ಲೆಯ ಶಾಸನಗಳನ್ನು ಗಮನಿಸಿದಾಗ ಒಟ್ಟಾರೆ ೦೬ ಶಾಸನಗಳು ಪಾಶುಪತದ ಉಲ್ಲೇಖವನ್ನು ನೀಡುತ್ತವೆ.

ಜಿಲ್ಲೆಯಲ್ಲಿ ಪಾಶುಪತದ ಮೊದಲ ಉಲ್ಲೇಖವನ್ನು ಸಿಂದಗಿ ತಾಲೂಕಿನ ದೇವೂರು[೭] ಶಾಸನವು ನೀಡುತ್ತದೆ. ಜಗದೇಕಮಲ್ಲನ ಆಳ್ವಿಕೆಯ ಕಾಲದಲ್ಲಿ ದೇವಾಪುರದ ಮಾರಸಿಂಗೇಶ್ವರ ದೇವರಿಗೆ ದೇವಪೂಜೆಗಾಗಿ ತಪೋಧನರ, ವಿದ್ಯಾರ್ಥಿಗಳ ಊಟ ಉಪಚಾರಕ್ಕಾಗಿ ಬ್ರಹ್ಮರಾಸಿ ಪಂಡಿತರಿಗೆ ಜಗದೇಕಮಲ್ಲನು ರಾಣಿ ಸುಗ್ಗಲದೇವಿಯು ಭೂಮಿ, ತೋಟವನ್ನು ಪಾಶುಪತ ಯೋಗಾಚಾರ್ಯನಾದ ಬ್ರಹ್ಮರಾಸಿ ಪಂಡಿತನಿಗೆ ದಾನ ನೀಡುತ್ತಾಳೆ.

ಎರಡನೆಯ ಉಲ್ಲೇಖವನ್ನು ಬಸವನ ಬಾಗೇವಾಡಿ ತಾಲೂಕಿನ ಬಾಗೇವಾಡಿ[೮] ಶಾಸನವು ನೀಡುತ್ತದೆ. ಈ ಶಾಸನವು ಒಂದನೆಯ ಸೋಮೇಶ್ವರನ ಮಡದಿಯಾದ ಮೈಳಲದೇವಿಯು ದಾನ ನೀಡಿದುದನ್ನು ಉಲ್ಲೇಖಿಸುತ್ತದೆ. ಚಂದ್ರಗ್ರಹಣದ ನಿಮಿತ್ತ ಇವಳು ಲಕ್ಷಹೋಮವನ್ನು ಮಾಡಿಸಿ

ಸೋಮೇಶ್ವರ ದೇವರ ಸೇವೆಗೆಂದು ಭೂಮಿಯನ್ನು ಪಾಶುಪತ ಯೋಗಾಚಾರ್ಯನೆಂದು ಹೆಸರಾದ ಜ್ಞಾನರಾಸಿ ವ್ಯಾಖ್ಯಾನದೇವರಿಗೆ ದಾನಗಳನ್ನು ನೀಡುತ್ತಾಳೆ.

ಮೂರನೆಯ ಶಾಸನವು ಸಿಂದಗಿ ತಾಲೂಕಿನ ದೇವೂರ ಗ್ರಾಮದಲ್ಲಿದ್ದು ಕ್ರಿ.ಶ. ೧೦೬೪ಕ್ಕೆ ಸೇರಿದ್ದಾಗಿದೆ.[೯] ಚಾಲುಕ್ಯ ಸಾಮಂತ ನೊಳಂಬ ಪಲ್ಲವನ ಸಾಮಂತನಾದ ಮಹಾಸಾಮಂತ ವಾರರಸ ದೇವಪುರದ ಮಾರಸಿಂಗೇಶ್ವರ ದೇವರ ಪೂಜೆಗಾಗಿ ತಪೋಧನರಿಗೆ, ವಿದ್ಯಾರ್ಥಿಗಳ ಊಟ ವಸತಿಗಾಗಿ ೬೦ ಮತ್ತರು ಭೂಮಿಯನ್ನು ಪಾಶುಪತ ಯೋಗಾಚಾರ್ಯರಾದ ಜ್ಞಾನರಾಸಿ ಪಂಡಿತರ ಕಾಲನ್ನು ತೊಳೆದು ದಾನ ನೀಡುತ್ತಾನೆ.

ನಾಲ್ಕನೆಯ ಶಾಸನವು ಕ್ರಿ.ಶ.೧೦೬೬ರ ಮಾರಸನಹಳ್ಳಿ[೧೦] ಶಾಸನವಾಗಿದ್ದು ಇದು ಪಾಶುಪತ ಯೋಗಾಚಾರ್ಯನಾದ ಸೋಮೇಶ್ವರ ಪಂಡಿತನನ್ನು ಉಲ್ಲೇಖಿಸುತ್ತದೆ. ಈತ ಬಲ್ಲವರಸನಿಂದ ಗ್ರಾಮವೊಂದನ್ನು ಉತ್ತರೇಶ್ವರ ದೇವರ ಮಠದಲ್ಲಿ ಓದುವ ವಿದ್ಯಾರ್ಥಿ ತಪೋಧನರ ಊಟ ಔಷಧಕ್ಕೆಂದು ದಾನ ಪಡೆದಿದ್ದಾನೆ.

ಐದನೆಯ ಶಾಸನವು ಕ್ರಿ.ಶ. ೧೧೧೬ರ ಕೊಂಡಗುಳಿಯ ಶಾಸನವಾಗಿದೆ. ಯಮನಿಯಮಾಸನ ಪ್ರಾಣಾಯಾಮಪ್ರತ್ಯಾಹಾರ ಜಪಸಮಾಧಿಶೀಲಗುಣಸಂಪಣ್ನರಪ್ಪ ಸಿಂಹಪರ್ಷೆಯ ಅಭಿನಪಾಶುಪತ ಸುಬ್ರತಾಭರಣರಪ್ಪ ಸರವಳ್ಳಿಯ ಜ್ಞಾನರಾಶಿರಾಜಗುರುದೇವರ ಶಿಷ್ಯರಪ್ಪ ಶ್ರೀ ಸಿದ್ಧಯೋಗಿ ಪಂಡಿತ ದೇವಪ್ರಭು ಬಿಲ್ಲರಸನು ಶ್ರೀ ಮಲ್ಲಿಕಾರ್ಜುನ ದೇವರ ಲಿಂಗ ಪ್ರತಿಷ್ಠೆಯಂ ಮಾಡಿ ಆ ದೇವರಿಗೆ ಹಲವಾರು ಸೇರಿ ಆ ಮಟದಲುಂಬ ತಪೋಧನರಾಹಾರಧಾನಕ್ಕಂ ಮಾನ್ರಾದ ಹಿಟ್ಟಿನ ಕೆಯ್ಯಂ ಸೂರ್ಯ ಪಂಡಿತರಿಗೆ ದೇವರಿಗೆ ತ್ರಿಕಾಲದಲು ಪೂಜೆಯಂ ನಡೆಸುವಂತಾಗಿ ಬಿಟ್ಟ ಪೂಜಾರಿಗೆ ಎಂದಿದೆ.

ಕೊನೆಯ ಶಾಸನವು ಕ್ರಿ.ಶ.೧೧೨೬ ರ ಇಂಗಳೇಶ್ವರ[೧೧] ಶಾಸನವಾಗಿದೆ. ಗ್ರಾಮದ ಸೋಮೇಶ್ವರ ದೇವಾಲಯದಲ್ಲಿ ಸಿಂಹಪರಿಶುಮಂಡಳಿ ಮಲೆಯಾಳರ ಶಿಷ್ಯಣದ ಧರ್ಮರಾಸಿ ಮುನಿಯ ಶಿಷ್ಯ ವಿಜಯಪುರದ ಕೇದಾರದ ಮಹಾಸ್ಥಾನದಾಚಾರ್ಯನಾದ ಜ್ಞಾನರಾಸಿ ಪಂಡಿತನಿದ್ದನೆಂದು ಹೇಳಿದೆ. ಈ ಜ್ಞಾನರಾಸಿ ಪಂಡಿತರ ಕಾಲ ತೊಳೆದು ದಾನ ನೀಡಿರುವುದನ್ನು ಶಾಸನವು ಉಲ್ಲೇಖಿಸುತ್ತದೆ.

ಪಾಶುಪತ ಶಾಸನಗಳ ಯಾದಿ

ಅ.ಸಂ	ಗ್ರಾಮ	ತಾಲೂಕು	ಮುನಿ	ಕಾಲ	ರಾಜ	ಉಲ್ಲೇಖ
೦೧	ದೇವೂರು	ಸಿಂದಗಿ	ಬ್ರಹ್ಮರಾಸಿ ಪಂಡಿತ	ಕ್ರಿ.ಶ.೧೦೨೯	ಎರಡನೆಯ	ಕ.ವಿ.ವಿ.ಶಾ.ಸಂ-೧೦

					ಜಯಸಿಂಹ	ಸಂ-೮೦
೨೨	ಬಾಗೇವಾಡಿ	ಬಾಗೇವಾಡಿ	ಜ್ಞಾನರಾಸಿ ವ್ಯಾಖ್ಯಾನದೇವರು	ಕ್ರಿ.ಶ.೧೦೪೯	ಒಂದನೆಯ ಸೋಮೇಶ್ವರ	ಕ.ಪಿ.ಪಿ.ಶಾ.ಸಂ-೧೦ ಸಂ-೨೩
೨೩	ದೇವೂರು	ಸಿಂದಗಿ	ಜ್ಞಾನರಾಸಿ ಪಂಡಿತ	ಕ್ರಿ.ಶ.೧೦೬೪	" "	ಕ.ಪಿ.ಪಿ.ಶಾ.ಸಂ-೧೦ ಸಂ-೭೯
೨೪	ಮಾರಸನಹಳ್ಳಿ	ಇಂಡಿ	ಸೋಮೇಶ್ವರ ಪಂಡಿತ	ಕ್ರಿ.ಶ.೧೦೬೬	" "	ಕ.ಪಿ.ಪಿ.ಶಾ.ಸಂ-೧೦ ಸಂ-೫೪
೨೫	ಕೂಂಡಗುಳಿ		ಜ್ಞಾನರಾಸಿ ರಾಜಗುರುದೇವರು	ಕ್ರಿ.ಶ.೧೧೧೬	ಆರನೆಯ ವಿಕ್ರಮಾದಿತ್ಯ	ಎಸ್.ಐ.ಐ., ಸಂ-೧೧, ಸಂ-೧೫೮
೨೬	ಇಂಗಳೇಶ್ವರ	ಬಾಗೇವಾಡಿ	ಜ್ಞಾನರಾಶಿ ಪಂಡಿತ	ಕ್ರಿ.ಶ.೧೧೭೬	ಬಿಜ್ಜಳ	ಕ.ಪಿ.ಪಿ.ಶಾ.ಸಂ-೧೦ ಸಂ-೦೩

ಈ ಜಿಲ್ಲೆಯ ಶಾಸನಗಳಲ್ಲಿ ಶಕ್ತಿಪರ್ಷೆ ಮತ್ತು ಸಿಂಹಪರ್ಷೆಗಳೆರಡರ ಉಲ್ಲೇಖಗಳು ಬರುತ್ತವೆ. ಕ್ರಿ.ಶ. ೧೦೭೪ರ ವಿಜಯಪುರ ಶಾಸನದಲ್ಲಿ ಉಕ್ತವಾದ ಕಾಳಾಮುಖ ಮೂರ್ತಿ ತ್ರಿಭುಂಜಗದೇವ ಶಕ್ತಿಪರ್ಷೆಯ ಭುಜಂಗಾವಳಿಯ ಮೂಲ ಪುರುಷನೆನ್ನಹುರು. ವಿಜಯಪುರ ಮುತ್ತು ಮುತ್ತಗಿಯ ಶಾಸನಗಳು ಭುಜಂಗದೇವನ ಶಿಷ್ಯ ಪರಂಪರೆ ನಂತರದಲ್ಲಿ ಬೆಳೆದು ಬಂದುದನ್ನು ಉಲ್ಲೇಖಿಸಿದೆ. (ಕೊಪ್ಪಾ ಎಸ್.ಕೆ., ತರ್ದವಾಡಿ ನಾಡು, ಪು. ೧೭೮) ಇವರನ್ನು ಬಿಟ್ಟರೆ ಈ ನಾಡಿನ ಮನಗೂಳಿ ಕಲಿದೇವಾಚಾರ್ಯ ಸದ್ಯೋಜಾತ ಪಂಡಿತದೇವ ಮತ್ತು ಹಿಪ್ಪರಗೆಯ ಕಲಿದೇವೇಶನಾಚಾರ್ಯ ರಾಜಗುರು ಮುನೀಶರನ್ನು ಅಲ್ಲಿನ ಶಾಸನಗಳು ಭುಜಂಗಾವಳಿಕುಳತಿಳಕ ಕಾಳಾಮುಖ ಸೃಷ್ಟಿಕರೆಂದು ಕರೆದಿವೆ. (ಕೊಪ್ಪಾ ಎಸ್.ಕೆ., ತರ್ದವಾಡಿ ನಾಡು, ಪು. ೧೭೯)

ಕಾಳಾಮುಖ ಪರಂಪರೆಯ ಶಾಖೆಗಳನ್ನು ಹೀಗೆ ವರ್ಗೀಕರಿಸಿ ನೋಡಬಹುದು

ಕಾಳಾಮುಖ ಶಕ್ತಿಪರ್ಷೆ ಅದರಲ್ಲಿ ೧. ಪರ್ವತಾವಳಿ ೨. ಭುಜಂಗಾವಳಿ

ಪರ್ವತಾವಳಿಯಲ್ಲಿ ಅ) ಮೂವರೂ ಕೋಣೆಯ ಸಂತತಿ ಬ) ಬೆಳ್ಳಿಯಸಂತಾನ ಕ) ಕಿಟ್ಟಗಾವೆ ಸಂತತಿ ಡ) ಶಿವಲಿಂಗಿ ಸಂತತಿ ಎಂದು ವರ್ಗೀಕರಿಸಲಾಗಿದೆ.

ಪರ್ವತಾವಳಿ

ಶಕ್ತಿಪರ್ಷೆಯಲ್ಲಿ ಪರ್ವತಾವಳಿ ಹಾಗೂ ಬುಜಂಗಾವಳಿ ಎಂಬ ಅವಳಿ ಸಂತತಿಗಳನ್ನು ಗುರುತಿಸಲಾಗಿದೆ. ಪರ್ವತಾವಳಿಯೆಂದರೆ ಪರ್ವತ ಎಂದರೆ ಸಂಸ್ಕೃತ ಶಬ್ದದ ದ್ರಾವಿಡ ರೂಪ ಮಲೆ. ಮಲೆ ಎಂದರೆ ಬೆಟ್ಟಗಳ ಸಾಲು. ಪರ್ವತಗಳ ಶ್ರೇಣಿ ಎಂದು ಪರ್ವತಾವಳಿಯನ್ನು ಅನುವಾದಿಸಬಹುದು. ಪರ್ವತಾವಳಿಯ ಕುರಿತು ಮೊಟ್ಟ ಮೊದಲ ಉಲ್ಲೇಖ ಕ್ರಿ.ಶ. ೧೦೩೯ರ ಬಳ್ಳಿಗಾವೆ ಶಾಸನದಲ್ಲಿ ಬರುವುದು. ಪರ್ವತಾವಳಿ ಸಂತತಿ ಕಾಳಾಮುಖ ಪ್ರಧಾನ ವಿಭಾಗವಾಗಿದ್ದು ಕ್ರಿ.ಶ. ೧೦೩೯ರಿಂದ ೧೧೭೩ರ ವರೆಗಿನ ಅವಧಿಯಲ್ಲಿ ಕಂಡುಬರುತ್ತದೆ. ಈ ಶಾಖೆಯು ಬಳ್ಳಿಗಾವೆಯಿಂದ ಪ್ರಾರಂಭವಾಗಿ ಉಳಿದ ಕಡೆ ವ್ಯಾಪಿಸಿರುವುದು ಶಾಸನಗಳಿಂದ ತಿಳಿಯುತ್ತದೆ. ಬಳ್ಳಿಗಾವೆಯ ಶಾಸನದಲ್ಲಿ ಉಲ್ಲೇಖವಾಗಿರುವ ಪರ್ವತಾವಳಿಯು ಈಗಿನ ಶ್ರೀಶೈಲವೇ ಆಗಿರಬೇಕು. ಆದರೆ ಬಳ್ಳಿಗಾವೆಯಲ್ಲಿ ಸಿಗುವಷ್ಟು ಶಾಸನಗಳು ಶ್ರೀಶೈಲದಲ್ಲಿ ಸಿಕ್ಕಿಲ್ಲ. ಅದೇರೀತಿ ವಿಜಯಪುರ ಜಿಲ್ಲೆಯಲ್ಲಿಯು ಈ ಸಂತತಿ ಕುರಿತಾಗಿ ಯಾವುದೇ ಶಾಸನಗಳು ಕಂಡುಬರುವುದಿಲ್ಲ.

ಬುಜಂಗಾವಳಿ

ಕ್ರಿ ಶ ೯ನೇ ಶತಮಾನಕ್ಕೆ ಸೆರಿದ ಪಲ್ಲವರ ಕಾಲದ ಶಾಸನದಲ್ಲಿ "ಲಾಕುಳಾಗಮಿಕರಾಗಿದ್ದ ತಗದುರಿನ ವಿದ್ಯರಾಶಿ ಮುನಿಗಳಿಂದ ಕಲಿಚೋಲೇಶ್ವರ ಪಲ್ಲವೇಶ್ವರ-ಮಹಾಭೋಗೇಶ್ವರ-ನನ್ನೇಶ್ವರ ದೇವಾಲಯಗಳಿಂದ ಕಾಂಚಿ ಭೋಜಂಗೇಶ್ವರಾವಳಿ- ಕಂಠಿರವ ಕೂಪ ನಂದನವನಗಳಿಂದ ತಗಡೂರು ಶೋಭಿಸುತ್ತಿತ್ತೆಂದು ಶಾಸನದಲ್ಲಿ ಉಲ್ಲೆಕವಿದೆ(ಕವಿವಿ ಶಾ ಸಂ-೪ ನಂ.೯೦) ಉಲ್ಲೆಕಿತ ತಗಡೂರು ಇಂದಿನ ಧರ್ಮಪುರಿಯಾಗಿದೆ, ಇಲ್ಲಿ ಹೆಳಿದ ವಿದ್ಯರಾಶಿ ಗುರುಗಳ ಗುರು ರುದ್ರಭೋಜಂಗರು. ಕಾಂಚಿ ಭೋಜಂಗೇಶ್ವರಾವಳಿ ದೇವಾಲಯವೇ ಬುಜಂಗಾವಳಿ ಶಾಖೆಯ ಮೊದಲ ಉಲ್ಲೇಖಿತ ದೇವಾಲಯ ಈ ಬುಜಂಗಾವಳಿ ಪರಂಪರೆಯು ಮುಂದುವರೆದು ಕ್ರಿ. ಶ ೧೦೬೦ ರ ಶಾಸನ (ಕವಿವಿ ಶಾ ಸಂ-೫-೧ ನಂ.೧೪೪) ದಲ್ಲಿ ಆಲಂಪುರ ಪರಿಸರದಲ್ಲಿಯೂ ಬುಜಂಗೇಶ್ವರ ಹೆಸರಿ ದೇವಾಲಯವಿದ್ದಿತ್ತೆಂದಾಗುತ್ತದೆ. ಅಂದರೆ ಧರ್ಮಪುರಿ ಶ್ರೀಶೈಲದ ಹೆಬ್ಬಾಗಿಲು ಆಗಿತ್ತು.

ಬುಜಂಗಮುನಿಯ ಉಲ್ಲೇಖವು ಕ್ರಿ.ಶ. ೧೦೭೪ರ ಶಾಸನದಲ್ಲಿ ಬರುತ್ತದೆ ಇಲ್ಲಿ ಯೋಗಿಶ್ವರರ ಗುರು ಪರಂಪರೆಯನ್ನು ವಿಸ್ತಾರವಾಗಿ ಹೇಳಲಾಗಿದ್ದು ಇಲ್ಲಿ ಉಲ್ಲೇಖವಾಗಿರುವ ಬುಜಂಗ ಮುನಿ ಧರ್ಮಪುರ (ತಗಡೂರು) ಶಾಸನದಲ್ಲಿ ಉಲ್ಲೇಖಿತ ಬುಜಂಗನೇ ಆಗಿರಬೇಕು ಹಾಗೂ

ಬುಜಂಗಮುನಿಗೆ ಸಂಬಂಧಸಿದ ಕರ್ನಾಟಕದ ಮೊದಲ ಉಲ್ಲೇಖದ ಶಾಸನವಾಗಿದೆ. ಇಲ್ಲಿ ಬುಜಂಗದೇವನನ್ನು ಲಾಕುಳಾಗಮ ಕಾಳಾಮುಖಾಗ್ರಗೇಶ್ವರ ಭುಜಂಗಮುನಿಪು ಎಂದು ವರ್ಣಿಸಿದ್ದು, ಇದು ಕಾಳಾಮುಖಕ್ಕೂ ಭುಜಂಗಾವಳಿಗೂ ಸಂಬಂಧ ಸೂಚಿಸುತ್ತದೆ. ಭೂಜಂಗಮುನಿಗಳಿಂದ ಪ್ರಾರಂಭವಾದ ಈ ಶಾಖೆಯಲ್ಲಿ ಬಾಳಸೂರ್ಯಮುನಿಯ ನಂತರ ಕಾಶ್ವೀರ ಸೂರೀಶ್ವರ ಎಂಬ ಹೆಸರು ಇರುವದರಿಂದ ಇವರನ್ನು ಕಾಶ್ಮೀರದಿಂದ ಬಂದ ಪಂಡಿತರು ಇರಬಹುದು ಎಂಬವಾದ ಬರುತ್ತದೆ. ಇದು ಸರಿಯಲ್ಲ. ಏಕೆಂದರೆ ದೊರ ದೊರದಿಂದ ಬಂದು ಸ್ಥಾನಪತಿಗಳು ಆಗಲು ಸಾಧ್ಯವಿಲ್ಲ. ಕಾಶ್ಮೀರ ಪಂಡಿತರೆಂದರೆ ಪರಿಣಿತಿ ಪಡೆದವರು ಎಂದರ್ಥ ಅಂದರೆ ವಾದದಲ್ಲಿ ಮಹಾಪ್ರಳಯನಾದ ವ್ಯಕ್ತಿಯನ್ನು ಶ್ರೇಷ್ಠ, ಜಾಣ ಪ್ರಸಿದ್ಧಿಪಡೆದನು. ಮುಂತಾದ ಅರ್ಥದಲ್ಲಿ ಹೀಗೆ ಕರೆದುಕೊಂಡಿರಬೇಕು. ಇಲ್ಲಿಂದ ಯತಿ ಕಾಶ್ಮೀರಕ್ಕೆ ಹೋಗಿದ್ದು ಪುನಃ ಇಲ್ಲಿಗೆ ಬಂದು ಇದೆ ಪರಂಪರೆಗೆ ಸೆರಿಕೊಳ್ಳುವಾಗ ತಮ್ಮನ್ನು ಕಾಶ್ಮೀರಯತಿಗಳ ಪಾಂಡಿತ್ಯ ಸೂರಿ ಮಾಡಿದೆವನೆಂದು ಕರೆದು ಕೊಂಡಿರಭಹುದು.

ವಿಜಾಪುರದ ಸ್ವಯಂಭು ಸಿದ್ದೇಶ್ವರ ದೇವಾಲಯದ ಪರಂಪರೆವು ಭುಜಂಗದೆವನಿಂದ ಪ್ರಾರಂಭವಾಗಿ ಜಿಲ್ಲೇಯ ಮುತ್ತಗಿ ಶಾಸನದಲ್ಲಿ ಈ ಪರಂಪರೆ ಮುಂದುವರೆಯುತ್ತದೆ. ಭುಜಂಗಾವಳಿಯಲ್ಲಿ ಇಟ್ಟಿಗೆಯ ಸಂತಾನ ಶಾಖೆಗಳು ಕಂಡುಬರುತ್ತಿದ್ದು ವಿಜಾಪುರದಲ್ಲಿ ಭುಜಂಗಾವಳಿ ಪರಂಪರೆ ಪ್ರಭಾವಶಾಲಿ ಆಗಿದ್ದು ತಿಳಿದುಬರುತ್ತದೆ. ವಿಜಾಪುರ ಜಿಲ್ಲೆಯ ಕಾಲದ ಉಲ್ಲೇಖ ವಿಲ್ಲದ ಸಾಲವಾಡಗಿ ಶಾಸನದಲ್ಲಿ(ಕ.ವಿ.ವಿ ಶಾ.ಸಂ.೧೦., ಬಾಗೇವಾಡಿ ಸಂ.೫೯) ಕಶ್ಮಿರಬ್ರತಿ ಯಂಬುವವನು ಮೂರುಜಾವಿಯಂಬ ಅಭಿದಾನದಲ್ಲಿ ಈ ಸ್ಥಳದಲ್ಲಿ ಸಿದ್ದೇಶ್ವರ ಮತ್ತು ಪಾಪವಿನಾಶ ದೇವಾಲಯ ನಿರ್ಮಿಸಿದ ವಿವರ ಲಬ್ಯವಿರುವದರಿಂದ ಕಾಳಾಮುಖ ಪರ್ವತಾವಳಿಯಲ್ಲಿ ಮೂರು ಜಾವಿ ಸಂತತಿಯ ಉಲ್ಲೇಖ ವಿರುವದರಿಂದ ಇಲ್ಲಿ ಕಾಳಾಮುಖ ಪ್ರಭಾವ ವಿರುವುದು ಸ್ಪಷ್ಟವಾಗುತ್ತದೆ.

ವಿಜಾಪುರದಲ್ಲಿರುವ ಭುಜಂಗಾವಳಿಯ ಇನ್ನೊಂದು ಗುಂಪು ಮತ್ತಿಕೋಟೆಯಲ್ಲಿ ಕಂಡುಬರುತ್ತದೆ. ಆದರೆ ಕಾಲ ಒಂದೇ ಆಗಿರುವುದರಿಂದ ವಿಜಾಪುರದಲ್ಲಿ ಯೋಗಿಶ್ವರ ಪಂಡಿತರಿದ್ದರೆ, ಮತ್ತಿಕೋಟೆಯಲ್ಲಿ ವರೇಶ್ವರ ಪಂಡಿತರು ಸ್ಥಾನಾಚಾರ್ಯರಾಗಿದ್ದರು. ಒಟ್ಟಿನಲ್ಲಿ ಮುತ್ತಗಿಯಲ್ಲಿ ನೆಲೆನಿಂತು ಸ್ಥಾನಾಪತಿಯಾದ ಕಾಶ್ಮೀರ ಮುನಿ ಇಲ್ಲಿಯವರೇ ಆಗಿದ್ದು ತಮ್ಮನ್ನು ವಿಶಿಷ್ಠ ರೀತಿಯಲ್ಲಿ ಗುರುತಿಸಿಕೊಳ್ಳುವ ಸಲುವಾಗಿ ಹಾಗೆ ಕರೆದುಕೊಂಡಿದ್ದಾರೆ.

ಹೀಗೆ ಮೇಲಿನ ಶಾಸನಗಳನ್ನು ಗಮನಿಸಿದಾಗ ವಿಜಯಪುರ ಜಿಲ್ಲೆಯ ಶಾಸನಗಳಲ್ಲಿ ಶೈವಪ್ರಭೇದಗಳಾದ ಕಾಳಾಮುಖ, ಪಾಶುಪತ ಪಂಗಡ ಹಾಗೂ ಗುರುಪರಂಪರೆಯ ಮೂಲವನ್ನು ತಿಳಿಯಲು ಬಹುಮುಖ್ಯ ಆಕರಗಳಾಗಿವೆ.

ಶೈವ ಗುರು ಪರಂಪರೆ:

ಶೈವ ಗುರುಪರಂಪರೆಯೆಂದರೆ ಇಲ್ಲಿ ಶಾಸನಗಳಲ್ಲಿ ಕಂಡು ಬರುವ ಶೈವ ಮುನಿಗಳನ್ನು ಅಧ್ಯಯನಿಸುವುದೇ ಆಗಿದೆ. ಶಾಸನಗಳು ಎರಡು ರೀತಿಯ ಗುರು ಪರಂಪರೆಯನ್ನು ನೀಡುತ್ತವೆ. ಒಂದು ಗುರು ಶಿಷ್ಯರ ಸಂಬಂಧವನ್ನು ಹೇಳಿದರೆ ಇನ್ನೊಂದು ಬೇರೆ ಬೇರೆ ಶಾಸನಗಳಲ್ಲಿ ಕಂಡು ಬರುವ ಒಂದೇ ಹೆಸರಿನ ಮುನಿಗಳನ್ನು ಗುರುತಿಸುವುದು. ಮತ್ತೊಂದು ಗಮನಾರ್ಹ ಅಂಶವೆಂದರೆ ಈ ತೆರನಾದ ಗುರು ಪರಂಪರೆಯ ಉಲ್ಲೇಖವಿರುವ ಶಾಸನಗಳಲ್ಲಿ ಮುನಿಗಳನ್ನು ಹೊಗಳಿರುವುದನ್ನು ಮತ್ತು ಅವರ ವಿದ್ಯಾಭ್ಯಾಸದ ವಿವರವನ್ನು ಕಾಣಬಹುದು. ವಿಜಯಪುರ ಜಿಲ್ಲೆಯ ಶಾಸನಗಳನ್ನು ಗಮನಿಸಿದಾಗ ಮುನಿಗಳ ಉಲ್ಲೇಖವಿರುವ ಶಾಸನಗಳು ತುಂಬಾ ಕಡಿಮೆಯಿದೆ ಅದರಲ್ಲಿಯೂ ಗುರು ಪರಂಪರೆಯ ಉಲ್ಲೇಖವಿರುವ ಶಾಸನಗಳು ಬೆರಳೆಣಿಕೆಯಷ್ಟು ಮಾತ್ರವಿವೆ. ಒಟ್ಟಾರೆಯಾಗಿ ಇಲ್ಲಿ ಪುನರುಲ್ಲೇಖಿತ ಮುನಿಗಳನ್ನು, ಗುರುಶಿಷ್ಯರ ಪರಂಪರೆಯನ್ನು ಮತ್ತು ಅವರ ಬಿರುದಾವಳಿಗಳನ್ನು ನೋಡಲಾಗಿದೆ. ಹಾಗೆಯೇ ಕಾಳಾಮುಖ ಮತ್ತು ಪಾಶುಪತ ಪಂಥಗಳನ್ನು ನೋಡಬೇಕಿದ್ದಾಗ ಅವರ ಬಿರುದಾವಳಿಗಳು ಮತ್ತು ಗುರುಪರಂಪರೆಯನ್ನು ನೋಡಿದ್ದರಿಂದ ಆ ಶಾಸನಗಳನ್ನು ಹೊರತಾಗಿಸಿ ಉಳಿದ ಶಾಸನಗಳಲ್ಲಿನ ವಿವರಗಳನ್ನು ಇಲ್ಲಿ ನೋಡಲಾಗಿದೆ.

ಕ್ರಿ.ಶ.೧೦೭೪ರ ಬಿಜಾಪುರ ಶಾಸನದಲ್ಲಿನ ಕಾಳಾಮುಖ ಗುರುಪರಂಪರೆಯನ್ನೇ ಅಲ್ಪ ಮಟ್ಟಿಗೆ ಬದಲಾಯಿಸಿ ಕ್ರಿ.ಶ.೧೦೭೯ರ ಮುತ್ತಗಿ[೧೨] ಶಾಸನವು ನೀಡುತ್ತದೆ. ಹಿಂದಿನ ಶಾಸನಕ್ಕೆ ಹೋಲಿಸಿದಾಗ ಬಾಳಸೂರ್ಯ ಮುನಿ ಮತ್ತು ಪರಂಪರೆಯ ಕೊನೆಯ ಮುನಿಯಾದ ಅಚಲೇಶ್ವರ ಪಂಡಿತರು ಇಲ್ಲಿ ಹೆಚ್ಚಿನದಾಗಿ ಕಂಡು ಬರುತ್ತಾರೆ. ಶಾಸನದ ಗುರು ಪರಂಪರೆ ಈ ಕೆಳಗಿನಂತಿದೆ. ಭುಜಂಗದೇವರ ಶಿಷ್ಯ ತ್ರಿಲೋಚನದೇವ ಇವರ ಶಿಷ್ಯರು ಬಾಳಸೂರ್ಯ ಇವರ ಶಿಷ್ಯ ಕಾಶ್ಮೀರ ಪಂಡಿತದೇವ ಇವರ ಶಿಷ್ಯ ಕಾಳಭೈರವ ಪಂಡಿತದೇವ ಇವರ ಶಿಷ್ಯ ಯೋಗೀಶ್ವರ ಪಂಡಿತದೇವ. ಈತನ ಶಿಷ್ಯನಾದವನೇ ಅಚಲೇಶ್ವರ ಪಂಡಿತದೇವ.

ಎರಡನೆಯ ಉಲ್ಲೇಖವು ಕ್ರಿ.ಶ.೧೧೯೫ರ ಹೆಬ್ಬಾಳ[೧೩] ಶಾಸನದಲ್ಲಿ ಕಂಡು ಬರುತ್ತದೆ. ಶಾಸನವು ಪೆರ್ಬಾಳ ಗ್ರಾಮದ ಸೋಮನಾಥ ದೇವರ ಆಚಾರ್ಯನಾಗಿದ್ದ ಶಾಂತರಾಸಿ ಪಂಡಿತನ ಶಿಷ್ಯನಾದ ಚಂದ್ರಶೇಖರ ಪಂಡಿತನನ್ನು ಉಲ್ಲೇಖಿಸುತ್ತದೆ.

ಮೂರನೆಯ ಉಲ್ಲೇಖವನ್ನು ಕ್ರಿ.ಶ.೧೧೪೭ರ ಮುತ್ತಗಿ[೧೪] ಶಾಸನವು ನೀಡುತ್ತದೆ. ಪರಮ ನೈಷ್ಠಿಕ ಸ್ಥಾನವಾದ ಶಿವಲಿಂಗ ದೇವರ ಸ್ಥಾನದಲ್ಲಿ ಲಕುಳೀಶದೇವನು ಮೊದಲ ಗುರು ಅಂದರೆ ಸ್ಥಾನಾಚಾರ್ಯನಾಗಿದ್ದನು. ಇವನ ನಂತರ ಇವನ ಶಿಷ್ಯನಾಗಿ ಕಾಶ್ಮೀರಮುನೀಂದ್ರನು ಕಂಡು ಬರುತ್ತಾನೆ. ಈ ಕಾಶ್ಮೀರ ಮುನಿಯ ಜೊತೆಗೆವಾಣಿಯು ವಿಜಾಪುರದಲ್ಲಿ ಇರಲು ಬಂದಳೆಂದು ಶಾಸನವು ವರ್ಣಿಸುತ್ತದಲ್ಲದೇ ಸೋಲನ್ನರಿಯದ ತಾರ್ಕಿಕನೂ ಆಗಿದ್ದನು ಎಂದು ವರ್ಣಿತನಾಗಿದ್ದಾನೆ. ಈತನ ಶಿಷ್ಯನಾದವನು ಕಾಲಭೈರವದೇವ. ಈತನು ವೇದಾಂತವನ್ನು ಶಾಸ್ತ್ರಾರ್ಥ ಕಳಾಬೇಧವನ್ನು ತಿಳಿದವನಾಗಿದ್ದನು. ಇವನ ಶಿಷ್ಯನಾದವನು ಯೋಗೀಶ್ವರ ದೇವರು, ಇವನ ಶಿಷ್ಯನಾದವನು ಶಿವನೇ ಯತಿ ರೂಪವನ್ನು ಧರಿಸಿ ಅವತರಿಸಿದ್ದಾನೆ ಎಂಬಂತಿದ್ದ ವರೇಶ್ವರ ದೇವರು ಈತನಿಗೆ ಶಿಷ್ಯನಾದವನು ಯೋಗೀಶ್ವರ ದೇವರು, ಈತನ ಶಿಷ್ಯನಾದವನು ಯೋಗೀಶ್ವರ ದೇವರು, ಈತನ ಶಿಷ್ಯನಾದವನೇ ಲಾಕುಳಾಗಮವನ್ನು ತಿಳಿದ ಶಿವತತ್ವವೇದಿಯಾದ ಲಕುಳೀಶ್ವರದೇವರು. ಮುಂದೆ ಇದೇ ಗುರುಪರಂಪರೆಯನ್ನು ಅದೇ ಮುತ್ತಗಿಯ ಕ್ರಿ.ಶ.೧೧೫೮ರ ಶಾಸನವು[೧೫] ನೀಡುತ್ತದೆ.

ಗುರು ಶಿಷ್ಯ ಪರಂಪರೆಯನ್ನು ಉಲ್ಲೇಖಿಸುವ ಕೊನೆಯ ಶಾಸನವು ಮನಗೂಳಿಯಲ್ಲಿ[೧೬] ಕಂಡು ಬರುತ್ತದೆ. ಶಾಸನವು ವರವ ವಿದ್ಯಾನಿಧಿಯೆಂದು ಹೆಸರಾದ ಗೌಳದೇವ ಈತನ ಶಿಷ್ಯನಾದ ಮಲೆಯಾಳ ಪಂಡಿತ ಈತನ ಶಿಷ್ಯನಾದ ಜ್ಞಾನರಾಸಿ ಈತನ ಶಿಷ್ಯನಾದ ಧರ್ಮರಾಸಿಯನ್ನು ಉಲ್ಲೇಖಿಸುತ್ತದೆ.

ಇನ್ನು ಮುನಿ ಪರಂಪರೆಯಲ್ಲಿ ಒಂದೇ ಹೆಸರಿನ ಹಲವಾರು ಮುನಿಗಳು ಬೇರೆ ಬೇರೆ ಪ್ರದೇಶದಲ್ಲಿ ಇದ್ದಿರುವುದು ಕಂಡು ಬರುವುದು ಸಾಮಾನ್ಯ ಸಂಗತಿ. ವಿಜಯಪುರ ಜಿಲ್ಲೆಯಲ್ಲಿಯೂ ಸಹ ಒಂದೇ ಹೆಸರಿನ ಹಲವು ಮುನಿಗಳು ಇದ್ದಿದುದರ ಕೆಲ ಮಾಹಿತಿಯನ್ನು ಶಾಸನಗಳು ನೀಡುತ್ತವೆ.ಅಂತಹ ಕೆಲ ಮುನಿಗಳನ್ನು ಇಲ್ಲಿ ನೋಡಲಾಗಿದೆ.

ಸಾತಿಮಯ್ಯ:

ಸುಮಾರು ಮೂರು ಶಾಸನಗಳು ಈತನನ್ನು ಉಲ್ಲೇಖಿಸುತ್ತವೆ. ಸಾತಯ್ಯ ಸಾತಿಮಯ್ಯ ಎಂದು ಶಾಸನಗಳು ಈತನನ್ನು ಗುರುತಿಸಿವೆ. ಈತನ ಮೊದಲ ಉಲ್ಲೇಖವನ್ನು ಭೂಯಾರ[೧೭] ಶಾಸನವು ನೀಡುತ್ತದೆ. ಶಾಸನವು ಈತನ್ನು ನೆಲುವಿಗೆಯ ಸಾತಯ್ಯ ಎಂದು ಕರೆದಿರುವುದರಿಂದ ಈತ ನೆಲುವಿಗೆ ಎಂಬ ಪ್ರದೇಶಕ್ಕೆ ಸೇರಿದವನು ಎಂದು ಊಹಿಸಬಹುದು. ಈತನ ಎರಡನೆಯ ಉಲ್ಲೇಖವನ್ನು ಕಡ್ಲೆವಾಡ[೧೮] ಶಾಸನವು ನೀಡುತ್ತದೆ. ಈ ಹೊತ್ತಿಗೆ ಸಾತಿಮಯ್ಯನ ಪ್ರಸಿದ್ಧಿ ಎಲ್ಲೆಡೆ ಹರಡಿತ್ತು. ಅಲ್ಲದೇ ಸಾತಿಮಯ್ಯ ಸ್ಥಾನಾಚಾರ್ಯನಾಗಿ ಪ್ರಮುಖ ಮುನಿವರ್ಯನಾಗಿ ಮಾರ್ಪಟ್ಟಿದ್ದನು. ಕಡ್ಲೆವಾಡದ ಸೋಮನಾಥ ದೇವರ ಸ್ಥಾನದ ಹಿರಿಯ ಮಠದ

ಸ್ಥಾನಾಚಾರ್ಯನಾಗಿ ಕಾರ್ಯ ನಿರ್ವಹಿಸುತ್ತಿದ್ದನು. ಶಾಸನವು ಸಾತಿಮಯ್ಯನನ್ನು ಈ ಕೆಳಗಿನಂತೆ ವರ್ಣಿಸುತ್ತದೆ. ಬುಧಜನರು ಬಯಸಿದ ಫಲವನ್ನು ದಯಪಾಲಿಸುವವನೂ, ದೀನ ಅನಾಥ ಜನರ ಜಠರಾಗ್ನಿಯನ್ನು ತಣಿಸುವವನೂ, ನಿಜಸಮಯದ ದಕ್ಷ ರಕ್ಷಕನೂ, ಪಂಡಿತ ಚೂಡಾಮಣಿಯೂ ಶಿಷ್ಟಜನ ಚಿಂತಾಮಣಿಯೂ ಆದವನು ಈ ಸಾತಿಮಯ್ಯ. ದಂಡನಾಯಕ ಸೋವಿದೇವನಿಂದ ಮಾಣಿಕೇಶ್ವರ ದೇವರ ಸೇವೆಗೆಂದು ತೆರಿಗೆಯನ್ನು ದಾನವಾಗಿ ಪಡೆದಿದ್ದಾನೆ. ಈತನ ಕೊನೆಯ ಉಲ್ಲೇಖವನ್ನು ಕ್ರಿ.ಶ.೧೨೦೪ರ ಅದೇ ಕಡ್ಲೆವಾಡದ[೧೯] ಇನ್ನೊಂದು ಶಾಸನವು ನೀಡುತ್ತದೆ. ಈ ಸಮಯಕ್ಕೆ ಸಾತಿಮಯ್ಯ ಸ್ವಯಂಭು ಸೋಮನಾಥ ದೇವರ ಸ್ಥಾನಾಚಾರ್ಯನಾಗಿದ್ದನು. ಸೋಮನಾಥ ದೇವರ ಸೇವೆಗೆಂದು ಯಾದವ ದೊರೆ ಸಿಂಗಣನು ಸಾತಿಮಯ್ಯನ ಕಾಲನ್ನು ತೊಳೆದು ಹಿಂದಿನ ದಾನಗಳನ್ನು ಪುನರ್ದತ್ತಿಯಾಗಿ ನೀಡುತ್ತಾನೆ. ಜಸವಂತ ನಾಯಕ ಎಂಬುವವ ದೇವರ ಸ್ಥಾನದಲ್ಲಿ ನಿಂತು ಮೋಸದ ವ್ಯವಹಾರವನ್ನು ಮಾಡಿದ್ದರಿಂದ ಸಾತಿಮಯ್ಯ ಅವನನ್ನು ಅಧಿಕಾರದಿಂದ ತೆಗೆಯುತ್ತಾನೆ. ಇದರಿಂದ ದೇವರ ಸ್ಥಾನದ ರಕ್ಷಣೆಯಲ್ಲಿ ಮುನಿಗಳು ನಿಷ್ಠರಾಗಿರುತ್ತಿದ್ದರು ಎಂಬುದು ತಿಳಿದು ಬರುತ್ತದೆ.

ವಾಮಶಕ್ತಿ:

ಇಬ್ಬರು ವಾಮಶಕ್ತಿಯರ ಉಲ್ಲೇಖ ವಿಜಯಪುರ ಜಿಲ್ಲೆಯಲ್ಲಿ ಕಂಡು ಬರುತ್ತಾರೆ. ಕಾಲಮಾನದಲ್ಲಿನ ದೀರ್ಘ ಅಂತರದಿಂದಾಗಿ ಇವರಿಬ್ಬರೂ ಬೇರೆ ಬೇರೆ ವಾಮಶಕ್ತಿಯರು ಎಂದು ಧೃಡವಾಗಿ ಹೇಳಬಹುದು. ವಾಮಶಕ್ತಿಯನ್ನು ಉಲ್ಲೇಖಿಸುವ ಮೊದಲ ಶಾಸನ ಕ್ರಿ.ಶ.೧೦೪೧ ರ ಕನ್ನೊಳ್ಳಿ[೨೦] ಶಾಸನವಾಗಿದೆ. ಗ್ರಾಮದ ಭೋಗೇಸ್ವರದೇವರ ಸೇವೆಗೆಂದು ಈ ವಾಮಶಕ್ತಿಗೆ ಭೂಮಿಯನ್ನು ದಾನ ನೀಡಲಾಗಿದೆ. ಇವನ ನಂತರದ ವಾಮಶಕ್ತಿಯನ್ನು ಕ್ರಿ.ಶ.೧೨೪೪ರ ಬಿಜಾಪುರ[೨೧] ಶಾಸನವು ಉಲ್ಲೇಖಿಸುತ್ತದೆ. ಮಹಾವ್ರತಿ ರಾಜಗುರುವಾದ ಈತ ಸ್ವಯಂಭು ಸಿದ್ಧನಾಥ ದೇವರ ಸೇವೆಗೆ ಬಾಗುಬಾಯಿ ಮತ್ತಿತರರಿಂದ ದಾನಗಳನ್ನು ಸ್ವೀಕರಿಸಿದ್ದಾನೆ.

ಮೂರುಜಾವಿಮುನಿ:

ಕಾಳಾಮುಖ ಮುನಿ ಪರಂಪರೆಯಲ್ಲಿ ಈತನೂ ಒಬ್ಬ ಶಾಸನಗಳನ್ನು ಗಮನಿಸಿದಾಗ ಕರ್ನಾಟಕದ ಹಲವೆಡೆ ಬೇರೆ ಬೇರೆ ಕಾಲಘಟ್ಟಗಳಲ್ಲಿ ಮೂರುಜಾವಿ ಮುನಿಗಳನ್ನು ನೋಡಬಹುದು. ವಿಜಯಪುರ ಜಿಲ್ಲೆಯಲ್ಲಿ ಎರಡು ಶಾಸನಗಳು ಈತನ್ನು ಉಲ್ಲೇಖಿಸುತ್ತವೆ. ಸಾಲವಾಡಿಗೆಯ[೨೨] ಎರಡು ಶಾಸನಗಳು ಈತನನ್ನು ಉಲ್ಲೇಖಿಸಿತ್ತವೆ. ಎರಡೂ ಶಾಸನಗಳಿಂದ ಇಬ್ಬರು ಮೂರುಜಾವಿಯರು ಕಂಡು ಬರುತ್ತಾರೆ. ಮೊದಲನೆಯ ಮೂರುಜಾವಿಯು ರಾಷ್ಟ್ರಕೂಟದೊರೆ ಶುಭತುಂಗನ ಕಾಲಾವಧಿಯ ಶಾಸನದಲ್ಲಿ ಕಂಡು ಬರುತ್ತಾನೆ. ಶಾಸನವು ಕಶ್ಮೀರಬ್ರತಿಯನ್ನು

ಮೂರುಜಾವಿಮುನಿ ಮಣಿರಾಜ ಎಂದು ಗುರುತಿಸುತ್ತದೆ. ಬಹುಶಃ ಮೂರುಜಾವಿಯು ಕಾಶ್ಮೀರಬ್ರತಿಯ ಶಿಷ್ಯನಾಗಿದ್ದಿರಬೇಕು. ನಂತರದ ಉಲ್ಲೇಖವು ಕಲ್ಯಾಣಚಾಲುಕ್ಯ ಎರಡನೆಯ ಜಗದೇಕಮಲ್ಲನ ಕಾಲಾವಧಿಗೆ ಕಂಡು ಬರುತ್ತದೆ. ಮೂರುಜಾವಿಯು ದೇವಾಲಯದ ಗರ್ಭಗೃಹಗಳನ್ನು ಇಲ್ಲಿ ಕಟ್ಟಿಸುತ್ತಾನೆ.

ಸೋವರಾಸಿ ದೇವರು:

ಐದು ಶಾಸನಗಳು ಈತನನ್ನು ಉಲ್ಲೇಖಿಸುತ್ತವೆ. ಎಲ್ಲ ಶಾಸನಗಳಲ್ಲಿ ಕಂಡು ಬರುವ ಸೋವರಾಸಿ ಒಬ್ಬನೇ ಆಗಿದ್ದಾನೆ. ಕ್ರಿ.ಶ.೧೧೮೬ ರ ಕಡ್ಲೆವಾಡ[೨೩] ಶಾಸನಗಳು ಈತನ್ನು ಉಲ್ಲೇಖಿಸುತ್ತವೆ. ಸ್ವಯಂಭು ಸೋಮನಾಥ ದೇವರ ಸ್ಥಾನದ ಮತ್ತು ಅದರ ಹಿರಿಯ ಮಠದ ಸ್ಥಾನಾಚಾರ್ಯನಾಗಿದ್ದ ಈತ ದೇವರ ಸೇವೆಗೆಂದು ಹಲವು ದಾನಗಳನ್ನು ಸ್ವೀಕರಿಸಿದ್ದಾನೆ.

ದೇವಾಲಯಗಳ ನಿರ್ಮಾಣ:

ಶೈವ ಧರ್ಮದ ಪೋಷಣೆಯನ್ನು ಗಮನಿಸಿದಾಗ ಎರಡು ವಿಧವನ್ನು ಕಾಣುತ್ತೇವೆ. ದೇವಾಲಯಗಳನ್ನು ನಿರ್ಮಿಸಿ ದಾನ ನೀಡುವುದು ಒಂದು ಬಗೆಯಾದರೆ ಇನ್ನೊಂದು ಅದಾಗಲೇ ನಿರ್ಮಿತಗೊಂಡ ದೇವಾಲಯಗಳಿಗೆ ದಾನ ನೀಡುವುದು. ಆರ್ಥಿಕವಾಗಿ ಸಬಲರಿದ್ದ ಜನರು ಅಥವಾ ಜನ ಸಮುದಾಯ ದೇವಾಲಯಗಳನ್ನು ನಿರ್ಮಿಸಿ ದಾನಗಳನ್ನು ನೀಡಿದರೆ ಆರ್ಥಿಕ ಸ್ಥಿತಿ ಅಷ್ಟೇನೂ ಉತ್ತಮವಿಲ್ಲದ ಜನರು ತಮ್ಮ ಶಕ್ತ್ಯಾನುಸಾರ ದಾನಗಳನ್ನು ನೀಡುತ್ತಿದ್ದರು. ವಿಜಯಪುರ ಜಿಲ್ಲೆಯಲ್ಲಿ ದೇವಾಲಯಗಳ ನಿರ್ಮಿತಿಯನ್ನು ಗಮನಿಸಿದರೆ ಒಟ್ಟೂ ೨೪ ಶಾಸನಗಳು ದೇವಾಲಯಗಳ ನಿರ್ಮಿತಿಯನ್ನು ನಿರ್ದೇಶಿಸುತ್ತವೆ. ದೇವಾಲಯಗಳ ನಿರ್ಮಾಣ ಕಾರ್ಯದಲ್ಲಿ ಅಧಿಕಾರಿಗಳ ಪಾಲೇ ಹೆಚ್ಚಿನ ಸಂಖ್ಯೆಯಲ್ಲಿ ಕಂಡು ಬರುತ್ತದೆ. ಅವುಗಳು ಈ ಕೆಳಗಿನಂತಿವೆ.

ಮಂಡಳೇಶ್ವರ ನಿರ್ಮಿತಿ ದೇವಾಲಯಗಳು:

ಕೇವಲ ಎರಡು ಉಲ್ಲೇಖಗಳು ಮಂಡಳೇಶ್ವರರು ನಿರ್ಮಿಸಿದ ದೇವಾಲಯಗಳನ್ನು ಉಲ್ಲೇಖಿಸುತ್ತವೆ.

ಮೊದಲ ಉಲ್ಲೇಖವನ್ನು ಕ್ರಿ.ಶ. ೧೧೮೪ರ ಬಿಜಾಪುರ[೨೪] ಶಾಸನವು ನೀಡುತ್ತದೆ. ಯಾದವರ ಮಹಾ ಮಂಡಳೇಶ್ವರನಾಗಿದ್ದ ಗೋಮರಸ ಸ್ವಯಂಭು ದೇವರನ್ನು ಪ್ರತಿಷ್ಠಾಪಿಸಿದ್ದನು ಇದಕ್ಕೆ ಆತನ ಮಗನಾದ ಬಮ್ಮಿದೇವ ಭೂಮಿಯನ್ನು ದಾನ ನೀಡಿದ್ದಾನೆ.

ಎರಡನೆಯ ಉಲ್ಲೇಖವನ್ನು ಕ್ರಿ.ಶ. ೧೨೦೮-೦೯ರ ಯರಗಲ್[೨೫] ಶಾಸನವು ನೀಡುತ್ತದೆ. ಯಾದವ ಸಿಂಘಣನ ಮಹಾಮಂಡಳೇಶ್ವರನಾದ ಸಿಳಾರ ವಂಶದ ಬೊಮ್ಮಿದೇವರಸ ಹಯಿಮೇಶ್ವರ ದೇವರ ಲಿಂಗವನ್ನು ಪ್ರತಿಷ್ಠಾಪಿಸಿ ದಾನಗಳನ್ನು ನೀಡಿದ್ದಾನೆ.

ಸಾಮಂತ ನಿರ್ಮಿತ ದೇವಾಲಯಗಳು:

ಒಂದು ಶಾಸನವಷ್ಟೇ ಸಾಮಂತರಿಂದ ನಿರ್ಮಿತವಾದ ದೇವಾಲಯಗಳನ್ನು ಉಲ್ಲೇಖಿಸುತ್ತವೆ. ಕ್ರಿ.ಶ.೧೧೦೭ರ ಕೊಂಡಗುಳಿ[೨೬] ಶಾಸನವು ಆರನೆಯ ವಿಕ್ರಮಾದಿತ್ಯನ ಸಾಮಂತನಾದ ಮತ್ತು ಹೇರಿಲಾಳದ ಸಂಧಿವಿಗ್ರಹಿಯಾದ ಕೇಶಿರಾಜ ಸೋಮೇಶ್ವರ ದೇವಾಲಯವನ್ನು ಮಾಡಿಸಿ ಭೂಮಿಯನ್ನು ದಾನ ನೀಡಿದ್ದಾನೆ.

ದಂಡನಾಯಕ ನಿರ್ಮಿತ ದೇವಾಲಯಗಳು:

ವಿಜಯಪುರದ ಶಾಸನಗಳನ್ನು ಗಮನಿಸಿದಾಗ ದಂಡನಾಯಕರೇ ಅಧಿಕ ಸಂಖ್ಯೆಯಲ್ಲಿ ದೇವಾಲಯಗಳನ್ನು ನಿರ್ಮಿಸಿರುವುದು ಕಂಡು ಬರುತ್ತದೆ. ಸುಮಾರು ೦೬ ಶಾಸನಗಳು ದಂಡನಾಯಕರಿಂದ ನಿರ್ಮಿತವಾದ ದೇವಾಲಯಗಳನ್ನು ಉಲ್ಲೇಖಿಸುತ್ತವೆ.

ಮೊದಲ ಉಲ್ಲೇಖವು ಕ್ರಿ.ಶ. ೧೦೭೪ರ ಬಿಜಾಪುರ[೨೭] ಶಾಸನದಲ್ಲಿ ಕಂಡು ಬರುತ್ತದೆ. ಎರಡನೆಯ ಸೋಮೇಶ್ವರನ ದಂಡನಾಯಕನಾದ ನಾಕಿಮಯ್ಯ ತಾನು ತರ್ದವಾಡಿ ಸಾಸಿರವನ್ನು ಆಳುತ್ತಿರಬೇಕಾದಾಗ ಸ್ವಯಂಭು ಸಿದ್ದೇಶ್ವರ ದೇವಾಲಯವನ್ನು ನಿರ್ಮಿಸಿ ಅಲ್ಲಿನ ತಪೋಧನರ ಆಹಾರ ಭಟ್ಟೆ ಮುಂತಾದ ವೆಚ್ಚಕ್ಕೆಂದು ಭೂಮಿಯನ್ನು ದೇವಾಲಯದ ಆಚಾರ್ಯನಾದ ಯೋಗೀಶ್ವರ ಪಂಡಿತನ ಕಾಲನ್ನು ತೊಳೆದು ದಾನ ನೀಡುತ್ತಾನೆ.

ಎರಡನೆಯ ಉಲ್ಲೇಖವನ್ನು ಕ್ರಿ.ಶ. ೧೧೦೦ ರ ಮಲಘಾಣ[೨೮] ಶಾಸನವು ನೀಡುತ್ತದೆ. ಆರನೆಯ ವಿಕ್ರಮಾದಿತ್ಯನು ಶಿಲಾಹಾರ ಭೋಜನ ವಿರುದ್ಧ ಯುದ್ಧಕ್ಕೆ ಹೋದಂತ ಸಂದರ್ಭದಲ್ಲಿ ಅವನ ದಂಡನಾಯಕನಾದ ವಾಮದೇವ ತನ್ನ ಹೆಸರಿನಲ್ಲಿ ವಾಮೇಶ್ವರ ದೇವಾಲಯವನ್ನು ಸ್ಥಾಪಿಸಿ ಆ ದೇವರ ಧೂಪ ದೀಪ ನೈವೇದ್ಯಕ್ಕೆಂದು ಭೂಮಿಯನ್ನು ದಾನ ನೀಡಿದ್ದಾನೆ.

ಮೂರನೆಯ ಉಲ್ಲೇಖ ಕ್ರಿ.ಶ. ೧೧೨೦ರ ಬಿಜಾಪುರ[೨೯] ಶಾಸನದಲ್ಲಿ ಕಂಡು ಬರುತ್ತದೆ. ಸಿಂದಗೆಯ ಪ್ರಭು ದಂಡನಾಯಕನಾದ ಸೋವರಸ ಮೂಲಸ್ಥಾನ ದೇವಾಲಯವನ್ನು ಕಟ್ಟಿಸುತ್ತಾನೆ. ಆ ದೇವರ ಪೂಜೆ ಪುನಸ್ಕಾರ ಜಯಕರ್ಣದೇವ ಮತ್ತು ಸಿಂಗರಸರು ಭೂಮಿ, ಅಂಗಡಿ, ಮತ್ತು ಕೆಲವು ತೆರಿಗೆಯನ್ನು ದಾನವಾಗಿ ನೀಡುತ್ತಾರೆ.

ನಾಲ್ಕನೆಯ ಉಲ್ಲೇಖವನ್ನು ದೇವರಗೆಣ್ಣೂರು[೩೦] ಶಾಸನವು ನೀಡುತ್ತದೆ. ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ಅಗ್ರಹಾರ ಪ್ರಭುವಾಗಿದ್ದ ವೈಜರಸ ತನ್ನ ಹೆಸರಿನಲ್ಲಿ ವೈಜೇಶ್ವರ ದೇವಾಲಯವನ್ನು ನಿರ್ಮಿಸಿ ಎಣ್ಣೆ ಭೂಮಿ ಮತ್ತು ಬಾವಿಯನ್ನು ದಾನ ನೀಡುತ್ತಾನೆ. ಈ ಶಾಸನದಲ್ಲಿ ವೈಜರಸ ಅಗ್ರಹಾರ ಪ್ರಭುವಾಗಿ ಕಂಡು ಬಂದರೂ ಬೇರೆ ಪ್ರದೇಶದ ಶಾಸನಗಳಲ್ಲಿ ಆತ ದಂಡನಾಯಕನಾಗಿ ಕಂಡು ಬರುತ್ತಾನೆ.

ಐದನೆಯ ಉಲ್ಲೇಖವನ್ನು ಕ್ರಿ.ಶ. ೧೧೮೯ರ ಪೀರಾಪುರ[೩೧] ಶಾಸನವು ನೀಡುತ್ತದೆ. ದಂಡನಾಯಕನಾದ ನನ್ನರಸ ತನ್ನ ಹೆಸರಿನಲ್ಲಿ ಮಾಡಿಸಿದ ನನ್ನೇಶ್ವರ ಸದೇವರ ಪೂಜೆ ನಂದಾದೀವಿಗೆ ನೈವೇದ್ಯಕ್ಕೆಂದು ದೇವರ ಸ್ಥಾನಾಚಾರ್ಯನಾದ ಲೋಕಜೀಯನಿಗೆ ಭೂಮಿಯನ್ನು ದಾನ ನೀಡುತ್ತಾನೆ.

ಆರನೆಯ ಉಲ್ಲೇಖವನ್ನು ಬಿಜಾಪುರ[೩೨] ಶಾಸನವು ನೀಡುತ್ತದೆ.ದಂಡನಾಯಕನಾದ ವಾಸಿಷ್ಠ ಗೋತ್ರದ ಸಾಯಿದೇವ ದೇವಾಲಯವೊಂದನ್ನು ಸ್ಥಾಪಿಸಿ ಅದರಲ್ಲಿ ರೇಚೇಶ್ವರ ಮತ್ತು ತ್ರಿಪುರುಷೇಶ್ವರ ದೇವರನ್ನು ಪ್ರತಿಷ್ಠಾಪಿಸುತ್ತಾನೆ.

ಇತರ ಅಧಿಕಾರಿ ವರ್ಗದವರಿಂದ ನಿರ್ಮಾಣವಾದ ದೇವಾಲಯಗಳು:

ಮಂಡಳೇಶ್ವರ ಮತ್ತು ಸಾಮಂತರಿಗೆ ಹೊರತಾಗಿ ಇನ್ನು ಕೆಲ ಅಧಿಕಾರಿಗಳು ನಿರ್ಮಿಸಿದ ದೇವಾಲಯಗಳ ಉಲ್ಲೇಖ ಶಾಸನಗಳಲ್ಲಿ ಈ ಕೆಳಗಿನಂತೆ ಕಂಡು ಬರುತ್ತದೆ.

ರಾಷ್ಟ್ರಕೂಟ ದೊರೆ ಶುಭತುಂಗನ ಆಳ್ವಿಕೆಯ ಕಾಲಕ್ಕೆ ಮಾನ್ಯಖೇಟದ ತಳಾರನಾದ ಹೊರೆಯಮನು ತನ್ನ ಹೆಸರಿನಲ್ಲಿ ಹೊರಯಮೇಶ್ವರ ದೇವಾಲಯವನ್ನು ನಿರ್ಮಿಸುತ್ತಾನೆ. ಇದಕ್ಕೆ ಶುಭತುಂಗನು ಭೂಮಿಯನ್ನ ದಾನ ನೀಡಿದ್ದಾನೆ.[೩೩]

ಕ್ರಿ.ಶ. ೧೧೨೮ರ ಇಂಗಳೇಶ್ವರ[೩೪] ಶಾಸನವು ಮೂರನೆಯ ಸೋಮೇಶ್ವರನ ದಂಡನಾಯಕ ಸಾಯಿಪಯ್ಯನ ಶ್ರೀಕರಣನಾದ ನೀಲಕಂಠ ನಾಯಕನನ್ನು ಉಲ್ಲೇಖಿಸುತ್ತದೆ. ಈತ ಇಂಗಳೇಶ್ವರ ಅಗ್ರಹಾರದಲ್ಲಿ ನೀಲಕಂಠೇಶ್ವರ ದೇವರ ತ್ರಿಕೂಟಾಲಯವನ್ನು ನಿರ್ಮಿಸಿ ಕಳಚೂರಿ ವಂಶದ ಹೆರ್ಮಾಡಿರಾಯನಿಂದ ದಾನಗಳನ್ನು ನೀಡಿಸುತ್ತಾನೆ.

ಇನ್ನು ಇತರ ಅಧಿಕಾರಿಗಳಿಂದ ನಿರ್ಮಿತವಾದ ದೇವಾಲಯಗಳ ಕೊನೆಯ ಉಲ್ಲೇಖವನ್ನು ಕ್ರಿ.ಶ.೧೧೮೪ರ ಮಿಣಜಿಗಿ[೩೫] ಶಾಸನವು ನೀಡುತ್ತದೆ. ಹಗರಟ್ಟಿಗೆ-೩೦೦ ರ ಗ್ರಾಮವಾದ ಮಿಣಂಜಿಗೆಯ ಮಹಾಪ್ರಭುವಾಗಿದ್ದ ಮಾಚಿರಾಜನು ತ್ರಿಕೂಟಾಚಲವನ್ನು ನಿರ್ಮಿಸಿ ಅದರಲ್ಲಿ ಮಾಚೇಶ್ವರ, ಮಲ್ಲಿಕಾರ್ಜುನ, ಮತ್ತು ಮಾಧವ ದೇವರನ್ನು ಪ್ರತಿಷ್ಠಾಪಿಸುತ್ತಾನೆ.

ವ್ಯಾಪಾರಿ ವರ್ಗ ನಿರ್ಮಿಸಿದ ದೇವಾಲಯಗಳು:

ದಾನ ಶಾಸನಗಳನ್ನು ಗಮನಿಸಿದಾಗ ಶೈವ ಧರ್ಮವನ್ನು ಪೋಷಿಸಿದವರಲ್ಲಿ ಅಗ್ರಸ್ಥಾನದಲ್ಲಿ ಕಂಡು ಬರುವುದೇ ವ್ಯಾಪಾರಿ ವರ್ಗ. ಮಧ್ಯ ಕಾಲೀನ ಕರ್ನಾಟಕದ ಸಂದರ್ಭದಲ್ಲಂತೂ ವ್ಯಾಪಾರಿ ವರ್ಗದವರೇ ಶೈವ ಧರ್ಮವನ್ನು ಪೋಷಿಸಿರುವುದು ಕಂಡು ಬರುತ್ತದೆ. ಕೇವಲ ದಾನ ನೀಡುವುದಕ್ಕೆ ಸೀಮಿತವಾಗದೇ ದೇವಾಲಯಗಳನ್ನು ನಿರ್ಮಿಸಿ ತಮ್ಮ ಕಲಾ ನೈಪುಣ್ಯವನ್ನು ವ್ಯಾಪಾರಿ

ವರ್ಗ ತೋರಿಸಿದೆ. ಎರಡು ಉಲ್ಲೇಖಗಳು ವ್ಯಾಪಾರಿ ವರ್ಗದವರಿಂದ ನಿರ್ಮಿತವಾದ ದೇವಾಲಯಗಳನ್ನು ತೋರಿಸುತ್ತವೆ.

ಮೊದಲ ಉಲ್ಲೇಖವು ಕ್ರಿ.ಶ. ೧೧೬೪ರ ಕನ್ನೊಳ್ಳಿ[೩೬] ಶಾಸನವು ನೀಡುತ್ತದೆ. ವಡ್ಡವ್ಯವಹಾರಿಯಾದ ಬಾಚಿಸೆಟ್ಟಿ ಮತ್ತು ನಾಗಿಸೆಟ್ಟಿಯರು ಚಿಕ್ಕೇಶ್ವರ ಮತ್ತು ನಾಗೇಶ್ವರ ದೇವಾಲಯವನ್ನು ನಿರ್ಮಿಸುತ್ತಾರೆ. ಈ ಸಮಯದಲ್ಲಿ ಊರಪ್ರಭು, ಮುಮ್ಮರಿದಂಡ, ವಿವಿಧ ಸೆಟ್ಟಿಯರು ಸೇರಿ ತೆರಿಗೆಯನ್ನು ದಾನವಾಗಿ ನೀಡಿದ್ದಾರೆ.

ಎರಡನೆಯ ಉಲ್ಲೇಖವನ್ನು ಕ್ರಿ.ಶ. ೧೨೨೩ರ ಕೊಲ್ಹಾರ[೩೭] ಶಾಸನವು ನೀಡುತ್ತದೆ. ಕೊಲ್ಹಾರದಲ್ಲಿ ಕುರುಬ ಸೇಣಿಗರು, ಕೊತ್ತಳಿಗಳು, ಮಹಾಜನರ ಜೊತೆಗೂಡಿ ಮಲ್ಲಿಕಾರ್ಜುನ ದೇವರನ್ನು ಪ್ರತಿಷ್ಠಾಪಿಸಿ ದೇವರ ಸೇವೆಗೆಂದು ಭೂಮಿಯನ್ನು ದಾನ ನೀಡುತ್ತಾರೆ.

ಇತರರು ನಿರ್ಮಿಸಿದ ದೇವಾಲಯಗಳು:

ಮೇಲಿನ ಅಧಿಕಾರಿ ವರ್ಗವಲ್ಲದೇ ಸಮಾಜದ ಇನ್ನಿತರ ವರ್ಗದವರೂ ಸಹ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಮಹಿಳೆಯರು, ಮುನಿಗಳು, ಅಧಿಕಾರಿ ವರ್ಗದ ಕುಟುಂಬದವರು ಹೀಗೆ ಬೇರೆ ಬೇರೆ ಜನರು ನಿರ್ಮಿಸಿದ ದೇವಾಲಯಗಳನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

ಕ್ರಿ.ಶ. ೧೦೩೨ರ ಬಿದಿರಕುಂದಿ[೩೮] ಶಾಸನವು ಇಸರಮಯ್ಯ ಎಂಬುವವನು ಶಿವಾಲಯವೊಂದನ್ನು ಕಟ್ಟಿಸಿದುದನ್ನು ಉಲ್ಲೇಖಿಸುತ್ತದೆ. ಈ ಶಿವಾಲಯಕ್ಕೆ ಯಾದವ ನಾರಾಯಣ ಎಂಬ ಬಿರುದು ಧರಿಸಿದ್ದ ನಾಗವರ್ಮರಸ ಭೂಮಿಯನ್ನು ದಾನ ನೀಡಿದ್ದಾನೆ.

ಕ್ರಿ.ಶ. ೧೦೭೯ರ ಮುತ್ತಗಿ[೩೯] ಶಾಸನವು ಗೋವಿಂದದೇವ ಎಂಬುವವನ ಉಲ್ಲೇಖವನ್ನು ನೀಡುತ್ತದೆ. ಈತ ಆರನೆಯ ವಿಕ್ರಮಾದಿತ್ಯನ ಗುರುವಾದ ವಿಷ್ಣುಭಟ್ಟನ ಮಗ. ಈತ ಮುತ್ತಗೆಯಲ್ಲಿ ರಾಮೇಶ್ವರ ದೇವರನ್ನು ಪ್ರತಿಷ್ಠಾಪಿಸಿ ದೇವರ ರಂಗಭೋಗ, ಜೀರ್ಣೋದ್ಧಾರ, ತಪೋಧನ ವಿದ್ಯಾರ್ಥಿಗಳ ಊಟಕ್ಕೆಂದು ಯೋಗೀಶ್ವರ ಪಂಡಿತರ ಕಾಲನ್ನ ತೊಳೆದು ಭೂಮಿಯನ್ನು ದಾನ ನೀಡುತ್ತಾನೆ.

ಕ್ರಿ.ಶ. ೧೧೪೭ರ ಅದೇ ಮುತ್ತಗಿ[೪೦] ಗ್ರಾಮದ ಶಾಸನವು ಎರಡನೆಯ ಜಗದೇಕಮಲ್ಲನ ದಂಡನಾಯಕನಾದ ಬರ್ಮಣ ದಂಡನಾಯಕನ ಮಗನಾದ ಶಿವರಾಜನನ್ನು ಉಲ್ಲೇಖಿಸುತ್ತದೆ. ಶಿವರಾಜನು ತ್ರಿಕೂಟಾಚಲವನ್ನು ನಿರ್ಮಿಸಿ ಸ್ಥಾನಾಚಾರ್ಯನಾದ ಲಕುಳೀಶ್ವರ ಪಂಡಿತನ ಕಾಲನ್ನು ತೊಳೆದು ಭೂಮಿಯನ್ನು ದಾನವಾಗಿ ನೀಡುತ್ತಾನೆ.

ಸಾಲವಾಡಗಿಯ[೪೧] ಶಾಸನವು ಮೂರುಜಾವಿ ಮುನಿಯನ್ನು ಉಲ್ಲೇಖಿಸುತ್ತದೆ. ಈತ ಹೊರೆಯಮನು ನಿರ್ಮಿಸಿದ ಹೊರಯಮೇಶ್ವರ ದೇವಾಲಯದಲ್ಲಿ ಸಿದ್ದೇಶ್ವರ ಮತ್ತು ಪಾಫವಿನಾಶಿ ದೇವರಿಗಾಗಿ ಗರ್ಭಗೃಹಗಳನ್ನು ನಿರ್ಮಿಸುತ್ತಾನೆ. ವಿಜಯಪುರ ಜಿಲ್ಲೆಯಲ್ಲಿ ಮುನಿಯೋರ್ವನಿಂದ ದೇವಾಲಯವು ನಿರ್ಮಿತವಾದ ಉದಾಹರಣೆ ದೊರೆಯುವುದು ಇದೊಂದೇ ಆಗಿದೆ.

ಹಂದರಗಲ್[೪೨] ಶಾಸನವು ತಂತ್ರಪಾಲ ತೊಂಡಯನನ್ನು ಉಲ್ಲೇಖಿಸುತ್ತದೆ. ಈತ ಎರಡನೆಯ ಜಗದೇಕಮಲ್ಲನ ಸಾಮಂತನಾದ ಕುಮಾರ ಹೆಮ್ಮಾಡಿಯ ತಂತ್ರಪಾಲನಾಗಿ ಕಾರ್ಯ ನಿರ್ವಹಿಸುತ್ತಿದ್ದವನು. ಈತನ ಸಹೋದರನಾದ ಬಮ್ಮರಸ ಮತ್ತು ಆತನ ಪತ್ನಿಯಾದ ಬಾಗಿಯಬ್ಬರಸಿಯರು ತ್ರಿಕೂಟಾಚಲವನ್ನು ನಿರ್ಮಿಸಿ ಭೂಮಿಯನ್ನು ದಾನವಾಗಿ ನೀಡಿದ್ದಾರೆ.

ಕ್ರಿ.ಶ. ೧೧೭೦ರ ನಿಡೋಣಿ[೪೩] ಶಾಸನವು ವೀರಣ ಎಂಬುವನನ್ನು ಉಲ್ಲೇಖಿಸುತ್ತದೆ ಈತ ಗವರೇಶ್ವರ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸುತ್ತಾನೆ. ಈ ಸಮಯದಲ್ಲಿ ಬಂಧುದೇವ ಎಂಬುವವನು ಸೌಪರ್ಣದ ಆಚರಣೆಗೆಂದು ಹಣವನ್ನೂನ ನೀಡುತ್ತಾನೆ.

ಕ್ರಿ.ಶ. ೧೧೭೬ರ ಇಂಗಳೇಶ್ವರ[೪೪] ಶಾಸನವು ಮಂತ್ರಿ ಹೀಳಚಂದ್ರನ ಮಗನಾದ ಹೀಳಸೋಮನನ್ನು ಉಲ್ಲೇಖಿಸುತ್ತಿದ್ದು, ಈತ ಇಂಗಳೇಶ್ವರದಲ್ಲಿ ಸೋಮನಾಥ ದೇವಾಲಯವನ್ನು ನಿರ್ಮಿಸುತ್ತಾನೆ. ಅಲ್ಲದೇ ದೇವರ ಸೇವೆಗೆಂದು ಕೊಡಗನೂರು ಎಂಬ ಗ್ರಾಮವನ್ನು ಕ್ರಯಕ್ಕೆ ಕೊಂಡು ದಾನ ನೀಡುತ್ತಾನೆ.

ಕ್ರಿ.ಶ.೧೧೮೭ರ ಕುಮಟಗಿ[೪೫] ಹಲವಾರು ಜನರು ಸೇರಿ ದೇವಾಲಯ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದನ್ನು ಉಲ್ಲೇಖಿಸುತ್ತದೆ. ಅಗ್ರಹಾರ ಕುಮ್ಮಟಿಗೆಗೆ ಸೇರಿದ ಮಹಾಜನರು, ಪ್ರಭು, ಮೂಲಿಗರು, ಎಂಟು ಹಿಟ್ಟು ಸೇರಿ ಚಿನ್ನ ಬ್ರಹ್ಮೇಶ್ವರ ದೇವರನ್ನು ಪುನರ್ ಪ್ರತಿಷ್ಠಾಪಿಸಿ ಭೂಮಿ ಮತ್ತು ನಿವೇಶನವನ್ನು ದಾನ ನೀಡಿದ್ದಾರೆ.

ಇತರರು ನಿರ್ಮಿಸಿದ ದೇವಾಲಯವನ್ನು ಉಲ್ಲೇಖಿಸುವ ಕೊನೆಯ ಶಾಸನವೆಂದರೆ ಅದು ಕ್ರಿ.ಶ.೧೨೧೦ ರ ಸರೂರು[೪೬] ಸಿದ್ದರಾಮ ಎಂಬುವವನು ಮಲ್ಲಿಕಾರ್ಜುನ ದೇವರನ್ನು ಪ್ರತಿಷ್ಠಾಪಿಸಿದುದನ್ನು ಉಲ್ಲೇಖಿಸಿದೆ.

ನಿರ್ಮಾಣಗೊಂಡ ದೇವಾಲಯಗಳನ್ನು ಉಲ್ಲೇಖಿಸುವ ಶಾಸನಗಳ ಯಾದಿ:

ಅ.ಸಂ	ಗ್ರಾಮ	ತಾಲೂಕು	ಕಾಲ	ದೇವಾಲಯ	ನಿರ್ಮಿಸಿದವರು	ಉಲ್ಲೇಖ
೦೧	ಸಾಲವಾಡಗಿ	ಬಾಗೇವಾಡಿ	-	ಹೊರಯಮೇಶ್ವರ	ಹೊರೆಯಮ	ಕ.ವಿ.ವಿ.ಶಾ.ಸಂ-೧೦ ಸಂ-೫೯
೦೨	ಬಿದಿರಕುಂದಿ	ಮುದ್ದೇಬಿಹಾಳ	ಕ್ರಿ.ಶ.೧೦೩೨	ಶಿವಾಲಯ	ಇಸರಮಯ್ಯ	ಕ.ವಿ.ವಿ.ಶಾ.ಸಂ-೧೦ ಸಂ-೦೧

೦೩	ಬಿಜಾಪುರ	ಬಿಜಾಪುರ	ಕ್ರಿ.ಶ.೧೦೭೪	ಸಿದ್ದೇಶ್ವರ	ನಾಕಿಮಯ್ಯ	ಕ.ಪಿ.ಪಿ.ಶಾ.ಸಂ-೧೦ ಸಂ-೦೭
೦೪	ಮುತ್ತಗಿ	ಬಾಗೇವಾಡಿ	ಕ್ರಿ.ಶ.೧೦೭೯	ರಾಮೇಶ್ವರ	ಗೋಪಿಂದದೇವ	ಕ.ಪಿ.ಪಿ.ಶಾ.ಸಂ-೧೦ ಸಂ-೪೮
೦೫	ಮಲಘಾಣ	ಸಿಂದಗಿ	ಕ್ರಿ.ಶ.೧೧೦೦	ವಾಮೇಶ್ವರ	ವಾಮದೇವ	ಕ.ಪಿ.ಪಿ.ಶಾ.ಸಂ-೧೦ ಸಂ-೬೧
೦೬	ಕೊಂಡಗುಳಿ	ಸಿಂದಗಿ	ಕ್ರಿ.ಶ.೧೧೦೭	ಸೋಮೇಶ್ವರ	ಕೇಶಿರಾಜ	ಕ.ಪಿ.ಪಿ.ಶಾ.ಸಂ-೧೦ ಸಂ-೧೦೦
೦೭	ಬಿಜಾಪುರ	ಬಿಜಾಪುರ	ಕ್ರಿ.ಶ.೧೧೨೦	ಮೂಲಸ್ಥಾನ	ಸೋವರಸ	ಕ.ವಿ.ವಿ.ಶಾ.ಸಂ-೧೦ ಸಂ-೩೧
೦೮	ಹಿರೇ ಬೇಪಿನೂರು	ಇಂಡಿ	ಕ್ರಿ.ಶ.೧೧೨೪	ಭೋಗೇಶ್ವರ	–	ಕ.ಪಿ.ಪಿ.ಶಾ.ಸಂ-೧೦ ಸಂ-೭೮
೦೯	ದೇವರ ಗೆಣ್ಣೂರು	ಬಿಜಾಪುರ	೧೧ನೆಯ ಶತಮಾನ	ವೈಜೇಶ್ವರ	ವೈಜರಸ	ಕ.ಪಿ.ಪಿ.ಶಾ.ಸಂ-೧೦ ಸಂ-೭೬
೧೦	ಇಂಗಳೇಶ್ವರ	ಬಾಗೇವಾಡಿ	ಕ್ರಿ.ಶ.೧೧೨೮	ನೀಲಕಂಠೇಶ್ವರ	ನೀಲಕಂಠ ನಾಯಕ	ಕ.ವಿ.ವಿ.ಶಾ.ಸಂ-೧೦ ಸಂ-೦೧
೧೧	ಮುತ್ತಗಿ	ಬಾಗೇವಾಡಿ	ಕ್ರಿ.ಶ.೧೧೪೭	ಶಿವಲಿಂಗ	ಶಿವರಾಜ	ಕ.ವಿ.ವಿ.ಶಾ.ಸಂ-೧೦ ಸಂ-೫೧
೧೨	ಹಂದರಗಲ್	ಮುದ್ದೇಬಿಹಾಳ	–	ತೊಂಡೇಶ್ವರ (ತ್ರಿಕೂಟ)	ಬಮ್ಮರಸ ಬಾಗಿಯಬ್ಬರಸಿ	ಕ.ಪಿ.ಪಿ.ಶಾ.ಸಂ-೧೦ ಸಂ-೧೫
೧೩	ಸಾಲವಾಡಗಿ	ಬಾಗೇವಾಡಿ	೧೨ನೆಯ ಶತಮಾನ	ಸಿದ್ದೇಶ್ವರ ಪಾಪವಿನಾಶಿ	ಮೂರುಜಾವಿ ಮುನಿ	ಕ.ವಿ.ವಿ.ಶಾ.ಸಂ-೧೦ ಸಂ-
೧೪	ಕನ್ನೊಳ್ಳಿ	ಸಿಂದಗಿ	ಕ್ರಿ.ಶ.೧೧೬೪	ಚಿಕ್ಕೇಶ್ವರ ನಾಗೇಶ್ವರ	ಬಾಚಿಸೆಟ್ಟಿ ನಾಗಿಸೆಟ್ಟಿ	ಕ.ಪಿ.ಪಿ.ಶಾ.ಸಂ-೧೦ ಸಂ-೧೬
೧೫	ನಿಡೋಣಿ	ಬಿಜಾಪುರ	ಕ್ರಿ.ಶ.೧೧೭೦	ಗವರೇಶ್ವರ	ವೀರಣ್ಣ	ಕ.ವಿ.ವಿ.ಶಾ.ಸಂ-೧೦ ಸಂ-೭೮
೧೬	ಇಂಗಳೇಶ್ವರ	ಬಾಗೇವಾಡಿ	ಕ್ರಿ.ಶ.೧೧೭೬	ಸೋಮನಾಥ	ಹೀಳಸೋಮ	ಕ.ವಿ.ವಿ.ಶಾ.ಸಂ-೧೦ ಸಂ-೦೩
೧೭	ಮಿಣಜಗಿ	ಮುದ್ದೇಬಿಹಾಳ	ಕ್ರಿ.ಶ.೧೧೮೪	ಮಾಚೇಶ್ವರ ಮಲ್ಲಿಕಾರ್ಜುನ ಮಾಧವ	ಮಾಚಿರಾಜ	ಕ.ವಿ.ವಿ.ಶಾ.ಸಂ-೧೦ ಸಂ-೩೭
೧೮	ಬಿಜಾಪುರ	ಬಿಜಾಪುರ	ಕ್ರಿ.ಶ.೧೧೮೪	ಸ್ವಯಂಭು	ಗೋಮರಸ	ಕ.ವಿ.ವಿ.ಶಾ.ಸಂ-೧೦ ಸಂ-೦೨
೧೯	ಕುಮಟಗಿ	ಬಿಜಾಪುರ	ಕ್ರಿ.ಶ.೧೧೮೭	ಚಿನ್ನ ಬ್ರಹ್ಮೇಶ್ವರ	ಮಹಾಜನ, ಪ್ರಭು, ಎಂಟುಹಿಟ್ಟು	ಕ.ವಿ.ವಿ.ಶಾ.ಸಂ-೧೦ ಸಂ-೬೪

೨೦	ಪೀರಾಪುರ	ಮುದ್ದೇಬಿಹಾಳ	ಕ್ರಿ.ಶ.೧೧೮೯	ನನ್ನೇಶ್ವರ	ನನ್ನರಸ	ಕ.ಪಿ.ಪಿ.ಶಾ.ಸಂ-೧೦ ಸಂ-೪೮
೨೧	ಯರಗಲ್	ಸಿಂದಗಿ	ಕ್ರಿ.ಶ.೧೨೦೮	ಹಾಯಿಮೇಶ್ವರ	ಬೊಮ್ಮದೇವರಸ	ಕ.ಪಿ.ಪಿ.ಶಾ.ಸಂ-೧೦ ಸಂ-೦೨
೨೨	ಸರೂರು	ಮುದ್ದೇಬಿಹಾಳ	ಕ್ರಿ.ಶ.೧೨೧೦	ಮಲ್ಲಿಕಾರ್ಜುನ	ಸಿದ್ಧರಾಮ	ಕ.ಪಿ.ಪಿ.ಶಾ.ಸಂ-೧೦ ಸಂ-೫೮
೨೩	ಕೊಲ್ಹಾರ	ಬಾಗೇವಾಡಿ	ಕ್ರಿ.ಶ.೧೨೨೩	ಮಲ್ಲಿಕಾರ್ಜುನ	ಮಹಾಜನ, ಕುರುಬಸೇಣಿಗ ಕೊತ್ತಳಿ	ಕ.ವಿ.ವಿ.ಶಾ.ಸಂ-೧೦ ಸಂ-೭೪
೨೪	ಬಿಜಾಪುರ	ಬಿಜಾಪುರ	ಕ್ರಿ.ಶ.೧೨೭೮	ರೇಚೇಶ್ವರ ತ್ರೈಪುರುಷೇಶ್ವರ	ಸಾಯಿದೇವ	ಕ.ವಿ.ವಿ.ಶಾ.ಸಂ-೧೦ ಸಂ-೦೩

ಶೈವ ಧರ್ಮದ ದಾನಿಗಳು:

ಶೈವ ಧರ್ಮವು ತಾನೇ ತಾನಾಗಿ ಬೆಳೆದು ಬಂದುದಲ್ಲ ಕಾಲದಿಂದ ಕಾಲಕ್ಕೆ ಸಿಕ್ಕ ಪ್ರೋತ್ಸಾಹ ಸಹಾಯದಿಂದ ಬೆಳೆದು ಬಂದ ಧರ್ಮವಾಗಿದೆ. ಆಳರಸರು, ಅಧಿಕಾರಿಗಳು, ವ್ಯಾಪಾರಿ ವರ್ಗ, ಸಾಮಾನ್ಯ ಜನತೆ ಹೀಗೆ ಸಮಾಜದ ಎಲ್ಲ ಸ್ಥರಗಳ ಜನರಿಂದ ಸಿಕ್ಕ ಪ್ರೋತ್ಸಾಹದಿಂದಾಗಿ ಶೈವ ಧರ್ಮವು ಪ್ರಬಲವಾಗಿ ಬೆಳೆದು ಬರಲು ಸಾಧ್ಯವಾಯಿತು. ವಿಜಯಪುರ ಜಿಲ್ಲೆಯಲ್ಲಿ ಶೈವ ಧರ್ಮವನ್ನು ಪ್ರೋತ್ಸಾಹಿಸಿದವರನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

ರಾಜರ ದಾನಗಳು:

ವಿಜಯಪುರ ಜಿಲ್ಲೆಯ ಶಾಸನಗಳನ್ನು ಗಮನಿಸಿದಾಗ ಸಾಮ್ರಾಜ್ಯಶಾಹಿ ಅರಸರು ಶೈವ ಧರ್ಮಕ್ಕೆ ನೇರವಾಗಿ ದಾನ ನೀಡಿದುದು ಕಡಿಮೆಯೇ, ಕೇವಲ ಬೆರಳೆಣಿಕೆಯಷ್ಟು ಶಾಸನಗಳು ರಾಜರು ಶೈವ ಧರ್ಮಕ್ಕೆಂದು ದಾನ ನೀಡಿದುದನ್ನು ಉಲ್ಲೇಖಿಸುತ್ತವೆ. ಅವುಗಳನ್ನು ಈ ಕೆಳಗಿನಂತೆ ನೋಡಬಹುದು.

ಸಾಲವಾಡಗಿ[೪೭] ಶಾಸನವು ರಾಷ್ಟ್ರಕೂಟ ದೊರೆ ಶುಭತುಂಗನ್ನು ಉಲ್ಲೇಖಿಸುತ್ತದೆ. ಈತ ಮಾನ್ಯಖೇಟದ ತಳಾರನಾದ ಹೊರೆಯಮನು ತನ್ನ ಹೆಸರಿನಲ್ಲಿ ಹೊರಯಮೇಶ್ವರ ದೇವಾಲಯವನ್ನು ನಿರ್ಮಿಸಿದಾಗ ದೇವರ ಸೇವೆಗೆಂದು ಭೂಮಿಯನ್ನು ದಾನ ನೀಡುತ್ತಾನೆ.

ಮುಂದೆ ರಾಜರ ದಾನದ ಉಲ್ಲೇಖ ಕಂಡು ಬರುದು ಕಲ್ಯಾಣದ ಚಾಲುಕ್ಯರ ಆಳ್ವಿಕೆಯ ಕಾಲಕ್ಕೆ. ಸುಮಾರು ೩ ಶಾಸನಗಳು ಕಲ್ಯಾಣದ ಚಾಲುಕ್ಯ ಅರಸರ ದಾನಗಳನ್ನು ಉಲ್ಲೇಖಿಸುತ್ತವೆ.

ವಿಜಯಪುರ ಜಿಲ್ಲೆಯಲ್ಲಿ ಕಲ್ಯಾಣದ ಚಾಲುಕ್ಯರಷ್ಟು ಬೇರಿನ್ನಾವ ದೊರೆಗಳು ಶೈವ ಧರ್ಮವನ್ನು ಪೋಷಿಸಿರುವುದನ್ನು ಕಾಣುವುದಿಲ್ಲ.

ಕಡ್ಲೆವಾಡ[೪೮] ಶಾಸನವು ಚಾಲುಕ್ಯ ದೊರೆಯಾದ ಆರನೆಯ ವಿಕ್ರಮಾದಿತ್ಯನು ಜಯಂತಿಪುರದಿಂದ ಆಳ್ವಿಕೆ ಮಾಡುತ್ತಿದ್ದಾಗ ತಾನು ಮಹಾಸಾಮಂತ ಸಿಂಗರಸನ ಜೊತೆಗೂಡಿ ಕಡಲೆವಾಡದ ಸ್ವಯಂಭೂ ಸೋಮೇಶ್ವರ ದೇವರ ಸೇವೆಗೆಂದು ಸೆಂಬೆವಾಡ ಗ್ರಾಮದ ಉಭಯಸ್ವಾಮ್ಯವನ್ನು ದಾನ ನೀಡಿದುದನ್ನು ಉಲ್ಲೇಖಿಸುತ್ತದೆ.

ಅದೇ ಕಡ್ಲೆವಾಡದ ಇನ್ನೊಂದು ಶಾಸನವು[೪೯] ಮೂರನೆಯ ಸೋಮೇಶ್ವರನ ದಾನವನ್ನು ಉಲ್ಲೇಖಿಸುತ್ತದೆ. ಭೂಲೋಕಮಲ್ಲನು ಜಯಂತಿಪುರ ನೇಲೆವೀಡಿನಿಂದ ಆಳ್ವಿಕೆಯನ್ನು ನಡೆಸುತ್ತಿದ್ದ ಸಂದರ್ಭದಲ್ಲಿ ಉತ್ತರಾಯಣ ಸಂಕ್ರಾಂತಿ ನಿಮಿತ್ತವಾಗಿ ಕಡಲೆವಾಡದ ಸ್ವಯಂಭು ಸೋಮನಾಥ ದೇವಾಲಯಕ್ಕೆ ಭೇಟಿ ನೀಡಿ ಶೋಡಶ ಮಹಾದಾನಗಳನ್ನು ಮಾಡಿದ್ದಲ್ಲದೇ ಸೋಮನಾಥ ದೇವರ ಅಂಗರಂಗಭೋಗ, ಧೂಪ, ದೀಪ, ನೈವೇದ್ಯಕ್ಕೆಂದು ಹಿಂಚಗೇರಿ ಎಂಬ ಗ್ರಾಮದ ಮೇಲಾಳ್ಕೆಯನ್ನು ಗಂಗರಾಸಿ ಪಂಡಿತನ ಕಾಲನ್ನು ತೊಳೆದು ದಾನ ನೀಡುತ್ತಾನೆ.

ಕ್ರಿ.ಶ.೧೧೪೨ ರ ಮನಗೂಳಿ[೫೦] ಶಾಸನವು ಎರಡನೆಯ ಜಗದೇಕಮಲ್ಲನ ಆಳ್ವಿಕೆಯನ್ನು ಹೇಳುತ್ತದೆ. ಈ ಸಮಯಕ್ಕೆ ಜಗದೇಕಮಲ್ಲನು ಕಲ್ಯಾಣಪುರದಿಂದ ಆಳ್ವಿಕೆ ನಡೆಸುತ್ತಿದ್ದ. ಶಾಸನಗಳಲ್ಲಿ ಮಣಿಗವಳ್ಳಿ ಎಂದೇ ಕರೆಯಲ್ಪಟ್ಟ ಮನಗೂಳಿಯಲ್ಲಿ ಬಸವ ಎಂಬುವವನೊಬ್ಬ ಕಲಿದೇವ ದೇವಾಲಯವನ್ನು ನಿರ್ಮಿಸುತ್ತಾನೆ. ಇದಕ್ಕೆ ಎರಡನೆಯ ಜಗದೇಕಮಲ್ಲನು ಕಾಳಾಮುಖ ಮುನಿಯಾದ ಸದ್ಯೋಜಾತ ಪಂಡಿತರ ಕಾಲನ್ನು ತೊಳೆದು ರಂಗಭೋಗ, ಚೈತ್ರ ಪವಿತ್ರ, ತಪೋಧನರ ಆಹಾರ, ಮಠದ ಉಪಾಧ್ಯಾಯರಿಗೆಂದು ೫೦ ಮತ್ತರು ಭೂಮಿಯನ್ನು ೪ ಅಂಗಡಿ ಮತ್ತು ೧ ಗಾಣವನ್ನು ದಾನ ನೀಡುತ್ತಾನೆ.

ಕೊನೆಯ ಎರಡು ದಾನಗಳು ಯಾದವ ಅರಸರಿಂದ ನೀಡಲ್ಪಟ್ಟಿವೆ ಅವು ಇಂತಿವೆ. ಕ್ರಿ.ಶ.೧೧೯೨ ರ ಹಿಪ್ಪರಗಿ[೫೧] ಶಾಸನವು ಭಿಲ್ಲಮನ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ. ಹಿಪ್ಪರಗೆಯ ಕಲಿದೇವರ ಅಂಗರಂಗಭೋಗ, ಜೀರ್ಣೋದ್ಧಾರಕ್ಕೆಂದು ಇಂಗುಳಿಗೆ ಎಂಬ ಗ್ರಾಮವನ್ನು ರಾಜಗುರುದೇವರ ಕಾಲನ್ನು ತೊಳೆದು ದಾನ ನೀಡಿದ್ದಾನೆ.

ರಾಜರ ಕೊನೆಯ ದಾನವನ್ನು ಕ್ರಿ.ಶ.೧೨೦೪ ರ ಕಡ್ಲೆವಾಡ[೫೨] ಶಾಸನವು ಉಲ್ಲೇಖಿಸುತ್ತದೆ. ಯಾದವ ದೊರೆಯಾದ ಸಿಂಘಣನು ಕಡಲೆವಾಡದ ಸ್ವಯಂಭು ಸೋಮನಾಥ ದೇವರ ರಂಗಭೋಗ, ಜೀರ್ಣೋದ್ಧಾರ, ತಪೋಧನರ ಊಟಕ್ಕೆಂದು ಸ್ಥಾನಾಚಾರ್ಯನಾದ ಸಾತಿಮಯ್ಯನ ಕಾಳನ್ನು ತೊಳೆದು ಹಿಂದೆ ನೀಡಿದ ದಾನಗಳನ್ನು ನವೀಕರಿಸಿ ಕೊಡುತ್ತಾನೆ.

ರಾಜರ ದಾನಗಳನ್ನು ಉಲ್ಲೇಖಿಸುವ ಶಾಸನಗಳ ಯಾದಿ:

ಅ.ಸಂ	ಗ್ರಾಮ	ತಾಲೂಕು	ಕಾಲ	ಅರಸ	ದೇವಾಲಯ	ದಾನ	ಉಲ್ಲೇಖ
೦೧	ಸಾಲವಾಡಗಿ	ಬಾಗೇವಾಡಿ	–	ಶುಭತುಂಗ	ಹೊರಯಮೇಶ್ವರ	ಭೂಮಿ	ಕ.ವಿ.ವಿ.ಶಾ.ಸಂ.–೧೦ ಸಂ–೫೯
೦೨	ಕಡ್ಲೆವಾಡ	ಸಿಂದಗಿ	ಕ್ರಿ.ಶ.೧೧೨೫	ಆರನೆಯ ವಿಕ್ರಮಾದಿತ್ಯ	ಸೋಮೇಶ್ವರ	ಉಭಯಸ್ವಾಮ್ಯ	ಕ.ಪಿ.ಪಿ.ಶಾ.ಸಂ.–೧೦ ಸಂ–೪೪
೦೩	ಕಡ್ಲೆವಾಡ	ಸಿಂದಗಿ	ಕ್ರಿ.ಶ.೧೧೨೭	ಮೂರನೆಯ ಸೋಮೇಶ್ವರ	ಸೋಮನಾಥ	ಆದಾಯ	ಕ.ಪಿ.ಪಿ.ಶಾ.ಸಂ.–೧೦ ಸಂ–೪೭
೦೪	ಮನಗೂಳಿ	ಬಾಗೇವಾಡಿ	ಕ್ರಿ.ಶ.೧೧೪೨	ಎರಡನೆಯ ಜಗದೇಕಮಲ್ಲ	ಕಲಿದೇವ	ಭೂಮಿ,ಗಾಣ, ಅಂಗಡಿ	ಕ.ವಿ.ವಿ.ಶಾ.ಸಂ.–೧೦ ಸಂ–೩೨
೦೫	ಹಿಪ್ಪರಗಿ	ಸಿಂದಗಿ	ಕ್ರಿ.ಶ.೧೧೯೨	ಭಿಲ್ಲಮ	ಕಲಿದೇವ	ಗ್ರಾಮ	ಕ.ವಿ.ವಿ.ಶಾ.ಸಂ.–೧೦ ಸಂ–೭೧
೦೬	ಕಡ್ಲೆವಾಡ	ಸಿಂದಗಿ	ಕ್ರಿ.ಶ.೧೨೦೪	ಸಿಂಘಣ	ಸೋಮನಾಥ	ಮರುದಾನ	ಕ.ವಿ.ವಿ.ಶಾ.ಸಂ.–೧೦ ಸಂ–೩೯

ರಾಣಿಯರ ದಾನಗಳು:

ಸಮಾಜದ ರಚನೆಯಲ್ಲಿ ಸ್ತ್ರೀಯರ ಪಾತ್ರವೂ ಸಹ ದೊಡ್ಡದು. ಸಮಾಜದಲ್ಲಿನ ಮಹತ್ತರದ ಬದಲಾವಣೆಯಲ್ಲಿ ಸ್ತ್ರೀಯರ ರಚನಾತ್ಮಕ ತೊಡಗಿಸಿಕೊಳ್ಳುವಿಕೆಯನ್ನು ನಾವು ಇತಿಹಾಸದುದ್ದಕ್ಕೂ ನೋಡಬಹುದಾಗಿದೆ. ಅದೇ ರೀತಿ ಪ್ರಾಚೀನ ಭಾರತದ ಸಂದರ್ಭದಲ್ಲಿಯೂ ಸಹ ಸ್ತ್ರೀ ಸಾಕಷ್ಟು ಪಾಲ್ಗೊಂಡಿದುದನ್ನು ಶಾಸನಗಳ ಮುಖಾಂತರ ತಿಳಿದು ಬರುವ ಸಂಗತಿಯೇ ಆಗಿದೆ. ಧಾರ್ಮಿಕ ವಿಷಯದಲ್ಲಿಯೂ ಸಹ ಸ್ತ್ರೀ ಸಾಕಷ್ಟು ಸ್ವಾತಂತ್ರ್ಯವನ್ನು ಹೊಂದಿದ್ದಳು. ರಾಣಿವಾಸದಿಂದ ಹಿಡಿದು ಸಮಾಜದ ಕಟ್ಟ ಕಡೆಯ ಕುಟುಂಬವೊಂದರ ಸ್ತ್ರೀಯೋರ್ವಳು ಶೈವ ಧರ್ಮಕ್ಕೆಂದು ನೀಡಿದ ದಾನವನ್ನು ಶಾಸನಗಳಲ್ಲಿ ಕಾಣುತ್ತೇವೆ. ಅದರಲ್ಲಿಯೂ ರಾಣಿಯರು ಅಧಿಕಾರಯುತವಾದ ಸ್ವಾತಂತ್ರ್ಯವನ್ನು ಹೊಂದಿದ್ದರಿಂದ ದಾನದಂಥಹ ವಿಷಯಗಳಲ್ಲಿ ಸಾಕಷ್ಟು ಮನ್ನಣೆಯನ್ನು ಪಡೆದುದ್ದಳು. ವಿಜಯಪುರ ಜಿಲ್ಲೆಯ ಶಾಸನಗಳನ್ನು ಗಮನಿಸಿದಾಗ ರಾಣಿಯರ ದಾನದ ವಿಷಯಗಳನ್ನು ಹೇಳುವ ಕೆಲ ಉದಾಹರಣೆಗಳು ನಮಗೆ ಕಂಡು ಬರುತ್ತವೆ. ವಿಶೇಷವೆಂದರೆ ಕೇವಲ ಕಲ್ಯಾಣ ಚಾಲುಕ್ಯ ರಾಣಿಯರ ದಾನಗಳು ಮಾತ್ರ ಜಿಲ್ಲೆಯಲ್ಲಿ ಕಂಡು ಬರುತ್ತವೆ. ಅವುಗಳು ಇಂತಿವೆ.

ಕ್ರಿ.ಶ. ೧೦೨೯ರ ದೇವೂರು[೫೩] ಶಾಸನವು ಎರಡನೆಯ ಜಯಸಿಂಹನ ಮಡದಿಯಾದ ಸುಗ್ಗಲದೇವಿಯನ್ನು ಉಲ್ಲೇಖಿಸುತ್ತದೆ. ಈಕೆಯು ದೇವಾಪುರದ ಮಾರಸಿಂಗೇಶ್ವರ ದೇವರ

ರಂಗಭೋಗ, ತಪೋಧನರ ಮತ್ತು ವಿದ್ಯಾರ್ಥಿಗಳ ಊಟಕ್ಕೆಂದು ಪಾಶುಪತ ಮುನಿಯಾದ ಬ್ರಹ್ಮರಾಶಿ ಪಂಡಿತರ ಕಾಲನ್ನು ತೊಳೆದು ಭೂಮಿಯನ್ನು ದಾನ ನೀಡುತ್ತಾಳೆ.

ಇನ್ನು ದಾನ ಚಿಂತಾಮಣಿ, ಸವತಿ ಮದಭಂಜನೆ ಎಂಬ ಬಿರುದನ್ನು ಧರಿಸಿದ್ದ ಒಂದನೆಯ ಸೋಮೇಶ್ವರನ ಪಿರಿಯರಸಿಯಾದ ಮೈಳಲದೇವಿಯನ್ನು ಕ್ರಿ.ಶ.೧೦೪೯ ರ ಬಾಗೇವಾಡಿ[೫೪] ಶಾಸನವು ಉಲ್ಲೇಖಿಸುತ್ತದೆ. ಈಕೆಯು ಚಂದ್ರಗ್ರಹಣದ ನಿಮಿತ್ತವಾಗಿ ಲಕ್ಷ ಹೋಮವನ್ನು ಮಾಡಿಸಿ ಸೋಮೇಶ್ವರ ದೇವರ ಜೀರ್ಣೋದ್ಧಾರ, ನವಕರ್ಮ ಮತ್ತು ದೇವರ ಭೋಗಕ್ಕೆಂದು ಭೂಮಿಯನ್ನು ದಾನ ನೀಡುತ್ತಾಳೆ.

ಕ್ರಿ.ಶ.೧೦೬೨ ರ ಹೊನವಾಡ[೫೫] ಶಾಸನವು ಕೇತಲದೇವಿಯನ್ನು ಉಲ್ಲೇಖಿಸುತ್ತದೆ. ಕರ್ಪೂರ ಧಾರಾವರ್ಷೆ, ಅಂತಃಪುರ ಮುಖಾದರ್ಷೆ, ರೂಪ ವಿದ್ಯಾಧರಿ ಮುಂತಾದ ಬಿರುದುಗಳನ್ನು ಧರಿಸಿದ್ದ ಕೇತಲದೇವಿಯು ಒಂದನೆಯ ಸೋಮೇಶ್ವರನ ಮಡದಿ. ಈಕೆ ತನ್ನ ತನ್ನ ಆಡಳಿತ ವಿಭಾಗವಾದ ತರ್ದವಾಡಿ-೧೦೦೦ ದ ಬಾಡ-೬೦೦ ರಲ್ಲಿಯ ಬಾಗೆ-೫೦ ಕಂಪಣದಲ್ಲಿಯ ಅಗ್ರಹಾರವಾದ ಪೊನ್ನವಾಡದ ಸಿದ್ದೇಶ್ವರ ದೇವರ ಜೀರ್ಣೋದ್ಧಾರ ಧೂಪ, ದೀಪ, ನೈವೇದ್ಯಕ್ಕೆಂದು ಭೂಮಿ ಮತ್ತು ಗಾಣವನ್ನು ದಾನ ನೀಡುತ್ತಾಳೆ.

ಕ್ರಿ.ಶ. ೧೦೭೦ರ ಕಕ್ಕಳಮೇಲ[೫೬] ಶಾಸನವು ಎರಡನೆಯ ಸೋಮೇಶ್ವರನ ಮಡದಿಯಾದ ಕಂಚಲಮಹಾದೇವಿಯನ್ನು ಉಲ್ಲೇಖಿಸುತ್ತದೆ. ಈಕೆ ತನ್ನ ಆಳ್ವಿಕೆಯ ಪ್ರದೇಶವಾದ ಕಕ್ಕಳಮೇಲೆಯಲ್ಲಿ ಮೂಲಸ್ಥಾನ ದೇವರ ಆಚಾರ್ಯರಾದ ನಾಗರಾಸಿ ಪಂಡಿತನ ಕಾಲನ್ನು ತೊಳೆದು ಶೈವ ದೇವಾಲಯವೊಂದಕ್ಕೆ ಭೂಮಿ ಮತ್ತು ನಿವೇಶನವನ್ನು ದಾನ ನೀಡುತ್ತಾಳೆ.

ಕ್ರಿ.ಶ. ೧೦೭೭ರ ಕುಳೇಕುಮಟಗಿ[೫೭] ಶಾಸನವು ಆರನೆಯ ವಿಕ್ರಮಾದಿತ್ಯನ ಮಡದಿಯಾದ ಕೇತಲದೇವಿಯನ್ನು ಉಲ್ಲೇಖಿಸುತ್ತದೆ. ಈಕೆ ಕುಂಬಿಟ್ಟಿಗೆಯ ಚಂಡೇಶ್ವರ ದೇವರ ಅಂಗಭೋಗ, ಮತ್ತು ತಪೋಧನ ಅಭ್ಯಾಗತರ ಸತ್ರಕ್ಕೆಂದು ಭೂಮಿಯನ್ನು ದಾನ ನೀಡಿದ್ದಾಳೆ.

ಇನ್ನು ಕೊಮ್ಮಳದೇವಿಯನ್ನು ಕ್ರಿ.ಶ. ೧೦೭೯ರ ಮುತ್ತಗಿ[೫೮] ಶಾಸನವು ಉಲ್ಲೇಖಿಸುತ್ತದೆ. ಈಕೆ ರಾಣಿಯಲ್ಲದಿದ್ದರೂ ಚಾಲುಕ್ಯ ರಾಜಕುಮಾರಿಯಾದವಳು. ಕೊಮ್ಮಳದೇವಿಯು ಆರನೆಯ ವಿಕ್ರಮಾದಿತ್ಯನ ಮೊಮ್ಮಗಳೂ ಮತ್ತು ಯುವರಾಜ ಮಲ್ಲಿಕಾರ್ಜುನನ ಮಗಳೂ ಆದವಳು. ಈಕೆ ಮುತ್ತಿಗೆಯಲ್ಲಿ ಗೋವಿಂದದೇವನು ರಾಮೇಶ್ವರ ದೇವರನ್ನು ಪ್ರತಿಷ್ಠಾಪಿಸಿದಾಗ ದೇವರ ಸೇವೆಗೆಂದು ಅಚಲೇಶ್ವರ ಪಂಡಿತರ ಕಾಲನ್ನು ತೊಳೆದು ಭೂಮಿಯನ್ನು ದಾನ ನೀಡಿದ್ದಾಳೆ.

ರಾಣಿಯರ ದಾನಗಳನ್ನು ಉಲ್ಲೇಖಿಸುವ ಶಾಸನಗಳು:

ಅ.ಸಂ	ಗ್ರಾಮ	ತಾಲೂಕು	ಕಾಲ	ರಾಣಿ	ದೇವಾಲಯ	ದಾನ	ಉಲ್ಲೇಖ
೦೧	ದೇವೂರು	ಸಿಂದಗಿ	ಕ್ರಿ.ಶ.೧೦೨೯	ಸುಗ್ಗಲದೇವಿ	ಮಾರಸಿಂಗೇಶ್ವರ	ಭೂಮಿ	ಕ.ವಿ.ಶಾ.ಸಂ-೧೦ ಸಂ-೮೦
೦೨	ಬಾಗೇವಾಡಿ	ಬಾಗೇವಾಡಿ	ಕ್ರಿ.ಶ.೧೦೪೯	ಮೈಳಲದೇವಿ	ಸೋಮೇಶ್ವರ	ಭೂಮಿ	ಕ.ವಿ.ಶಾ.ಸಂ-೧೦ ಸಂ-೨೩
೦೩	ಹೊನವಾಡ	ಬಿಜಾಪುರ	ಕ್ರಿ.ಶ.೧೦೬೨	ಕೇತಲದೇವಿ	ಸಿದ್ದೇಶ್ವರ	ಭೂಮಿ, ಗಾಣ	ಕ.ವಿ.ಶಾ.ಸಂ-೧೦ ಸಂ-೮೨
೦೪	ಕಕ್ಕಳಮೇಲ	ಸಿಂದಗಿ	ಕ್ರಿ.ಶ.೧೦೭೦	ಕಂಚಲ ಮಹಾದೇವಿ	-	ಭೂಮಿ, ನಿವೇಶನ	ಕ.ವಿ.ಶಾ.ಸಂ-೧೦ ಸಂ-೫೯
೦೫	ಕುಳೇಕುಮಟಗಿ	ಸಿಂದಗಿ	ಕ್ರಿ.ಶ.೧೦೭೭	ಕೇತಲದೇವಿ	ಚಂಡೇಶ್ವರ	ಭೂಮಿ	ಕ.ವಿ.ಶಾ.ಸಂ-೧೦ ಸಂ-೫೪
೦೬	ಮುತ್ತಗಿ	ಬಾಗೇವಾಡಿ	ಕ್ರಿ.ಶ.೧೦೭೯	ಕೊಮ್ಮಳದೇವಿ	ರಾಮೇಶ್ವರ	ಭೂಮಿ	ಕ.ವಿ.ಶಾ.ಸಂ-೧೦ ಸಂ-೪೮

ಇತರ ಮಹಿಳೆಯರ ದಾನಗಳು:

ರಾಜ ಮನೆತನದ ಮಹಿಳೆಯರಿಗೆ ಹೊರತಾಗಿ ಇನ್ನಿತರ ವರ್ಗದ ಮಹಿಳೆಯರ ದಾನಗಳೂ ಸಹ ಕಂಡು ಬರುತ್ತವೆ. ಇದರಲ್ಲಿ ಬಹುತೇಕ ಸಾಮಾನ್ಯ ಮಹಿಳೆಯರ ದಾನಗಳೇ ಪ್ರಧಾನವಾಗಿ ಕಂಡು ಬರುತ್ತವೆ. ಇನ್ನು ಕೇವಲ ಒಂದು ಶಾಸನ ಮಾತ್ರ ಅಧಿಕಾರಿ ವರ್ಗದ ಮಹಿಳೆಯ ದಾನವನ್ನು ಉಲ್ಲೇಖಿಸುತ್ತದೆ. ಅವುಗಳು ಇಂತಿವೆ

ಕ್ರಿ.ಶ.೧೦೩೩ ರ ತಮ್ಮದಡ್ಡಿ[೫೯] ಶಾಸನವು ಮಹಾಮಂಡಳೇಶ್ವರ ಗೋಮರಸನ ಪಸಾಯಿತ ಮತ್ತು ಹೆಗ್ಗಡೆಯಾದ ದುರ್ಗಿಮಯ್ಯನ ಮಡದಿಯಾದ ಬಲಿಕಬ್ಬೆ ಗೌಡಿಯನ್ನು ಉಲ್ಲೇಖಿಸುತ್ತದೆ. ಈಕೆ ಉತ್ತರಾಯಣ ಸಂಕ್ರಾಂತಿಯಂದು ತಂಬಧಡೆಯ ಬಲೇಶ್ವರ ಮತ್ತು ಮೂಲಸ್ಥಾನ ದೇವರಿಗೆ ಭೂಮಿ ಮತ್ತು ನಿವೇಶನವನ್ನು ದಾನ ನೀಡುತ್ತಾಳೆ.

ಖೇಡಗಿ[೬೦] ಶಾಸನವು ಮಸಣಿಕೆ ನಾಯಕಿತಿ ಎಂಬ ಮಹಿಳೆಯೋರ್ವಳ ಉಲ್ಲೇಖವನ್ನು ನೀಡುತ್ತದೆ. ಈಕೆ ಆರನೆಯ ವಿಕ್ರಮಾದಿತ್ಯನ ರಾಣಿಯಾದ ಲಕ್ಷ್ಮಾದೇವಿಯ ತಾಯಿ. ಈಕೆ ಖೇಡಗೆಯ ಕಂಕೇಶ್ವರ ದೇವರ ಸೇವೆಗೆಂದು ತನ್ನ ಪತಿಯಾದ ಕಂಕಜೋಜನ ಜೊತೆಗೂಡಿ ಭೂಮಿ ಮತ್ತು ನಿವೇಶನವನ್ನು ದಾನ ನೀಡುತ್ತಾಳೆ.

ಹಂದರಗಲ್ ಶಾಸನವು[೬೧] ಬಮ್ಮರಸ ಮತ್ತು ಆತನ ಪತ್ನಿಯಾದ ಬಾಗಿಯಬ್ಬರಸಿಯರನ್ನು ಉಲ್ಲೇಖಿಸುತ್ತದೆ. ಇವರಿಬ್ಬರೂ ಸೇರಿ ತ್ರಿಕೂಟಾಚಲವನ್ನು ನಿರ್ಮಿಸಿ ದೇವರ ಸೇವೆಗೆಂದು ಭೂಮಿಯನ್ನು ದಾನ ನೀಡುತ್ತಾರೆ.

ಸಾಲವಾಡಗಿ ಶಾಸನವು[೬೨] ಮೂಲಿಗ ಮಾಕಿಮಯ್ಯನ ಮಗಳಾದ ಆಚಿಕಬ್ಬೆಯು ಹೊರಯಮೇಶ್ವರ ದೇವಾಲಯಕ್ಕೆ ಪರಮೇಶ್ವರ ದತ್ತಿಯಾಗಿ ಭೂಮಿಯನ್ನು ದಾನ ನೀಡಿದುದನ್ನು ಉಲ್ಲೇಖಿಸುತ್ತದೆ.

ಕ್ರಿ.ಶ.೧೧೭೦ ರ ನಿಡೋಣಿ[೬೩] ಶಾಸನವು ವೀರಣ ಎಂಬುವವನು ಗವರೇಶ್ವರ ದೇವಾಲಯವನ್ನು ಜೀರ್ಣೋದ್ಧಾರ ಮಾಡಿದಾಗ ಆಚಮ್ಮೆ ಎಂಬುವವಳು ಗದ್ಯಾಣ ಹಣವನ್ನು ದಾಣ ನೀಡಿದುದನ್ನು ಉಲ್ಲೇಖಿಸುತ್ತದೆ.

ಮಹಿಳೆಯರ ದಾನದ ಕೊನೆಯ ಉಲ್ಲೇಖವನ್ನು ತದ್ದೆವಾಡಿ[೬೪] ಶಾಸನವು ನೀಡುತ್ತದೆ. ತದ್ದವಾಡಿಯ ಚಂದೇಶ್ವರ ದೇವರ ಸೇವೆಗೆಂದು ಮಳಿಯಬ್ಬರಸಿಯು ದಾನ ನೀಡಿದ್ದಾಳೆ.

ಇತರ ಮಹಿಳೆಯರ ದಾನಗಳ ಯಾದಿ:

ಅ.ಸಂ	ಗ್ರಾಮ	ತಾಲೂಕು	ಕಾಲ	ಮಹಿಳೆ	ದೇವಾಲಯ	ದಾನ	ಉಲ್ಲೇಖ
೦೧	ತಮ್ಮದಡ್ಡಿ	ಮುದ್ದೇ ಬಿಹಾಳ	ಕ್ರಿ.ಶ.೧೦೩೩	ಬಲಿಕಬ್ಬೆ ಗೌಡಿ	ಮೂಲಸ್ಥಾನ	ಭೂಮಿ, ನಿವೇಶನ	ಕ.ವಿ.ಶಾ.ಸಂ-೧೦ ಸಂ-೩೯
೦೨	ಚೇಡಗಿ	ಇಂಡಿ	–	ಮಸಣಿಕೆ ನಾಯಕಿತಿ	ಕಂಕೇಶ್ವರ	ಭೂಮಿ, ನಿವೇಶನ	ಕ.ವಿ.ಶಾ.ಸಂ-೧೦ ಸಂ-೧೫
೦೩	ಹಂದರಗಲ್	ಮುದ್ದೇಬಿಹಾಳ	–	ಬಾಗಿಯಬ್ಬರಸಿ	ತೊಂಡೇಶ್ವರ	ಭೂಮಿ	ಕ.ವಿ.ಶಾ.ಸಂ-೧೦ ಸಂ-೧೫
೦೪	ಸಾಲವಾಡಗಿ	ಬಾಗೇವಾಡಿ	೧೨ನೆಯ ಶತಮಾನ	ಆಚಿಕಬ್ಬೆ	ಹೊರಯಮೇಶ್ವರ	ಭೂಮಿ	ಎಸ್.ಆಯ್.ಆಯ್-೨೦ ಸಂ-೪೬
೦೫	ನಿಡೋಣಿ	ಬಿಜಾಪುರ	ಕ್ರಿ.ಶ.೧೧೭೦	ಆಚಮ್ಮೆ	ಗವರೇಶ್ವರ	ಹಣ	ಕ.ವಿ.ಶಾ.ಸಂ-೧೦ ಸಂ-೭೮
೦೬	ತದ್ದವಾಡಿ	ಇಂಡಿ	ಕ್ರಿ.ಶ.೧೨೪೦	ಮಳಿಯಬ್ಬರಸಿ	ಚಂದೇಶ್ವರ	–	ಕ.ವಿ.ಶಾ.ಸಂ-೧೦ ಸಂ-೩೦

ಮಹಾ ಮಂಡಳೇಶ್ವರರ ದಾನಗಳು:

ಶೈವಧರ್ಮದ ಪ್ರಬಲ ಪೋಷಕರಲ್ಲಿ ಮಹಾಮಂಡಳೇಶ್ವರರೂ ಸಹ ಒಬ್ಬರು. ಸಮಕಾಲೀನ ಸಮಾಜದಲ್ಲಿ ದೇವಾಲಯಗಳ ನಿರ್ಮಿತಿಯನ್ನು ಗಮನಿಸಿದಾಗ ಮಂಡಳೇಶ್ವರರೇ ದೇವಾಲಯಗಳನ್ನು ನಿರ್ಮಿಸಿ ದಾನಗಳನ್ನು ನೀಡಿದುದನ್ನು ಮತ್ತು ಇತರರಿಂದ ದಾನ

ನೀಡಿಸಿದುದನ್ನು ಕಾಣುತ್ತೇವೆ. ವಿಜಯಪುರ ಜಿಲ್ಲೆಯ ವಿಷಯಕ್ಕೆ ಬಂದಾಗ ಮಂಡಳೇಶ್ವರರ ದಾನಗಳನ್ನು ಉಲ್ಲೇಖಿಸುವ ಸುಮಾರು ೨೩ ಶಾಸನಗಳು ಕಂಡು ಬರುತ್ತವೆ. ಬಹುತೇಕ ಶಾಸನಗಳು ಶಿಲಾಹಾರ ಮನೆತನಕ್ಕೆ ಸಂಬಂಧಿಸಿದವುಗಳಾಗಿವೆ. ಈ ಹಿನ್ನೆಲೆಯಲ್ಲಿ ಗಮನಿಸಿದಾಗ ವಿಜಯಪುರ ಪ್ರದೇಶದಲ್ಲಿ ಶಿಲಾಹಾರರೇ ಪ್ರಧಾನ ಆಡಳಿತಗಾರರಾಗಿದ್ದರು ಎಂದು ಊಹಿಸಬಹುದು.

ಶಿಲಾಹಾರರ ದಾನಗಳು:

ಶಿಲಾಹಾರರು ಆಯಾಯ ಕಾಲಕ್ಕೆ ಕಂಡು ಬರುವ ಸಾಮ್ರಾಜ್ಯಗಳಿಗೆ ನಿಷ್ಠಾವಂತ ಸಾಮಂತರಾಗಿ ಸೇವೆ ಸಲ್ಲಿಸಿದವರಾಗಿದ್ದಾರೆ.ರಾಷ್ಟ್ರಕೂಟರ ಕಾಲದಿಂದ ಹಿಡಿದು ಯಾದವರ ಕಾಲದವರೆಗೆ ಇವರು ಮಂಡಳೇಶ್ವರರಾಗಿ ಸೇವೆ ಸಲ್ಲಿಸಿದ್ದಾರೆ. ಶಾಸನಗಳು ಇವರನ್ನು ಜಿಮೂತವಾಹನಾನ್ವಯ ಶಿಲಾಹಾರ ವಂಶದವರು ಎಂದು ಗುರುತಿಸುತ್ತವೆ. ಇವರು ಎಳಮೇಲದ ಶಿಲಾಹಾರರಾಗಿದ್ದಾರೆ. ಶಿಲಾಹಾರರ ದಾನಗಳನ್ನು ಉಲ್ಲೇಖಿಸುವ ೧೧ ಶಾಸನಗಳು ಕಂಡು ಬರುತ್ತವೆ. ಅವುಗಳು ಇಂತಿವೆ

ಕ್ರಿ.ಶ.೯೪೫ ರ ಬಿಜಾಪುರ[೬೫] ಶಾಸನವು ಮಹಾ ಮಂಡಳೇಶ್ವರನಾದ ಗೋವುಣರಸನನ್ನು ಉಲ್ಲೇಖಿಸುತ್ತದೆ. ಈತ ರಾಷ್ಟ್ರಕೂಟರ ಮೂರನೆಯ ಕೃಷ್ಣನಿಗೆ ಮಂಡಳೇಶ್ವರನಾಗಿದ್ದವನು. ಶಾಸನವು ಈತನನ್ನು ಜಿಮೂತವಾಹನ ವಂಶದವನು ಎಂದು ಹೇಳಿದ್ದಲ್ಲದೇ ಶನಿವಾರಸಿದ್ದಿ ಎಂಬ ಬಿರುದನ್ನು ಧರಿಸಿದ್ದ ಎಂಬುದನ್ನ ಉಲ್ಲೇಖಿಸುತ್ತದೆ. ಈತ ತ್ರೈಪುರುಷ ದೇವರ ಸೇವೆಗೆ ಭೂಮಿಯನ್ನು ದಾನ ನೀಡಿದ್ದಾನೆ.

ಅಗರಖೇಡ[೬೬] ಶಾಸನವು ಮಹಾಮಂಡಳೇಶ್ವರನಾದ ಮತ್ತೋರ್ವನಾದ ಗೋವುಣರಸನನ್ನು ಉಲ್ಲೇಖಿಸುತ್ತದೆ. ಈತ ಆರನೆಯ ವಿಕ್ರಮಾದಿತ್ಯನ ಮಗನಾದ ಮಲ್ಲಿಕಾರ್ಜುನನ ಮಂಡಳೇಶ್ವರನಾದವನು. ಈತ ಅಗರಖೇಡದ ಸ್ವಯಂಭೂದೇವರ ಸೇವೆಗೆಂದು ಭೂಮಿ ಮತ್ತು ಹಣವನ್ನ ದಾನ ನೀಡಿದ್ದಾನೆ.

ಮಂಡಳೇಶ್ವರನಾದ ಡಾಕರಸನ ಉಲ್ಲೇಖ ಹಿರೇಬೇವಿನೂರು[೬೭] ಶಾಸನದಲ್ಲಿ ಕಂಡು ಬರುತ್ತದೆ. ಈತ ಪುರ ಮಠದ ಭೋಗೇಶ್ವರ ದೇವರ ಪ್ರತಿಷ್ಠಾಪನೆಯ ಕಾಲದಲ್ಲಿ ಭೂಮಿಯನ್ನು ದೇವರ ನಂದಾದೀವಿಗೆಗೆಂದು ೨ ಗಾಣವನ್ನು ಮತ್ತು ಮಠದ ಛತ್ರಕ್ಕೆಂದು ಭೂಮಿಯನ್ನು ದೇವಶಕ್ತಿ ಪಂಡಿತನ ಕಾಲನ್ನು ತೊಳೆದು ದಾನ ನೀಡುತ್ತಾನೆ.

ಕುಮಾರ ಸೋವರಸನ ಉಲ್ಲೇಖವನ್ನು ಮಲಘಣ[೬೮] ಶಾಸನವು ನೀಡುತ್ತದೆ. ಈತ ತನ್ನ ಸಿಂಗರಸನಿಗೆ ಪುಣ್ಯವಾಗಲಿ ಎಂದು ಮಲಘಣದ ಸ್ವಯಂಭು ದೇವರಿಗೆ ಹಣ, ಗಾಣ ಮತ್ತು ಭೂಮಿಯನ್ನು ದಾನ ನೀಡಿದ್ದಾನೆ.

ಕಡ್ಲೆವಾಡದ[೧೯] ಎರಡು ಶಾಸನಗಳು ಸಿಂಗಿದೇವರಸನನ್ನು ಉಲ್ಲೇಖಿಸುತ್ತವೆ. ಕಳಚೂರ್ಯ ದೊರೆಯಾದ ರಾಯಮುರಾರಿ ಸೋವಿದೇವರಸನ ಮಹಾಮಂಡಳೇಶ್ವರನಾಗಿದ್ದನು. ಈತ ಎರಡು ದಾನಗಳನ್ನು ಕಡ್ಲೆವಾಡದ ಸ್ವಯಂಭು ದೇವರಿಗೆ ೨ ದಾನಗಳನ್ನು ನೀಡಿದ್ದಾನೆ. ಕ್ರಿ.ಶ.೧೧೬೮ ರ ಸುಮಾರಿಗೆ ಈತ ಮೊದಲ ದಾನವನ್ನು ನೀಡಿದ್ದಾನೆ. ಈ ಸಮಯಕ್ಕೆ ದೇವರ ಅಂಗರಂಗಭೋಗಕ್ಕೆಂದು ಕೆಲವು ತೆರಿಗೆಯನ್ನು ಸ್ಥಾನಾಚಾರ್ಯನಾದ ಸೋವಿರಾಸಿ ಪಂಡಿತನ ಕಾಲನ್ನು ತೊಳೆದು ದಾನ ನೀಡಿದ್ದರೆ ಮುಂದೆ ೪ ವರ್ಷಗಳ ತರುವಾಯ ದಂಡನಾಯಕನಾದ ಬಮ್ಮಿದೇವರಸನ ಜೊತೆ ಸೇರಿ ದೇವರ ಮಹಾನೈವೇದ್ಯ, ಕರ್ಪೂರ, ತಾಂಬೂಲ, ಕುಂಕುಮ, ಚಂದನ, ಗೀತ, ವಾದ್ಯ, ನೃತ್ಯ, ಚೈತ್ರ ಪವಿತ್ರಕ್ಕೆಂದು ಭೂಮಿಯನ್ನು ದಾನ ನೀಡಿದ್ದಾನೆ.

ಚೌಂಡರಸ ಮಹಾಮಂಡಳೇಶ್ವರನ ಉಲ್ಲೇಖ ಕ್ರಿ.ಶ.೧೧೬೮ರ ಹಲಸಂಗಿ[೨೦] ಶಾಸನದಲ್ಲಿ ಕಂಡು ಬರುತ್ತದೆ. ಶಾಸನವು ಕಳಚೂರ್ಯರ ಆಡಳಿತ ಕಾಲಮಾನಕ್ಕೆ ಸೇರುತ್ತದೆ. ಈ ಸಮಯಕ್ಕೆ ಸೋವಿದೇವನು ಆಳ್ವಿಕೆಯನ್ನು ನಡೆಸುತ್ತಿದ್ದನು. ಬಹುಶಃ ಚೌಂಡರಸ ಈತನ ಮಂಡಳೇಶ್ವರನಾಗಿದ್ದಿರಬೇಕು. ಈತ ಸ್ವಯಂಭು ದೇವರ ಅಂಗರಂಗಭೋಗ ಜೀರ್ಣೋದ್ಧಾರಕ್ಕೆಂದು ತೆರಿಗೆಯನ್ನು ದಾನ ನೀಡಿದ್ದಾನೆ. ಮುಂದೆ ಕ್ರಿ.ಶ.೧೧೭೬ ರ ರೂಗಿ ಶಾಸನವು ಚಾಮುಂಡರಸ ಎಂಬುವವನ ಉಲ್ಲೇಖ ನೀಡುತ್ತದೆ. ಎರಡೂ ಶಾಸನಗಳಲ್ಲಿನ ವ್ಯಕ್ತಿ ಒಬ್ಬರೆ ಆಗಿದ್ದಾರೆ ಎಂದು ಹೇಳಬಹುದು. ಏಕೆಂದರೆ ಹೆಸರಿನ ಉಚ್ಚಾರದಲ್ಲಿ ಸ್ವಲ್ಪ ಮಟ್ಟಿನ ವ್ಯತ್ಯಾಸ ಮತ್ತು ಎರಡೂ ಶಾಸನಗಳಲ್ಲಿನ ಕಾಲಮಾನದಲ್ಲಿ ಅಷ್ಟೇನೂ ಅಂತರ ಕಂಡು ಬರದೇ ಇರುವುದರಿಂದ ಶಾಸನೋಲ್ಲೇಖಿತ ಚೌಂಡರಸ ಮತ್ತು ಚಾಮುಂಡರಸ ಒಬ್ಬರೇ ಎಂದು ಹೇಳಬಹುದು. ಈ ಸಮಯಕ್ಕೆ ಕಳಚೂರ್ಯ ಮಲ್ಲುಗಿಯ ಮಂಡಳೇಶ್ವರನಾಗಿ ಈತ ಕಾರ್ಯ ನಿರ್ವಹಿಸುತ್ತಿದ್ದ. ಈತ ರೂವಿಗೆಯ ಸರ್ವೇಶ್ವರ ದೇವರ ಸೇವೆಗೆ ಭೂಮಿಯನ್ನು ದಾನ ನೀಡಿದ್ದಾನೆ.

ಶಿಲಾಹಾರ ವಂಶದ ಇನ್ನೋರ್ವ ಮಂಡಳೇಶ್ವರನಾದ ಆನೆಮರಸನ ಉಲ್ಲೇಖವನ್ನು ಕಡ್ಲೆವಾಡ[೨೧] ಶಾಸನವು ನೀಡುತ್ತದೆ. ಇನ್ನಿತರ ಅಧಿಕಾರಿಗಳ ಜೊತೆಗೂಡಿ ಸೋಮಗ್ರಹಣದ ನಿಮಿತ್ತವಾಗಿ ಆನೆಮರಸ ಸೋಮನಾಥ ದೇವರ ಅಂಗರಂಗಭೋಗ, ಜೀರ್ಣೋದ್ಧಾರ, ತಪೋಧನರ ಆಹಾರಗಳಿಗೆಂದು ಹಿರಿಯ ಮಠದ ಆಚಾರ್ಯನಾದ ಸಾತಿಮಯ್ಯನ ಕಾಲನ್ನು ತೊಳೆದು ತೆರಿಗೆ ಮತ್ತು ಭೂಮಿಯನ್ನು ದಾನ ನೀಡಿದ್ದಾನೆ.

ಶಿಲಾಹಾರ ಮಂಡಳೇಶ್ವರರ ದಾನದ ಕೊನೆಯ ಉಲ್ಲೇಖವನ್ನು ಕ್ರಿ.ಶ.೧೨೦೮ ರ ಯರಗಲ್[೨೨] ಶಾಸನವು ನೀಡುತ್ತದೆ. ಮಹಾಮಂಡಳೇಶ್ವರನಾದ ಬೊಮ್ಮಿದೇವರಸ ತಾನು ಪ್ರತಿಷ್ಠೆ

ಮಾಡಿದ ಹಾಯಿಮೇಶ್ವರ ದೇವರ ಸೇವೆಗೆ ಭೂಮಿ ಮತ್ತು ನಿವೇಶನವನ್ನು ದಾನ ನೀಡಿದುದನ್ನು ಶಾಸನವು ಉಲ್ಲೇಖಿಸಿದೆ.

ಕಳಚೂರ್ಯರ ದಾನಗಳು:

ಕಲ್ಯಾಣ ಚಾಲುಕ್ಯರ ಪ್ರಬಲ ಮಾಂಡಳಿಕರಲ್ಲಿ ಕಳಚೂರ್ಯ ಮನೆತನವೂ ಒಂದು. ಅಲ್ಪ ಕಾಲದವರೆಗೆ ಚಾಲುಕ್ಯ ಮನೆತನವನ್ನು ಅಧಿಕಾರದ ಪರಿಧಿಯಿಂದ ಹೊರದೂಡಿ ಸ್ವತಂತ್ರ ಸಾಮ್ರಾಜ್ಯವನ್ನು ಸ್ಥಾಪಿಸುವಲ್ಲಿ ಯಶಸ್ವಿಯಾದ ಮನೆತನವೂ ಆಗಿದೆ. ಮಾಂಡಳಿಕರಾಗಿದ್ದ ಸಮಯದಲ್ಲಿ ಇವರೂ ಸಹ ಕೆಲವು ದಾನಗಳನ್ನು ಶೈವ ಧರ್ಮದ ಉನ್ನತಿಗಾಗಿ ನೀಡಿದುದು ಶಾಸನಗಳಿಂದ ತಿಳಿದು ಬರುತ್ತದೆ. ಕಳಚೂರ್ಯ ಮಾಂಡಳಿಕರ ದಾನದ ಉಲ್ಲೇಖವನ್ನು ಸುಮಾರು ೩ ಶಾಸನಗಳು ನೀಡುತ್ತವೆ ಮತ್ತು ಅವು ಇಂತಿವೆ.

ಮಹಾಮಂಡಳೇಶ್ವರ ಹೆರ್ಮಾಡಿರಾಯನ ಉಲ್ಲೇಖವು ಇಂಗಳೇಶ್ವರ[೭೩] ಶಾಸನದಲ್ಲಿ ಕಂಡು ಬರುತ್ತದೆ. ಮೂರನೆಯ ಸೋಮೇಶ್ವರನ ಮಾಂಡಳಿಕನಾಗಿದ್ದ ಈತ ನೀಲಕಂಠನಾಯಕನು ಅಗ್ರಹಾರ ಇಂಗಳೇಶ್ವರದಲ್ಲಿ ನೀಲಕಂಠ ದೇವರನ್ನು ಪ್ರತಿಷ್ಠಾಪಿಸಿದಾಗ ಆತನ ವಿನಂತಿಯ ಮೇರೆಗೆ ದೇವರ ಅಂಗಭೋಗ, ನೈವೇದ್ಯ, ಚೈತ್ರ ಪವಿತ್ರಕ್ಕೆಂದು ಭೂಮಿಯನ್ನು, ನಂದಾದೀವಿಗೆಗೆಂದು ೨ ಗಾಣವನ್ನು ದಾನ ನೀಡಿದ್ದಾನೆ.

ಕಳಚೂರಿ ಮಂಡಳೇಶ್ವರರಲ್ಲಿ ಹೆಸರಾದವನೇ ಬಿಜ್ಜಳ. ಈತನ ಎರಡು ದಾನದ ಉಲ್ಲೇಖಗಳು ವಿಜಯಪುರ ಜಿಲ್ಲೆಯಲ್ಲಿ ಕಂಡು ಬರುತ್ತವೆ. ಮೊದಲ ಉಲ್ಲೇಖವನ್ನು ಕ್ರಿ.ಶ.೧೧೫೦ ರ ಸಂಖ[೭೪] ಶಾಸನವು ನೀಡುತ್ತದೆ. ಮೂರನೆಯ ತೈಲಪನ ಮಂಡಳೇಶ್ವರನಾದ ಸಮಯದಲ್ಲಿ ಬಿಜ್ಜಳ ಸಂಖದ ಮಹೀಶ್ವರ ದೇವರ ಸೇವೆಗೆ ಅಂಗರಂಗಭೋಗ, ಧೂಪದಾರತಿ, ನೈವೇದ್ಯ, ಚೈತ್ರ ಪವಿತ್ರಕ್ಕೆಂದು ಗಾಣ ಮತ್ತು ಭೂಮಿಯನ್ನು ದಾನ ನೀಡಿದ್ದಾನೆ. ನಂತರ ನಂದರ್ಗಿ[೭೫] ಶಾಸನದಲ್ಲಿ ಈತನ ಎರಡನೆಯ ದಾನದ ಉಲ್ಲೇಖ ಕಂಡು ಬರುತ್ತದೆ. ನಂದರಿಗೆಯ ದಾವಪೇಶ್ವರ ದೇವರ ಸೇವೆಗೆ ಬಿಜ್ಜಳನು ಭೂಮಿಯನ್ನು ದಾನ ನೀಡಿದುದನ್ನು ಶಾಸನವು ಉಲ್ಲೇಖಿಸಿದೆ.

ಈ ಮೇಲಿನ ಮಂಡಳೇಶ್ವರ ಮನೆತನಗಳ ಹೊರತಾಗಿ ಬೇರಿನ್ನಾವ ಮನೆತನಗಳ ಉಲ್ಲೇಖ ಶಾಸನಗಳಲ್ಲಿ ಕಂಡು ಬರುವುದಿಲ್ಲ. ಬದಲಾಗಿ ಮಂಡಳೇಶ್ವರರ ಹೆಸರು ಮತ್ತು ಅವರ ದಾನದ ವಿವರಗಳು ಮಾತ್ರ ಕಂಡು ಬರುತ್ತವೆ. ಈ ಹಿನ್ನೆಲೆಯಲ್ಲಿ ಮಂಡಲೇಶ್ವರರ ದಾನಗಳ ಯಾದಿಯನ್ನು ಈ ಕೆಳಗೆ ನೀಡಲಾಗಿದೆ.

ಮಂಡಳೇಶ್ವರರ ದಾನವನ್ನು ಉಲ್ಲೇಖಿಸುವ ಶಾಸನಗಳ ಯಾದಿ:

ಅ.ಸಂ	ಗ್ರಾಮ	ತಾಲೂಕು	ಕಾಲ	ಮಂಡಳೇಶ್ವರರು	ದೇವಾಲಯ	ದಾನ	ಉಲ್ಲೇಖ
೦೧	ವಿಜಯಪುರ	ವಿಜಯಪುರ	ಕ್ರಿ.ಶ.೯೪೫	ಗೋವುಣರಸ	ತ್ರೈಪುರುಷ	ಭೂಮಿ	ಕ.ವಿ.ವಿ.ಶಾ.ಸಂ–೧೦ ಸಂ–೧೮
೦೨	ಅಗರಖೇಡ	ಇಂಡಿ	ಕ್ರಿ.ಶ.೧೧೦೯	ಗೋವಣರಸ	ಸ್ವಯಂಭು	ಭೂಮಿ, ಹಣ	ಕ.ವಿ.ವಿ.ಶಾ.ಸಂ–೧೦ ಸಂ–೦೧
೦೩	ದಿಂಡವಾರ	ಬಾಗೇವಾಡಿ	ಕ್ರಿ.ಶ.೧೧೧೨	ಭೀಷಣದೇವರಸ	ಮಾಳೇಶ್ವರ	–	ಕ.ವಿ.ವಿ.ಶಾ.ಸಂ–೧೦ ಸಂ–೧೩
೦೪	ಹಿರೇ ಬೇವಿನೂರು	ಇಂಡಿ	ಕ್ರಿ.ಶ.೧೧೨೪	ಡಾಕರಸ	ಭೋಗೇಶ್ವರ	ಭೂಮಿ, ಗಾಣ	ಕ.ವಿ.ವಿ.ಶಾ.ಸಂ–೧೦ ಸಂ–೭೮
೦೫	ಇಂಗಳೇಶ್ವರ	ಬಾಗೇವಾಡಿ	ಕ್ರಿ.ಶ.೧೧೨೮	ಹೆರ್ಮಾಡಿರಾಯ	ನೀಲಕಂಠೇಶ್ವರ	ಭೂಮಿ, ಗಾಣ	ಕ.ವಿ.ವಿ.ಶಾ.ಸಂ–೧೦ ಸಂ–೦೧
೦೬	ಮಲಘಣ	ಸಿಂದಗಿ	ಕ್ರಿ.ಶ.೧೧೩೩	ಸೋವರಸ	ಸ್ವಯಂಭು	ಭೂಮಿ, ಗಾಣ	ಕ.ವಿ.ವಿ.ಶಾ.ಸಂ–೧೦ ಸಂ–೬೦
೦೭	ದೇವರ ನಾವದಗಿ	ಸಿಂಧಗಿ	ಕ್ರಿ.ಶ.೧೧೪೦	ಸೋವಿದೇವರಸ	ಮಲ್ಲಿಕಾರ್ಜುನ	ಭೂಮಿ, ಮನೆ	ಕ.ವಿ.ವಿ.ಶಾ.ಸಂ–೧೦ ಸಂ–೫೧
೦೮	ಸಂಖ	ಇಂಡಿ	ಕ್ರಿ.ಶ.೧೧೫೦	ಬಿಜ್ಜಳ	ಮಹೇಶ್ವರ	ಭೂಮಿ, ಮನೆ, ಗಾಣ	ಕ.ವಿ.ವಿ.ಶಾ.ಸಂ–೧೦ ಸಂ–೬೯
೦೯	ಕಡ್ಲೆವಾಡ	ಸಿಂದಗಿ	ಕ್ರಿ.ಶ.೧೧೬೮	ಸಿಂಗಿದೇವರಸ ಗೋಮದೇವರಸ	ಸೋಮನಾಥ	ಹಣ, ತೆರಿಗೆ	ಕ.ವಿ.ವಿ.ಶಾ.ಸಂ–೧೦ ಸಂ–೪೧
೧೦	ಅಗರಖೇಡ	ಇಂಡಿ	ಕ್ರಿ.ಶ.೧೧೭೦	ಕೈಲಾಳರಸ ವಾರರಸ	ಕೈಲಾಸೇಶ್ವರ	ಭೂಮಿ	ಕ.ವಿ.ವಿ.ಶಾ.ಸಂ–೧೦ ಸಂ–೦೩
೧೧	ಕಡ್ಲೆವಾಡ	ಸಿಂದಗಿ	ಕ್ರಿ.ಶ.೧೧೭೨	ಸಿಂಗಿದೇವರಸ	ಸೋಮನಾಥ	ಭೂಮಿ	ಕ.ವಿ.ವಿ.ಶಾ.ಸಂ–೧೦ ಸಂ–೪೯
೧೨	ಹಲಸಂಗಿ	ಇಂಡಿ	ಕ್ರಿ.ಶ.೧೧೬೮	ಚೌಂಡರಸ	ಸ್ವಯಂಭು	ತೆರಿಗೆ	ಕ.ವಿ.ವಿ.ಶಾ.ಸಂ–೧೦ ಸಂ–೭೩
೧೩	ನಿಂಬಾಳ	ಇಂಡಿ	ಕ್ರಿ.ಶ.೧೧೭೬	ಮಂಡಳೇಶ್ವರ	ಸಂಕರ	ಭೂಮಿ	ಕ.ವಿ.ವಿ.ಶಾ.ಸಂ–೧೦ ಸಂ–೩೭
೧೪	ರೂಗಿ	ಇಂಡಿ	ಕ್ರಿ.ಶ.೧೧೭೬	ಚಾಮುಂಡರಸ	ಸರ್ವೇಶ್ವರ	ಭೂಮಿ	ಕ.ವಿ.ವಿ.ಶಾ.ಸಂ–೧೦ ಸಂ–೫೭
೧೫	ತಾಳಿಕೋಟೆ	ಮುದ್ದೇಬಿಹಾಳ	ಕ್ರಿ.ಶ.೧೧೮೪	ವಿರುಪರಸ	ವೀರ ಬೈಯ್ಸೇಶ್ವರ	ಭೂಮಿ, ಗಾಣ, ನಿವೇಶನ, ಅಂಗಡಿ	ಕ.ವಿ.ವಿ.ಶಾ.ಸಂ–೧೦ ಸಂ–೫೪
೧೬	ಕಡ್ಲೆವಾಡ	ಸಿಂದಗಿ	ಕ್ರಿ.ಶ.೧೧೮೬	ಆನೆಮರಸ	ಸೋಮನಾಥ	ತೆರಿಗೆ	ಕ.ವಿ.ವಿ.ಶಾ.ಸಂ–೧೦ ಸಂ–೪೨

೧೭	ಕಡ್ಲೆವಾಡ	ಸಿಂದಗಿ	ಕ್ರಿ.ಶ.೧೧೮ ೬	ಕೊಪ್ಪರಸ	ಸೋಮನಾಥ	ತೆರಿಗೆ	ಕ.ಪಿ.ಪಿ.ಶಾ.ಸಂ- ೧೦ ಸಂ-೪೮
೧೮	ಚೊರಗಿ	ಇಂಡಿ	ಕ್ರಿ.ಶ.೧೧೯ ೦	ಪೀರಬಂದುಗಿ ದೇವರಸ	ಮಲ್ಲಿಕಾರ್ಜುನ	ಗ್ರಾಮ	ಕ.ಪಿ.ಪಿ.ಶಾ.ಸಂ- ೧೦ ಸಂ-೨೩
೧೯	ಯಾರಗಲ್	ಸಿಂದಗಿ	ಕ್ರಿ.ಶ.೧೨೦ ೮	ಬೊಮ್ಮಿದೇವರಸ	ಹಯಿಮೇಶ್ವರ	ಭೂಮಿ, ನಿವೇಶನ	ಕ.ಪಿ.ಪಿ.ಶಾ.ಸಂ- ೧೦ ಸಂ-
೨೦	ತಾಳಿಕೋಟೆ	ಮುದ್ದೇಬಿಹಾಳ	ಕ್ರಿ.ಶ.೧೨೨ ೫	ಜಯಿತಪಾಳದೇವ	ಸೋಮನಾಥ	ಭೂಮಿ	ಕ.ಪಿ.ವಿ.ಶಾ.ಸಂ- ೧೦ ಸಂ-೫೨
೨೧	ಬಿಜಾಪುರ	ಬಿಜಾಪುರ	ಕ್ರಿ.ಶ.೧೨೭೮	ಮಹದೇವರಾಣೆ	ರೇಚೇಶ್ವರ ತ್ರೈಪುರುಷೇಶ್ವರ	ಭೂಮಿ, ತೆರಿಗೆ	ಕ.ಪಿ.ಪಿ.ಶಾ.ಸಂ- ೧೦ ಸಂ-೦೩
೨೨	ಅಲಮೇಲ	ಸಿಂಧಗಿ	೧೪ನೆಯ ಶತಮಾನ	ಸೋವದೇವರಸ	ತ್ರೈಪುರುಷ	ಭೂಮಿ	ಕ.ವಿ.ವಿ.ಶಾ.ಸಂ- ೧೦ ಸಂ-೨೫
೨೩	ನಂದರ್ಗಿ	ಇಂಡಿ	-	ಬಿಜ್ಜಲದೇವರಸ	ದಾವಪೇಶ್ವರ	ಭೂಮಿ	ಕ.ವಿ.ಪಿ.ಶಾ.ಸಂ- ೧೦ ಸಂ-೩೩

ಸಾಮಂತರ ದಾನಗಳು:

ಸಾಮಂತರ ದಾನಗಳನ್ನು ಗಮನಿಸಿದಾಗ ಒಟ್ಟು ೧೪ ಶಾಸನಗಳು ಸಾಮಂತರ ದಾನಗಳನ್ನು ಉಲ್ಲೇಖಿಸುತ್ತವೆ. ಅವುಗಳು ಇಂತಿವೆ.

ಕರಹಾಟರ ದಾನ:

ಸಾಮಂತರ ದಾನದ ಮೊದಲ ಉಲ್ಲೇಖವನ್ನು ಕ್ರಿ.ಶ.೧೦೧೫ ರ ರೂಗಿ[೭೬] ಶಾಸನವು ನೀಡುತ್ತದೆ.ಕರಹಾಟ ಮನೆತನಕ್ಕೆ ಸೇರಿದ ದೇವಣರಸನ ಉಲ್ಲೇಖವನ್ನು ನೀಡುತ್ತದೆ. ಈತ ಭುವನೈಕಮಲ್ಲನ ಮಹಾಸಾಮಂತನಾಗಿದ್ದವನು. ಈತ ನಗರೇಶ್ವರ ದೇವರ ಭೂಮಿ, ಗಾಣ, ಮತ್ತು ಅಂಗಡಿಗಳನ್ನು ದಾನವಾಗಿ ನೀಡಿದ್ದಾನೆ.

ವಾಜಿ ಕುಲದವರ ದಾನ:

ವಾಜಿಕುಲಕ್ಕೆ ಸೇರಿದ ಮತ್ತು ಆರನೆಯ ವಿಕ್ರಮಾದಿತ್ಯನ ಮಹಾಸಾಂತನಾದ ನಿಂಬಣಯ್ಯನನ್ನು ಮತ್ತು ಆತನ ಮಗನಾದ ಸಾಮಂತ ಕೇಶಿರಾಜನನ್ನು ಕೊಂಡಗುಳಿ[೭೭] ಶಾಸನವು ಉಲ್ಲೇಖಿಸುತ್ತದೆ. ಇವರೀರ್ವರು ಸೇರಿ ಕೇಶಿರಾಜನು ಮಾಡಿದ ಸೋಮೇಶ್ವರ ದೇವರ ಸೇವೆಗೆ ಭೂಮಿಯನ್ನು ದಾನ ನೀಡಿದ್ದಾರೆ.

ನೊಳಂಬ ಪಲ್ಲವರ ದಾನ:

ಸಾಮಂತರಲ್ಲಿಯೇ ಹೆಚ್ಚಿನ ದಾನಗಳನ್ನು ನೀಡಿದವರೆಂದರೆ ನೊಳಂಬ ಪಲ್ಲವರು. ಈ ಮನೆತನದ ಮೂರು ಸಾಮಂತರು ಶೈವ ಧರ್ಮದ ಪೋಷಕರಾಗಿದ್ದಾರೆ. ಈ ಮನೆತನದ ದಾನದ

ಮೊದಲ ಉಲ್ಲೇಖವನ್ನು ಮಾರಸನಹಳ್ಳಿ[೭೮] ಶಾಸನವು ನೀಡುತ್ತದೆ. ನೊಳಂಬ ಪಲ್ಲವ ಕುಮಾರನಾದ ತ್ರೈಲೋಕ್ಯಮಲ್ಲ ಪೆರ್ಮಾಡಿ ಜಯಸಿಂಹನು ತರ್ದವಾಡಿ-೧೦೦೦ವನ್ನು ಆಳುತ್ತಿರಬೇಕಾದಾಗ ಉತ್ತರೇಶ್ವರ ದೇವರ ಮಠದಲ್ಲಿ ಓದುವ ವಿದ್ಯಾರ್ಥಿ ಮತ್ತು ತಪೋಧನರ ಊಟಕ್ಕೆಂದು ಮಾರಸಿಂಗನಪಳ್ಳಿ ಗ್ರಾಮವನ್ನು ಬಲ್ಲವರಸನಿಂದ ಪಡೆದು ಪಾಶುಪತ ಯೋಗಾಚಾರ್ಯನಾದ ಸೋಮೇಶ್ವರ ಪಂಡಿತನ ಕಾಲನ್ನು ತೊಳೆದು ದಾನ ನೀಡುತ್ತಾನೆ.

ಮುಂದೆ ಎರಡನೆಯ ಸೋಮೇಶ್ವರನ ಆಳ್ವಿಕೆಯ ಕಾಲಕ್ಕೆ ಆತನ ಸಾಮಂತನಾಗಿದ್ದ ಬಲ್ಲರಸನನ್ನು ಕುಂಟೋಜಿ[೭೯] ಶಾಸನವು ಉಲ್ಲೇಖಿಸುತ್ತದೆ. ಈತ ನಾಗರಬಾವಿಯ ಬಲ್ಲೇಶ್ವರ ದೇವರ ಸೇವೆಗೆ ಭುಮಿಯನ್ನು ದಾನ ನೀಡಿದ್ದಾನೆ.

ನೊಳಂಬ ಪಲ್ಲವರ ದಾನದ ಕೊನೆಯ ಉಲ್ಲೇಖವನ್ನು ಬಿಜಾಪುರ[೮೦] ಶಾಸನವು ನೀಡುತ್ತದೆ. ಎರಡನೆಯ ಸೋಮೇಶ್ವರನ ಸಾಮಂತನಾದ ಸಿಂಗಣದೇವನನ್ನು ಶಾಸನವು ಉಲ್ಲೇಖಿಸುತ್ತದೆ. ಈತ ಕಿಸುವೊಳಲದ ಮೂಲಸ್ಥಾನ ದೇವರ ಸೇವೆಗಾಗಿ ೧೨ ಮತ್ತರು ಭೂಮಿಯನ್ನು ದಾನ ನೀಡಿದ್ದಾನೆ.

ಸಿಯಾಳರ ದಾನ:

ಸಿಯಾಳ ವಂಶದ ಎರಡು ದಾನಗಳ ಉಲ್ಲೇಖ ವಿಜಯಪುರ ಜಿಲ್ಲೆಯಲ್ಲಿ ಕಂಡು ಬರುತ್ತದೆ. ಈ ಎರಡೂ ದಾನಗಳನ್ನು ಆರನೆಯ ವಿಕ್ರಮಾದಿತ್ಯನ ಸಾಮಂತನಾದ ಸಿಂಗರಸ ನೀಡಿದ್ದಾನೆ. ಗಮನಾರ್ಹ ಅಂಶವೆಂದರೆ ಎರಡೂ ಶಾಸನಗಳು ಆರನೆಯ ವಿಕ್ರಮಾದಿತ್ಯನ ಪ್ರಾರಂಬಿಕ ಮತ್ತು ಅಂತಿಮ ಕಾಲಘಟ್ಟದ ಶಾಸನಗಳಾಗಿವೆ. ಅಂದರೆ ಸಿಂಗರಸ ತನ್ನ ಜೀವಿತದುದ್ದಕ್ಕೂ ವಿಕ್ರಮನಿಗೆ ನಿಷ್ಠನಾಗಿದ್ದುದು ಕಂಡು ಬರುತ್ತದೆ. ಇವನ ದಾನದ ಮೊದಲ ಉಲ್ಲೇಖವನ್ನು ಕುಳೇಕುಮಟಗಿ[೮೧] ಶಾಸನವು ನೀಡುತ್ತದೆ. ಸಿಂಗರಸನು ಇನ್ನೋರ್ವ ಸಾಮಂತನಾದ ಉದಯಾದಿತ್ಯರಸನ ಜೊತಗೂಡಿ ಕುಂಬಿಟ್ಟಿಗೆಯ ಚಂಡೇಶ್ವರ ದೇವರ ಸೇವೆಗೆಂದು ಭೂಮಿಯನ್ನು ದಾನ ನೀಡಿಒದ್ದಾನೆ. ಮುಂದೇ ಕ್ರಿ.ಶ.೧೧೨೫ ರ ಸುಮಾರಿಗೆ ಕಡ್ಲೆವಾಡದಲ್ಲಿ[೮೨] ರಾಜ ವಿಕ್ರಮಾದಿತ್ಯನ ಜೊತೆಗೂಡಿ ಉತ್ತರಾಯಣ ಸಂಕ್ರಾಂತಿ ಹಬ್ಬದ ನಿಮಿತ್ತ ಸೋಮೇಶ್ವರ ದೇವರ ಸೇವೆಗೆ ಸೆಂಬೆವಾಡ ಗ್ರಾಮದ ಉಭಯಸ್ವಾಮ್ಯವನ್ನು ದಾನ ನೀಡಿದ್ದಾನೆ.

ಇನ್ನು ಬಮ್ಮಿದೇವ ಮಹಾಸಾಮಂತನ ಉಲ್ಲೇಖವು ೨ ಶಾಸನಗಳಲ್ಲಿ ಕಂಡು ಬರುತ್ತದೆ. ಕ್ರಿ.ಶ.೧೧೭೪ರ ಕಡ್ಲೆವಾಡ[೮೩] ಶಾಸನವು ಈತನ ಮೊದಲ ಉಲ್ಲೇಖವನ್ನು ನೀಡುತ್ತದೆ. ಈ ಸಮಯಕ್ಕೆ ಮಹಾಪ್ರಧಾನನಾಗಿ ಕಾರ್ಯ ನಿರ್ವಹಿಸುತ್ತಿದ್ದ ಈತ ಸ್ಥಳದ ಸೋಮನಾಥ ದೇವರ ಸೇವೆಗೆಂದು ಕೆಲವು ತೆರಿಗೆಯನ್ನು ದಾನ ನೀಡಿದ್ದಾನೆ.ಮುಂದೆ ಕ್ರಿ.ಶ.೧೧೮೪ ರ ಬಿಜಾಪುರ[೮೪]

ಶಾಸನದಲ್ಲಿ ಈತ ಕಂಡು ಬರುತ್ತಾನೆ. ಈ ಸಮಯಕ್ಕೆ ನಾಲ್ಕನೆಯ ಸೋಮೇಶ್ವರನ ಸಾಮಂತನಾಗಿ ಈತ ಕಾರ್ಯನಿರ್ವಹಿಸುತ್ತಿದ್ದ. ತನ್ನ ತಂದೆ ಗೋಮರಸ ಕಟ್ಟಿಸಿದ ಸ್ವಯಂಭು ದೇವರ ಸೇವೆಗೆ ಭೂಮಿಯನ್ನು ದಾನ ನೀಡಿದ್ದಾನೆ.

ಇವರಲ್ಲದೇ ಇನ್ನು ಹಲವಾರು ಸಾಮಂತರು ದಾನ ನೀಡಿರುವುದು ಶಾಸನಗಳಲ್ಲಿ ಕಂಡು ಬರುತ್ತದೆ. ಅವುಗಳ ಯಾದಿಯನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

ಸಾಮಂತರ ದಾನಗಳನ್ನು ಉಲ್ಲೇಖಿಸುವ ಶಾಸನಗಳು:

ಅ.ಸಂ	ಗ್ರಾಮ	ತಾಲೂಕು	ಕಾಲ	ಸಾಮಂತರು	ದೇವಾಲಯ	ದಾನ	ಉಲ್ಲೇಖ
೦೧	ರೂಗಿ	ಇಂಡಿ	ಕ್ರಿ.ಶ.೧೦೧೫	ದೇವಣರಸ	ನಗರೇಶ್ವರ	ಭೂಮಿ, ಗಾಣ, ಅಂಗಡಿ	ಕ.ವಿ.ವಿ.ಶಾ.ಸಂ–೧೦ ಸಂ–೬೧
೦೨	ರೂಗಿ	ಇಂಡಿ	ಕ್ರಿ.ಶ.೧೦೧೯	ದಾಸರಸ	ನಗರೇಶ್ವರ	ಭೂಮಿ, ಹಣ	ಕ.ವಿ.ವಿ.ಶಾ.ಸಂ–೧೦ ಸಂ–೬೦
೦೩	ಬಾವೂರು	ಮುದ್ದೇಬಿಹಾಳ	ಕ್ರಿ.ಶ.೧೦೩೨	ಮೈಲರಸ	ಮೂಲಸ್ಥಾನ	ಭೂಮಿ	ಕ.ವಿ.ವಿ.ಶಾ.ಸಂ–೧೦ ಸಂ–೩೬
೦೪	ಬಿದಿರಕುಂದಿ	ಮುದ್ದೇಬಿಹಾಳ	ಕ್ರಿ.ಶ.೧೦೩೨	ನಾಗವರ್ಮರಸ	ಶಿವಾಲಯ	ಭೂಮಿ, ಗಾಣ	ಕ.ವಿ.ವಿ.ಶಾ.ಸಂ–೧೦ ಸಂ–೦೧
೦೫	ದೇವೂರು	ಸಿಂದಗಿ	ಕ್ರಿ.ಶ.೧೦೬೪	ವಾರರಸ	ಮಾರಸಿಂಗೇಶ್ವರ	ಭೂಮಿ	ಕ.ವಿ.ವಿ.ಶಾ.ಸಂ–೧೦ ಸಂ–೭೯
೦೬	ಮಾರಸನಹಳ್ಳಿ	ಇಂಡಿ	ಕ್ರಿ.ಶ.೧೦೬೬	ಪೆರ್ಮಾಡಿ ಜಯಸಿಂಹ	ಉತ್ತರೇಶ್ವರ	ಗ್ರಾಮ	ಕ.ವಿ.ವಿ.ಶಾ.ಸಂ–೧೦ ಸಂ–೫೪
೦೭	ಕುಂಟೋಜಿ	ಮುದ್ದೇಬಿಹಾಳ	ಕ್ರಿ.ಶ.೦೬	ಬಲ್ಲರಸ	ಬಲ್ಲೇಶ್ವರ	ಭೂಮಿ	ಕ.ವಿ.ವಿ.ಶಾ.ಸಂ–೧೦ ಸಂ–೦೬
೦೮	ಬಿಜಾಪುರ	ಬಿಜಾಪುರ	ಕ್ರಿ.ಶ.೧೦೭೦	ಸಿಂಗಣದೇವ	ಮಹಾದೇವ	ಭೂಮಿ	ಕ.ವಿ.ವಿ.ಶಾ.ಸಂ–೧೦ ಸಂ–೩೬
೦೯	ಕುಳೇ ಕುಮಟಗಿ	ಸಿಂದಗಿ	ಕ್ರಿ.ಶ.೧೦೭೭	ಸಿಂಗರಸ	ಚಂಡೇಶ್ವರ	ಭೂಮಿ	ಕ.ವಿ.ವಿ.ಶಾ.ಸಂ–೧೦ ಸಂ–೫೪
೧೦	ಕೊಂಡಗುಳಿ	ಸಿಂದಗಿ	ಕ್ರಿ.ಶ.೧೧೦೭	ಕೇಶಿರಾಜ	ಸೋಮೇಶ್ವರ	ಭೂಮಿ	ಕ.ವಿ.ವಿ.ಶಾ.ಸಂ–೧೦ ಸಂ–೧೦೦
೧೧	ಕಡ್ಲೆವಾಡ	ಸಿಂದಗಿ	ಕ್ರಿ.ಶ.೧೧೨೫	ಸಿಂಗರಸ	ಸೋಮೇಶ್ವರ	ಉಭಯ ಸ್ವಾಮ್ಯ	ಕ.ವಿ.ವಿ.ಶಾ.ಸಂ–೧೦ ಸಂ–೪೪
೧೨	ಕಡ್ಲೆವಾಡ	ಸಿಂದಗಿ	ಕ್ರಿ.ಶ.೧೧೭೪	ಬಮ್ಮಿದೇವರಸ	ಸೋಮನಾಥ	ತೆರಿಗೆ	ಕ.ವಿ.ವಿ.ಶಾ.ಸಂ–೧೦ ಸಂ–೩೮
೧೩	ಬಿಜಾಪುರ	ಬಿಜಾಪುರ	ಕ್ರಿ.ಶ.೧೧೮೪	ಬಮ್ಮಿದೇವ	ಸ್ವಯಂಭು ದೇವರು	ಭೂಮಿ	ಕ.ವಿ.ವಿ.ಶಾ.ಸಂ–೧೦ ಸಂ–೦೨

೧೪	ಜೆಟ್ಟಗಿ	ಮುದ್ದೇಬಿಹಾಳ	ಕ್ರಿ.ಶ.೧೨೫೭	ಮುದ್ದಿಗಿದೇವ	ಮಲ್ಲಿಕಾರ್ಜುನ	ಗ್ರಾಮ	ಕ.ವಿ.ವಿ.ಶಾ.ಸಂ-೧೦ ಸಂ-೨೧

ದಂಡನಾಯಕರ ದಾನ:

ವಿಜಯಪುರ ಜಿಲ್ಲೆಯಲ್ಲಿ ದಂಡನಾಯಕರ ದಾನಗಳನ್ನು ಉಲ್ಲೇಖಿಸುವ ಒಟ್ಟು ೨೧ ಶಾಸನಗಳು ಕಂಡು ಬರುತ್ತವೆ. ಅವುಗಳು ಈ ಕೆಳಗಿನಂತಿವೆ. ದಂಡನಾಯಕರ ದಾನವನ್ನು ಉಲ್ಲೇಖಿಸುವ ಮೊದಲ ಶಾಸನವೆಂದರೆ ಕ್ರಿ.ಶ.೧೦೭೪ ರ ಬಿಜಾಪುರ[೮೫] ಶಾಸನವಾಗಿದೆ. ಶಾಸನವು ಎರಡನೆಯ ಸೋಮೇಶ್ವರನ ದಂಡನಾಯಕನಾದ ನಾಕಿಮಯ್ಯನನ್ನು ಉಲ್ಲೇಖಿಸುತ್ತದೆ. ಈತ ತರ್ದವಾಡಿ-೧೦೦೦ ವನ್ನು ಆಳುತ್ತಿರಬೇಕಾದಾಗ ವಿಜಯಪುರದಲ್ಲಿ ಸ್ವಯಂಭು ಸಿದ್ದೇಶ್ವರ ದೇವಾಲಯವನ್ನು ನಿರ್ಮಿಸಿ ಅಲ್ಲಿನ ತಪೋಧನರ ಆಹಾರ ಬಟ್ಟೆ ಮುಂತಾದ ವೆಚ್ಚಗಳಿಗೆಂದು ಭೂಮಿಯನ್ನು ದಾನ ನೀಡಿದ್ದಾನೆ.

ದಂಡನಾಯಕರ ದಾನದ ಕೊನೆಯ ಉಲ್ಲೇಖವನ್ನು ಕ್ರಿ.ಶ.೧೨೮೧ ರ ಮುದ್ದೇಬಿಹಾಳ[೮೬] ಶಾಸನವು ನೀಡುತ್ತದೆ. ಶಾಸನವು ರಾಯ ದಂಡಾಧೀಶನನ್ನು ಉಲ್ಲೇಖಿಸುತ್ತಿದ್ದು ಈತ ರಾಮನಾಥೇಶ್ವರ ಮತ್ತು ಲಕುಮಣೇಶ್ವರ ದೇವರ ಸೇವೆಗೆ ಅಡಕೆ, ಭೂಮಿ, ಗಾಣ, ಬಾವಿ, ಮತ್ತು ಹಣವನ್ನು ದಾನ ನೀಡಿದ್ದಾನೆ.

ಇನ್ನು ಕೆಲ ದಂಡನಾಯಕರು ಒಂದಕ್ಕಿಂತ ಹೆಚ್ಚಿನ ದಾನಗಳನ್ನು ನೀಡಿರುವುದು ಶಾಸನಗಳಲ್ಲಿ ಕಂಡು ಬರುತ್ತದೆ. ಅವುಗಳು ಇಂತಿವೆ.

ದಂಡನಾಯಕ ವೈಜರಸನ ಉಲ್ಲೇಖ ಬಿಜಾಪುರದ[೮೭] ಎರಡು ಶಾಸನಗಳಲ್ಲಿ ಕಂಡು ಬರುತ್ತದೆ. ಶಾಸನಗಳು ಈತನನ್ನು ವೈಜನಾಥಯ್ಯ, ವೈಜರಸ ಎಂದು ಕರೆದಿವೆ. ಮೊದಲಿಗೆ ಈತ ಮೂರನೆಯ ಸೋಮೇಶ್ವರನ ದಂಡನಾಯಕನಾಗಿ ಕಾರ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ಸಿಂದಗೆಯ ಮೂಲಸ್ಥಾನ ದೇವರ ಸೇವೆಗೆಂದು ಹಣವನ್ನು ದಾನವಾಗಿ ನೀಡುತ್ತಾನೆ. ನಂತರ ಮುಂದೆ ಕ್ರಿ.ಶ.೧೧೯೦ ರ ಸುಮಾರಿಗೆ ಯಾದವ ದೊರೆ ಭಿಲ್ಲಮನ ಆಳ್ವಿಕೆಯ ಕಾಲಕ್ಕೆ ಆತನಿಗೆ ದಂಡನಾಯಕನಾಗಿ ಕಾರ್ಯ ನಿರ್ವಹಿಸುತ್ತಾ ತಂಬದ ಬಪ್ಪೇಶ್ವರ ದೇವರ ಜೀರ್ಣೋದ್ಧಾರಕ್ಕೆಂದು ಭೂಮಿ, ಮತ್ತು ನಿವೇಶನವನ್ನು ಸ್ಥಾನಾಚಾರ್ಯನಾದ ಚಂದರಾಸಿ ಮತ್ತು ಸಾಂತರಾಸಿಗಳಿಗೆ ದಾನ ನೀಡುತ್ತಾನೆ. ಒಟ್ಟಿನಲ್ಲಿ ಸುಮಾರು ೬೦ ವರ್ಷಗಳ ವಕಾಲ ಈತ ದಂಡನಾಯಕನಾಗಿ ಕಾರ್ಯ ನಿರ್ವಹಿಸಿದುದು ಶಾಸನಗಳಿಂದ ತಿಳಿದು ಬರುತ್ತದೆ.

ದಂಡನಾಯಕರಲ್ಲೇ ಹೆಚ್ಚಿನ ದಾನಗಳನ್ನು ನೀಡಿದವನೆಂದರೆ ಅದು ನನ್ನರಸ. ಈತನ ದಾನದ ಉಲ್ಲೇಖವನ್ನು ೪ ಶಾಸನಗಳು ನೀಡುತ್ತವೆ. ಮೊದಲ ಉಲ್ಲೇಖವನ್ನು ಕ್ರಿ.ಶ.೧೧೮೪ ರ ಮಿಣಜಿಗಿ[೮೮] ನೀಡುತ್ತದೆ. ಮಿಣಂಜಿಗೆಯ ಮಹಾಪ್ರಭುವಾದ ಮಾಚಿರಾಜ ತ್ರಿಕೂಟಾಚಲವನ್ನು ನಿರ್ಮಿಸಿದಾಗ ವಿಠರಸ ದಂಡನಾಯಕನ ವಿನಂತಿಯ ಮೇರೆಗೆ ಇತರ ಅಧಿಕಾರಿಗಳ ಜೊತೆಗೂಡಿ ದೇಸಿಯ ದಣ್ಣಾಯಕನಾದ ನನ್ನರಸ ದೇವರ ಅಂಗರಂಗಭೋಗ, ಜೀರ್ಣೋದ್ಧಾರಕ್ಕೆಂದು ಭೂಮಿ, ನಿವೇಶನ, ಗಾಣಗಳನ್ನ ದಾನ ನೀಡಿದ್ದಾನೆ. ಮುಂದೆ ಕ್ರಿ.ಶ.೧೧೮೯ ರ ಸುಮಾರಿಗೆ ಯಾದವ ದೊರೆ ಭಿಲ್ಲಮನ ದಂಡನಾಯಕನಾಗುತ್ತಾನೆ. ಭಿಲ್ಲಮನ ಆಳ್ವಿಕೆಯ ಕಾಳಕ್ಕೆ ಸುಮಾರು ೩ ದಾನಗಳನ್ನು ನೀಡಿದ್ದಾನೆ. ಈ ಸಮಯಕ್ಕೆ ನನ್ನರಸ ತನ್ನ ಹೆಸರಿನಲ್ಲಿ ನನ್ನೇಶ್ವರ ದೇವಾಲಯವನ್ನು ಮಾಡಿಸಿ ಆ ದೇವರ ಪೂಜೆ, ನಂದಾದೀವಿಗೆ, ನೈವೇದ್ಯಕ್ಕೆಂದು ಭೂಮಿಯನ್ನು ದಾನ ನೀಡುತ್ತಾನೆ.[೮೯] ಕ್ರಿ.ಶ.೧೧೮೯ ರ ಪೀರಾಪುರದ[೯೦] ಎರಡು ಶಾಸನಗಳು ನನ್ನರಸ ತಾನು ಮಾಡಿಸಿದ ಪಿರಿಯಮೇಶ್ವರ ಮತ್ತು ನನ್ನೇಶ್ವರ ದೇವರಸ ಸೇವೆಗೆ ಭೂಮಿಯನ್ನು ದಾನ ನೀಡಿದುದನ್ನು ಉಲ್ಲೇಖಿಸುತ್ತವೆ.

ಈ ಮೇಲಿನ ಶಾಸನಗಳಲ್ಲದೇ ಇನ್ನೂ ಹಲವು ಶಾಸನಗಳು ದಮಡನಾಯಕರ ದಾನದ ವಿವರಗಳನ್ನು ನೀಡುತ್ತವೆ. ಅವುಗಳ ಯಾದಿಯನ್ನು ಈ ಕೆಳಗಿನಂತೆ ನೀಡಲಾಗಿದೆ.

ದಂಡನಾಯಕರ ದಾನದ ಶಾಸನಗಳ ಯಾದಿ:

ಅ.ಸಂ	ಗ್ರಾಮ	ತಾಲೂಕು	ಕಾಲ	ದಂಡನಾಯಕ	ದೇವಾಲಯ	ದಾನ	ಉಲ್ಲೇಖ
೦೧	ಬಿಜಾಪುರ	ಬಿಜಾಪುರ	ಕ್ರಿ.ಶ.೧೦೭೪	ನಾಕಿಮಯ್ಯ	ಸಿದ್ದೇಶ್ವರ	ಭೂಮಿ	ಕ.ವಿ.ವಿ.ಶಾ.ಸಂ–೧೦ ಸಂ–೦೭
೦೨	ಮಲಘಾಣ	ಸಿಂದಗಿ	ಕ್ರಿ.ಶ.೧೧೦೦	ವಾಮದೇವಯ್ಯ	ವಾಮೇಶ್ವರ	ಭೂಮಿ, ನಿವೇಶನ	ಕ.ವಿ.ವಿ.ಶಾ.ಸಂ–೧೦ ಸಂ–೬೧
೦೩	ಬಿಜಾಪುರ	ಬಿಜಾಪುರ	ಕ್ರಿ.ಶ.೧೧೨೦	ಜಯಕರ್ಣದೇವ	ಮೂಲಸ್ಥಾನ	ಭೂಮಿ, ಅಂಗಡಿ, ಎಣ್ಣೆ, ನಿವೇಶನ	ಕ.ವಿ.ವಿ.ಶಾ.ಸಂ–೧೦ ಸಂ–೩೧
೦೪	ಲೋಟಗೇರಿ	ಮುದ್ದೇಬಿಹಾಳ	ಕ್ರಿ.ಶ.೧೧೨೧	ಬಮ್ಮೇಯ ನಾಯಕ	ಮೂಲಸ್ಥಾನ	–	ಕ.ವಿ.ವಿ.ಶಾ.ಸಂ–೧೦ ಸಂ–೬೮
೦೫	ಬಿಜಾಪುರ	ಬಿಜಾಪುರ	ಕ್ರಿ.ಶ.೧೧೨೧	ಗೋವಿಂದ	ತ್ರೈಪುರುಷ	ಹಣ	ಕ.ವಿ.ವಿ.ಶಾ.ಸಂ–೧೦ ಸಂ–೧೯
೦೬	ಬಿಜಾಪುರ	ಬಿಜಾಪುರ	ಕ್ರಿ.ಶ.೧೧೨೯	ಸೋವರಸ ವೈಜನಾಥಯ್ಯ	ಮೂಲಸ್ಥಾನ	ಹಣ ತೆರಿಗೆ	ಕ.ವಿ.ವಿ.ಶಾ.ಸಂ–೧೦ ಸಂ–೨
೦೭	ಕಕ್ಕಳಮೇಲ	ಸಿಂದಗಿ	ಕ್ರಿ.ಶ.೧೧೩೬	ಬಮ್ಮದೇವ	ಮೂಲಸ್ಥಾನ	ಭೂಮಿ,	ಕ.ವಿ.ವಿ.ಶಾ.ಸಂ–

						ನಿವೇಶನ	೧೦ ಸಂ-೫೬
೦೮	ಮುತ್ತಗಿ	ಬಾಗೇವಾಡಿ	ಕ್ರಿ.ಶ.೧೧೪೭	ಬರ್ಮಣ	ಶಿವಲಿಂಗ	ಗ್ರಾಮ, ಭೂಮಿ, ತೆರಿಗೆ	ಕ.ವಿ.ವಿ.ಶಾ.ಸಂ–೧೦ ಸಂ-೫೧
೦೯	ಮುತ್ತಗಿ	ಬಾಗೇವಾಡಿ	ಕ್ರಿ.ಶ.೧೧೫೮	ಶ್ರೀಧರ	ಶಿವಲಿಂಗ	ಪುನರ್ದತ್ತಿ	ಕ.ವಿ.ವಿ.ಶಾ.ಸಂ–೧೦ ಸಂ-೪೪
೧೦	ಭೂಯಾರ	ಇಂಡಿ	ಕ್ರಿ.ಶ.೧೧೬೨	ಲಕ್ಷ್ಮೀದೇವ	ಮಲ್ಲಿಕಾರ್ಜುನ	ಭೂಮಿ	ಕ.ಪಿ.ಪಿ.ಶಾ.ಸಂ–೧೦ ಸಂ-೫೦
೧೧	ಕನ್ನೊಳ್ಳಿ	ಸಿಂದಗಿ	ಕ್ರಿ.ಶ.೧೧೬೪	ರಾಮಯ್ಯ	ಚಿಕ್ಕೇಶ್ವರ, ನಾಗೇಶ್ವರ	ತೆರಿಗೆ	ಕ.ಪಿ.ಪಿ.ಶಾ.ಸಂ–೧೦ ಸಂ-೧೬
೧೨	ಇಂಗಳೇಶ್ವರ	ಬಗೇವಾ	ಕ್ರಿ.ಶ.೧೧೭೬	ಸೋವಿದೇವ	ಸೋಮನಾಥ	ಭೂಮಿ	ಕ.ಪಿ.ಪಿ.ಶಾ.ಸಂ–೧೦ ಸಂ-೦೩
೧೩	ಮಿಣಜಗಿ	ಮುದ್ದೇಬಿಹಾಳ	ಕ್ರಿ.ಶ.೧೧೮೪	ನನ್ನರಸ	ಮಲ್ಲಿಕಾರ್ಜುನ	ಭೂಮಿ, ಮನೆ, ಗಾಣ, ತೆರಿಗೆ	ಕ.ಪಿ.ಪಿ.ಶಾ.ಸಂ–೧೦ ಸಂ-೩೭
೧೪	ಪೀರಾಪುರ	ಮುದ್ದೇಬಿಹಾಳ	ಕ್ರಿ.ಶ.೧೧೮೯	ನನ್ನರಸ	ನನ್ನೇಶ್ವರ	ಭೂಮಿ	ಕ.ವಿ.ವಿ.ಶಾ.ಸಂ–೧೦ ಸಂ-೪೮
೧೫	ಪೀರಾಪುರ	ಮುದ್ದೇಬಿಹಾಳ	ಕ್ರಿ.ಶ.೧೧೮೯	ನನ್ನರಸ	ಪಿರಿಯಮೇಶ್ವರ	ಭೂಮಿ	ಕ.ಪಿ.ಪಿ.ಶಾ.ಸಂ–೧೦ ಸಂ-೫೧
೧೬	ಐರಾಪುರ	ಮುದ್ದೇಬಿಹಾಳ	ಕ್ರಿ.ಶ.೧೧೮೯	ನನ್ನರಸ	ನನ್ನೇಶ್ವರ	ಭೂಮಿ	ಕ.ವಿ.ವಿ.ಶಾ.ಸಂ–೧೦ ಸಂ-೭೧
೧೭	ಬಿಜಾಪುರ	ಬಿಜಾಪುರ	ಕ್ರಿ.ಶ.೧೧೯೦	ವೈಜರಸ	ಬಪ್ಪೇಶ್ವರ	ಭೂಮಿ, ನಿವೇಶನ	ಕ.ವಿ.ವಿ.ಶಾ.ಸಂ–೧೦ ಸಂ-೨೫
೧೮	ಕಡ್ಲೆವಾಡ	ಸಿಂದಗಿ	ಕ್ರಿ.ಶ.೧೧೯೨	ಸೋವಿದೇವ	ಸೋಮನಾಥ ಮಾಣಿಕೇಶ್ವರ	ತೆರಿಗೆ	ಕ.ವಿ.ವಿ.ಶಾ.ಸಂ–೧೦ ಸಂ-೪೬
೧೯	ಸಂಖ	ಇಂಡಿ	ಕ್ರಿ.ಶ.೧೧೯೪	ಮಾಯಿದೇವ	ಮಲ್ಲಿಕಾರ್ಜುನ	ಗ್ರಾಮ	ಕ.ವಿ.ವಿ.ಶಾ.ಸಂ–೧೦ ಸಂ-೬೮
೨೦	ಯಾಳವಾರ	ಬಾಗೇವಾಡಿ	ಕ್ರಿ.ಶ.೧೨೨೨	ಮಲ್ಲಿದೇವ	ಗಂಗೇಶ್ವರ	ಭೂಮಿ, ತೆರಿಗೆ, ಗಾಣ	ಕ.ವಿ.ವಿ.ಶಾ.ಸಂ–೧೦ ಸಂ-೫೬
೨೧	ಮುದ್ದೇಬಿಹಾಳ	ಮುದ್ದೇಬಿಹಾಳ:	ಕ್ರಿ.ಶ.೧೨೮೧	ರಾಯ ದಂಡಾಧೀಶ	ರಾಮನಾಥೇಶ್ವರ ಲಕುಮಣೇಶ್ವರ	ಅಡಕೆ, ಭೂಮಿ, ಗಾಣ, ಬಾವಿ, ಹಣ	ಕ.ವಿ.ವಿ.ಶಾ.ಸಂ–೧೦ ಸಂ-೦೨

ವ್ಯಾಪಾರಿ ಸಂಘಗಳ ದಾನ:

ಮಧ್ಯಕಾಲೀನ ಕರ್ನಾಟಕದಲ್ಲಿ ಶೈವ ಧರ್ಮವನ್ನು ಪ್ರಬಲವಾಗಿ ಪೋಷಿಸಿದವರಲ್ಲಿ ವ್ಯಾಪಾರಿ ಸಂಘಗಳೂ ಪ್ರಮುಖವಾಗಿವೆ. ಸಾಕಷ್ಟು ಸ್ಥಿತಿವಂತರಾದ ವ್ಯಾಪಾರಿ ಸಂಘಗಳ ಬೆಂಬಲ ಅಗತ್ಯವಾಗಿ ಆಗಿನ ಧರ್ಮಗಳಿಗೆ ಅವಶ್ಯಕವಾಗಿತ್ತು. ಅದಕ್ಕೆ ಅನುಗುಣವಾಗಿ ವ್ಯಾಪಾರಿ ಸಂಘಗಳು ಸಹ ಶೈವ ಧರ್ಮವನ್ನು ಬೆಂಬಲಿಸಿಕೊಂಡು ಬಂದವು. ಬಹುಪಾಲು ದಾನಗಳಲ್ಲಿ ವ್ಯಾಪಾರಿ ಸಂಘ ಅಥವಾ ವ್ಯಾಪಾರಿಗಳು ಭಾಗಿಯಾಗಿರುವುದನ್ನು ಕಾಣುತ್ತೇವೆ. ಅಲ್ಲದೇ ದೇವಾಲಯ ಸ್ಥಾನಗಳ ರಕ್ಷಣೆಯ ಹೊಣೆಗಾರಿಕೆಯನ್ನೂ ಸಹ ವ್ಯಾಪಾರಿ ಸಂಘಗಳೇ ನಿರ್ವಹಿಸುತ್ತಿದ್ದುದನ್ನು ಸಮಕಾಲೀನ ಶಾಸನಗಳಲ್ಲಿ ಕಾಣಬಹುದಾಗಿದೆ. ವಿಜಯಪುರ ಜಿಲ್ಲೆಯನ್ನು ಅನುಲಕ್ಷಿಸಿದಾಗ ಸಾಕಷ್ಟು ಶಾಸನಗಳು ವ್ಯಾಪಾರಿ ಸಂಘಗಳ ದಾನಗಳನ್ನು ನಿರ್ದೇಶಿಸುತ್ತವೆ. ಅವುಗಳು ಇಂತಿವೆ.

ಸಾಸಿರ್ವರ ದಾನ:

ವಿಜಯಪುರದ ಒಂದು ಶಾಸನ ಮಾತ್ರ ಸಾಸಿರ್ವರ ದಾನವನ್ನು ಉಲ್ಲೇಖಿಸುತ್ತದೆ. ಕ್ರಿ.ಶ.೧೧೭೮ ರ ಬಾಗೇವಾಡಿ[೧೧] ಶಾಸನವು ಎಲೆಯ ಹೇರಿನ ಮೇಲಿನ ಸುಂಕವನ್ನು ಬೊಂತೇಶ್ವರ ದೇವರ ಸೇವೆಗೆ ಸಾಸಿರ್ವರು ದಾನ ನೀಡಿದುದನ್ನು ಉಲ್ಲೇಖಿಸುತ್ತದೆ.

ಬಣಜಿಗರು:

ಬಣಜಿಗ, ಬಣಂಜು ಎಂದೆಲ್ಲ ಈ ವ್ಯಾಪಾರಿ ವರ್ಗವು ಶಾಸನಗಳಲ್ಲಿ ಗುರುತಿಸ್ಪಟ್ಟಿದೆ. ನಿಡೋಣಿ[೨] ಶಾಸನವು ಮಾಣಿಕೇಶ್ವರ ದೇವರ ಚೈತ್ರ ಪವಿತ್ರ, ಅಂಗರಂಗಭೋಗ, ಜೀರ್ಣೋದ್ಧಾರಗಳಿಗೆಂದು ಬಣಜಿಗರು ೨ ಗದ್ಯಾಣ ಹಣವನ್ನು ದಾನ ನೀಡಿದುದನ್ನು ಉಲ್ಲೇಖಿಸುತ್ತದೆ.

ತೆಲ್ಲಿಗರು:

ತೈಲದ ವ್ಯಾಪಾರ ಅಥವಾ ಉತ್ಪಾದನೆ ಮಾಡುವವರೇ ತೆಲ್ಲಿಗರಾಗಿದ್ದಾರೆ. ತೆಲ್ಲಿಗರದೇ ಪ್ರತ್ಯೇಕವಾದ ಸಂಘಗಳಿದ್ದು ಅವುಗಳನ್ನು ತೆಲ್ಲಿಗರ ಕೊತ್ತಳಿ, ತೆಲ್ಲಿಗ ಐವೊತ್ತೊಕ್ಕಲು, ತೆಲ್ಲಿಗ ಅರವೊತ್ತೊಕ್ಕಲು ಎಂದು ಶಾಸನಗಳು ಗುರುತಿಸಿವೆ. ವಿಜಯಪುರ ಜಿಲ್ಲೆಯಲ್ಲಿ ಒಂದು ಶಾಸನ ಮಾತ್ರ ತೆಲ್ಲಿಗರ ದಾನವನ್ನು ಉಲ್ಲೇಖಿಸುತ್ತದೆ. ತೆಲ್ಲಿಗ ಐವೊತ್ತೊಕ್ಕಲು ಇರತರ ತೆಲ್ಲಿಗರ ಜೊತೆ ಸೇರಿ ರೂವಿಗೆಯ ಕೇದಾರ ದೇವರ ಸೇವೆಗೆ ಎಣ್ಣೆಯನ್ನು ಮತ್ತು ಗಾಣವನ್ನು ದಾನ ನೀಡಿದ್ದಾರೆ.

ಗಾತ್ರಿಗರು:

ವೀಳ್ಯದೆಲೆಯ ವ್ಯಾಪಾರದಲ್ಲಿ ಪ್ರಮುಖರಾದವರೇ ಎಲೆಯ ಬೋಜಂಗರು ಮತ್ತು ಗಾತ್ರಿಗರು. ಗಾತ್ರಿಗರ ದಾನದ ಒಂದು ಉಲ್ಲೇಖವು ಈ ರೀತಿ ದೊರೆಯುತ್ತದೆ. ನಗರೇಶ್ವರ ದೇವರ ಸೇವೆಗೆ ಗಾತ್ರಿಗರು ಹೇರಿಗೆ ೨೦೦ ಎಲೆಯನ್ನು ಮತ್ತು ೩ ಗದ್ಯಾಣವನ್ನು ದಾನ ನೀಡಿರುವುದನ್ನು ರೂಗಿ[೯೩] ಶಾಸನವು ಉಲ್ಲೇಖಿಸಿದೆ.

ಮುಮ್ಮರಿದಂಡ:

ವ್ಯಾಪಾರ ವಹಿವಾಟಿನಲ್ಲಿ ಹೆಸರಾದ ಮತ್ತೊಂದು ವ್ಯಾಪಾರಿ ಸಂಘ. ವಿಜಯಪುರ ಜಿಲ್ಲೆಯಲ್ಲಿ ಸುಮಾರು ೦೫ ಶಾಸನಗಳು ಉಲ್ಲೇಖಿಸುತ್ತವೆ. ಮುಮ್ಮರಿದಂಡದ ಮೊದಲ ದಾನವನ್ನು ಕ್ರಿ.ಶ.೧೧೨೪ ರ ಹಿರೇಬೇವಿನೂರು[೯೪] ಶಾಸನವು ಉಲ್ಲೇಖಿಸುತ್ತದೆ. ಪುರ ಮಠದ ಭೋಗೇಶ್ವರ ದೇವರ ಪ್ರತಿಷ್ಠಾಪನೆಯ ಕಾಲದಲ್ಲಿ ಮುಮ್ಮರಿದಂಡವು ೩೬ ಬೀಡಿನ ಸೆಟ್ಟಿಯರು ಮತ್ತು ಉಭಯ ನಾನಾದೇಸಿಯರ ಜೊತೆ ಸೇರಿ ಮಾರಿದ ಹೊಂಗೆಗೆ ಒಂದು ಮಾನ ಮತ್ತು ಹೇರಿಗೆ ೫೦ ಎಲೆಯನ್ನು ಮತ್ತು ೧೦ ಅಡಕೆಯನ್ನು ದಾನ ನೀಡಿದ್ದಾರೆ.

ಎರಡನೆಯ ಉಲ್ಲೇಖವನ್ನು ಕ್ರಿ.ಶ. ೧೧೬೨ರ ಭೂಯಾರ್[೯೫] ಶಾಸನವು ಮುಮ್ಮರಿದಂಡವು ಮಲ್ಲಿಕಾರ್ಜುನ ದೇವರ ಸೇವೆಗೆ ತೆರಿಗೆಯನ್ನು ದಾನ ನೀಡಿರುವುದನ್ನು ಉಲ್ಲೇಖಿಸಿದೆ.

ಮೂರನೆಯ ಉಲ್ಲೇಖವನ್ನು ಕನ್ನೊಳ್ಳಿ[೯೬] ಶಾಸನವು ನೀಡುತ್ತದೆ. ವಡ್ಡವ್ಯವಹಾರಿಯರಾದ ಬಾಚಿಸೆಟ್ಟಿ ಮತ್ತು ನಾಗಿಸೆಟ್ಟಿಯರು ಚಿಕ್ಕೇಶ್ವರ ಮತ್ತು ನಾಗೇಶ್ವರ ದೇವಾಲಯಗಳನ್ನು ನಿರ್ಮಿಸಿದಾಗ ಮುಮ್ಮರಿದಂಡವು ತೆರಿಗೆಯನ್ನು ದೇವರ ಪೂಜೆ ಪುನಸ್ಕಾರ, ಜೀರ್ಣೋದ್ಧಾರಕ್ಕೆಂದು ದಾನ ನೀಡುತ್ತಾರೆ.

ನಾಲ್ಕನೆಯ ಉಲ್ಲೇಖವನ್ನ ಬಿಜಾಪುರ್[೯೭] ಶಾಸನದಲ್ಲಿ ನೋಡಬಹುದಾಗಿದೆ. ಮುಮ್ಮರಿದಂಡವು ಉಳಿದ ವ್ಯಾಪಾರಿ ಸಂಘದ ಜೊತೆ ಸೇರಿ ರೂವಿಗೆಯ ನಾಗೇಶ್ವರ ದೇವರ ಸೇವೆಗೆ ವಸ್ತುಗಳನ್ನು ಕೊಂಡು ಮಾರಿದ ತೆರಿಗೆಯನ್ನು ದಾನ ನೀಡಿದ್ದಾರೆ.

ಮುಮ್ಮರಿದಂಡದ ದಾನದ ಕೊನೆಯ ಉಲ್ಲೇಖವನ್ನು ದೇವಣಗಾಂವ್[೯೮] ಶಾಸನವು ನೀಡುತ್ತದೆ. ಕಲಿದೇವರ ಧೂಪ, ದೀಪ. ನೈವೇದ್ಯಕ್ಕೆಂದು ಮುಮ್ಮರಿದಂಡ ಭೂಮಿ, ಗಾಣ, ಮತ್ತು ಧಾನ್ಯವನ್ನು ದಾನ ನೀಡಿದೆ.

ನಖರ:

ನಖರರ ದಾನದ ಉಲ್ಲೇಖವು ವಿಜಯಪುರ ಜಿಲ್ಲೆಯಲ್ಲಿ ಕೇವಲ ಒಂದು ಶಾಸನದಲ್ಲಿ ಮಾತ್ರ ಕಂಡು ಬರುತ್ತದೆ. ಶಾಸನಗಳಲ್ಲಿ ಇವರು ನಖರ, ನಕರ ಎಂದು ಕರೆಯಲ್ಪಟ್ಟಿದ್ದಾರೆ. ಇಂಗಳೇಶ್ವರ[೯೯] ಶಾಸನವು ಇಂಗಳೇಶ್ವರದ ಸೋಮನಾಥ ದೇವರ ಸೇವೆಗೆಂದು ವರ್ಷಪ್ರತಿ ಸಲ್ಲುವಂತೆ ತಮ್ಮ ಅಂಗಡಿಯಲ್ಲಿನ ಪಾಲೊಂದನ್ನು ದಾನ ನೀಡುತ್ತಾರೆ.

ಐಯ್ಯಾವೊಳೆ ಐನೂರ್ವರು:

ವಿಜಯಪುರ ಜಿಲ್ಲೆಯಲ್ಲಿ ಅತೀ ಹೆಚ್ಚು ದಾನ ನೀಡಿದ ವ್ಯಾಪಾರಿ ಸಂಘ ಇದಾಗಿದೆ. ಸುಮಾರು ೦೬ ದಾನಗಳು ಇವರಿಂದ ನೀಡಲ್ಪಟ್ಟಿವೆ. ಶಾಸನಗಳಲ್ಲಿ ಇವರು ಐಯ್ಯಾವೊಳೆ-೫೦೦, ಐನೂರ್ವರು, ಐನೂರ ಸ್ವಾಮಿಗಳು ಎಂದೆಲ್ಲ ಕರೆಯಲ್ಪಟ್ಟಿದ್ದಾರೆ.

ಇವರ ದಾನದ ಮೊದಲ ಉಲ್ಲೇಖವನ್ನು ಕ್ರಿ.ಶ.೧೦೯೮ರ ಯರಗಲ್[೧೦೦] ಶಾಸನವು ನೀಡುತ್ತದೆ. ಐಯ್ಯಾವೊಳೆ ಮತ್ತು ಇತರ ವ್ಯಾಪಾರಿಗಳು ಸೇರಿಕೊಂಡು ರಾಮೇಶ್ವರ, ಲಕ್ಷ್ಮೇಶ್ವರ ಮತ್ತು ದಾಸೇಶ್ವರ ದೇವರ ಸೇವೆಗೆ ದಾನ ನೀಡಿದ್ದಾರೆ.

ಎರಡನೆಯ ಉಲ್ಲೇಖವನ್ನು ಅಗರಖೇಡ[೧೦೧] ಶಾಸನವು ನೀಡುತ್ತದೆ. ಖೇಡದ ಸ್ವಯಂಭು ದೇವರ ಸೇವೆಗೆ ಪಂಚಶತವೀರ ಶಾಸನ್ಥರಾದ ಐನೂರ್ವ ಸ್ವಾಮಿಗಳು ಹತ್ತಿಯ ಮಳವೆಯನ್ನು ದಾನ ನೀಡಿದ್ದಾರೆ.

ಮೂರನೆಯ ಉಲ್ಲೇಖವು ಯಾಳವಾರ[೧೦೨] ಶಾಸನದಲ್ಲಿ ಕಂಡು ಬರುತ್ತದೆ. ಶಾಸನವು ಐನೂರ್ವರರನ್ನು ಉಲ್ಲೇಖಿಸಿದ್ದು ಇವರು ಗವರೇಶ್ವರ ದೇವರ ಸೇವೆಗೆಂದು ಭೂಮಿ ಎಣ್ಣೆ ಮತ್ತು ಅಡಕೆಯನ್ನು ದಾನ ನೀಡಿದ್ದಾರೆ.

ನಾಲ್ಕನೆಯ ಉಲ್ಲೇಖವನ್ನು ಪೀರಾಪುರ[೧೦೩] ಶಾಸನವು ನೀಡುತ್ತದೆ. ನನ್ನರಸನು ನಿರ್ಮಿಸಿದ ಪಿರಿಯಮೇಶ್ವರ ದೇವರ ಸೇವೆಗೆ ಐನೂರ್ವರು ಎಣ್ಣೆಯನ್ನು ದಾನ ನೀಡಿದ್ದಾರೆ.

ಐದನೆಯ ಉಲ್ಲೇಖವನ್ನು ಬಾಗೇವಾಡಿ[೧೦೪] ಶಾಸನವು ನೀಡುತ್ತದೆ. ಬೊಂತೇಶ್ವರ ದೇವರ ಸೇವೆಗೆ ಐನೂರ್ವರು ಮಹಾಜನರ ಜೊತೆಗೂಡಿ ಕೇರಿಯೊಂದನ್ನು ದಾನ ನೀಡಿದ್ದಾರೆ.

ಐಯ್ಯಾವೊಳೆಯ ಕೊನೆಯ ದಾನವನ್ನು ಡೋಣೂರು[೧೦೫] ಶಾಸನವು ಉಲ್ಲೇಖಿಸುತ್ತದೆ. ಇಲ್ಲಿನ ಐನೂರ್ವರು ಮೂಲಸ್ಥಾನ ದೇವರ ಹಾಲು ಮಂಡಿಗೆಗಾಗಿ ಭೂಮಿಯನ್ನು ದಾನ ನೀಡಿದ್ದಾರೆ.

ವ್ಯಾಪಾರಿ ಸಂಘಗಳ ದಾನದ ಶಾಸನಗಳು

ಅ.ಸಂ	ಗ್ರಾಮ	ತಾಲೂಕು	ಕಾಲ	ವ್ಯಾಪಾರಿ ಸಂಘ	ದೇವಾಲಯ	ದಾನ	ಉಲ್ಲೇಖ
೦೧	ರೂಗಿ	ಇಂಡಿ	ಕ್ರಿ.ಶ.೧೦೪೫	ತೆಲ್ಲಿಗ ಐವೊತ್ತೊಕ್ಕಲು	ಕೇದಾರ	ಗಾಣ ಎಣ್ಣೆ	ಕ.ವಿ.ವಿ.ಶಾ.ಸಂ-೧೦ ಸಂ-೫೮
೦೨	ರೂಗಿ	ಇಂಡಿ	ಕ್ರಿ.ಶ.೧೦೭೧	ಗಾತ್ರಿಗ	ನಖರೇಶ್ವರ	ಎಲೆ, ಹಣ	ಕ.ವಿ.ವಿ.ಶಾ.ಸಂ-೧೦ ಸಂ-೫೯
೦೩	ಯಾರಗಲ್	ಸಿಂದಗಿ	ಕ್ರಿ.ಶ.೧೧೯೮	ಅಯ್ಯಾವೊಳೆ-೫೦೦	ರಾಮೇಶ್ವರ	-	ಕ.ವಿ.ವಿ.ಶಾ.ಸಂ-೧೦ ಸಂ-೦೬
೦೪	ಅಗರಖೇಡ	ಇಂಡಿ	ಕ್ರಿ.ಶ.೧೧೧೯	ಐನೂರ ಸ್ವಾಮಿ	ಸ್ವಯಂಭು	ಹತ್ತಿ ಮಳವೆ	ಕ.ವಿ.ವಿ.ಶಾ.ಸಂ-೧೦ ಸಂ-೦೧
೦೫	ಹಿರೆ ಬೇವಿನೂರು	ಇಂಡಿ	ಕ್ರಿ.ಶ.೧೧೨೪	ಮುಮ್ಮುರಿದಂಡ ನಾನಾದೇಸಿ	ಭೋಗೇಶ್ವರ	ಎಲೆ, ಅಡಕೆ, ತೆರಿಗೆ	ಕ.ವಿ.ವಿ.ಶಾ.ಸಂ-೧೦ ಸಂ-೭೮
೦೬	ಯಾಳವಾರ	ಬಾಗೆವಾಡಿ	ಕ್ರಿ.ಶ.೧೧೫೮	ಐನೂರ್ವರು	ಗವರೇಶ್ವರ	ಭೂಮಿ ಅಡಕೆ ಎಣ್ಣೆ	ಕ.ವಿ.ವಿ.ಶಾ.ಸಂ-೧೦ ಸಂ-೫೮
೦೭	ಭೂಯಾರ	ಇಂಡಿ	ಕ್ರಿ.ಶ.೧೧೬೨	ಮುಮ್ಮುರಿದಂಡ	ಮಲ್ಲಿಕಾರ್ಜುನ	ತೆರಿಗೆ	ಕ.ವಿ.ವಿ.ಶಾ.ಸಂ-೧೦ ಸಂ-೫೦
೦೮	ಕನ್ನೊಳ್ಳಿ	ಸಿಂದಗಿ	ಕ್ರಿ.ಶ.೧೧೬೪	ಮುಮ್ಮುರಿದಂಡ	ಚಿಕ್ಕೇಶ್ವರ ನಾಗೇಶ್ವರ	ತೆರಿಗೆ	ಕ.ವಿ.ವಿ.ಶಾ.ಸಂ-೧೦ ಸಂ-೧೬
೦೯	ಬಿಜಾಪುರ	ಬಿಜಾಪುರ	ಕ್ರಿ.ಶ.೧೧೭೬	ಐಯ್ಯಾವೊಳೆ-೫೦೦	ನಾಗೇಶ್ವರ	ತೆರಿಗೆ	ಕ.ವಿ.ವಿ.ಶಾ.ಸಂ-೧೦ ಸಂ-೩೪
೧೦	ಇಂಗಳೇಶ್ವರ	ಬಾಗೇವಾಡಿ	ಕ್ರಿ.ಶ.೧೧೭೬	ನಖರ	ಸೋಮನಾಥ	ವ್ಯಾಪಾರದ ಭಾಗ	ಕ.ವಿ.ವಿ.ಶಾ.ಸಂ-೧೦ ಸಂ-೦೩
೧೧	ಬಾಗೇವಾಡಿ	ಬಾಗೇವಾಡಿ	ಕ್ರಿ.ಶ.೧೧೭೮	ಸಾಸಿರ್ವರು	ಬೊಂತೇಶ್ವರ	ತೆರಿಗೆ	ಕ.ವಿ.ವಿ.ಶಾ.ಸಂ-೧೦ ಸಂ-೨೫
೧೨	ಪೀರಾಪುರ	ಮುದ್ದೇಬಿಹಾಳ	ಕ್ರಿ.ಶ.೧೧೮೯	ಐನೂರ್ವರು	ಪಿರಿಯಮೇಶ್ವರ	ಎಣ್ಣೆ	ಕ.ವಿ.ವಿ.ಶಾ.ಸಂ-೧೦ ಸಂ-೫೧
೧೩	ಪೀರಾಪುರ	ಮುದ್ದೇಬಿಹಾಳ	ಕ್ರಿ.ಶ.೧೧೮೯	ಸೆಟ್ಟಿಗುತ್ತ	ನನ್ನೇಶ್ವರ	ಭೂಮಿ	ಕ.ವಿ.ವಿ.ಶಾ.ಸಂ-೧೦ ಸಂ-೪೮
೧೪	ಬಾಗೇವಾಡಿ	ಬಾಗೇವಾಡಿ	ಕ್ರಿ.ಶ.೧೧೯೯	ಐನೂರ್ವರು	ಬೊಂತೇಶ್ವರ	ಕೇರಿ	ಕ.ವಿ.ವಿ.ಶಾ.ಸಂ-೧೦ ಸಂ-೨೬

೧೫	ನಿಡೋಣಿ	ಬಿಜಾಪುರ	ಕ್ರಿ.ಶ.೧೨೦೯	ಬಣಜಿಗರು	ಸಿಂಘಣ	ಹಣ	ಕ.ಪ್ರಿ.ಪ್ರಿ.ಶಾ.ಸಂ-೧೦ ಸಂ-೮೧
೧೬	ದೇವಣಗಾಂವ್	ಸಿಂದಗಿ	-	ಮುಮ್ಮರಿದಂಡ ಅರವೊತ್ತೊಕ್ಕಲು	ಸಿಂಘಣ	ಭೂಮಿ, ಗಾಣ, ಧಾನ್ಯ	ಕ.ಪ್ರಿ.ಪ್ರಿ.ಶಾ.ಸಂ-೧೦ ಸಂ-೩೪
೧೭	ಡೋಣೂರು	ಬಾಗೇವಾಡಿ	೧೩ನೆಯ ಶತಮಾನ	ಐನೂರ್ವರು	-	ಭೂಮಿ	ಕ.ಪ್ರಿ.ಪ್ರಿ.ಶಾ.ಸಂ-೧೦ ಸಂ-೨೯

ಈ ಜಿಲ್ಲೆಯ ಇಂಗಳೇಶ್ವರ, ಮನಗೂಳಿ, ಮುತ್ತಗಿ, ಆಲಮೇಲ, ಹೊನವಾಡ, ದೇವೂರ ಕನ್ನೋಳಿ ಹೆಬ್ಬಾಳ, ಕಡ್ಲೇವಾಡ, ಸಾಲವಾಡಗಿ, ಅಗರಖೇಡ, ಹಿಪ್ಪರಗಿ ಮುಂತಾದವು ಕಾಶ್ಮೀರಮುಖ ಯತಿಗಳ ಕೇಂದ್ರಗಳಾಗಿದ್ದವು. ಆ ಸ್ಥಳಗಳಲ್ಲಿದ್ದ ದೇವಾಲಯಗಳ ಆಡಳಿತವನ್ನು ನಿರ್ವಹಿಸಿಕೊಂಡು ಹೋಗುವುದಕ್ಕಾಗಿ ರಾಜ, ರಾಣಿ, ದಂಡನಾಯಕರು ಸಾಮಂತರು ಮುಂತಾದವರಿಂದ ದಾನ ದತ್ತಿಗಳನ್ನು ಪಡೆದುಕೊಂಡಿವುದುಂಟು. ಈ ಜಿಲ್ಲೆಯ ಶಾಸನಗಳಿಂದ ತಿಳಿದುಬರುತ್ತದೆ. ಉದಾಹರಣೆಗೆ ಕಲ್ಯಾಣದ ಚಾಳುಕ್ಯ ಒಂದನೆಯ ಸೋಮೇಶ್ವರನ ಮಡದಿ ಮೈಳಲದೇವಿ ತನ್ನ ದಾನಗುಣದಿಂದ ತುಂಬ ಪ್ರಸಿದ್ಧಳಾಗಿದ್ದಾಳೆ. ತರ್ದವಾಡಿ ನಾಡಿನ ಭತ್ತಗ್ರಾಮ ಹೊನವಾಡಿನ ಸೋಮೇಶ್ವರ ದೇವರಿಗೆ ಅದರ ಆಚಾರ್ಯ ಪಾಶೂಪತಾಚಾರ್ಯ ಜ್ಞಾನರಾಶಿ ವ್ಯಾಖ್ಯಾನದೇವರ ಸಮಕ್ಷಮದಲ್ಲಿ ತನ್ನ ಪತಿಯೊಂದಿಗೆ ದತ್ತಿ ನೀಡಿರುವುದನ್ನು ಶಾಸನವೊಂದು ಹೇಳಿದೆ. (ಎಸ್.ಐ.ಐ., ಸಂ. ೧೧, ನಂ. ೮೩) ಮನಗೂಳಿಯ ಮಠ ಶಾರದಾದೇವಿಯ ಪ್ರತಿಮೆಯನ್ನು ಹೊಂದಿದ್ದು, ಅಲ್ಲಿ ಕೌಮಾರವನ್ನು ವ್ಯಾಖ್ಯಾನಿಸುವ ಉಪಾಧ್ಯಾಯರಿಗೆ ಐದು ಮತ್ತರು ಭೂಮಿ ಮತ್ತು ಒಂದು ನಿವೇಶನ ನೀಡಿದ ಉಲ್ಲೇಖ ಅಲ್ಲಿ ಶಾಸನದಲ್ಲಿದೆ. (ಎಪಿಗ್ರಾಫಿಯಾ ಇಂಡಿಕಾ, ಸಂ.೫, ಪು.೧೯) ಇಂತಹ ಹಲವಾರು ಉದಾಹರಣೆಗಳು ಈ ಜಿಲ್ಲೆಯ ಶಾಸನಗಳಲ್ಲಿ ಕಂಡುಬರುತ್ತವೆ.

ವೀರಶೈವ

ಈ ಜಿಲ್ಲೆಯು ಶರಣರ ನಾಡೆಂದೇ ಪ್ರಚಲಿತವಾಗಿದೆ. ಬಸವಪೂರ್ವ ಯುಗದ ಶರಣ ಕೊಂಡಗುಳಿ ಕೇಶೀರಾಜ, ದೇವರ ದಾಸಿಮಯ್ಯ, ವೀರಶೈವ ಚಳುವಳಿಯ ನೇತಾರರಾದ ಬಸವೇಶ್ವರ, ಮಡಿವಾಳ ಮಾಚಿದೇವ, ಹಾವಿನಾಳ ಕಲ್ಲಯ್ಯ, ಚನ್ನಬಸವಣ್ಣ, ಸೊನ್ನಲಿಗೆಯ ಸಿದ್ಧರಾಮ ಮತ್ತು ನೆಲುವಿಗೆಯ ಸಾಂತಯ್ಯ ಮುಂತಾದ ಶರಣರ ಕಾರ್ಯಕ್ಷೇತ್ರವು ಇದಾಗಿದೆ.

ಮಾಡಿದೆನೆಂಬುದು ಮನದಲ್ಲಿ ಹೊಳೆದರೆ ಏಡಿಸಿ ಕಾಡಿತ್ತು ಶಿವನ ಡಂಗುರ ಎಂಬ ಆದರ್ಶವನ್ನು ಮುಂದಿಟ್ಟುಕೊಂಡ ಶರಣರ ಕುರಿತು ಶಾಸನಗಳು ಹುಟ್ಟಿಕೊಳ್ಳಲಿಲ್ಲ. ಸ್ಥಾವರಲಿಂಗ

ಪ್ರತಿಷ್ಠಾಪನೆ (ಇಷ್ಟಲಿಂಗಕ್ಕೆ ಹೆಚ್ಚಿನ ಪ್ರಾಧಾನತೆಯನ್ನು ನೀಡಿದ್ದರಿಂದ) ದೇವಾಲಯದ ನಿರ್ಮಾಣಗಳಲ್ಲಿ ಅಲಕ್ಷ್ಯ, ಪರೋಪಕಾರದಲ್ಲಿ ನಿರಪೇಕ್ಷೆ, ಪರಾವಲಂಬನದಲ್ಲಿ ಉಪೇಕ್ಷೆ ಎಂಬ ವೀರಶೈವ ತತ್ವಗಳು ಬೆಳೆದಂತೆ ಶಾಸನಗಳ ಬರವಣಿಗೆ ತಾನಾಗಿಯೇ ಇಳಿದು ಹೋಯಿತು. ಶರಣರು ಶಾಸನಗಳನ್ನು ಬರೆಸಲಿಲ್ಲ. ಆದರೂ ಅಲ್ಲೊಂದು ಇಲ್ಲೊಂದು ಶಾಸನಗಳನ್ನು ಕೆಲವರು ಬರೆಸಿದರು. ಬಸವಾದಿ ಪ್ರಥಮರನ್ನು ಕುರಿತು ಮುಂದಿನ ವೀರಶೈವರು ಕೆಲಸವನ್ನು ಬರೆಯಿಸಿದರು.[೧೦೬]

ಈ ಶರಣಸಂತಾನಕ್ಕೆ ಹಲವು ನೂರು ವರ್ಷಗಳ ಇತಿಹಾಸವಿದೆ. ಅಂದರೆ ತಮ್ಮ ಹಿಂದೆ ಇದ್ದ ದೇವರ ದಾಸಿಮಯ್ಯಾದಿಗಳ ವೀರಶೈವವನ್ನು ಪರಿಷ್ಕರಿಸಿ ೧೨ ನೆಯ ಶತಮಾನದಲ್ಲಿ ಅದಕ್ಕೆ ಶಾಶ್ವತ ಮುದ್ರೆಯನ್ನು ಮೊದಲು ಹಾಕಿದವರು ಬಸವಾದಿ ಶರಣರು. ತರುವಾಯ ೧೫ ನೆಯ ಶತಮಾನದ ನೊರೊಂದು ವಿರಕ್ತರಿಂದ ೧೬ನೆಯ ಶತಮಾನದ ಏಳನೂರೆಂದು ವಿರಕ್ತರಿಂದ ಪೋಷಣೆಗೊಳ್ಳುತ್ತ ಅದು ಇಂದಿನವರೆಗೆ ಉತ್ತರೋತ್ತರ ನಡೆದು ಬಂದಿದೆ.

ಈ ಜಿಲ್ಲೆಯಲ್ಲಿ ಬಸವಪೂರ್ವದಲ್ಲಿ ಕಂಡುಬರುವ ಶಿವಶರಣರಲ್ಲಿ ಕೊಂಡಗೂಳಿ ಕೇಶಿರಾಜ ಅಗ್ರಗಣ್ಯನು. ಕನ್ನಡದ ವೀರಶೈವ ಕವಿಗಳಲ್ಲಿ ಮೊದಲಿಗನಾಗಿ ಕಲ್ಯಾಣದ ಚಾಲುಕ್ಯ ಆರನೆಯ ವಿಕ್ರಮಾದಿತ್ಯನ (ಕ್ರಿ.ಶ. ೧೦೭೬-೧೧೨೬) ದಂಡಾಧೀಶನಾಗಿ ಕನ್ನಡ ನಾಡಿನ ಧಾರ್ಮಿಕ ಸಾಹಿತ್ತಿಕ ಹಾಗೂ ರಾಜಕೀಯ ಇತಿಹಾಸದಲ್ಲಿ ದೊಡ್ಡ ಹೆಸರು ಗಳಿಸಿಕೊಂಡಿದ್ದಾನೆ.[೧೦೭]

ಕೇಶಿರಾಜ ವಿಜಯಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಡೋಣಿಕೊಂಡಗೂಳಿ ಗ್ರಾಮದವನು. ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಇದೊಂದು ಅಗ್ರಹಾರವಾಗಿತ್ತೆಂದು ಅಲ್ಲಿರುವ ಶಾಸನಗಳಿಂದ ತಿಳಿದುಬರುತ್ತದೆ. ಕೇಶಿರಾಜನನ್ನು ಉಲ್ಲೇಖಿಸುವ ಎರಡು ಶಾಸನಗಳು ಅಲ್ಲಿ ಲಭ್ಯವಾಗಿದ್ದು ಒಂದು ಕ್ರಿ.ಶ. ೧೧೦೭ಕ್ಕೆ ಸಂಬಂಧಿಸಿದ್ದರೆ.[೧೦೮] ಇನ್ನೊಂದು ಕ್ರಿ.ಶ. ೧೧೩೨ ಕ್ಕೆ ಸಂಬಂಧಿಸಿದ್ದಾಗಿದೆ.[೧೦೯]

ಕ್ರಿ.ಶ. ೧೧೦೭ ರ ಶಾಸನದ ಪ್ರಕಾರ ಕೇಶಿರಾಜನ ತಂದೆ ನಿಂಬಣಯ್ಯ ಕಲ್ಯಾಣದ ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ದಂಡನಾಯಕನಾಗಿದ್ದುದನ್ನು ಶಾಸನ ಹೀಗೆ ಹೇಳಿದೆ.

"..............ವಾಜಿಕುಳಾಂ
ಬರದ್ಯುಮಣಿ ಬನ್ಧುಜನ ಚಿನ್ತಾ(ಮ)ಣಿ ಶ್ರೀ
ಮತ್ತ್ರಿಭುವನಮಲ್ಲದೇವ ಪಾದಾರಾಧಕಂ ಪ......
ಮನುಮಹಾಪ್ರಧಾನಂ ಮನೆವೆರ್ಗ್ಗಡೆ ದಂಡ.... ಬಣಯ್ಯಂಗಳ್"[೧೧೦]

ನಿಂಬಣಯ್ಯ ದಂಡನಾಥನನ್ನು 'ವಾಜಿಕುಳಾಂಬರದ್ಯುಮಣಿ' ಎಂದು ಕರೆದ ಈ ಶಾಸನ ಮಗ ಕೇಶಿರಾಜನನ್ನು ಕುರಿತು—

"....ಕೊಣ್ಡಂಗುಳಿಯಲು ನಿಂಬ
...ಗಳ ಮಗ ಸ್ವಸ್ತಿ ಸಮಧಿಗತಪಞ್ಚ
ಮಹಾಶಬ್ದ ಮಹಾಸಾಮನ್ತಾಧಿಪತಿ (ಮ)
ಮಹಾಪ್ರಚಣ್ಡ ದಂಡನಾಯಕ ದುಷ್ಟ ವಿದ್ವಿಷ್ಟ
ವಿಧೇಯಕ ವಾಜಿಕುಳಾರ್ಣ್ಣವ ಪಾರಿಜಾತ
ಸುಕವಿ ಶುಕಚೂತ ಬನ್ದುವನ ವಸನ್ತ ವಚಶ್ರೀವಧೂ
ಕಾನ್ತ ಸಾಹಿತ್ಯ ಸರೋರುಹ ಮಧುಬ್ರತ ಸತ್ಯಸ
ತ್ಯಬ್ರತ ಹರಚರಣ ರಜೋರಂಕಿತೋತ್ತಮಾಂಗನ
ಯ್ಯನ ಸಿಂಗ ನಾಮಾದಿ ಸಮಸ್ತ ಪ್ರಶಸ್ತಿ ಸಹಿತಂ
ಶ್ರೀ ಮನ್ಮಹಾಪ್ರಧಾನಂ ಹೇರಿಲಾಳ ಸಿದ್ಧಿವಿಗ್ರಹಿ
ದಣ್ಡನಾ(ಯ)ಕಂ ಕೇಸಿರಾಜರಸರು[೧೧೧]

ಶಾಸನವು ಪ್ರಾರಂಭದಲ್ಲಿ 'ಓಂ ನಮಃ ಶಿವಾಯ' ಎಂದೇ ಪ್ರಾರಂಭವಾಗುತ್ತದೆ. ಇದರಲ್ಲಿ ಉಲ್ಲೇಖವಾಗಿರುವ ಕೇಶಿರಾಜನನ್ನು 'ವಾಜಿಕುಳಾರ್ಣ್ಣವ ಪಾರಿಜಾತ' ಎಂದು ಕರೆದಿರುವದರಿಂದ ಇವರದು ವಾಜಿಕುಲವೆಂಬುದು ಸ್ಪಷ್ಟವಾಗುತ್ತದೆ. ಈ ಶಾಸನದಲ್ಲಿ ಬರುವ ವಚನಶ್ರೀವಧು ಕಾನ್ತ ಸಾಹಿತ್ಯ ಕರೋರುಹ ಮಧುಬ್ರತ ಎಂಬ ವಿಶೇಷಣವನ್ನು ನೋಡಿದಾಗ ಕೇಶಿರಾಜನು ಕವಿಯಾಗಿ ಸಾಹಿತ್ಯ ಪ್ರಿಯನೂ ಆಗಿದ್ದನೆಂಬುದು ಗೊತ್ತಾಗುತ್ತದೆ.

ಹರಿಹರನು ತನ್ನ 'ಕೇಶೀರಾಜ ದಣ್ಣಾಯಕನರಗಳೆ' ಎಂಬುದರಲ್ಲಿ ಕೇಶಿರಾಜನ ಸಾಹಿತ್ಯಕ ಚಟುವಟಿಕೆಗಳನ್ನು ಹೀಗೆ ಹೇಳುತ್ತಾನೆ.

'ನಿಚ್ಚಲೇಂಟು. ಪದ್ಯಮಂ ಸೋಮನಾಥಂಗೆ
ಅಚ್ಚರಿವಿಗಲ್ಕೆ ಪೇಳ್ವ ಶೈವನಾಥಂಗೆ'[೧೧೨]

ಆದರೆ ಈ ವರೆಗೆ ಕೇಶಿರಾಜನ ಐದು ಕೃತಿಗಳು ಮಾತ್ರ ಸಿಕ್ಕಿವೆ. ಬಿಡಿ ಬಿಡಿಯಾಗಿ ಪ್ರಕಟಗೊಂಡ ಈ ಕೃತಿಗಳನ್ನು ಎಂ.ಎಂ.ಕಲಬುರ್ಗಿಯವರು ಒಂದೆಡೆ ಸಂಗ್ರಹಿಸಿ 'ಕೊಂಡಗುಳಿ ಕೇಶಿರಾಜನ ಕೃತಿಗಳು' ಎಂದು ಸಂಪಾದಿಸಿದ್ದಾರೆ. ಅವುಗಳೆಂದರೆ ೧) ಮಂತ್ರ ಮಹತ್ವದ ಕಂದ ೨)

ಲಿಂಗಸ್ತೋತ್ರದ ಕಂದ ೩) ಲಿಂಗಸ್ತೋತ್ರದ ಕಂದ ೪) ಶೀಲ ಮಹತ್ವದ ಕಂದ ೫) ನವರತ್ನ ಮಾಲಾ ಪ್ರಸ್ತುತ ಕೃತಿಗಳನ್ನು ವೀರಶೈವ ತತ್ವದ ಹಿನ್ನಲೆಯಲ್ಲಿ ಗಮನಿಸಿದರೆ ಮಂತ್ರ ಮಹತ್ವದ ಕಂದ, ಲಿಂಗ ಮಹತ್ವದ ಕಂದ ೧ ಮತ್ತು ೨, ಅಷ್ಟಾವರಣ ವರ್ಗಕ್ಕೆ ಸಂಬಂಧಿಸಿದ ಮಂತ್ರ ಮತ್ತು ಲಿಂಗಗಳನ್ನು ಕುರಿತು ಬರೆದುದಾಗಿದೆಯೆಂಬುದು ತಿಳಿದು ಬರುತ್ತದೆ. 'ಶೀಲ ಮಹತ್ವದ ಕಂದ' ಮಾತ್ರ ವೀರಶೈವದ ಆಚಾರಗಳನ್ನು ನಿರೂಪಿಸುತ್ತಿದ್ದು, ಆಕಾಲದ ವೀರಶೈವದ ಚಿತ್ರವೊಂದನ್ನು ಇದರಲ್ಲಿ ಕಾಣಬಹುದಾಗಿದೆ. ಅದರಲ್ಲಿಯೂ ಗುರು, ಲಿಂಗ, ಜಂಗಮ (ತ್ರಿವಿಧ) ಕಾಯಕ, ಭವಿ, ಭಕ್ತ, ಮಹೇಶ, ಚರ, ಜಂಗಮ, ವೀರಶೈವ, ಲಿಂಗಾಯತವಂತ ಸಮಯಾಚಾರ, ಪ್ರಸಾದ, ಆಯತ, ಸ್ವಾಯತ, ದಶವಿಧ, ಪಾದೋದಕ, ಏಕಾದಶ ಪ್ರಸಾದ, ಉಪಾಧಿ, ನಿರುಪಾಧಿ ಇತ್ಯಾದಿ ಪರಿಭಾಷೆಗಳನ್ನು ವ್ಯಾಖ್ಯೆಯುಕ್ತವಾಗಿ ಬಳಸಿದುದನ್ನು ಇಲ್ಲಿ ಗಮನಿಸಬೇಕು[೧೧೩]

ಕ್ರಿ.ಶ. ೧೧೦೭ರ ಶಾಸನದಲ್ಲಿ ಕೇಶಿರಾಜನನನ್ನು "ಸತ್ಯ ಸತ್ಯಬ್ರತ ಹರಚರಣ ಗಜೋರಂಜಿತೋತ್ತಮಾಂಗಂ' ಎಂದು ಕೊಂಡಾಡಿರುವುದನ್ನು ಗಮನಿಸಿದರೆ ಕೇಶಿರಾಜನ ಶಿವೋಪಾಸನೆಗೆ ನಿದರ್ಶನಗಳಾಗಿದ್ದರೆ ಸುಕವಿ ಶುಕ ಬಂಧವನ ವಸಂತ ವಚಶ್ರೀ ಮಧುಕಾಂತ, ಸಾಹಿತ್ಯ ಸರೋವರ ಮಧುವ್ರತ ಎಂಬ ವಾಕ್ಯಗಳು ಮತ್ತು ಮೇಲೆ ಉಲ್ಲೇಖಿಸಿರುವ ಸಾಹಿತ್ಯ ಕೃತಿಗಳು ಈತನ ಕವಿ ಮನೋಧರ್ಮಕ್ಕೆ ಸಾಕ್ಷಿಯಾಗಿದೆ. ಇದಲ್ಲದೆ ಕ್ರಿ.ಶ. ೧೨೦೦ ರ ಅಬ್ಬಲೂರು[೧೧೪] ಕ್ರಿ.ಶ. ೧೨೮೧ ರ ಮರಡಿಪುರ[೧೧೫] ಶಾಸನಗಳಲ್ಲೂ ಇವನ ಉಲ್ಲೇಖವಿದೆ. ಹೀಗೆ ಬಸವಪೂರ್ವದಲ್ಲಿಯೇ ಈ ಜಿಲ್ಲೆಯಲ್ಲಿ ವೀರಶೈವ ಪರವಾದ ವಿಷಯಗಳು ತಿಳಿದುಬರುತ್ತದೆ.

ಈ ಜಿಲ್ಲೆಯಲ್ಲಿ ದೊರೆತಿರುವ ಶಿವಶರಣರನ್ನು ಉಲ್ಲೇಖಿಸುವ ಶಾಸನವೆಂದರೆ ಕಲ್ಯಾಣದ ಚಾಲುಕ್ಯ ನಾಲ್ಕನೆಯ ಸೋಮೇಶ್ವರ ಕಾಲಕ್ಕೆ ಸೇರಿದ ಕ್ರಿ.ಶ. ೧೧೮೪ ರ ತಾಳಿಕೋಟೆಯ ಶಾಸನ. ಈ ಶಾಸನವು ಮಹಾಮಂಡಳೇಶ್ವರ ವಿರೂಪರಸನು ಬೈಚೇಶ್ವರ ದೇವಾಲಯದ ಗಣಂಗಳಿಗಾಗಿ ವೀರದಾಸನಿಗೆ ಗಣಮಠಕ್ಕೆ ನೀಡಿದ ಭೂ ದಾನದ ವಿವರವನ್ನು ಒಳಗೊಂಡಿದೆ. ಒಟ್ಟು ೪೩ ಸಾಲುಗಳನ್ನು ಒಳಗೊಂಡಿರುವ ಈ ಶಾಸನದ ಪ್ರಮುಖ ಭಾಗವು ಹೀಗಿದೆ.

(ಆರಂಭದ ಭಾಗ ಹಾಳಾಗಿದೆ)

೧) ದ್ಥಿ ಮರೆವರುಂ ಪರಸಮಯ ಗಿರಿವಜ್ರದಂಡರು ಜಗದಲುದ್ದಂ

೨) ಡರುಂ ಜಿನಸಮಯ ವನದಹನ ದಾವಾನಳರುಂ ಮುನಿದರ್ಗ್ಗೆ

೩) ಹಾಳಾಹಳರುಂ ಬೌದ್ಧಸಮಯ ವಿಧ್ವಂಸನ ಪ್ರವೀಣರುಂ ಬಗೆ

೪) ಯಲು ಜಾಣರುಂ ಅನ್ಯಸಮಯಿಗಳ ಬೆನ್ನಬಾರನೆತ್ತುವರುಂಸೆ
೫) ಣಸುವರ ನೆತ್ತರಂ ಮರುಳ್ಗಳಿಂ ಕುಡಿಸುವರುಂ ಪರಸಮಯ
೬) ಘರಟ್ಟರು ವೀರಕು(ಪ್ಪ)ರ ವಟ್ಟರುಂ ಕಾಲನ ನಾಲಗೆಯಂ ಕೀಳ್ವರುಂ
೭) (ಬಾ)ರಿಯಂ ಕೂರದಗ್ಗಿವರುಂ ನಂಜನಂಜದುಂಬರುಂ
೮) --- ಅಸಿ ಮಾರ್ಕೊಳ್ವರುಂ ಬಹುವಿಧ ನಿಷ್ಠವಶೀಕ್ರಿತ ಜ
೯) ---(ರುಂ) ಅಸಂಖ್ಯಾತ ಸಂಖ್ಯಾಭಿದೇಯ ಮಹಾ
೧೦) --- ಪರಸಮಯ ಸರಸಿಜಾತ ಸಮೂಹ ಮದಕರಿಗಳಂ
೧೧) ---(ಹು) ವಿಧನಿಷ್ಠೇಯಿಂ ಹರನಂ ಪರಿಕ್ತಿ ಭವಮನಂ ತರ್ಸಿ ಪರಸಮ
೧೨) --- ಮಂ ಸಂ ಹರ್ಸಿ ಜರವುಂ ಮಾಂಕರಿಸುವುದ್ದಂಡರುಂ
೧೩) --- ಲೆ ಗಂಡ ರುಂ ಪರಿಯಳಿಗೆ ಅಣಿಲೆವಾಡ ಉಣಕಲ್ಲು ಸಂ
೧೪) ಪಗಾವೀ ಅಬ್ಬಲೂರು ಮಾರುಡಿಗೆ ಅಣಂಪುರ ಕರಹಾಡ ಕೆಂ
೧೫) ಬಾವಿ ಬಮ್ಮುಕೂರು ಮೊದಲಾಗಿ ಅನನ್ತದೇಶ ದೇಶಾನ್ತರದಲ್ಲಿ ದಿ
೧೬) ರಾದ ಪರಸಮಯಿಗಳಂ ಪಡಲ್ವಡ್ಸಿ ಲೋಕಮನಾ ಕಂಪಂಗೊ
೧೭) ಳ್ಗಿ ಬಸದಿಗಳಂ ಹೊಸದುಮುಕ್ಕಿ ಶಿವಲಿಂಗ ಸಿಂಹಾಸನಮಂ(ಕ)
೧೮) ಣ್ಸೊಳ್ಸಿ ಚಲಮಂ ಮೆರೆದು ಧೀರರೊಳು ನರೆದು ಸ್ವರ್ಗ ಮರ್ತ್ಯ
೧೯) ಪಾತಾಳದೊಳನಂಗಾರಿಯ ಹೆಮ್ಮೆಯ್ಯ ತಮ್ಮ ಭ್ರಿ
೨೦) ತ್ಯಾಚಾರದ ತೊಮ್ಮೆಮ್ಮಂ ತಳದಲಿಕ್ಕಿ ತೋಪ್ಪನನ್ತೆತೊರಿದ ಪುರಾತ
೨೧) ನ ನೂತನರೆನಿಸಿದ ಅಸಂಖ್ಯಾತ ಗಣಂಗಳ ನಾಮಾದಿ ಸ
೨೨) ಮಸ್ತ ಪ್ರಶಸ್ತಿ ಸಹಿತಂ!! --- (ಮುಂದೆ ೪೩ನೇ ಸಾಲಿನವರೆಗೆ ದಾನದ ವಿವರವನ್ನು ನೀಡಲಾಗಿದೆ.)[೧೧]

ಪರಿಯಳಿಗೆ, ಅಣಿಲೆವಾಡ, ಉಣಕಲ್ಲು, ಸಂಪಗಾವಿ, ಅಬ್ಬಲೂರು, ಮಾರುಡಿಗೆ, ಅಣಂಪುರ, ಕರಹಾಡ, ಕೆಂಭಾವಿ ಮತ್ತು ಬೊಮ್ಮಕೂರು ಗ್ರಾಮಗಳಲ್ಲಿ ಪರಸಮಯವನ್ನು ಧ್ವಂಸಗೊಳಿಸಿ ಶಿವ ಸಮಯವನ್ನು ಉಜ್ವಲಗೊಳಿಸಿದ ಶಿವಶರಣರನ್ನು ಉಲ್ಲೇಖಿಸುತ್ತದೆ. ಅಲ್ಲದೇ ಶಿವಲಿಂಗ ಸಿಂಹಾಸನವನ್ನು ಸ್ಥಾಪಿಸುವುದರ ಮೂಲಕ ಸ್ಥಾವರ ಲಿಂಗಪೂಜೆಯನ್ನು ಮನ್ನಿಸಿರುವುದನ್ನು ಗಮನಿಸಬಹುದಾಗಿದೆ. ಮೇಲಿನ ಹತ್ತು ಗ್ರಾಮಗಳಲ್ಲಿ ಇದ್ದ ಶಿವಶರಣರೆಂದರೆ ಅಣಂಪುರದ ಗುಡ್ಡವ್ವೆ, ಮಾರುಡಿಗೆಯ ನಾಚಯ್ಯ, ಪರಿಯಳಿಗೆಯ ವೈಜಕವ್ವೆ, ಕೆಂಭಾವಿಯ ಭೋಗಣ್ಣ, ಅಬ್ಬಲೂರಿನ ಏಕಾಂತ ರಾಮಯ್ಯ, ಇನ್ನುಳಿದ ಐದು ಗ್ರಾಮಗಳಾದ ಅಣಲೆವಾಡ, ಉಣಕಲ್ಲು, ಸಂಪಗಾವಿ,

ಕರಹಾಡ ಮತ್ತು ಬಮ್ಮಕೂರುಗಳಲ್ಲಿ ಇದ್ದ ಶರಣರ ಬಗ್ಗೆ ತಿಳಿದು ಬಂದಿಲ್ಲ. ಇವರಲ್ಲಿ ಕೆಲವರು ಬಸವನಿಗೆ ಸಮಕಾಲೀನರು ಇನ್ನೂ ಕೆಲವರು ಬಸವಪೂರ್ವ ಯುಗದವರು.

ಮೇಲಿನ ಹತ್ತು ಗ್ರಾಮಗಳಲ್ಲಿ ಇದ್ದ ಶಿವಶರಣರಲ್ಲಿ ಅಣಂಪುರದ ಗುಡ್ಡವ್ವೆಯು ಒಬ್ಬಳು, ಇವಳನ್ನು ಕುರಿತು ವಿಜಾಪುರದ ಶಾಸನವೊಂದರಲ್ಲಿ ಹೀಗೆ ಉಲ್ಲೇಖವಾಗಿದೆ.

"ದಾನಚಿಂತಾಮಣಿಯ ಫಳಯೆನಿಸುವ ಗುಡ್ಡಾದೇವಿಯ
ಭೂಮಿಯೊಳಗೆ ಲಾಟ್ಟಗೆರಿಯಲು ಯಬ್ಬರು ಪುಜಾರಿಯರಿಗೆ
---- (ದಾನದ ವಿವರವಿದೆ)--- ದೇವಿಯ ಪ್ರಸಾದ
ಪ್ರಾತಃ ಕಾಲಿನದು ಗಣಮಠಕ್ಕೇ ಮಧ್ಯಾಹ್ನ ಕಾಲಿನದು
ಪೂಜಾರಿಗಳಿಗೆ, ಸಾಯಂಕಾಲಿನದು ಕ್ಷೇತ್ರವಾಸಿಗೆ
ಲಿಂಗಪ್ರಸಾದಲನಂತಂ ತಾ ಲಂಗೆ ಆತ್ಯಂಗೆ ದೇವಿಯ
ಭಂಡಾರದಲ್ಲಿಯ (ದಾನದ ವಿವರವಿದೆ.)"[೧೪]

ಅಲ್ಲಿಯೇ ಇರುವ ಕ್ರಿ.ಶ. ೧೨೭೮ ರ ಶಾಸನವೊಂದರಲ್ಲಿ "ಶ್ರೀ ತೇಜೇಸ್ವರ ಶ್ರೀ ವರದಾನಿ, ಶ್ರೀ ಪುರುಣೇಶ್ವರ ದೇವರ ಪ್ರತಿಷ್ಠೇಯಂ ಮಾಡಿ ಪುರದಂ ರಚಿರುಸಿಯಾ ದೇವರುಗಳ ಅಂಗಬೋಗ ರಂಗಬೋಗಕ್ಕೆ ಶ್ರೀ ಮಂಡಳಿಕಮಹಾದೇವ ರಾಣಿಯರುಂ"[೧೧೬]

ಈ ಎರಡು ಶಾಸನಗಳಲ್ಲಿ ಬರುವ ದಾನ ಚಿಂತಾಮಣಿ ಗುಡ್ಡಾದೇವಿ ಮತ್ತು ಶ್ರೀವರದಾನಿ ಎಂಬ ಪದಗಳು ಗುಡ್ಡವ್ವೆಯನ್ನು ಕುರಿತಾಗಿವೆ. ವರದಾನಿಯ ಪ್ರತಿಷ್ಠೇಯಂ ಎಂಬುದುದು ಗುಡ್ಡವ್ವೆಯ ಮೂರ್ತಿ ಪೂಜೆಯನ್ನು ತಿಳಿಸುತ್ತದೆ. ಶಾಸನವು ಅರ್ಚಕನಿಗಿರಬೇಕಾದ ಅರ್ಹತೆಗಳನ್ನು ಹೇಳಿದೆ.

ತಾಳಿಕೋಟೆಯ ಶಾಸನದಲ್ಲಿ ಉಲ್ಲೇಖವಾಗಿರುವ ಮಾರುಡಿಗೆ ಎಂಬುವುದು ಮಾರುಡಿಗೆಯ ನಾಚಯ್ಯನನ್ನು ಉಲ್ಲೇಖಿಸುತ್ತದೆ. ವೀರಶೈವ ಪುರಾಣಗಳ ಪ್ರಕಾರ ಷೋಡಶ ಮತ್ತು ತೇರಸ ಗಣದ ಮಧ್ಯಕಾಲದಲ್ಲಿ ಬದುಕಿದ ಶರಣನೀತ, ಶಿವಭಕ್ತರನ್ನು ಹಿಂಸಿಸಿದ ಜೈನರನ್ನು ತೇರಸರ ಬೆಂಬಲದಿಂದ ಕೊಂದು ಹಾಕಿದ ಇವನ ಶೌರ್ಯವನ್ನು ಶಾಸನವು ವೀರವತ್ತಾಗಿ ನೀಡುತ್ತದೆ.

ಪರಿಯಳಿಗೆಯ ವೈಜಕವ್ವೆಯನ್ನು ಹೆಸರಿಸಿದೆ. ಜಿನ ಭಕ್ತನಾದ ಗಂಡನು ಶಿವಭಕ್ತಳಾದ ಇವಳಿಗೆ ತೊಂದರೆ ಕೊಟ್ಟ ಕಾರಣ ಎಷ್ಟು ಪ್ರಯತ್ನಿಸಿದರೂ ತೆರೆಯದಿದ್ದ ಊರ ಬಸದಿಯ ಬಾಗಿಲು

ಇವಳ ಹಸ್ತ ಸ್ಪರ್ಶದಿಂದ ತೆರೆಯಿತು. ಆಗ ಜಿನಬಿಂಬ ಒಡೆದು ಉದ್ಭವಿಸಿದ ಶಿವಲಿಂಗದಲ್ಲಿ ಈಕೆ ಐಕ್ಯವಾದಳು ಎಂದು ಪುರಾಣದ ಕಥೆ.[೧೧೭]

ತಾಳಿಕೋಟೆಯ ಶಾಸನದಲ್ಲಿ ಉಲ್ಲೇಖವಾಗಿರುವ ಇನ್ನೊಬ್ಬ ಶಿವಶರಣನೆಂದರೆ ಕೆಂಭಾವಿಯ ಭೋಗಣ್ಣ ಇವನ ಹೆಸರು ಮರಡಿಪುರ ಮತ್ತು ಹಿರಿಯೂರ ಶಾಸನಗಳಲ್ಲಿ ಇವನ ಹೆಸರು ಶರಣರ ಮಧ್ಯ ಕಾಣಿಸಿಕೊಂಡಿರುವುದನ್ನು ಕಾಣಬಹುದಾಗಿದೆ. ಈ ಶಾಸನದಲ್ಲಿ ಉಲ್ಲೇಖವಾಗಿರುವ ಇನ್ನೊಬ್ಬ ಶರಣನೆಂದರೆ ಅಬ್ಬಲೂರಿನ ಏಕಾಂತ ರಾಮಯ್ಯ.

ಏಕಾಂತ ರಾಮಯ್ಯನು "ಜೈನರೊಂದಿಗೆ ವಾದಕ್ಕೆ ನಿಂತು ಕೈಯಾರೆ ಕತ್ತರಿಸಿಕೊಂಡ ತನ್ನ ಶಿರವನ್ನು ಏಳು ದಿನಗಳ ತರುವಾಯ ತಿರುಗಿ ಪಡೆದ ಶರಣನಿತ. ವೀರಶೈವ ಇತಿಹಾಸದಲ್ಲಿ ಈತನು ರಕ್ತರಂಜಿತ ಘಟನೆ. ಈ ವೀರ ಪ್ರಸಂಗಕ್ಕೆ ಪ್ರಚೋದನೆ ಕೊಟ್ಟದ್ದು. ಎಂದು ಅಬ್ಬಲೂರು ಶಾಸನ, ಜೈನನೊಬ್ಬ ಲಿಂಗದ ಕಡೆಗೆ ಕಾಲುಮಾಡಿ ಮಲಗಿದುದು ಎಂದು ಹರಿಹರನ ರಗಳೆ, ಜೈನನೊಬ್ಬ ಕೆರಹುಗಾಲಿನಿಂದ ಶಿವದೇವಾಲಯ ಪ್ರವೇಶಿಸಿದುದು ಎಂದು ಬಸವ ಪುರಾಣಗಳು ಭಿನ್ನ ರೀತಿಯಲ್ಲಿ ಹೇಳುತ್ತವೆ. ಅಬ್ಬಲೂರಿನ ಶಾಸನದಲ್ಲಿ ಇದರ ಸಂಪೂರ್ಣವಾದ ವಿವರವಿದೆ.[೧೧೮]

ಕಿರಿಯಿಂಡಿಯಲ್ಲಿಯ ಕ್ರಿ.ಶ. ೧೧೯೭ ರ (ಈಗ ವಿಜಾಪುರದ ವಸ್ತುಸಂಗ್ರಹಾಲಯದಲ್ಲಿದೆ) ಶಾಸನವೊಂದರಲ್ಲಿ[೧೧೯] "ದೊಡರದಾಸನ ಉಲ್ಲೇಖವಿದೆ. ಅದು ಇಂತಿದೆ. ಆ ಕಿರಿಯಣ್ಡಿಯಲ್ಲಿ ದೋಡರ ದಾಸನ ಕುಲದೋಳು, ನೋಡಿರೆ ಸೋಮಯ್ಯನೊಗೆದ ನಾತನ ಸತಿ ತಾಂ!! ನೋಡ ಪ್ರತಿಬ್ರತೆ ಸದ್ಗುಣಿಃ ರೂಢಿಯ ಹೊತ್ಲಾವ್ವೆಯಂಬಳ ಬಳಾರತ್ನಂ" ಎಂಬ ಉಲ್ಲೇಖವು ದೋಡರ ದಾಸನ ಕುಲದೊಳು ಹುಟ್ಟಿರುವುದನ್ನು ಹೇಳುವುದನ್ನು ಗಮನಿಸಿದರೆ ಇವನು ಜೇಡರ ದಾಸಿಮಯ್ಯ ಆಗಿರಬೇಕೆಂದು ವಿದ್ವಾಂಸರ ಅಭಿಮತವಾಗಿದೆ.

ಬಸವಣ್ಣನವರನ್ನು ಉಲ್ಲೇಖಿಸುವ ಒಟ್ಟ ೨೧ ಶಾಸನಗಳು ಲಭ್ಯವಾಗಿದ್ದರು ಅವೆಲ್ಲವೂ ಒಪ್ಪಿಕೊಳ್ಳುವಂತಹವುಗಳಲ್ಲ ಹೀಗಾಗಿ ವಿದ್ವಾಂಸರು ಒಪ್ಪಿಕೊಂಡಿರುವ ಶಾಸನಗಳೆಂದರೆ ಹಿರಿಯೂರು ಶಾಸನ,[೧೨೦] ಅರ್ಜುನವಾಡ ಶಾಸನ[೧೨೧], ಚೌಡದಾನಪುರದ ಎರಡು ಶಾಸನಗಳು[೧೨೨], ಕಲ್ಲೇದೇವಪುರ ಶಾಸನ[೧೨೩], ಮರಡಿಪುರ ಶಾಸನ[೧೨೪], ನಾಗಾಲೋಟ ಶಾಸನ[೧೨೫], ಜೋಡಿದಾಸೇನಹಳ್ಳಿ ಶಾಸನ[೧೨೬], ಆನಂದಪುರ ಸಂಸ್ಥಾನ ಮಠದ ತಾಮ್ರ ಶಾಸನ[೧೨೭], ಕಾನಕಾನಹಳ್ಳಿ ತಾಮ್ರ ಶಾಸನ ೧ ಮತ್ತು ೨[೧೨೮].

ಆದರೆ ಮೇಲಿನ ಎಲ್ಲಾ ಶಾಸನಗಳು ಈ ಬಸವ ಜನ್ಮಭೂಮಿಯಾದ ವಿಜಯಾಪುರ ಜಿಲ್ಲೆಯಿಂದ ಹೊರಗಿದ್ದು ಈ ಜಿಲ್ಲೆಯ ಬಸವನ ಬಾಗೇವಾಡಿಯ ಸಮೀಪದಲ್ಲಿರುವ ಗುಡಿಹಾಳ ಮತ್ತು ಕುಂಟೋಜಿ ಗ್ರಾಮಗಳ ಸೀಮೆಯಲ್ಲಿ ೧೨ ನೆಯ ಶತಮಾನದ ಶಾಸನವೊಂದು ದೊರೆತ್ತಿದ್ದು ಅದು ಇಂತಿದೆ.

(ಶ್ರೀ ಸಂ) ಗಮನಾಥ ಬಸವರಾಜ
ದೇವರ ಮಾಂ(ನ್ಮ) ಯಿದಕ್ಕೆ ದಾರೊಬ್ಬರು ತಪ್ಪಿದರೆ

ಇದಿಷ್ಟು ಶಾಸನದ ಪಾಠ. ಈ ಶಾಸನದ ಶಿಲೆ ಇರುವ ಹೊಲವು ಬಸವಣ್ಣನವರ ಹೆಸರಿನಲ್ಲಿ ಬಿಟ್ಟ ಮಾನ್ಯ ಹೊಲವಾಗಿರಬಹುದು ಎಂಬುದು ಡಾ. ಎಂ.ಎಂ.ಕಲಬುರ್ಗಿ ಅವರ ಊಹೆ. ಅವರೇ ಸೂಚಿಸುವಂತೆ ಇದು ಬಾಗೇವಾಡಿಯಲ್ಲಿ ಬಸವ (ನಂದಿ) ವಿಗ್ರಹಕ್ಕೆ ನೀಡಲಾದ ದಾನ ಬಾಗೇವಾಡಿಯಲ್ಲಿ ಬಸವ (ನಂದಿ) ವಿಗ್ರಹಕ್ಕೆ ನೀಡಲಾದ ದಾನವಾಗಿರುವ ಸಂಭಾವ್ಯವೂ ಇದೆ.[೧೨೯]

ಇಂಡಿ ತಾಲೂಕಿನ ಭೋಯಾರ ಗ್ರಾಮದ ಕ್ರಿ.ಶ. ೧೧೬೨ರ ಶಾಸನವೊಂದರ ಪ್ರಾರಂಭದಲ್ಲಿ **"ನೆಲುವಿಗೆಯ ಸಾತ್ಯೈಯ್ಯಗಳ ಶ್ರೀಪಾದಗಳೇ ಶರಣು, ಓಂ ನಮಃ ಶಿವಾಯ"** ಎಂದೇ ಪ್ರಾರಂಭವಾಗುತ್ತದೆ.[೧೩೦]

ಕಳಚೂರಿ ಬಿಜ್ಜಳನ ಕಾಲಕ್ಕೆ ಸೇರಿದ ಕ್ರಿ.ಶ. ೧೧೬೨ ಕ್ಕೆ ಸೇರಿದ ಈ ಶಾಸನವು ತರ್ದವಾಡಿ ನಾಡಿನ ಒಂದು ವಿಭಾಗವಾದ ೩೭ ಬಾಡಗಳನ್ನಾಳುವ ಲಕ್ಷ್ಮೀದೇವ ದಂಡನಾಯಕರು ನೆಲುವಿಗೆಯ ಶಿವಯೋಗಿ ಸಾತ್ಯೈಯ್ಯನ ಬೃತ್ಯ ಬಸವಯ್ಯ ಎಂಬುವವನಿಗೆ ದತ್ತಿ ನೀಡಿದುದು ಈ ಶಾಸನದ ವಿಷಯ. ಇಲ್ಲಿ ದತ್ತಿ ಪಡೆದವನು ಸಾತಯ್ಯನಲ್ಲ ಅವನ ಶಿಷ್ಯ ಬಸವಯ್ಯ ಸಾತಯ್ಯನು ಒಂದು ವೇಳೆ ಕ್ರಿ.ಶ. ೧೧೬೨ ರ ಬಸವಯ್ಯನಿಗೆ ಪರಂಪರೆಯ ಗುರುವಾಗಿದ್ದರೆ. ಆತನು ಬಸವಣ್ಣನವರಿಗೆ ತೀರ ಪ್ರಾಚೀನ ನೆನಿಸುತ್ತಾನೆ. ದೀಕ್ಷಾ ಗುರುವಾಗಿದ್ದರೆ ಹಿರಿಯ ಸಮಕಾಲೀನನಾಗುತ್ತಾನೆ. ಶಿಷ್ಯ ಬಸವಯ್ಯನು ದತ್ತಿ ಪಡೆಯುವಾಗ ಗುರು ಸಾತಿಮಯ್ಯನು ಬದುಕಿದ್ದನೋ ಇಲ್ಲವೊ ಸ್ಪಷ್ಟವಾಗುವುದಿಲ್ಲ.[೧೩೧]

ಕಡ್ಲೇವಾಡದ ಕ್ರಿ.ಶ ೧೧೮೬ರ ಶಾಸನದಲ್ಲಿ ಸಾತಿಮಯ್ಯಂಗಳು ನಾವಿದಿಗೆಯ ಸ್ವಯಂಭು ದೇವರಿಗೆ ೫೫೦ ಮತ್ತರ ಭೂಮಿಯನ್ನು ದಾನ ನೀಡಿರುವುದನ್ನು ಹೇಳಿದೆ. ಈ ದಾನವನ್ನು ಸ್ವಯಂಭು ಸೋಮನಾಥ ದೇವರ ಹಿರಿಯ ಮಠದ ಆಚಾರ್ಯ ಸೋವಿರಾಸಿ ಪಂಡಿತರಿಗೆ ಕೊಡಲಾಯಿತೆಂದು ಶಾಸನ ಉಲ್ಲೇಖಿಸುತ್ತದೆ.[೧೩೨]

ಸಿಂದಗಿ ತಾಲೂಕಿನ ಕಡಲೇವಾಡ ಗ್ರಾಮದ ಶಿವಲಿಂಗ ದೇವಾಲಯದಲ್ಲಿರುವ ಕ್ರಿ.ಶ. ೧೧೯೨ರ ಯಾದವ ಜೈತುಗಿಯ ಶಾಸನವೊಂದರಲ್ಲಿ 'ನಿಜಸಮಯ ಶರಣರ ರಕ್ಷದಕ್ಷನನವರ ತಸು ಭೀಕ್ಷಿತ ಪಂಡಿತ ಚೂಡಾಮಣಿಗಳುಂ ಶಿಷ್ಟ ಜನ ಚಿಂತಾಮಣಿಗಳಪ್ಪ ಕಡಲೇವಾಡದ ಶ್ರೀ ಸ್ವಯಂಭು ಸೋಮನಾಥದೇವರ ಹಿರಿಯ ಮಠದಾಚಾರ್ಯ್ಯ ಸಾತಿಮಯ್ಯಂಗಳ ಕಾಲಂ ಕರ್ಚ್ಚಿ ಧಾರಾ ಪೂರ್ವ್ವಕಂ ಮಾಡಿಕೊಟ್ಟರು[೧೩೩] ಕ್ರಿ.ಶ. ೧೧೭೬ ಮತ್ತು ೧೧೮೬ರ ಶಾಸನಗಳಲ್ಲಿ ಅಲ್ಲಿರುವ ಸ್ವಯಂಭು ಸೋಮನಾಥದೇವ ಹಿರಿಯ ಮಠದ ಆಚಾರ್ಯ ಸೊವಿರಾಸಿ ಪಂಡಿತರಾಗಿದ್ದರೆ. ಕ್ರಿ.ಶ. ೧೧೯೨ ರಲ್ಲಿ ಆ ಮಠಕ್ಕೆ ಈ ಸಾತಿಮಯ್ಯಗಳು ಆಚಾರ್ಯರಾಗಿ ಅಧಿಕಾರವನ್ನು ಸ್ವೀಕರಿಸಿದಂತೆ ತೋರುತ್ತದೆ. ಹೀಗಾಗಿ ಕ್ರಿ.ಶ. ೧೧೯೨ ರ ಶಾಸನವು ಇದನ್ನು ಸ್ಪಷ್ಟಗೊಳಿಸುತ್ತದೆ. ಎಂಬುವುದು ಅಲ್ಲಿಯ ಹಿರಿಯ ಮಠದ ಆಚಾರ್ಯ ಸಾತಿಮಯ್ಯಗಳು ಬಹುಶಃ ಭೂಯಾರದ ಶಾಸನದಲ್ಲಿ ಉಲ್ಲೇಖವಾಗಿರುವ ಸಾತಿಮಯ್ಯಗಳೇ ಆಗಿರಬೇಕು.

ಇಂಡಿ ತಾಲೂಕಿನ ಹಿರೇಬೇವಿನೂರ ಶಾಸನದಲ್ಲಿ ರೇವಣಸಿದ್ದನ ಉಲ್ಲೇಖವಿದೆ.[೧೩೪] ಸಿದ್ದರಾಮ ಶಿವಯೋಗಿಯ ಜನನ ಭವಿಷ್ಯ ನುಡಿದ ಮಂಗಳವಾಡ ಪ್ರದೇಶದಲ್ಲಿ ಶೈವ ಮತದ ರೇವಣಸಿದ್ಧ ಮತ್ತು ವೀರಶೈವ ಪಂಚಾಚಾರ್ಯರಲೊಬ್ಬನಾದ ರೇವಣಸಿದ್ದರು, ಭಿನ್ನರೋ ಅಭಿನ್ನರೋ ಎಂಬ ಪ್ರಶ್ನೆಯು ಇದೆ.[೧೩೫] ಶಾಸನದ ಪಾಠ ಇಂತಿದೆ.

೧) ಭೋಗನಾಥ ರೇವಣ
೨) ಸಿದ್ದಮಲ್ಲಿಕಾರ್ಜುನ
೩) ತಲೆಯ ಕಾವ ರಾಮೇ
೪) ಸ್ವರ ಬ್ರಹ್ಮೇಶ್ವರ
೫) ಮೈಲರದೇವ
೬) (ಯಿವುನಿ) ಸಾತ್ರಯಿ(ರ)
೭) ವ ಬೇಡಿದವ ತನ ಪೆಂಡ
೮) ತಿ ಯ ಕತೆಯ ಕೈಯ—
೯) ಲಿ--------

ಬಸವನ ಬಾಗೇವಾಡಿ ತಾಲೂಕಿನ ಮಸೂತಿ ಗ್ರಾಮದಲ್ಲಿರುವ ಕ್ರಿ.ಶ. ೧೧೫೭ ರ ಕಲ್ಯಾಣದ ಚಾಲುಕ್ಯ ಮೂರನೆಯ ತೈಲಪನ ಶಾಸನದಲ್ಲಿ[೧೩೬] ರೇವಣೇಶ್ವರ ದೇವಾಲಯಕ್ಕೆ ಗ್ರಾಮದ ದಾಸಿಮಯ್ಯನ ಮಗಳಾದ ಕಾಳಿಯವ್ವೆಯು ದಾನ ನೀಡಿರುವುದನ್ನು ಹೇಳಿದೆ. ಈ ಜಿಲ್ಲೆಯ ಅದೇ ತಾಲೂಕಿನ ಇಂಗಳೇಶ್ವರ ಗ್ರಾಮದಲ್ಲಿ ರೇವಣಸಿದ್ದನ ಗವಿಯೆಂದು ಒಂದು ಗವಿಯನ್ನು ಈಗಲೂ ತೋರಿಸುತ್ತಾರೆ.

ಕಲ್ಯಾಣವು ವೀರಶೈವ ಆಂದೋಲನಕ್ಕೆ ಬಸವಣ್ಣನವರು ಕೇಂದ್ರ ಶಕ್ತಿ ಎನಿಸಿದಂತೆ ಅದೇ ಕಾಲದ ಸೊನ್ನಲಿಗೆಯ ಶೈವ ಆಂದೋಲನಕ್ಕೆ ಕೇಂದ್ರ ಶಕ್ತಿ ಎನಿಸಿದವನು ಸಿದ್ದರಾಮ ಶಿವಯೋಗಿ. ವೀರಶೈವಕ್ಕೆ ಕಡಿಮೆಯಲ್ಲದ ರೀತಿಯಲ್ಲಿ ಶೈವವನ್ನು ಬೆಳಗಿಸಲು ನಿರತನಾಗಿದ್ದ ಈತನು ವೀರಶೈವ ದೀಕ್ಷೆಯನ್ನು ಪಡೆಯುವಲ್ಲಿ ಪರಮ ಯೋಗವನ್ನು ಮೆಚ್ಚಿ ಶಿವಯೋಗವನ್ನು ಮುಟ್ಟಿದವನು. ಕಲ್ಯಾಣದ ಪ್ರಖ್ಯಾತ ಶರಣರಲ್ಲೊಬ್ಬನಾಗಿರುವ ಸಿದ್ಧರಾಮನನ್ನು ಕುರಿತು. ಈವರೆಗೆ ೩೩ಕ್ಕೂ ಹೆಚ್ಚು ಶಾಸನಗಳು ಲಭ್ಯವಾಗಿದ್ದು.[೧೩೭] ಅವುಗಳಲ್ಲಿ ೯ ಶಾಸನಗಳು ಈ ಜಿಲ್ಲೆಯಲ್ಲಿವೆ. ಈ ಶಾಸನಗಳಲ್ಲಿ ಸಿದ್ದರಾಮನು ಬರೆದಿರುವ ಗುರುವಚನ, ಆಜ್ಞಾವಚನ ಅಥವಾ ಕ್ಷೇತ್ರಪ್ರತಿಪಾಳಕ ಎಂಬ ವಚನ ಭಾಗವನ್ನು ಶಾಸನದ ಆರಂಭದಲ್ಲಿ ಪ್ರಾರ್ಥನಾ ಪದ್ಯವಾಗಿ ಹಾಗೂ ಶಾಪಾಶಯದ ಭಾಗವಾಗಿ ಶಾಸನಕಾರರು ಉಪಯೋಗಿಸಿಕೊಂಡಿದ್ದಾರೆ.

"ಈ ವಚನಗಳ ಉಲ್ಲೇಖವಾಗಿರುವ ಶಾಸನಗಳಲ್ಲಿನ ದಾನಭಾಗವು ಬಹುತೇಕವಾಗಿ ಸೊನ್ನಲಿಗೆಯ ರಾಮನಾಥದೇವರಿಗೆ ಅಥವಾ ಮಲ್ಲಿಕಾರ್ಜುನದೇವರಿಗೆ ದಾನ ಬಿಟ್ಟ ವಿಷಯವನ್ನು ಒಳಗೊಂಡಿರುತ್ತದೆ. ಇಂಡಿ ತಾಲೂಕಿನ ಶಾಸನಗಳಲ್ಲಿ ಈ ವಚನವು "--- ದಿಶಂದಿಶಂ" ಎಂಬಲ್ಲಿಗೆ ಮುಕ್ತಾಯವಾಗಿದ್ದರೆ. ಮುದ್ದೇಬಿಹಾಳ ತಾಲ್ಲೂಕಿನ ಶಾಸನಗಳಲ್ಲಿ ಇದು ಮತ್ತೆ ಮುಂದುವರಿದು ಸಿದ್ಧರಾಮನ ಸಾಧನೆಯ ಗುಣಗಳನ್ನು ವರ್ಣಿಸಿದೆ. ಒಂದೇ ಪಾಠವುಳ್ಳ ಇಂತಹ ರಚನೆಗಳು ಉತ್ತರ ಕರ್ನಾಟಕದ ಅನೇಕ ಕಡೆಗಳಲ್ಲಿ ಮಹಾರಾಷ್ಟ್ರದಲ್ಲಿ ಹಾಗೂ ತುಂಗಭದ್ರೆಯ ದಕ್ಷಿಣಕ್ಕೂ ಅಪರೂಪಕ್ಕೆ ಉಲ್ಲೇಖವಾಗಿದೆ"[೧೩೮] ೧೧೯೦-೧೨೯೦ ರ ವರೆಗಿನ ನೂರುವರ್ಷದ ಅವಧಿಯಲ್ಲಿ ಇದು ಪ್ರಾರ್ಥನಾಶ್ಲೋಕದ ಸ್ಥಳವನ್ನು ಪಡೆಯುವಷ್ಟರ ಮಟ್ಟಿಗೆ ಪ್ರಭಾವಶಾಲಿಯಾಗಿತ್ತು. ಈ ಕಾಲಕ್ಕಾಗಲೇ ವಚನಗಳ ರಚನೆಯನ್ನು ಸಾಕಷ್ಟು ಮಾಡಿದ್ದಿರಬಹುದು. ಅದರಲ್ಲೂ ಸಿದ್ದರಾಮನಾಥನನ್ನು ಸೊನ್ನಲಿಗೆಯಲ್ಲಿ ನೋಡಿ ಅವನು ಮಾಡಿಸುತ್ತಿದ್ದ, ಮಾಡಿಸಿದ್ದ ಕಾರ್ಯಗಳನ್ನು ಜನರು ಗಮನಿಸಿದ್ದಿರಬೇಕು.

ಸಿದ್ಧರಾಮನಾಥನು ಸೊನ್ನಲಿಗೆಯನ್ನು ಅಭಿನವ ಶ್ರೀಶೈಲವನ್ನಾಗಿಸಲು ಮಾಡುತ್ತಿದ್ದ ಪ್ರಯತ್ನದ ಫಲವಾಗಿ ಕಪಿಲಸಿದ್ಧ ಮಲ್ಲಿನಾಥ ದೇವರ ದೇವಾಲಯ ಮತ್ತು ಕೆರೆಯ ಕಟ್ಟೆ ಮೊದಲಾದವು ಅದನ್ನು ಪುಣ್ಯಕ್ಷೇತ್ರವನ್ನಾಗಿಸಿರಬೇಕು. ಕಲ್ಯಾಣದಲ್ಲಿ ಕ್ರಾಂತಿಯಾಗಿ ಭಕ್ತರು. ಶರಣರು ಬೇರೆ ಬೇರೆ ಕಡೆ ಹೋದರು ಸಿದ್ದರಾಮ ಮಾತ್ರ ತನ್ನ ಕಾರ್ಯಕ್ಷೇತ್ರ ಸೊನ್ನಲಿಗೆಯಲ್ಲಿಯೇ ನೆಲೆಸಿದ್ದ. ಈ ವಚನಗಳು ಸಂಸ್ಕೃತಕ್ಕೂ ಅನುವಾದವಾಗಿರುವುದನ್ನು ಗಮನಿಸಿದರೆ ಸಾಮಾನ್ಯ

ಜನರಲ್ಲದೇ ಪಂಡಿತವರ್ಗದವರು ಇವನ ವಚನಗಳ ಬಗ್ಗೆ ಗೌರವ ತೋರಿದ್ದು ತಿಳಿದು ಬರುತ್ತದೆ.[೧೩೯]

ಸೊನ್ನಲಿಗೆಯು ದಕ್ಷಿಣ ವಾರಣಾಸಿ ಎಂಬ ಖ್ಯಾತಿಗೂ ಪಾತ್ರವಾಗಿತ್ತು. ಇಲ್ಲಿ ಮಲ್ಲಿಕಾರ್ಜುನ ದೇವಾಲಯವಲ್ಲದೆ. ರಾಮನಾಥ ದೇವಾಲಯವೂ ಇತ್ತು. ಶಾಸನಗಳಲ್ಲಿ ಇವೆರಡಕ್ಕೂ ದಾನ ನೀಡಿದ ಉಲ್ಲೇಖಗಳಿವೆ. ಶಾಸನಗಳಲ್ಲಿ ಇವನನ್ನು 'ಸಿದ್ದೇಂದ್ರ ಚಕ್ರವರ್ತಿ' 'ರಾಮನಾಥದೇವ' ಎಂದು ಕರೆದಿದೆ. ಈ ವಚನಗಳ ಪಾಠದಲ್ಲಿ ಹೇಳಿಕೊಳ್ಳುವಂತಹ ಬೇಧಗಳಿಲ್ಲ. ಆದರೆ ಒಂದು ಶಾಸನದಿಂದ ಇನ್ನೊಂದು ಶಾಸನಕ್ಕೆ ಅಕ್ಷರ ಸ್ಖಾಲಿತ್ಯಗಳಿವೆ.

ಸಿದ್ದರಾಮನು ಸೊನ್ನಲಿಗೆಯಲ್ಲಿ ಕಪಿಲಸಿದ್ದ ಮಲ್ಲಿಕಾರ್ಜುನ ಲಿಂಗವನ್ನು ಸ್ಥಾಪಿಸಿದ ಬಳಿಕ ಈ ದೇವರಿಗೆ ನಾಡಿನ ಬೇರೆ ಬೇರೆ ಭಾಗಗಳಿಂದ ಜನತೆ ದಾನದತ್ತಿಗಳನ್ನು ಬಿಟ್ಟ ಬಗೆಗೆ ಶಾಸನಗಳು ದೊರೆಯುತ್ತವೆ. ಸಿದ್ಧರಾಮನು ತನ್ನ ಜೀವನದ ಮೊದಲ ಘಟ್ಟದಲ್ಲಿಯೇ ಶಾಸನಗಳು ತಿಳಿಸುವಂತೆ ಜಗತ್ಪ್ರಸಿದ್ದನಾಗಿದ್ದನು. ಅವನ ವಚನಾಂಕಿತವಾದ 'ಕಪಿಲಸಿದ್ಧ ಮಲ್ಲಿಕಾರ್ಜುನ' ವೇಂಬುದು ಶಾಸನಗಳಲ್ಲಿ ಒಂದಿಲ್ಲೊಂದು ಸಂದರ್ಭದಲ್ಲಿ ಒಂದಿಲ್ಲೊಂದು ರೀತಿಯಿಂದ ಆತನ ಇಷ್ಟದೇವತೆಯ ಹೆಸರಾಗಿ ಕಂಡುಬರುತ್ತದೆ. ಅಲ್ಲದೇ ಶಾಸನೋಕ್ತವಾದ ಅವನ ಒಂದು ವಚನವು ಟಾಕಳಿಯ ಶಾಸನದಲ್ಲಿ ಸಂಸ್ಕೃತಕ್ಕೆ ಅನುವಾದವಾಗುವಷ್ಟರ ಮಟ್ಟಿಗೆ ಅವನ ವ್ಯಕ್ತಿತ್ವಕ್ಕೂ ವಚನಕ್ಕೂ ಮಹತ್ವ ಬಂದಿತು.[೧೪೦]

ಶಾಸನೋಕ್ತವಾದ ಈ ವಚನಗಳು ಸಿದ್ಧ ರಾಮೇಶ್ವರನ ಇತರ ವಚನಗಳ ಜೊತೆಗೆ ಇಲ್ಲಿಯವರೆಗೆ ಯಾವುದೇ ತಾಳೆಗರಿಯ ಅಥವಾ ಕೋರಿ ಕಾಗದದ ಹಳೆಯ ಪ್ರತಿಗಳಲ್ಲಿ ದೊರೆತಿಲ್ಲ. ಇವು ಅನುಭಾವದ ವಚನವಲ್ಲವಾದುದರಿಂದ ಇದಕ್ಕೆ ಅಲ್ಲಿ ಎಡೆ ದೊರೆತಿರಲಿಕ್ಕಿಲ್ಲ. ಆದರೆ ಈ ವಚನಗಳನ್ನು ಶಾಸನಗಳಲ್ಲಿ ಉತ್ಕರ್ಣಿಸುವ ವ್ಯವಸ್ಥೆ ಮಾಡಿರುವರೆಂಬುದು ಸ್ಪಷ್ಟವಿದೆ.[೧೪೧]

ಈ ವರೆಗೆ ಈ ಜಿಲ್ಲೆಯಲ್ಲಿ ಸಿದ್ಧರಾಮನ ವಚನಗಳನ್ನು ಉಲ್ಲೇಖಿಸುವ ೯ ಶಾಸನಗಳನ್ನು ಈ ಕೇಳಗಿನಂತೆ ಗುರುತಿಸಬಹುದಾಗಿದೆ.

ಅ.ನಂ	ಗ್ರಾಮ	ತಾಲೂಕು	ಕಾಲ	ರಾಜ ಮನೆತನ	ರಾಜ	ಉಲ್ಲೇಖ
೧	ಚೊರಗಿ	ಇಂಡಿ	ಕ್ರಿ.ಶ. ೧೧೯೦	ಯಾದವ	ಭಿಲ್ಲಮ	SII, XX,

						No.೧೭೭
೨	ಸಂಖ	ಇಂಡಿ	ಕ್ರಿ.ಶ. ೧೧೯೪	ಯಾದವ	ಜೈತುಗಿ	SII, XX, No.೧೮೧
೩	ಕೂಡಗಿ (ಕುರಡಗಿ)	ಇಂಡಿ	ಕ್ರಿ.ಶ. ೧೨೦೧	ಯಾದವ	ಜೈತುಗಿ	SII, XX, No.೧೮೫
೪	ಕಪ್ಪನಿಂಬರಗಿ	ಇಂಡಿ	ಕ್ರಿ.ಶ. ೧೨೪೩	ಯಾದವ	ಸಿಂಘಣ	SII, XX, No.೨೦೧
೫	ಗುಂಡಕರ್ಜಗಿ	ಮುದ್ದೇಬಿಹಾಳ	ಕ್ರಿ.ಶ. ?	ಯಾದವ	ಸಿಂಘಣ	SII, XX, No.೧೮೪
೬	ಟಾಕಳಿ	ಇಂಡಿ	---	ಯಾದವ	ಕನ್ನರ	SII, XX, No.೨೧೮
೭	ಪಡೇಕನೂರು	ಮುದ್ದೇಬಿಹಾಳ	ಕ್ರಿ.ಶ. ೧೨೫೬	ಯಾದವ	ಕನ್ನರ	SII, XX, No.೨೯೦
೮	ಜಟ್ಟಿಗೆ	ಮುದ್ದೇಬಿಹಾಳ	ಕ್ರಿ.ಶ. ೧೨೫೭	ಯಾದವ	--	SII, XX, No.೨೯೧
೯	ಚಡಚಣ	ಇಂಡಿ	ಕ್ರಿ.ಶ. ೧೩೦೦	ಯಾದವ	--	SII, XX, No.೩೪೨

ಮೇಲಿನ ಪಟ್ಟಿಯನ್ನು ಗಮನಿಸಿದರೆ ಇಂಡಿ ತಾಲೂಕಿನಲ್ಲಿ ಆರು ಶಾಸನಗಳು ದೊರೆತಿದ್ದರೆ. ಇನ್ನುಳಿದ ಮೂರು ಶಾಸನಗಳು ಮುದ್ದೇಬಿಹಾಳ ತಾಲೂಕಿನಲ್ಲಿ ಸಿಕ್ಕಿವೆ. ಇದಕ್ಕೆ ಇಂಡಿ ತಾಲೂಕು ಸೋಲ್ಲಾಪುರಕ್ಕೆ ಹೊಂದಿಕೊಂಡಿರುವುದರಿಂದ ಅದರ ಪ್ರಭಾವ ಹೆಚ್ಚಾಗಿರಬಹುದೇನೋ? ಅಲ್ಲದೇ ಸಿಕ್ಕಿರುವ ಎಲ್ಲಾ ಶಾಸನಗಳು ಯಾದವರ ಕಾಲಕ್ಕೆ ಸೇರಿದ್ದಾಗಿವೆ. ಇವುಗಳಲ್ಲಿ ಭಿಲ್ಲಮನಿಗೆ ಸೇರಿದ ಒಂದು ಶಾಸನ, ಜೈತುಗಿಯ ಕಾಲಕ್ಕೆ ಸೇರಿದ ಎರಡು ಶಾಸನಗಳು, ಸಿಂಘಣನ ಕಾಲಕ್ಕೆ ಸೇರಿದ ಎರಡು ಹಾಗೂ ಕನ್ನರನ ಕಾಲಕ್ಕೆ ಸೇರಿದ ಎರಡು, ಕಾಲದ ಉಲ್ಲೇಖವಿಲ್ಲದ ಎರಡು ಶಾಸನಗಳು ದೊರೆತಿವೆ.

ಕ್ರಿ.ಶ. ೧೧೯೦ ರ ಇಂಡಿ ತಾಲೂಕಿನ ಚೊರಗಿಯ ಶಾಸನವು "ಶ್ರೀ ಓಂ ಜಯ ಪರಮೇಶ್ವರ ಪರಮಾತ್ಮ ಈಶ್ವರನೋ" ಎಂದು ಪ್ರಾರಂಭವಾಗುತ್ತದೆ. ಪಾರ್ದುಕೊಂಡಿರ್ದ್ವೊಯ್ವದು ತಪ್ಪದು. ದಿಠದಿಠಸ---" ಎಂಬಲ್ಲಿಯವರೆಗಿದೆ. ಕಪಿಲ ಸಿದ್ದಮಲ್ಲೇಶ್ವರ ದೇವನೆ ಎಂಬ ನಾಮಾಂಕಿತವನ್ನೊಳಗೊಂಡಿದೆ. ಮುಂದುವರೆದು ದಕ್ಷಿಣದ ವಾರಣಾಸಿ ಅಭಿನವ ಶ್ರೀಶೈಲವೆನಿಪ್ಪ ಸೊನ್ನಲಿಗೆಯ ಶ್ರೀ ಕಪಿಲಸಿದ್ಧ ಮಲ್ಲಿಕಾರ್ಜುನ ದೇವರಿಗೆ ಮಹಾಮಂಡಳೇಶ್ವರ ವೀರಣದುಗಿದ್ದೇಶ್ವರ ಮಹಾಪ್ರಧಾನ, ಮಾಯಿದೇವ ದಂಡನಾಯಕರಿಂದ ಚೋರಹಾರಿಗೆ ಗ್ರಾಮದಾನ ನೀಡಿರುವುದನ್ನು ಶಾಸನ ಉಲ್ಲೇಖಿಸುತ್ತದೆ.[೧೪೨]

ಅದೇ ತಾಲೂಕಿನ ಸಂಖ ಗ್ರಾಮದಲ್ಲಿರುವ ಕ್ರಿ.ಶ. ೧೧೯೪ ರ ಶಾಸನವು ಯಾದವ ಜೈತುಗಿ ಕಾಲಕ್ಕೆ ಸೇರಿದ್ದಾಗಿದ್ದು. ತೃಟಿತವಾಗಿದೆ. ಸೊನ್ನಲಿಗೆಯ ಮಲ್ಲಿಕಾರ್ಜುನ ದೇವಾಲಯಕ್ಕೆ ಮಾಯಿದೇವ ದಂಡನಾಯಕನಿಂದ ಗ್ರಾಮದಾನ ಮಾಡಿರುವುದನ್ನು ಹೇಳಿದೆ. ಮೊದಲನೆಯ ಶಾಸನದಂತೆ ಈ ಶಾಸನದಲ್ಲಿಯು 'ತಪ್ಪದು ದಿಠ ದಿಠ' ಎಂಬಲ್ಲಿಯವರೆಗೆ ಇದೆ.

ಅದೇ ತಾಲೂಕಿನ ಕೂಡಗಿ (ಕುರುಡಗಿ) ಗ್ರಾಮದಲ್ಲಿರುವ ಕ್ರಿ.ಶ. ೧೨೦೧ ರ ಶಾಸನವು ತೃಟಿತವಾಗಿದ್ದು. ಯಾದವ ಜೈತುಗಿಯ ಕಾಲಕ್ಕೆ ಸೇರಿದ್ದಾಗಿದೆ. "ಸೋಮದೇವ ದಂಡನಾಯಕ, ಮಾಯಿದೇವ ನಾಯಕ ಮತ್ತು ಕರಣರಿಂದ ಕಪಿಲಸಿದ್ದಮಲ್ಲಿನಾಥ ದೇವರಿಗೆ ಭೂದಾನ ಮಾಡಿರುವುದನ್ನು ಹೇಳಿದೆ.

ಅದೇ ತಾಲೂಕಿನ ಟಾಕಳಿ ಗ್ರಾಮದಲ್ಲಿರುವ ಯಾದವ ಕನ್ನರನ ಶಾಸನದಲ್ಲಿ 'ಸ್ವಸ್ತಿ ಶ್ರೀ ವಂದೇತಂ ಕಪಿಲ ಸಿದ್ಧಮಲ್ಲಿಕಾರ್ಜುನಮೀಶ್ವರಂ" ಎಂದು ದೇವನಾಗರಿ ಲಿಯಲ್ಲಿಯೇ ಪ್ರಾರಂಭವಾಗುತ್ತದೆ. ೨೮ ಸಾಲುಗಳಿರುವ ಈ ಶಾಸನವು ಯಾದವ ಕನ್ನರ ದೇವನವರೆಗೆ ವಂಶಾವಳಿಯನ್ನು ಹೇಳುವುದಲ್ಲದೆ ಸಿದ್ದರಾಮನ ವಚನವನ್ನು ದೇವನಾಗರಿಯಲ್ಲಿ ಬರೆಯಲಾಗಿದೆ. [೧೪೩]

ಅದೇ ತಾಲೂಕಿನ ಕಪ್ಪನಿಂಬರಗಿಯಲ್ಲಿರುವ ಕ್ರಿ.ಶ. ೧೨೪೩ ರ ಯಾದವ ಸಿಂಘಣನ ಶಾಸನವು ತೃಟಿತವಾಗಿದ್ದು "ಅಭಿನವ ----ಶ್ರೀ ಸೊನ್ನಲಿಗೆಯ ಪುರದ ಶ್ರೀಮನು ಮಹಾಮಹಿಮ ಶ್ರೀಕಪಿಲಸಿ---ದೇವರ---ಉಲ್ಲೇಖವಿದೆ. ರಾಜಧಾನಿ ಉಮ್ಮಡೆಯನ್ನಾಳುವ ಮಾದವನಾಯಕ ಹಾಗೂ ಮಗ ಕೇಶವ ನಾಯಕರಿಂದ ಸೊನ್ನಲಿಗೆಪುರದ ಕಪಿಲಸಿದ್ದ ಮಲ್ಲಿನಾಥ ದೇವರಿಗೆ ಗ್ರಾಮದಾನ ಮಾಡಿರುವುದನ್ನು ಹೇಳಿದೆ.

ಅದೇ ತಾಲೂಕಿನ ಚಡಚಣ ಗ್ರಾಮದಲ್ಲಿರುವ ಕ್ರಿ.ಶ.ಸು. ೧೩೦೦ ನೆ ಶಾಸನದಲ್ಲಿ "ಶ್ರೀ ರಾಮನಾಥನೇ ಶರಣು ಓಂ ಜಯ ಪೆರಮೇಶ್ವರ" ಎಂದು ಆರಂಭವಾಗಿ 'ಕಪಿಲಸಿದ್ದ'ನು ಎಂಬಲ್ಲಿಗೆ ಮುಗಿಯುತ್ತದೆ. ತೃಟಿತವಾಗಿದೆ.

ಮುದ್ದೇಬಿಹಾಳ ತಾಲೂಕಿನ ಗುಂಡಕರ್ಜಗಿಯಲ್ಲಿರುವ ಯಾದವ ಸಿಂಘಣದೇವನ ಶಾಸನವು ಕಪಿಲಸಿದ್ದ ಮಲ್ಲಿಕಾರ್ಜುನ ದೇವರು ಎಂಬ ನಾಮಾಂಕಿತವನ್ನು ಒಳಗೊಂಡಿರುವಂತಹದ್ದಾಗಿದೆ. ತೃಟಿತವಾಗಿದೆ. ಇದೇ ತಾಲೂಕಿನ ಪಡೇಕನೂರ ಗ್ರಾಮದಲ್ಲಿರುವ ಕ್ರಿ.ಶ. ೧೨೫೬-೫೭ ಕ್ಕೆ ಸೇರಿದಾಗಿದೆ. ಓಂ ಜಯ ಪರಮೇಶ್ವರ ಪರಮಾತ್ಮ ಈಶ್ವರ ಎಂಬ ನಾಮಾಂಕಿತವನ್ನು ಒಳಗೊಂಡಿದೆ. ಮುಂದುವರೆದು ಸೊನ್ನಲಿಗೆಪುರದ ರಾಮನಾಥ ದೇವರಿಗೆ ಬಸದಿಕೊಂಡದ ಮಹಾಪ್ರಭು ದೇಶಿಯ ದಂಡನಾಯಕನಿಂದ ಪಡಿಯಕನೂರಿನಲ್ಲಿ ಭೂದಾನ ಮಾಡಿರುವುದುನ್ನು ಹೇಳಿದೆ. ಅದೇ ತಾಲೂಕಿನ ಜಟ್ಟಿಗೆ ಗ್ರಾಮದಲ್ಲಿರುವ ಕ್ರಿ.ಶ. ೧೨೬೭ ರ ಶಾಸನದಲ್ಲಿ 'ಓಂ ಜಯ ಪರಮೇಶ್ವರ ಪರಮಾತ್ಮ' ಎಂದು ಪ್ರಾರಂಭವಾಗಿ ಕಪಿಲಸಿದ್ದ ಮಲ್ಲಿಕಾರ್ಜುನ ದೇವನೆ ಎಂಬ ನಾಮಾಂಕಿತವನ್ನು ಒಳಗೊಂಡಿದೆ. ಮುಂದುವರೆದು ಮುದ್ದಿಗಿ ದೇವನಿಂದ ಸೊನ್ನಲಾಪುರದ ಕಪಿಲಸಿದ್ದ ಮಲ್ಲಿನಾಥ ದೇವರಿಗೆ ದಟ್ಟುಗಿ ಗ್ರಾಮ ದಾನದ ಉಲ್ಲೇಖವಿದೆ. ಹೀಗೆ ಅನೇಕ ಶಾಸನಗಳು ಸಿದ್ದರಾಮನ ಅಸ್ತಿತ್ವವನ್ನು ಸಾರುವಂತಹುಗಳಾಗಿವೆ.[೧೪೪]

ಕ್ರಿ.ಶ. ೧೨೧೦ರ ಮುದ್ದೇಬಿಹಾಳ ತಾಲೂಕಿನ ಸರೂರ ಗ್ರಾಮದಲ್ಲಿರುವ ಯಾದವ ಸಿಂಘಣದೇವನ ಕಾಲಕ್ಕೆ ಸೇರಿದ ಶಾಸನದಲ್ಲಿ ಸರೂರು ಅರಳಿಗೆರೆಯ ಸಿದ್ದರಾಮ ತಂದೆಯು ಪ್ರತಿಷ್ಠೆ ಮಾಡಿದ ಕೋಡಿಯ ಮಲ್ಲಿಕಾರ್ಜುನ ದೇವರಿಗೆ ಭೂಮಿ ಮತ್ತು ಮನೆಯನ್ನು ಶಿವಗೌಡನಿಂದ ಹೊನ್ನ ಕೊಟ್ಟು ಕೊಂಡು ದಾನವಾಗಿ ಕೊಡಲಾಗಿದೆ. ಇಲ್ಲಿ ಉಲ್ಲೇಖವಾಗಿರುವ ಸಿದ್ದರಾಮ ತಂದೆ ಸೊನ್ನಲಿಗೆಯ ಸಿದ್ದರಾಮನೆ ಆಗಿದ್ದಾನೆ.[೧೪೫]

ಅದೇ ಗ್ರಾಮದಲ್ಲಿರುವ ಕ್ರಿ.ಶ. ೧೨೧೫ರ ಯಾದವ ಸಿಂಘಣದೇವನ ಕಾಲಕ್ಕೆ ಸೇರಿದ ಶಾಸನದಲ್ಲಿ ಅರಳಿಗೆರೆಗೆಲನಾಡಿನಲ್ಲಿ ಕೊಂಡಿದೇವನ ಕೋಲಮತ್ತರಿನಲ್ಲಿ ಎರಡು ಮತ್ತರು ಭೂಮಿಯನ್ನು ಮನೆಯ ನಿವೇಶನವನ್ನು ಮಲ್ಲಿನಾಥ ರಾಮ ತಂದಿಯ ಸನ್ನಿದಾನದಲ್ಲಿ ಮಂಕಯ್ಯನಿಗೆ ಸರ್ವನಮಶ್ಯವಾಗಿ ಧಾರೆಯನ್ನು ಎರೆದು ದಾನ ಕೊಟ್ಟಿದ್ದನ್ನು ಉಲ್ಲೇಖಿಸುತ್ತದೆ.[೧೪೬]

ಅದೇ ತಾಲೂಕಿನ ತಂಗಡಿಗಿ ಗ್ರಾಮದಲ್ಲಿರುವ ಕ್ರಿ.ಶ. ೧೪೪೫ (?) ಶಾಸನದಲ್ಲಿ ಕೂಡಲಸಂಗಮದಲ್ಲಿ ಜಂಗಮರ ದಾಸೋಹಕ್ಕಾಗಿ ಬರೆಗೆಯ ಮಲ್ಲಿನಾಯಕನು ದೇವನಾಯಕರ

ಮಠದ ಕಪಿಸಿದ್ದ ದೇವರಿಗೆ ೧೩೦ ಭೂಮಿಯನ್ನು ದಾನವಾಗಿ ಕೊಡಲಾಗಿದೆ. ಹೀಗಾಗಿ ಅಲ್ಲಿ ಕಪಿಲಸಿದ್ದ ದೇವಾಲಯ ಇತ್ತೆಂದು ತಿಳಿದು ಬರುತ್ತದೆ.[೧೪೭]

ಈ ಮೇಲಿನ ಉಲ್ಲೇಖಗಳಲ್ಲಿ ಬಂದಿರುವ **ಸಿದ್ದರಾಮ** ಅಥವಾ **ರಾಮನಾಥ**ನು ಸ್ವತಃ ಇಲ್ಲಿ ದೇವರುಗಳನ್ನು ಪ್ರತಿಷ್ಠಾಪಿಸಿರಬಹುದು. ಇಲ್ಲವೇ ಅವನ ನಂತರ ಅವನನ್ನು ನೆನೆದು ದೇವಾಲಯದ ನಿರ್ಮಾಣ ಮಾಡಿರಬಹುದು.

ಒಟ್ಟಿನಲ್ಲಿ ಈ ಜಿಲ್ಲೆಯಲ್ಲಿ ಸಿದ್ದರಾಮನ ಉಲ್ಲೇಖಗಳನ್ನು ಗಮನಿಸಿದರೆ ಅವನ ಸಾಮಾಜಿಕ ಕಾರ್ಯಗಳಾದ ಕೆರೆಯ ನಿರ್ಮಾಣ, ದೇವಾಲಯದ ರಚನೆ ಮತ್ತು ಸೊನ್ನಲಾಪುರದ ಅಭಿವೃದ್ಧಿಗೆ ಆತ ನೀಡಿದ ಕಾಣಿಕೆಯಿಂದ ಜನರ ಮನಸ್ಸಿನಲ್ಲಿ ಅಜರಾಮರನಾದ. ಅವನ ಸೇವೆಯನ್ನು ಖಂಡಿಸಿದ ಅಲ್ಲಮಪ್ರಭುವಂತಹವರನ್ನು ಜನ ನೆನೆಯಲಿಲ್ಲ.

ಈ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ಕುದರಿ ಸಾಲವಾಡಗಿ ಗ್ರಾಮದ ಶಾಸನದಲ್ಲಿ ಶರಣ ಮೂರುಜಾವಿ ಮುನಿಯ ಉಲ್ಲೇಖ ಬರುತ್ತದೆ. ಕ್ರಿ.ಶ. ೧೦೫೯ ರಿಂದ ಕ್ರಿ.ಶ. ೧೨೩೮ ರ ವರೆಗಿನ ಮಧ್ಯದಲ್ಲಿ ಸುಮಾರು ೧೭ ಶಾಸನಗಳಲ್ಲಿ ಮೂರು ಜಾವಿದೇವನ ಹೆಸರುಗಳು ಕಂಡು ಬರುತ್ತವೆ. ಹಿರೇಮಾಗಳಗೇರಿ ಕ್ರಿ.ಶ. ೧೦೫೯ರ ಶಾಸನವು ಮೊದಲನೆಯ ಶಾಸನವಾಗಿದ್ದರೆ ಕಾಲದ ಉಲ್ಲೇಖವಿಲ್ಲದ ಸಾಲವಾಡಿಗಿಯ ಶಾಸನವು ಕೊನೆದಾಗುತ್ತದೆ. ಹೀಗೆ ಕಾಲದ ಅಂತರದಿಂದಾಗಿ ಸುಮಾರು ೩ ಜನ ಮೂರುಜಾವಿ ದೇವರುಗಳು ಆಗಿಹೋಗಿರಬಹುದೆಂದು ಈ ಮೊದಲು ತರ್ಕಿಸಲಾಗಿತ್ತು. ಆದರೆ ಈಗ ಸುಮಾರು ೫ ಜನ ಮೂರುಜಾವಿ ಮುನಿಗಳಾದರೂ ಆಗಿರಬಹುದೆಂದು ಗುರುತಿಸಲಾಗಿದೆ.[೧೪೮]

ಈ ಜಿಲ್ಲೆಯ ಸಿಂದಗಿ ತಾಲೂಕಿನ ಕಡಲೆವಾಡದ ಶಾಸನಗಳಲ್ಲಿ ನಮಃ ಶಿವಾಯ ಓಂ ನಮಃ ಶಿವಾಯ ಎಂಬ ಪಂಚಾಕ್ಷರ ಅಥವಾ ಷಡಕ್ಷರ ಮಂತ್ರಗಳಿಂದಲೇ ಪ್ರಾರಂಭವಾಗುತ್ತದೆ. ಅದರಂತೆ ಈ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ಯಾಳವಾರ, ಸಾಲವಾಡಗಿ ಗ್ರಾಮಗಳ ಶಾಸನಗಳು ಹಾಗೂ ಸಿಂದಗಿ ತಾಲೂಕಿನ ಕೊಂಡಗುಳಿಯ ಶಾಸನಗಳಲ್ಲಿಯೂ ನಮಃ ಶಿವಾಯಃದಿಂದಲೇ ಪ್ರಾರಂಭವಾಗಿರುವುದನ್ನು ಕಾಣಬಹುದಾಗಿದೆ.

ಹೀಗೆ ಶಾಸನಗಳು, ಸಾಹಿತ್ಯ ಕೃತಿಗಳು, ಮೌಖಿಕ ಆಕರಗಳ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಅನೇಕ ವಚನಕಾರರು ತಮ್ಮದೇ ಆದ ಪ್ರಭಾವವನ್ನು ಈ ಪರಿಸರದ ಮೇಲೆ ಪ್ರಭಾವ ಬೀರಿರುವುದನ್ನು ಕಾಣುತ್ತೇವೆ. ಅಲ್ಲದೆ ಇವರ ವಚನ ತತ್ವಗಳ ಮೂಲಕ ಈ ಪ್ರದೇಶದಲ್ಲಿ ಶೈವ

ಮತವು ಮತ್ತಷ್ಟು ಪ್ರಭುದ್ದತೆಯನ್ನು ಪಡೆದುಕೊಂಡು ಬಂದಿರುವುದನ್ನು ಕಾಣಬಹುದು. ವಚನಕಾರರ ಹಾಗೂ ಅವರ ನಂತರದ ಕಾಲಾವಧಿಯಲ್ಲಿ ಶೈವ ಧರ್ಮಕ್ಕೆ ಅರಸರ ಪ್ರೋತ್ಸಾಹ ನೇರವಾಗಿ ಸಿಗದೇ ಇದ್ದರೂ ಸಹ ಅವರ ವಚನಗಳು ಶೈವಮತವನ್ನು ಕುರಿತು ಉಲ್ಲೇಖಿಸುತ್ತವೆ. ಅಲ್ಲದೆ ಅಂದಿನ ಸಂದರ್ಭದಲ್ಲಿ ಶೈವಮತದವರಲ್ಲಿ ಸಾಮಾಜಿಕ, ಧಾರ್ಮಿಕ ವಿಷಯಗಳನ್ನು ಹಾಗೂ ಅದರಲ್ಲಿ ಜನಸಾಮಾನ್ಯರ ಪಾತ್ರವನ್ನು ಕುರಿತು ತಿಳಿಸುತ್ತವೆ. ಅದರ ವಿಸ್ತೃತ ಅಧ್ಯಯನದ ವಿವರ ಈ ಕೆಳಗಿನಂತಿದೆ.

೧೨ನೇ ಶತಮಾನದಲ್ಲಿ ಕರ್ನಾಟಕದಲ್ಲಿ ನಡೆದು ಹೋದ ಒಂದು ಚಳುವಳಿಯನ್ನು ಅದರ ಸ್ವರೂಪವನ್ನು ಅನೇಕರು ಅನೇಕ ರೀತಿಯಲ್ಲಿ ವಿವರಿಸಲು ಪ್ರಯತ್ನಿಸಿದ್ದಾರೆ. ಧರ್ಮ ಕರುಗುವಂತಹ ಸಮಯದಲ್ಲಿ ಅವತಾರ ಪುರುಷರಾಗಿ ಬಸವಾದಿಗಳು ಹುಟ್ಟಿ ಧರ್ಮ ಪುನರುಜ್ಜೀವನ ಮಾಡಿದರೆಂದು ಕೆಲವರು ಹೇಳಿದರೆ, ವೈದಿಕ ಧರ್ಮದಿಂದ ಜಡತ್ವದಿಂದ ಕೂಡಿದ ಸಮಾಜವನ್ನು ಅಂತಹ ಆಚರಣೆಗಳನ್ನು ವಿರೋಧಿಸಿ ಜೀವಂತ ಮಾನವ ಧರ್ಮವನ್ನು ಸ್ಥಾಪಿಸಿದರು ಎಂದು ಮತ್ತೆ ಕೆಲವರು ತಮ್ಮ ವಿವೇಚನೆಯಲ್ಲಿ ಬಿಂಬಿಸಿದ್ದಾರೆ.[೧೪೯]

ಯಾವುದೇ ಚಳುವಳಿಗಳು ಧಾರ್ಮಿಕ ಚೌಕಟ್ಟಿನಲ್ಲಿ ಹುಟ್ಟಿದವುಗಳಾಗಿರುವುದಿಲ್ಲ. ಧಾರ್ಮಿಕ ಅಂಶಗಳು ತೆರೆಯ ಹಿಂದೆ ಕೆಲಸ ಮಾಡಿದರೂ ಅವುಗಳ ಮೂಲ ಆರ್ಥಿಕ , ಸಾಮಾಜಿಕ ಜೀವನವನ್ನು ಉಲ್ಲೇಖಿಸುತ್ತವೆ.

ಕರ್ನಾಟಕದಲ್ಲಿ ವಚನಕಾರರ ಚಳುವಳಿಗೆ ತನ್ನದೆ ಆದ ಮಹತ್ವವಿದೆ. ಇದು ಏಕೆ? ಹುಟ್ಟಿತು ಹೇಗೆ? ಹುಟ್ಟಿತು ಎಂದು ಹೇಳುವಾಗ ಒಂದೇ ಬಾರಿಗೆ ಧರ್ಮ ಜಡವಾಗಿತ್ತು. ಆನರಿಗೆ ಅರ್ಥವಾಗದ ರೀತಿಯಲ್ಲಿ ಪುರೋಹಿತ ವರ್ಗದವರು ವ್ಯವಹರಿಸುತ್ತಿದ್ದರು. ಹೀಗೆ ಅನೇಕ ದುರ್ಬಲ ಕಾರಣ ನೀಡುತ್ತಾ ಬಸವನ ಮನ ಕಲುಕಿ ಹೊಸ ಪಂಥದ ಬೆಳವಣಿಗೆಗೆ ಕಾರಣ ಎಂದು ಹೇಳಿ ಬಿಡುತ್ತಾರೆ. ಹಾಗೆ ನೋಡಿದರೆ ವೈದಿಕ ಧರ್ಮ ಆರಂಭದಿಂದಲೂ ಜನಸಾಮಾನ್ಯರ ಧರ್ಮವಾಗಿರಲಿಲ್ಲ. ೧೧ನೇ ಶತಮಾನದ ಕೊನೆಯ ಭಾಗದ ರಾಜಕೀಯ ವ್ಯವಸ್ಥೆ ಸಂಕೀರ್ಣವಾಗಿತ್ತು ಹಾಗೂ ವಚನಕಾರರು ಹುಟ್ಟಿ ಬೆಳೆದ ಭಾಗದಲ್ಲಿ ಅನೇಕ ವೃತ್ತಿಗಳನ್ನು ಅವಲಂಬಿಸಿ ಬದುಕುತ್ತಿದ್ದರು ಮತ್ತು ವಚನಕಾರರು ಕಾಯಕ ಜೀವಿಗಳೇ ಆಗಿದ್ದರು.

ಈ ಕಾಲದಲ್ಲಿ ಹಾಕಿದ ತೆರಿಗೆಗಳನ್ನು ಅವಲೋಕಿಸಿದರೆ ಯಾರ–ಯಾರ ಮೇಲೆ ತೆರಿಗೆಗಳು ಇರಲಿಲ್ಲ ಎಂದು ಹೇಳುವುದು ತುಂಬಾ ಕಷ್ಟವಾಗುತ್ತದೆ. ಈ ಕಾಲದ ಶಾಸನಗಳನ್ನು ಗಮನಿಸಿದರೆ ಅಕ್ಕಸಾಲೆ, ನಾಯಿಂದ, ಅಂಬಿಗ, ಅಗಸ, ಕಮ್ಮಾರ, ಕುಂಬಾರ ಮೊದಲಾದವರು ತೆರಿಗೆ

ಕೊಡಬೇಕಾಗಿತ್ತು. ಇವರಲ್ಲದೆ ಗಾಣದ ತೆರೆ, ನೂಲುತೆರೆ, ಮಗ್ಗದೆರೆ, ಬಣ್ಣದೆರೆ, ಕುಲುವೆದೆರೆ ಹೀಗೆ ಎಲ್ಲ ವೃತ್ತಿಯವರು ತೆರಿಗೆಯನ್ನು ನೀಡಬೇಕಾಗಿತ್ತು.

ಇಷ್ಟೆಲ್ಲಾ ತೆರಿಗೆಗಳನ್ನು ಕೊಡಲು ಸಾಧ್ಯವಿಲ್ಲದಿದ್ದರೂ ಕೊಡುವ ಅನಿವಾರ್ಯತೆ ಇತ್ತು. ಅವುಗಳನ್ನು ಕೊಡಲಾಗದೆ ಜನರು ಊರು ಬಿಟ್ಟು ಹೋದ ಸಂದರ್ಭಗಳು ಶಾಸನಗಳಲ್ಲಿ ಸಿಕ್ಕುತ್ತವೆ.[೧೫೦] ಇಷ್ಟು ತೆರಿಗೆಗಳನ್ನು ಕೊಟ್ಟ ಜನ ಸುಮ್ಮನಿದ್ದರು ಹೇಗೆ? ಅವರು ಪ್ರತಿಭಟಿಸಲಿಲ್ಲವೆ? ಎಂಬ ಪ್ರಶ್ನೆಗಳು ಉದ್ಭವವಾಗುತ್ತವೆ. ಅಂತಹ ಪ್ರತಿಭಟನೆಯ ಒಂದೆರಡು ಶಾಸನಗಳು ಮಾತ್ರ ನಮಗೆ ದೊರೆಯುತ್ತವೆ. ಒಂದು ರೀತಿಯಲ್ಲಿ ಸಂಘಟಿತರಾಗಿದ್ದರ ಫಲವೇ ವಚನಕಾರರ ಚಳುವಳಿ ಎಂದು ಹೇಳಬೇಕಾಗುತ್ತದೆ.

ಅರಸ, ಮಠ, ಅಧಿಕಾರಿ ಮತ್ತು ವ್ಯಾಪಾರಿಗಳಿಂದ ಶೋಷಿತರಾದ ವೃತ್ತಿ ಜೀವಿಗಳು ತಮ್ಮದೆ ಆದಂತಹ ಗುಂಪುಗಳನ್ನು ಹೊಂದಿದ್ದರು. ಈ ಗುಂಪುಗಳು ಜೇಡಗೊತ್ತಳಿ, ಕಂಚುಗಾರಗೊತ್ತಳಿ, ಚಿಪ್ಪಿಗಗೊತ್ತಳಿ, ಗಾಣ ಒಕ್ಕಲು ಎಂದು ಶಾಸನಗಳಲ್ಲಿ ಬರುತ್ತವೆ. ಇವು ಕೆಲಸವನ್ನು ಮಾಡುವವರು ಒಟ್ಟಾಗಿ ಬದುಕುವ ಗುಂಪುಗಳಾಗಿದ್ದವೇ ವಿನಃ ಬೇರೆ ಯಾವುದೇ ರೀತಿಯ ಶಕ್ತಿಯನ್ನು ಹೊಂದಿರಲಿಲ್ಲ.

ಅಗ್ರಹಾರದ ಮಹಾಜನರು ರಾಜನ ಆಶ್ರಯದಲ್ಲಿ ಬದುಕುತ್ತಿದ್ದು ಅವರಿಗೆ ಸಾಮಾನ್ಯರು ತೆರಿಗೆ ಕೊಡುವಂತ ಪದ್ಧತಿಯ ಇತ್ತು. ೧೧ನೆಯ ಶತಮಾನದ ಮಧ್ಯಭಾಗದಿಂದ ಇಳಿಮುಖವಾದ ಜೈನ ಧರ್ಮದ ಜಾಗದಲ್ಲಿ ಶೈವಮತ ಬೆಳವಣಿಗೆಯನ್ನು ಹೊಂದಿತ್ತು. ದೇವಾಲಯಗಳ ನಿರ್ಮಾಣ ವಿಚಾರದಲ್ಲಿ ವೈಷ್ಣವರು ಒಂಭತ್ತನೇ ಶತಮಾನದಲ್ಲಿ ಕಟ್ಟಿಸಿದ ಒಂಡೆರಡನ್ನು ಬಿಟ್ಟರೆ ಹತ್ತರಿಂದ ಹನ್ನೆರಡನೆಯ ಶತಮಾನದಲ್ಲಿ ಶೈವರಿಂದ ಬಹಳಷ್ಟು ದೇವಾಲಯಗಳು ನಿರ್ಮಾಣವಾದವು. ಕಾಳಾಮುಖ, ಪಾಶುಪತ ಸಂಪ್ರದಾಯದ ಈ ಶೈವರು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವಲಸೆ ಹೋಗುವುದರ ಮೂಲಕ ಮತ್ತು ಗುರುಮಠದಿಂದ ಬೇರೆ ಬೇರೆ ಶಾಖಾ ಮಠಗಳಿಗೆ ಹೋಗಿ ದೇವಾಲಯಗಳ ಸ್ಥಾನಪತಿಗಳಾಗಿದ್ದು ಶಾಸನಗಳಿಂದ ತಿಳಿದು ಬರುತ್ತದೆ.[೧೫೧] ಅಗ್ರಹಾರಗಳಂತೆಯೇ ಮಠಗಳನ್ನು ಸ್ಥಾಪಿಸಿ ವಿದ್ಯಾಕೇಂದ್ರಗಳಾಗಿ ಮಾಡಿದರು. ಮಠದ ಮತ್ತು ದೇವಾಸ್ಥಾನದ ಆಸ್ತಿಯೂ ಒಂದೇ ಆಗಿದ್ದಿತು. ದೇವಾಲಯಗಳಿಗೆ ಸೇವೆ ಸಲ್ಲಿಸದಿದ್ದರೆ ಅಂಥವರನ್ನು ಜಾತಿಯಿಂದ ಹೊರ ಹಾಕುತ್ತಿದ್ದರು. ಈ ಮಠಗಳಲ್ಲಿ ಇರುವ ಸ್ಥಾನ ಪತಿಗಳಲ್ಲಿ ಕೆಲವರು ಬಹಳ ಪ್ರಭಾವ ಶಾಲಿಗಳಾಗಿದ್ದು ರಾಜಗುರುಗಳು ಎಂದು ಕರೆಯಿಸಿಕೊಂಡಿದ್ದಾರೆ.[೧೫೨] ಈ ಕಾಲದಲ್ಲಿ ದೇವಾಲಯಗಳು ಎಷ್ಟು ಪ್ರಭಾವ ಶಾಲಿಗಳಾಗಿದ್ದವು ಎಂದರೆ, ಧಾರವಾಡ ಜಿಲ್ಲೆಯ ಸೊಂಡಿ ಅಕ್ಕೇಶ್ವರ ದೇವಾಲಯದಲ್ಲಿ

ಒಂದು ಸಾವಿರ ಮಂದಿ ಕೆಲಸಗಾರರಿದ್ದು ಮಠ ಅವರನ್ನು ಸಾಕುತ್ತಿತ್ತೆಂದು ಶಾಸನ ಹೇಳುತ್ತದೆ.[೧೫೩] ಈ ಕಾಲದ ಎಲ್ಲ ದೇವಾಲಯಗಳಿಗೆ ಪ್ರಮುಖ ಎಂಬಂತೆ ಕೋಡಿಮಠ ಪ್ರಸಿದ್ಧಿ ಪಡೆದಿತ್ತು.[೧೫೪]

ಒಂದು ರಾಜಮನೆತನ ಹೋಗಿ ಇನ್ನೊಂದು ರಾಜಮನೆತನ ಅಧಿಕಾರಕ್ಕೆ ಬಂದರೂ ಅವನು ದೇವಸ್ಥಾನದ ಯಾವ ಸವಲತ್ತುಗಳಿಗೂ ಕೈ ಹಾಕದೆ ಹಿಂದಿದ್ದಂತೆಯೇ ನಡೆಸಿಕೊಂಡು ಹೋಗುವುದು ತನ್ನ ಕರ್ತವ್ಯವೆಂದು ಭಾವಿಸುತ್ತಿದ್ದವು. ದೇವಾಲಯಗಳ ವ್ಯವಹಾರ ಎಷ್ಟು ದೊಡ್ಡದಾಗಿತ್ತೆಂದರೆ ಅವುಗಳಿಗೆ ಭಕ್ತರು ಬಾಡಿಗೆ ದುಡಿಯುವುದಕ್ಕಾಗಿ ಕಟ್ಟಿಸಿಕೊಟ್ಟ ಅಂಗಡಿಗಳಿರುತ್ತಿದ್ದವು. ಅಂಗಡಿಗಳಿಂದ ಹಣ ತೆಗೆದುಕೊಂಡು ಬಡ್ಡಿಗೆ ಸಾಲವಾಗಿ ಕೊಡುತ್ತಿದ್ದವು. ಟಂಕಸಾಲೆಯ ಲಾಭದಲ್ಲಿ ಒಂದು ಭಾಗವನ್ನು ದೇವಾಲಯಕ್ಕೆ ಕೊಡಬೇಕಾಗುತ್ತಿತ್ತು. ದೇವಾಲಯಗಳು ತಾವೇ ನಾಣ್ಯಗಳನ್ನು ಟಂಕಿಸುವ ಅಧಿಕಾರವನ್ನು ಪಡೆದಿದ್ದವು. ಇದಲ್ಲದೆ ರಾಜರು ಮತ್ತು ಶ್ರೀಮಂತರಂತೆಯೇ ದೇವಾಲಯಗಳು ಆಭರಣಗಳ ವ್ಯವಹಾರವನ್ನು ಮಾಡುತ್ತಿದ್ದವು. ಮಠ ಮತ್ತು ದೇವಾಲಯಗಳಲ್ಲಿ ತೆಂಗು, ಗಂಧ, ಅಕ್ಕಿ, ಕರ್ಪೂರ, ತುಪ್ಪ, ಅಡಿಕೆ, ವೀಳೆ ಮುಂತಾದವುಗಳನ್ನು ಯಥೇಚ್ಛವಾಗಿ ಬಳಸುತ್ತಿದ್ದರು. ಇಷ್ಟೆಲ್ಲ ಸೌಲಭ್ಯಗಳನ್ನು ಪಡೆಯುತ್ತಿದ್ದ ಸ್ಥಾನಪತಿಗಳು ತಪ್ಪುದಾರಿಯಲ್ಲಿ ನಡೆಯುತ್ತಿದ್ದರು. ಇಂತಹ ಗೊರವರ ರೀತಿ-ನೀತಿಗಳನ್ನು ವಚನಕಾರರು ತಮ್ಮ ವಚನಗಳಲ್ಲಿ ಕಟುವಾಗಿ ಟೀಕಿಸಿರುವುದನ್ನು ಈ ಕೆಳಗಿನ ವಚನಗಳನ್ನು ಗಮನಿಸಿದರೆ ಗೊತ್ತಾಗುತ್ತದೆ.

ಕಲ್ಲಿಯ ಹಾಕಿ ನೆಲ್ಲಿ ತಳಿದು ಗುಬ್ಬಿಯ ಸಿಕ್ಕುಸುವ ಕಳ್ಳನಂತೆ
ವಾಗದ್ವೈತವ ಕಲಿತು ಸಂಸ್ಕೃತದ ಮಾತಿನ ಪಸರ ಮುಂದೆ
ಇಕ್ಕಿಕೊಂಡು ಮಂತ್ರದ ವಕ್ತ್ರದಲ್ಲಿ ಗ್ರಾಸವ ಹಾಕುವಂತೆ ಅದೇ ತರ
ನುಡಿಮಾತಿನ ಮರೆ ಆತುರ ವೈರಿ ಮಾರೇಶ್ವರಾ ।

ನಗೆಯ ಮಾರಿತಂದೆ

..... ಅರ್ಥದಾಸೆಗಾಗಿ ಬಡ್ಡಿಯ ತೆಗೆದುಕೊಂಡು ಬಡವರ ಬಂಧನಕ್ಕಿಕ್ಕಿ
ತುಡುಗು ವ್ಯಾಪಾರಮಾಡಿ ಸದಾಚಾರದಿಂದ ಅಚರಿಸಲರಿಯದೆ ತನುಮನಧನ
ದಲ್ಲಿ ವಂಚನೆಯಿಲ್ಲದೆ ಭಕ್ತರನರಿಯದೆ ತೀರ್ಥಪ್ರಸಾದದಲ್ಲಿ ನಂಬುಗೆ
ವಿಶ್ವಾಸವಿಲ್ಲದೆ ಕಂಡವರ ಕಂಡು ಕೈಯೊಡ್ಡಿ ಇಕ್ಕಿಸಿಕೊಂಡು ವಿಶ್ವಾಸವಿಲ್ಲ
ದವರಿಗೆ ಅಷ್ಟಾವರಣ ಎಂತು ಸಿದ್ಧಿಯೋ ।

ಮಡಿವಾಳ ಮಾಚಿದೇವ

ಮೇಲಿನ ವಚನಗಳಲ್ಲಿ ಸ್ಥಾನಪತಿಗಳ ಕುರಿತು ವಿರೋಧ ವ್ಯಕ್ತವಾದುದನ್ನು ಗಮನಿಸಬಹುದು ಹಾಗೂ ಅವರು ತೆಗೆದುಕೊಳ್ಳುತ್ತಿದ್ದ ಬಡ್ಡಿಯ ಹಣದ ಕುರಿತು –

ನಮ್ಮ ಸಂಗನ ಶರಣರಿಗಲ್ಲದೆ ಮಾಡುವ ಅರ್ಥ ವ್ಯರ್ಥಕಂಡಯ್ಯ

ಹಡೆದೊಡವೆ ವಸ್ತುವನು ಮೃಡ ಭಕ್ತರಿಗಲ್ಲದೆ

ಕಡಬಡ್ಡಿಯ ಕೊಡಲಾಗದು ಇದು ಕಾರಣ ದೇವಾ

ಶರಣರಗಲ್ಲದೆ ಕಡಬಡ್ಡಿಯ ಕೊಡಲಾಗದು

ಶರಣರಿಗೇ ಕೊಡಬೇಕೆಂಬ ಬಸವಣ್ಣನವರ ಮಾತುಗಳಲ್ಲಿಯೂ ನೋಡಬಹುದು. ಅಷ್ಟು ಮಾತ್ರವಲ್ಲದೆ ಶೈವಯತಿಗಳನ್ನು ಕುರಿತು ವಿರೋಧ ಬಸವ ಪೂರ್ವ ವಚನಕಾರರಲ್ಲೂ ಇರುವುದು ಗಮನಾರ್ಹವಾಗಿದೆ.

ವಚನಕಾರರು ಪ್ರತಿಭಟನೆ ವ್ಯಕ್ತಮಾಡಿರುವ ದೇವಾಲಯಗಳು ಬೇರೆ ಯಾವವೂ ಆಗಿರದೆ ಶೈವ ದೇವಾಲಯಗಳೇ ಆಗಿದ್ದವೆಂಬುದು ತಿಳಿಯಬಹುದು. ಯಾಕೆಂದರೆ ಆ ಕಾಲಕ್ಕೆ ಶೈವೇತರವಾದ ಯಾವ ದೇವಾಲಯವೂ ಪ್ರಭಾವಶಾಲಿಯಾಗಿರಲಿಲ್ಲ. ಸ್ಥಾನಪತಿಗಳಿಗೆ ಒಂದು ಸ್ಥಾನದ ಒಡೆತನವಲ್ಲದೆ ಅನೇಕ ಸ್ಥಾನಗಳ ಮೇಲೂ ಅಧಿಕಾರವಿರುತಿತ್ತೆಂದು ೧೦೨೮ ಶಾಸನವೊಂದು ಹೇಳುತ್ತದೆ.[೧೫೫] ಒಟ್ಟಿನಲ್ಲಿ ಈ ಮಠದ ಸ್ಥಾನಪತಿಗಳು ರಾಜ ದೇಶವನ್ನು ಆಳುತ್ತಿದ್ದರೆ ಇವರು ಜನರ ಮನಸ್ಸನ್ನು ಆಳುತ್ತಿದ್ದರು. ಹೀಗೆ ಇದ್ದವರನ್ನು ೧೦೨೮ರ ಶಾಸನ ತಪೋರಾಜ್ಯಂಗೆಯ್ಯುತ್ತಿದ್ದರು ಎನ್ನುತ್ತದೆ.[೧೫೬]

ಈ ಮಠಾಧಿಪತಿಗಳು ಇಲ್ಲಿನವರಾಗಿಲ್ಲದೆ ಹೊರಗಿನಿಂದ ಬಂದವರಾಗಿದ್ದರು ಎಂಬುದು ಈಗಾಗಲೆ ಚರ್ಚಿಸಲಾಗಿದೆ. ಮಡಿವಾಳ ಮಾಚಿದೇವನ ಅನೇಕ ವಚನಗಳಲ್ಲಿ ಸ್ಥಾನಪತಿಗಳು ಹಾಗೂ ಅವರ ವ್ಯವಹಾರ ಕುರಿತು ಹೇಳಲಾಗಿದೆ.[೧೫೭]

ದೇವಾಲಯಗಳಲ್ಲಿ ನಡೆಯುತ್ತಿದ್ದ ವಿದ್ಯಾಭ್ಯಾಸದಲ್ಲಿ ಅಗ್ರಹಾರಗಳಲ್ಲಿ ವೈಧಿಕರು ಏನನ್ನು ಕಲಿಸುತ್ತಿದ್ದರೂ ಅದರ ಜೊತೆಗೆ ಶೈವಾಗಮಗಳೂ ಇರುತ್ತಿದ್ದವು.

ರಾಜನ ತೆರಿಗೆಗಳಿಂದ ಮಠ ದೇವಾಲಯಗಳ ಸುಲಿಗೆಯಿಂದ ವರ್ತಕರ ಕಪಿಮುಷ್ಠಿಯಿಂದ ತಪ್ಪಿಸಿಕೊಳ್ಳುವ ಕಾತುರ ಮೊದಲು ಕಾಣಿಸಿದ್ದು ಕಾಯಕ ಜೀವಿಗಳಲ್ಲಿ ಎಂದರೆ ಆಶ್ಚರ್ಯವೇನೂ ಇಲ್ಲ. ಈ ಕಾಯಕ ಜೀವಿಗಳ ಪ್ರತಿನಿಧಿಯಾಗಿ ಜೇಡರದಾಸಿಮಯ್ಯ, ಡೊಹರ ಕಕ್ಕಯ್ಯ ಮೊದಲಾದವರು ಕಾಣುತ್ತಾರೆ.

ಕಾಯಕ ಜೀವಿಗಳನ್ನು ವೈದಿಕರು ಮತ್ತು ಶೈವರಿಬ್ಬರೂ ಶಿಕ್ಷಣದಿಂದ ದೂರವಿಟ್ಟಿದ್ದರು. ಆದ್ದರಿಂದ ಅವರು ತಾವು ಮಾಡುತ್ತಿದ್ದ ಕೆಲಸವನ್ನು ವಂಶಪಾರಂಪರ್ಯವಾಗಿ ಕಲಿಸುತ್ತಿದ್ದರು.

ವೃತ್ತಿಯ ಹೆಸರಿನಲ್ಲಿ ಅದನ್ನು ಕೀಳಾಗಿ ಕಂಡು ಚಮ್ಮಾರ, ಹೊಲೆಯ, ಚಾಂಡಾಲವೆಂದು ಜಾತಿಯನ್ನು ಮಾಡಿ ದೂರವಿಡಲಾಗಿತ್ತು. ಹೀಗೆ ತಮ್ಮನ್ನು ದೂರವಿಟ್ಟವರ ವಿರುದ್ಧ ತಿರುಗಿ ಬೀಳುವುದಕ್ಕೆ ಅಗತ್ಯವಾದ ಒಗ್ಗಟ್ಟನ್ನು ರೂಪಿಸುವ ಕೆಲಸಕ್ಕೆ ಏಕ ದೇವೋಪಾಸನೆ ಕರೆ ಅಗತ್ಯವಾಯಿತು. ಹಲವು ದೈವಗಳ ಪೂಜೆಯಲ್ಲಿ ಹರಿದು ಹಂಚಿ ಹೋಗಿದ್ದ ಕೆಳವರ್ಗದ ಜನ ಏಕದೇವೋಪಾಸನೆಯ ಮೂಲಕ ಗುಂಪಾಗಿ ಮೇಲ್ಜಾರಿಯವರಂತೆಯೇ ಸಂಘಟಿತರಾಗುವುದಕ್ಕೆ ಸಹಾಯ ಮಾಡಿತು. ಇಷ್ಟಾಗಿಯೂ ಬೇರೆ-ಬೇರೆ ದೈವಗಳನ್ನು ನಂಬಿದ ಕಲ್ಯಾಣಕ್ಕೆ ಬೇರೆ-ಬೇರೆ ಕಡೆಗಳಿಂದ ಬಂದು ಸೇರಿದ ವಚನಕಾರರ ಅಂಕಿತ ದೈವಗಳನ್ನು ಗಮನಿಸಿದರೆ ಅವರು ಎಷ್ಟು ಭಿನ್ನ ದೇವತೆಗಳ ಆರಾಧಕರಾಗಿದ್ದರೆಂಬುದು ವಿದಿತವಾಗುತ್ತದೆ.

ಅನೇಕ ವಿಚಾರಗಳ ಹಿನ್ನೆಲೆಯಲ್ಲಿ ಹುಟ್ಟಿಬಂದ ವಚನಕಾರರ ಚಳುವಳಿಯ ಬೆನ್ನೆಲಬು ಕಾಯಕ ಜೀವಿಗಳು ಎಂಬುದಕ್ಕೆ ಅಂಬಿಗರ ಚೌಡಯ್ಯ, ಮಡಿವಾಳ ಮಾಚಯ್ಯ, ಮೇದರ ಕೇತಯ್ಯ, ನುಲಿಯ ಚಂದಯ್ಯ, ಹಡಪದ ಅಪ್ಪಣ್ಣ, ಮೋಳಿಗೆ ಮಾರಯ್ಯ, ಜೇಡರ ದಾಸಿಮಯ್ಯ, ಕೊಟ್ಟಣದ ರೆಮ್ಮವ್ವೆ, ತುರುಗಾಹಿ ರಾಮಣ್ಣ ಇವರೇ ಮೊದಲಾದ ವೃತ್ತಿ ಜೀವಿಗಳೇ ಸಾಕ್ಷಿ.

ರಾಜ, ಅಧಿಕಾರಿ, ಮಠ, ವ್ಯಾಪಾರಿಗಳ ಸುಲಿಗೆಗೆ ಒಳಗಾಗಿದ್ದ ಜನರು ತಮ್ಮ ಬವಣೆಯ ನಿವಾರಣೆಗಾಗಿ ಮಾರ್ಗವೊಂದನ್ನು ಕಂಡುಕೊಳ್ಳಲು ಪ್ರಯತ್ನಪಟ್ಟರು. ಆ ಮಾರ್ಗ ಮೇಲು ನೋಟಕ್ಕೆ ಧಾರ್ಮಿಕವಾದದ್ದೆಂದು ಕಂಡುಬಂದರೂ, ಅವರು ಅದರ ಆಚೆಯ ಕನಸುಗಳನ್ನು ನನಸಾಗಿಸಲು ಬಯಸಿದ್ದರು.

ಬಿಜ್ಜಳನು ಮಹಾಮಂಡಳೇಶ್ವರನಾಗಿ ಮಂಗಳವೇಡೆಯಲ್ಲಿದ್ದಾಗ ಬಸವಣ್ಣ ಕರಣಿಕನಾಗಿ ಅವನ ಬಳಿ ಬಂದು ಸೇರುತ್ತಾನೆ. ನಂತರ ಅರಮನೆಯ ಅಧಿಕಾರಗಳ ದುರ್ವ್ಯವಹಾರದ ಪರಿಚಯವಾಗುತ್ತದೆ. ತಾನು ಒಬ್ಬ ಪ್ರಾಮಾಣಿಕ ಸೇವಕನೆಂಬುದನ್ನು ತೋರಿಸಿಕೊಟ್ಟು ಬಸವಣ್ಣ ರಾಜನ ಪ್ರೀತಿಗೆ ಪಾತ್ರನಾಗುತ್ತಾನೆ. ಬಂಡಾರದ ಕರಣಿಕನಾದ ಬಸವಣ್ಣನಿಗೆ ಅಧಿಕಾರಿಗಳು ಮಾಡುವ ಸುಲಿಗೆ, ಮಠಗಳಲ್ಲಿ ನಡೆಯುತ್ತಿದ್ದ ದುರ್ವ್ಯವಹಾರ, ಇವುಗಳ ಸುಲಿಗೆಗೊಳಗಾಗಿ ತೆರಿಗೆಗಳನ್ನು ಕೊಡಲಾರದೆ ತಮ್ಮ ಕಷ್ಟಗಳನ್ನು ಹೇಳಿಕೊಳ್ಳುವ ಬೇರೆ-ಬೇರೆ ವಲಯಗಳಲ್ಲಿನ ಜನರ ಪರಿಚಯವಾಗುತ್ತದೆ. ಹಾಗೆ ಪರಿಚಯಕ್ಕೆ ಬಂದವರ ಪೈಕಿ ಮಡಿವಾಳ ಮಾಚಯ್ಯ, ಅಂಬಿಗರ ಚೌಡಯ್ಯ, ನುಲಿಯ ಚಂದಯ್ಯ ಮೊದಲಾದವರು ಇದ್ದರು.

ಈ ಸಂದರ್ಭವೇ ಬಹಳ ಮುಖ್ಯವಾಗಿದೆ. ಯಾಕೆಂದರೆ ಇಂತಹ ಶರಣರ ಜೀವನ ವಿಧಾನ ಸರಿಕಂಡು, ತಾನು ಯಾವ ಸಂಸ್ಥೆಗಳಿಂದ ನೋವಿಗೆ ಈಡಾಗಿದ್ದೆನೋ ಅವುಗಳ ವಿರೋಧಿ ನಿಲುವೇ ಅವರಲ್ಲಿದ್ದುದನ್ನು ಕಂಡು ಅವರ ವಲಯದಲ್ಲಿ ಆಸಕ್ತಿಯನ್ನು ತೆಳೆದು, ಅವರುಗಳಲ್ಲಿ ತಾನೂ

ಒಬ್ಬನಾಗುವ, ಆ ಸಂಘಟನೆಯ ಬೆಳವಣಿಗೆಯಲ್ಲಿ ತನ್ನನ್ನು ತೊಡಗಿಸಿಕೊಳ್ಳುವ ಪ್ರಯತ್ನ ಮಾಡಿದ್ದಾನೆ. ವೃತ್ತಿ ಜೀವಿಗಳೂ, ಕುಶಲ ಕೆಲಸಗಾರರೂ ಆದ ಈ ಜನಕ್ಕಿಂತ ಬೇರೆಯಾದ ಅಂದರೆ ಮೇಲಿನವರ ಜ್ಞಾನ ಭಂಡಾರವನ್ನು ಹೊಂದಿದ್ದ ಬಸವನಿಗೆ ತನ್ನ ಮನಸ್ಸಿನಲ್ಲಿಯ ತುಮುಲಕ್ಕೆ ಮತ್ತು ಅದರ ಬಿಡುಗಡೆಗೆ ತಾನು ಮುಂದೆ ಮಾಡಬೇಕಾದ ಹೋರಾಟಕ್ಕೆ ದಾರಿಯೊಂದು ಸಿಕ್ಕಿದಂತಾಯಿತು.

ಆರಂಭದ ಸಂದರ್ಭದಲ್ಲಿ ಬಸವ-ಬಿಜ್ಜಳರ ಮಧ್ಯ ಯಾವುದೇ ವೈಮನಸ್ಸು ಕಂಡುಬರುವುದಿಲ್ಲ. ಪ್ರಾಮಾಣಿಕ ದೈವಭಕ್ತನಾದ ಒಬ್ಬ ಅಧಿಕಾರಿಯನ್ನು ನಡೆಸಿಕೊಂಡಂತೆ ನಡೆಸಿಕೊಳ್ಳುತ್ತಾನೆ. ಇದೇ ಸಂದರ್ಭದಲ್ಲಿ ಬಸವಣ್ಣ ಮತ್ತು ಅವನ ಸಂಗಡಿಗರ ಕಾರ್ಯ ಚಟುವಟಿಕೆಗಳನ್ನು ಬ್ರಾಹ್ಮಣರು ಮತ್ತು ಶೈವ ಮಠಗಳ ಸ್ಥಾನಪತಿಗಳು ವಿರೋಧಿಸಿದರು.

ಕಲ್ಯಾಣ ಬಿಜ್ಜಳನ ಕೇಂದ್ರವಾಗಿ ಅವನು ಚಕ್ರವರ್ತಿಯಾದ ಮೇಲೆ ಬಸವ ಕರಣಿಕನಾಗಿದ್ದವನು ಭಂಡಾರಿಯಾಗಿದ್ದಾನೆ. ಇದರಿಂದ ಅವನ ಕಾರ್ಯ ಕ್ಷೇತ್ರವೂ ಹೆಚ್ಚಾಯಿತು. ಅಲ್ಲದೆ ಮೊದಲಿಗಿಂತ ಈಗ ಉನ್ನತ ಸ್ಥಾನವೂ ದೊರೆಯಿತು. ಆದರೆ ಬಸವಣ್ಣ ಬಿಜ್ಜಳನ ಭಂಡಾರವೆನಗೇಕಯ್ಯ ಎನ್ನುವುದರ ಮೂಲಕ ರಾಜಕೀಯ ಪ್ರಭಾವಶಾಲಿಯಾಗಿದ್ದ ಎಂದು ಹೇಳಲು ಸಾಧ್ಯವಿಲ್ಲ ಹಾಗೂ ತನ್ನ ನೇತೃತ್ವದ ಚಳುವಳಿಗಳಿಂದ ಆದ ಸಮಸ್ಯೆಗಳನ್ನು ಆಳುವ ಅರಸನಿಗೆ ಬರದಂತೆ ನೋಡಿಕೊಂಡ.

ಮಂಗಳವೇಡೆಯಿಂದ ಅವನ ಜೊತೆಗೆ ಬಂದವರ ಜೊತೆಗೆ ಕಲ್ಯಾಣಕ್ಕೆ ಬೇರೆ-ಬೇರೆ ಕಡೆಗಳಿಂದ ವೃತ್ತಿ ಜೀವಿಗಳು ಬಂದು ಸೇರತೊಡಗಿದರು. ಕಲ್ಯಾಣ ಆ ಕಾಲಕ್ಕೆ ಪ್ರವಾಸಿಗರನ್ನು, ವ್ಯಾಪಾರಿಗಳನ್ನು ಆಕರ್ಷಿಸುವ ಮಟ್ಟಿಗೆ ಪ್ರಖ್ಯಾತವಾದ ವ್ಯಾಪರ ಕೇಂದ್ರವಾಗಿತ್ತು. ಕಸಬುದಾರರಿಗೆ ಜೀವನೋಪಾಯದ ನೆಲೆಯು ಆಗಿತ್ತು. ಇವರೆಲ್ಲ ಮಠಗಳ ಮತ್ತು ವ್ಯಾಪಾರಿಗಳ ಹಿಡಿತದಿಂದ ಬಿಡುಗಡೆಯನ್ನು ಪಡೆಯುವುದರ ಜೊತೆಗೆ ತಮಗೊದಗಿದ್ದ ನೀಚತ್ವದಿಂದ ಉಳಿಯಬೇಕಾಗಿತ್ತು. ಬಸವಾದಿಗಳ ಭಕ್ತಿಮಾರ್ಗ ಮತ್ತು ಶರಣ ತತ್ವಗಳು ಅವರಿಗೊಂದು ರೀತಿಯ ವ್ಯಕ್ತಿತ್ವವನ್ನು ಭರವಸೆಯನ್ನು ತಂದುಕೊಟ್ಟವು.

ವಚನಕಾರರು ದೇವಾಲಯಗಳಲ್ಲಿನ ವಿದ್ಯ ವಿರೋಧಿಸಿದ್ದು, ಅಲ್ಲಿನ ದುರ್ವ್ಯವಹಾರ, ಮಠಾಧಿಪತಿಗಳ ಭೋಗಜೀವನ ಇತ್ಯಾದಿಗಳನ್ನು ಖಂಡಿಸಿದ್ದು. ಗುರುವಾದರೂ ಕಾಯಕದಿಂದಲೇ ಮುಕ್ತಿ ಎಂದು ಹೇಳಿದ್ದು ಇವು ಎಲ್ಲ ಶರಣ ಜೀವಿಗಳ ಆಶಯವಾಗಿತ್ತು. ಜಾತಿಯ ಹೆಸರಿನಲ್ಲಿ ಅವರೆಲ್ಲರನ್ನು ದೂರವಿಟ್ಟವರ ವಿರುದ್ಧ ತಾವೆಲ್ಲ ಒಂದೇ ಜಾತಿ ಎಂದು ಪೋಷಿಸಿಕೊಂಡರು. ಸ್ಥಾವರದ ನಿರಾಕರಣೆಯ ಮೂಲಕ ದೇವಾಲಯಗಳ ಇಡೀ ವ್ಯವಸ್ಥೆಯನ್ನು ದೂರವಿಟ್ಟರು.

ಶರಣರ ಈ ಚಳುವಳಿಯ ಮೊದಲ ಕಳಕಳಿ ಶೋಷಣೆಯನ್ನು ಹೋಗಲಾಡಿಸುವ ದಿಶೆಯಿಂದ ಕಂಡರೂ, ಬರುಬರುತ್ತ ರಾಜಕೀಯ ಶಕ್ತಿಯಾಗಿ ಅದನ್ನು ಪೋಷಿಸಿ ಬೆಳೆಸುವ ಮನಸ್ಸನ್ನು ಮುಂಚೂಣಿಗೆ ಬಂದವರೂ ಮಾಡದೇ ಹೋದದ್ದರಿಂದ ಸುಲಭ ಸಾಧ್ಯವಾದ ಸ್ವ ಪರೀಕ್ಷೆ, ಸ್ವಯಂ ಭೂ ಸ್ಥಿತಿಗಳತ್ತ ಹೋಯಿತು. ಈ ಚಳುವಳಿಯ ಆರಂಭ ಕಾಲಕ್ಕೆ ಅಂದರೆ ಬಸವ ಪೂರ್ವದಲ್ಲಿ ಮತ್ತು ಅವನ ಜೊತೆಗೆ ಸಂಘಟನೆಯಲ್ಲಿ ಪಾಲುಗೊಂಡವರೆಲ್ಲ ಕಾಯಕ ಜೀವಿಗಳೇ ಅವರು ನಿಂತು ರೂಪಿಸಿದ ಎಷ್ಟೋ ಕಾಲದ ಮೇಲೆ ಅಲ್ಲಮ, ಸಿದ್ದರಾಮ, ಅಕ್ಕಮಹಾದೇವಿ ಮೊದಲಾದವರೆಲ್ಲ ಬಂದು ಸೇರಿದರೆಂಬುದು ಸ್ಪಷ್ಟವಾಗಿದೆ.

ಮಂಗಳವೇಡೆಯಲ್ಲಿ ಬಸವ ಬಿಜ್ಜಳ ಸ್ನೇಹಿತರಂತಿದ್ದು ಕಲ್ಯಾಣಕ್ಕೆ ಬಂದ ಮೇಲೆ ಬಿಜ್ಜಳನ ಸುತ್ತ ಬೇರೆಯವರು ಸೇರಿಕೊಂಡರು. ನಂತರ ಬಸವ-ಬಿಜ್ಜಳರ ಮಧ್ಯ ಕಂದಕ ಏರ್ಪಟ್ಟು ಮನಸ್ಸುಗಳು ದೂರಾಗುವಷ್ಟರ ಮಟ್ಟಿಗೆ ವೈಮನಸ್ಸು ಮುಂದುವರೆದು ರಾಜಕೀಯ ಏರು-ಪೇರು ಉಂಟಾಯಿತು. ಈ ರಾಜಕೀಯ ವೈಪರಿತ್ಯಗಳಿಗೆ ವಚನಕಾರರು ಏನು ಮಾಡುತ್ತಿದ್ದರು? ಅವರ ಪಾತ್ರಗಳ ಬಗ್ಗೆ ಶಾಸನಗಳಲ್ಲಿ ಏಕೇ ಉಲ್ಲೇಖವಿಲ್ಲ? ಇಂತಹ ಪ್ರಶ್ನೆಗಳಿಗೆ ಉತ್ತರ ಒಂದೇ ಶರಣರ ನೇತಾರ ಬಸವಣ್ಣ ರಾಜಕೀಯದಲ್ಲಿರಬಾರದು ಎಂಬುದಾಗಿತ್ತು. ಅವರಿಚೆಯಂಬಂತೆ ಬಸವಣ್ಣ ಅಧಿಕಾರವನ್ನು ತ್ಯಾಗ ಮಾಡಿರಬಹುದು.

ಬಸವನ ಅಧಿಕಾರ ತ್ಯಾಗದ ನಂತರ ವಚನಕಾರರ ಚಳುವಳಿ ಕ್ರಿಯಾತ್ಮಕವಾಗಿ ತೀವ್ರ ಸ್ವರೂಪವನ್ನು ಪಡೆಯಿತು. ತೀವ್ರಗತಿಯಲ್ಲಿ ಹಬ್ಬುತ್ತಿದ್ದ ಈ ಚಳುವಳಿಯನ್ನು ಹತ್ತಿಕ್ಕದೆ ಹೋದರೆ ಅದರ ಅಪಾಯವೆನೆಂಬುದನ್ನು ತಿಳಿದು, ಒಬ್ಬನ ಸುತ್ತ ಅಸಂಖ್ಯಾಗ ಜನ ಸುತ್ತುವರಿಯುವುದನ್ನು ನಿಯಂತ್ರಿಸಬೇಕೆಂದು ಬಿಜ್ಜಳ ನಿರ್ಧರಿಸಿದ ಕಾರಣ ಮಗನ ರಾಜ್ಯ ನಿರಾತಂಕ ಮಾಡುವ ಹೊಣೆ ಅವನ ಮೇಲಿತ್ತು. ಈ ಮಧ್ಯ ತಮಿಳುನಾಡಿನ ಶೈವ ಕಥೆಗಳು, ದಕ್ಷಿಣ ಕರ್ನಾಟಕದಲ್ಲಿನ ರಾಮಾನುಜರ ಚಟುವಟಿಕೆಗಳು ಚಳುವಳಿ ನಿರತ ಶರಣರಿಗೆ ಮತ್ತಷ್ಟು ಉತ್ತೇಜನ ನೀಡಿತು. ಯಾರು ಏನು ಮಾಡಿದರು ತಮ್ಮ ಚಟುವಟಿಕೆಗಳನ್ನು ನಿಲ್ಲಿಸುವುದಿಲ್ಲ ಎಂಬ ಹಟಕ್ಕೆ ಅವರು ಬಂದಿದ್ದರು ಎಂಬುದನ್ನು ಈ ಕೆಳಗಿನ ವಚನಗಳಿಂದ ತಿಳಿಯಬಹುದಾಗಿದೆ.

ನ್ಯಾಯನಿಷ್ಠುರಿ, ದಾಕ್ಷಿಣ್ಯ ಪರಮ ನಾನಲ್ಲ
ಲೋಕ ವಿರೋಧಿ ಶರಣನಾರಿಗಂಜುವನ
ಕೂಡಲಸಂಗಮ ದೇವರ ರಾಜತೇಜದಲ್ಲಿಪ್ಪನಾಗಿನಾ ।

ಆಯುಷ್ಯ ತೀರಿದಲ್ಲದೆ ಮರಣವಿಲ್ಲ

ಭಾಷೆ ತಪ್ಪಿದಲ್ಲದೆ ದಾರಿದ್ರ್ಯವಿಲ್ಲ
ಅಂಜಲದೇಕೋ ಕೂಡಲಸಂಗಮ ದೇವ ನಿಮ್ಮಾಳಾಗಿ ।[೧೫೮]

ನಾಳೆ ಒಪ್ಪುದು ನಮಗಿಂದೆ ಬರಲಿ
ಇಂದು ಒಪ್ಪುವುದು ನಮಗೀಗಲೇ ಬರಲಿ
ಇದಕಾರುಜುವರು ಇದಕಾರಳಕುವರು
ಜಾತಸ್ಯ ಮರಣಂ ದ್ರುವಂ ಎಂದುದಾಗಿ.......[೧೫೯]

ಆರು ಮುನಿದು ನಮ್ಮನೇನು ಮಾಡುವರು
ಊರು ಮುನಿದು ನಮ್ಮನೆಂತು ಮಾಡುವುದು
ನಮ್ಮ ಕುನ್ನಿಗೆ ಕೂಸ ಕೊಡಬೇಡ
ನಮ್ಮ ಸೊಣಗಂಗೆ ತಳಿಗೆಯನಿಕ್ಕೆ ಬೇಡ
ಆನೆಯ ಮೇಲೆ ಹೋಹನ ಶ್ವಾನ ಕಚ್ಚ ಬಲ್ಲದೆ
ನಮಗೆ ಕೂಡಲಸಂಗಯ್ಯ ನುಳ್ಳನಕ್ಕ......... ।[೧೬೦]

ರಾಜನ ಆದಿನದಿಂದ ನಾವು ಹೊರ ಬಂದಾಗಿದೆ. ಅವರಿಗೇಕೆ ಅಂಜಬೇಕು. ನಾವು ಕೂಡಲಸಂಗನ ಆಳಾಗಿರುವುದರಿಂದ ಬೇರೆಯವರ ಹಂಗು ನಮಗೇಕೆ? ಯಾರು ಕೋಪವನ್ನು ಮಾಡಿಕೊಂಡರೆ ನಮಗೇನು ಮಾಡುವರು ಎಂಬ ಭರವಸೆ ಬಹಳ ಕಾಲ ಉಳಿಯಲಿಲ್ಲ. ಯಾಕೆಂದರೆ ಅವರು ಎದುರು ಹಾಕಿಕೊಂಡಿದ್ದು ಬಲವಾದ ರಾಜ್ಯಶಕ್ತಿಯನ್ನು, ಯಾವುದೆ ಒಂದು ಕಾರಣಕ್ಕಾಗಿ ಕಾಯುತ್ತಿದ್ದ ಅವರಿಗೆ ಹರಳಯ್ಯ, ಮಧುವಯ್ಯರ ಮಕ್ಕಳ ಮದುವೆ ಒಂದು ನೆಪ ಮಾತ್ರವಾಗಿತ್ತು. ವರ್ಣಸಂಕರವನ್ನು ತಪ್ಪಿಸುವ ಹೆಸರಿನಲ್ಲಿ ಮಾಧವನ ದಂಡನಾಯಕತ್ವದಲ್ಲಿ ಬಿಜ್ಜಳನ ಕಡೆಯವರು ಅವರನ್ನು ಕೊಲ್ಲುತ್ತಾರೆ.

ಅಧಿಕಾರದ ಕ್ರೌರ್ಯ ಶರಣರಿಗೆ ತಟ್ಟುತ್ತದೆ. ಅದರಲ್ಲಿ ಅಲ್ಲಮ, ಬಸವ, ಅಕ್ಕಮಹಾದೇವಿ ಮುಂಚೂಣಿಯಲ್ಲಿರುತ್ತಾರೆ. ಇಲ್ಲಿಯೂ ಎರಡು ಗುಂಪುಗಳಾಗುತ್ತವೆ. ಒಂದು ಪ್ರತೀಕಾರದ ಭೂಮಿಕೆಯಿಂದ ಹೊರಗುಳಿದವರು.

ಅರಸು ಮುನಿದೊಡೆ ನಾಡಳೊಗೆ ಇರಬಾರದಯ್ಯಾ
ಅರಸು ವಿಚಾರ ಸಿರಿಯು ಶೃಂಗಾರ ಸ್ಥಿರವಲ್ಲ ಮಾನವಾ
ಕೆಟ್ಟಿತ್ತು ಕಲ್ಯಾಣ ಹಾಳಾಯಿತು ನೋಡಾ ।[೧೬೧]

ಹೀಗೆ ಅರಸನ ವಿರೋಧ ಕ್ಷೇತ್ರದಲ್ಲಿ ಸಾಧ್ಯವಿಲ್ಲವೆಂದು ಕೈಸೋತು, ಅಧ್ಯಾತ್ಮಿಕ ನೆಲೆಯಲ್ಲಿ ನಿಂತು ಅರಸನೂ ಅವನ ಸಿರಿಯೂ ಉಳಿಯದೆಂದು ಸಮಾಧಾನ ಮಾಡಿಕೊಂಡು ಕಲ್ಯಾಣ ಕೆಟ್ಟು ಹೋಯಿತೆಂದು ನಿಟ್ಟುಸಿರು ಹಾಕುತ್ತಾರೆ. ಆದರೆ ತೀರ್ಮಾನದ ನಿಟ್ಟುಸಿರು ಕೆಲವರಿಗೆ ಒಪ್ಪಿತವಾಗುವುದಿಲ್ಲ. ಅವರು ಪ್ರತೀಕಾರದ ಪಟ್ಟು ಹಿಡಿಯುತ್ತಾರೆ. ಈ ಗುಂಪಿನ ಮೇಲೆ ಬಸವನ ಹಿಡಿತವು ತಪ್ಪುತ್ತದೆ. ಇದಕ್ಕೆ ಸೃಷ್ಠಿ ಎಂಬಂತೆ ಕಲ್ಯಾಣದಲ್ಲಿ ನಿನ್ನ ಕೆಲಸ ಮುಗಿಯಿತು ಇನ್ನೂ ಹೊರಡು ಎಂದು ಅಲ್ಲಮನ ಒಂದು ವಚನ ಹೇಳುತ್ತದೆ.[೧೬೨] ಆದ್ದರಿಂದಲೇ ಬಸವ ಕೂಡಲಕ್ಕೆ ಅಲ್ಲಮ ಶ್ರೀಶೈಲಕ್ಕೆ ಹೋಗಿರಬೇಕು. ಇತ್ತ ಸೇಡು ತೀರಿಸಿಕೊಳ್ಳಬೇಕೆಂಬ ನಿಲುವಿನಲ್ಲಿದ್ದವರು ಬಿಜ್ಜಳನ ಕೊಲೆ ಮಾಡುತ್ತಾರೆ. ಕೊಲೆ ಮಾಡಿದ ನಿಲುವನ್ನು ಸಮರ್ಥಿಸುವ ನಿರ್ಧಾರವನ್ನು ಕನ್ನಡಿ ರೇವಮ್ಮ ತನ್ನ ವಚನದಲ್ಲಿ 'ಧರ್ಮ ವಿರೋಧಿಗಳನ್ನು ಕೊಲ್ಲುವುದರಲ್ಲಿ ತಪ್ಪಿಲ್ಲ' ಎಂದು ಹೇಳಿದ್ದಾಳೆ. ಅಲ್ಲದೆ ಹೀಗೆ ಕೊಲೆ ಮಾಡುವುದಕ್ಕೆ 'ಹುಸಿ ಹಣ್ಣಾಗಿ ತೊಟ್ಟು ಬಿಟ್ಟಿತ್ತು ಅರಸನಲ್ಲಿ' ಎಂಬ ಮಾತು ಚನ್ನಬಸವಣ್ಣನ ವಚನದಲ್ಲಿ ದೊರೆಯುವುದು. ಹಾಗೆಯೇ ಈ ರಾಜನ ಸಂಬಂಧವನ್ನು ಹೇಸಿ ತಾವಾಗಿಯೇ ಶರಣರು 'ಹುಸಿಯ ಬಿಟ್ಟು ಕಳೆದು ಲಿಂಗೈಕ್ಯರಾದರು' ಎಂದು ಇದೇ ವಚನದಲ್ಲಿದೆ. ಇದು ಬಸವಣ್ಣ ಸೇರಿದಂತೆ ಕೆಲವರ ಅಂತ್ಯದ ಕುರಿತು ಹೇಳುತ್ತದೆ.

ಬಿಜ್ಜಳನ ಕೊಲೆಯ ನಂತರ ಸೋವಿದೇವ ವಚನಕಾರರನ್ನು ಪೂರ್ತಿಯಾಗಿ ಮುಗಿಸಿಬಿಡಲು ತೀರ್ಮಾನಿಸಿದ್ದಾನೆ. ಈ ಕಾರಣದಿಂದಲೇ ಚನ್ನಬಸವಣ್ಣ ಮೊದಲಾದವರು ಉಳವಿಯವರೆಗೆ ಓಡಿ ಹೋಗಬೇಕಾಯಿತು. ಈ ಎಲ್ಲ ಘಟನೆಯ ಸಾರಾಂಶವನ್ನು ತುರಗಾಹಿ ರಾಮಣ್ಣ ತನ್ನ ವಚನದಲ್ಲಿ –

ಬಂದಿತ್ತು ದಿನ । ಬಸವಣ್ಣ ಕಲ್ಲಿಗೆ, ಚನ್ನಬಸವಣ್ಣ ಎಳುವೆಯಲ್ಲಿಗೆ
ಪ್ರಭು ಅಕ್ಕ ಕದಳಿ ದ್ವಾರಕ್ಕೆ ಮಿಕ್ಕುಳಿದ ಪ್ರಮಥರೆಲ್ಲರೂ
ತಮ್ಮ ಲಕ್ಷಕ್ಕೆ...... ।[೧೬೩]

ಯಾರ್‍ಯಾರು ಎಲ್ಲಿಗೆ ಹೋದರೆಂದು ಹೇಳುತ್ತ ಉಳಿದೆಲ್ಲಾ ವಚನಕಾರರು ತಮಗೆ ಇಷ್ಟ ಬಂದತ್ತ ಹೋದರೆಂದು ಹೇಳುತ್ತಾನೆ. ಹೀಗೆ ಹೋದುದರಿಂದಲೇ ವಚನ ಸಾಹಿತ್ಯ ಕಲ್ಯಾಣ ಕೇಂದ್ರವಾಗಿ ಇದ್ದದ್ದು ಇಡಿಯ ನಾಡಿನಲ್ಲಿ ಉತ್ತರದಿಂದ ದಕ್ಷಿಣದವರೆಗೆ ಪ್ರಸರಿಸಲು ಅನುಕೂಲವಾಯಿತೆನ್ನಬಹುದು. ಆದರೆ ಮತ್ತೆ ಕೂಡಿ ಹಾಕುವ ಕಾರ್ಯಕ್ಕೆ ನಾಲ್ಕು ಶತಮಾನ ಹಿಡಿಯಿತು. ಅದರ ಕೀರ್ತಿ ಫ. ಗು. ಹಳಕಟ್ಟಿಯಂತವರಿಗೆ ಸಲ್ಲುತ್ತದೆ.

ಹೀಗೆ ವೃತ್ತಿ ಜೀವಿಗಳ ಶೋಷಣೆಯ ನಿವಾರಣೆಯ ಮೂಲದಿಂದ ಹೊರಟ ಶರಣ ಚಳುವಳಿ ಧಾರ್ಮಿಕ ಹಾಗೂ ನೈತಿಕ ನೆಲೆಗಟ್ಟಿನಲ್ಲಿಯೇ ಕುಸಿದು ಹೋಯಿತು. ಯಾವುದೇ ರಾಜಕೀಯ ಶಕ್ತಿಯಾಗಿ ಹೊರ ಹೊಮ್ಮಲಿಲ್ಲ.

ಆದರೆ ವಚನಕಾರರು ಯಾವ ಸ್ಥಾವರ ದೇವಾಲಯಗಳನ್ನು ವಿರೋಧಿಸಿದರೋ ಅದು ಮುಂದುವರೆಯಲಿಲ್ಲ. ಕಾರಣ ದಕ್ಷಿಣದಲ್ಲಿ ವೈಷ್ಣವ ಪ್ರಬಲವಾಗಿ ದೇವಾಲಯಗಳ ನಿರ್ಮಾಣದಲ್ಲಿ ತೊಡಗಿತ್ತು ಹಾಗೂ ಶೈವರು ಕೂಡಾ ಬಸವ ಪರಂಪರೆಯ ಜೊತೆ ಸೇರಿಕೊಂಡು ಮುಂದುವರೆದರು.

ಮುಂದೆ ಶೈವ ಪರಂಪರೆಯ ಪ್ರಭಾವ ವಿಜಯನಗರ ಅರಸರ ಕಾಲಕ್ಕೆ ಬ್ರಾಹ್ಮಣರೊಂದಿಗೆ ಸೌಹಾರ್ದ ಸ್ಥಾಪಿಸಿಕೊಂಡು ಮುಂದುವರೆಯಿತು. ಯಾಕೆಂದರೆ ಮುಸ್ಲಿಂರ ಮತಾಂತರ ದಾಳಿಗೆ ಸಿಲುಕದೆ ಸಾಮರಸ್ಯದಿಂದ ಬದುಕು ಸಾಗಿಸುವುದು ಅನಿವಾರ್ಯವಾಗಿತ್ತು. ಆದರೂ ರಾಜಕೀಯ ಸ್ಥಿತ್ಯಂತರ ಕಾಲದಲ್ಲಿ ವಿಶಿಷ್ಟ ಅನುಭವ ಪಡೆಯುತ್ತ ಸಾಗಿದ ಕಾಯಕ ಜೀವಿಗಳ ಚಳುವಳಿ ಕನ್ನಡ ನಾಡಿನಲ್ಲಿ ಅಚ್ಚಳಿಯದ ಪ್ರಭಾವಕ್ಕೆ ಕಾರಣವಾಗಿದೆ. ಅಷ್ಟೇ ಅಲ್ಲ ಸಾಹಿತ್ಯ ಕ್ಷೇತ್ರಕ್ಕೂ ಅಪೂರ್ವ ಸೇವೆ ಸಲ್ಲಿಸಿದೆ. ಇದರ ಪರಿಣಾಮವಾಗಿ ಇಂದಿಗೂ ಕೂಡಾ ಅನೇಕ ದೇವಾಲಯದ ನಂಬಿಕೆ ಆಚರಣೆಗಳು ಹಾಗೂ ಅಲ್ಲಿ ಭಾಗವಹಿಸುವಿಕೆ ಜನರ ಸಾಮರಸ್ಯದ ಜೀವನ ಕಲ್ಯಾಣದ ಶರಣ ಜೀವಿಗಳ ಕಲ್ಯಾಣದಲ್ಲಿ ನಾಶ ಹೊಂದಿದ್ದಾರೆ. ವಚನ ಸಾಹಿತ್ಯದ ಕುರುಹುಗಳು ನಾಡಿನ ಎಲ್ಲರಿಗೂ ಪರಿಚಯವಾಗುತ್ತಿರಲಿಲ್ಲವೇನೋ ಹಾಗೆಯೇ ಈ ಜನ ನಾಡಿನ ತುಂಬ ಪಸರಿಸುವುದರಿಂದ ಅವರ ಜ್ಞಾನ, ಹೋರಾಟ ಮನೋಭಾವವೇ ಹೊಸ ವಿಚಾರಗಳು ಇಂದಿಗೂ ಪ್ರಸ್ತುತವಾಗುವಂತೆ ಮಾಡಿವೆ ಎಂದೇ ಹೇಳಬಹುದು.

ಪುರೋಹಿತಶಾಹಿಗೆ ವಿರುದ್ಧವಾಗಿ ಶರಣರೊಡ್ಡಿದ ಸವಾಲೆಂದರೆ ಇಷ್ಟಲಿಂಗ ಪೂಜೆ, ಅಪ್ರಮಾಣ ಅಗಮ್ಯ ಅಗೋಚರ, ಅಗೋಚರ ಅಪ್ರತಿಮ ಶಕ್ತಿಯ ಕುರುಹಾಯಿತಲ್ಲದೆ, ಆಧ್ಯಾತ್ಮ ಸಾಧನೆ ಸಿದ್ಧಿಗಳಿಗೂ ಅದು ಅವಕಾಶ ಮಾಡಿಕೊಟ್ಟಿತು. ಧಾರ್ಮಿಕ ಸಾಮಾಜಿಕ ಕ್ರಾಂತಿಯ ಸಂಕೇತವಾಯಿತು. ಇಷ್ಟಲಿಂಗ ಪ್ರಾಪ್ತಿಯಾದ ನಂತರ ಆತ ಪುರೋಹಿತಷಾಹಿಯನ್ನು ಆಶ್ರಯಿಸಬೇಕಾಗಿಲ್ಲ ದೇವಾಲಯಕ್ಕೆ ಹೋಗಬೇಕಾಗಿಲ್ಲ, ದೇವಾಲಯ ಸಂಸ್ಕೃತಿಯೊಡನೆ ಬೆಸೆದುಕೊಂಡಿರುವ ಮೌಢ್ಯಾಚಾರಣೆಗಳನ್ನು ಪುರಸ್ಕರಿಬೇಕಾಗಿಲ್ಲ. ಒಂದಲ್ಲ ಒಂದು ರೂಪದಲ್ಲಿ ದೇವಾಲಯದ ವ್ಯವಸ್ಥೆಯಿಲ್ಲದ ಮತವಿಲ್ಲ ಆದರೆ ಅಂತಹ ವ್ಯವಸ್ಥೆಗಳನ್ನು ಅಲ್ಲಗಳೆದ್ದು ವೀರಶೈವ ಸಂಸ್ಕೃತಿಯ ವೈಶಿಷ್ಟ್ಯವಾಗಿದೆ.

ಸಿದ್ಧರಾಮೇಶ್ವರರು ಕೆರೆ ದೇವಾಲಯಗಳನ್ನು ಕಟ್ಟಿಸುತ್ತಿದಾಗ ಪ್ರಭುದೇವ ಅವನನ್ನು ವಿಡಂಬಿಸಿದ್ದಾರೆ. ಮರ್ತ್ಯಲೋಕದ ಮಾನವರು ದೇಗುಲದೊಳಗೊಂದು ದೇವರ ಕೂಡಿದರೆ ಆನು ಬೆರಗಾದೆನಯ್ಯಾ' ಒಡಲುದಿಡಿದು ಪಾಷಾಣಕ್ಕೆ ಹಂಗಿಗರಾದಿರಲ್ಲ' ಲಿಂಗಸಂಗಿಗಳೆಲ್ಲ ಮಹಾಘನವನರಿಯದೆ ಹೋದರೋ' ಎಂದು ಪ್ರಭುದೇವರು ಅಜ್ಞಾನಿಗಳಾದ ಲಿಂಗಧಾರಿಗಳನ್ನು ಹಂಗಿಸಿದ್ದಾರೆ. ಇಂದಿನ ಎಲ್ಲ ಸಾಮಾಜಿಕ ಧಾರ್ಮಿಕ ಜಾಡ್ಯಗಳಗೆ ಮಠ ಮಸೀದಿ ಚರ್ಚು ದೇವಾಲಯಾದಿ ವ್ಯವಸ್ಥೆಗಳೇ ಮೂಲಕಾರಣ, ಅನೈಕ್ಯತೆ, ವಿಷಮತೆ, ಶೋಷಣೆಯ ಕೇಂದ್ರಗಳಾಗಿವೆ. ಇಪ್ಪತ್ತನೆಯ ಶತಮಾನದಲ್ಲಿಯೂ ಇದರ ಭೀಕರತೆ ಗಮನಿಸಬಹುದಾಗಿದೆ.

ದೇವಾಲಯ ವ್ಯವಸ್ಥೆಯನ್ನು ನಿರಾಕರಿಸಿ ವ್ಯಕ್ತಿ ಸ್ವಾತಂತ್ರ್ಯಕ್ಕೆ ಪೂರ್ಣ ಅವಕಾಶ ನೀಡಿದಕ್ಕೆ ಸಾಕ್ಷಿಯಾಗಿ ಇಷ್ಟಲಿಂಗ ಪೂಜೆ ಹಾಗೂ ಅನುಭವ ಮಂಟಪದ ಕಲ್ಪನೆಯೇ ಸಾಕ್ಷಿಯಾಗಿವೆ.

ಕಾಯ ನಿಮ್ಮ ದಾನ, ಜೀವ ನಿಮ್ಮ ದಾನ

ಕಾಯ ಜೀವವುಳ್ಳಲ್ಲಿಯೇ ನಿಮ್ಮ ಪೂಜಿಸದ

ನಾಯಿಗಳೇನೆಂಬೆ ಹೇಳಾ ರಾಮನಾಥ[೧೬೪]

ಎಂದು ದೇವರ ದಾಸಿಮಯ್ಯ ಹೇಳುವಂತೆ ಕಾಯವೂ ಪ್ರಸಾದ ರೂಪದಲ್ಲಿ ಶಿವನಿಂದ ಬಂದದ್ದೇ ಹೊರತು ಅನ್ಯರಿಂದಲ್ಲ ಅಂದರೆ ಶಿವನಿಂದ ಬಂದ ದೇಹ ಶಿವನಿಗೆ ಅರ್ಪಿತವಾಗಬೇಕು ಎಂಬುದು ಶರಣರ ಅಭಿಮತ.

ಶರಣರು ರೂಪಿಸಿರುವ ಕಾಯಕ ಯೋಗ ಅಭೂತಪೂರ್ವವಾದುದು ಇದರಲ್ಲಿ ಭಕ್ತಿಯೋಗದ ತಲ್ಲೀನತೆಯಿದೆ. ಜ್ಞಾನಯೋಗದ ವೈಭವವಿದೆ, ರಾಜಯೋಗದ ಸಂಕಲ್ಪವಿದೆ. ಮಾನವ ಆತ್ಮವಿಕಾಸ, ಸಮಾಜದ ಅಭ್ಯುದಯ, ನಾಡಿನ ಭದ್ರತೆ, ಲೋಕ ಕಲ್ಯಾಣ ಇವು ಕಾಯಕ-ದಾಸೋಹಗಳಿಂದಲ್ಲದೇ ಬೇರಾವ ಸಾಧನಗಳಿಂದಲೂ ಸಾಧ್ಯವಿಲ್ಲ. ಸಾಮಾನ್ಯ ಮಾನವ ದೇವ ಮಾನವನಾಗುವ ಸಾಧ್ಯತೆ ಕಾಯಕಯೋಗದಲ್ಲಿದೆ.

ಮನುಷ್ಯನ ಬದುಕಿಗೆ ಬೇಕಾದ ವಸ್ತುಗಳೆಲ್ಲ ಕ್ರಿಯೆಯ ಮೂಲಕವಾಗಿಯೇ ಒದಗಬೇಕು ಕ್ರಿಯೆ ತನ್ನಷ್ಟಕ್ಕೇ ತಾನೆ ಪರ್ಯಾವಸಾನವಾಗುವುದಿಲ್ಲ. ಕ್ರಿಯೆಯಿಂದ ಜ್ಞಾನ. ಜ್ಞಾನದಿಂದ ಕ್ರಿಯೆ ಇದು ಹಾಗೆಯೇ ಮುಂದುವರೆಯುತ್ತದೆ. ಕ್ರಿಯೆ ಮಾಡುವವರಿಗೆ ಅಹಂಕಾರವಿರಬಾರದು. ಅನ್ಯಭಾವಕ್ಕೆಡೆಯಿರಬಾರದು ಅದಕ್ಕಂಟಿಯೂ ಅಂಟದಂತಿರಬೇಕು.

ಮಾಡುವಂತಿರಬೇಕು, ಮಾಡದಂತಿರಬೇಕು

ಮಾಡುವ ಮಾಟದೊಳಗೆ ತಾನಿಲ್ಲದಂತಿರಬೇಕು

ಕೂಡಲ ಸಂಗಮದೇವರ ನೆನೆವುತ್ತಾ ನೆನೆವುತ್ತ ನೆನೆಯದಂತಿರಬೇಕು.

ಕರ್ಮ ಮಾಡಬೇಕು ಕರ್ಮದ ಫಲಕ್ಕೆ ಆಸೆ ಪಡಬಾರದು ಎಂಬ ಗೀತಾಸಂದೇಶಕ್ಕಿಂತ ಹೆಚ್ಚು ಅರ್ಥಪೂರ್ಣವಾಗಿದೆ. ಚನ್ನ ಬಸವಣ್ಣನವರು ತಮ್ಮ ವಚನದಲ್ಲಿ ಕ್ರಿಯೆಯಿಲ್ಲದ ಜ್ಞಾನಕ್ಕೆ ಆಶ್ರಯವಿಲ್ಲ, ಜ್ಞಾನವಿಲ್ಲದ ಕ್ರಿಯೆಗೆ ಆಶ್ರಯವಿಲ್ಲ ಎಂದು ಹೇಳಿದ್ದಾರೆ.

ಕಾಯಕವೆನ್ನುವುದು ಬರಿ ತತ್ವವಲ್ಲ ಅದೊಂದು ಕಠಿಣ ಶಿಸ್ತು, ಕಠೋರ ವೃತ: ಅದು ಬದುಕಿನ ಉಸಿರು. ನೆಲೆ ಇಹಪರ ಸಾಧನ ಶರಣರು ಈ ಸಿದ್ಧಾಂತವನ್ನು ಚರ್ಚೆ ಪ್ರಯೋಗಗಳ ಮೂಲಕ ಒರೆದು ಅರೆದು ತಿದ್ದಿ ತೀಡಿ, ತೂರಿ ಕೇರಿ, ತೂಗಿತೀವಿ ಸಾಗಗೊಳಿಸಿದ್ದಾರೆ. ಕಾಯಕವೇ ಕೈಲಾಸವೆನ್ನುವಷ್ಟರ ಮಟ್ಟಿಗೆ ಅದನ್ನು ಪರಿಪೂರ್ಣಗೊಳಿಸಿದ್ದಾರೆ. ಕಾಯಕ ತಪ್ಪಿದರೆ ಸ್ಮರಿಸಬಾರದೆಂದು ಕಾಳವ್ವೆ, ಕಾಯಕವ ಬಿಟ್ಟು ಹೊನ್ನ ಬೇಡಿದೆನೆಂಬುದು ಕಷ್ಟವಲ್ಲವೆ ಎಂದು ಆಯ್ದಕ್ಕಿ ಮಾರಯ್ಯ ಕಾಯಕವಳಿದ ಠಾವಿನಲ್ಲಿ ಜೀವನದ ಎಡೆಯುಂಟೆ ಅವನ ಮಡದಿ ಲಕ್ಕಮ್ಮ ಮೊದಲಾದ ಶರಣ ಶರಣೆಯರು ಕಾಯಕದ ಮಹತ್ವವನ್ನು ಕೊಂಡಾಡುತ್ತಾರೆ. ಮನಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ ಚಿತ್ತಶುದ್ಧದಲ್ಲಿ ಕಾಯಕವ ಮಾಡುವಲ್ಲಿ ಸದ ಭಕ್ತಂಗೆ ಎತ್ತ ನೋಡಿದಡತ್ತ ಲಕ್ಷ್ಮೀ ತಾನಾಗಿಪುಳು ಎಂಬ ಆಯ್ದಕ್ಕಿ ಲಕ್ಕಮ್ಮನ ಮಾತಿನಲ್ಲಿ ಅಪ್ಪಟ ಸತ್ಯ ಎದ್ದು ಕಾಣುತ್ತದೆ. ಹಾಗಾದರೆ ಕಾಯಕವ ಮಾಡಿಕೊಂಡು ಹಣವಡ್ಡ ತಾ ಎಂಬಲ್ಲಿ ಸತ್ಯ ಕಾಯಕವುಂಟೆ? ಎಂದು ಮಾರಯ್ಯ ಲಾಭಕೋರರನ್ನು ಹಂಗಿಸುತ್ತಾನೆ. ಹತ್ತು ರೂಪಾಯಿ ಬೆಲೆ ಬಾಳುವ ಬಟ್ಟೆಯನ್ನು ಇಪ್ಪತ್ತು ರೂಪಾಯಿಗೆ ಮಾರುವ ನೇಯ್ಗೆಯವನ ಕಾಯಕ ಸತ್ಯ ಶುದ್ಧ ಕಾಯಕವಲ್ಲವೆಂಬುದು ಮಾರಯ್ಯನಂತಹ ಶರಣರ ನಿಲುವು. ಕಾಯಕ ವ್ಯಕ್ತಿ ವ್ಯಕ್ತಿಗಳ ವ್ಯಷ್ಟಿ ಸಮಷ್ಟಿಗಳ ಸಂಬಂಧವನ್ನು ಹೊಂದಾಣಿಸುತ್ತದೆ ಸತ್ಯ ಧರ್ಮಗಳನ್ನೊಳಗೊಂಡ ದುಡಿಮೆ ಪೂಜೆಗಳ ಸಮನ್ವಯವೇ ಕಾಯಕ. ಒಳ್ಳೆಯ ಜ್ಞಾನ, ಒಳ್ಳೆಯ ಕ್ರಿಯೆ, ಒಳ್ಳೆಯ ಭಕ್ತಿ, ಒಳ್ಳೆಯ ಸಂಕಲ್ಪಗಳ ಸಂಗಮವೇ ಕಾಯಕಯೋಗ. ಅದೇ ಶಿವಯೋಗ ಎಂಬುದು ಅವರ ನಂಬಿಕೆಯಾಗಿತ್ತು.

ಜಗತ್ತಿನ ಸಕಲ ಧರ್ಮಗಳೂ ಕರ್ಮ ಸಿದ್ಧಾಂತವನ್ನು ಒಂದಲ್ಲ ಒಂದು ರೀತಿಯಲ್ಲಿ ಒಪ್ಪಿಕೊಂಡಿವೆ. ಇಸ್ಲಾಂ ಧರ್ಮವೂ ಕೂಡಾ ಇದಕ್ಕೆ ಹೊರತಾಗಿಲ್ಲ ಕೆಲಸವಿಲ್ಲದವನು ತಿನ್ನಬಾರದೆಂದು, ಬೆವರಿನಿಂದ ನಿನ್ನ ರೊಟ್ಟಿ ಗಳಿಸಿಕೋ ಎಂದು ಬೈಬಲ್ ಹೇಳುತ್ತದೆ. ಗಳಿಸದೆ

ಉಣ್ಣುವವ ಕಳ್ಳನೆಂದು ರೂಸೋ ಹೇಳುತ್ತಾನೆ. 'ಕುರ್ವನ್ನೇವೇಹ ಕರ್ಮಾಣಿ ಜಿಜೀವಿಶೇಛ್ಛತಂ ಸಮಾಃ' ಎಂದು ಹಿಂದೂಧರ್ಮ ಪಾಠ ಕಲಿಸುತ್ತದೆ. ಕಾಯಕವೇ ಪೂಜೆ ಕಾಯಕವೇ ಜೀವನದ ಸರ್ವಸ್ವ ಭಗವಂತ ಕರುಣಿಸಿರುವ ಶಕ್ತಿ ಸಾಮರ್ಥ್ಯಗಳನ್ನು ನ್ಯಾಯವಾಗಿ ಬಳಸಿಕೊಳ್ಳುವ ಸಾಧನವೇ ಕಾಯಕ.

ಹೀಗೆ ೧೨ನೆಯ ಶತಮಾನದ ಶರಣರು ಶರಣ ಧರ್ಮದ ಸಿದ್ಧಾಂತಗಳನ್ನು ಜನರಿಗೆ ತಿಳಿಯ ಬಯಸಿದರೂ ಯಾವುದೇ ನಿಶ್ಚಿತ ಸಿದ್ಧಾಂತವಿಲ್ಲದೆ ಕೇವಲ ಪೂಜೆ ಪುನಸ್ಕಾರ, ನಂಬಿಕೆ, ಆಚರಣೆ ಹಿನ್ನಲೆಯಲ್ಲಿ ಶೋಷಿತರಾಗುವ ಜನತೆ ಶರಣ ಧರ್ಮದ ಕಡೆಗೆ ವಾಲಿದರು.

ಆರ್ಥಿಕ ಮತ್ತು ಸಾಮಾಜಿಕ

ಜಗತ್ತಿನ ಇಂದಿನ ಆರ್ಥಿಕ ಹಾಗೂ ಸಾಮಾಜಿಕ ವ್ಯಾಧಿಗಳಿಗೆ ಹೊಟ್ಟೆಬಾಕತನ ಹಾಗೂ ಸಂಪತ್ತಿನ ಸಂಗ್ರಹದ ರೋಗವೇ ಕಾರಣವಾಗಿದೆ ಎಂಬುದನ್ನು ೧೨ನೆಯ ಶತಮಾನದ ಶರಣರು ಅರಿತಿದ್ದರು. ಒಬ್ಬನ ಸಂಗ್ರಹದ ಫಲವಾಗಿ ನೂರಾರು ಹೊಟ್ಟೆಗಳು ಹಸಿದಿರುತ್ತವೆ ಎಂಬುದು ಜಗತ್ತಿನ ಎಲ್ಲ ಕಡೆಗಳಲ್ಲಿಯೂ ಕಾಣುವ ದುರಂತವಾಗಿದೆ. ಇಂದಿಂಗೆಂತು ನಾಳಿಂಗೆಂತು ಎಂದು ಬೆಂದ ಒಡಲು ಹೊರೆಯ ಹೋಯಿತೆನ್ನ ಸಂಸಾರ ಎಂಬ ಕಳಕಳಿ ಬಸವಣ್ಣನವರಾಗಿತ್ತು. ಸಂಪತ್ತಿನ ಸಂಗ್ರಹದಿಂದ ಸಂಗ್ರಹಕಾರರ ಆತ್ಮಾವನತಿ ನೈತಿಕ ಪತನ ಮಾತ್ರವಲ್ಲ ಆರ್ಥಿಕ ಅಸಮತೋಲನ, ವರ್ಗಕಲಹ, ಅಶಾಂತಿ, ದರೋಡೆ ಮೊದಲಾದ ಪಿಡುಗುಗಳು ಜೀವನವನ್ನು ಹಾಳು ಮಾಡುತ್ತವೆ ಎಂಬುದು ಅವರಿಗೆ ತಿಳಿದಿತ್ತು ಈ ಕಾರಣದಿಂದ ಅವರು ತ್ರಿವಿಧ ದಾಸೋಹಕ್ಕೆ ಒತ್ತು ಕೊಡುತ್ತಾರೆ 'ನೀ ಕೊಟ್ಟ ದ್ರವ್ಯದ ನಿಗಲ್ಲದೆ ಮತ್ತೊಂದ ಕ್ರಿಯೆ ಮಾಡೆನು ನಿಮ್ಮ ಸೊಮ್ಮಿಂಗೆ ಸಲಿಸುವೆನು' ಎನ್ನುತ್ತಾರೆ.

ದುಡಿಯದೆ ಬೆವರು ಸುರಿಸದೆ, ಭಾವ ಶುದ್ಧಿಯಿಂದಲ್ಲದೆ ಗಳಿಸುವ ಹಣ ಅಥವಾ ಆಸ್ತಿ ತುಡುಗೆಂದು ಶರಣರ ವಾಣಿ ನುಡಿಯುತ್ತದೆ. ಅತ್ತ ದಾನಕ್ಕೂ ಸಲ್ಲ ಪೂಜೆಗೂ ಸಲ್ಲ ಪಾಪಿಯ ಧನ ಪ್ರಾಯಶ್ಚಿತ್ತಕಲ್ಲದೆ ಸತ್ಪಾತ್ರಕ್ಕೆ ಸಲ್ಲದು ಎಂದು ಬಸವಣ್ಣವರು ಹೇಳುತ್ತಾರೆ. ಇಂದು ದೇವರ ಹುಂಡಿಗಳಲ್ಲಿ ಬೀಳುವ ಹೊನ್ನು ಹಣಗಳಾಗಲಿ ದೇವರ ಧರ್ಮದ ಹೆಸರಿನಲ್ಲಿ ನಡೆಯುವ ಅನೇಕ ಕಾರ್ಯಗಳಾಗಲಿ ದುಡಿಮೆಯಿಂದ ಬಂದುವೆಂದು ಹೇಳುವಂತಿಲ್ಲ ಅದೆಲ್ಲ ಕಪ್ಪು ಹಣ ಅಥವಾ ಪಾಪದ ಹಣ ಬೆವರಿನ ಮೂಲವಿಲ್ಲದ ಬಡ್ಡಿಯ ಹಣ ಸಹ ದೂಷ್ಯವೇ. ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದು ಲಿಂಗಕ್ಕರ್ಪಿತವಲ್ಲದೆ. ದುರಾಸೆಯಿಂದ ಬಂದುದು ಅನರ್ಪಿತ ಇದು

ಕಾರಣ ಸತ್ಯ ಶುದ್ಧ ಕಾಯಕದ ನಿತ್ಯ ದ್ರವ್ಯವಾದರೆ ಚಂದ್ರೋಶ್ವರ ಲಿಂಗಕ್ಕೆ ನೈವೇದ್ಯ ಸಂದಿತ್ತು ಕೇಳಯ್ಯ ಎಂಬ ನೂಲಿ ಚಂದಯ್ಯನ ಸಂದೇಶ. ಕುಳಿತಲ್ಲೆ ರಾಶಿ ರಾಶಿ ಹಣ ಸಂಪಾದಿಸುವ ಆಧುನಿಕ ಶ್ರೀಮಂತರ ಮನವನ್ನು ಮುಟ್ಟುವುದಾದರೆ ಲೋಕಕ್ಕೆ ಕಲ್ಯಾಣವಾದೀತು. ಕಾಯಕವೆಂದು ಕಾಯುವ ಬಳಲಿಸದೆ ತನು ಕರಗದೆ ಮನ ನೊಯದೆ ಬೇಡಿ ಕಾಡಿ ಮಾಡುವುದು ದಾಸೋಹವೇ ಎಂದು ಶಿವಲೆಂಕ ಮಂಚಣ್ಣ ಪ್ರಶ್ನೆ ಮಾಡುತ್ತಾನೆ.

೧೨ನೆಯ ಶತಮಾನದ ಶರಣರು ಪ್ರತಿಪಾದಿಸಿದ ಆರ್ಥಿಕ ಸೂತ್ರಗಳು ೧೯-೨೦ನೆಯ ಶತಮಾನಗಳ ಸಮಾಜವಾದಿ ಸಿದ್ಧಾಂತಗಳನ್ನು ನಾಚಿಸುವಂತಿವೆ ಎಂಥ ಕ್ರಾಂತಿಕಾರಿ ಅರ್ಥಶಾಸ್ತ್ರಜ್ಞನಿಗೂ ಸವಾಲಾಗುವಂತಿವೆ ಅಷ್ಟೇ ಅಲ್ಲ ಅವು ಅಂದು ಇಂದು ಮತ್ತು ಮುಂದೆಯೂ ಪ್ರಸ್ತುತವಾಗುವಂತಿವೆ. ಇಂದಿನ ತಿಳುವಳಿಕೆಯಲ್ಲಿ ಯಾವ ಅರ್ಥಶಾಸ್ತ್ರೀಯ ಕಲ್ಪನೆಯಾಗಲಿ ಪ್ರಯೋಗವಾಗಲಿ ಶರಣರ ಆರ್ಥಿಕ ಸೂತ್ರವನ್ನು ಮೀರಿ ಹೋಗಲು ಸಾಧ್ಯವಿಲ್ಲ. ಶರಣರ ಕಾಯಕ ದಾಸೋಹ ಸಿದ್ಧಾಂತಗಳನ್ನು ಅವರ ಅನೇಕ ಸೂತ್ರಗಳು ಅಡಗಿವೆ.

ಕಾಯಕವೆಂಬ ದಾರಿಯಿಂದ ರಾಷ್ಟ್ರದಲ್ಲಿ ಆರ್ತಿಕ ಸಮಾನತೆಯನ್ನು ಸಾಧಿಸಬಹುದೇ? ವರ್ಗಬೇಧವನ್ನು ಆಮೂಲಾಗ್ರವಾಗಿ ನಾಶಪಡಿಸಬಹುದೇ? ಕಟ್ಟಿಗೆಯನ್ನು ಕಡಿದು ಮಾರುವುದು, ಬಿದ್ದ ಅಕ್ಕಿಯನ್ನು ಆಯ್ದು ಜೀವಿಸುವುದು. ಇದು ರಾಷ್ಟ್ರದ ಆರ್ಥಿಕ ಸಮಾನತೆಗೆ ಸಹಾಯಕನಾಗಬಹುದೇ? ಎಂಬ ಸಂಶಯವನ್ನು ವ್ಯಕ್ತಪಡಿಸುವವರು ಇದ್ದಾರೆ ಕಾಯಕ ಇದು ಸ್ವಚ್ಛ ಜೀವನ ಉಚ್ಛ ವಿಚಾರದ ನೆಲೆ. ಈ ಸಾಮಾನ್ಯತೆಯ ಅಸಾಮಾನ್ಯತೆಯ ದಾರಿ ಮುಖ್ಯವಾಗಿ ಬಸವಣ್ಣನವರು ಒತ್ತು ಕೊಟ್ಟಿದ್ದು ಸಾಮೂಹಿಕ ಬೇಸಾಯದ 'ಗಣ' (ಕುಟುಂಬ) ಸಮಾಜದ ಮೇಲೆ ಸರಕಾರಿಯ ಪಡಭೂಮಿಗಳನ್ನಳೆದು ಗುತ್ತಿಗೆಯ ಆಧಾರದ ಮೇಲೆ ಸಮುದಾಯಕ ಬೇಸಾಯ ಸಂಘಗಳನ್ನು ಸ್ಥಾಪಿಸಿ ಅವುಗಳಿಗೆ ಸಾಗುವಳಿಗಾಗಿ ಕೊಟ್ಟಿದ್ದು ಇದರಿಂದ ರಾಜ್ಯ ಬೊಕ್ಕಸಕ್ಕೆ ಗುತ್ತಿಗೆಯ ಹಣ ಸಂದಾಯವಾಗುತ್ತದೆ. ಹಲವು ಕುಟುಂಬಗಳು ಒತ್ತಟ್ಟಿಗೆ ಸೇರಿ ದುಡಿದು ಬದುಕುತ್ತವೆ. ಇಲ್ಲಿ ದುಡಿಮೆಯ ವಸ್ತುಗಳು, ಅಲ್ಲಿಯ ದನಕರುಗಳು ಎಲ್ಲರ ಸ್ವತ್ತು ಇಲ್ಲಿ ಕೂಡಿ ದುಡಿಯುತ್ತಾರೆ ಕೂಡಿ ಉಣ್ಣುತ್ತಾರೆ ಉಳಿದ ಲಾಭಾಂಶವನ್ನು ಎಲ್ಲರೂ ಸಮನಾಗಿ ಹಂಚಿಕೊಳ್ಳುತ್ತಾರೆ. 'ನಾನು ಒಕ್ಕಲು, ನೀನು ಒಡೆಯ' ಎಂಬ ಒಕ್ಕಲಿಗ ಮುದ್ದಣ್ಣನ ವಚನ ಇದಕ್ಕೆ ಪುಷ್ಠಿಕೊಡುತ್ತದೆ. ಈ ಸಮಾನತೆಯ ತತ್ವದ ಮೇಲೆ ಸ್ಥಾಪಿಸಿದ ಸಾಮೂದಾಯಕ ಬೇಸಾಯ ಸಂಘಗಳು ರಾಷ್ಟ್ರದಲ್ಲಿ ಸಮಾನತೆಯನ್ನು ತರುವುದಲ್ಲದೆ ದೇಶವನ್ನು ಸಮೃದ್ಧಗೊಳಿಸುವವು.

ಬಸವ ಪ್ರಜ್ಞೆಯಲ್ಲಿ ಸಂಪತ್ತನ್ನು ಕಸಿದುಕೊಳ್ಳುವುದಿಲ್ಲ ಸಂಪತ್ತನ್ನು ಸ್ವ ಸಾಮರ್ಥ್ಯದಿಂದ ಸಂಗ್ರಹಿಸುವುದಿದೆ ಅಂತೆಯೇ ಅವರು ಅಪಾರವಾದ ಬಾಂಡಲವನ್ನು ತೊಡಗಿಸುವ ಬೃಹತ್ ಯೋಜನೆಗಳ ಕಡೆಗೆ ಲಕ್ಷ್ಯ ಕೊಡದೆ ಚಿಕ್ಕ ಚಿಕ್ಕ ಗುಡಿ ಕೈಗಾರಿಕೆಗಳು, ಲಭ್ಯವಿರುವ ಸಂಪನ್ನ ಮೂಲಗಳ ಸಹಾಯದಿಂದಾಗುವ ಉದ್ಯೋಗಗಳು, ಹಲವು ಕುಟುಂಬಗಳು ಒತ್ತಟ್ಟಿಗೆ ಸೇರಿ ಮಾಡುವ ಬೇಸಾಯಗಳು, ಕೆರೆ. ಬಾವಿ, ಹರಿಹಳ್ಳಕ್ಕೆ ಕಟ್ಟಿದ ಕಟ್ಟೆಗಳಿಂದ ನೀರಿನ ಸೌಲಭ್ಯ ಪಡೆಯುವುದು ಮುಂತಾದ ಕಾರ್ಯಗಳಿಗೆ ಪ್ರೋತ್ಸಾಹಕೊಟ್ಟರು. ಒಟ್ಟಿನಲ್ಲಿ ಹೇಳುವುದಾದರೆ ಇಂದಿನ ಗಾಂಧೀ ಅರ್ಥಶಾಸ್ತ್ರ ಅಂದಿನ ಬಸವ ಅರ್ಥಶಾಸ್ತ್ರಕ್ಕೆ ಸಮನಾಗಿ ನಿಲ್ಲುತ್ತದೆ. ಬದುಕುವುದಕ್ಕೆ ಬೇಕಾಗುವ ಮೂಲ ಅವಶ್ಯಕತೆಗಳ ನಿರ್ಮಾಣದ ಸುಗಮ ದಾರಿಯಿದು.

ಹಾಗದ ಕಾಯಕವ ಮಾಡಿ ಹಣವಡ್ಡವ ತಾ ಎಂಬಲ್ಲಿ

ಸತ್ಯದ ಕಾಯಕವುಂಟೇ? (ಆಯ್ದಕ್ಕಿ ಮಾರಯ್ಯ)

ಹುಸಿಯ ವೇಷವ ತೊಟ್ಟು ಅಸುವ ಹೊರೆವವನ ಘಟ

ಪಿಸಿತದ ತತ್ತಿಯಂತೆ (ಮಧುವಯ್ಯ)

ಚಿತ್ತಶುದ್ಧದಲ್ಲಿ ಕಾಯಕ ಮಾಡುವಲ್ಲಿ ಸದ್ಭಕ್ತರಿಗೆ

ಎತ್ತ ನೋಡಿದತ್ತ ಲಕ್ಷ್ಮೀ ತಾನಾಗಿಪ್ಪಳು (ಆಯ್ದಕ್ಕಿ ಲಕ್ಕಮ್ಮ)

ಬಸವ ಧರ್ಮದಲ್ಲಿ ಸಮಾನತೆಯಿದೆ. ದುಡಿಮೆ ಪ್ರತಿಯೊಬ್ಬರಿಗೆ ದೊರೆಯಬೇಕು. ಪ್ರತಿಯೊಬ್ಬರು ದುಡಿದು ಉಣ್ಣಬೇಕು. ಈ ಅವಕಾಶ ಪ್ರತಿಯೊಬ್ಬರಿಗೂ ಲಭಿಸಬೇಕು ಎನ್ನುವ ಛಲವಿದೆ " ಅಸಿಯಾಗಲಿ ಕೃಷಿಯಾಗಲಿ, ವಾಚಕ ವಾಣಿಜ್ಯ ಮನೆಯಾಗಲಿ ಮಾಡುವಲ್ಲಿ ಹುಸಿಯಿಲ್ಲದಿರಬೇಕು" ಎಂಬ ನೀತಿಯ ಕಟ್ಟಳೆಯಿದೆ. " ಆವ ಕಾಯಕವಾದರೂ ಸ್ವ ಕಾಯಕ ಮಾಡಿರಿ" ಏಕೆಂದರೆ ಇಲ್ಲಿ ಮಾಲಕನೇ ದುಡಿಮೆಯವನಾದುದರಿಂದ ದುಡಿಮೆಯ ಸಂಪೂರ್ಣ ಪ್ರತಿಫಲಕ್ಕೆ ಅವನೇ ಬಾದ್ಯಸ್ಥನಾಗಿರುತ್ತಾನೆ. ಇಲ್ಲಿ ಶೋಷಣೆಯ ಯಾವ ಪ್ರಕ್ರಿಯೆಗೆ ಸ್ಥಾನವಿಲ್ಲ " ಯಾವ ಕಾಯಕ ಮಾಡಿದರೂ ಒಂದೇ ಕಾಯಕವಯ್ಯ" ಎನ್ನುವದರಿಂದ ಕಾಯಕ ಸಮಾನತ್ವವು ವ್ಯಕ್ತಿ ಸಮಾನತ್ವಕ್ಕೆ ಆಧಾರವಾಗುತ್ತದೆ. ಈ ರೀತಿ ಸಮೃದ್ಧಿ ಸಮಾನತ್ವಗಳು ಬಸವಣ್ಣನವರ ಕಾಯಕ ತತ್ವದಲ್ಲಿ ಅಡಗಿವೆ. ಕಾಯಕ ತತ್ವ ಆರ್ಥಿಕ ಸಿದ್ಧಾಂತದ ತಳಹದಿಯಾಗಿದೆ.

ಭಾರತದಲ್ಲಿ ಧರ್ಮ-ಸಮಾಜಗಳನ್ನು ಪ್ರತ್ಯೇಕವಾಗಿಟ್ಟು ಸಿದ್ಧಾಂತಗಳನ್ನು ರೂಪಿಸುವ ಉಪಕ್ರಮ ನಡೆದು ಬರುತ್ತಿರುವಾಗ " ಧರ್ಮವಿರುವುದು ವ್ಯಕ್ತಿಗಳನ್ನೊಳಗೊಂಡ ಸಮಾಜದ ಆರೋಗ್ಯಕ್ಕಾಗಿ ಎಂಬ ವಿಚಾರ ಕರ್ನಾಟಕದಲ್ಲಿ ತಲೆಯತ್ತಿ ಸಮಾಜೋ-ಧಾರ್ಮಿಕ' ಎಂಬ ಸಂಯುಕ್ತ ಚಿಂತನೆ ೧೨ನೆಯ ಶತಮಾನದಲ್ಲಿ ಚಾಲನೆ ಪಡೆಯಿತು (ಲಿಂಗಾಯತ, ಅಸ್ಪೃಶ್ಯರು, ಕಾಂಬಳೆ) ಬಸವಣ್ಣ ಇದರ ಪ್ರವರ್ತಕ ಅತನದು ಅಬೇಧ ಸಂಸ್ಕೃತಿ, ಸಮುಚ್ಛಯ ಗುಣ 'ಇವನಮ್ಮವ ಇನ ನಮ್ಮವ' ಎಣದು ನಡೆಯುವ ನಡೆ ಅಂತೆಯೇ ಇವನ ಗರಡಿಯಲ್ಲಿ ಅಸ್ಪೃಶ್ಯರು ತಮ್ಮ ಅಪಮಾನದ ಅವನತಿಯ ಜೀವನವನ್ನು ಕಳೆಚಿ ಉಚಗಚದ ಹೊಸ ಮಾನವರಾಗಿ ತಲೆ ಎತ್ತಿ ನಿಂತರು. ಶಿವನಾಗಮಯ್ಯ, ಹರಳಯ್ಯ, ಧೂಳಯ್ಯ, ಡೋಹರ ಕಕ್ಕಯ್ಯ, ಮಾದಾರ ಚನ್ನಯ್ಯ, ಸೂಳಿ ಸಂಕಮ್ಮ, ನೂಲಿ ಚಂದಯ್ಯ, ಎರಿಲಿಂಗ ಪೆದ್ದಿ, ಕಾಳವ್ವೆ, ಅಕ್ಕವ್ವೆ ಇತ್ಯಾದಿ ಕೆಳಸ್ಥರದ ಜನ ಮಹಾನ ಶಿವಶರಣರಾಗಿ ಮೆರೆದರು ಬಸವಣ್ಣ ಇವರಿಗೆ ನಡೆ ಕಲಿಸಿದ, ಅಕ್ಷರ ಕಲಿಸಿದ, ಧ್ವನಿಕೊಟ್ಟ, ಧೈರ್ಯ ಕೊಟ್ಟ, ಆತ್ಮ ಸ್ಥೈರ್ಯಕೊಟ್ಟ.

ಬುದ್ಧ ಯುಗದಿಂದ ಮಹಾತ್ಮ ಗಾಂಧೀ ಯುಗದವರೆಗೆ ಅನೇಕರು ಅಸ್ಪೃಶ್ಯತೆಯ ನಿವಾರಣೆಗಾಗಿ ದುಡಿದಿದ್ದಾರೆ. ಆದರೆ ಬಸವಣ್ಣನಂತವರೂ ಯಾರೂ ಇಲ್ಲ. ಏಕೆಂದರೆ ಅಸ್ಪೃಶ್ಯತೆಯ ನಿವಾರಣೆಗಾಗಿ ದುಡಿದವರು ತಮ್ಮ ತನವನ್ನು ಕಳೆದುಕೊಳ್ಳದೆ ತಾವು ತಾವಾಗಿಯೇ ನಿಂತು ಕಾರ್ಯಗೈದವರು ಆದರೆ ಬಸವಣ್ಣ ಅಸ್ಪೃಶ್ಯರಲ್ಲಿ ಬೆರೆತುಕೊಂಡು ಅವರೇ ತಾನಾಗಿ ಕಾರ್ಯಗೈದವರು. ತಾನು ಚನ್ನಯ್ಯನ ಮಗನೆಂದ, ನಿಂಬೆವ್ವ ತನ್ನ ತಾಯಿ ಎಂದ ಅವರ ಸಂಪರ್ಕ ಸಾಧಿಸಿದ ಕೂಡಿ ಉಂಡ, ಸವರ್ಣಿಯರಿಗೂ ಅವರಿಗೂ ಸಂಬಂಧ ಬೆಳೆಸಿದ ಎಲ್ಲಕ್ಕಿಂತ ಮಹತ್ವದ ಕಾರ್ಯವೆಂದರೆ ವಿದ್ಯಾದೇವತೆಯನ್ನು ಗುರುಕುಲದಿಂದ ಹೊರತಂದು ಅಸ್ಪೃಶ್ಯರ ಓಣಿಗಳಲ್ಲಿ ಸಾಲಿ ಮಠಗಳನ್ನು ತೆರೆದರು ಸವರ್ಣಿಯರ ಸಮಾನವಾಗಿ ಕೂಡ್ರಿಸಿ ಶಿಕ್ಷಣ ಕೊಡಿಸಿದರು. ರಾತ್ರಿ ಶಾಲೆಗಳನ್ನು ತೆರೆದು ಪ್ರೌಢರಿಗೆ ವಿದ್ಯಾಭ್ಯಾಸ ಮಾಡಿಸಿದರು. ಅವರಲ್ಲಿ ವಿದ್ವತ್ತದ ಪ್ರೌಢಿಮೆ ಬೆಳೆಸಿದರು. ಅಂತೆಯೇ ಉರಿಲಿಂಗ ಪೆದ್ದಿ, ಕಾಳವ್ವೆ, ಲಕ್ಕವ್ವೆ, ಧೂಳಯ್ಯ, ದಾಸಿಮಯ್ಯರಂತಹ ಅನುಭಾವಿ ಸಾಹಿತಿಗಳು ಅಲ್ಲಿ ಉದಯಿಸಿದರು.

ಶರಣರು ಅಸ್ಪೃಶ್ಯರಿಗೆ ಬದುಕಲು ಕಲಿಸಿದರು. ಬದುಕಿ ಬಾಳುವುದುನ್ನು ಅವರೂ ಕಲಿತರು. 'ದಾಸಿ ಪುತ್ರನಾಗಲಿ ವೇಶ್ಯಾಪುತ್ರನಾಗಲಿ ಶಿವ ದೀಕ್ಷೆಯಾದ ಬಳಿಕ ಸಾಕ್ಷಾತ ಶಿವನು' ಎಂದು ಜಾತಿಯ ಬೇಧವನ್ನು ತಿರಸ್ಕರಿಸಿದರು. ಈ ರೀತಿ ೧೨ನೆಯ ಶತಮಾನದ ಶರಣ ಚಳುವಳಿ ಸರ್ವ

ರೀತಿ ಸಮಾನತೆ ಅಂದರೆ ಧರ್ಮ, ಅರ್ಥ ಸಮಾಜಿಕ ಸಮಾನತೆಯನ್ನು ಒದಗಿಸಿಕೊಟ್ಟಿತು ಎಂದು ಹೇಳಬಹುದು.

ಬಸವಣ್ಣ ಹಾಗೂ ಶಿವಶರಣರ ಉಪದೇಶ ಮತ್ತು ವಚನ ಸಾಹಿತ್ಯದ ಪ್ರಚಾರಕ್ಕಾಗಿ ವೀರಶೈವ ಮತ ಪ್ರಭಾವಶಾಲಿಯಾಗಿ ಬೆಳೆಯಲು ಪ್ರಾರಂಭಿಸಿತು. ಬಸವಕಲ್ಯಾಣ, ಕೂಡಲಸಂಗಮ ಮುಂತಾದ ಭಾಗದಲ್ಲಿ ಸುಧಾರಣೆಯಾಗಿ ಚಿತ್ರದುರ್ಗ, ಬಾಳೆಹೊನ್ನೂರು, ಸುತ್ತೂರು, ಸಿದ್ದಗಂಗೆ ಕ್ರಿ.ಶ ೧೯೦೯ರಲ್ಲಿ ಬಾದಾಮಿಯಲ್ಲಿ ಹಾನಗಲ ಕುಮಾರಸ್ವಾಮಿಯವರಿಂದ ಸ್ಥಾಪಿತವಾದ ಶಿವಯೋಗ ಮಂದಿರ ಮತ್ತು ಧಾರವಾಡದ ವೀರಶೈವ ಮಠಗಳು ವಿದ್ಯಾ ಪ್ರಸಾರ ಕೇಂದ್ರಗಳಾದವು. ಶ್ರೀಮಂತ ಶಿಷ್ಯರಿಂದ ಜ್ಞಾನಿಗಳಾದ ಮಠಾಧೀಶರಿಂದ ಅನೇಕ ವಿದ್ಯಾಲಯಗಳನ್ನು, ವಿದ್ಯಾರ್ಥಿ ನಿಲಯಗಳನ್ನು ಶಾಲಾ ಕಾಲೇಜುಗಳನ್ನು ಆರಂಭಿಸಿ ತಮ್ಮ ಜನಾಂಗದ ಹಾಗೂ ಸಾರ್ವತ್ರಿಕರ ಬೌದ್ಧಿಕ ಪ್ರಗತಿಗೆ ಶ್ರಮಿಸಿದರು.

ಆದಿಲ್‌ಷಾಹಿ ಕಾಲದ ಶೈವಪಂಥ:-

ಇಸ್ಲಾಂ ಧರ್ಮ ದಕ್ಷಿಣ ಹಿಂದೂಸ್ಥಾನದಲ್ಲಿ ಮೊದಲು ಕಾಲಿಟ್ಟಿದ್ದು ಅಲ್ಲಾವುದ್ದೀನ್ ಖಿಲ್ಜಿಯ (ಕ್ರಿ.ಶ೧೨೯೬-೧೩೧೬) ಕಾಲದಲ್ಲಿ ಅವನು ದೇವಗಿರಿಯ ಯಾದವರನ್ನು ಕ್ರಿ.ಶ ೧೨೯೪ರಲ್ಲಿ ಸೋಲಿಸಿ ದಕ್ಷಿಣದ ದ್ವಾರವನ್ನು ಮುಸಲ್ಮಾನರಿಗೆ ತೆರೆದುಕೊಟ್ಟನು ಅವನ ದಂಡನಾಯಕನಾದ ಮಲಿಕಾಫರನು ಒರಂಗಲ್ ಕಾಕತೀಯರನ್ನು, ದ್ವಾರಸಮುದ್ರದ ಬಲ್ಲಾಳರನ್ನೂ, ಮಧುರೆಯ ಪಾಂಡ್ಯರನ್ನೂ ಸೋಲಿಸಿ ರಾಮೇಶ್ವರದ ವರೆಗೆ ದಂಡೆತ್ತಿ ಹೋಗಿ ವಿಪುಲ ಸಂಪತ್ತು ತಗೆದುಕೊಂಡು ದಿಲ್ಲಿಗೆ ಹೋದನು. ಮುಂದೆ ಕ್ರಿ.ಶ ೧೩೪೭ರಲ್ಲಿ ಅಲ್ಲಾವುದ್ದೀನ್ ಹಸನ್‌ನೆಂಬುವವ ಹಸನಗಂಗೂ ಬಹುಮನಿ ಎಂಬ ಹೆಸರಿನಿಂದ ಕಲಬುರ್ಗಿಯಲ್ಲಿ ಪಟ್ಟವೇರಿ ಬಹುಮನಿ ರಾಜ್ಯ ಸ್ಥಾಪಿಸಿದನು. ಇದಕ್ಕೂ ಮುಂಚಿತವಾಗಿ ಅಂದರೆ ಕ್ರಿ.ಶ ೧೩೩೬ರಲ್ಲಿ ಸ್ಥಾಪನೆಯಾದ ವಿಜಯನಗರ ಸಾಮ್ರಾಜ್ಯವು ಕ್ರಿ.ಶ ೧೪ ರಿಂದ ೧೬ನೆಯ ಶತಮಾನದ ವರೆಗೆ ಮುಸಲ್ಮಾನರ ಓಘವನ್ನು ದಕ್ಷಿಣದಲ್ಲಿ ತಡೆಯಿತು. ವಿಜಯನಗರ ಪತನದ ನಂತರ ಮುಸಲ್ಮಾನ ರಾಜ್ಯ ಸುಲಭವಾಗಿ ಪಸರಿಸಿತು. ಬಹುಮನಿ ರಾಜ್ಯ ಒಡೆದು ಐದು ಷಾಹಿ ರಾಜ್ಯಗಳು ಉದಯವಾದವು. ಅದರಲ್ಲಿ ಕ್ರಿ.ಶ೧೪೮೯ ರಿಂದ೧೭೦೧ರ ವರೆಗೆ ಆಳಿದ ವಿಜಯಪುರದ ಆದಿಲ್ ಷಾಹಿ ಮನೆತನ ಕೂಡಾ ಒಂದು. ಇವರು ಮುಸಲ್ಮಾನರಾದರೂ ಉತ್ತರದ ಮುಸಲ್ಮಾನರಂತೆ ಹಿಂದೂ ಪ್ರಜೆಗಳನ್ನು ಕಾಡುತ್ತಿರಲಿಲ್ಲ. ಅವರೊಡನೆ ಕೂಡಿಕೊಂಡು ಪ್ರಜಾಹಿತ ಕಾರ್ಯ ಮಾಡಿದರು ಏಕೆಂದರೆ ಇವರು ಹಿಂದೂ ಜನರ ಸಹಾಯವಿಲ್ಲದೆ ರಾಜ್ಯ ನಡೆಸುವುದು ಸಾಧ್ಯವಿರಲಿಲ್ಲ. ಹಾಗೂ ಮಹತ್ವದ ಅಧಿಕಾರಗಳನ್ನು ಹಿಂದೂಗಳಿಗೆ ಕೊಟ್ಟು ಅವರ

ಸಹಾಯದಿಂದ ತಮ್ಮ ಸತ್ತೆಯನ್ನು ಸ್ಥಾಪಿಸಿದರು. ಈ ಕಾರಣದಿಂದ ಇವರ ಕಾಲದಲ್ಲಿ ದೇವಾಲಯಗಳು ನಿರ್ಮಾಣವಾಗಲಿಲ್ಲ ಆದರೆ ರೂಢಿ ಸಂಪ್ರದಾಯಗಳು ಮುಂದುವರೆದುಕೊಂಡು ಬಂದಿರುವುದನ್ನು ಕಾಣಬಹುದಾಗಿದೆ. ಎರಡನೆಯ ಇಬ್ರಾಹಿಂ ಆದಿಲ್ ಷಾಗೆ 'ಜಗದ್ಗುರು' ಎಂಬ ಬಿರುದು ಇತ್ತು. ತನ್ನ ಅರಮನೆಯ ಪಕ್ಕದಲ್ಲಿ ನರಸಿಂಹ ದೇವಾಲಯ ನಿರ್ಮಾಣ ಮಾಡಿದ ಹಾಗೂ ತನ್ನ ಕೃತಿಗಳಲ್ಲಿ ಗಣೇಶ, ಸರಸ್ವತಿಯ ಸ್ಮರಣೆ ಮಾಡಿದ ಉಲ್ಲೇಖವಿದೆ. ಆದರೆ ಶೈವ ಮತಕ್ಕೆ ಸಂಬಂಧಿಸಿದ ರಾಜಾಶ್ರಯ ನಿಂತು ಹೋದ ಕಾರಣದಿಂದ ಹಾಳಾದ ದೇಗುಲಗಳ ಅವಶೇಷಗಳನ್ನು ಬಳಸಿಕೊಂಡು ಮಸೀದಿಗಳನ್ನು ನಿರ್ಮಾಣ ಮಾಡಿದರು. ಇದಕ್ಕೆ ಉದಾಹರಣೆ ಕರಿಮುದ್ದೀನ್ ಮಸೀದಿಯಾಗಿದೆ. ಸಾಂಸ್ಕೃತಿಕವಾಗಿ ನಂಬಿಕೆ, ಆಚರಣೆ ಉತ್ಸವಗಳಿಗೆ ಯಾವುದೇ ತೊಂದರೆ ಇಲ್ಲದೆ ತಾವೇ ಆಚರಿಸಿಕೊಳ್ಳಬಹುದಾಗಿತ್ತು ಆದರೆ ದೇವಾಲಯದ ನಿರ್ಮಾಣ, ದತ್ತಿ ದಾನ ನಿಂತು ಈ ಕಾಲದಲ್ಲಿ ಶೈವಮತ ಕೇವಲ ಆ ಮತದ ಅನುಯಾಯಿಗಳ ಮನೆಗೆ ಮಾತ್ರ ಸೀಮಿತವಾಗಿತ್ತೆಂದು ಹೇಳಬಹುದಾಗಿದೆ.

ಆದರೂ ಬಿಜಾಪುರದ ಆದಿಲ್‌ಶಾಹಿಗಳು ಈ ಶೈವ ಮತಕ್ಕೆ ತಮ್ಮದೇ ಆದ ಕೊಡುಗೆಯನ್ನು ಕೊಟ್ಟಿದ್ದಾರೆ. ಆದಿಲ್‌ಶಾಹಿ ಸುಲ್ತಾನ ಎರಡನೇ ಇಬ್ರಹಿಂ ಆದಿಲ್‌ಶಾಹ ಜಗದ್‌ಗುರು ಎಂದು ಕರೆಯಿಸಿಕೊಂಡಿದ್ದು ಅವರ ಧಾರ್ಮಿಕ ಸಹಿಷ್ಣುತಾ ಭಾವನೆಯನ್ನು ತಿಳಿಸಿಕೊಡುತ್ತದೆ. ಮಹಮ್ಮದ್ ಆದಿಲ್‌ಶಾಹ ಈಗಿನ ಸಾಲೋಟಗಿ ಗ್ರಾಮದ ಶಿವಯೋಗೇಶ್ವರ ದೇವರ ಆರಧಕನಾಗಿದ್ದನ್ನು ಎಂದು ಅದಕ್ಕೆ ದಾನದತ್ತಿಗಳನ್ನು ಕೊಟ್ಟಿದ್ದರಲ್ಲದೆ ದೇವಾಲಯವನ್ನು ಇಂಡೋ-ಇಸ್ಲಾಮಿಕ್ ಶೈಲಿಯಲ್ಲಿ ದೇವಾಲಯವನ್ನು ಜೀರ್ಣೋದ್ಧಾರ ಗೊಳಿಸಿದನೆಂದು ಆಕರಗಳಿಂದ ತಿಳಿದು ಬರುತ್ತದೆ. ಅಲ್ಲದೆ ಜೈನ ಮತ್ತು ಲಿಂಗಾಯರ ಮಧ್ಯ ನಡೆದ ಧಾರ್ಮಿಕ ಸಂಘರ್ಷಗಳಲ್ಲಿ ಲಿಂಗಾಯತ ಮತವೇ ಜಯಸಾಧಿಸಿದ್ದನ್ನು ಮೂರು ಫರಮಾನ್ಸ್‌ಗಳು ಉಲ್ಲೇಖಿಸುತ್ತವೆ. ಇಲ್ಲಿ ಶೈವಮತವನ್ನು ಲಿಂಗಾಯತ ಎನ್ನುವ ಪದದಲ್ಲಿಯೇ ಬಳಕೆಯನ್ನು ಮಾಡಿರುವುದನ್ನು ಗಮನಿಸಬಹುದು.

ಕ್ರಿ.ಶ. ೧೬೫೬ರ ಸನದು ಶಿಬಿರದ ಊಳಿಗರಾದ ಲಿಂಗಾಯತ ಮತ್ತು ಜೈನರ ನಡುವೆ ಜಗಳ ಆರಂಭಗೊಂಡಿದ್ದು. ಇದು ವಿಕೋಪಕ್ಕೆ ಹೋಗಿದೆ. ಸದರಿ ಲಿಂಗಾಯತ ಮತ್ತು ಜೈನರಲ್ಲಿ ಏಕೆ ಜಗಳ ಶುರುವಾಗಿದೆ. ಯಾವ ಕಾರಣಕ್ಕಾಗಿ ಜಗಳವಾಡುತ್ತಿದ್ದಾರೆ ಎಂದು ವಿಚಾರಣೆ ನಡೆಸಿದಾಗ, ಈ ಕೆಳಗಿನ ಉತ್ತರವನ್ನು ಬರೆದು ನೀಡಿದ್ದಾರೆ. ಲಿಂಗಾಯತರು ನೀಡಿದ ತಕರಾರು ಏನೆಂದರೆ, ಸೈನ್ಯದಲ್ಲಿರುವ ಜಂಗಮದೇವರು ಜೈನರನ್ನು ಮೊದಲಿನಿಂದಲೂ ನಿಂದೆ ಮಾಡುತ್ತಲಿರುತ್ತಾರೆ. ಲಿಂಗಾಯತರದೇ ಕಾರಭಾರ ನಡೆದಿದೆ. ವೇದಶಾಸ್ತ್ರದ ಆಜ್ಞೆಯಂತೆ

ಉಳಿದವರು ವಾಸಿಸುತ್ತಿದ್ದಾಗ ಜೈನರು ಕಾಲು ಕೆದರಿ ಜಗಳವನ್ನು ಆರಂಭಿಸಿದ್ದಾರೆ. ಆದರೂ ಜಂಗಮರು ವೇದಶಾಸ್ತ್ರದಂತೆ ನಡೆಉಕೊಳ್ಳುತ್ತಿದ್ದಾರೆ. ಹೀಗಿರುವಾಗ ಸಾಹೇಬರಿಂದ ಜಾಮೀನು ಪಡೆದು ಬ್ರಹ್ಮಸಭೆಯ ಪಂಡಿತ್ರು ಶಾಸ್ತ್ರಿಗಳು ಇದ್ದಲ್ಲಿ ಕಳಿಸಬೇಕು. ವೇದಶಾಸ್ತ್ರ ಬ್ರಹ್ಮಸಭೆಯಿಂದಲೂ ಹಿಂದಿನಿಂದ್ಲೂ ನಡೆದಿದೆಯೇ ಎನ್ನುವುದನ್ನು ಖಾತ್ರಿಪಡಿಸಕೊಡಬೇಕೆಂದು ಹೇಳಿದಾಗ, ಸಹಿ ಮಾಡದಿದ್ದರೂ ತಾವು ಸೋತಿದ್ದೇವೆ ಎಂದು ಬರೆದುಕೊಟ್ಟಿದ್ದಾರೆ.

ಜೈನ ಜನರು ನೀಡಿದ ತಕರಾರು ಏನೆಂದರೆ ಸೈನ್ಯಶಿಬಿರದಲ್ಲಿರುವ ಜಂಗಮರು ಜೈನದೇವರು–ಗುರು–ಮತ್ತು ಜನರನ್ನು ಬಯ್ಯುತ್ತ ಇರುತ್ತಾರೆ. ಈ ಕಾರಣದಿಂದಾಗಿ ನಮ್ಮ ಮತ್ತು ಲಿಂಗಾಯಿತರ ನಡುವೆ ಜಗಳ ಶುರುವಾಗಿದೆ. ಆದ್ದರಿಂದ ಸಾಹೇಬರಾದ ನಮ್ಮ ಬಳಿಗೆ ಲಿಂಗಾಯತರನ್ನು ಕರೆಯಿಸಿ ಬ್ರಹ್ಮಸಭಾ ಪಂಡಿತ ಶಾಸ್ತ್ರಿಗಳಿದ್ದಲ್ಲಿಗೆ ಕಳುಹಿಸಲಾಯಿತು. ಅಲ್ಲಿ ಜಂಗಮರು ಜೈನ ದೇವರನ್ನು ಗುರುವನ್ನು ಜನರನ್ನು ನಿಂದೆ ಮಾಡುವುದಾಗಿ ಬರೆದುಕೊಟ್ಟು ಸೋತಿರುವುದಾಗಿ ಸಹಿ ಮಾಡಿದ್ದಾರೆ. ಇನ್ನುಮುಂದೆ ವೇದಶಾಸ್ತ್ರಗಳು ಹೇಳಿದಂತೆ ವರ್ತಿಸುವುದಾಗಿ ಉತ್ತರ ಬರೆದುಕೊಟ್ಟಿದ್ದಾರೆ.

ಹೀಗೆ ಉಭಯತರಿಂದ ಉತ್ತರವನ್ನು ಪಡೆದು, ತರ್ಕಶಾಸ್ತ್ರದ ಪ್ರಕಾರ ನಿರ್ಣಯವನ್ನು ಕೈಕೊಳ್ಳಲೆಂದು ನಾಲ್ಕು ಪೀಠ ಷಟ್‌ಶಾಸ್ತ್ರ ಪರಾಯಣ ಶಡ್‌ದರುಶನರೇ ಜನರ ಹಾಗೂ ರಾಜ್ಯ ರಾಜ್ಯಗಳ ಪಂಡಿತರಾದ ಕಾಶಿಶಾಸ್ತ್ರಜ್ಞರ ಬಳಿಗೆ ಕಳಿಸಲಾಗಿದೆ. ಇದು ಅದರ ತಪಶೀಲು.

ಲಿಂಗಾಯತ ಗುಂಪಿನ ಅನ್ನದಾನಿ ಜಂಗಮ ಆರಾಧ್ಯ ಮತ್ತು ಶಿಬಿರದ ಜಂಗಮರು ಮತ್ತು ಕೋಡಿಸೆಟ್ಟಿ, ಆಚಸೆಟ್ಟಿ ಲಿಂಗಾಯತ. ಜೈನರ ಗುಂಪಿನ ಸಿಲಾಸ ಉಪಾಧ್ಯೆ ಮತ್ತು ಇಬ್ಬರು ಸೆಟ್ಟಿ ಸಾಹಾಲ್ ಮತ್ತು ಚೇನಿ ಸೆಟ್ಟಿಕಾರ ಶಾಹಾಪುರ

ಹೀಗೆ ಬರೆದು ಕಳಿಸಲಾಗಿದೆ. ಶ್ರೇಷ್ಠ ಪಂಡಿತರನ್ನು ಶಾಸ್ತ್ರಜ್ಞರನ್ನು ಷಡ್‌ದರುಶನದ ಜನರನ್ನು ಕರೆಯಿಸಿ, ಉಭಯ ಪಕ್ಷದ ತಕರಾರರನ್ನು ಆಲಿಸಿ, ಆ ಬ್ರಹ್ಮಸಭೆಯ ವೇದಶಾಸ್ತ್ರವು ಏನು ನಿರ್ಣಯವನ್ನು ತೆಗೆದುಕೊಳ್ಳುವುದೋ, ಅದನ್ನು ಯಥಾವತ್ತಾಗಿ ಬರೆದು ಕಳಿಸಬೇಕು. ಉಭಯಪಕ್ಷಗಳಲ್ಲಿ ಈ ದ್ವೇಷ ಬೆಳೆಯದಂತೆ ನಿರ್ಣಯ ಪತ್ರವನ್ನು ಬರೆದು ಕಳಿಸುವ ಕೃಪೆಯಾಗಬೇಕು. ಎಂದು ಉಲ್ಲೇಖಿಸುತ್ತದೆ.

ಕ್ರಿ.ಶ. ೧೬೫೮ರ ಮತ್ತೊಂದು ಸನದು ವಿಷಯವೆಂದರೆ ಅಥಣಿಯ ಪೇಠದ ಲಿಂಗಾಯತ (ಒಂದು ಸಾಲು ಹರಿದಿದೆ) ಉನು ಲಿಂಗಾಯತ ಮಾಹನಾಡ ಪಾ/ಜಮಖಂಡಿಯವರು ಸ್ಥಳಕ್ಕೆ

ಆಗಮಿಸಿದ್ದರು. ಚರ್ಚೆ ಮಾಡಲು ಬಂದಿದ್ದರು. ಕಾರಕೂನ, ದೇಸಾಯಿ, ದೇಸ ಕುಲಕರ್ಣಿ, ಪಟೇಲ, ಚೌಧರಿ ಮತ್ತು ಮಹಾಜನ ಸೇವೆ ಹಾಗೂ ಸಮಸ್ತ ರೈತರು, ಬಲೂತೆದಾರರು (ಆಯಗಾರರು) ಇವರನ್ನೆಲ್ಲ ಕರೆಯಿಸಿದರು. ಹಿಂದಿನ ಪ್ರಕರಣದ ಕಾರಣವನ್ನು ಕೇಳಿದರು ಯಾಕೆ ಜೈನ ಮತ್ತು ಲಿಂಗಾಯಿತರ ನಡುವೆ ಜಗಳವಾಯಿತು. ಲಿಂಗಾಯಿತ ಮಹಾನಾಡಿನ ಗುರು ಯಾವ ಮಾತುಕತೆಗಾಗಿ ಬರುತ್ತಿದ್ದಾರೆ ಮತ್ತು ಜೈನರ ಗುರು ಹೇಗೆ ಬರುತ್ತಾರೆ. ಪ್ರತಿ ವರ್ಷದಂತೆ ಜಂಗಮ ಗುರು ಸಂಚಾರ ಮಾಡುತ್ತಾರೊ ಇಲ್ಲವೊ, ಈ ವರ್ಷ ಏನೇನು ನಡೆಯಿತು ಇದನ್ನೆಲ್ಲ ಹೇಳುವಂತೆ ಕೇಳಿದರು. ಆಗ ಸಿದಣ್ಣ ಭೂಪತಿ ದೇಸಾಯಿ, ಸಿದಗೌಡ ಲಿಂಗೌಡ ದೇಸಾಯಿ, ರಾಮಾಜಿ ಅಪ್ಪಾಜಿ ದೇಸ ಕುಲಕರ್ಣಿ, ನಾಡಗೌಡ ಪಟೇಲ, ಸಿದಗೌಡ ಚೌಧರಿ, ಲಿಂಗಸೆಟಿ ಪಟ್ಟಣಸೇಟಿ ಮತ್ತು ನಾಗಪ್ಪ ಜೈನ ಮಹಾಜನ ಮತ್ತು ಸಮಸ್ತ ಆಯಗಾರರು ಎಲ್ಲ ಸೇರಿ ತಕರಾರಿನ ಮಜಕೂರು ಬರೆದುಕೊಟ್ಟರು. ಲಿಂಗಾಯತ ಮಹಾನಾಡಿನ ಗುರು ಯಾವ ಮಾತುಕತೆಗಾಗಿ ಬರುತ್ತಿದ್ದಾರೆ ಮತ್ತು ಜೈನರ ಗುರು ಹೇಗೆ ಬರುತ್ತಾರೆ. ಪ್ರತಿ ವರ್ಷದಂತೆ ಜಂಗಮ ಗುರು ಸಂಚಾರ ಮಾಡುತ್ತಾರೊ ಇಲ್ಲವೋ, ಈ ವರ್ಷ ಏನೆನು ನಡೆಯಿತು. ಇದನ್ನೆಲ್ಲ ಹೇಳುವಂತೆ ಕೇಳಿದರು. ಆಗ ಸಿದಣ್ಣ ಭೂಪತಿ ದೇಸಾಯಿ, ಸಿದಗೌಡ ಲಿಂಗೌಡ ದೇಸಾಯಿ, ರಾಮಾಜಿ ಅಪ್ಪಾಜಿ ದೇಸ ಕುಲಕರ್ಣಿ, ನಾಡಗೌಡ ಪಟೇಲ, ಸಿದಗೌಡ ಚೌಧರಿ, ಲಿಂಗಸೆಟಿ ಪಟ್ಟಣಸೇಟಿ ಮತ್ತು ನಾಗಪ್ಪ ಜೈನ ಮಹಾಜನ ಮತ್ತು ಸಮಸ್ತ ಆಯಗಾರರು ಎಲ್ಲ ಸೇರಿ ತಕರಾರಿನ ಮಜಕೂರು ಬರಿದುಕೊಟ್ಟರು. ಲಿಂಗಾಯತ ಮಹಾನಾಡಿನ ಗುರು ಬಂದಾಗ ಸಮಸ್ತ ಮಹಾನಾಡಿನ ಜನರು, ನಾಡಗೀರರತು ಹೋಗಿ ಅವರನ್ನು ಸ್ವಾಗತಿಸಿ ಮೆರವಣಿಗೆಯ ಮೂಲಕ ಕರೆತರುತ್ತಾರೆ. ಆದರೆ ಜೈನ ಗುರು ಬಂದರೆ ಅವರನ್ನು ಸ್ವಾಗತಿಸಿ ಮೆರಣಿಗೆಯ ಮೂಲಕ ಕರೆತರುತ್ತಾರೆ. ಆದರೆ ಜೈನರ ಗುರು ಬಂದರೆ ಅವರನ್ನು ಸ್ವಾಗತಿಸಿದೆ, ತಮ್ಮ ತಮ್ಮ ವಸತಿಯಲ್ಲಿ ಉಳಿದುಬಿಡುತ್ತಾರೆ. ಈ ತಕರಾರಿನ ಅಹವಾಲನ್ನು ಹುಜೂರರಿಗೆ ಬರೆದು ತಿಳಿಸಲಾಯಿತು. ಆಗ ಹುಮಾಯು ಹಾಗೂ ಹಜರತ ಸಾಹೇಬರು ಆಜ್ಞೆ ಹೊರಡಿಸಿದ್ದೇನೆಂದರೆ ಲಿಂಗಾಯತ ಗುರುವನ್ನು ಸ್ವಾಗತಿಸಿ ಜೈನರ ಗುರುವನ್ನು ಸ್ವಾಗತಿಸದೇ ಈ ವಚನವನ್ನು ಹಾಗೂ ಅಡ್ಡಿಪಡಿಸುವವರು ಅಪರಾಧಿ ಎನಿಸುತ್ತಾರೆ. ಎಂದು ಈ ಸನದು ಹೇಳುತ್ತದೆ. ೧೬೫

ಕ್ರಿ.ಶ. ೧೬೭೦ರ ಸನದು ಈ ಹಿಂದಿನ ವ್ಯಾಜ್ಯಗಳನ್ನು ಮರು ಉಲ್ಲೇಖಿಸುತ್ತ, ಈ ಹಿಂದೆ ಎರಡೂ ಪಕ್ಷದವರನ್ನು ಕಾಶಿಗೆ ಹಯೋಗಿ ನಿರ್ಣಯವನ್ನು ತೆಗೆದುಕೊಂಡು ಬರುವಂತೆ, ಸೋಲು ಗೆಲುವಿನ ಪತ್ರವನ್ನು ತರುವಂತೆ ತಿಳಿಸಿ ಕಳಿಸಿಕೊಡಲಾಯಿತು. ಅಲ್ಲಿ ನೀವು ಗೆದ್ದು ಬಂದಿರ.

ಕಳಸವನ್ನು ಹಡಿಯಲು ಜೈನರಿಗೆ ಹಕ್ಕಿಲವೆಂದು ಜಯಪತ್ರವನ್ನು ನೀವು ತಂದಿರಿ. ಹೀಗಾಗಿ ನೀವು ಗೆದ್ದಿರಿ ಎಂದು ಹಜರತ ಸಾಹೇಬರು ಫಮಾನು ಹೊರಡಿಸಿದರು. ರಾಣಿಸಾಹೇಬರ ಅನುಮತಿಪತ್ರವೂ ಲಭಿಸಿತ್ತು. ಆ ಪತ್ರದಂತೆ ನಿಮ್ಮನ್ನು ಸನ್ಮಾನಿಸಲಾಯಿತು. ಆದರೂ ಸದ್ಯೆ ಸಿದ್ದಪ್ಪ ಜೈನನು ಮತ್ತೆ ಹಸೊದಾಗಿ ತಕರಾರು ಮಾಡಿ ಏಳು ಕಳಸವನು ಕಟ್ಟಿಕೋಮಡು ಸತ್ಯವನ್ನು ತಿಳಿಯಲು ಹೋದನು. ಆಗ ನೀವು ಮಹಾನಾಡಿನ ಸಮಸ್ತ ಜನರು ಬಂದು ಕೇಳಿದ್ದೇನೆಂದರೆ ನೈನರಿಗೂ ನಮಗೂ ಜಗಳವಾಗಿ ಸಮಸ್ತ ಜನರು ಬಂದು ಕೇಳಿದ್ದೇನೆಂದರೆ ಜೈನರಿಗೂ ನಮಗೂ ಜಗಳವಾಗಿ, ಸೋಲು ಗೆಲುವಿನ ನಿರ್ಣಯವಾಗಿ ಅಂಥ ಕಾಗದ ಪತ್ರದ ದಾಖಲೆಯಿರುವಾಗ, ಸದ್ಯ ಮತ್ತೆ ಹೊಸ ತಕರಾರು ಮಾಡಿ, ಕಳಸವನ್ನು ಕಟ್ಟಿಕೊಂಡು ಜೈನರು ಹೋಗಿದ್ದು ಏಕೆ ಎಂದು ಪ್ರಶ್ನಿಸಿದಾಗ, ಎಲ್ಲ ಜೈನರನ್ನು ಅಲ್ಲಿಗೆ ಕರೆಯಿಸಿ ವಿಚಾರಣೆ ನಡೆಸಿದಾಗ, ಅವರು ಹೇಳಿದ್ದೇನೆಂದರೆ ನಾವು ಅಜ್ಞಾನದಿಂದ ಒಯ್ದಿದ್ದೇವೆ. ಮುಂದೆ ಯಾವ ರೀತಿಯಲ್ಲಿ ನಿರ್ಣಯವಾಗುವುದೋ ಹಾಗೆ ವರ್ತಿಸುತ್ತೇವೆ. ಈ ಮಾತಿಗೆ ಯಾರು ತಪ್ಪುತ್ತಾರೋ ಅವರು ದಿವಾನಿನ ಅಪರಾಧಿ ಎಂದು ಹೇಳಿ ಜೈನರು (ಮುಂದಿನ ಎರಡಟು ಮೂರು ಸಾಲುಗಳು ಮಜಕೂರು ಮಾಯವಾಗಿದೆ.) ಈ ರೀತಿ ಆದಿಲ್‌ಶಾಹಿಗಳ ಆಳ್ವಿಕೆಯ ಸಂದರ್ಭದಲ್ಲಿ ಶೈವಮತವು ತನ್ನದೇ ಆದ ಪ್ರಾಮುಖ್ಯತೆ ಪಡೆದುಕೊಂಡಿತ್ತೆಂದು ತಿಳಿದುಬರುತ್ತದೆ.[೧೬೬]

ವಿಜಯನಗರ ಪೂರ್ವ ಕಾಲದಲ್ಲಿ ಸಂತರು ಮತ್ತು ವಿದ್ವಾಂಸರಿಂದ ಸ್ಥಾಪಿತವಾದ ವೀರಶೈವ ಮತದ ಪರಂಪರೆಯು ಅನಂತರ ಕೆಳದಿ, ಮೈಸೂರು, ಕೊಡಗು, ಸ್ವಾದಿ ಬೀಳಗಿ (ಶಿವಮೊಗ್ಗ ಜಿಲ್ಲೆ) ಮತ್ತಿತರ ಕಡೆ ಹರಿದು ಹಂಚಿಹೋಯಿತು. ವಿಜಯನಗರ ಆ ದಿನದಲ್ಲಿದ್ದ ಈ ಪಾಳೆಗಾರರ ಕೇಂದ್ರಗಳು ಅವರ ಪತನದ ನಂತರ ಸ್ವತಂತ್ರವಾಗಿ ಅದೇ ಸಾಂಸ್ಕೃತಿಕ ಪರಂಪರೆ ಮುಂದುವರೆಸಿಕೊಂಡು ಹೋದವು. ನಂಬಿಕೆ, ಸಂಪ್ರದಾಯ ಮತ್ತು ಆಚರಣೆಗಳು ಎರಡು ವಿಭಿನ್ನ ಶಾಖೆಗಳಾದವು. ಒಂದು ವೈದಿಕ ಪಂಥ ಧಾರ್ಮಿಕ ಆಚರಣೆಗಳನ್ನು ಮತ್ತು ಶಾಸ್ತ್ರ ವಿಧಿಗಳನ್ನು ವಿರೋಧಿಸುತ್ತಿತ್ತು ಮತ್ತೊಂದು ವಚನಗಳ ಅರ್ಥದ ಸತ್ಯದಿಂದ ಕೂಡಿದ್ದಾಗಿತ್ತು. ಎರಡನೆಯ ಪಂಥವು ವೈದಿಕ ಧರ್ಮದ ಕೆಲವು ಮೂಲಭೂತ ನಂಬಿಕೆಗಳಿಗೆ ವಿರುದ್ಧವಾಗಿ ನಡೆಯಿತು ಇನ್ನೊಂದು ಹಿಂದಿನ ಆಚರಣೆಯನ್ನು ಬಿಡದೆ ಬಸವ ಧರ್ಮವನ್ನು ಕೆಲವು ಸಂದರ್ಭದಲ್ಲಿ ಪಾಲಿಸುತ್ತಾ ಸಾಗಿತು ಇದು ಮಹತ್ವದ ಬದಲಾವಣೆ ಎಂದೇ ಕರೆಯಬಹುದು.

ಲಿಂಗಾಯತ ಧರ್ಮದ ಮೈಸೂರಿನ ಒಡೆಯರ ಹಾಗೂ ಉಮ್ಮತ್ತೂರಿನ ದೊರೆಗಳ ಕಾಲದಲ್ಲಿ ಕ್ರಿ.ಶ ೧೩೯೯ ರಿಂದ ೧೬೪೦ರ ವರೆಗೆ ಇತ್ತು ಮತ್ತು ಕ್ರಿ.ಶ ೧೫೫೦ ರಿಂದ ೧೭೬೩ರ

ವರೆಗೆ ಕೆಳದಿಯ ನಾಯಕರ ಕಾಲದಲ್ಲಿ ರಾಜ್ಯ ಧರ್ಮವಾಗಿತ್ತು. ಮೈಸೂರು ದೇಶದ ಚಿತ್ರದುರ್ಗದಲ್ಲಿ ಅವರ ಪ್ರಮುಖ ಮಠವಿದೆ ಎಂದು ಇ.ಪಿ.ರೈಸ್ ಅವರು ತಮ್ಮ ಕನ್ನಡ ಸಾಹಿತ್ಯ ಚರಿತೆಯಲ್ಲಿ ಹೇಳುತ್ತಾರೆ. ಶ್ರೀ.ಕೆ.ಡಿ ಸ್ವಾಮಿನಾಥನ್ ಅವರ ಪ್ರಕಾರ " ವೀರಶೈವರು ರಾಜ್ಯದ ಪ್ರಭಾವಶಾಲಿ ವರ್ಗದವರು, ಮಧ್ಯಕಾಲದಲ್ಲಿ ಆಡಳಿತಗಳು ಒಮ್ಮೊಮ್ಮೆ ನಾಗರಿಕರ ವೈಯಕ್ತಿಕ ಜೀವನದಲ್ಲಿ ಅತಿಯಾಗಿ ಪ್ರವೇಶ ಮಾಡುತ್ತಿದ್ದವು". ಇಕ್ಕೇರಿಯ ದೊರೆಗಳು ಮಠಗಳನ್ನು ಹಿಡಿತದಲ್ಲಿಟ್ಟುಕೊಂಡು ಪೋಷಿಸುತ್ತಿದ್ದರು. ರಾಜ್ಯದಲ್ಲಿ ಸಾಮಾಜಿಕ ಭದ್ರತೆಯನ್ನು ನೆಲೆಗೊಳಿಸುವುದಕ್ಕಾಗಿಯೇ ಹೊರತು ತಮ್ಮ ಧಾರ್ಮಿಕ ಯಜಮಾನ್ಯವನ್ನು ತೋರೆಯುವುದಕಲ್ಲ ಎಂದು ಹೇಳುತ್ತಾರೆ.[೧೬೭]

ಇವೆಲ್ಲವೂ ವಿಜಯನಗರೋತ್ತರ ಕಾಲದಲ್ಲಿ ವೀರಶೈವ ಪ್ರಭಾವವಿತ್ತು ಎಂಬುದನ್ನು ಸ್ಪಷ್ಠ ಪಡಿಸುತ್ತವೆ. ೧೬ ರಿಂದ ೨೦ ನೆಯ ಶತಮಾನಗಳ ಮಧ್ಯ ಕಾಲದಲ್ಲಿ ಸೃಷ್ಠಿಯಾದ ವಿಪುಲವಾದ ವೀರಶೈವ ಸಾಹಿತ್ಯವು ಪುರಾಣ, ಚಂಪೂಕೃತಿ, ವಚನ, ಷಟ್ಪದಿ ಇತ್ಯಾದಿ ಕಾವ್ಯ, ಶತಕ, ರಗಳೆ, ಟೀಕೆ, ಹಾಜು, ಸ್ತೋತ್ರ ಮತ್ತು ಚರಿತೆ ಇವುಗಳಲ್ಲಿ ಕೆಲವು ಹೆಚ್ಚು ಪುನರುಕ್ತಿಯಿಂದ ಕೂಡಿದರೂ ನೈತಿಕ ಹಾಗೂ ಧಾರ್ಮಿಕ ಮೌಲ್ಯ ಬಿಂಬಿಸುವ ಹಾಗೂ ಪಾಲನೆ ಮಾಡುವ ಕಾರ್ಯ ಮಾಡುತ್ತವೆ. ಯಾವಾಗ ಸಾಮಾನ್ಯ ಜನರ ನಡುವೆ ಈ ಸಾಹಿತ್ಯ ಹುಟ್ಟಿತೋ ಅವರು ಇದರ ವಾರಸುದಾರರಾಗಿ ಮುಂದುವರೆದರು. ಕ್ರಮೇಣ ರಾಜಾಶ್ರಯ ತಪ್ಪಿದರೂ ಅವರೆ ವಾರಸುದಾರರಾದರು. ಈ ಕಾರ್ಯದಿಂದಲೇ ಇಂದಿಗೂ ಕೂಡಾ ಈ ಮತದ ಆಚರಣೆಗಳನ್ನು ನಾವು ಕಾಣಬಹುದಾಗಿದೆ.

ಉತ್ತರ ಕರ್ನಾಟಕವು ಎಂದರೆ ತುಂಗಭದ್ರ ನದಿಯ ಉತ್ತರಕ್ಕೆ ಇರುವ ಕನ್ನಡ ನಾಡು ಅನೇಕ ರಾಜಕೀಯ ಪರಿವರ್ತನೆಯಾಯಿತು. ಯಾದವರ ನಂತರ ೧೪ನೆಯ ಶತಮಾನದಲ್ಲಿ ಬಹುಮನಿ ಸ್ಥಾಪನೆಯಾದ ಮೇಲೆ ತುಂಗಭದ್ರೆಯ ಕೆಳಗೆ ಬಿಜಾಪುರ ಜಿಲ್ಲೆ, ಹೈದರಾಬಾದ ಕರ್ನಾಟಕವು ಮುಸ್ಲಿಂರ ಆಳ್ವಿಕೆಗೆ ವಶವಾಯಿತು. ಬಹುಮನಿ ೧೫೧ ವರ್ಷ ನಂತರ ಆದಿಲ್ ಷಾಹಿ ನಂತರ ೧೬ ನೆಯ ಶತಮಾನದ ಪ್ರಾರಂಭದಿಂದ ಗೋಲ್ಕೊಂಡ ಮತ್ತು ಬಿದಿರೆಯ ಸುಲ್ತಾನರು ಆಳಿದರು ತುಂಗಭದ್ರೆಯ ತೆಂಕಣಕ್ಕೆ ವಿಜಯನಗರ ಆಳಿದ್ದರಿಂದ ಆ ಭಾಗ ಹೊರತು ಪಡಿಸಿ ಬಿಜಾಪುರ ಭಾಗದಲ್ಲಿ ಮುಸ್ಲಿಂ ಆಳ್ವಿಕೆ ಬಂತು. ಕೃಷ್ಣಾ ತುಂಗಭದ್ರಾ ನಡುವಿನ ಪ್ರದೇಶ ನಿರಂತರ ವಿವಾದದ ಕೇಂದ್ರ ಬಿಂದುವಾಯಿತು. ಮುಸ್ಲಿಂರು ನಿರಂತರ ದಾಳಿ ಮಾಡುತ್ತಲೇ ಇದ್ದರು. ಶಿವಾಜಿಯ ಪ್ರಭಾವಕ್ಕೆ ಒಳಗಾದಾಗ ಮುಂಬಯಿ ಪ್ರಾಂತ್ಯಕ್ಕೆ ಸೇರಿತು. ೧೬೮೦ರಲ್ಲಿ ಶಿವಾಜಿ ಕಾಲವಾದ ಮೇಲೆ ಮತ್ತೆ ಮೊಗಲರು ಈ ಭಾಗ ಆಕ್ರಮಿಸಿದರು. ೧೭೮೬ರಲ್ಲಿ ಬಿಜಾಪುರ ಮೊಗಲರ ಭಾಗವಾಯಿತು. ಮುಂದೆ ೧೭೦೭ರಲ್ಲಿ ಔರಂಗಜೇಬ ತೀರಿದ ಮೇಲೆ ಮರಾಠರಿಗೆ

ಅನುಕೂಲವಾಯಿತು. ಹೀಗೆ ನಿರಂತರ ಅಂದರೆ ವಿಜಯನಗರ ಅವನತಿಯ ನಂತರ ಮುಸ್ಲಿಂ ಪ್ರಭಾವಕ್ಕೆ ಒಳಗಾಗಿ ವೀರಶೈವ ಚಳುವಳಿಯ ಕುರುಹಾಗಿ ಧಾರ್ಮಿಕ ಆಚರಣೆಗಳು ಯಾರ ಆಶ್ರಯವು ಇಲ್ಲದೆ ಸೊರಗಿ ಹೋದವು. ಆದರೆ ಸಾಮಾನ್ಯರು ಅವುಗಳನ್ನು ಉಳಿಸಿಕೊಂಡು ಬಂದಿರುವುದೆ ಮಹತ್ ಸಾಧನೆಯಾಗಿದೆ ಎಂದು ಹೇಳಬಹುದು.

ಒಟ್ಟಿನಲ್ಲಿ ಈ ಜಿಲ್ಲೆಯಲ್ಲಿ ಮಹತ್ವಪೂರ್ಣವಾದ ಶಾಸನಗಳಲ್ಲಿ ವೀರಶೈವ ಪರವಾಗಿರುವ ಅನೇಕ ವಿಷಯಗಳು ಲಭ್ಯವಾಗುತ್ತವೆ. ಎಂಬುವುದು ಮೇಲಿನ ಶಾಸನ ಉಲ್ಲೇಖಗಳಿಂದ ಸ್ಪಷ್ಟವಾಗುತ್ತದೆ.

ದಕ್ಷಿಣ ಭಾರತದಲ್ಲಿ ಇತಿಹಾಸ ಪೂರ್ವಕಾಲದಿಂದಲೇ ರೂಢಿಯಲ್ಲಿರುವುದನ್ನು ಅದರ ಸಂಪ್ರದಾಯ ಮತ್ತು ಪರಂಪರೆಯಿಂದ ಕಂಡುಕೊಳ್ಳಬಹುದು. ಕನ್ನಡ ನಾಡಿನ ಅರಸು ಮನೆತನಗಳು ದೇವಾಲಯಗಳ ನಿರ್ಮಾಣ, ಅವುಗಳಿಗೆ ದಾನ ದತ್ತಿ ನೀಡುವ ಮೂಲಕ ಶೈವ ಧರ್ಮವನ್ನು ಎತ್ತಿಹಿಡಿದಿದ್ದಾರೆ. ಹತ್ತನೆಯ ಶತಮಾನದಲ್ಲಿ ಆಳ್ವಿಕೆಗೆ ಬಂದ ಕಲ್ಯಾಣ ಚಾಳುಕ್ಯರು ತಮ್ಮ ಸಾಮ್ರಾಜ್ಯದಾದ್ಯಂತ ಶೈವ ದೇವಾಲಯಗಳ ನಿರ್ಮಾಣ ಮತ್ತು ಸ್ಥಾನಾಚಾರ್ಯರ ನೇಮಕ ಮಾಡುವುದರೊಂದಿಗೆ ಅದರ ಏಳಿಗೆ ಉನ್ನತ ಮಟ್ಟಕ್ಕೆ ಮುಟ್ಟಿತು. ಶೈವ ದೇವಾಲಯಗಳ ಪೂಜೆ ಪುನಸ್ಕಾರ, ದೇವರ ಅಂಗಭೋಗ, ರಂಗಭೋಗ, ಚೈತ್ರ ಪವಿತ್ರ, ಖಂಡಸ್ಪುಟಿತ ಜೀರ್ಣೋದ್ಧಾರ, ತಪೋಧನರ, ವಿದ್ಯಾರ್ಥಿಗಳ ಆಹಾರ, ಆಚ್ಛಾದನ ಮೊದಲಾದವುಗಳಿಗೆ ದಾನ ನೀಡಿದ ಬಗ್ಗೆ ಹೆಚ್ಚಿನ ಶಾಸನಗಳು ಕಂಡುಬರುತ್ತವೆ. ಅರಸರು, ಅಧಿಕಾರಿಗಳು, ಮಹಾಜನರು, ವರ್ತಕರು, ಸಾಮಾನ್ಯ ಜನರು ಈ ದಾನ ದತ್ತಿ ಬಿಟ್ಟಿದುದು ತಿಳಿಯುತ್ತದೆ. ಶೈವ ಪರವಾದ ಶಾಸನಗಳು ಉಳಿದವುಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿರುವುದನ್ನು ಗಮನಿಸಿದರೆ ಅದು ಜನಸಾಮಾನ್ಯರ ಧರ್ಮವಾಗಿತ್ತೆಂದು ಹೇಳಬಹುದು. ೧೩ನೇ ಶತಮಾನದ ನಂತರ ದಕ್ಷಿಣ ಭಾಗತದಲ್ಲಿ ಹೊಸದೊಂದು ಸಂಸ್ಕೃತಿ ಅಥವಾ ಪ್ರಭುತ್ವ ಪರಿಚಯವಾದರೂ ಸಹ ಶೈವ ಮತ ಎಂಬುದು ಅಚ್ಚಳಿಯದೇ ಉಳಿದಿದ್ದನ್ನು ಕಾಣಬಹುದು ಅದು ಒಂದಲ್ಲಾ ಒಂದು ರೀತಿಯಲ್ಲಿ ಲಿಂಗಾಯತ ಎಂಬ ಹೆಸರಿನೊಂದಿಗೆ ಈ ಶೈವಮತ ಬೆಳೆದು ಬಂದಿರುವುದನ್ನು ಮೇಲಿನ ಉಲ್ಲೇಖಗಳಿಂದ ತಿಳಿದು ಬರುತ್ತದೆ.

ಕೊನೆ ಟಿಪ್ಪಣಿಗಳು:

೧. ಕ.ವಿ.ವಿ.ಶಾ.ಸಂ-೧೦ ಸಂ-೦೭

೨. ಅದೇ ಸಂ-೩೧

೩. ಅದೇ ಸಂ-೩೨

೪. SII, XX, No.46

೫. ಕ.ವಿ.ವಿ.ಶಾ.ಸಂ-೧೦ ಸಂ-೭೧

೬. ಅದೇ ಸಂ-೦೯

೭. ಅದೇ ಸಂ-೮೦

೮. ಅದೇ ಸಂ-೨೩

೯. ಅದೇ ಸಂ-೭೯

೧೦. ಅದೇ ಸಂ-೫೪

೧೧. ಅದೇ ಸಂ-೦೩

೧೨. ಅದೇ ಸಂ-೪೮

೧೩. ಅದೇ ಸಂ-೫೩

೧೪. ಅದೇ ಸಂ-೫೧

೧೫. ಅದೇ ಸಂ-೪೪

೧೬. ಅದೇ ಸಂ-೩೫

೧೭. ಅದೇ ಸಂ-೫೦

೧೮. ಅದೇ ಸಂ-೪೬

೧೯. ಅದೇ ಸಂ-೩೯

೨೦. ಅದೇ ಸಂ-೧೭

೨೧. ಅದೇಸಂ-೦೯

೨೨. ಅದೇ ಸಂ-೪೬&೫೯

೨೩. ಅದೇ ಸಂ-೪೨,೪೮,೪೧,೪೯,೪೫,

೨೪. ಅದೇ ಸಂ-೦೨

೨೫. ಅದೇ ಸಂ-೦೨

೨೬. ಅದೇ ಸಂ-೧೦೦

೨೭. ಅದೇ ಸಂ-೦೭

೨೮. ಅದೇ ಸಂ-೬೧

೨೯. ಅದೇ ಸಂ-೩೧

೩೦. ಅದೇ ಸಂ-೭೬

೩೧. ಅದೇ ಸಂ-೪೮

೩೨. ಅದೇ ಸಂ-೦೩

೩೩. ಅದೇ ಸಂ-೫೯

೩೪. ಅದೇ ಸಂ-೦೧

೩೫. ಅದೇ ಸಂ-೩೭

೩೬. ಅದೇ ಸಂ-೧೬

೩೭. ಅದೇ ಸಂ-೭೪

೩೮. ಅದೇ ಸಂ-೦೧

೩೯. ಅದೇ ಸಂ-೪೮

೪೦. ಅದೇ ಸಂ-೫೧

೪೧. ಅದೇ ಸಂ-೪೬

೪೨. ಅದೇ ಶಂ-೧೫

೪೩. ಅದೇ ಸಂ-೭೮

೪೪. ಅದೇ ಸಂ-೦೩

೪೫. ಅದೇ ಸಂ-೬೪

೪೬. ಅದೇ ಸಂ-೫೮

೪೭. ಅದೇ ಸಂ-೫೯

೪೮. ಅದೇ ಸಂ-೪೪

೪೯. ಅದೇ ಸಂ-೪೭

೫೦. ಅದೇ ಸಂ-೩೨

೫೧. ಅದೇ ಸಂ-೭೧

೫೨. ಅದೇ ಸಂ-೩೯

೫೩. ಅದೇ ಸಂ-೮೦

೫೪. ಅದೇ ಸಂ-೨೩

೫೫. ಅದೇ ಸಂ-೮೨

೫೬. ಅದೇ ಸಂ-೫೯

೫೭. ಅದೇ ಸಂ-೫೪

೫೮. ಅದೇ ಸಂ-೪೮

೫೯. ಅದೇ ಸಂ-೩೯

೬೦. ಅದೇ ಸಂ-೧೫

೬೧. ಅದೇ ಸಂ-೧೫

೬೨. SII, XX, No.46

೬೩. ಅದೇ ಸಂ-೭೮

೬೪. ಅದೇ ಸಂ-೩೦

೬೫. ಅದೇ ಸಂ-೧೮

೬೬. ಅದೇ ಸಂ-೦೧

೬೭. ಅದೇ ಸಂ-೭೮

೬೮. ಅದೇ ಸಂ-೬೦

೬೯. ಅದೇ ಸಂ-೪೧ & ೪೯

೭೦. ಅದೇ ಸಂ-೭೩

೭೧. ಅದೇ ಸಂ-೪೨

೭೨. ಅದೇ ಸಂ-೦೨

೭೩. ಅದೇ ಸಂ-೦೧

೭೪. ಅದೇ ಸಂ-೬೯

೭೫. ಅದೇ ಸಂ-೩೩

೭೬. ಅದೇ ಸಂ-೬೧

೭೭. ಅದೇ ಸಂ-೧೦೦

೭೮. ಅದೇ ಸಂ-೫೪

೭೯. ಅದೇ ಸಂ-೦೬

೮೦. ಅದೇ ಸಂ-೩೬

೮೧. ಅದೇ ಸಂ-೫೪

೮೨. ಅದೇ ಸಂ-೪೪

೮೩. ಅದೇ ಸಂ-೩೮

೮೪. ಅದೇ ಸಂ-೦೨

೮೫. ಅದೇ ಸಂ-೦೭

೮೬. ಅದೇ ಸಂ-೦೨

೮೭. ಅದೇ ಸಂ-೨೫ & ೩೨

೮೮. ಅದೇ ಸಂ-೩೭

೮೯. ಅದೇ ಸಂ-೪೮

೯೦. ಅದೇ ಸಂ-೫೧ & ೭೧

೯೧. ಅದೇ ಸಂ-೨೫

೯೨. ಅದೇ ಸಂ-೮೧

೯೩. ಅದೇ ಸಂ-೫೯

೯೪. ಅದೇ ಸಂ-೭೮

೯೫. ಅದೇ ಸಂ-೫೦

೯೬. ಅದೇ ಸಂ-೧೬

೯೭. ಅದೇ ಸಂ-೩೪

೯೮. ಅದೇ ಸಂ-೩೪

೯೯. ಅದೇ ಸಂ-೦೩

೧೦೦. ಅದೇ ಸಂ-೦೬

೧೦೧. ಅದೇ ಸಂ-೦೧

೧೦೨. ಅದೇ ಸಂ-೫೮

೧೦೩. ಅದೇ ಸಂ-೫೧

೧೦೪. ಅದೇ ಸಂ-೨೬

೧೦೫. ಅದೇ ಸಂ-೨೯

೧೦೬. ಕಲಬುರ್ಗಿ ಎಂ.ಎಂ., **ಶಾಸನಗಳಲ್ಲಿ ಶಿವಶರಣರು**, ಪುಟ-೧೨

೧೦೭. ಅದೇ

೧೦೮. ಪಡಶೆಟ್ಟಿ ಎಂ.ಎ., ೧೯೮೬, **ಕೊಂಡುಗುಳಿ ಕೇಶಿರಾಜ**, ಪು.೬೩

೧೦೯. SII, XX, No.69, 1107 A.D

೧೧೦. EI XXXVIII(iv),P-189, 1132 A.D

೧೧೧. SII, XX, No.69, 1107 A.D.

೧೧೨. ಅದೇ ಸಾಲುಗಳು ೩೦ ರಿಂದ ೪೦

೧೧೩. ಕಲಬುರ್ಗಿ ಎಂ.ಎಂ., **ಕೊಂಡಗುಳಿ ಕೇಶಿರಾಜನ ಕೃತಿಗಳು**, ಪು–೧೬

೧೧೪. ಅದೇ

೧೧೫. EI V,215,1200 A.D.

೧೧೬. EI XIII(i) 83, 1281 A.D.

೧೧೭. SII, XV, No.56, 1184 A.D.

೧೧೮. INKKS No.21

೧೧೯. ಅದೇ (೦) ಕ್ರಿ.ಶ. ೧೧೭೮

೧೨೦. ಕಲಬುರ್ಗಿ ಎಂ.ಎಂ., **ಶಾಸನಗಳಲ್ಲಿ ಶಿವಶರಣರು**, ಪುಟ–೩೩

೧೨೧. ಅದೇ, ಪುಟ–೯೦

೧೨೨. INKKS P-೮೧

೧೨೩. EC, V (ii), ಅರಸಿಕೇರಿ೧೧೯, ಕ್ರಿ.ಶ.೧೨೫೯

೧೨೪. EI Vol, XXI, P-೦೯, ಕ್ರಿ.ಶ.೧೨೬೦

೧೨೫. J.K.V (Humanities) Vol-II, No.2, P-73 and 75

೧೨೬. EC, Vol-XI, ಜಗಳೂರು–೩೦, ಕ್ರಿ.ಶ. ೧೨೮೦

೧೨೭. EC, Vol-III, ಮಂಡ್ಯ–೮೩, ಕ್ರಿ.ಶ. ೧೨೮೦

೧೨೮. SII,Vol- XVI, No,೩೧೮, ೧೬೨೪ A.D.

೧೨೯. EC, Vol-XII, ಮದ್ದಗಿರಿ–೦೮, ಕ್ರಿ.ಶ. ೧೬೮೬

೧೩೦. SII,Vol- XX, No,೬೫೦, ೧೬೬೦ A.D.

೧೩೧. ವಾಸುದೇವ ಬಡಿಗೇರ (ಸಂ.), ಬಸವನ–ಬಾಗೇವಾಡಿ, ಪುಟ–೧೬೦

೧೩೨. ಕಲಬುರ್ಗಿ ಎಂ.ಎಂ., ೧೯೭೩, **ಬಸವಣ್ಣನವರನ್ನು ಕುರಿತ ಶಾಸನಗಳು**, ಪು–೬೨

೧೩೩. SII,Vol- XX, No,೧೩೮, ೧೧೬೨ A.D.

೧೩೪. ಕಲಬುರ್ಗಿ ಎಂ.ಎಂ., **ಶಾಸನಗಳಲ್ಲಿ ಶಿವಶರಣರು,** ಪು-೮೪

೧೩೫. SII,Vol- XX, No,೧೨೭

೧೩೬. SII,Vol- XX, No,೧೮೦, ೧೧೯೨ A.D.

೧೩೭. SII,Vol- XX, No,೩೪೩, ೧೩ th cent

೧೩೮. ಕಲಬುರ್ಗಿ ಎಂ.ಎಂ., **ಶಾಸನಗಳಲ್ಲಿ ಶಿವಶರಣರು,** ಪು-೪೫

೧೩೯. SII,Vol- XV, No,೫೫, ೧೧೫೭ A.D.

೧೪೦. ಕಲಬುರ್ಗಿ ಎಂ.ಎಂ., **ಶಾಸನಗಳಲ್ಲಿ ಶಿವಶರಣರು,** ಪು-೭೩

೧೪೧. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧೦, ಪು- XII

೧೪೨. ಅದೇ

೧೪೩. ಹಿರೇಮಠ ಆರ್.ಸಿ., ಶ್ರೀ ಸಿದ್ದರಾಮೇಶ್ವರ ವಚನಗಳು, ಪು-೨೭

೧೪೪. ಅದೇ

೧೪೫. SII,Vol- XX, No,೧೭೭, ೧೧೯೦ A.D.

೧೪೬. SII,Vol- XX, No,೧೫೮, ೧೨೧೦ A.D.

೧೪೭. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧೦, ಪು- ೫೨೧

೧೪೮. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧೦, ಪು- ೪೮೪

೧೪೯. ವೀರಶೈವ ಧರ್ಮ ದರ್ಶನ, ಸಂ.೧, ಪು.೨೪೧

೧೫೦. ಚಿದಾನಂದಮೂರ್ತಿ, ಪೂರ್ವೋಕ್ತ, ಪು.೪೦೨

೧೫೧. ಅದೇ, ಪು. ೩೮೧

೧೫೨. ಅದೇ, ಪು. ೧೪೪

೧೫೩. Gururajachar S., Some aspects of Economic and social life in Karnataka, p.129

೧೫೪. ಚಿದಾನಂದಮೂರ್ತಿ, ಪೂರ್ವೋಕ್ತ, ಪು.೧೫೦

೧೫೫. ಅದೇ, ಪು. ೧೪೫

೧೫೬. ಅದೇ, ಪು. ೧೪೪

೧೫೭. ಕಲಬುರ್ಗಿ ಎಂ.ಎಂ., ವಚನ, ಪು. ೪೧೪

೧೫೮. ವೀರಶೈವ ಧರ್ಮ ದರ್ಶನ, ಪೂರ್ವೋಕ್ತ, ಪು. ೨೫೬

೧೫೯. ಅದೇ, ಪು. ೨೫೬

೧೬೦. ಅದೇ, ಪು. ೨೫೭

೧೬೧. ಅದೇ, ಪು. ೨೫೭

೧೬೨. ಚಿದಾನಂದಮೂರ್ತಿ ಎಂ., ವಚನ ಸಾಹಿತ್ಯ, ಪು. ೧೫೦

೧೬೩. ವೀರಶೈವ ಧರ್ಮ ದರ್ಶನ, ಪೂರ್ವೋಕ್ತ, ಪು. ೨೫೮

೧೬೪. ಕಲಬುರ್ಗಿ ಎಂ.ಎಂ., ವಚನ, ಪು. ೪೪೫

೧೬೫. ಆದಿಲ್‌ಶಾಹಿ ಆಸ್ಥಾನ ಸಂಪುಟ, ಪರ್ಮಾನ್ಸ್,

೧೬೬. ಆದಿಲ್‌ಶಾಹಿ ಆಸ್ಥಾನ ಸಂಪುಟ, ಪರ್ಮಾನ್ಸ್,

೧೬೭. ಕರ್ನಾಟಕ ಪರಂಪರೆ ಸಂ.೨, ಪು. ೨೭೧

ಅಧ್ಯಾಯ ಐದು

ಶೈವ ದೇವಾಲಯಗಳು

ಭಾರತದ ಪ್ರತಿ ಹಳ್ಳಿಯಲ್ಲೂ ನದಿ, ಬೆಟ್ಟ, ಗ್ರಾಮದ ಮಧ್ಯ ಹಾಗೂ ಆ ಗ್ರಾಮದ ಸಾರ್ವಜನಿಕ ಸ್ಥಳ ಹೀಗೆ ಒಂದಲ್ಲಾ ಒಂದು ಕಡೆ ದೇವಾಲಯಗಳು ಕಂಡುಬರುತ್ತವೆ. ಆ ದೇವಸ್ಥಾನದಲ್ಲಿರುವ ದೇವತೆ ಗ್ರಾಮದೇವತೆಯಾಗಿರಬಹುದು. ಆ ಊರಿನ ಒಂದು ಪಂಗಡದ ಅಧಿದೇವತೆಯಾಗಿರಬಹುದು. ಒಬ್ಬ ವ್ಯಕ್ತಿ ಆ ಊರಿನ ಅಥವಾ ಸಮಾಜದ ಒಳಿತಿಗಾಗಿ, ತನ್ನ ಹಾಗೂ ಕುಟುಂಬದವರ ಶ್ರೇಯೋಭಿವೃದ್ಧಿಗಾಗಿ ದೇವಸ್ಥಾನವನ್ನು ಕಟ್ಟಿಸಿ ಪೋಷಿಸಿದವನ ಇಷ್ಟ ದೇವತೆಯಾಗಿರಬಹುದು. ಇಲ್ಲಿ ದೇವತೆ ಯಾವುದಾದರೂ ಇದ್ದಿರಬಹುದು ಅದರ ಆರಾಧನೆಯ ಉದ್ದೇಶ, ಹಿನ್ನೆಲೆ, ಎಲ್ಲರಿಗೂ ಒಂದೇ. ಈ ಕಾರಣದಿಂದಲೇ ಪ್ರಾಚೀನ ಕಾಲಘಟ್ಟದಿಂದಲೂ ಭಾರತದಲ್ಲಿ ಅನೇಕ ದೇವಾಲಯಗಳು ರಾಜರ ಅಧಿಕಾರಿಗಳ ಆಶ್ರಯದೊಂದಿಗೆ ಊರಿನ ಜನರ ಪೋಷಣೆಯಲ್ಲಿ ಬೆಳೆದುಬಂದಿವೆ.

ಕರ್ನಾಟಕದ ಶಾಸನಗಳಲ್ಲಿ ದೇವಸ್ಥಾನಗಳು ಕ್ರಿ.ಸ್ತಪೂರ್ವದಿಂದ ಕಂಡುಬಂದರೂ, ಈಗ ಉಳಿದು ಬಂದಿರುವ ದೇವಸ್ಥಾನಗಳಲ್ಲೆಲ್ಲ ಅತ್ಯಂತ ಪ್ರಾಚೀನವಾದುದೆಂದರೆ ತಾಳಗುಂದದ ಪ್ರಣವೇಶ್ವರ ದೇವಾಲಯವಾಗಿದೆ. ಇನ್ನು ಪ್ರಸ್ತುತ ವಿಜಯಪುರ ಜಿಲ್ಲೆಯಲ್ಲಿ ರಾಷ್ಟ್ರಕೂಟರ ದೇವಾಲಯಗಳೇ ಪ್ರಾಚೀನ ದೇವಾಲಯಗಳಾಗಿವೆ. ಅಧ್ಯಯನದ ಕ್ಷೇತ್ರದ ಶಾಸನಗಳಲ್ಲಿ ಹೇರಳವಾಗಿ ಕಂಡುಬರುವ ದೇವಾಲಯಗಳು ಅಂದಿನ ಜನಜೀವನದ ಮೇಲೆ ಮಹತ್ವವಾದ ಪ್ರಭಾವವನ್ನು ಬೀರಿವೆ. ಅಂದು ಅವು ಭಕ್ತಿಯ ಕೇಂದ್ರಗಳಾಗಿರದೇ, ಅಂದಿನ ಸಾಮಾಜಿಕ, ಆರ್ಥಿಕ ಕಾರ್ಯಕಲಾಪಗಳನ್ನು ನಿಭಾಯಿಸುವ ಸಂಸ್ಥೆಗಳಾಗಿದ್ದವು. ದೇವಾಲಯ ನಿರ್ಮಾಣ ಹಾಗೂ ಅವುಗಳ ಪೋಷಣೆಯಲ್ಲಿ ಅಂದಿನ ಅರಸರು ಮತ್ತು ಪ್ರಭು ವರ್ಗದವರ ಪಾತ್ರ ಪ್ರಧಾನವಾಗಿತ್ತು.

ಶೈವ ಸಂಸ್ಕೃತಿಯ ಅಧ್ಯಯನವೆಂದರೆ, ಭಾರತದ ಸಾಮಾಜಿಕ ಜೀವನದ ನಿರಂತರ ವಿಕಾಸದ ಅಧ್ಯಯನವೆಂದೇ ಹೇಳಬೇಕಾಗುತ್ತದೆ.[1] ಭಾರತದ ಅತಿ ಪ್ರಾಚೀನ ಸಂಸ್ಕೃತಿಯ ಹುಟ್ಟು ಮತ್ತು ಅದರ ಬೆಳವಣಿಗೆಯೊಂದಿಗೆ ಶೈವ ಸಂಸ್ಕೃತಿಯು ಬೆಳೆದು ಬಂದಿರುವುದನ್ನು ನಾವು ಸಾಕ್ಷ್ಯಾಧಾರಗಳಿಂದ ಕಾಣಬಹುದಾಗಿದೆ. ಶೈವ ಸಂಸ್ಕೃತಿಯ ಮೂಲವನ್ನು ಅನೇಕ ವಿದ್ವಾಂಸರು ಹರಪ್ಪ ಸಂಸ್ಕೃತಿಯಿಂದಲೇ ಗುರುತಿಸಿದ್ದಾರೆ.[2]

ವಾಯುವ್ಯ ಭಾರತದ ಸಿಂಧೂನದಿಯ ಬಯಲಿನಲ್ಲಿ ೧೯೨೦ರ ವೇಳೆಯಲ್ಲಿ ನಡೆಸಿದ ಉತ್ಖನನಗಳಿಂದ ಲಭ್ಯವಾದ ಪ್ರಾಚ್ಯವಸ್ತುಗಳು ಕ್ರಿ.ಪೂ. ೩೦೦೦ರದ ವೇಳೆಯಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಆರ್ಯೇತರವೆಂದು ಗುರುತಿಸಿರುವ ಸಂಸ್ಕೃತಿಯೊಂದರ ಕುರುಹುಗಳನ್ನು ಒದಗಿಸಿ ಭಾರತದ ಇತಿಹಾಸದ ದಿಗಂತವನ್ನು ಮತ್ತಷ್ಟು ಪ್ರಾಚೀನಕ್ಕೆ ಕೊಂಡೊಯ್ದಿತು. ವೇದ ಕಾಲವನ್ನೇ ಭಾರತೀಯ ಸಂಸ್ಕೃತಿಯ ಪ್ರಾರಂಭಿಕ ಹಂತವೆಂದು ತೀರ್ಮಾನಿಸಿದ್ದ ವಿಶ್ವವು ವೈಧಿಕಪೂರ್ವ ಸಂಸ್ಕೃತಿಯತ್ತ ದೃಷ್ಟಿ ಹರಿಸುವಂತೆ ಮಾಡಿತು. ಆರ್ಯರ ಸಂಸ್ಕೃತಿಗಿಂತ ಮತ್ತು ತೀರಾ ಭಿನ್ನವಾಗಿದ್ದ ನಾಗರೀಕತೆಯ ಕುರುಹುಗಳಾದ ನಗರ ಪದ್ಧತಿ, ಸಂಕೇತಗಳು ಅಥವಾ ಲಿಪಿ ಬಳಕೆ ಮತ್ತು ಕಲಾಪ್ರಜ್ಞೆ ಮುಂತಾದ ಮೂಲಭೂತ ಅಂಶಗಳಲ್ಲಿ ಭಾರತವು ಆರ್ಯರಿಗಿಂತಲೂ ಬಹುಪಾಲು ಮುಂದುವರೆದಿದ್ದು ಕಂಡುಬಂದಿತು. ವಿಶ್ವದ ಪ್ರಾಚೀನ ನಾಗರೀಕತೆಗಳ ಸಾಲಿನಲ್ಲಿ ನಿಲ್ಲಬಹುದಾದ ಸಂಸ್ಕೃತಿಯೊಂದು ಬೆಳಕಿಗೆ ಬಂದಿತು. ಮೂರು ಮುಖಗಳನ್ನು ಹೊಂದಿರುವ ಯೋಗಿಯೊಬ್ಬನು ಸಿದ್ಧಾಸನದಲ್ಲಿ ಕುಳಿತಿರುವ ಮುದ್ರೆ ಒಂದಾದರೆ ಒಂದೇ ದೇಹದಲ್ಲಿ ಪುರುಷ ಮತ್ತು ಸ್ತ್ರೀ ಅಂಗಗಳನ್ನು ಪಡೆದಿರುವ ಮತ್ತೊಂದು ಸಮ್ಮಿಶ್ರ ರೂಪ. ಇವಿಷ್ಟೇಅಲ್ಲದೆ ಲಭ್ಯವಾಗಿರುವ ಗೂಳಿ ಮುಂತಾದ ಅನೇಕ ಪ್ರಾಣಿಗಳ ಮುದ್ರೆಗಳ ರಚನೆಗಳು, ಲಿಂಗಾಕಾರಗಳು ಶೈವ ಸಂಸ್ಕೃತಿಯ ಛಾಯೆಗಳನ್ನು ಗುರುತಿಸಲು ವಿದ್ವಾಂಸರಿಗೆ ಪ್ರೇರಣೆ ನೀಡಿರುವ ಪ್ರಮುಖ ಆಕರಗಳಾದವು. ಅಲ್ಲದೇ ಶೈವ ಸಂಸ್ಕೃತಿಗೆ ಪೂರಕವಾದ ಶಕ್ತಿಪೂಜೆ ಅಥವಾ ಮಾತೃ ಪೂಜೆಯ ಕುರುಹುಗಳು ಹರಪ್ಪ ನೆಲದಲ್ಲಿ ಕಂಡುಬಂದಿದೆ. ಈ ಅಂಶವನ್ನು ಗಮನಿಸಿದಾಗ ಶೈವ ಸಂಸ್ಕೃತಿಯು ಭಾರತದಲ್ಲಿ ಸಿಂಧೂ ಬಯಲಿನ ನಾಗರೀಕತೆಯಿಂದಲೂ ಇತ್ತೆಂದು ಹೇಳಬಹುದು. ಶೈವ ಧರ್ಮದ ತತ್ವಗಳು ಆಗಮಗಳಲ್ಲಿಯೂ ಕಂಡುಬರುತ್ತವೆ. ಅಂದರೆ ಶೈವ ಆಗಮ, ಶೈವ ಉಪನಿಷತ್, ಲಿಂಗಪುರಾಣ, ಶಿವಪುರಾಣ, ಸ್ಕಂದಪುರಾಣ, ಮತ್ಸ್ಯಪುರಾಣ, ಕೂರ್ಮಪುರಾಣ ಮುಂತಾದವುಗಳಲ್ಲಿ ಉಲ್ಲೇಖವಿದೆ.[೩] ಇವುಗಳಲ್ಲಿ ಶಿವನನ್ನು ಆರಾಧ್ಯದೈವವಾಗಿ ಪೂಜಿಸುವ ಆಗಮಗಳು ಶೈವಾಗಮಗಳೆಂದು ಕರೆಯಲಾಯಿತು. ಶಿವನನ್ನು ರುದ್ರನಿಗೆ ಅನ್ವಯಿಸಲಾಗಿದೆ.[೪] ರುದ್ರ ಎಂದರೆ ಗರ್ಜಿಸುವವನು ಎಂದರ್ಥ. ಇವನ ವಾಸಸ್ಥಾನವು ಪರ್ವತಗಳಲ್ಲಿ, ಈತನು ಜಟೆಯನ್ನು ಎತ್ತಿಕಟ್ಟಿ, ಚರ್ಮವನ್ನು ಧರಿಸಿದ್ದಾನೆ. ಸ್ವಭಾವತಃ ಭಯಂಕರನಾದ ಇವನನ್ನು ಶೈವಧರ್ಮೀಯರು ಶಿವ ಎಂದು ಪೂಜಿಸುತ್ತಾರೆ.[೫]

ಶೈವ ಸಂಪ್ರದಾಯಕ್ಕೆ ಸೇರಿದವರು ಶಿವನನ್ನು ಲಿಂಗದ ರೂಪದಲ್ಲಿರುವ ಶಿಲ್ಪಕ್ಕೆ ಪೂಜೆಗಳನ್ನು ಮಾಡುವ ಸಂಪ್ರದಾಯವನ್ನು ಪ್ರಾರಂಭಿಸಿದರು. ಲಿಂಗಪೂಜೆಯ ಆರಂಭ ಇತ್ತೀಚಿನ ಕಾಲದ್ದಾಗಿರಬಹುದಾದರೂ ಇದರ ವ್ಯಾಪ್ತಿ ಬಹು ವಿಸ್ತಾರವಾಗಿದೆ ಹಾಗೂ ಗಮನಾರ್ಹವಾದ

ಅಂಶವಾಗಿದೆ.[೬] ಈ ಲಿಂಗವು ಶಿವನ ಸಂಕೇತವಾಗಿ ಬೆಳೆದು ಬಂದು ಅನಂತರದಲ್ಲಿ ಶಿವನ ವಿವಿಧ ನಿರೂಪಣಾ ಶಿಲ್ಪಗಳು ಬಳಕೆಗೆ ಬಂದವು.

ಕರ್ನಾಟಕದಲ್ಲಿ ಲಭ್ಯವಿರುವ ಶೈವ ದೇವಾಲಯಗಳಲ್ಲೆಲ್ಲಾ ಅತ್ಯಂತ ಪ್ರಾಚೀನವಾದ ಪ್ರಥಮ ದೇವಾಲಯವು ಕದಂಬರ ಕಾಲದಿಂದಲೇ ಪ್ರಾರಂಭವಾಗುತ್ತದೆ ಎಂಬುದು ಮುಖ್ಯ ಸಂಗತಿ. ಕರ್ನಾಟಕದ ಪ್ರಾಚೀನ ಶೈವ ದೇವಾಲಯ ಶಿವಮೊಗ್ಗ ಜಿಲ್ಲೆಯ ತಾಳಗುಂದದಲ್ಲಿರುವ ಕ್ರಿ.ಶ.೪೫೦ರ ಕದಂಬ ಶಾಂತಿವರ್ಮನ ಶಾಸನವುಳ್ಳ ಪ್ರಣವೇಶ್ವರ ದೇವಾಲಯವಾಗಿದೆ.[೭]

ಕ್ರಿ.ಶ. ೪೫೦ರಲ್ಲಿ ಬಾದಾಮಿ ಚಾಳುಕ್ಯರ ಕಾಲದಲ್ಲಿ ಐಹೊಳೆಯಲ್ಲಿ ಕಟ್ಟಿರುವ ಲಾಢಖಾನ್ ದೇವಾಲಯವನ್ನು ಶೈವ ದೇವಾಲಯವೆಂದು ಶ್ರೀನಿವಾಸ ಪಾಡಿಗಾರ್ ಅವರು ಗುರುತಿಸಿದ್ದಾರೆ. ಶೈವಧರ್ಮಕ್ಕೆ ಸೇರಿದ ಶಿಲ್ಪಗಳನ್ನು ಇಲ್ಲಿ ಕಾಣಬಹುದು. ಪ್ರಸ್ತುತ ತಾಳಗುಂದದಲ್ಲಿ ಈ ಅರಸನ ಸ್ತಂಭಶಾಸನವೊಂದು ಈ ದೇವಾಲಯದ ಮಾಹಿತಿಯನ್ನು ನೀಡುತ್ತದೆ. ಬಾದಾಮಿಯ ಬಳಿ ಇರುವ ಮಹಾಕುಟೇಶ್ವರ ದೇವಾಲಯ ಕ್ರಿ.ಶ.೬೦೨ರ ಮಂಗಳೇಶನ ಶಾಸನದಲ್ಲಿ ದುರ್ಲಭದೇವಿ ಎಂಬುವವಳು ಮಕುಟೇಶ್ವರನಿಗೆ ದಾನದತ್ತಿಯನ್ನು ನೀಡಿದ ಉಲ್ಲೇಖವಿದೆ.[೮]

ದಕ್ಷಿಣ ಭಾರತದಲ್ಲಿ ಇತಿಹಾಸ ಪೂರ್ವಕಾಲದಿಂದಲೂ ಶೈವ ಮತ ಪ್ರಚಾರದಲ್ಲಿತ್ತೆಂದು ಸಂಪ್ರದಾಯ ಪರಂಪರೆ ಹೇಳುತ್ತದೆ.[೯] ದಕ್ಷಿಣ ಭಾರತದಲ್ಲಿ ನಟರಾಜನಮೂರ್ತಿ ಶಿಲ್ಪವನ್ನು ಕೆತ್ತಿ ಹೆಚ್ಚಾಗಿ ಪ್ರಚುರಪಡಿಸಿದ ಖ್ಯಾತಿ ಬಾದಾಮಿ ಚಾಳುಕ್ಯರಿಗೆ ಸಲ್ಲಬೇಕು. ನಟರಾಜ ಶಿವನಲ್ಲದೆ ಹರಿಹರ, ಅರ್ಧನಾರೀಶ್ವರ, ಮಹಿಷಮರ್ದಿನಿ ಮುಂತಾದ ಶಿಲ್ಪಗಳನ್ನು ಕೆತ್ತಿದರು. ಬಾದಾಮಿ ಚಾಳುಕ್ಯರಿಂದ ಸ್ಫೂರ್ತಿ ಪಡೆದು ಪಲ್ಲವ, ರಾಷ್ಟ್ರಕೂಟರು, ಚೋಳರು, ಪಾಂಡ್ಯರು, ಕಲ್ಯಾಣದ ಚಾಳುಕ್ಯರು, ಹೊಯ್ಸಳರು ಮತ್ತು ವಿಜಯನಗರದ ಅರಸರು ಶಿವನ ಮೂರ್ತಿಯ ಶಿಲ್ಪಗಳಿಗೆ ಹೆಚ್ಚಿನ ಪ್ರೇರಣೆ ನೀಡಿದರು.[೧೦]

ಹೀಗೆ ಶಿವನ ಪೂಜೆ ಲಿಂಗರೂಪದಲ್ಲಿ ಮತ್ತು ಮೂರ್ತಿರೂಪದಲ್ಲಿ ಪ್ರಚಲಿತಗೊಂಡು ಶಿವನ ಜೊತೆಯಲ್ಲೇ ಅವನ ಶಕ್ತಿ ದೇವತೆಯಾದ ಪಾರ್ವತಿ, ಸ್ಕಂದ, ವೃಷಭ, ಗಣಪತಿ ಇವರಿಗೂ ಪೂಜೆ ಸಲ್ಲಿಸುವ ಪದ್ಧತಿ ರೂಢಿಗೆ ಬಂದಿತು. ಅನಂತರದಲ್ಲಿ ಲಕುಲೀಶ ಮತ್ತು ಪಾಶುಪತರೆಂಬ ಎರಡು ಪಂಥಗಳು ಹುಟ್ಟಿಕೊಂಡವು.[೧೧]

ಪಾಶುಪತರಿಗೆ ಕಾಳಮುಖರೆಂದು ಸಹ ಕರೆಯುತ್ತಾರೆ. ಲಾಕುಲ ಎಂಬ ಪಂಥದಲ್ಲಿ ದಂಡವನ್ನು ಹಿಡಿದು ಕುಳಿತ ಲಕುಲೀಶ ಎಂಬ ವ್ಯಕ್ತಿಯನ್ನು ಸೂಚಿಸುವುದಾಗಿರುತ್ತದೆ.[೧೨] ಆದರೆ

ಇತ್ತೀಚಿನ ಸಂಶೋಧನೆಗಳು ಕಾಳಾಮುಖ ಮತ್ತು ಪಾಶುಪತ ಪಂಥಗಳು ಭಿನ್ನವೆಂದು ಸಗರ ಮತ್ತು ಶಿರಸಂಗಿಯಲ್ಲಿ ದೊರೆತಿರುವ ಶಾಸನಗಳಿಂದ ತಿಳಿದುಬರುತ್ತದೆ.

ಲಕುಲೀಶನ ಮೂರ್ತಿಗಳನ್ನು ೭–೮ನೇ ಶತಮಾನದಲ್ಲಿ ನಿರ್ಮಾಣವಾದ ಪಟ್ಟದಕಲ್ಲು ಮತ್ತು ಮಲ್ಲಿಕಾರ್ಜುನ ದೇವಾಲಯಗಳ ಭಿತ್ತಿಗಳ ಮೇಲೆ ಕೆತ್ತಲಾಗಿದೆ.[೧೩]

ಕಾಳಮುಖರು ಒಬ್ಬ ಯತಿಯೆಂದು (ಸನ್ಯಾಸಿ) ಎಂದು ಪೂಜಿಸುತ್ತಾರೆ.[೧೪] ಈ ರೀತಿಯ ಶಿಲ್ಪಗಳನ್ನು ಹೊಯ್ಸಳ ಕಾಲದ ದೇವಾಲಯಗಳ ಭಿತ್ತಿ ಶಿಲ್ಪಗಳಲ್ಲಿ ಕಾಣಬಹುದು. ಹೀಗೆ ಹತ್ತು ಹಲವಾರು ವಿಷಯಗಳನ್ನು ಸೇರಿಸಿಕೊಂಡು ಹುಟ್ಟಿದ ಶೈವಧರ್ಮದ ದೇವಾಲಯಗಳು ವಿಜಯಪುರ ಜಿಲ್ಲೆಯಲ್ಲಿ ರಾಷ್ಟ್ರಕೂಟರ ಅರಸರ ಕಾಲಾವಧಿಯಿಂದ ನಿರ್ಮಾಣವಾಗಿರುವುದನ್ನು ಕಾಣುತ್ತೇವೆ. ಅದರಲ್ಲಿ ಕಲ್ಯಾಣ ಚಾಳುಕ್ಯರ ಅವಧಿಯಲ್ಲಿ ನೂರಾರು ದೇವಾಲಯಗಳು ಜಿಲ್ಲೆಯಲ್ಲಿ ನಿರ್ಮಾಣಗೊಂಡಿವೆ. ಕಳಚೂರಿಯರ ಕಾಲಾವಧಿಯಲ್ಲಿ ಕೆಲವೊಂದು ದೇವಾಲಯಗಳು ನಿರ್ಮಾಣವಾದರೂ ಸಹ ಅವುಗಳನ್ನು ಗುರುತಿಸುವಲ್ಲಿ ಶಾಸನಗಳೇ ಅತಿ ಉಪಯುಕ್ತವಾಗಿ ಕಂಡುಬರುತ್ತವೆ. ಆದರೂ ಈ ಅವಧಿಯಲ್ಲಿ ನಿರ್ಮಾಣವಾದ ದೇವಾಲಯಗಳನ್ನು ಕಳಚೂರಿ ಮತ್ತು ಅವರ ನಂತರದ ಅರಸು ಮನೆತನವಾದ ಸೇವುಣರ ಕಾಲಾವಧಿಯಲ್ಲಿ ಜೀರ್ಣೋದ್ಧಾರಗೊಳಿಸಿ ಅನೇಕ ದಾನದತ್ತಿಗಳನ್ನು ಬಿಟ್ಟಿರುವುದನ್ನು ಅಧ್ಯಯನ ಕ್ಷೇತ್ರದ ನೂರಾರು ಶಾಸನಗಳು ಮಾಹಿತಿಯನ್ನು ನೀಡುತ್ತವೆ. ಪ್ರಸ್ತುತ ಅಧ್ಯಯನದಲ್ಲಿ ಸಂಶೋಧನಾ ವಿಷಯಕ್ಕೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ನಿರ್ಮಾಣಗೊಂಡಿರುವ ಪ್ರಮುಖ ಶೈವ ದೇವಾಲಯಗಳು ಮತ್ತು ಅವುಗಳ ಕಲೆ ಮತ್ತು ವಾಸ್ತುಶಿಲ್ಪವನ್ನು ಗುರುತಿಸುವುದರ ಜೊತೆಗೆ ದೇವಾಲಯಗಳ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಶೈವ ಧರ್ಮದ ಪ್ರಸ್ತುತೆಯನ್ನು ಕಟ್ಟಿಕೊಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ನಿಂಬಾಳ

ತಾಲೂಕೂ ಕೇಂದ್ರವಾದ ಇಂಡಿಯಿಂದ ನೈಋತ್ಯ ದಿಕ್ಕಿಗೆ ೨೫ ಕಿ.ಮೀ ಅಂತರದಲ್ಲಿರುವ ನಿಂಬಾಳ ಗ್ರಾಮವು ತನ್ನದೆಯಾದ ಐತಿಹಾಸಿಕ ಮಹತ್ವವನ್ನು ಪಡೆದಿದೆ. ಶಾಸನಗಳು ಈ ಗ್ರಾಮವನ್ನು ನಿಂಬಹಳ್ಳವೆಂದು ಉಲ್ಲೇಖಿಸುತ್ತವೆ. ಗ್ರಾಮದಲ್ಲಿರುವ ಕೋಟಿಶಂಕರಲಿಂಗ ದೇವಾಲಯವು ಕಲ್ಯಾಣ ಚಾಳುಕ್ಯರ ಕಾಲದಲ್ಲಿ ನಿರ್ಮಾಣವಾಗಿದೆ. ತೇದಿಯಿಲ್ಲದ ಕಳಚೂರಿಗಳ ಶಾಸನವೊಂದು ಬೊಮ್ಮರಸ, ಐಚ್ ಮತ್ತು ಕಲ್ಲೆಯ ನಾಯಕರು ಕೂಡಿಕೊಂಡು ಕೋಟಿಶಂಕರಲಿಂಗ ದೇವಾಲಯಕ್ಕೆ ಭೂದಾನ ಮಾಡಿರುವುದನ್ನು ಹೆಸರಿಸುತ್ತದೆ. ಹಾಗಾಗಿ ಈ

ದೇವಾಲಯವು ಶಾಸನ ಹಾಕಿಸಿದ ಕಾಲಘಟ್ಟಕ್ಕಿಂತ ಮುಂಚೆಯೇ ನಿರ್ಮಾಣವಾಗಿರುವುದು ಸ್ಪಷ್ಟವಾಗುತ್ತದೆ. ಗ್ರಾಮದ ಉಳಿದ ಶಾಸನಗಳು ಹಲವಾರು ವ್ಯಕ್ತಿಗಳು ದೇವಾಲಯಕ್ಕೆ ಭೂಮಿ, ನಿವೇಶನ, ಗ್ರಾಮಾದಾಯಗಳನ್ನು ನೀಡಿರುವುದನ್ನು ಹೇಳುತ್ತವೆ. ಪೂರ್ವಾಭಿಮುಖವಾಗಿ ನಿರ್ಮಾಣವಾಗಿರುವ ದೇವಾಲಯವು ದ್ವಿಕೂಟ ಮಾದರಿಯಲ್ಲಿ ಕಪ್ಪುಶಿಲೆಯಲ್ಲಿ ನಿರ್ಮಿಸಲಾಗಿದೆ. ಮೂಲತಃ ಏಕಕೂಟ ಮಾದರಿಯ ದೇವಾಲಯವಾಗಿದ್ದು ನಂತರದಲ್ಲಿ ಮತ್ತೊಂದು ಗರ್ಭಗೃಹವನ್ನು ಸೇರಿಸಲಾಗಿದೆ. ಸಧ್ಯ ಈ ದೇವಾಲಯ ಹಾಳಾಗಿದ್ದು ಏಕಕೂಟ ಮಾದರಿಯಲ್ಲಿಯೇ ಕಂಡುಬರುತ್ತದೆ.

ತಲವಿನ್ಯಾಸವನ್ನು ನೋಡಿದಾಗ ಎರಡು ಗರ್ಭಗೃಹಗಳು, ಎರಡು ಅಂತರಾಳ, ಎರಡು ನವರಂಗ ಹಾಗೂ ಮುಖ ಮಂಟಪಗಳನ್ನು ಹೊಂದಿರುವುದು ಕಂಡುಬರುತ್ತದೆ. ಪೂರ್ವಾಭಿಮುಖವಾಗಿರುವ ಗರ್ಭಗೃಹದಲ್ಲಿ ಯೋನಿಪಾಣಿ ಲಿಂಗವಿದ್ದು, ಇದರ ದ್ವಾರವು ಪಂಚಶಾಖೆಗಳಿಂದ ಕೂಡಿದ್ದು ವಜ್ರ, ಸಿಂಹ, ಪದ್ಮ, ಲತಾಬಳ್ಳಿ, ಸ್ತಂಭಿಕೆಯುಕ್ತ ಶಾಖೆಗಳನ್ನು ಹೊಂದಿದೆ. ಕೆಳಭಾಗದಲ್ಲಿ ಶೈವದ್ವಾರಪಾಲ, ಚಾಮರಧಾರಿಯರ ಕೆತ್ತನೆಗಳಿವೆ. ಅಂತರಾಳ ದ್ವಾರದ ಎರಡು ಪಾರ್ಶ್ವಗಳಲ್ಲಿ ಜಾಲಂಧ್ರಗಳಿವೆ. ಲಲಾಟದಲ್ಲಿ ಗಜಲಕ್ಷ್ಮೀಶಿಲ್ಪವಿದ್ದು, ಉತ್ತರಾಂಗ ಭಾಗದಲ್ಲಿ ನೃತ್ಯ ನಟರಾಜ, ಗಣಗಳು, ಕೀರ್ತಿಮುಖ, ಹಾರ ಮತ್ತು ಮಕರಗಳಿಂದ ಕೂಡಿದ ಸೂಕ್ಷ್ಮಕೆತ್ತನೆಯಿಂದ ಕೂಡಿದ ಮಕರ ತೋರಣವಿದೆ. ಅಂತರಾಳ ಪಾರ್ಶ್ವದ ಭಿತ್ತಿಯ ಅರೆಸ್ತಂಭಗಳ ಮೇಲೆ ಎರಡು ಅಡಿ ಎತ್ತರದ ದ್ವಾರಪಾಲಕರ ಶಿಲ್ಪಗಳನ್ನು ಕೆತ್ತಲಾಗಿದ್ದು ಅಲಂಕಾರಯುಕ್ತವಾಗಿವೆ. ನವರಂಗ ಅಥವಾ ಸಭಾಮಂಟಪಕ್ಕೆ ದಕ್ಷಿಣ ಮತ್ತು ಉತ್ತರ ಭಾಗದಲ್ಲಿ ದ್ವಾರಗಳಿವೆ. ಅದಕ್ಕೆ ಹೊಂದಿಕೊಂಡು ಮುಖಮಂಟಪಗಳ ರಚನೆಯನ್ನು ಕಾಣಬಹುದು. ನವರಂಗ ಮಂಟಪದ ಮಧ್ಯದ ಸ್ತಂಭಗಳು ಪೀಠ, ಪಟ್ಟಿಕೆ, ದಂಡ, ಫಲಕ, ಬೊದುಗೆಗಳನ್ನು ಹೊಂದಿದ್ದು ಶಿಲ್ಪ ಮತ್ತು ಬಳ್ಳಿಗಳ ಅಲಂಕರಣೆಯನ್ನು ಕಾಣಬಹುದು. ಸ್ತಂಭಗಳ ಕೆಳ ಪಟ್ಟಿಕೆಗಳ ಮುಖಗಳ ಕೋಷ್ಠಗಳಲ್ಲಿ ಶೈವ, ವೈಷ್ಣವ ಶಿಲ್ಪಗಳನ್ನು ಕೆತ್ತಲಾಗಿದೆ. ಸಭಾಮಂಟಪಕ್ಕೆ ಹೊಂದಿಕೊಂಡು ಮುಂಭಾಗದಲ್ಲಿ ಇನ್ನೊಂದು ಮಂಟಪವಿದೆ. ಅದರ ಮಧ್ಯದ ನಾಲ್ಕು ಕಂಬಗಳು ಕೆಳಗೆ-ಮೇಲೆ-ಚೌಕ, ಮಧ್ಯ ಅಷ್ಟಭಾಗ ಮತ್ತು ವೃತ್ತಾಕಾರದ ಪಟ್ಟಿಕೆ, ಮೇಲ್ಭಾಗ ಚೌಕಾಕಾರದ ಫಲಕ, ಬೋದಿಗೆಗಳಿಂದ ಕೂಡಿವೆ. ದಕ್ಷಿಣ, ಉತ್ತರ ಭಾಗಗಳಲ್ಲಿ ಅರ್ಧಮುಚ್ಚಿದ ಗೋಡೆಯ ಮೇಲೆ ಇದೆ ಮಾದರಿಯ ಚಿಕ್ಕ ಕಂಬಗಳನ್ನು ನಿಲ್ಲಿಸಲಾಗಿದೆ. ಈ ಮಂಟಪಕ್ಕೆ ಹೊಂದಿಕೊಂಡು ಪಶ್ಚಿಮಾಭಿಮುಖವಾಗಿ ಗರ್ಭಗೃಹ ಇದ್ದು, ಇಂದು ಸಂಪೂರ್ಣವಾಗಿ ಹಾಳಾಗಿದ್ದು ಅಧಿಷ್ಠಾನದ ಅವಶೇಷಗಳು ಮಾತ್ರ ಉಳಿದುಕೊಂಡಿವೆ.

ದೇವಾಲಯದ ಹೊರ ಭಿತ್ತಿಯು ಉಪಾನ, ಜಗತಿ, ಕಂಪ, ಕಂಠ, ತ್ರಿಪಟ್ಟ ಕುಮುದ, ಕಪೋತಗಳಿಂದ ಕೂಡಿದ ಅಧಿಷ್ಠಾನವಿದೆ. ಭಿತ್ತಿಯು ಕರ್ಣ, ಭದ್ರ, ಸಲಿಲಾಂತರಗಳಿಂದ ಕೂಡಿದೆ. ಅಂದರೆ ಹಿಂಬಣೆ ಮುಂಬಣೆಗಳಿಂದ ಕೂಡಿದೆ. ಹಿಂಬಣೆಗಳಲ್ಲಿ ಮುಖ್ಯವಾಗಿ ಮದನಿಕಾ, ವರಾಹ, ಸಂಗೀತ, ನೃತ್ಯ ಸ್ತ್ರೀ ಪುರುಷರು, ಗಣೇಶ, ವಿಷ್ಣು ಇತ್ಯಾದಿ ಶಿಲ್ಪಗಳನ್ನು ಖಂಡರಿಸಲಾಗಿದೆ. ಶಿಲ್ಪಗಳು ಚಟ್ಟರಕಿ, ಕಡ್ಲೇವಾಡ ದೇವಾಲಯಗಳ ಭಿತ್ತಿಗಳ ಶಿಲ್ಪಗಳನ್ನು ಹೋಲುತ್ತವೆ. ದೇವಾಲಯದ ಸುತ್ತಲೂ ಪ್ರಾಕಾರ ವಿದ್ದರೂ ಇಂದು ಸಂಪೂರ್ಣವಾಗಿ ಹಾಳಾಗಿದೆ. ಆದರೆ ಪ್ರಾಕಾರಕ್ಕೆ ಹೊಂದಿಕೊಂಡು ಪೂರ್ವಾಭಿಮುಖವಾಗಿ ಪ್ರವೇಶ ಮಂಟಪವಿದ್ದು ನಾಲ್ಕು ಸ್ತಂಭಗಳಿಂದ ಕೂಡಿದೆ. ಮುಂಭಾಗದ ಹೊರ ಭಿತ್ತಿಯಲ್ಲಿ ಆನೆಗಳ ಶಿಲ್ಪಗಳನ್ನು ಜೋಡಿಸಲಾಗಿದೆ. ದೇವಾಲಯದ ಪ್ರಾಕಾರದ ಒಳಗಡೆ ಪರಿವಾರ ದೇವತೆಗಳನ್ನು ಪ್ರತಿಷ್ಠಾಪಿಸಿ ದೇವಾಲಯಗಳನ್ನು ನಿರ್ಮಿಸಲಾಗಿತ್ತು. ಆದರೆ ಇಂದು ಅವುಗಳ ಅವಶೇಷಗಳು ಮಾತ್ರ ಈ ದೇವಾಲಯದ ಸಂಕೀರ್ಣದೊಳಗೆ ಕಂಡುಬರುತ್ತವೆ. ದೇವಾಲಯದ ಪ್ರಾಕಾರಕ್ಕೆ ಹೊಂದಿಕೊಂಡು ಒಂದು ಕೋಣೆಯನ್ನು ನಿರ್ಮಿಸಲಾಗಿದ್ದು ಅದರಲ್ಲಿ ಹಲವು ಶಿಲ್ಪಗಳನ್ನು ಇಡಲಾಗಿದೆ. ಹದಿನೈದು ಯೋನಿವಾಣಿ ಲಿಂಗಗಳು, ಐದು ನಂದಿ ಶಿಲ್ಪಗಳು, ನಾಲ್ಕು ವೀರಗಲ್ಲುಗಳು, ಸೂರ್ಯ, ಉಮಾಮಹೇಶ್ವರ, ವಿಷ್ಣು, ದೇವಿ, ಗಣೇಶ, ಆರಾಧಕ ಸ್ತ್ರೀ, ಮಹಿಷಾಸುರಮರ್ಧಿನಿ, ಸತಿಗಲ್ಲು, ಜಿನಶಿಲ್ಪ, ಲಕುಲೀಶ ಹೀಗೆ ಇತ್ಯಾದಿ ಶಿಲ್ಪಗಳು ಅಲ್ಲಿ ಕಂಡುಬರುತ್ತವೆ.

ನಂದರಗಿ

ನಂದರಗಿ, ಇಂಡಿ ತಾಲೂಕಿನಲ್ಲಿ ಐತಿಹಾಸಿಕವಾಗಿ ಗುರುತಿಸಲ್ಪಡುವ ಮತ್ತೊಂದು ಗ್ರಾಮ ನಂದರಗಿ. ಇದು ಹೊರ್ತಿ ಗ್ರಾಮದ ಉತ್ತರಕ್ಕೆ ೧೦ ಕಿ.ಮೀ. ಅಂತರದಲ್ಲಿದೆ. ಗ್ರಾಮದಲ್ಲಿ ಸ್ಥಳೀಕವಾಗಿ ಮಲ್ಲಿಕಾರ್ಜುನ ಹೆಸರಿನ ದೇವಾಲಯವಿದ್ದು ತೇದಿಯಿಲ್ಲದ ಶಾಸನವೊಂದು ದಾವಪೇಶ್ವರನೆಂದು ಕರೆಯುತ್ತದೆ. ಮುಂದುವರೆದು ದಾವಪೇಶ್ವರ ದೇವರಿಗೆ ಮಹಾಮಂಡಳೇಶ್ವರ ಬಿಜ್ಜಳನು ಭೂದಾನ ಮಾಡಿದನೆಂದು ತಿಳಿಸುತ್ತದೆ. ಹೀಗಾಗಿ ಶಾಸನ ಹಾಕಿಸುವ ಪೂರ್ವದಲ್ಲಿಯೇ ದೇವಾಲಯ ನಿರ್ಮಾಣವಾಗಿರುವುದು ಸ್ಪಷ್ಟವಾಗುತ್ತದೆ. ಗ್ರಾಮದ ಪೂರ್ವಭಾಗದ ಹಳ್ಳದ ದಂಡೆಯ ಮೇಲೆ ಪೂರ್ವಾಭಿಮುಖವಾಗಿ ಕಪ್ಪುಶಿಲೆಯಿಂದ ಈ ದೇವಾಲಯವು ನಿರ್ಮಿಸಲಾಗಿದೆ. ಏಕಕೂಟ ಮಾದರಿಯಲ್ಲಿರುವ ದೇವಾಲಯವು ತಲವಿನ್ಯಾಸದಲ್ಲಿ ಗರ್ಭಗೃಹ, ಅರ್ಧಮಂಟಪ, ನವರಂಗಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಯೋನಿಪಾಣಿಲಿಂಗವಿದ್ದು, ದ್ವಾರವು ಅಲಂಕಾರಿಕ ದ್ವಾರಶಾಖೆಗಳ ಜೊತೆಗೆ ಶೈವದ್ವಾರಪಾಲ, ಚಾಮರಧಾರಿಯರ ಶಿಲ್ಪ, ಲಲಾಟದಲ್ಲಿ ಗಣೇಶ

ಶಿಲ್ಪಗಳಿಂದ ಕೂಡಿದೆ. ನವರಂಗ ಮಂಟಪವು ಪೂರ್ವದಲ್ಲಿ ಒಂದೇ ದ್ವಾರವನ್ನು ಹೊಂದಿದ್ದು ಇಂದು ಹಾಳಾಗಿದೆ. ಮಧ್ಯದಲ್ಲಿ ನಾಲ್ಕು ತರಂಗಬೊದುಗೆಯುಕ್ತ ಪಟ್ಟಿಕೆಗಳ ನಾಲ್ಕು ಸ್ತಂಭಗಳಿವೆ. ಒಳಭಿತ್ತಿಗಳಲ್ಲಿ ನಾಲ್ಕು ದೇವಕೋಷ್ಠಗಳನ್ನು ಅಳವಡಿಸಲಾಗಿದೆ. ಎರಡು ಕೋಷ್ಠಗಳಲ್ಲಿ ಮಾತ್ರ ಗಣೇಶ, ಸಪ್ತಮಾತೃಕೆಯರ ಶಿಲ್ಪಗಳಿವೆ. ದೇವಾಲಯದ ಹೊರ ಭಿತ್ತಿಯನ್ನು ಗಮನಿಸಿದಾಗ ಅಧಿಷ್ಠಾನ, ಭಿತ್ತಿ, ಕಪೋತ ಭಾಗಗಳು ಮಾತ್ರ ಕಂಡುಬರುತ್ತವೆ. ಅಧಿಷ್ಠಾನವು ಉಪಾನ, ಕೋಷ್ಠಾಲಂಕೃತ ಜಗತಿ, ತ್ರಿಪಟ್ಟಕುಮುದ, ಕಪೋತಗಳಿಂದ ಕೂಡಿದೆ. ಭಿತ್ತಿ ಭಾಗವು ಕರ್ಣ, ಭದ್ರ, ಸಲಿಲಾಂತರಗಳಿಂದ ಕೂಡಿದ್ದು ಭದ್ರಭಾಗದಲ್ಲಿ ದೇವಕೋಷ್ಠಗಳನ್ನು ಕಾಣಬಹುದು. ದೇವಾಲಯವು ವಿನಾಶದ ಅಂಚಿನಲ್ಲಿದ್ದು ಸ್ಥಳೀಯರು ದೇವಾಲಯವನ್ನು ರಕ್ಷಿಸುವ ಉದ್ದೇಶದಿಂದ ಆಧುನಿಕವಾಗಿ ಗೋಡೆಗಳನ್ನು ನಿರ್ಮಿಸಿದ್ದಾರೆ. ಹಾಗಾಗಿ ದೇವಾಲಯದ ಮೂಲ ರೂಪ ಸ್ಪಷ್ಟವಾಗಿ ಕಾಣಬರುವುದಿಲ್ಲ.

ಹೊರ್ತಿ

ಇಂಡಿ ತಾಲೂಕಿನ ಗ್ರಾಮವಾದ ಹೊರ್ತಿಯು ನಿಂಬಾಳದ ಪಶ್ಚಿಮಕ್ಕೆ ೧೦ ಕಿ.ಮೀ ಅಂತರದಲ್ಲಿದೆ. ಸ್ಥಳೀಯವಾಗಿ ರಾಮಲಿಂಗ ದೇಗುಲ ಎಂದು ಕರೆಯಲ್ಪಡುವ ದೇವಾಲಯ ಗ್ರಾಮದ ದಕ್ಷಿಣ ದಿಕ್ಕಿಗೆಯಿದೆ. ದೇವಾಲಯವನ್ನು ಕಪ್ಪುಶಿಲೆಯನ್ನು ಬಳಸಿ ಪೂರ್ವಾಭಿಮುಖವಾಗಿ ನಿರ್ಮಿಸಿದ್ದಾರೆ. ಏಕಕೂಟ ಮಾದರಿಯಲ್ಲಿ ನಿರ್ಮಿಸಿರುವ ದೇವಾಲಯವು ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮಂಟಪಗಳಿವೆ. ಮೂಲ ಗರ್ಭಗೃಹಕ್ಕೆ ಅಭಿಮುಖವಾಗಿ ಮುಚ್ಚಿದ ಅರ್ಧಮಂಟಪ ಕಂಡುಬರುತ್ತದೆ. ಪಶ್ಚಿಮಾಭಿಮುಖವಾಗಿ ನಿರ್ಮಿಸಿರುವ ಇದನ್ನು ನಂತರ ಕಾಲದಲ್ಲಿ ನಿರ್ಮಿಸಲಾಗಿದೆ.

ಮೂಲ ಗರ್ಭಗೃಹದಲ್ಲಿ ಚೌಕಪಾಣಿ ಲಿಂಗವಿದ್ದು ದ್ವಾರವು ಅಲಂಕಾರಿಕ ದ್ವಾರಶಾಖೆಗಳಿಂದ ಕೂಡಿದೆ. ಮೇಲಿನ ಮಂಗಲದಲ್ಲಿ ಗಣೇಶ, ಲಲಾಟದಲ್ಲಿ ದ್ರಾವಿಡ ಶಿಖರ ಪಟ್ಟಿಕೆಗಳು ಕಂಡುಬರುತ್ತವೆ. ಮುಂಭಾಗದ ಚಿಕ್ಕ ಮುಚ್ಚಿದ ಅರ್ಧಮಂಟಪದ ಪ್ರವೇಶದ್ವಾರ ಅರ್ಧಗಂಬ, ಪಟ್ಟಿಕೆಗಳಿಂದ ಕೂಡಿದೆ. ತೆರೆದ ನವರಂಗ ಮಂಟಪದಲ್ಲಿ ನಾಲ್ಕು ಸ್ತಂಭಗಳಿದ್ದು ಅದರ ಸುತ್ತಲೂ ಕಕ್ಷಾಸನವಿದೆ. ಅದರ ಮೇಲೆ ಎಂಟು ಸ್ತಂಭಗಳಿವೆ. ಮಂಟಪಕ್ಕೆ ಉತ್ತರ ದಕ್ಷಿಣ ಮುಖಮಾಡಿ ಎರಡು ಸ್ತಂಭಗಳ ಮುಖ ಮಂಟಪಗಳಿದ್ದು ಸ್ತಂಭಗಳ ಮೇಲೆ ಮಂಜೂರು ಮುಂದಕ್ಕೆ ಇಳಿಬಿದ್ದಿದೆ. ದೇವಾಲಯವನ್ನು ಐದು ಅಡಿ ಎತ್ತರದ ವೇದಿಕೆಯ ಮೇಲೆ ಕಟ್ಟಲಾಗಿದ್ದು ಸುತ್ತಲೂ ಪ್ರದಕ್ಷಿಣಾ ಪಥದಂತೆ ಕಂಡುಬರುತ್ತದೆ. ಇದೊಂದು ನಿರಂಧಾರ ಮಾದರಿಯ ದೇವಾಲಯಕ್ಕೆ ಉತ್ತಮ

ಉದಾಹರಣೆಯಾಗಿದೆ. ವೇದಿಕೆಯ ಮೇಲೆ ನಿರ್ಮಿಸಲಾದ ದೇವಾಲಯದ ಅಧಿಷ್ಠಾನದಲ್ಲಿ ಉಪಾನ, ಜಗತಿ, ತ್ರಿಪಟ್ಟಕುಮುದ, ಶಿಲ್ಪಾಲಂಕೃತ ಕಪೋತಗಳಿವೆ. ಹೊರ ಭಿತ್ತಿಯು ಕರ್ಣ, ಭದ್ರ, ಪ್ರತಿಭದ್ರ, ಸಲಿಲಾಂತರಗಳಿಂದ ಕೂಡಿದ್ದು, ಭಿತ್ತಿಯ ಮೇಲೆ ಹೊರ ಭಿತ್ತಿಯು ಕೂಟ ನಾಗರ ಶಿಖರವುಳ್ಳ ಸ್ತಂಭಪಂಜರ ಹಾಗೂ ಅಲಂಕಾರಿಕ ಮಂಜೂರುಗಳಿಂದ ಕೂಡಿದೆ.

ಹಿರೇಬೇವಿನೂರು

ಇಂಡಿ ತಾಲೂಕಿನ ಗ್ರಾಮವಾದ ಹಿರೇಬೇವಿನೂರು, ಇಂಡಿಯ ಈಶಾನ್ಯ ದಿಕ್ಕಿಗೆ ೧೮ ಕಿ.ಮೀ. ದೂರದಲ್ಲಿದೆ. ಐತಿಹಾಸಿಕ ಮಹತ್ವವನ್ನು ಪಡೆದ ಗ್ರಾಮ ಹಿಂದೆ ೩೬ ಗ್ರಾಮಗಳ ರಾಜಧಾನಿಯಾಗಿತ್ತು. ಗ್ರಾಮದಲ್ಲಿ ಪ್ರಾಗೈತಿಹಾಸಿಕ ಕಾಲದ ನೂತನ ಶಿಲಾಯುಗ, ತಾಮ್ರಶಿಲಾಯುಗ ಮತ್ತು ಬೃಹತ್ ಶಿಲಾಯುಗಕ್ಕೆ ಸಂಬಂಧಿಸಿದ ಇಬ್ಬದಿ ನೀಳಚಕ್ಕೆ, ಕಪ್ಪು ವರ್ಣದಲ್ಲಿ ಚಿತ್ರಿಸಿದ ಕೆಂಪು ಮಡಕೆಭಾಗ, ನಯಗೊಳಿಸಿದ ಉಪಕರಣಗಳು ದೊರೆತಿವೆ.[೧೫] ಜೊತೆಗೆ ಚಾಳುಕ್ಯ ಮತ್ತು ಯಾದವರ ನಾಲ್ಕು ಶಾಸನಗಳು, ಚಾಳುಕ್ಯರ ಕಾಲದಲ್ಲಿ ನಿರ್ಮಾಣವಾದ ಎರಡು ದೇವಾಲಯಗಳು ಕಂಡುಬರುತ್ತವೆ. ಸ್ಥಳೀಕವಾಗಿ ಮಲ್ಲಿಕಾರ್ಜುನ ಹೆಸರಿನಿಂದ ಕರೆಯಲ್ಪಡುವ ದೇವಾಲಯ ಗ್ರಾಮದ ಉತ್ತರಭಾಗಕ್ಕೆ ಹತ್ತಿಕೊಂಡಿದೆ. ಸಿದ್ಧೇಶ್ವರ ಹೆಸರಿನ ದೇವಾಲಯ ಗ್ರಾಮದ ಮಧ್ಯದಲ್ಲಿದೆ. ತೇದಿಯಿಲ್ಲದೆ ಶಾಸನವೊಂದು ಭೋಗನಾಥ, ರೇವಣಸಿದ್ಧ, ಮಲ್ಲಿಕಾರ್ಜುನ ತಲೆಯಕಾವ ರಾಮೇಶ್ವರ, ಮೈಲಾರದೇವ ಮತ್ತು ಬ್ರಹ್ಮೇಶ್ವರ ದೇವಾಲಯಗಳನ್ನು ಹೆಸರಿಸುತ್ತದೆ. ಶಾಸನ ಉಲ್ಲೇಖಿಸಿದ ಭೋಗೇಶ್ವರ, ರೇವಣಸಿದ್ಧ ಹಾಗೂ ಮಲ್ಲಿಕಾರ್ಜುನ ದೇವಾಲಯಗಳು ಬಹುಶಃ ತ್ರಿಕೂಟ ಮಾದರಿಯಲ್ಲಿರುವ ಮಲ್ಲಿಕಾರ್ಜುನ ದೇವಾಲಯವಾಗಿರಬೇಕು. ಕ್ರಿ.ಶ. ೧೧೨೪ರ ಶಾಸನವು ದೇವಶಕ್ತಿ ಪಂಡಿತನು ಭೋಗೇಶ್ವರ ದೇವರನ್ನು ಪ್ರತಿಷ್ಠಾಪಿಸಿದನೆಂದು ಉಲ್ಲೇಖಿಸುತ್ತ ಶಿಲಾಹಾರ ಗೋವಣರಸ ಮತ್ತು ಪಾಕರಸಾದಿಗಳ ಹಾಗೂ ಇತರರು ಸೇರಿ ದೇವಾಲಯಕ್ಕೆ ಭೂಮಿಯನ್ನು ದಾನ ಮಾಡಿದರೆಂದು ಹೇಳುವುದರಿಂದ ದೇವಾಲಯವು ಶಾಸನ ಹೊರಡಿಸಿರುವ ಕಾಲಾವಧಿಯಲ್ಲಿಯೇ ನಿರ್ಮಾಣವಾಗಿರಬೇಕು. ಸದ್ಯ ಗ್ರಾಮದಲ್ಲಿ ಮಲ್ಲಿಕಾರ್ಜುನ (ತ್ರಿಕೂಟ) ಹಾಗೂ ಸಿದ್ದೇಶ್ವರ ದೇವಾಲಯಗಳನ್ನು ಹೊರತುಪಡಿಸಿ ಶಾಸನ ಹೆಸರಿಸುವ ಉಳಿದ ದೇವಾಲಯಗಳು ಕಂಡುಬರುವುದಿಲ್ಲ.

ಮಲ್ಲಿಕಾರ್ಜುನ ದೇವಾಲಯ

ಮಲ್ಲಿಕಾರ್ಜುನ ದೇವಾಲಯವು ತ್ರಿಕೂಟ ಮಾದರಿಯಲ್ಲಿ ಕಟ್ಟಲ್ಪಟ್ಟಿದ್ದು, ತಲವಿನ್ಯಾಸದಲ್ಲಿ ಮೂರು ಗರ್ಭಗೃಹ, ಅಂತರಾಳ, ನವರಂಗ ಮಂಟಪ ಹಾಗೂ ಮುಖಮಂಟಪಗಳಿಂದ ಕೂಡಿದೆ. ಪೂರ್ವಾಭಿಮುಖವಾಗಿರುವ ಗರ್ಭಗೃಹದಲ್ಲಿ ಯೋನಿಪಾಣಿ ಲಿಂಗವಿದ್ದು ದ್ವಾರವು ಅಲಂಕಾರಿಕ ದ್ವಾರಶಾಕೆ ಹಾಗೂ ಲಲಾಟದಲ್ಲಿ ಗಣೇಶ ಶಿಲ್ಪವಿದೆ. ದಕ್ಷಿಣ ಮತ್ತು ಉತ್ತರಾಭಿಮುಖವಾಗಿರುವ ಗರ್ಭಗೃಹಗಳಲ್ಲಿಯೂ ಯೋನಿಪಾಣಿ ಲಿಂಗಗಳಿವೆ. ಗರ್ಭಗೃಹಗಳ ಲಿಂಗಗಳನ್ನು ಸ್ಥಳೀಕರು ಮಲ್ಲಿಕಾರ್ಜುನ, ರೇವಣಸಿದ್ಧ, ಸಿದ್ಧರಾಮೇಶ್ವರ ಎಂಬ ಹೆಸರಿನಿಂದ ಕರೆಯುತ್ತಾರೆ. ಮೂರು ಗರ್ಭಗೃಹಗಳಿಗೆ ಹತ್ತಿಕೊಂಡು ಮಧ್ಯದಲ್ಲಿ ನವರಂಗ ಮಂಟಪವಿದ್ದು ನಾಲ್ಕು ಸ್ತಂಭ ಹಾಗೂ ನಾಲ್ಕು ಕೋಷ್ಠಗಳಿಂದ ಕೂಡಿದೆ. ನವರಂಗ ಭಾಗಕ್ಕೆ ಹೊಂದಿಕೊಂಡು ಮುಖಮಂಟಪವಿದೆ. ಮುಖಮಂಟಪಕ್ಕೆ ಆಧಾರವಾಗಿ ಎರಡು ಸ್ತಂಭಗಳಿದ್ದು ಅದಕ್ಕೆ ಹೊಂದಿಕೊಂಡಂತೆ ಮಂಜೂರು ಮುಂದಕ್ಕೆ ಇಳಿಬಿದ್ದಿದೆ. ದೇವಾಲಯದ ಅಧಿಷ್ಠಾನವು ನೆಲದಲ್ಲಿ ಹುದುಗಿರುವುದರಿಂದ ಅದರ ಲಕ್ಷಣಗಳು ಗೊತ್ತಾಗುವುದಿಲ್ಲ. ಅಧಿಷ್ಠಾನದ ಮೇಲಿನ ಹೊರಭಿತ್ತಿಯು ಸಪ್ತರಥ ಹಾಗೂ ಪಂಚರಥ ಮಾದರಿಯಲ್ಲಿದೆ. ಪೂರ್ವಮುಖ ಗರ್ಭಗೃಹದ ಮೇಲೆ ಮಾತ್ರ ಪಾವಟಿಕೆ ಮಾದರಿ ಶಿಖರವಿದ್ದು ನಂತರದಲ್ಲಿ ಕಟ್ಟಿದ್ದಾಗಿದೆ.

ಸಿದ್ದೇಶ್ವರ ದೇವಾಲಯ

ಸಿದ್ಧೇಶ್ವರ ಹೆಸರಿನಿಂದ ಕರೆಯಲ್ಪಡುವ ದೇವಾಲಯವನ್ನು ಗ್ರಾಮದ ಮಧ್ಯ ಪೂರ್ವಾಭಿಮುಖವಾಗಿ ಅಗ್ನಿಶಿಲೆಯನ್ನು ಬಳಸಿ ನಿರ್ಮಿಸಲಾಗಿದೆ. ದೇವಾಲಯ ಏಕಕೂಟ ಮಾದರಿ ತಲವಿನ್ಯಾಸದಲಿದ್ದು ಗರ್ಭಗೃಹ, ಅಂತರಾಳ, ನವರಂಗಗಳಿವೆ. ಮುಸ್ಲಿಂ ಕಾಲಾವಧಿಯಲ್ಲಿ ನವರಂಗ ಮಂಟಪದ ಮೇಲ್ಗಡೆ ಗಾರೆ ಗಚ್ಚಿನಿಂದ ಕಮಾನಿನ ರೀತಿಯಲ್ಲಿ ಕಟ್ಟಲಾಗಿದೆ. ಗರ್ಭಗೃಹದಲ್ಲಿ ಲಿಂಗವಿದ್ದು ದ್ವಾರದಲ್ಲಿ ಲತಾತೋರಣ, ಲಲಾಟದಲ್ಲಿ ಲಿಂಗ, ಶೈವ ದ್ವಾರಪಾಲ, ಚೌರಿ ಶಿಲ್ಪಗಳಿವೆ. ನವರಂಗ ಮಂಟಪದಲ್ಲಿ ನಾಲ್ಕು ಸ್ತಂಭಗಳಿದ್ದು ಮೇಲೆ ಗಾರೆಗಚ್ಚಿನಲ್ಲಿ ಕಮಾನುಗಳನ್ನು ಮಾಡಲಾಗಿದೆ. ಗ್ರಾಮದಲ್ಲಿ ಈ ದೇವಾಲಯಗಳ ಜೊತೆಗೆ ಕೆಲವು ಹಳೆಯ ದೇವಾಲಯಗಳಿದ್ದರು, ಮೂಲ ಸ್ವರೂಪ ಕಳೆದುಕೊಂಡು ಜೀರ್ಣಾವಸ್ಥೆಯಲ್ಲಿವೆ.

ಅಗರಖೇಡ

ಇಂಡಿ ತಾಲೂಕಿನ ಗ್ರಾಮವಾದ ಅಗರಖೇಡ ಇಂಡಿಯ ಉತ್ತರಕ್ಕೆ ೨೫ ಕಿ.ಮೀ. ಅಂತರದ ಭೀಮಾನದಿಯ ಬಲದಂಡೆಯ ಮೇಲ್ಗಡೆಯಿದೆ. ಐತಿಹಾಸಿಕ ಮಹತ್ವವುಳ್ಳ ಗ್ರಾಮವನ್ನು ಶಾಸನಗಳು ೧೨ ಗ್ರಾಮಗಳ ಮೊದಲಖೇಡ, ಮೂವತ್ತಾರುಂಬಾಡದ ರಾಜಧಾನಿ ಖೇಡವೆಂದು ಕರೆಯುತ್ತವೆ. ಗ್ರಾಮದ ನಾಲ್ಕು ಶಾಸನಗಳು ಸ್ವಯಂಭು ಕೈಲಾಸ ಸೋಮನಾಥ ದೇವಾಲಯದ ಜೊತೆಗೆ ಇನ್ನೂ ಕೆಲವು ದೇವಾಲಯಗಳನ್ನು ಹೆಸರಿಸುತ್ತವೆ. ಇಂದು ಶಂಕರಲಿಂಗ ಹೆಸರಿನ ತ್ರಿಕೂಟ ಮಾದರಿಯ ದೇವಾಲಯವೊಂದು ಮಾತ್ರ ಗ್ರಾಮದಲ್ಲಿ ಉಳಿದುಕೊಂಡಿದೆ. ಕ್ರಿ.ಶ. ೧೧೧೯ ಹಾಗೂ ಕ್ರಿ.ಶ. ೧೧೧೮ರ ಶಾಸನಗಳು ಸ್ವಯಂಭು ದೇವಾಲಯವನ್ನು ಹೆಸರಿಸುತ್ತಿದ್ದು ಸ್ವಯಂಭು ಹೆಸರಿನ ದೇವಾಲಯ ಸಂಪೂರ್ಣವಾಗಿ ಹಾಳಾಗಿದೆ. ಕ್ರಿ.ಶ. ೧೧೭೦ರ ಶಾಸನ ಕೈಲಾಸ ದೇವಾಲಯವನ್ನು ಹೆಸರಿಸುವುದರಿಂದ ಬಹುಶಃ ಸ್ಥಳೀಕವಾಗಿ ಕರೆಯಲ್ಪಡುವ ಶಂಕರಲಿಂಗ ದೇವಾಲಯವೇ ಶಾಸನೋಕ್ತ ದೇವಾಲಯವಾಗಿರಬೇಕು. ಕ್ರಿ.ಶ. ೧೩೫೧ರ ಶಾಸನ ಸೋಮನಾಥ ದೇವಾಲಯವನ್ನು ಹೆಸರಿಸುತ್ತಿದ್ದು. ಈ ದೇವಾಲಯದ ಅಸ್ತಿತ್ವ ಕಾಣಸಿಗುವುದಿಲ್ಲ.

ಶಂಕರಲಿಂಗನೆಂದು ಕರೆಯುವ ದೇವಾಲಯವು ಗ್ರಾಮದ ದಕ್ಷಿಣಕ್ಕೆ ಕಂಡುಬರುತ್ತದೆ. ದೇವಾಲಯವು ಪೂರ್ವಾಭಿಮುಖವಾಗಿ ಅಗ್ನಿಶಿಲೆಯಲ್ಲಿ ಕಟ್ಟಲ್ಪಟ್ಟಿದೆ. ದೇವಾಲಯವು ಶಾಸನೋಕ್ತ ಕೈಲಾಸ ದೇವಾಲಯವಾಗಿದ್ದು ಕ್ರಿ.ಶ. ೧೧೭೦ರ ಶಾಸನವು ದಂಡನಾಯಕ ಬಸವರಸನಿಂದ ದುಗ್ಗಜಿಯು ಭೂಮಿಯನ್ನು ಪಡೆದು ಖೇಡದ ದೇವಾಲಯಕ್ಕೆ ಭೂದಾನ ನೀಡಿರುವುದನ್ನು ಹೆಸರಿಸುವುದರಿಂದ ಶಾಸನಕ್ಕಿಂತ ಮುಂಚೆ ದೇವಾಲಯ ನಿರ್ಮಾಣವಾಗಿರುವದು ಸ್ಪಷ್ಟವಾಗುತ್ತದೆ. ದೇವಾಲಯವು ತ್ರಿಕೂಟ ಮಾದರಿಯಲ್ಲಿದ್ದು ತಲವಿನ್ಯಾಸದಲ್ಲಿ ಮೂರು ಗರ್ಭಗೃಹ, ಒಂದು ಅಂತರಾಳ, ನವರಂಗ ಮಂಟಪ ಹಾಗೂ ಮುಖಮಂಟಪಗಳಿವೆ. ಪೂರ್ವಾಭಿಮುಖ ಹಾಗೂ ಉತ್ತರಾಭಿಮುಖವಾಗಿರುವ ಗರ್ಭಗೃಹಗಳಲ್ಲಿ ಯೋನಿಪಾಣಿ ಹಾಗೂ ಚೌಕಪಾಣಿ ಲಿಂಗಗಳಿವೆ. ದ್ವಾರಗಳಲ್ಲಿ ಹೆಚ್ಚು ಅಲಂಕಾರ ಕಂಡುಬರುವುದಿಲ್ಲ. ಮಂಗಲದಲ್ಲಿ ಶಿಲ್ಪವಿದ್ದರೆ ಲಲಾಟದಲ್ಲಿ ನಾಗರ ಶಿಖರಗಳಿರುವ ಪಟ್ಟಿಕೆಯಿದೆ.

ನವರಂಗ ಮಂಟಪದಲ್ಲಿ ನಾಲ್ಕು ಸೂಕ್ಷ್ಮ ಕೆತ್ತನೆಯಿಂದ ಕೂಡಿದ ಸ್ತಂಭಗಳಿದ್ದು ಪೀಠ, ಪಟ್ಟಿಕೆ, ಹೂಬಳ್ಳಿ ಅಲಂಕರಣೆ ಕಾಂಡ, ಅಲಂಕಾರಿಕ ಪಟ್ಟಿಕೆ, ಗೋಲ, ಬಳೆ, ತರಂಗ ಬೊದುಗೆಗಳನ್ನು ಹೊಂದಿವೆ. ನವರಂಗಕ್ಕೆ ಒಂದೇ ದ್ವಾರವಿದ್ದು ಅದಕ್ಕೆ ಹೊಂದಿಕೊಂಡಂತೆ ಮುಖಮಂಟಪವಿದ್ದದ್ದು ಕಂಡುಬರುತ್ತದೆ. ಆದರೆ ಇಂದು ಈ ಮುಖಮಂಟಪವು ಸಂಪೂರ್ಣವಾಗಿ ಹಾಳಾಗಿದೆ. ನಂತರ

ಕಾಲದಲ್ಲಿ ದ್ವಾರದ ಎರಡು ಪಾರ್ಶ್ವಗಳಲ್ಲಿ ಭಿತ್ತಿಗಳನ್ನು ನಿರ್ಮಿಸಿ ವರಾಂಡವನ್ನಾಗಿ ಮಾಡಲಾಗಿದೆ. ಭಿತ್ತಿಯ ಕೆಳಗಿರುವ ಅಧಿಷ್ಠಾನ ನೆಲದಲ್ಲಿ ಹುದುಗಿರುವುದರಿಂದ ಸ್ವರೂಪ ಗೊತ್ತಾಗುವುದಿಲ್ಲ. ಹೊರಭಿತ್ತಿಯು ಅಲಂಕಾರಿಕವಾಗಿದೆ. ಗರ್ಭಗೃಹಗಳ ಮೇಲೆ ಪಾವಟಿಕೆಯುಳ್ಳ ಶಿಖರಗಳಿದ್ದು ನಂತರದ ಕಾಲದಲ್ಲಿ ನಿರ್ಮಾಣ ಹೊಂದಿದಂತವುಗಳಾಗಿವೆ. ದೇವಾಲಯದ ಸುತ್ತಲೂ ಪ್ರಾಕಾರವಿದ್ದು ಪೂರ್ವ ಭಿತ್ತಿಯಲ್ಲಿ ದ್ವಾರವಿದ್ದು ನಂತರ ಕಾಲದಲ್ಲಿ ನಿರ್ಮಿಸಲಾಗಿದೆ.

ರೇವತಗಾಂವ

ಇಂಡಿ ತಾಲೂಕಿನ ಪಶ್ಚಿಮಕ್ಕೆ ಕಂಡುಬರುವ ರೇವತಗಾಂವ ಚಡಚಣದಿಂದ ವಾಯವ್ಯ ದಿಕ್ಕಿಗೆ ೧೨ ಕಿ.ಮೀ ಅಂತರದಲ್ಲಿದೆ. ಗ್ರಾಮದಲ್ಲಿ ಮಹದೇವ ಹೆಸರಿನಿಂದ ಕರೆಯಲ್ಪಡುವ ಚಾಳುಕ್ಯರ ಕಾಲದಲ್ಲಿ ನಿರ್ಮಾಣವಾದ ದೇವಾಲಯವಿದ್ದು ಗ್ರಾಮದ ಮಧ್ಯ ಪೂರ್ವಕ್ಕೆ ಮುಖಮಾಡಿದಂತೆ ಅಗ್ನಿ ಶಿಲೆಯನ್ನು ಬಳಸಿ ಕಟ್ಟಲ್ಪಟ್ಟಿದೆ. ದೇವಾಲಯ ಏಕತಾಯನ ಮಾದರಿಯಲ್ಲಿದ್ದು ತಲವಿನ್ಯಾಸದಲ್ಲಿ ಗರ್ಭಗೃಹ, ಅರ್ಧಮಂಟಪ, ನವರಂಗ ಹಾಗೂ ಮುಖಮಂಟಪಗಳಿವೆ. ಗರ್ಭಗೃಹದಲ್ಲಿ ಯೋನಿಪಾಣಿ ಲಿಂಗವಿದ್ದು ದ್ವಾರದ ಲಲಾಟದಲ್ಲಿ ಗಣೇಶನ ಶಿಲ್ಪವಿದೆ. ಉತ್ತರಾಂಗ ಭಾಗದಲ್ಲಿ ದ್ರಾವಿಡ ಮಾದರಿ ಶಿಖರಗಳ ಪಟ್ಟಿಕೆಗಳಿದ್ದು, ಕೆಳಗಡೆ ಶೈವ ದ್ವಾರಪಾಲ, ಚೌರಿ ಶಿಲ್ಪಗಳನ್ನು ಕೆತ್ತಲಾಗಿದೆ.

ನವರಂಗ ಮಂಟಪದಲ್ಲಿ ಅಲಂಕಾರಿಕ ಕೆತ್ತನೆಯ ಹಾಗೂ ತರಂಗ ಬೊದುಗೆಯುಕ್ತ ನಾಲ್ಕು ಸ್ತಂಭಗಳಿದ್ದು ಒಳಗೋಡೆಗಳಲ್ಲಿ ಎರಡು ಕೋಷ್ಠಗಳಿವೆ. ನವರಂಗಕ್ಕೆ ಒಂದು ದ್ವಾರವಿದ್ದು ಮುಖಮಂಟಪ ನಾಲ್ಕು ಸ್ತಂಭಗಳಿಂದ ಕೂಡಿದೆ. ಸ್ತಂಭಗಳ ಮೇಲಿನ ಮಂಜೂರು ಮುಂದಕ್ಕೆ ಇಳಿಬಿದ್ದಿದ್ದು ಇದರ ಮೇಲ್ಗಡೆ ಕಮಲದಾಕಾರವನ್ನು ಹೊಂದಿದೆ. ದೇವಾಲಯವನ್ನು ೮ ಅಡಿ ಎತ್ತರವಿರುವ ಅಧಿಷ್ಠಾನದ ಮೇಲೆ ಕಟ್ಟಲಾಗಿದ್ದು, ಇಂತಹ ಅಧಿಷ್ಠಾನದ ಮೇಲಿರುವ ಭಿತ್ತಿಯು ಕರ್ಣ, ಭದ್ರ, ಸಲಿಲಾಂತರಗಳಿಂದ ಕೂಡಿದೆ.

ಭೂಯ್ಯಾರ

ಇಂಡಿ ತಾಲೂಕಿನ ಗ್ರಾಮವಾದ ಭೂಯ್ಯಾರ, ತಾಲೂಕು ಕೇಂದ್ರದಿಂದ ಈಶಾನ್ಯಕ್ಕೆ ಹಿರೇಬೇವಿನೂರು ಗ್ರಾಮದ ಪೂರ್ವಕ್ಕೆ ೩ ಕಿ.ಮೀ. ಅಂತರದಲ್ಲಿ ಭೀಮಾ ನದಿಯ ಮೇಲ್ಗಡೆಯಿದೆ. ಪ್ರಾಗೈತಿಹಾಸಿಕ ನೆಲೆಯಾದ ಭೂಯ್ಯಾರದಲ್ಲಿ ತಾಮ್ರಶಿಲಾಯುಗ ಹಾಗೂ ಬೃಹತ್ ಶಿಲಾಯುಗ ಮಾನವ ಬಳಸಿದ ವಸ್ತುಗಳು ದೊರಕುತ್ತವೆ. ಸ್ಥಳೀಕವಾಗಿ ಮಲ್ಲಿಕಾರ್ಜುನ ಹೆಸರಿನಿಂದ

ಕರೆಯಲಾಗುವ ದೇವಾಲಯ ಕಲ್ಯಾಣ ಚಾಳುಕ್ಯರ ದೇವಾಲಯವಾಗಿದ್ದು ಶಾಸನಗಳು ಕೂಡಲದೇವ ಹಾಗೂ ಮಲ್ಲಿಕಾರ್ಜುನನೆಂದು ಹೆಸರಿಸುತ್ತವೆ. ಕ್ರಿ.ಶ. ೧೧೬೨ರ ಬಿಜ್ಜಳನ ಶಾಸನವು ಪ್ರಮುಖ ಶಿವಶರಣ ಇಂಡಿಯ ಶಾಂತಯ್ಯನ ಶಿಷ್ಯ ನೆಲುವಿಗೆಯ ಶಾಂತಯ್ಯನು ದೇವಾಲಯದ ಆಚಾರ್ಯನಾಗಿದ್ದನೆಂದು ಹಾಗೂ ಮಲ್ಲಿಕಾರ್ಜುನ ದೇವಾಲಯಕ್ಕೆ ಭೂದಾನ ಮಾಡಿರುವುದನ್ನು ಹೆಸರಿಸುತ್ತದೆ. ಇನ್ನುಳಿದ ಶಾಸನಗಳು ದೇವಾಲಯದ ನಂದಾದೀವಿಗೆಗೆ ಆದಾಯ ದಾನ, ದೇವಾಲಯ ಹಾಗೂ ದೇವಾಲಯದ ಆಚಾರ್ಯ ಶಾಂತಯ್ಯನಿಗೆ ಭೂದಾನ ಮಾಡಿರುವುದನ್ನು ಉಲ್ಲೇಖಿಸುತ್ತವೆ. ದೇವಾಲಯ ಗ್ರಾಮದ ಈಶಾನ್ಯಕ್ಕಿರುವ ನದಿಯ ದಡದ ಮೇಲ್ಗಡೆಯಿದ್ದು ಪೂರ್ವಕ್ಕೆ ಮುಖ ಮಾಡಿ ಕಟ್ಟಲ್ಪಟ್ಟಿದೆ. ಆದರೆ ದೇವಾಲಯ ಇಂದು ಸಂಪೂರ್ಣವಾಗಿ ಹಾಳಾಗಿರುವುದರಿಂದ ಮೂಲ ಗುಡಿಯ ಶಿಲೆಗಳನ್ನು ಬಳಸಿ ಹೊಸ ಮಾದರಿಯಲ್ಲಿ ಗ್ರಾಮಸ್ಥರು ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿದ್ದಾರೆ.

ಉಮರಾಜ

ರೇವಣಸಿದ್ದೇಶ್ವರ ದೇವಾಲಯ

ಇಂಡಿಯ ವಾಯುವ್ಯ ದಿಕ್ಕಿನ ಗಡಿಯ ಗ್ರಾಮವೆನಿಸಿದ ಉಮರಾಜ ಚಡಚಣದಿಂದ ವಾಯುವ್ಯ ದಿಕ್ಕಿಗೆ ಸುಮಾರು ೨೦ ಕಿ.ಮೀ. ಅಂತರದಲ್ಲಿದೆ. ಪ್ರಾಗೈತಿಹಾಸಿಕ ನೆಲೆಯಾದ ಉಮರಾಜದಲ್ಲಿ ಸೂಕ್ಷ್ಮಶಿಲಾಯುಗದ ವಸ್ತುಗಳು ದೊರಕುತ್ತವೆ. ಕಲ್ಯಾಣ ಚಾಳುಕ್ಯ ವಾಸ್ತು ಲಕ್ಷಣವುಳ್ಳ ಎರಡು ದೇವಾಲಯಗಳು ಗ್ರಾಮದಲ್ಲಿ ಕಂಡುಬರುತ್ತಿದ್ದು ಮೂರು ಶಾಸನಗಳು ಇಲ್ಲಿವೆ. ಸ್ಥಳೀಕರು ರೇವಣಸಿದ್ದೇಶ್ವರ ಹೆಸರಿನಿಂದ ಕರೆಯುವ ದೇವಾಲಯ ಶಾಸನೋಕ್ತ ಯೋಗೇಶ್ವರ ದೇವಾಲಯವಾಗಿದೆ.[೧೬] ಗ್ರಾಮದ ಪಶ್ಚಿಮ ದಿಕ್ಕಿನಲ್ಲಿರುವ ದೇವಾಲಯವನ್ನು ಪೂರ್ವಾಭಿಮುಖವಾಗಿ ಅಗ್ನಿಶಿಲೆಯಲ್ಲಿ ನಿರ್ಮಿಸಲಾಗಿದೆ. ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮಂಟಪಗಳಿವೆ. ಗರ್ಭಗೃಹದಲ್ಲಿ ಯೋನಿಪಾಣಿ ಲಿಂಗವಿದ್ದು ದ್ವಾರದಲ್ಲಿ ಪದ್ಮ, ಅರ್ಧಗಂಭ, ಸಿಂಹ ಶಾಖೆಗಳು ಕಂಡುಬರುತ್ತವೆ. ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದ್ದು ಉತ್ತರಾಂಗ ಭಾಗದಲ್ಲಿ ನಾಗರ ಶಿಖರದ ಅಲಂಕಾರಗಳು ಕಂಡುಬರುತ್ತವೆ. ಕೆಳಭಾಗದಲ್ಲಿ ಶೈವದ್ವಾರಪಾಲ, ಚಾಮರಧಾರಿಯರ ಶಿಲ್ಪಗಳಿವೆ. ಅಂತರಾಳ ದ್ವಾರದಲ್ಲಿ ಯಾವ ಅಲಂಕಾರ ಇರುವುದಿಲ್ಲ. ನವರಂಗವು ನಾಲ್ಕು ಸ್ತಂಭಗಳನ್ನು ಹೊಂದಿದ್ದು ಸ್ತಂಭಗಳು ಪೀಠ, ದಂಡ, ಪಟ್ಟಿಕೆ, ತಡಿ, ಫಲಕ, ತರಂಗ ಬೋದುಗೆಗಳನ್ನು ಹೊಂದಿದೆ. ನವರಂಗ ಮಂಟಪಕ್ಕೆ ಮೂಲದಲ್ಲಿ ಒಂದೇ ದ್ವಾರವಿದ್ದರು, ನಂತರದಲ್ಲಿ ಪಾರ್ಶ್ವ ಭಿತ್ತಿಗಳಲ್ಲಿ ಮತ್ತೆರಡು ದ್ವಾರಗಳನ್ನು ಅಳವಡಿಸಲಾಗಿದೆ. ಗರ್ಭಗೃಹದ

ಹೊರಭಿತ್ತಿಯು ಪಂಚರಥ ಮಾದರಿಯಲ್ಲಿದ್ದು ಸಪಾಟಾಗಿದೆ. ಅಧಿಷ್ಠಾನ ನೆಲದಲ್ಲಿ ಹುದುಗಿರುವುದರಿಂದ ಅದರ ಲಕ್ಷಣಗಳು ತಿಳಿದು ಬರುವುದಿಲ್ಲ. ಗರ್ಭಗೃಹದ ಮೇಲಿನ ಶಿಖರ ನಂತರದಲ್ಲಿ ನಿರ್ಮಾಣವಾಗಿದೆ. ಇದೇ ದೇವಾಲಯದ ಮುಂದಿನ ಆವರಣದಲ್ಲಿ ಹಲವಾರು ಪ್ರಾಚೀನ ಶಿಲ್ಪಗಳಿದ್ದು ಅವುಗಳಲ್ಲಿ ವಿಷ್ಣು, ಪಾರ್ಶ್ವನಾಥ ಹಾಗೂ ಲಿಂಗಗಳು ಪ್ರಮುಖವಾಗಿವೆ.

ಮಲ್ಲಿಕಾರ್ಜುನ ದೇವಾಲಯ

ಗ್ರಾಮದ ಸು. ೧೩ ನೆಯ ಶತಮಾನದ ಶಾಸನದಲ್ಲಿ ಮುತ್ತರಸಿನಿಂದ ತ್ರಿಕೂಟೇಶ್ವರ ದೇವರಿಗೆ ಭೂದಾನ ನೀಡಿದ ಉಲ್ಲೇಖವಿದೆ. ಪ್ರಸ್ತುತ ದೇವಾಲಯ ಹಾಳಾಗಿರುವುದರಿಂದ ಶಾಸನೋಲ್ಲೇಖಿತ ತ್ರಿಕೂಟೇಶ್ವರ ಇದೆಯಾಗಿತ್ತೆಂಬುದು ಸ್ಪಷ್ಟವಾಗುವುದಿಲ್ಲ. ಎತ್ತರ ಜಗತಿಯ ಮೇಲೆ ಅಗ್ನಿ ಶಿಲೆಯಲ್ಲಿ ನಿರ್ಮಾಣವಾದ ಈ ದೇವಾಲಯದ ಸಭಾಮಂಟಪ ಮಾತ್ರ ಉಳಿದಿದೆ. ಸಭಾಮಂಟಪದ ಪಶ್ಚಿಮ ಗೋಡೆಗೆ ಅಂತರಾಳದ ಪ್ರವೇಶದ್ವಾರವಿದೆ. ಅದರ ಸುತ್ತಲೂ ಜಾಲಂಧ್ರ, ಮೇಲಿನ ಪಟ್ಟಿಕೆಯಲ್ಲಿ ಅರ್ಧಗಂಭ, ಮಧ್ಯ ಪದ್ಮ, ಮೇಲ್ಭಾಗ ಮಕರತೋರಣವಿದೆ. ಅದರಲ್ಲಿ ಅಸ್ಪಷ್ಟವಾಗಿ ಕಾಣುವ ನಾಲ್ಕು ವಿಷ್ಣು ಶಿಲ್ಪಗಳಿವೆ. ಮಧ್ಯದ ನಾಲ್ಕು ಕಂಬಗಳು ಕೆಳಗೆ ಮೇಲೆ ಚೌಕ, ಮಧ್ಯ ೧೬-೮-೧೬ ಭಾಗದ ಪಟ್ಟಿಕೆ ನಕ್ಷತ್ರಾಕಾರದ ಕುಂಭ, ಚೌಕಾಕಾರದ ಫಲಕ, ಬೋದಿಗೆಗಳಿಂದ ಕೂಡಿದೆ. ಭುವನೇಶ್ವರಿಯಲ್ಲಿ ಪದ್ಮ, ಕೆಳಗೆ ಶಿವಲಿಂಗ ಮತ್ತು ಸು. ಮೂರು ಅಡಿ ಎತ್ತರದ ನಂದಿ ಶಿಲ್ಪಗಳಿವೆ.[೧೭]

ಕಲಕೇರಿ

ಸಿಂದಗಿ ತಾಲೂಕಿನ ಪ್ರಮುಖ ಗ್ರಾಮವಾದ ಕಲಕೇರಿಯು ತಾಲೂಕು ಕೇಂದ್ರದಿಂದ ಪೂರ್ವ ದಿಕ್ಕಿಗೆ ಸುಮಾರು ೩೦ ಕಿ.ಮೀ ಅಂತರದಲ್ಲಿದೆ. ಸ್ಥಳೀಯವಾಗಿ ಕಲಕೇರಿಯೆಂದು ಕರೆಯಲಾಗುವ ಈ ಗ್ರಾಮಕ್ಕೆ ಶಾಸನಗಳು ಅಗ್ರಹಾರ ಕಲ್ಲಕೆರೆ, ಕಲ್ಲುಕೆರೆ, ಕಲುಕೆರೆ ಯೆಂಬ ಹೆಸರುಗಳಿಂದ ಕರೆದಿರುವುದನ್ನು ಶಾಸನಗಳು ಉಲ್ಲೇಖಿಸುತ್ತವೆ. ಶಾಸನಗಳಲ್ಲಿ ಶೈವ, ವೈಷ್ಣವ ಹಾಗೂ ಜೈನ ಧರ್ಮಗಳಿಗೆ ಸಂಬಂಧಿಸಿದ ದೇವಾಲಯಗಳ ಉಲ್ಲೇಖ ದೊರೆಯುತ್ತದೆಯಾದರೂ ಸದ್ಯ ಶಾಂತಲಿಂಗ ದೇವಾಲಯ ಮಾತ್ರ ಉಳಿದುಕೊಂಡು ಬಂದಿದೆ. ಇದು ಶಾಸನೋಲ್ಲೇಖಿತ ಕೇಶವ ದೇವಾಲಯವಾಗಿರಬೇಕು. ಶಾಸನಗಳು ಉಲ್ಲೇಖಿಸುವ ಕೇಶವ, ಜೈನ ಗುಡಿಗಳು ಕಂಡುಬರುವುದಿಲ್ಲ. ಬಿದ್ದು ಹೋದ ಗುಡಿಗಳ ಭಾಗಗಳು ಚದುರಿದಂತೆ ಗ್ರಾಮದಲ್ಲಿ ಹರಡಿಕೊಂಡಿವೆ.

ಶಾಂತಲಿಂಗನೆಂದು ಕರೆಯಲ್ಪಡುವ ದೇವಾಲಯ ಗ್ರಾಮದ ಮಧ್ಯಭಾಗದಲ್ಲಿದ್ದು ಪೂರ್ವಾಭಿಮುಖವಾಗಿ ನಿರ್ಮಿಸಲಾದ ದ್ವಿಕೂಟ ಮಾದರಿಯ ದೇವಾಲಯವಾಗಿದೆ. ಸದ್ಯ ಒಂದು ಗರ್ಭಗೃಹ ಮಾತ್ರ ಉಳಿದುಕೊಂಡಿದೆ. ದ್ವಿಕೂಟ ತಲವಿನ್ಯಾಸದಲ್ಲಿರುವ ದೇವಾಲಯ ಗರ್ಭಗೃಹ, ಅಂತರಾಳ ಹಾಗೂ ನವರಂಗ ಮಂಟಪಗಳನ್ನು ಹೊಂದಿದೆ. ಪಶ್ಚಿಮಾಭಿಮುಖವಾಗಿರುವ ಗರ್ಭಗೃಹದಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಅಲಂಕಾರಿಕವಾದ ದ್ವಾರಶಾಖೆಗಳು ಪದ್ಮ, ಹೂವಿನ ಎಸಳು, ಅವುಗಳಲ್ಲಿ ಮಿಥುನ ಶಿಲ್ಪಗಳು, ಅರ್ಧಗಂಬ, ಸಿಂಹಯಾಳಿ, ಬಳ್ಳಿಯ ಸಾಲುಗಳಿವೆ. ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದೆ. ಉತ್ತರಾಂಗ ಭಾಗದಲ್ಲಿ ರೇಖಾ ಪ್ರಾಸಾದ ಶಿಖರ ಪಟ್ಟಿಕೆಗಳ ಕೆತ್ತನೆಗಳಿವೆ. ದ್ವಾರಪಾಲಕರಿದ್ದು ಎಡಭಾಗದ ಮೂರ್ತಿಯ ಕೈಗಳಲ್ಲಿ ಶಂಖ, ಚಕ್ರ, ಗದಾ ಹಿಡಿದು ಒಂದು ವರದ ಮುದ್ರೆಯಲ್ಲಿದೆ. ಬಲಭಾಗದ ಶಿಲ್ಪಕ್ಕೆ ಎರಡು ಕೈಗಳಿವೆ. ಒಂದು ವರದ ಮುದ್ರೆ, ಇನ್ನೊಂದರಲ್ಲಿ ಗದಾ ಇದೆ. ದ್ವಾರಪಾಲಕರ ಇಕ್ಕೆಲಗಳಲ್ಲಿ ಚಾಮರಧಾರೆಯರ ಶಿಲ್ಪಗಳಿವೆ. ಚಾಮರದಾರಿಯರ ಶಿಲ್ಪಗಳಿವೆ. ಉತ್ತರಾಭಿಮುಖವಾಗಿರುವ ಗರ್ಭಗೃಹ ಹಾಳಾಗಿದ್ದು ಅದರ ಪ್ರವೇಶದ್ವಾರ ಮಾತ್ರ ಉಳಿದುಕೊಂಡಿದೆ. ಅದು ಅಲಂಕರಣೆಯಲ್ಲಿ ಪಶ್ಚಿಮ ದ್ವಾರದಂತಿದೆ.

ನವರಂಗದಲ್ಲಿ ೧೬ ಸ್ತಂಭಗಳಿದ್ದು ಪೀಠ, ಪಟ್ಟಿಕೆ, ಫಲಕ, ತರಂಗ ಬೋದಿಗೆ ಹೊಂದಿವೆ. ಸ್ತಂಭಗಳ ಮೇಲಿನ ಭಾವಣಿಗಳು ಮುತ್ತಿನಸರ ಹಾಗೂ ಇತರ ಅಲಂಕಾರದಿಂದ ಕೂಡಿದ್ದು ಭುವನೇಶ್ವರ ಕಮಲದಲಂಕಾರದಲ್ಲಿದೆ. ದೇವಾಲಯದ ಹೊರಭಿತ್ತಿ ವಿಶಿಷ್ಟವಾಗಿದ್ದು ನಕ್ಷತ್ರಾಕಾರದಲ್ಲಿ ಕಂಡುಬರುತ್ತದೆ. ಅಧಿಷ್ಠಾನ ಭಾಗ ನೆಲದಲ್ಲಿ ಮುಚ್ಚಿದ್ದು, ಭಿತ್ತಿಯಲ್ಲಿ ಅರ್ಧಗಂಬ, ಅವುಗಳ ಮೇಲೆ ವೇಸರ ಶಿಖರ ಪಟ್ಟಿಕೆಗಳು ಮತ್ತು ಜೋಡಿ ಅರ್ಧಗಂಬ, ಪಟ್ಟಿಕೆಗಳಿಂದ ಅಲಂಕೃತಗೊಂಡ ಗೂಡುಗಳಿವೆ. ಆವರಣದಲ್ಲಿ ಅಲ್ಲಲ್ಲಿ ದೇವಾಲಯ ಹಾಗೂ ಶಿಲ್ಪಗಳ ಅವಶೇಷಗಳು ಹರಡಿಕೊಂಡಿವೆ.

ಇದೇ ಶಾಂತಲಿಂಗ ದೇವಾಲಯದ ಮುಂದೆ ಕಂಡುಬರುವ ಸ್ತಂಭದ ಮಂಟಪವು ವಿಶಿಷ್ಟ ಸ್ತಂಭಗಳಿಂದ ಕೂಡಿದೆ. ದೇವಾಲಯದ ಸುತ್ತಲಿನ ಭಿತ್ತಿಗಳು ಬಿದ್ದಿರುವುದರಿಂದ ನಂತರದಲ್ಲಿ ಜನರು ಹೊಸದಾಗಿ ಭಿತ್ತಿಗಳನ್ನು ಕಟ್ಟಿಕೊಂಡು ಮನೆಯನ್ನಾಗಿ ಮಾಡಿಕೊಂಡಿರುವರು. ಗ್ರಾಮದ ದಕ್ಷಿಣಕ್ಕಿರುವ ಬಿಂಜಲಬಾವಿ ದಾರಿಯ ಮೇಲಿರುವ ಕ್ರಿ.ಶ. ೧೧೧೭ರ ಶಾಸನ ಅಮಿತ ಪಟವರ್ಧನ ವಾಸುದೇವ ಘಳಿಸಾಸ ಮತ್ತು ಅವನ ಮಡದಿ ಚಾಮಿಯಕ್ಕರು ಸೇರಿ ಕೇಶವ ದೇವರನ್ನು ಪ್ರತಿಷ್ಠಾಪಿಸಿದರೆಂದು ಉಲ್ಲೇಖ ಮಾಡುತ್ತದೆ. ಆದರೆ ಮೂಲ ದೇವಾಲಯ ಹಾಳಾಗಿದ್ದು ಅದರ ತಳಹದಿಯ ಮೇಲೆ ಇತ್ತೀಚೆಗೆ ಶಿವನ ಗುಡಿಯನ್ನು ಕಟ್ಟಿದ್ದಾರೆ. ಗ್ರಾಮದ ಅಗಸಿ ಹತ್ತಿರ ಮಲ್ಲಯ್ಯನ

ಗುಡಿಯಿದ್ದು ಶಾಸನೋಕ್ತ ಜೈನ ಬಸದಿಯನ್ನು ಈ ಪರಿಸರದಲ್ಲಿ ಕಟ್ಟಿರಬೇಕು. ಏಕೆಂದರೆ ಬಿದ್ದಂತಹ ಬಸದಿಯ ಅವಶೇಷಗಳು ಮಸಿದೆ. ಅಗಸಿಯದ್ವಾರ ಹಾಗೂ ಮಲ್ಲಯ್ಯನ ಗುಡಿಗಳಲ್ಲಿ ಕಂಡುಬರುತ್ತವೆ.

ಸಿಂದಗಿ

ತಾಲೂಕು ಕೇಂದ್ರವಾದ ಸಿಂದಗಿ ಪಟ್ಟಣದ ದಕ್ಷಿಣ ಭಾಗಕ್ಕೆ ಕರೆಯ ದಂಡೆಯ ಮೇಲೆ ಕಂಡು ಬರುವ ಸಂಗಮೇಶ್ವರ ದೇವಾಲಯ ಕಲ್ಯಾಣ ಚಾಳುಕ್ಯರ ಕಾಲಾವಧಿಯಲ್ಲಿ ನಿರ್ಮಾಣವಾದದ್ದು. ಅರ್ಚನೆ, ಅದರ ಐತಿಹ್ಯ ಶೈವ ಧರ್ಮಕ್ಕಿಂತ ಭಿನ್ನವಾಗಿದೆ. ಅಲ್ಲಿ ನಾಲ್ಕು ದೇವಾಲಯಗಳಿವೆ ಒಂದು ಮುಖ್ಯವಾದದ್ದು ಸಂಗಮೇಶ್ವರ. ಅದರಲ್ಲಿ ಪರಮೇಶ್ವರನ ಮೂರ್ತಿಗೆ ಮುಖವಾಡವಿದೆ. ಇದಕ್ಕೆ ನಿರ್ಮಿಸಿದ ದೇವಾಲಯ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಮತ್ತು ಸಭಾಮಂಟಪಗಳಿವೆ. ಸಭಾಮಂಟಪದಲ್ಲಿ ಲಿಂಗಕ್ಕೆ ಮುಖ ಮಾಡಿ ಗೋಪಾಲನಿದ್ದಾನೆ. ಅದರ ಮುಂದಿನ ಭಾಗ ನಂತರದ್ದು. ಗರ್ಭಗೃಹದಲ್ಲಿ ಶಿವಲಿಂಗಕ್ಕೆ ಹೊಂದಿ ದೊಡ್ಡ ಮುಖವಾಡವನ್ನು ಕೂಡಿಸಲಾಗಿದೆ ಈ ಲಿಂಗವನ್ನೇ ಸಂಗಮೇಶ್ವರ ಎಂದು ಕರೆಯುವರು. ಅಂತರಾಳ ಬದಿಗೆ ಮತ್ತು ಎದುರಿನ ದ್ವಾರದ ಬದಿಗಳಲ್ಲಿ ಒಟ್ಟು ನಾಲ್ಕು ದೇವಕೋಷ್ಠಗಳಿವೆ. ಅವುಗಳಲ್ಲಿ ಕ್ರಮವಾಗಿ ಎರಡರಲ್ಲಿ ಶಿವಲಿಂಗ ಮತ್ತು ಒಂದರಲ್ಲಿ ದಂಪತಿಗಳನ್ನು ಮತ್ತು ಒಂದರಲ್ಲಿ ವಿಷ್ಣು ವಿಗ್ರಹಗಳಿವೆ. ಪೂರ್ವಕ್ಕೆ ದೇವಾಲಯ ಮುಖ ಮಾಡಿದ್ದು, ಅದರ ಸಭಾಮಂಟಪಕ್ಕೆ ಮೂರು ಕಡೆಗಳಲ್ಲೂ ದೇವಕೋಷ್ಠಗಳಿವೆ. ಸಭಾಮಂಟಪದ ಪೂರ್ವ ದ್ವಾರದ ಬಲಬದಿಗೆ ಕೈಮುಗಿದು ನಿಂತ ಭಕ್ತನ ಶಿಲ್ಪವಿದೆ. ಗರ್ಭಗೃಹಕ್ಕೆ ಕದಂಬ ಮಾದರಿ ಶಿಖರವಿದೆ (ಸುಮಾರು ಕ್ರಿ.ಶ. ೧೨ನೇ ಶತಮಾನ). ಅದರ ಎದುರಿಗೆ ಆಯತಾಕಾರದ ಸ್ತಂಭ ಮಂಟಪವನ್ನು ಇತ್ತೀಚೆಗೆ ನಿರ್ಮಿಸಲಾಗಿದೆ. ಅದರ ಮೇಲೆ ಅನೇಕ ಶಿಲ್ಪಗಳಿವೆ. ಸುತ್ತಲೂ ಪ್ರಾಕಾರ ಗೋಡೆ, ಎದುರಿಗೆ ಎಡಕ್ಕೆ ಪ್ರಾಕಾರದಲ್ಲಿ ಗುಡಿಯಲ್ಲಿ ನರಸಿಂಹನಿದ್ದಾನೆ. ಅದರ ಹಿಂದುಗಡೆ ಗುಡಿಯಲ್ಲಿ ಮತ್ತೊಂದು ಶಿಲ್ಪವಿದೆ. ದಕ್ಷಿಣ ಪ್ರಾಕಾರ ಗೋಡೆಗೆ ಸಾಲಾಗಿ ಹೊಂದಿಕೊಂಡಂತೆ ಕೋಣೆಗಳಿವೆ.

ಮಲಘಾಣ

ಮಲಘಾಣ ಸಿಂದಗಿ ತಾಲೂಕಿನ ಪ್ರಮುಖ ಗ್ರಾಮವಾದ ಮಲಘಾಣವು ಈಶಾನ್ಯ ದಿಕ್ಕಿಗೆ ೧೨ ಕಿ.ಮೀ ಅಂತರದಲ್ಲಿದೆ. ಚಾಳುಕ್ಯ ವಾಸ್ತುಕಲೆಯ ಕೇಂದ್ರದಂತಿರುವ ಮಲಘಾಣದಲ್ಲಿ ನಾಲ್ಕು ದೇವಾಲಯಗಳು, ಹಲವು ಶಾಸನಗಳು ಕಂಡುಬರುತ್ತವೆ. ದೇವಾಲಯಗಳ ಕೇಂದ್ರವಾದ ಮಲಘಾಣ

ಸರ್ವನಮಸ್ಯದಗ್ರಹಾರವೆಂದು ಕರೆಯಿಸಿಕೊಂಡಿದೆ. ಶಾಸನಗಳಲ್ಲಿ ಈ ಗ್ರಾಮವನ್ನು ತರ್ದವಾಡಿ ಸಾಸಿರದ ಕುಮ್ಮಸಿ-೩೦ರ ಕಂಪಣ ಮತ್ತು ಸರ್ವನಮಸ್ಯದಗ್ರಹಾರ ಮಲ್ಲಗಾಣ ಎಂದು ಕರೆಯಲಾಗಿದೆ. ಈ ದೇವಾಲಯದಲ್ಲಿರುವ ತೃಟಿತ ಶಾಸನದಲ್ಲಿ ಚಾಳುಕ್ಯ ಅರಸ ತ್ರಿಭುವನಮಲ್ಲನು ದಿವಾಕರೇಶ್ವರ ಮತ್ತು ಸೋಮೇಶ್ವರ ದೇವಾಲಯಗಳಿಗೆ ಭೂದಾನ ಮಾಡಿದ ಉಲ್ಲೇಖವಿದೆ.[೧೮]

ಮಲ್ಲಿಕಾರ್ಜುನ ದೇವಾಲಯ

ಗ್ರಾಮದ ಮಧ್ಯದಲ್ಲಿರುವ ಪುಷ್ಕರಣಿಯ ಉತ್ತರ ಭಾಗದಲ್ಲಿ ಕಂಡುಬರುತ್ತದೆ. ದೇವಾಲಯವನ್ನು ಅಗ್ನಿಶಿಲೆಗಳನ್ನು ಬಳಸಿ ಪೂರ್ವಕ್ಕೆ ಮುಖ ಮಾಡಿ ಕಟ್ಟಲಾಗಿದೆ. ಏಕತಾಯನ ಮಾದರಿಯ ತಲವಿನ್ಯಾಸ ದಲ್ಲಿರುವ ಈ ದೇವಾಲಯವನ್ನು ಮಾಧವ ಫೈಸಾಸನು ಮಾಧವೇಶ್ವರ ಹೆಸರಿನಿಂದ ಕಟ್ಟಿಸಿದನೆಂದು ಕ್ರಿ.ಶ. ೧೧೪೮ರ ಶಾಸನವು ಉಲ್ಲೇಖಿಸುತ್ತದೆ. ಮೂಲತಃ ಮಾಧವೇಶ್ವರ ದೇವಾಲಯವನ್ನು ಇಂದು ಮಲ್ಲಿಕಾರ್ಜುನ ಹೆಸರಿನಿಂದ ಕರೆಯಲಾಗುತ್ತಿದೆ. ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗಮಂಟಪ ಹಾಗೂ ಮುಖ ಮಂಟಪಗಳಿವೆ. ಗರ್ಭಗೃಹದಲ್ಲಿ ಯೋನಿಪಾಣಿ ಲಿಂಗವಿದ್ದರೆ, ದ್ವಾರದಲ್ಲಿ ಶೈವದ್ವಾರಪಾಲ, ಚೌರಿ, ಮಂಗಲದಲ್ಲಿ ಗಜಲಕ್ಷ್ಮೀ ಅಲಂಕಾರಿಕ ದ್ವಾರ ಶಾಖೆಗಳಿವೆ. ನವರಂಗ ಮಂಟಪದಲ್ಲಿ ಚೌಕ ಪಟ್ಟಿಕೆಯುಳ್ಳ ನಾಲ್ಕು ಸ್ತಂಭಗಳಿದ್ದು ಒಳಭಿತ್ತಿಗಳಲ್ಲಿ ನಾಲ್ಕು ಕೋಷ್ಠಗಳಿವೆ. ಕೋಷ್ಠಗಳಲ್ಲಿ ವಿಷ್ಣು, ಸಪ್ತ ಮಾತೃಕೆ ಶಿಲ್ಪಗಳನ್ನು ಪ್ರತಿಷ್ಠಾಪಿಸಲಾಗಿದೆ. ಮುಖಮಂಟಪದ ಮೆಟ್ಟಿಲುಗಳ ಬದಿಯಲ್ಲಿ ಹಸ್ತ ಹಸ್ತಿಯನ್ನು ಅಳವಡಿಸಲಾಗಿದೆ. ದೇವಾಲಯದ ಅಧಿಷ್ಠಾನ ಅಷ್ಟೊಂದು ಅಲಂಕರಣೆಯಿಂದ ಕೂಡಿಲ್ಲ ಒಟ್ಟಾರೆ ದೇವಾಲಯ ವಿನಾಶದ ಅಂಚಿನಲ್ಲಿದೆ.

ಬಸವಣ್ಣ ದೇವಾಲಯ

ಸ್ಥಳೀಯವಾಗಿ ಬಸವಣ್ಣನೆಂದು ಕರೆಯುವ ದೇವಾಲಯವು ಮಲ್ಲಿಕಾರ್ಜುನ ದೇವಾಲಯದ ಪಶ್ಚಿಮಕ್ಕೆ ಕೆಲವು ಮೀಟರುಗಳ ಅಂತರದಲ್ಲಿದ್ದು ಉತ್ತರಕ್ಕೆ ಮುಖ ಮಾಡಿ ಕಟ್ಟಲಾಗಿದೆ. ಕ್ರಿ.ಶ. ೧೧೦೦ರ ಗುಡಿಯ ಶಾಸನವು ಶ್ರೀಮತ್ ಪುರಾಣದ ದಿವಾಕರ ಭಟ್ಟೋಪಾಧ್ಯಾಯನೆಂಬುವನು ಮಲಘಾಣದಲ್ಲಿ ಆದಿತ್ಯದೇವ, ಕೇಶವದೇವ, ಪರಮೇಶ್ವರರೆಂಬ ತ್ರೈಪುರುಷ ದೇವಾಲಯ ಕಟ್ಟಿಸಿ ಮೂರ್ತಿ ಪ್ರತಿಷ್ಠಾಪಿಸಿದನೆಂದು ಉಲ್ಲೇಖಿಸುತ್ತದೆ.

ತ್ರಿಕೂಟ ಮಾದರಿಯ ತಲವಿನ್ಯಾಸದಲ್ಲಿರುವ ದೇವಾಲಯ ಗರ್ಭಗೃಹ, ಅಂತರಾಳ, ಹಾಗೂ ನವರಂಗ ಮಂಟಪಗಳನ್ನು ಹೊಂದಿರುತ್ತದೆ. ಒಂದು ಗರ್ಭಗೃಹದಲ್ಲಿ ಲಿಂಗ ಕಂಡುಬಂದರೆ

ಉಳಿದೆರಡು ಗರ್ಭಗೃಹಗಳಲ್ಲಿ ಶಿಲ್ಪ ಪೀಠಗಳಿವೆ. ಇವುಗಳ ದ್ವಾರಗಳಲ್ಲಿ ಶೈವ, ವೈಷ್ಣವ ದ್ವಾರಪಾಲ, ಚಾಮರಿಯರ ಶಿಲ್ಪಗಳು, ಲಲಾಟದಲ್ಲಿ ಗಜಲಕ್ಷ್ಮೀ ಶಿಲ್ಪ ಕಂಡುಬರುತ್ತವೆ. ನವರಂಗ ಮಂಟಪವು ಚೌಕ ಪಟ್ಟಿಕೆಯುಳ್ಳ ನಾಲ್ಕು ಸ್ತಂಭಗಳನ್ನು ಹೊಂದಿದೆ. ಮುಂದಿನ ಭಾಗ ತೆರೆದಂತಿದ್ದು ಕಟಾಂಜನದ ಮೇಲೆ ನಾಲ್ಕು ಸ್ತಂಭಗಳಿದ್ದು ಸ್ತಂಭಗಳ ಮೇಲಿನ ಮಝೂರು ಮುಂದಕ್ಕೆ ಇಳಿಬಿದ್ದಿರುತ್ತದೆ. ನವರಂಗದ ಒಳ ಭಿತ್ತಿಯಲ್ಲಿ ಸಪ್ತ ಮಾತೃಕೆ ಶಿಲ್ಪವನ್ನಿಡಲಾಗಿದೆ. ಹೊರಭಿತ್ತಿಯು ಅಷ್ಟೊಂದು ಅಲಂಕರಣೆಯಿಂದ ಕೂಡಿರದೆ ಸಮತಲವಾಗಿ ಕಂಡುಬರುತ್ತದೆ. ದೇವಾಲಯದ ಅಧಿಷ್ಠಾನ ನೆಲದಲ್ಲಿ ಹುದುಗಿರುವುದರಿಂದ ಅದರ ಸ್ವರೂಪ ಗೊತ್ತಾಗುವುದಿಲ್ಲ.

ರಾಮಲಿಂಗ ದೇವಾಲಯ

ರಾಮಲಿಂಗ ಹೆಸರಿನಿಂದ ಕರೆಯಲ್ಪಡುವ ದೇವಾಲಯ ಪುಷ್ಕರಣಿಗೆ ಹತ್ತಿಕೊಂಡಂತೆ ಪೂರ್ವಾಭಿಮುಖವಾಗಿ ನಿರ್ಮಿಸಲಾಗಿದೆ. ಆರನೆ ವಿಕ್ರಮಾದಿತ್ಯನ ಕಾಲಾವಧಿಯ ಶಾಸನವು ಈ ದೇವಾಲಯವನ್ನು ಸೋಮೇಶ್ವರ ದೇವಾಲಯವೆಂದು ಕರೆಯುತ್ತದೆ. ಮುಂದುವರೆದು ವಿಕ್ರಮಾದಿತ್ಯನು ದೇವಾಲಯಕ್ಕೆ ದಾನ ನೀಡಿದ ಕುರಿತು ಸಹ ಉಲ್ಲೇಖಿಸುತ್ತದೆ. ಏಕಕೂಟ ಮಾದರಿಯ ತಲವಿನ್ಯಾಸದಲ್ಲಿರುವ ದೇವಾಲಯ ಗರ್ಭಗೃಹ, ಅರ್ಧಮಂಟಪ, ತೆರೆದ ನವರಂಗ ಮಂಟಪಗಳನ್ನು ಹೊಂದಿದೆ. ದೇವಾಲಯದ ಅಧಿಷ್ಠಾನವು ಉಪಾನ, ಜಗತಿ, ತ್ರಿಪಟ್ಟ ಕುಮುದ, ಕಪೋತ ಭಾಗಗಳನ್ನು ಹೊಂದಿದೆ. ನವರಂಗ ಮಂಟಪದ ಅಧಿಷ್ಠಾನ ಎತ್ತರವಾಗಿದೆಯಲ್ಲದೆ ಉಪಾನ, ಜಗತಿ, ಗಳ ಪಟ್ಟಿಕೆ, ಆನೆ ಶಿಲ್ಪ ಪಟ್ಟಿಕೆಗಳನ್ನು ಹೊಂದಿರುತ್ತದೆ. ಮಧ್ಯದ ಗಳಪಟ್ಟಿಕೆ ಹೂ ಅಲಂಕಾರದಿಂದ ಕೂಡಿದೆ. ಈ ಅಧಿಷ್ಠಾನದ ಮೇಲಿರುವ ಕಕ್ಷಾಸನಗಳು ಹೂ, ಶಿಲ್ಪ ಬಳ್ಳಿಯ ಅಲಂಕಾರದಲ್ಲಿವೆ. ಮೂರು ಬಾಜು ಹತ್ತಿಕೊಂಡಿರುವ ಪಾವಟಿಕೆಗಳು ವಿಶಿಷ್ಟವಾಗಿದ್ದು ಯಾಳಿ ಶಿಲ್ಪವನ್ನೊಳಗೊಂಡಿವೆ.

ಗರ್ಭಗೃಹದಲ್ಲಿ ಲಿಂಗವಿದ್ದು ದ್ವಾರವು ಶೈವದ್ವಾರಪಾಲ, ಚೌರಿ, ಮಂಗಲದಲ್ಲಿ ಗಜಲಕ್ಷ್ಮೀ ಲಲಾಟದಲ್ಲಿ ಕೀರ್ತಿಮುಖ ತೋರಣದಲ್ಲಿ ಗಣೇಶ, ಚೌರಿಶಿಲ್ಪಗಳ ಅಲಂಕಾರಿಕ ಕೆತ್ತನೆಗಳಿಂದ ಕೂಡಿದೆ. ಅರ್ಧಮಂಟಪದ ಸ್ತಂಭಗಳ ಮೇಲೆ ಶಿಲ್ಪ ಬೋದುಗೆಗಳು ಕಂಡುಬರುತ್ತವೆ. ನವರಂಗ ಮಂಟಪದ ಸ್ತಂಭಗಳು ಪಟ್ಟಿಕೆ ಹಾಗೂ ಬಹುಮೂಲೆಯುಳ್ಳ ಎರಡು ಮಾದರಿಯಲ್ಲಿವೆ. ಸ್ತಂಭಗಳ ಮೇಲಿನ ಛಜ್ಜಾ ಮುಂದಕ್ಕೆ ಇಳಿಬಿದ್ದಂತಿದೆ. ದೇವಾಲಯದ ಹೊರ ಭಿತ್ತಿಯು ಕರ್ಣ, ಭದ್ರ, ಸಲಿಲಾಂತರಗಳಿಂದ ಕೂಡಿದ್ದು ಅಷ್ಟೊಂದು ಅಲಂಕರಣೆ ಕಂಡುಬರುವುದಿಲ್ಲ.

ತೆಗ್ಗಿನ ದೇವಾಲಯ

ಸ್ಥಳೀಕರು ತೆಗ್ಗಿನ ದೇವಾಲಯವೆಂದು ಕರೆಯಲ್ಪಡುವ ಗುಡಿ ಹೊಂಡದ ಪಶ್ಚಿಮದಲ್ಲಿದೆ. ನೆಲದಲ್ಲಿ ಹುದುಗಿರುವುದರಿಂದ ತೆಗ್ಗಿನ ದೇವಾಲಯವೆಂದು ಕರೆಯುತ್ತಾರೆ. ಆದರೆ ದೇವಾಲಯದ ಒಳಗೋಡೆಯಲ್ಲಿರುವ ಕ್ರಿ.ಶ. ೧೧೩೩ರ ಶಾಸನವು ಸ್ವಯಂಭು ದೇವಾಲಯವೆಂದು ಕರೆಯುತ್ತದೆಯಲ್ಲದೆ ಕುಮಾರ ಸೋಮರಸನು ಸ್ವಯಂಭು ದೇವರಿಗೆ ತನ್ನ ತಂದೆಗೆ ಒಳಿತಾಗಲೆಂದು ಪ್ರತಿವರ್ಷ ಮೂರು ಗದ್ಯಾಣ ಹೊನ್ನುಗಳನ್ನು ದಾನ ಮಾಡಿದನೆಂದು ಉಲ್ಲೇಖಿಸುತ್ತದೆ.[೧೯]

ದೇವಾಲಯ ಏಕಕೂಟ ಮಾದರಿಯಲ್ಲಿದ್ದು, ಕಪ್ಪು ಶಿಲೆಗಳನ್ನು ಬಳಸಿ ಪೂರ್ವಕ್ಕೆ ಮುಖಮಾಡಿ ಕಟ್ಟಲ್ಪಟ್ಟಿದೆ. ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮಂಟಪಗಳನ್ನು ಹೊಂದಿರುವುದು. ಗರ್ಭಗೃಹದಲ್ಲಿ ಲಿಂಗ ಕಂಡುಬರುತ್ತಿದ್ದು ದ್ವಾರವು ಶೈವದ್ವಾರಪಾಲರ ಜೊತೆಗೆ ಕುಂಭ ಮಾದರಿ, ಅಲಂಕಾರಿಕ ಶಾಖೆಗಳು, ಲಲಾಟದಲ್ಲಿ ಗಜಲಕ್ಷ್ಮಿ, ಉತ್ತರಾಂಗ ಭಾಗದಲ್ಲಿ ಶಿಖರಗಳ ಪಟ್ಟಿಕೆಯ ಅಲಂಕಾರಿಕ ಕೆತ್ತನೆಗಳನ್ನು ಹೊಂದಿದ್ದರೆ ಅಂತರಾಳ ದ್ವಾರವು ಮಾತ್ರ ಅನಲಂಕಾರಿಕವಾಗಿದೆ. ನವರಂಗ ಮಂಟಪವು ಚೌಕ ಪಟ್ಟಿಕೆಯುಳ್ಳ ನಾಲ್ಕು ಸ್ತಂಭಗಳನ್ನು ಹೊಂದಿದ್ದು ಮೇಲಿನ ಭುವನೇಶ್ವರಿ ಕಮಲದಲಂಕಾರದಿಂದ ಕೂಡಿದೆ. ಒಂದು ಭುವನೇಶ್ವರಿಯಲ್ಲಿ ಇಂದ್ರ ದಂಪತಿಗಳು ಐರಾವತದ ಮೇಲೆ ಕುಳಿತು ನಡೆದ ಶಿಲ್ಪವನ್ನು ಕೆತ್ತಲಾಗಿದೆ. ನವರಂಗದ ಒಳ ಭಿತ್ತಿಗಳಲ್ಲಿ ಎರಡು ಕೋಷ್ಠಗಳಿದ್ದು ಭಿತ್ತಿಗೆ ಹೊಂದಿಕೊಂಡು ದೊಡ್ಡದಾದ ಗಣೇಶ, ನಾಗಶಿಲ್ಪಗಳನ್ನು ನಿಲ್ಲಿಸಲಾಗಿದೆ. ದೇವಾಲಯದ ಹೊರ ಭಿತ್ತಿ ಹಾಗೂ ಅಧಿಷ್ಠಾನಗಳು ನೆಲದಲ್ಲಿ ಮುಚ್ಚಿರುವುದರಿಂದ ಅವುಗಳ ಲಕ್ಷಣಗಳು ಕಂಡುಬರುವುದಿಲ್ಲ.

ಯರಗಲ್ಲ

ಯರಗಲ್ಲ, ತಾಲೂಕು ಕೇಂದ್ರವಾದ ಸಿಂದಗಿಯಿಂದ ಪೂರ್ವಕ್ಕೆ ೧೨ ಕಿ.ಮೀ ಅಂತರದಲ್ಲಿದೆ. ರೂಢಿಯಲ್ಲಿ ಯರಗಲ್ಲವೆಂದು ಕರೆಯಲಾಗುತ್ತಿದ್ದು, ಪ್ರಾಚೀನವಾಗಿ ವೆರೆಂಗಲ್, ಎರಂಗಲ್ಲ ವೆಂದು ಶಾಸನಗಳು ಕರೆಯುತ್ತವಲ್ಲದೆ, ಚಿಕ್ಕಯರಗಲ್ಲನ್ನು ಕಿತ್ತರಗಲ್‌ವೆಂದು ಕರೆಯುತ್ತವೆ.[೨೦] ಗ್ರಾಮದಲ್ಲಿ ಚಾಳುಕ್ಯರ ಕಾಲದ ದೇವಾಲಯಗಳು, ಶಾಸನಗಳು, ಇತರೆ ಮೂರ್ತಿಶಿಲ್ಪಗಳು ಕಂಡುಬರುತ್ತವೆ. ಸ್ಥಳೀಯವಾಗಿ ರಾಮೇಶ್ವರ ತೀರ್ಥವೆಂದು ಕರೆಯುವ ಪುಷ್ಕರಣಿ ಹಾಗೂ ರಾಮೇಶ್ವರ ದೇವಾಲಯಗಳು ಗ್ರಾಮದ ಹೊರಭಾಗದಲ್ಲಿ ಕಂಡುಬರುತ್ತವೆ. ಸ್ಥಳೀಯವಾಗಿ ರಾಮೇಶ್ವರ ದೇವಾಲಯವನ್ನು ರಾಮತೀರ್ಥವೆಂದು ಕರೆಯುತ್ತಾರೆ. ಆದರೆ ಕ್ರಿ.ಶ.

೧೯೬೮ರ ಶಾಸನವೊಂದು ರಾಮೇಶ್ವರ, ಲಕ್ಷ್ಮಣೇಶ್ವರ, ದಾಸೇಶ್ವರ ವೆಂಬ ಹೆಸರಿನಿಂದ ಕರೆಯುತ್ತವೆ. ಐಯ್ಯಾವೊಳೆಯ ಐನೂರ್ವರ ಸಂಘ ಹಾಗು ಇತರ ಸಂಸ್ಥೆಗಳು ದಾನ ಬಿಟ್ಟಿದ್ದನ್ನು ಶಾಸನಗಳು ಉಲ್ಲೇಖಿಸುತ್ತವೆ. ಕ್ರಿ.ಶ. ೧೧೪೬ರ ಶಾಸನ ರಾಮೇಶ್ವರ ದೇವಾಲಯವನ್ನು ಸ್ವಯಂಭು ರಾಮೇಶ್ವರ ದೇವಾಲಯವೆಂದು ಹೆಸರಿಸುತ್ತಾ ಕೇಶಿರಾಜ, ದಾಸಿಮರಸ ಮತ್ತು ವಿಠ್ಠರಸ ಸಹೋದರರು ಸೇರಿ ದೇವಾಲಯ ಕಟ್ಟಿಸಿದರೆಂದು ಹೇಳುತ್ತದೆ. ಈ ಸಹೋದರರು ಕಟ್ಟಿಸಿದ ದೇವಾಲಯದ ಜೀರ್ಣೋದ್ಧಾರಕ್ಕೆ ಅದರ ರಂಗಭೋಗ ನೈವೇದ್ಯಕ್ಕೆಂದು ಸೋವಿದೇವರಸ, ಅಪ್ಪರಸ, ನಂದಿಮರಸ, ನಾಕರಸರು ಕೂಡಿಕೊಂಡು ಭೂಮಿಯನ್ನು ದಾನಮಾಡಿದರು. ಶಾಸನಗಳು ತಿಳಿಸುವಂತೆ ಇಲ್ಲಿ ಮೊದಲು ತ್ರಿಕೂಟ ಮಾದರಿ ದೇವಾಲಯ ನಿರ್ಮಾಣವಾಗಿದ್ದು ನಂತರ ದ್ವಿಕೂಟ ಮಾದರಿಯ ದೇವಾಲಯ ನಿರ್ಮಾಣವಾಗಿರುವುದು ಸ್ಪಷ್ಟವಾಗುತ್ತವೆ. ಪಂಚಕೂಟದಲ್ಲಿರುವ ಈ ದೇವಾಲಯ ಸಂಕೀರ್ಣ ಎರಡು ಭಾಗಗಳಲ್ಲಿ ವಿಂಗಡಿಸಲ್ಪಟ್ಟಿದೆ. ಮೊದಲ ಭಾಗದಲ್ಲಿ ಮೂರು ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಟಪಗಳಿವೆ. ಎರಡನೆಯ ಭಾಗದಲ್ಲಿ ಎರಡು ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಟಪಗಳಿವೆ. ಸ್ಥಳೀಕರು ಎರಡು ದೇವಾಲಯಗಳನ್ನು ಒಟ್ಟುಗೂಡಿಸಿ ರಾಮೇಶ್ವರ ದೇವಾಲಯವೆಂದು ಕರೆಯುತ್ತಾರೆ. ಕ್ರಿ.ಶ. ೧೨೦೮-೯ರ ಶಾಸನ ಮಹಾಮಂಡಳೇಶ್ವರ ಬೊಮ್ಮಿದೇವರಸನು ಹೈಮೇಶ್ವರವೆಂಬ ದೇವಾಲಯವನ್ನು ಕಟ್ಟಿಸಿ ಮೂರ್ತಿ ಪ್ರತಿಷ್ಠೆ ಮಾಡಿರುವುದನ್ನು ತಿಳಿಸುತ್ತದೆ. ಆದರೆ ದೇವಾಲಯವಿಂದು ಉಳಿದುಕೊಂಡು ಬಂದಿಲ್ಲ. ಕಾಲಾಂತರದಲ್ಲಿ ಬಿದ್ದಿರುವುದರಿಂದ ಅದರ ಭಾಗಗಳನ್ನು ಬಳಸಿ ಗ್ರಾಮಸ್ಥರು ಬನಶಂಕರಿ, ಕಾಳಿ ಮತ್ತು ಹನುಮಾನ ದೇವಾಲಯಗಳನ್ನು ನಿರ್ಮಿಸಿರುವುದನ್ನು ಕಾಣಬಹುದಾಗಿದೆ. ಇವುಗಳ ಜೊತೆಗೆ ಗ್ರಾಮದಲ್ಲಿ ಜೈನಬಸದಿಯೊಂದು ಕಂಡುಬರುತ್ತಿದ್ದು ಮೇಲಿನ ದೇವಾಲಯಗಳಿಗಿಂತ ಸ್ವಲ್ಪ ಮುಂಚೆ ನಿರ್ಮಾಣವಾಗಿರುವುದು ದೇವಾಲಯದ ಲಕ್ಷಣಗಳಿಂದ ತಿಳಿದುಬರುತ್ತದೆ. ಆದರೆ ಈ ಬಸದಿಯು ಸಂಪೂರ್ಣವಾಗಿ ಜೀರ್ಣೋದ್ಧಾರಗೊಂಡಿದೆ.

ಸ್ಥಳೀಯವಾಗಿ ರಾಮೇಶ್ವರ ಹೆಸರಿನಿಂದ ಕರೆಯಲಾಗುವ ದೇವಾಲಯ ಮೂಲತಃ ರಾಮೇಶ್ವರ, ಲಕ್ಷ್ಮಣೇಶ್ವರ, ದಾಸೇಶ್ವರ ಹೆಸರಿನ ದೇವಾಲಯವಾಗಿದೆ. ಪುಷ್ಕರಣಿಗೆ ಹೊಂದಿಕೊಂಡು ಉತ್ತರಾಭಿಮುಖವಾಗಿ ಅಗ್ನಿಶಿಲೆಯಲ್ಲಿ ನಿರ್ಮಿಸಲಾಗಿದೆ. ತ್ರಿಕೂಟ ಮಾದರಿ ತಲವಿನ್ಯಾಸದಲ್ಲಿ ಕಟ್ಟಲ್ಪಟ್ಟ ಈ ದೇವಾಲಯ ಗರ್ಭಗೃಹ, ಅಂತರಾಳ ಹಾಗೂ ನವರಂಗ, ಮುಖ ಮಂಟಪಗಳನ್ನು ಹೊಂದಿದೆ. ಗರ್ಭಗೃಹಗಳಲ್ಲಿ ಲಿಂಗಗಳಿದ್ದು, ದ್ವಾರಗಳು ಅಲಂಕಾರಿಕ ದ್ವಾರಶಾಖೆಗಳಿಂದ ಕೂಡಿವೆ. ಅಂತರಾಳ ದ್ವಾರವು ಕುಂಭ ಕೆತ್ತನೆಯಲ್ಲಿದ್ದು ಪಾರ್ಶ್ವಗಳಲ್ಲಿ ಹೂ ಪಟ್ಟಿಕೆಗಳಿವೆ. ಅಂತರಾಳದ ಒಳ ಭಿತ್ತಿಗಳಲ್ಲಿ ಒಂದೊಂದು ಕೋಷ್ಠಗಳಿರುವದು ವಿಶೇಷ. ನವರಂಗ ನಾಲ್ಕು ಸ್ತಂಭಗಳನ್ನು ಹೊಂದಿದ್ದು

ಒಳಭಿತ್ತಿಗಳಲ್ಲಿ ಎರಡು ಕೊಷ್ಠಗಳಿವೆ. ನವರಂಗ ಮಂಟಪಕ್ಕೆ ದ್ವಾರವಿದ್ದು ದ್ವಾರವು ಅಲಂಕೃತ ಶಾಖೆ, ಗಣೇಶ, ಲಲಾಟದಲ್ಲಿ ನಾಗರ ವಿಮಾನ ಪಟ್ಟಿಕೆಗಳನ್ನು ಹೊಂದಿದೆ. ದೇವಾಲಯದ ಅಧಿಷ್ಠಾನ ಸಂಪೂರ್ಣವಾಗಿ ನೆಲದಲ್ಲಿ ಹೂತುಹೋಗಿದೆ. ಹಾಗಾಗಿ ಅದರ ಯಾವುದೇ ಲಕ್ಷಣಗಳು ಕಂಡುಬರುವುದಿಲ್ಲ. ದೇವಾಲಯ ಭಿತ್ತಿಯಲ್ಲಿಯೂ ಯಾವುದೇ ಅಲಂಕರಣೆಯಿಲ್ಲದೆ ಸರಳ ರೀತಿಯಲ್ಲಿ ನಿರ್ಮಾಣವಾಗಿದೆ.

ಅದರ ತಲವಿನ್ಯಾಸ ದ್ವಿಕೂಟ ಮಾದರಿಯಲ್ಲಿದ್ದು ತ್ರಿತಾಯನ ದೇವಾಲಯದ ಉತ್ತರ ಬಾಜು ಮುಂದೆ ಒಂದೆರಡು ಮಿಟರುಗಳಷ್ಟು ಅಂತರದಲ್ಲಿ ಇದನ್ನು ಕಟ್ಟಲಾಗಿದೆ. ಎರಡು ದೇವಾಲಯಗಳನ್ನು ಗಮನಿಸಿದ ಅ. ಸುಂದರರವರು ಪಂಚಕೂಟ ದೇವಾಲಯದಂತೆ ಕಂಡುಬರುತ್ತದೆ ಎಂಬ ಊಹೆ ಮಾಡಿದ್ದು ಸರಿಯಲ್ಲ. ಕ್ರಿ.ಶ. ೧೧೪೬ರ ಮೇಲಿನ ಶಾಸನವು ಸ್ವಯಂಭು ರಾಮೇಶ್ವರವೆಂದಷ್ಟೇ ಕರೆಯುವುದರಿಂದ ಅನುಕೂಲಕ್ಕಾಗಿ ದ್ವಿತಾಯನ ರಾಮೇಶ್ವರ ದೇವಾಲಯವೆಂದು ಕರೆಯಲಾಗಿದೆ. ತಲವಿನ್ಯಾಸದಲ್ಲಿ ಎರಡು ಗರ್ಭಗೃಹ, ಎರಡು ಅಂತರಾಳ, ತೆರೆದ ನವರಂಗ ಮಂಟಪಗಳಿವೆ. ಪೂರ್ವಮುಖ ಗರ್ಭಗೃಹದಲ್ಲಿ ಲಿಂಗವಿದ್ದರೆ ಪಶ್ಚಿಮ ಮುಖ ಗರ್ಭಗೃಹದಲ್ಲಿ ಲಿಂಗ ವಿರುವುದಿಲ್ಲ. ಎರಡು ಗರ್ಭಗೃಹ ದ್ವಾರಗಳಲ್ಲಿ ಶೈವದ್ವಾರಪಾಲ, ಚೌರಿ ಶಿಲ್ಪಗಳು, ಕಿರ್ತಿಮುಖ ರೇಖಾ ನಾಗರ ಶಿಖರ ಪಟ್ಟಿಕೆಗಳು ಕಂಡುಬರುತ್ತವೆ. ಅಂತರಾಳ ದ್ವಾರಗಳ ಮೇಲೆ ಮಕರ ತೋರಣದಲ್ಲಿ ನೃತ್ಯ ನಟರಾಜನ ಶಿಲ್ಪ ತೋರಣಗಳಿದ್ದು ಪಾರ್ಶ್ವಗಳಲ್ಲಿ ಹೂವಿನಲಂಕೃತ ಜಾಲಂಧ್ರಗಳಿವೆ.

ನವರಂಗ ಮಂಟಪ ಎರಡು ಭಾಗವು ತೆರೆದಂತಿದ್ದು ಮಧ್ಯದಲ್ಲಿ ನಾಲ್ಕು ಮತ್ತು ಜಗಲಿಯ ಮೇಲೆ ಹನ್ನೆರಡು ಸ್ತಂಭಗಳಿವೆ. ಮಧ್ಯದ ಮೇಲ್ಗಂಡು ಅಷ್ಟಪೈಲು ಕಮಲದಲಂಕಾರದಲ್ಲಿದೆ. ಮಂಟಪದ ಹತ್ತಿರದಲ್ಲಿ ಮೂರು ವೀರಗಲ್ಲುಗಳು, ನಾಗನಾಗಿಣಿಯರ ಶಿಲ್ಪ, ದಂಪತಿಗಳ ಶಿಲ್ಪ, ಗಣೇಶ ಶಿಲ್ಪಗಳು ಕಂಡುಬರುತ್ತವೆ. ಇದೇ ಗುಡಿಯ ಈಶಾನ್ಯದಲ್ಲಿ ಒಂದು ಗರ್ಭಗೃಹದ ಕೋಣೆಯಿದ್ದು ಅದರಲ್ಲಿ ಮೂರ್ತಿಗಳನ್ನು ಪ್ರತಿಷ್ಠಾಪಿಸಿರುವ ಮೂರು ಪೀಠಗಳು ಭಿತ್ತಿಯಲ್ಲಿ ಕಂಡುಬರುತ್ತಿದ್ದು ಬಹುಶಃ ತ್ರೈಪುರುಷರದಾಗಿರಬೇಕು. ಈ ಗರ್ಭಗೃಹ ಕೋಣೆಯ ಎದುರುಗಡೆಯೇ ರಾಮತೀರ್ಥವಿದೆ. ಗ್ರಾಮದ ಹನುಮಾನ ದೇವಾಲಯದ ಹತ್ತಿರ ಕ್ರಿ.ಶ. ೭೭೭ರ ಶಾಸನೋಕ್ತ ವೀರಗಲ್ಲೊಂದು ಕಂಡುಬರುತ್ತಿದ್ದು ಇದರ ಜೊತೆಗೆ ಗಣೇಶ, ನಾಗ, ಯಕ್ಷ ಹಾಗೂ ಇತರ ಶಿಲ್ಪಗಳು ಕಂಡುಬರುತ್ತವೆ.

ಯಂಕಂಚಿ

ಸಿಂದಗಿ ತಾಲೂಕಿನ ಗ್ರಾಮವಾದ ಯಂಕಂಚಿ ಸಿಂದಗಿಯ ಪೂರ್ವಕ್ಕೆ ೧೫ ಕಿ.ಮೀ ದೂರದಲ್ಲಿದೆ. ಕ್ರಿ.ಶ. ೧೧೪೬ರ ಯರಗಲ್ಲ ಶಾಸನವು ಸಹ ಯಂಕಂಚಿಯೆಂದೆ ಕರೆಯುತ್ತದೆ. ಐತಿಹಾಸಿಕ ಮಹತ್ವವನ್ನು ಪಡೆದ ಯಂಕಂಚಿ ಗ್ರಾಮದಲ್ಲಿ ಶಾತವಾಹನರ ಕಾಲದ ವಸ್ತುಗಳು ಗ್ರಾಮದ ಈಶಾನ್ಯದಲ್ಲಿರುವ ಹಳ್ಳದ ಬಲದಂಡೆಯ ಹಾಳುಮಣ್ಣಿನ ದಿಬ್ಬದಲ್ಲಿ ಆದಿ ಇತಿಹಾಸ ಕಾಲದ ಕಪ್ಪು, ಕೆಂಪು ಮಡಿಕೆಚೂರು, ಶಂಖದ ಬಳೆ, ಕವಡೆ ಮೊದಲಾದ ಅವಶೇಷಗಳು ದೊರೆಯುತ್ತವೆ.[೨೧] ರಾಷ್ಟ್ರಕೂಟರ ಕಾಲದಲ್ಲಿ ನಿರ್ಮಾಣವಾದ ಇಲ್ಲಿಯ ಈಶ್ವರ ದೇವಾಲಯ ಕಲ್ಯಾಣಚಾಳುಕ್ಯರ ಕಾಲದಲ್ಲಿ ಜೀರ್ಣೋದ್ಧಾರಗೊಂಡಿರುವುದನ್ನು ವಾಸ್ತುಶೈಲಿಯ ಹಿನ್ನಲೆಯಲ್ಲಿ ಗುರುತಿಸಬಹುದು. ಇದು ಐದು ಗರ್ಭಗೃಹ, ಅಂತರಾಳ, ನವರಂಗ ಮತ್ತು ಮಹಾಮಂಟಪಗಳಿಂದ ಕೂಡಿದೆ. ನವರಂಗದ ಪೂರ್ವ, ಪಶ್ಚಿಮದಲ್ಲಿ ಗರ್ಭಗೃಹಗಳಿವೆ. ಅವುಗಳ ಪ್ರವೇಶದ್ವಾರಕ್ಕೆ ಪದ್ಮ, ಅರ್ಧಗಂಬ, ಲಲಾಟಬಿಂಬದಲ್ಲಿ ಗಜಲಕ್ಷ್ಮೀ, ಇಕ್ಕೆಲಗಳಲ್ಲಿ ತ್ರಿಶೂಲ, ನಾಗ, ಗದಾ ಹಿಡಿದು ನಿಂತ ದ್ವಾರಪಾಲಕರ ವಿಗ್ರಹಗಳಿವೆ. ಒಳಗೆ ಯಾವುದೇ ಶಿಲ್ಪಗಳಿಲ್ಲ. ಮುಂಭಾಗ ತೆರೆದ ಅಂತರಾಳದಲ್ಲಿ ಎರಡರಂತೆ ಕೆಳಗೆ ಚೌಕ, ಮೇಲೆ ವೃತ್ತಾಕಾರದಲ್ಲಿರುವ ಕಂಬಗಳಿವೆ. ಸಭಾಮಂಟಪದ ದಕ್ಷಿಣ ಗೋಡೆಗಿರುವ ತೆರೆದ ಮಂಟಪದಲ್ಲಿ ಜಗತಿಯ ಮೇಲೆ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಸಭಾಮಂಟಪದ ಪ್ರವೇಶದ್ವಾರಕ್ಕೆ ಪದ್ಮ, ಅರ್ಧಗಂಬ, ಯಾಳಿ, ಲಲಾಟಬಿಂಬಲದ್ಲಿ ಗಜಲಕ್ಷ್ಮೀ, ಇಕ್ಕೆಲಗಳ್ಲಿ ದ್ವಾರಪಾಲಕರ ಬದಲಾಗಿ ಅಲಂಕೃತ ಪೂರ್ಣಕುಂಭಗಳಿವೆ. ಮಧ್ಯದ ನಾಲ್ಕು ಕಂಬಗಳು ಕೆಳಗೆ ಮೇಲೆ ಚೌಕ, ಮಧ್ಯ ಪಟ್ಟಿಕೆಗಳು, ಫಲಕ, ಭೋದಿಗೆಗಳನ್ನು ಹೊಂದಿದೆ. ಮಹಾಮಂಟಪದಲ್ಲಿರುವ ಕಂಬಗಳು ಇದೆ ಮಾದರಿಯಲ್ಲಿವೆ. ಈ ಮಂಟಪದ ಪೂರ್ವದಲ್ಲಿ ಎರಡು, ಪಶ್ಚಿಮದಲ್ಲಿ ಒಂದು ಹೀಗೆ ಮೂರು ಗರ್ಭಗೃಹಗಳನ್ನು ರಚಿಸಲಾಗಿದೆ. ಅವುಗಳ ಪ್ರವೇಶದ್ವಾರಗಳು ಅರ್ಧಗಂಬ, ಲಲಾಟಬಿಂಬಲದಲ್ಲಿ ಗಜಲಕ್ಷ್ಮೀ ಹಾಗೂ ಇಕ್ಕೆಲಗಳಲ್ಲಿ ತ್ರಿಶೂಲ, ಡಮರು ಹಿಡಿದು ನಿಂತ ದ್ವಾರಪಾಲಕರ ವಿಗ್ರಹಗಳಿಂದ ಕೂಡಿವೆ. ಮುಂಭಾಗದಲ್ಲಿರುವ ತೆರೆದ ಅಂತರಾಳಗಳ ಪ್ರವೇಶದಲ್ಲಿ ಕಂಬಗಳನ್ನು ನಿಲ್ಲಿಸಲಾಗಿದೆ. ಪಶ್ಚಿಮದ ಒಂದು ಅಂತರಾಳಕ್ಕೆ ಇಂಥ ಕಂಬಗಳಿಲ್ಲ. ನವರಂಗ ಮತ್ತು ಮಹಾಮಂಟಪಗಳಲ್ಲಿ ನಂದಿ ಶಿಲ್ಪಗಳನ್ನಿಡಲಾಗಿದೆ. ತೆರೆದ ಮಹಾಮಂಟಪದ ಸುತ್ತಲೂ ಅರ್ಧಮುಚ್ಚಿದ ಗೋಡೆಯ ಮೇಲೆ ಕಕ್ಷಾಸನವಿದ್ದು, ಅದಕ್ಕೆ ಹೊಂದಿಕೊಂಡು ಕೆಳಗೆ ಚೌಕಾಕಾರ, ಮೇಲೆ ವೃತ್ತಾಕಾರದಲ್ಲಿರುವ ಸಾಲುಗಂಬಗಳಿವೆ. ಕಕ್ಷಾಸನದ ಹೊರಗೋಡೆಗೆ ಪದ್ಮ ಸಾಲು, ಮೇಲ್ಭಾಗ ಮುಂಚಾಚಿದ ಮಂಜೂರು, ಕಪೋತ ಭಾಗದಲ್ಲಿ ಕರ್ಣಕೂಟಗಳಿಂದ ಕೂಡಿದ ಪಟ್ಟಿಕೆಗಳಿವೆ. ಹೊರಗೋಡೆಯ ಅಧಿಷ್ಠಾನಭಾಗದಲ್ಲಿ ಪಟ್ಟಿಕೆ, ಭಿತ್ತಿಯಲ್ಲಿ

ಅರ್ಧಗಂಬಗಳಿವೆ.[೨೨] ಈ ಈಶ್ವರ ದೇವಾಲಯದಿಂದ ಕೆಲವು ಮನೆಗಳನ್ನು ದಾಟಿ ನೈಋತ್ಯಕ್ಕೆ ಹಾಳುಮಣ್ಣಿನಲ್ಲಿ ಚಾಳುಕ್ಯರ ಕಾಲದ ನಾಲ್ಕು ಸ್ತಂಭಗಳು, ಎರಡು ನಂದಿ ಶಿಲ್ಪಗಳು ಕಂಡುಬರುತ್ತವೆ. ಗ್ರಾಮದ ಹನುಮನ ದೇವಾಲಯದ ಮುಂದುಗಡೆ ಕೆಲವು ಶಿಲ್ಪಗಳಿದ್ದು ಕ್ರಮವಾಗಿ ನಂದಿ, ಎರಡು ನೇಮಿನಾಥ, ಆನೆಯ ಶಿಲ್ಪಗಳು ಹಾಗೂ ದೇವಾಲಯದ ಭಾಗಗಳು ಭಾವಡಿಯ ಭಿತ್ತಿಯಲ್ಲಿ ಕಂಡುಬರುತ್ತವೆ.

ದೇವೂರ

ದೇವೂರ, ದೇವರಹಿಪ್ಪರಗಿಯ ಆಗ್ನೇಯ ದಿಕ್ಕಿಗೆ ನಾಲ್ಕು ಕಿ.ಮೀ ಅಂತರದಲ್ಲಿದೆ. ಚಿಕ್ಕಗ್ರಾಮವಾದರು ಪ್ರಾಗೈತಿಹಾಸಿಕ ಅವಧಿಗೆ ಸಂಬಂಧಿಸಿದ ಪ್ರಮುಖ ನೆಲೆಯಾಗಿದೆ. ಗ್ರಾಮದಲ್ಲಿ ನೂತನ ಶಿಲಾಯುಗದ ವಸ್ತುಗಳಾದ ಕಂದುಬಣ್ಣದ ಮಡಿಕೆಯ ಚೂರುಗಳು, ಚಕಮಕಿಯ ಕಲ್ಲುಗಳು, ವಿಶಾಲ ಪ್ರದೇಶದಲ್ಲಿ ಹರಡಿಕೊಂಡ ಹಾಳು ಮಣ್ಣಿನ ದಿಬ್ಬದಲ್ಲಿ ಕಂಡುಬರುತ್ತವೆ. ಐತಿಹಾಸಿಕ ಮಹತ್ವವನ್ನು ಪಡೆದುಕೊಂಡ ಗ್ರಾಮದಲ್ಲಿ ಮೂರು ಶಾಸನಗಳು, ಒಂದು ದೇವಾಲಯ ಹಾಗೂ ಹಲವು ಮೂರ್ತಿ ಶಿಲ್ಪಗಳು ಸಹ ಕಂಡುಬರುತ್ತವೆ. ಸ್ಥಳೀಯವಾಗಿ ರಾಮೇಶ್ವರ ಹೆಸರಿನಿಂದ ಕರೆಯಲಾಗುವ ದೇವಾಲಯ ಗ್ರಾಮದ ಪಶ್ಚಿಮ ಭಾಗಕ್ಕೆ ಹೊಂದಿಕೊಂಡಿದ್ದು ಅದನ್ನು ಪೂರ್ವಕ್ಕೆ ಮುಖಮಾಡಿ ಕಪ್ಪುಶಿಲೆಯಲ್ಲಿ ಕಟ್ಟಲಾಗಿದೆ. ಇಂದು ರಾಮೇಶ್ವರ ದೇವಾಲಯವೆಂದು ಕರೆಯಲಾಗುತ್ತಿದ್ದರು ಕ್ರಿ.ಶ. ೧೦೨೯ರ ಶಾಸನ ಮಾರಸಿಂಘೇಶ್ವರ ದೇವಾಲಯವೆಂದು ಉಲ್ಲೇಖಿಸುತ್ತದೆ. ಮುಂದುವರೆದು ಒಂದನೇ ಜಗದೇಕಮಲ್ಲನ ರಾಣಿಯಾದ ಸುಗ್ಗಲದೇವಿಯು ದೇವಾಪುರದ ಮಾರಸಿಂಘೇಶ್ವರನಿಗೆ ಆಚಾರ್ಯರಿಗೆ, ವಿದ್ಯಾರ್ಥಿಗಳ ವೆಚ್ಚಕ್ಕಾಗಿ ಭೂಮಿಯ ಮೇಲಿನ ತೆರಿಗೆ ಆದಾಯವನ್ನು ದಾನ ಮಾಡಿದಳೆಂದು ತಿಳಿಸುತ್ತದೆ. ಈ ಶಾಸನವು ದೇವಾಲಯಕ್ಕೆ ದಾನ ಕೊಟ್ಟದ್ದರ ಬಗ್ಗೆ ಮಾತ್ರ ಉಲ್ಲೇಖಿಸುವುದರಿಂದ ದೇವಾಲಯವು ಶಾಸನ ಹೊರಡಿಸುವ ಪೂರ್ವದಲ್ಲಿಯೇ ನಿರ್ಮಾಣವಾಗಿರಬಹುದು.[೨೩]

ಏಕಕೂಟ ಮಾದರಿ ತಲವಿನ್ಯಾಸದಲ್ಲಿರುವ ದೇವಾಲಯ ಗರ್ಭಗೃಹ, ಅಂತರಾಳ, ನವರಂಗ ಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಶಿವಲಿಂಗವಿದ್ದು ದ್ವಾರದಲ್ಲಿ ಬಳ್ಳಿ, ಶಿಲ್ಪ, ಸಿಂಹ, ಸ್ತಂಭಾಲಂಕಾರಿಕ ದ್ವಾರ ಶಾಖೆಗಳಿಂದ ಕೂಡಿದೆ. ಜೊತೆಗೆ ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪ, ಪೆದ್ಯಾ ಭಾಗದಲ್ಲಿ ಶೈವದ್ವಾರಪಾಲ, ಚಾಮರದಾರಿ, ನದಿದೇವತೆಗಳ ಶಿಲ್ಪಗಳು ಕಂಡುಬರುತ್ತವೆ. ಅರ್ಧಮಂಟಪ ಎರಡು ಸ್ವತಂತ್ರ ಸ್ತಂಭಗಳಿಂದ ಕೂಡಿದ್ದು ಸ್ತಂಭಗಳ ಮೇಲಿನ ಭಾವಣಿಯಲ್ಲಿ ನೃತ್ಯ ನಟರಾಜನ ಮಕರತೋರಣವಿದೆ. ನವರಂಗ ಮಂಟಪದಲ್ಲಿ ನಾಲ್ಕು ಚೌಕ ಪಟ್ಟಿಕೆಯುಳ್ಳ

ಸ್ತಂಭಗಳಿದ್ದು ಉತ್ತರ ದಕ್ಷಿಣ ಭಿತ್ತಿಗಳಲ್ಲಿ ಅರ್ಧಮಂಟಪಗಳಿವೆ. ಮಂಟಪದ ದ್ವಾರವು ಅಲಂಕಾರಿಕವಾಗಿದ್ದು ಶೈವದ್ವಾರಪಾಲ, ಚೌರಿಶಿಲ್ಪ ದ್ವಾರಶಾಖೆಗಳು ಕಂಡುಬರುತ್ತವೆ. ನವರಂಗದ ಹೊರಭಿತ್ತಿಯು ಶಿಥಿಲಗೊಂಡಿದ್ದು ನಂತರದಲ್ಲಿ ಜೀರ್ಣೋದ್ಧಾರಗೊಂಡಿದೆ. ಗರ್ಭಗೃಹ ಭಿತ್ತಿಯು ನಕ್ಷತ್ರ ಮಾದರಿಯಲ್ಲಿ ಸಲಿಲಾಂತರಗಳಿಂದ ಕೂಡಿದ್ದು ಭಿತ್ತಿಯ ಮೇಲೆ ಕೂಟ, ದ್ರಾವಿಡ ಸ್ತೂಪಿಯುಳ್ಳ ಪಂಜರ ಕೋಷ್ಠಗಳು, ಕೀರ್ತಿಮುಖ, ಬಳ್ಳಿ, ತೋರಣ ಕಂಡರಣೆಗಳಿವೆ. ಕೆಳಭಾಗದ ಅಧಿಷ್ಠಾನವು ವಿಶೇಷವಾಗಿದ್ದು ಉಪಾನ, ಜಗತಿ, ವೃತ್ತಕುಮುದ, ವ್ಯಾಳಮಾಲ, ಕಪೋತಗಳನ್ನು ಹೊಂದಿದೆ. ಭಿತ್ತಿಯ ಮೇಲ್ಭಾಗ ಹಾರ ಭಾಗದಲ್ಲಿ ಕಾಳಾಮುಖ ಯತಿಗಳ ಚಿಕಣಿ ಶಿಲ್ಪಗಳನ್ನು ಕಾಣಬಹುದು. ದೇವಾಲಯದ ಮುಂದೆ ತೃಟಿತ ಸಪ್ತಮಾತೃಕೆ, ನಂದಿ ಶಿಲ್ಪಗಳಿವೆ.

ದೇವರನಾವದಗಿ

ದೇವರನಾವದಗಿ, ಸಿಂದಗಿ ತಾಲೂಕಿನ ಪ್ರಮುಖ ಗ್ರಾಮವಾಗಿದ್ದು ಮಲಘಾಣದ ಈಶಾನ್ಯಕ್ಕೆ ೧೨ ಕಿ.ಮೀ ಅಂತರದಲ್ಲಿದೆ. ಸ್ಥಳೀಯವಾಗಿ ದೇವರನಾವದಗಿಯೆಂದು ಕರೆಯಲಾಗುತ್ತಿದ್ದು ಶಾಸನಗಳು ನಾವಿದಿಗೆ ಎಂದಷ್ಟೇ ಕರೆಯುತ್ತವೆ. ಗ್ರಾಮದಲ್ಲಿ ಚಾಳುಕ್ಯರ ಕಾಲದ ಒಂದು ಶಾಸನ ಮತ್ತು ದೇವಾಲಯ ಕಂಡುಬರುತ್ತಿದ್ದು ಸ್ಥಳೀಕವಾಗಿ ಮಲ್ಲಿಕಾರ್ಜುನ ಹೆಸರಿನಿಂದ ಕರೆಯಲಾಗುತ್ತಿದೆ. ಕ್ರಿ.ಶ. ೧೧೪೦ರ ಶಾಸನವು ಮೂಲಸ್ತಾನ ಮಲ್ಲಿಕಾರ್ಜುನ ದೇವಾಲಯವೆಂದು ಕರೆಯುತ್ತಿದ್ದು. ರೂಢಿಯಲ್ಲಿ ಮೂಲಸ್ತಾನ ಹೋಗಿ ಮಲ್ಲಿಕಾರ್ಜುನ ವೆಂದಷ್ಟೆ ಉಳಿದುಕೊಂಡಿದೆ. ದೇವಾಲಯವನ್ನು ಪ್ರಭು ಪೆರ್ಗ್ಗಡೆ ದಾವರಸನು ಕಟ್ಟಿಸಿದ್ದು ದೇವಾಲಯ ಕಟ್ಟಿದವನು ಭಿನ್ನಾಣಿ ತಿಪ್ಪೋಜನಾಗಿದ್ದಾನೆ. ದಾವರಸನ ಕಟ್ಟಿಸಿದ ಈ ಮೂಲಸ್ಥಾನ ಮಲ್ಲಿಕಾರ್ಜುನ ದೇವಾಲಯಕ್ಕೆ ಸಾಮಂತ ಸೋವಿದೇವನು ಹಲವು ರೀತಿಯ ದಾನಗಳನ್ನು ನೀಡಿದನು.

ಮಲ್ಲಿಕಾರ್ಜುನ ದೇವಾಲಯವು ಗ್ರಾಮದ ಪೂರ್ವದಲ್ಲಿದ್ದು ದಕ್ಷಿಣಕ್ಕೆ ಮುಖ ಮಾಡಿದಂತೆ ಅಗ್ನಿಶಿಲೆಯಲ್ಲಿ ಕಟ್ಟಲ್ಪಟ್ಟಿದೆ. ತ್ರಿಕೂಟ ಮಾದರಿ ತಲವಿನ್ಯಾಸದಲ್ಲಿರುವ ದೇವಾಲಯ ಗರ್ಭಗೃಹ, ಅಂತರಾಳ, ನವರಂಗ, ಮುಖ ಮಂಟಪಗಳನ್ನು ಹೊಂದಿದೆ. ಮೂರು ಗರ್ಭಗೃಹಗಳಲ್ಲಿ ಲಿಂಗಗಳು ಕಂಡುಬರುತ್ತಿದ್ದು ದ್ವಾರಗಳು ಶೈವದ್ವಾರಪಾಲ, ಚಾಮರದಾರಿಯರ ಶಿಲ್ಪ, ಅಲಂಕಾರಿಕ ಶಾಖೆಗಳನ್ನು, ಲಲಾಟದಲ್ಲಿ ಗಜಲಕ್ಷ್ಮೀ, ಉತ್ತರಾಂಗಭಾಗದಲ್ಲಿ ನಾಗರ ವಿಮಾನ ಪಟ್ಟಿಕೆಗಳ ಅಲಂಕಾರಗಳನ್ನು ಹೊಂದಿವೆ. ಮೂರು ಅಂತರಾಳಗಳ ಒಳಭಿತ್ತಿಗಳಲ್ಲಿ ಸಪ್ತಮಾತೃಕ ಶಿಲ್ಪಭಾವಣಿಗಳನ್ನು ಹೊಂದಿವೆ. ನವರಂಗ ಮಂಟಪದ ಮಧ್ಯದ ನಾಲ್ಕು ಸ್ತಂಭಗಳು ಕೋಷ್ಠ ಶಿಲ್ಪಗಳನ್ನು ಹೊಂದಿದ್ದು ಪೀಠ, ಪಟ್ಟಿಕೆ, ಗೋಲ, ಬಳೆ, ಶಿಲಾ ಫಲಕ, ಬೊದುಗೆಗಳಿವೆ. ಸ್ತಂಭಗಳ ಕೆಳಪಟ್ಟಿಕೆಯ ಮುಖಗಳಲ್ಲಿ

ಕೋಷ್ಠತೋರಣವಿರುವ ಶಿಲ್ಪಗಳನ್ನು ಕೊರೆಯಲಾಗಿದೆ. ನವರಂಗ ಭಾಗದಲ್ಲಿರುವ ಭುವನೇಶ್ವರಿಯು ನೋಡಲು ಕಲ್ಲೇವಾಡ ಮಂಟಪದ ಭುವನೇಶ್ವರಿಯಂತೆ ಕಂಡುಬರುತ್ತದೆ. ಸ್ತಂಭಗಳ ಮೇಲಿನ ಅಡ್ಡಲಾಗಿರುವ ಭಾವಣಿಗಳು ಮುಖಗಳಲ್ಲಿ ಜಾಮಿತಿ, ಅಷ್ಟದಿಕ್ಪಾಲಕ, ಸ್ತ್ರೀಪುರುಷ ಶಿಲ್ಪಗಳನ್ನು ಕೆತ್ತಲಾಗಿದೆ. ಒಳಭಿತ್ತಿಗಳಲ್ಲಿ ಆರು ರೇಖಾಪ್ರಾಸಾದ ಸ್ತೂಪಿಗಳಿರುವ ಕೊಷ್ಠಗಳಿದ್ದು ಅವುಗಳಲ್ಲಿ ನಾಗಯಕ್ಷ, ಉಮಾಮಹೇಶ್ವರ, ನಾಗಶಿಲ್ಪ, ಗಣೇಶ, ಸಪ್ತಮಾತೃಕ ಶಿಲ್ಪಗಳು ಕಂಡುಬರುತ್ತವೆ.

ದೇವಾಲಯದ ಹೊರಭಿತ್ತಿಯ ಕರ್ಣ, ಭದ್ರ, ಸಲಿಲಾಂತರಗಳಿಂದ ಕೊಷ್ಠ ಮಾದರಿಯಲ್ಲಿದ್ದು, ಮುಂಜರಿತಗಳಲ್ಲಿ ಕೂಟ, ಕೋಷ್ಠಕಗಳಿದ್ದು ಹಿಂಜರಿತಗಳಲ್ಲಿ ಮದನಿಕಾಶಿಲ್ಪಗಳನ್ನು, ಕೊಷ್ಠಗಳಲ್ಲಿ ಗಣೇಶ, ಕೇಶವ, ವರಾಹ, ಉಮಾಮಹೇಶ್ವರ, ಮದನಿಕಾ ಶಿಲ್ಪಗಳನ್ನು ಕೆತ್ತಲಾಗಿದೆ. ಮುಖಮಂಟಪ ಎರಡು ಸ್ತಂಭದಿಂದ ಕೂಡಿದ್ದು ಸ್ತಂಭಗಳ ಮೇಲಿನ ಭಜ್ಜಾ ಮುಂದಕ್ಕೆ ಬಂದಿದೆ. ಮಂಟಪದ ಕಟಾಂಜನದಲ್ಲಿ ಕಕ್ಷಾಸನ ಹಾಗು ಪಾವಟಿಕೆಗಳಲ್ಲಿ ಹಸ್ತಹಸ್ತಿಗಳನ್ನು ಅಳವಡಿಸಲಾಗಿದೆ. ಗರ್ಭಗೃಹಗಳ ಮೇಲೆ ಶಿಖರಗಳಿದ್ದು ಪೂರ್ವಗರ್ಭಗೃಹದ ಮೇಲಿನ ಶಿಖರ ಮಾತ್ರ ನಂತರದಲ್ಲಿ ನಿರ್ಮಾಣವಾಗಿದೆ. ಪಶ್ಚಿಮ ಗರ್ಭಗೃಹದ ಮೇಲಿರುವ ಶಿಖರ ಮೆಟ್ಟಿಲು ಮಾದರಿಯಲ್ಲಿದ್ದು ನಂತರದಲ್ಲಿ ಜೀರ್ಣೋದ್ಧಾರಗೊಂಡಿದೆ. ದೇವಾಲಯದ ಅಧಿಷ್ಠಾನ ನೆಲದಲ್ಲಿ ಹುದುಗಿರುವುದರಿಂದ ಅದರ ಸ್ವರೂಪ ಗೊತ್ತಾಗುವುದಿಲ್ಲ.

ಕತ್ನಳ್ಳಿ

ವಿಜಯಪುರ ತಾಲೂಕಿನ ಗ್ರಾಮವಾದ ಕತ್ನಳ್ಳಿ (ಕತಕನಹಳ್ಳಿ) ವಿಜಯಪುರದ ಆಗ್ನೇಯಕ್ಕೆ ೧೫ ಕಿ.ಮೀ ಅಂತರದಲ್ಲಿರುವ ಡೋಣಿ ನದಿ ಬಲದಂಡೆಯ ಮೇಲಿದೆ. ಗ್ರಾಮದಲ್ಲಿ ಚಾಳುಕ್ಯರ ದೇವಾಲಯವೊಂದು ಕಂಡುಬರುತ್ತಿದ್ದು ಸ್ಥಳೀಯವಾಗಿ ಮಲ್ಲಿಕಾರ್ಜುನನೆಂದು ಕರೆಯಲಾಗುತ್ತದೆ. ಕ್ರಿ.ಶ. ೧೧೪೪ರ ಗ್ರಾಮದ ಶಾಸನವು ಸಹ ಮಲ್ಲಿಕಾರ್ಜುನನೆಂದೆ ಕರೆಯುತ್ತದೆ. ದೇವಾಲಯ ಗ್ರಾಮದ ಅಗಸಿಯ ಹತ್ತಿರವಿದ್ದು ದಕ್ಷಿಣಕ್ಕೆ ಮುಖಮಾಡಿದಂತೆ ಕಪ್ಪುಶಿಲೆಯನ್ನು ಬಳಸಿ ಕಟ್ಟಲಾಗಿದೆ. ಮೂಲತಃ ತ್ರಿತಾಯನ ಮಾದರಿ ತಲವಿನ್ಯಾಸದಲ್ಲಿದ್ದು ಗರ್ಭಗೃಹ, ಅಂತರಾಳ, ನವರಂಗ ಮಂಟಪ, ಮುಖ ಮಂಟಪಗಳಿವೆ. ದೇವಾಲಯದ ಅಧಿಷ್ಠಾನ ಉಪಾನ, ಜಗತಿ, ಕಂಪ-ಕಂಠ ತ್ರಿಪಟ್ಟ ಕುಮುದಗಳನ್ನು ಒಳಗೊಂಡಿದೆ.

ದಕ್ಷಿಣಾಭಿಮುಖ ಗರ್ಭಗೃಹದಲ್ಲಿ ಯೋನಿಪಾಣಿಲಿಂಗವಿದ್ದು ದ್ವಾರದಲ್ಲಿ ವಜ್ರ, ಹೂ, ಸ್ತಂಭಗಳಂತಹ ಅಲಂಕಾರಿಕ ದ್ವಾರಶಾಖೆಗಳಿವೆ, ಲಲಾಟದಲ್ಲಿ ಗಜಲಕ್ಷ್ಮೀ ಶಿಲ್ಪವಿದೆ.

ಪಶ್ಚಿಮಾಭಿಮುಖ ಗರ್ಭಗೃಹದಲ್ಲಿಯು ಯೋನಿಪಾಣಿಲಿಂಗವಿದ್ದು ದ್ವಾರದ ಅಲಂಕಾರಗಳು ದಕ್ಷಿಣಮುಖ ದ್ವಾರದಂತಿವೆ. ಪೂರ್ವಾಭಿಮುಖ ಗರ್ಭಗೃಹ ಮತ್ತು ಅದರ ಮುಂದಿನ ಅಂತರಾಳಗಳು ಸಂಪೂರ್ಣವಾಗಿ ಶಿಥಿಲಗೊಂಡಿವೆ. ನವರಂಗದಲ್ಲಿ ನಾಲ್ಕು ಸ್ತಂಭಗಳಿದ್ದು, ಒಳಭಿತ್ತಿಗಳಲ್ಲಿ ಐದು ಕೋಷ್ಠಗಳಿವೆ. ಆದರೆ ಕೋಷ್ಠಶಿಲ್ಪಗಳು ಚದುರಿ ಹೋಗಿವೆ. ದೇವಾಲಯದ ಹೊರ ಭಿತ್ತಿಯು ಶಿಥಿಲಗೊಂಡಿದ್ದು ಅಲ್ಲಲ್ಲಿ ಕೂಟಮಾದರಿಯಲ್ಲಿರುವ ಪಂಜರಕೋಷ್ಠ, ನಾಗರಶಿಖರವುಳ್ಳ ಸ್ತಂಭಪಂಜರಗಳನ್ನು ಹೊಂದಿದೆ.

ಹೊನವಾಡ

ವಿಜಯಪುರ ತಾಲೂಕಿನ ಗ್ರಾಮವಾದ ಹೊನವಾಡ, ಜಿಲ್ಲಾ ಕೇಂದ್ರದಿಂದ ಪಶ್ಚಿಮಕ್ಕೆ ೨೦ ಕಿ.ಮೀ ಅಂತರದಲ್ಲಿದೆ. ಗ್ರಾಮದಲ್ಲಿ ಕಲ್ಮೇಶ್ವರ ಹೆಸರಿನಿಂದ ಕರೆಯುವ ಚಾಳುಕ್ಯರ ದೇವಾಲಯ ಹಾಗೂ ಎರಡು ಶಾಸನಗಳು ಕಂಡುಬರುತ್ತವೆ. ಕ್ರಿ.ಶ. ೧೦೫೪ರ ಶಾಸನವು ಕೇತಲದೇವಿಯ ಅಧಿಕಾರಿ ಚಾಂಕಿರಾಜನು ಹೊನವಾಡದಲ್ಲಿ ಚೈತ್ಯಾಲಯವನ್ನು ಕಟ್ಟಿಸಿದನೆಂದು ಉಲ್ಲೇಖಿಸುತ್ತಿದ್ದು, ಗ್ರಾಮದಲ್ಲಿಂದು ಚೈತ್ಯಾಲಯವು ಕಂಡುಬರುವುದಿಲ್ಲ. ಕ್ರಿ.ಶ. ೧೦೬೨ರ ಶಾಸನ ಎರಡು ಮಿತಿಗಳನ್ನು ಹೊಂದಿದ್ದು, ಕ್ರಿ.ಶ. ೧೦೬೨ರಲ್ಲಿ ಮಹಾಸಾಮಂತ ಭಾಸ್ಕರ ಚಟ್ಟೋಪಾಧ್ಯಾಯನು ಸಿದ್ದೇಶ್ವರ ದೇವರಿಗೆ ಭೂಮಿದಾನ ಮಾಡಿದನೆಂದು ಹೇಳುವುದರಿಂದ ಸಿದ್ದೇಶ್ವರ ದೇವಾಲಯವು ಕ್ರಿ.ಶ. ೧೦೬೨ರ ಕ್ಕಿಂತ ಮುಂಚೆ ನಿರ್ಮಾಣವಾಗಿರುವುದನ್ನು ಸ್ಪಷ್ಟಪಡಿಸುತ್ತದೆ. ಮುಂದುವರೆದು ಕ್ರಿ.ಶ. ೧೦೭೩ರಲ್ಲಿ ಕೇತಲದೇವಿ ಇದೇ ಸಿದ್ದೇಶ್ವರ ದೇವಾಲಯಕ್ಕೆ ದತ್ತಿ ಬಿಟ್ಟಳೆಂದು ಉಲ್ಲೇಖಿಸುತ್ತದೆ.[೨೪] ಈ ಶಾಸನೋಕ್ತ ಸಿದ್ಧೇಶ್ವರ ದೇವಾಲಯವು ಸ್ಥಳೀಯವಾಗಿ ಕಲ್ಮೇಶ್ವರನ ಹೆಸರಿನಿಂದ ಕರೆಯಲ್ಪಡುತ್ತದೆ.

ಕಲ್ಮೇಶ್ವರ ದೇವಾಲಯವು ಗ್ರಾಮದ ಪಶ್ಚಿಮ ಭಾಗಕ್ಕೆ ಹತ್ತಿಕೊಂಡಂತೆ ಪೂರ್ವಕ್ಕೆ ಮುಖಮಾಡಿ ಕಟ್ಟಲ್ಪಟ್ಟಿದೆ. ಏಕಕೂಟ ಮಾದರಿ ತಲವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮಂಟಪಗಳಿವೆ. ಗರ್ಭಗೃಹದಲ್ಲಿ ಲಿಂಗವಿದ್ದು ದ್ವಾರದಲ್ಲಿ ಹೂಬಳ್ಳಿ, ಸ್ತಂಭ, ಸಿಂಹಸಾಲು, ಶಿಲ್ಪಾಲಂಕಾರ ದ್ವಾರಶಾಖೆ, ಲಲಾಟದಲ್ಲಿ ಗಣೇಶ ಶಿಲ್ಪ ಕಂಡುಬರುತ್ತವೆ. ಅಂತರಾಳ ದ್ವಾರವು ಸಹ ಗರ್ಭಗೃಹದಂತಿದೆ. ನವರಂಗ ಮಂಟಪ ಸಂಪೂರ್ಣವಾಗಿ ಶಿಥಿಲಗೊಂಡಿದೆ. ದೇವಾಲಯದ ಹೊರಭಿತ್ತಿಯ ಅರ್ಧಭಾಗ ನೆಲದಲ್ಲಿದ್ದು, ಉಳಿದ ಭಾಗ ಸಪಾಟಾಗಿ ಕಂಡುಬರುತ್ತದೆ. ಅದರ ನಂತರದಲ್ಲಿ ಜೀರ್ಣೋದ್ಧಾರಗೊಂಡಿರುತ್ತದೆ. ದೇವಾಲಯದ ಅಕ್ಕ ಪಕ್ಕದಲ್ಲಿ ಹಲವಾರು ಶಿಲ್ಪಗಳು ಕಂಡುಬರುತ್ತಿದ್ದು ವಿಷ್ಣು, ಎರಡು ಗಣೇಶ, ಕಾಳಿಯ ಶಿಲ್ಪಗಳು ಪ್ರಮುಖವಾಗಿವೆ.

ಮನಗೂಳಿ

ಬಸವನ ಬಾಗೇವಾಡಿ ತಾಲೂಕಿನ ಪ್ರಮುಖ ಗ್ರಾಮವಾದ ಮನಗೂಳಿ ತನ್ನದೇ ಆದ ಐತಿಹಾಸಿಕ ಮಹತ್ವವನ್ನು ಪಡೆದುಕೊಂಡಿದೆ. ವಿಜಯಪುರದ ಆಗ್ನೇಯಕ್ಕೆ ೨೦ ಕಿ.ಮೀ, ಬಾಗೇವಾಡಿಯ ಪಶ್ಚಿಮಕ್ಕೆ ೨೨ ಕಿ.ಮೀ ಅಂತರದಲ್ಲಿದೆ. ಶಾತವಾಹನರ ಕಾಲದಿಂದ ಕ್ರಿ.ಶ. ೧೮ನೇ ಶತಮಾನದವರೆಗಿನ ಇತಿಹಾಸವನ್ನು ಹೊಂದಿದೆ. ಮನಗೂಳಿ ಗ್ರಾಮ ಪ್ರಾಚೀನವಾಗಿ ಮನುವಕನಳ್ಳಿ, ಮಣಿಂಗವಳ್ಳಿ ಎಂದು ಕರೆಯಿಸಿಕೊಂಡು ಮುಂದೆ ಮನಗೂಳಿಯಾಗಿ ಮಾರ್ಪಟ್ಟಿದೆ. ಶಾತವಾಹನರ ಕಾಲದ ಪ್ರಮುಖ ನೆಲೆಯಾದ ಈ ಗ್ರಾಮದಲ್ಲಿ ಹಾಳು ಮಣ್ಣಿನ ದಿಬ್ಬದಡಿಯಲ್ಲಿ ಮಡಿಕೆ, ಕುಡಿಕೆ, (ಕಪ್ಪು, ಕೆಂಪು) ಶಂಖದ ಬಳೆ, ಮಣಿಗಳು, ಕವಡಿ, ಇಟ್ಟಂಗಿ, ಗುಂಡು ಇತ್ಯಾದಿ ವಸ್ತುಗಳು ವಿಶಾಲವಾದ ಪ್ರದೇಶದಲ್ಲಿ ಹರಡಿವೆ. ಕ್ರಿ.ಶ. ೪೦೦ರ ಸುಮಾರಿಗೆ ಸಮಂತ್ರಭದ್ರನೆಂಬ ಜೈನಕವಿಯು ಉಕ್ಕಲಿ (ಉಳುಕಲಿ) ಗ್ರಾಮದಲ್ಲಿ ಜನಿಸಿ ಮನುಕನಳ್ಳಿಯಲ್ಲಿ ತಪಸ್ಸನ್ನಾಚರಿಸದನೆಂದು ದೇವಚಂದ್ರನು ತನ್ನ ರಾಜಾವಳಿಕಥೆಯಲ್ಲಿ ಹೇಳಿದ್ದಾನೆ. ಇತಿಹಾಸ ಕಾಲಕ್ಕೆ ಬಂದಾಗ ೧೧ನೇ ಶತಮಾನದಿಂದ ೧೮ನೇ ಶತಮಾನದವರೆಗಿನ ಇತಿಹಾಸವುಳ್ಳ ಸ್ಮಾರಕಗಳು ಗ್ರಾಮದಲ್ಲಿ ಕಂಡುಬರುತ್ತವೆ.

ಸ್ಥಳೀಯವಾಗಿ ರಾಮೇಶ್ವರ ಹೆಸರಿನಿಂದ ಕರೆಯಲಾಗುವ ರಾಮೇಶ್ವರ ದೇವಾಲಯ ಚಾಳುಕ್ಯರಸ ಎರಡನೇ ಜನಗದೇಕಮಲ್ಲನ ಕಾಲಕ್ಕೆ ಸೇರಿದ್ದು, ಚಂದಿರಾಜ ಮತ್ತು ಚಂದ್ರಾಂಬಿಕೆಯ ಮಗ ಬಸವ (ಬಸವಯ್ಯರಸ)ನು ಕಲಿದೇವೇಶ್ವರ ಹೆಸರಿನ ದೇವಾಲಯವನ್ನು ಕಟ್ಟಿಸಿದನು. ಸ್ಥಳೀಯವಾಗಿ ಇದನ್ನು ರಾಮೇಶ್ವರ ಹೆಸರಿನಿಂದ ಕರೆಯುತ್ತಾರೆ. ಬಸವನು ಕಟ್ಟಿಸಿದ ಈ ಕಲಿದೇವೇಶ್ವರ (ಕಲಿದೇವ) ದೇವಾಲಯಕ್ಕೆ ಐಯ್ಯಾವೊಳೆಯ ಐನೂರ್ವರ ಮಹಾಸ್ವಾಮಿಗಳು, ಗ್ರಾಮದ ಮಹಾಜನರು ಕೂಡಿಕೊಂಡು ದಾನ ಮಾಡಿದರು. ಈ ದೇವಾಲಯವು ಗ್ರಾಮದ ಮಧ್ಯಭಾಗದಲ್ಲಿದ್ದು ದಕ್ಷಿಣಕ್ಕೆ ಮುಖಮಾಡಿ ಅಗ್ನಿಶಿಲೆಯನ್ನು ಬಳಸಿ ಕಟ್ಟಲ್ಪಟ್ಟಿದೆ. ಏಕತಾಯನ ಮಾದರಿಯ ಸಾಂಧಾರ ಪ್ರಕಾರಕ್ಕೆ ಸೇರಿದ ಈ ದೇವಾಲಯ ತಲವಿನ್ಯಾಸದಲ್ಲಿ ಗರ್ಭಗೃಹ, ಪ್ರದಕ್ಷಿಣಪಥ, ಮಂಟಪ, ನವರಂಗ ಮಂಟಪಗಳನ್ನು ಹೊಂದಿದೆ.

ಗರ್ಭಗೃಹದಲ್ಲಿ ಯೋನಿಪಾಣಿಲಿಂಗವಿದ್ದು ದ್ವಾರದಲ್ಲಿ ಹೆಚ್ಚಿನ ಅಲಂಕಾರವಿರುವುದಿಲ್ಲ. ಗರ್ಭಗೃಹದ ಸುತ್ತಲೂ ಪ್ರದಕ್ಷಿಣಪಥವಿದ್ದು ಅದಕ್ಕೆ ಹೊಂದಿಕೊಂಡು ನಾಲ್ಕು ಸ್ತಂಭದ ಮಂಟಪವಿದೆ. ಇದಕ್ಕೆ ಹೊಂದಿಕೊಂಡು ೧೬ ಸ್ತಂಭದ ನವರಂಗ ಮಂಟಪವಿದ್ದು ಸ್ತಂಭಗಳು ಪೀಠ, ಪಟ್ಟಿಕೆ, ಗೋಲಕಾರಕಾಂಡ ಪಟ್ಟಿಕೆ, ಗೋಲ, ಬಳೆ, ಫಲಕ ಹಾಗೂ ನಾಗಬಂಧಿತ ಬೊದುಗೆಗಳನ್ನು ಹೊಂದಿವೆ. ಮಧ್ಯದ ಮೇಲಭಾವಣಿ ಅಷ್ಟಪೈಲು ಕಮಲದಲ್ಲಿದೆ. ನವರಂಗ ಮಂಟಪಕ್ಕೆ ಒಂದೇ

ದ್ವಾರವಿದ್ದು ಅಷ್ಟೊಂದು ಅಲಂಕಾರ ಕಂಡುಬರುವುದಿಲ್ಲ. ಇದೇ ನವರಂಗಕ್ಕೆ ಹೊಂದಿಕೊಂಡು ಮರಾಠರ ಕಾಲದ ಮುಖಮಂಟಪವಿದೆ. ನವರಂಗ ಹಾಗೂ ಪ್ರದಕ್ಷಿಣೆಯ ಭಿತ್ತಿಗಳು ಮರಾಠರ ಅವಧಿಯಲ್ಲಿ ಜೀರ್ಣೋದ್ಧಾರಗೊಂಡಿವೆ ಎಂದು ಹೇಳಲಾಗುತ್ತದೆ. ದೇವಾಲಯ ಅರ್ಧದಷ್ಟು ನೆಲದಲ್ಲಿ ಹುದುಗಿರುವುದರಿಂದ ಅಧಿಷ್ಠಾನದ ಲಕ್ಷಣಗಳು ಕಂಡುಬರುವುದಿಲ್ಲ. ನವರಂಗದ ಒಳಭಿತ್ತಿಗೆ ಆನಿಸಿ ಕೆಲವು ನಂದಿ, ನಾಗನಾಗಿಣಿ, ಯಕ್ಷಶಿಲ್ಪ, ನಾಗ, ವೀರಗಲ್ಲು, ದ್ವಾರ ಪಾವಟಿಕೆಯಲ್ಲಿ ಒಂದು ನಿಷಿಧಿಗಲ್ಲು ಶಿಲ್ಪಗಳನ್ನು ಇಡಲಾಗಿದೆ.

ಗ್ರಾಮದ ಮಧ್ಯಭಾಗದಲ್ಲಿ ಗಣೇಶ ಅಥವಾ ಮಸೀದೆಯೆಂದು ಕರೆಯಲಾಗುವ ದೇವಾಲಯ ಮೂಲತಃ ಕಲಚುರಿಯರ ಕಾಲಕ್ಕೆ ಸೇರಿದ್ದಾಗಿದೆ. ಕ್ರಿ.ಶ. ೧೧೬೫ರ ಶಾಸನವೊಂದು ದಂಗೆಯ ವಾಸುದೇವ ನಾಯಕನು ಚೆನ್ನಕೇಶವ ದೇವಾಲಯವನ್ನು ಕಟ್ಟಿಸಿದನೆಂದು ಉಲ್ಲೇಖಿಸುವುದರಿಂದ ಈ ಶಾಸನೋಕ್ತ ಚೆನ್ನಕೇಶವ ದೇವಾಲಯವೇ ಇಂದಿನ ಗಣೇಶ ಅಥವಾ ಮಸೀದೆಯಾಗಿದೆ. ಗ್ರಾಮದ ಹನುಮಾನ ದೇವಾಲಯದ ಆವರಣದಲ್ಲಿ ಒಂದು ನಿಷಿಧಿಗಲ್ಲು, ಶಾಸನಗಳು, ಹೊರಗಡೆಯ ಆವರಣದಲ್ಲಿ ಮಹಾಸತಿಗಲ್ಲು ಶಿಲ್ಪಗಳು ಕಂಡುಬರುತ್ತವೆ.

ಬಾಗೇವಾಡಿ

ಬಾಗೇವಾಡಿ, ವಿಜಯಪುರ ಜಿಲ್ಲೆಯ ತಾಲೂಕು ಹಾಗೂ ತಾಲೂಕಿನ ಕೇಂದ್ರಸ್ಥಳವಾಗಿದೆ. ರೂಢಿಯಲ್ಲಿ ಬಸವನ ಬಾಗೇವಾಡಿಯೆಂದು ಕರೆಯಲಾಗುತ್ತಿದ್ದು, ಬಸವೇಶ್ವರನು (ಬಸವಣ್ಣ) ಹುಟ್ಟಿದ ಸ್ಥಳವೆಂತಲು ಹೇಳುತ್ತಾರೆ. ಈ ತಾಲೂಕು ಪರಿಸರದಲ್ಲಿ ದೊರೆತಿರುವ ಶಾಸನಗಳು ೩೫ ದೇವಾಲಯಗಳನ್ನು ಉಲ್ಲೇಖಿಸುತ್ತವೆ. ಅವುಗಳಲ್ಲಿ ೨೫ ಶೈವ ದೇವಾಲಯಗಳಾಗಿವೆ.

ಬಸವನ ಬಾಗೇವಾಡಿಯಲ್ಲಿ ಕಂಡುಬರುವ ಬೊಂತೇಶ್ವರ ದೇವಾಲಯವನ್ನು ಪ್ರಸ್ತುತ ಬಸವೇಶ್ವರ ದೇವಾಲಯವೆಂದು ಕರೆಯಲಾಗುತ್ತಿದೆ. ನಂದಿ ಮಂಟಪದ ಮೇಲಿರುವ ಶಾಸನಗಳಲ್ಲಿ ಬೊಂತೇಶ್ವರ ದೇವಾಲಯವೆಂದು ಉಲ್ಲೇಖಿಸಲಾಗಿದೆ. ಬಲಭಾಗದ ಕಂಬದ ಮೇಲಿನ ಕ್ರಿ.ಶ. ೧೧೭೮ರ ಶಾಸನ ಕಳಚುರಿ ಸಂಕಮದೇವನ ಅಡಳಿತಾವಧಿಗೆ ಸೇರಿದ್ದು ಇದರಲ್ಲಿ ಸಾಸಿರ್ವರು ಬೊಂತೇಶ್ವರ ದೇವರಿಗೆ ಹೇರು ತೆರಿಗೆ ದಾನ ಬಿಟ್ಟಿದುದನ್ನು ಉಲ್ಲೇಖಿಸುತ್ತದೆ. ಎಡಭಾಗದ ಕಂಬದಲ್ಲಿರುವ ಶಾಸನ ಕ್ರಿ.ಶ. ೧೧೯೯ರ ಯಾದವ ಜೈತುಗಿ ಕಾಲದ ಶಾಸನದಲ್ಲಿ ಬೊಂತೇಶ್ವರ ದೇವರ ಕೇರಿಯಿಂದ ದಕ್ಷಿಣಕ್ಕಿರುವ ಕೇರಿಯನ್ನು ಕೊಂಡು ಈ ದೇವರಿಗೆ ಬಿಟ್ಟ ವಿವರವಿದೆ. ಬೊಂತೇಶ್ವರ ದೇವಾಲಯದ ಹೆಸರು ಬಸವೇಶ್ವರವೆಂದು ಇತ್ತೀಚೆಗೆ ಬದಲಾದಂತೆ ಕಾಣುತ್ತದೆ. ಈ

ದೇವಾಲಯದಲ್ಲಿರುವ ಬೃಹತ್ ನಂದಿ ಶಿಲ್ಪದಿಂದ ಇಲ್ಲವೆ ಬಸವಣ್ಣನವರ ಸ್ಮರಣೆಗಾಗಿ ಇದನ್ನು ಈ ರೀತಿಯಾಗಿ ಕರೆದಿರಬಹುದು.[೨೫]

ವಿಭಿನ್ನ ತಳವಿನ್ಯಾಸದಲ್ಲಿರುವ ಕೂಡಿದ ಈ ದೇವಾಲಯ ತ್ರಿರಥದಲ್ಲಿ ಮುಂಚಾಚಿ ನಕ್ಷತ್ರಕಾರದ ಮಾದರಿಯಂತೆ ಕಾಣುವ ತಳವಿನ್ಯಾಸ ಮಾತ್ರವಲ್ಲದೇ ಮುಖಮಂಟಪ, ಸಭಾಮಂಟಪಗಳ ನಿರ್ಮಿತಿಯಲ್ಲೂ ಇತರ ದೇವಾಲಯಗಳಿಗಿಂತ ಭಿನ್ನವಾಗಿದೆ. ನಸುಗೆಂಪು ಅಗ್ನಿಶಿಲೆಗಳಲ್ಲಿ ನಿರ್ಮಾಣವಾದ ಈ ದೇವಾಲಯ ಗರ್ಭಗೃಹ, ಅಂತರಾಳ, ಸಭಾಮಂಟಪ ಮತ್ತು ಮುಖಮಂಟಪಗಳಿಂದ ಕೂಡಿದೆ. ಸೂಕ್ಷ್ಮ ಕೆತ್ತನೆಗಳಲ್ಲಿರುವ ಪಶ್ಚಿಮ ಗರ್ಭಗೃಹದ ಪ್ರವೇಶದ್ವಾರ ಎಂಟು ಶಾಖೆಗಳನ್ನೊಳಗೊಂಡಿದೆ. ಅದರಲ್ಲಿ ಪದ್ಮ, ಕಲ್ಪಲತಾ ಸುರುಳಿ, ಜೊಡಿ ವೃತ್ತಾಕಾರದ ಅರ್ಧಗಂಬಗಳ ಮಧ್ಯ ಅಲಂಕೃತ ಪಟ್ಟಿಕೆ, ಹೂವಿನ ಎಸಳುಗಳಲ್ಲಿ ರಸಿಕ ದಂಪತಿಗಳ ಶಿಲ್ಪ, ವಜ್ರಾಕಾರದ ಕೆತ್ತನೆ ಮೊದಲಾದವುಗಳಿಂದ ಕೂಡಿದೆ. ಲಲಾಟಬಿಂಬದಲ್ಲಿ ಗಜಲಕ್ಷ್ಮೀ ಮೇಲ್ಭಾಗದಲ್ಲಿ ರೇಖಾನಾಗರ ಶಿಖರ ಪಟ್ಟಿಕೆಗಳು, ಇಕ್ಕೆಲಗಳಲ್ಲಿ ತ್ರಿಶೂಲ, ಡಮರು, ಗದಾ ಹಿಡಿದು ನಿಂತ ದ್ವಾರಪಾಲಕರು ಮತ್ತು ಚಾಮರಧಾರೆಯರ ಶಿಲ್ಪಗಳಿವೆ. ಒಳಗೆ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ತೆರೆದ ಅಂತರಾಳದಲ್ಲಿ ಎರಡರಂತೆ ನಿಲ್ಲಿಸಿದ ಒಟ್ಟು ಎಂಟು ಕಂಬಗಳಿವೆ. ಮುಂಭಾಗದ ಕಂಬಗಳು ಮಕರತೋರಣವನ್ನು ಹೊತ್ತು ನಿಂತಿವೆ.

ಅಂತರಾಳಕ್ಕೆ ಹೊಂದಿಕೊಂಡಂತೆ ದಕ್ಷಿಣ, ಉತ್ತರ ಭಾಗಗಳಲ್ಲಿ ಮುಖಮಂಟಪಗಳಿವೆ. ದಕ್ಷಿಣ ಮತ್ತು ಉತ್ತರ ಭಾಗಗಳಲ್ಲಿಯ ತೆರೆದ ಮುಖಮಂಟಪಗಳ ಇಕ್ಕೆಲಗಳಲ್ಲಿ ಕಕ್ಷಾಸನ ಮತ್ತು ಕಂಬಗಳಿವೆ. ಇವುಗಳ ಪ್ರವೇಶದ್ವಾರ ಸೂಕ್ಷ್ಮ ಕೆತ್ತನೆಗಳಿಂದ ಕೂಡಿದ್ದು, ಲಲಾಟಬಿಂಬದಲ್ಲಿ ಗಜಲಕ್ಷ್ಮೀ, ಇಕ್ಕೆಲಗಳಲ್ಲಿ ಚಾಮರಧಾರೆಯರ ಶಿಲ್ಪಗಳಿವೆ. ನವರಂಗದ ಮಧ್ಯ ನಾಲ್ಕು ಬೃಹತ್ ಸ್ತಂಭಗಳು, ಅವುಗಳ ಎಡ ಬಲ ಚಿಕ್ಕ ಉಪಕಂಬಗಳಿವೆ. ಮಧ್ಯದ ಕಂಬಗಳು ಕೆಳಗೆ ಅಸಮ ಚೌಕಾಕಾರ, ಅದರ ಮೇಲ್ಭಾಗ ನಾಲ್ಕೂ ಮೂಲೆಗಳಲ್ಲಿ ಚಿಕ್ಕ ಚಿಕ್ಕ ಉಬ್ಬು ಶಿಲ್ಪಗಳನ್ನು ಬಿಡಿಸಲಾಗಿದೆ. ಮಧ್ಯ ಪಟ್ಟಿಕೆಗಳು ಪದ್ಮಸಾಲು ಮತ್ತು ಕುಂಭ ಭಾಗವನ್ನು ಪಂಜರ, ಕೀರ್ತಿಮುಖಗಳಿಂದ ಅಲಂಕರಿಸಲಾಗಿದೆ. ಸಭಾಮಂಟಪದ ಮಧ್ಯ ಅಷ್ಟಭುಜ ನಟರಾಜ, ಸುತ್ತಲೂ ಅಷ್ಟದಿಕ್ಪಾಲಕರು ಪತ್ನಿ ಸಮೇತರಾಗಿ ತಮ್ಮ ವಾಹನಗಳ ಮೇಲೆ ಕುಳಿತುಕೊಂಡಿದ್ದಾರೆ. ಅವರ ಜೊತೆಗೆ ನೃತ್ಯ, ಸಂಗೀತಕಾರರು ಮತ್ತು ಯೋಧರ ಶಿಲ್ಪಗಳಿವೆ.[೨೬]

ಮುಂದಿನ ಮಹಾಮಂಟಪದಲ್ಲಿ ಚೌಕಾಕಾರದ ನಾಲ್ಕು ಸ್ತಂಭಗಳಿವೆ. ಇಲ್ಲಿಯ ಸ್ತಂಭಗಳ ಮಾದರಿಯು ಬದಲಾಗಿದ್ದರಿಂದ ಅನಂತರ ದೇವಾಲಯವನ್ನು ವಿಸ್ತರಿಸಿರುವ ಸಾಧ್ಯತೆ ಇದೆ.

ಮುಖಮಂಟಪದಲ್ಲಿ ಸು. ಐದು ಅಡಿ ಎತ್ತರದ ನಂದಿ ಶಿಲ್ಪವಿದೆ. ಸುತ್ತಲು ಗೋಡೆ ನಿರ್ಮಿಸಿ, ಇದನ್ನೆ ಮುಖ್ಯ ಮೂರ್ತಿಯನ್ನಾಗಿ ಮಾಡಿಕೊಳ್ಳಲಾಗಿದೆ. ದೇವಾಲಯದ ಸುತ್ತಲಿನ ಗೋಡೆಯನ್ನು ಜೀರ್ಣೋದ್ಧಾರಗೋಳಿಸಿದ್ದಾರೆ. ಗರ್ಭಗೃಹ ನಕ್ಷತ್ರಾಕಾರದಲ್ಲಿದ್ದು, ಮೂರು ಭಾಗಗಳು ತ್ರಿರಥದಲ್ಲಿ ಮುಂದೆ ಬಂದಿವೆ. ಅಧಿಷ್ಠಾನದಲ್ಲಿ ಉಪಾನ, ಜಗತಿ, ಕುಮುದ, ಗಳ, ಮಕರ ಪಟ್ಟಿಕೆ ಮತ್ತು ಗಳಗಳಿವೆ. ಭಿತ್ತಿಯಲ್ಲಿ ಅರ್ಧಗಂಭ, ಕೂಟ ಕೋಷ್ಠಕಗಳು, ಮೇಲ್ಭಾಗದ ಛಜ್ಜಾ ಹಂಸ ಬಂದಿತವಾಗಿದೆ. ನವರಂಗದ ಸಭಾಮಂಟಪದ ತಳ ವಿನ್ಯಾಸ ವೃತ್ತಾಕಾರದಲ್ಲಿ ಮುಂದುವರೆದಿದೆ. ಇದರ ಅಧಿಷ್ಠಾನದ ಮೇಲೆ ಅರ್ಧಮುಚ್ಚಿದ ಗೋಡೆಯನ್ನು ನಿರ್ಮಿಸಿ ಸಭಾಮಂಟಪದಲ್ಲಿ ಗಾಳಿ ಬೆಳಕಿನ ವ್ಯವಸ್ಥೆ ಮಾಡಿದಂತೆ ಕಾಣುತ್ತದೆ.

ಇದೇ ಪಟ್ಟಣದ ಮಧ್ಯ ಭಾಗದಲ್ಲಿ ಪಶ್ಚಿಮಾಭಿಮುಖವಾಗಿ ನಿರ್ಮಾಣವಾದ ಈಶ್ವರ ದೇವಾಲಯವಿದ್ದು ಶಿಥಿಲವಾಗಿದೆ. ಪ್ರವೇಶದ್ವಾರ ಮತ್ತು ಮುಖಮಂಟಪ ಹಾಳಾಗಿದ್ದು ನವರಂಗದ ಪೂರ್ವ, ದಕ್ಷಿಣ ಉತ್ತರಭಾಗಗಳಲ್ಲಿ ಅಂತರಾಳ ಸಹಿತ ಗರ್ಭಗೃಹಗಳಿವೆ. ಈಗ ಪೂರ್ವದ ಗರ್ಭಗೃಹ ಮತ್ತು ದಕ್ಷಿಣದ ಅಂತರಾಳ ಗರ್ಭಗೃಹಗಳು ಹಾಳಾಗಿವೆ. ನವರಂಗದ ಮಧ್ಯದ ಕಂಬಗಳು ಚಚೌಕ ಪೀಠ, ಅಸಮ ಚೌಕಾಕಾರ ಪದ್ಮಬಂಧ, ಮೇಲೆ ೧೬ ಭಾಗಗಳ ಪಟ್ಟಿಕೆಗಳು, ಫಲಕ, ಬೋದಿಗೆಗಳನ್ನು ಹೊಂದಿವೆ. ನವರಂಗದ ಪೂರ್ವ, ಉತ್ತರ ಗೋಡೆಗೆ ದೇವಕೋಷ್ಠಗಳಿವೆ. ಸಭಾಮಂಟಪಕ್ಕೆ ಹೊಂದಿಕೊಂಡು ಪೂರ್ವಭಾಗದಲ್ಲಿ ಅಂತರಾಳ ಮಾತ್ರವಿದೆ. ಉತ್ತರಭಾಗದ ಅಂತರಾಳ ಸಹಿತ ಗರ್ಭಗೃಹವಿದ್ದು, ಪ್ರವೇಶದ್ವಾರ ಪಟ್ಟಿಕೆಗಳಿಂದ ಕೂಡಿದೆ. ಗರ್ಭಗೃಹದಲ್ಲಿ ಶಿವಲಿಂಗ, ಅಂತರಾಳದಲ್ಲಿ ನಂದಿ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ. ದೇವಾಲಯದ ಶಿಖರ ಭಾಗವನ್ನು ನೋಡಿದಾಗ ಕದಂಬ ನಾಗರ ಅಥವಾ ಫಾಂಸನ ಮಾದರಿಯಲ್ಲಿ ದೇವಾಲಯ ನಿರ್ಮಾಣವಾಗಿತ್ತೆಂದು ತಿಳಿದುಬರುತ್ತದೆ.

ಹೆಬ್ಬಾಳ

ಬಾಗೇವಾಡಿ ತಾಲೂಕಿಗೆ ಸೇರಿದ ಹೆಬ್ಬಾಳ ಗ್ರಾಮವು ಮುತ್ತಗೆಯ ದಕ್ಷಿಣಕ್ಕೆ ೧೦ ಕಿ.ಮೀ. ದೂರದಲ್ಲಿದೆ. ಐತಿಹಾಸಿಕ ಮಹತ್ವವುಳ್ಳ ಹೆಬ್ಬಾಳ ಹೆಬ್ಬಾಳುಪನ್ನೆರಡು ಎಂದು ಹೆಸರನ್ನು ಪಡೆದು, ಹನ್ನೆರಡು ಗ್ರಾಮಗಳ ಮೇಲೆ ಆಡಳಿತದ ಉಪವಿಭಾಗವಾಗಿತ್ತು. ಗ್ರಾಮದಲ್ಲಿ ಚಾಳುಕ್ಯರ ಕಾಲಕ್ಕೆ ಸೇರಿದ ನಾಲ್ಕು ದೇವಾಲಯಗಳು ಕಂಡುಬರುತ್ತವೆ. ಸ್ಥಳೀಯವಾಗಿ ಮಲ್ಲಯ್ಯ ಅಥವಾ ಮಲ್ಲಿಕಾರ್ಜುನ ಹೆಸರಿನಿಂದ ಕರೆಯುವ ದೇವಾಲಯವನ್ನು ಮೂಲತಃ ಸ್ವಯಂಭು ದಕ್ಷಿಣ ಸೋಮನಾಥ ದೇವಾಲಯವಾಗಿರುವುದನ್ನು ಕ್ರಿ.ಶ. ೧೧೯೫ ಶಾಸನ ಉಲ್ಲೇಖಿಸುತ್ತದೆ.

ಮಲ್ಲಿಕಾರ್ಜುನ ದೇವಾಲಯದ ಜೊತೆಗೆ ರಾಮಲಿಂಗ, ಸಂಗಮೇಶ್ವರ ಮತ್ತು ಸರಸ್ವತಿ ದೇವಾಲಯಗಳು ಸಹ ಕಂಡುಬರುತ್ತವೆ.

ಮಲ್ಲಯ್ಯ ಅಥವಾ ಮಲ್ಲಿಕಾರ್ಜುನ ದೇವಾಲಯವನ್ನು ಪೂರ್ವಾಭಿಮುಖವಾಗಿ ಅಗ್ನಿಶಿಲೆಗಳನ್ನು ಬಳಸಿ ನಿರ್ಮಿಸಲಾಗಿದೆ. ಏಕಕೂಟ ಮಾದರಿ ತಲವಿನ್ಯಾಸದಲ್ಲಿರುವ ದೇವಾಲಯ ಗರ್ಭಗೃಹ, ಅಂತರಾಳ, ನವರಂಗ ಹಾಗೂ ಮುಖಮಂಟಪಗಳನ್ನು ಹೊಂದಿದೆ. ಗರ್ಭಗೃಹದ ಪ್ರವೇಶದ್ವಾರ ಸರಳ ಶೈಲಿಯಲ್ಲಿದ್ದು ಒಳಗೆ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಅಂತರಾಳ ಪ್ರವೇಶದ್ವಾರಕ್ಕೆ ಅರ್ಧಗಂಬ, ಲಲಾಟಬಿಂಬದಲ್ಲಿ ಗಜಲಕ್ಷ್ಮೀ ಇಕ್ಕೆಲಗಳಲ್ಲಿ ಚಾಮರಧಾರೆಯರು, ಸುತ್ತಲೂ ಪದ್ಮ ಜಾಲಂಧ್ರಗಳಿವೆ. ನವರಂಗವು ಪಟ್ಟಿಕೆಯುಳ್ಳ ಸ್ತಂಭಗಳನ್ನು ಹೊಂದಿದ್ದು ಒಳಭಿತ್ತಿಗಳಲ್ಲಿ ಶಿಲ್ಪಗಳಿಲ್ಲದ ಎರಡು ಕೋಷ್ಠಗಳು ಕಂಡುಬರುತ್ತವೆ.

ಇಂಗಳೇಶ್ವರ

ಬಾಗೇವಾಡಿ ತಾಲೂಕಿನ ಪ್ರಮುಖ ಗ್ರಾಮವಾದ ಇಂಗಳೇಶ್ವರ, ಬಾಗೇವಾಡಿಯ ಈಶಾನ್ಯ ದಿಕ್ಕಿಗೆ ೧೦ ಕಿ.ಮೀ ಅಂತರದಲ್ಲಿದೆ. ಐತಿಹಾಸಿಕ ಮಹತ್ವವನ್ನು ಪಡೆದ ಇಂಗಳೇಶ್ವರ ಗ್ರಾಮವನ್ನು ಶಾಸನಗಳು ಶಾಸನದ ಮನೆ ಇಂಗಳೇಶ್ವರ, ಇಂಗಳೇಶ್ವರವೆಂತಲೇ ಕರೆಯುತ್ತವೆಯಲ್ಲದೇ ಅಗ್ರಹಾರ ಇಂಗಳೇಶ್ವರವೆಂದು ಕರೆಯುತ್ತವೆ. ಕ್ರಿ.ಶ. ೧೧ ರಿಂದ ೧೩ನೇ ಶತಮಾನಗಳ ಮಧ್ಯಾವಧಿಯಲ್ಲಿ ಅಗ್ರಹಾರವಗಿ ಧಾರ್ಮಿಕ ಕೇಂದ್ರವಾಗಿ, ವಾಸ್ತುಶಿಲ್ಪ ಕ್ಷೇತ್ರದಲ್ಲಿ ಉನ್ನತಿಯನ್ನು ಪಡೆದ ಇಂಗಳೇಶ್ವರ ಪ್ರಾಗೈತಿಹಾಸಿಕ ನೆಲೆಯಾಗಿಯೂ ಮಹತ್ವ ಪಡೆದಿದೆ. ಗ್ರಾಮದಲ್ಲಿ ೬ ಶಾಸನಗಳು, ೫ ದೇವಾಲಯಗಳು, ೬ ಶಾಸನೋಕ್ತ ನಿಷಿಧಿಗಲ್ಲುಗಳು, ಮೂರ್ತಿಶಿಲ್ಪಗಳು, ವೀರಗಲ್ಲುಗಳು ಉಳಿದುಕೊಂಡು ಬಂದಿದ್ದು, ಗ್ರಾಮದ ಗತವೈಭವವನ್ನು ನೆನಪಿಸಿಕೊಡುತ್ತವೆ.

ಸ್ಥಳೀಯವಾಗಿ ಸೋಮೇಶ್ವರ ಹೆಸರಿನಿಂದ ಕರೆಯಲ್ಪಡುವ ದೇವಾಲಯ ಗ್ರಾಮದ ಮಧ್ಯವಿದ್ದು ನಾರಾಯಣ ದೇವರ ಗುಡಿಯ ಉತ್ತರಕ್ಕೆ ೧೦೦ ಮೀ. ಅಂತರದಲ್ಲಿದೆ. ದೇವಾಲಯವನ್ನು ಪಶ್ಚಿಮಾಭಿಮುಖವಾಗಿ ಅಗ್ನಿಶಿಲೆಗಳಿಂದ ನಿರ್ಮಿಸಲಾಗಿದೆ. ಕ್ರಿ.ಶ. ೧೧೭೬ರ ಶಾಸನವೊಂದು ವಾಜಿಕುಳದ ಹಿಳಸೋವರಸನಿಂದ ನಿರ್ಮಿತವಾದ ಸೋಮನಾಥ ದೇವಾಲಯಕ್ಕೆ ಕಳಚುರಿಯರಸ ಸೋವಿದೇವನು ಅಗಸಬಾಳ ಗ್ರಾಮವನ್ನು ದಾನಮಾಡಿದನೆಂದು ಉಲ್ಲೇಖ ಮಾಡುವುದರಿಂದ ಶಾಸನಕ್ಕಿಂತ ಮುಂಚೆ ದೇವಾಲಯ ನಿರ್ಮಾಣವಾಗಿರುವುದು ಸ್ಪಷ್ಟವಾಗುತ್ತದೆ.

ಬಹುಶಃ ನವರಂಗದ ಮುಂದಿನ ತೆರೆದ ಮಹಾಮಂಟಪವು ಶಾಸನದ ಸಮಯದಲ್ಲಿ ನಿರ್ಮಾಣಗೊಂಡಿರಬೇಕು.

ತ್ರಿಕೂಟ ಮಾದರಿ ತಲವಿನ್ಯಾಸದಲ್ಲಿರುವ ದೇವಾಲಯ ಗರ್ಭಗೃಹ, ಅಂತರಾಳ, ನವರಂಗ ಹಾಗೂ ರಂಗಮಂಟಪಗಳನ್ನು ಹೊಂದಿದೆ. ಪಶ್ಚಿಮ ಮುಖ ಗರ್ಭಗೃಹದಲ್ಲಿ ಯೋನಿಪಾಣಿ ಲಿಂಗವಿದ್ದು ದ್ವಾರದಲ್ಲಿ ಐದು ಅಲಂಕಾರಿಕ ದ್ವಾರಶಾಖೆಗಳಿವೆ. ಲಲಾಟದಲ್ಲಿ ಗಜಲಕ್ಷ್ಮೀ ಶಿಲ್ಪವಿದೆ. ಉತ್ತರಾಂಗ ಭಾಗದಲ್ಲಿ ನಾಗರ ಶಿಖರ ಪಟ್ಟಿಕೆ, ದ್ವಾರದ ಇಕ್ಕೆಲಗಳಲ್ಲಿ ವೈಷ್ಣವದ್ವಾರಪಾಲ, ಚಾಮರಧಾರಿಯರ ಶಿಲ್ಪಗಳ ಅಲಂಕಾರಗಳಿವೆ. ಗರ್ಭಗೃಹದ ಲಿಂಗ ನಂತರದಲ್ಲಿ ಪ್ರತಿಷ್ಠಾಪಿಸಲಾಗಿದೆ. ಮೂಲತಃ ಇದು ವಿಷ್ಣು ಗರ್ಭಗೃಹ. ದಕ್ಷಿಣಾಭಿಮುಖವಾಗಿರುವ ಗರ್ಭಗೃಹದಲ್ಲಿ ಸಹ ಶಿವಲಿಂಗವಿದ್ದು ದ್ವಾರವು ಪಶ್ಚಿಮ ಮುಖದ್ವಾರದ ಅಲಂಕಾರಗಳ ಜೊತೆಗೆ ಶೈವದ್ವಾರಪಾಲಕರನ್ನು ಹೊಂದಿವೆ. ಉತ್ತರಾಭಿಮುಖ ಗರ್ಭಗೃಹದಲ್ಲಿ ಶಿಲ್ಪದ ಪೀಠವಿದ್ದು ಮೇಲಿನ ಶಿಲ್ಪವು ಚದುರಿದೆ. ದ್ವಾರವು ಉಳಿದೆರಡು ದ್ವಾರಗಳಂತಿದ್ದರೂ ಸ್ತ್ರೀ ದ್ವಾರಪಾಲಿಕೆಯರು, ಚಾಮರಧಾರಿಯರ ಶಿಲ್ಪಗಳಿಂದ ಅಲಂಕಾರಿಕವಾಗಿದೆ. ದ್ವಾರಪಲಿಕೆಯರ ಕೈಗಳಲ್ಲಿ ಬಿಲ್ಲುಬಾಣಗಳಿವೆ. ಇದೊಂದು ವಿಶಿಷ್ಠ ದೇವಾಲಯವಾಗಿದ್ದು, ಮೊದಲಬಾರಿಗೆ ಸ್ತ್ರೀ ಅಥವಾ ಶಕ್ತಿದೇವತೆಗಾಗಿ ದೇವಾಲಯವನ್ನು ಕಟ್ಟಿಸುವ ಪರಂಪರೆಯನ್ನು ದಕ್ಷಿಣದಲ್ಲಿ ಕಂಚಿಯ ಪಲ್ಲವರು ಪ್ರಾರಂಭಿಸಿದರು. ಇವರ ಕಾಲದ ಶಕ್ತಿ ದೇವತೆಯ ಗುಡಿಗಳೆಂದರೆ, ಮಹಾಬಲಿಪುರಂದ ದ್ರೌಪದಿ ಹಾಗೂ ದುರ್ಗಾ ಗುಹಾಲಯಗಳಾಗಿದ್ದು ಇವುಗಳನ್ನು ಏಕಶಿಲೆಗಳಿಂದ ಮಾಮಲ್ಲನು ಕೊರೆಸಿದನು. ಇಂತಹ ಪರಂಪರೆಯು ಪಲ್ಲವರಿಂದ ಪ್ರಾರಂಭಗೊಂಡರೆ ಅದನ್ನು ನಂತರದ ಅರಸೊತ್ತಿಗೆಗಳು ಉನ್ನತಿಗೇರಿಸಿದವು. ಹಿಂದೂ ದೇವಾಲಯಗಳಲ್ಲಿ ಕೇವಲ ಪುರುಷ ದೇವಾಲಯಗಳಿಗಾಗಿ ಏಕ, ದ್ವಿ, ತ್ರಿ, ಚತುಷ್ಕುಟ, ಪಂಚಕೂಟ ದೇವಾಲಯಗಳನ್ನು ನಿರ್ಮಿಸುವ ವಾಡಿಕೆಯಿದ್ದಿತು. ಆದರೆ ಬರುಬರುತ್ತಾ ಮೂಲಪುರುಷ ದೇವಾಲಯಗಳ ಜೊತೆಗೆ ಶಕ್ತಿ ದೇವಾಲಯಗಳನ್ನು ಪ್ರತಿಷ್ಠಾಪಿಸುವ ಪದ್ಧತಿಯು ಪ್ರಥಮಬಾರಿಗೆ ಕಲ್ಯಾಣ ಚಾಳುಕ್ಯ ಮತ್ತು ಹೊಯ್ಸಳರ ಕಾಲದಲ್ಲಿ ಕಂಡುಬರುತ್ತಿದ್ದು ದೊಡ್ಡಗದ್ದವಳ್ಳಿಯ ಲಕ್ಷ್ಮೀದೇವಾಲಯ ಹಾಗೂ ಇಂಗಳೇಶ್ವರದ ಸೋಮೇಶ್ವರ ಮತ್ತು ನಾರಾಯಣ ದೇವಾಲಯಗಳಲ್ಲಿ ಉದಾಹರಿಸಬಹುದಾಗಿದೆ. ಇದೇ ಕಾಲದಲ್ಲಿ ಪ್ರತ್ಯೇಕವಾಗಿ ಸರಸ್ವತಿ, ಶಕ್ತಿ ದೇವತೆಗಳ ದೇವಾಲಯಗಳನ್ನು ಕಟ್ಟಿಸಿರುವುದನ್ನು ಜಿಲ್ಲೆಯ ಬೇವೂರು, ಶಿರೂರ, ಹೆಬ್ಬಾಳಗಳಲ್ಲಿ ಕಂಡುಬರುವ ದೇವಾಲಯಗಳನ್ನು ನಾವಿಲ್ಲಿ ನೊಡಬಹುದಾಗಿದೆ. ಸಾಮಾನ್ಯವಾಗಿ ಮೂರು ಗರ್ಭಗೃಹಗಳು ಬೇರೆ ಬೇರೆ ದೇವರಿಗೆ ಸಂಬಂಧಿಸಿದ್ದರೂ ತ್ರಿಕೂಟ ಇಲ್ಲವೆ ತ್ರೈಪುರುಷ ದೇವಾಲಯವೆಂದು ಕರೆಯುವ ವಾಡಿಕೆಯಿದೆ. ನವರಂಗದ ದ್ವಾರವು ಅರ್ಧಗಂಬ, ಹೂವಿನ ಎಸಳುಗಳಿಂದ ಕೂಡಿದೆ. ಅದರಲ್ಲಿಯ

ಸ್ತಂಬಗಳು ರಂಗಮಂಟಪದಂತಿದ್ದು, ಕೆಳಗಿನ ಚೌಕಾಕಾರದ ಮೇಲೆ ೧೬ ಭಾಗಗಳನ್ನೊಳಗೊಂಡು ವೃತ್ತಾಕಾರದಲ್ಲಿವೆ. ದೇವಾಲಯದ ಹೊರಗೋಡೆಯನ್ನು ಜೀರ್ಣೋದ್ಧಾರಗೊಳಿಸಲಾಗಿದ್ದು, ರಂಗಮಂಟಪದ ಅಧಿಷ್ಠಾನ ಭಾಗದಲ್ಲಿ ಉಪಾನ, ಜಗತಿ, ಗಳ ಮತ್ತು ಪದ್ಮ ಪಟ್ಟಿಕೆಗಳು ಮಾತ್ರ ಗೋಚರಿಸುತ್ತಿವೆ.

ಪ್ರಸ್ತುತ ಪ್ರದೇಶದ ಶಾಸನಗಳಲ್ಲಿ ಹೇರಳವಾಗಿ ಕಂಡುಬರುವ ದೇವಾಲಯಗಳು ಅಂದಿನ ಜನಜೀವನದ ಮೇಲೆ ಮಹತ್ವವಾದ ಪ್ರಭಾವವನ್ನು ಬೀರಿವೆ. ಅಂದು ಅವು ಭಕ್ತಿಯ ಕೇಂದ್ರಗಳಾಗಿರದೇ, ಅಂದಿನ ಸಾಮಾಜಿಕ, ಆರ್ಥಿಕ ಕಾರ್ಯಕಲಾಪಗಳನ್ನು ನಿಭಾಯಿಸುವ ಸಂಸ್ಥೆಗಳಾಗಿದ್ದು. ದೇವಾಲಯ ನಿರ್ಮಾಣ ಹಾಗೂ ಅವುಗಳ ಪೋಷಣೆಯಲ್ಲಿ ಅಂದಿನ ಅರಸರು ಮತ್ತು ಪ್ರಭು ವರ್ಗದವರ ಪಾತ್ರ ಪ್ರಧಾನವಾಗಿತ್ತು. ಈ ಪ್ರದೇಶದ ನೂರಾರು ಶಾಸನಗಳಲ್ಲಿ ಅನೇಕ ದೇವಾಲಯಗಳ ಹೆಸರುಗಳಿದ್ದು, ಅವು ಬೇರೆ ಬೇರೆ ಧರ್ಮಗಳಿಗೆ ಸೇರಲ್ಪಟ್ಟವುಗಳಾಗಿವೆ. ಅವುಗಳನ್ನು ಆಯಾ ಮತ-ದರ್ಮಗಳ ಹಿನ್ನೆಲೆಯಲ್ಲಿ ಗುರುತಿಸುವುದಾದರೆ, ಈ ಎಲ್ಲ ದೇವಾಲಯಗಳ ಒಂದು ಪಟ್ಟಿಯನ್ನು ಹೀಗೆ ನೋಡಬಹುದು.

ಅ.ನಂ	ತಾಲೂಕು	ಶೈವ	ವೈಷ್ಣವ	ಜೈನ	ಇತರೆ	ಒಟ್ಟು
೧	ಇಂಡಿ	೩೩	೦೨	೦೧	೦೪	೪೦
೨	ಮುದ್ದೇಬಿಹಾಳ	೫೪	೦೯	೦೦	೦೫	೬೮
೩	ಬಸವನ ಬಾಗೇವಾಡಿ	೨೧	೦೪	೦೧	೦೨	೨೮
೪	ಸಿಂದಗಿ	೪೩	೦೨	೦೧	೦೪	೫೦
೫	ವಿಜಯಪುರ	೧೯	೦೪	೦೦	೦೫	೨೮
	ಒಟ್ಟು	೧೭೦	೨೧	೦೩	೨೦	೨೧೪

ವಿಜಯಪುರ ಜಿಲ್ಲೆಯಲ್ಲಿರುವ ಶಾಸನೋಕ್ತ ದೇವಾಲಯಗಳ ಪಟ್ಟಿ

ಅ.ನಂ	ತಾಲೂಕು	ಜೈನ	ಶೈವ	ವೈಷ್ಣವ	ಇತರೆ	ಒಟ್ಟು
೧	ಇಂಡಿ		೨೫			

೨	ಮುದ್ದೇಬಿಹಾಳ		೦೭			
೩	ಬಸವನ ಬಾಗೇವಾಡಿ	೦೨	೩೧	೦೭	೦೧	೪೧
೪	ಸಿಂದಗಿ		೨೪			
೫	ವಿಜಯಪುರ		೧೬			
	ಒಟ್ಟು		೧೦೩			

Temples in Bijapur District

Taluk	Shaiva	Vaishnava	Jaina	Others	Total
Indi	33	02	01	04	40
Sindagi	43	02	01	04	50
Muddebihal	54	09	-	05	68
Basavana Bagewadi	21	04	01	02	28
Bijapur	19	04	-	05	28
Total	150	21	03	20	214

ಈ ಮೇಲಿನ ಕೋಷ್ಟಕಗಳನ್ನು ನೋಡಿದಾಗ ವಿಜಯಪುರ ಜಿಲ್ಲೆಯು ಶೈವ ಧರ್ಮದ ಪ್ರಮುಖ ಕೇಂದ್ರವಾಗಿರುವುದನ್ನು ಗುರುತಿಸಬಹುದು.

ಜಿಲ್ಲೆಯಲ್ಲಿ ಕಂಡುಬರುವ ದೇವಾಲಯಗಳು ವ್ಯಕ್ತಿನಾಮವನ್ನು ಸೂಚಿಸುವ ದೇವಾಲಯಗಳು ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತವೆ. ಐತಿಹಾಸಿಕ ವ್ಯಕ್ತಿಗಳು ದೇವರಾಗಿ ಪೂಜೆಗೊಳ್ಳುವ ಸಂಪ್ರದಾಯ ಪ್ರಾಗಿತಿಹಾಸ ಕಾಲದಿಂದಲೇ ಕಂಡುಬರುತ್ತದೆ. ಆದ್ದರಿಂದ ದೇವಾಲಯವನ್ನು ನಿರ್ಮಿಸಿದ ವ್ಯಕ್ತಿ. ತನ್ನ ಹೆಸರಿನಿಂದ ಇಲ್ಲವೆ ತನ್ನ ಪೂರ್ವಿಕರ ಹೆಸರಿನಿಂದ ಕರೆದು, ನಿರ್ವಹಣೆಗಾಗಿ ದಾನ ದತ್ತಿಗಳನ್ನು ಬಿಡುತ್ತಿದ್ದರು. ಉದಾ; ದಂಡನಾಯಕ ವಾಮದೇವಯ್ಯ ಪ್ರತಿಷ್ಠೆ ಮಾಡಿದ ವಾಮೇಶ್ವರ, ನೀಲಕಂಠ ನಾಯಕ ನಿರ್ಮಿಸಿದ ನೀಲಕಂಠೇಶ್ವರ, ಹೀಳಸೋವರಸನಿಂದ

ಸೋಮನಾಥ, ಶಿವರಾಜ ಚಮುಪನಿಂದ ನಿರ್ಮಿಸಿದ ಶಿವಲಿಂಗ, ಕೈಳತಾಸರಸರಿಂದ ಕೈಳಾಸೇಶ್ವರ, ಮಹಾಮಂಡಳೇಶ್ವರ ಕೊಪ್ಪರಸನಿಂದ ಕೊಪ್ಪೇಶ್ವರ, ಮೊದಲಾದವರು ದೇವಾಲಯಗಳನ್ನು ನಿರ್ಮಿಸಿ, ತಮ್ಮ ಹೆಸರಿನಿಂದ ಕರೆದಿದ್ದಾರೆ. ಅಧಿಕಾರಿಗಳು ಅರಸನ ಹೆಸರಿನಲ್ಲಿ ದೇವಾಲಯಗಳನ್ನು ನಿರ್ಮಿಸಿ ತಮ್ಮ ಹೆಸರಿನಿಂದ ಕರೆದಿದ್ದಾರೆ. ಅಧಿಕಾರಿಗಳು ಅರಸನ ಹೆಸರಿನಲ್ಲಿ ದೇವಾಲಯವನ್ನು ಕಟ್ಟಿಸಿ ದಾನ ದತ್ತಿಗಳನ್ನು ಬಿಟ್ಟಿರುವ ವಿವರಗಳನ್ನು ಈ ಭಾಗದ ಅನೇಕ ಶಾಸನಗಳು ವ್ಯಕ್ತಪಡಿಸುತ್ತವೆ.

ಈ ಜಿಲ್ಲೆಯಲ್ಲಿ ಶಾಸನೋಕ್ತ ಶೈವ ದೇವಾಲಯಗಳನ್ನು ಡಾ. ಎಸ್.ಕೆ. ಕೊಪ್ಪ ಅವರು ಹೀಗೆ ಗುರುತಿಸಿದ್ದಾರೆ. ಇಂಡಿ ತಾಲೂಕಿನಲ್ಲಿ ೨೫, ಸಿಂದಗಿ ತಾಲೂಕಿನಲ್ಲಿ ೨೪, ಮುದ್ದೇಬಿಹಾಳ ತಾಲೂಕಿನಲ್ಲಿ ೦೭, ಬಸವನ ಬಾಗೇವಾಡಿ ತಾಲೂಕಿನಲ್ಲಿ ೩೧ ಮತ್ತು ವಿಜಯಪುರ ತಾಲೂಕಿನಲ್ಲಿ ೧೬ ಒಟ್ಟು ೧೦೩ ಶಾಸನೋಕ್ತವಾದ ಶೈವ ದೇವಾಲಯಗಳು ಜಿಲ್ಲೆಯಲ್ಲಿ ಇವೆ. ಅವುಗಳಲ್ಲಿ ಇಂಡಿ ತಾಲೂಕಿನಲ್ಲಿ ರೂಗಿಯ ನಗರೇಶ್ವರ, ಕೇದಾರದೇವ, ಚಡಚಣದ ಕುಂಭೇಶ್ವರ, ಅಗರಖೇಡದ ಕೈಳಾಸೇಶ್ವರ ಮತ್ತು ಸ್ವಯಂಭುದೇವ, ಹಿರೇಬೆವಿನೂರಿನ ಪುರಮಠದ ಬೋಗೇಶ್ವರ, ಖ್ಯಾಡಗದ ಕಂಕೇಶ್ವರ, ಚಿಕ್ಕಮಣ್ಣೂರದ ಸ್ವಯಂಭುದೇವ ಭೀಮೇಸ್ವರ, ಭುಯ್ಯಾರದ ಮಲ್ಲಿಕಾರ್ಜುನ, ನಿಂಬಾಳದ ಕೋಟಿಶಂಕರದೇವ, ಹಲಸಂಗಿಯ ಸ್ವಯಂಭುದೇವ, ತಂಬದ ಮೂಲಸ್ಥಾನ ಮತ್ತು ಭೋಪ್ಪೇಶ್ವರ, ಉಮರಜದ ಕನ್ನೇಶ್ವರ, ಸೋಮನಾಥ, ಸಾಲೋಟಗಿಯ ಭೋಗೇಶ್ವರ ಮತ್ತು ಗೊತ್ತೇಶ್ವರ, ತೆನಿಹಳ್ಳಿಯ ಸೋಮನಾಥ ದೇವಾಲಯಗಳು

ಸಿಂದಗಿ ತಾಲೂಕಿನ ದೇವೂರದ ಮಾರಸಿಂಘೇಶ್ವರ, ಕನ್ನೊಳ್ಳಿಯ ಭೋಗೇಶ್ವರ, ಅಲಮೇಲದ ಉತ್ತರೇಶ್ವರ, ಕುಳೆಕುಮಟಗಿಯ ಚಂಡೇಶ್ವರ, ಯರಗಲ್‌ದ ರಾಮೇಶ್ವರ, ಲಕ್ಷ್ಮಣೇಶ್ವರ, ಸಿಂದಗಿಯ ಮೂಲಸ್ಥಾನದೇವ, ಕಡ್ಲೇವಾಡದ ಸೋಮನಾಥದೇವ, ಮಲಘಾಣದ ದಿವಾಕಲೇಶ್ವರ, ಸೋಮೇಶ್ವರ ಮಹಾದೇವೆಶ್ವರ ಮತ್ತು ಸ್ವಯಂಭುದೇವ, ದೇವರ ನಾವದಗಿಯ ಮಲ್ಲಿಕಾರ್ಜುನ, ಚಿಕ್ಕರೂಗಿಯ ನಾಗೇಶ್ವರ, ಹಿಪ್ಪರಗಿಯ ಕಲಿದೇವ, ಮಂದೇವಾಲದ ಕಲಿದೇವ, ಕೊಪ್ಪೇಶ್ವರ, ಪಡಗಾನೂರದ ಅಚಲೇಶ್ವರ, ಮುಂತಾದವು.

ಬಸವನ ಬಾಗೇವಾಡಿ ತಾಲೂಕಿನ ಬ್ಯಾಕೋಡದ ಸೊಮೇಶ್ವರ, ಮನಗೂಳಿಯ ಭೋಗೇಶ್ವರ, ಚಿಮ್ಮಲಗಿಯ ಸಕಳೇಶ್ವರ, ಹೆಬ್ಬಾಳದ ದಕ್ಷಿಣ ಸೋಮನಾಥ, ಮುತ್ತಗಿಯ ತಿಕೇಶ್ವರ, ರಾಮೇಶ್ವರ, ಸಿದ್ದೇಶ್ವರ, ಚಟ್ಟೇಶ್ವರ, ಕೋಣೆಯ ಸಂಕೇಶ್ವರ, ವಿಮಳೇಶ್ವರ ಮತ್ತು ಪಾರೇಶ್ವರ, ಮನಗೂಳಿಯ ಶಂಖಕೇಶ್ವರ ಭೋಗೇಶ್ವರ ಮತ್ತು ಸಿದ್ದಲಿಂಗ ಕಲಿದೇವೇಶ್ವರ, ಸಾಲವಾಡಗಿಯ ಹೊರೆಯಮೇಶ್ವರ ಸಿದ್ದನಾಥ, ಪಾಪವಿನಾಶದೇವ, ಯಾಳವಾರದ ಗವರೇಶ್ವರ ಮತ್ತು ಗಂಗೇಶ್ವರ,

ಬಾಗೇವಾಡಿಯ ಮಲ್ಲಿಕಾರ್ಜುನ, ಸೋಮನಾಥ, ಇಂಗಳೇಶ್ವರದ ಸೋಮನಾಥ, ತ್ರಿಕೂಟದ ನೀಲಕಂಠೇಶ್ವರ ಮುಂತಾದವು.

ಮುದ್ದೇಬಿಹಾಳ ತಾಲೂಕಿನ, ಬಿದರಕುಂದಿಯ ಶಿವಾಲಯ, ಬಾವೂರದ ಮೂಲಸ್ಥಾನ, ತಮದಡ್ಡಿಯ ಬಲೀಶ್ವರ ಮತ್ತು ನಾಲತವಾಡದ ಕಲಿದೇವ, ರೇಚೇಶ್ವರ, ವರದಾನಿ ಮತ್ತು ಪುರುಶೇಶ್ವರ, ಹಂದರಗಲದ ತ್ರಿಕೂಟಾಲಯ.

ವಿಜಯಪುರದ ತಾಲೂಕಿನ ಹೊನವಾಡದ ಸಿದ್ಧೇಶ್ವರ, ಕಾಖಂಡಕಿಯ ಸಿದ್ಧೇಶ್ವರ, ವಿಜಯಪುರದ ಸಿದ್ಧೇಶ್ವರ ಮತ್ತು ಗೋಪಾದೇಶ್ವರ, ಕನ್ನೂರದ ಚಂಡೇಶ್ವರದೇವ, ಕತಕನಹಳ್ಳಿಯ ಮಲ್ಲಿಕಾರ್ಜುನ, ನಿಡೋಣಿಯ ಗವರೇಶ್ವರ ಸೋಮನಾಥ ಮತ್ತು ಸೂರ್ಯ ಕುಮಟಗಿಯ ಮೂಲಸ್ಥಾನ ಮತ್ತು ಯೋಗೇಶ್ವರ, ಅರ್ಜುಣಗಿಯ ಸ್ವಯಂಭೂ ಮಲ್ಲಿಕಾರ್ಜುನ, ಇವು ಈ ಜಿಲ್ಲೆಯಲ್ಲಿರುವ ಪ್ರಮುಖವಾದ ಶಾಸನೋಕ್ತ ಶೈವ ದೇವಾಲಯಗಳಾಗಿವೆ. (ವಿಜಾಪುರ ಜಿಲ್ಲಾ ಸಾಂಸ್ಕೃತಿಕ ಪರಂಪರೆ, ಪು. ೧೫೪-೧೫೫)

ಅಲ್ಲದೆ ಜಿಲ್ಲೆಯ ಶಾಸನಗಳನ್ನು ಅವಲೋಕಿಸಿದಾಗ ಸುಮಾರು ೮೨ಕ್ಕೂ ಹೆಚ್ಚು ಶಾಸನಗಳಲ್ಲಿ ಶೈವ ಧರ್ಮ ದೇವಾಲಯಕ್ಕೆ ಹಾಗೂ ಕಾಳಾಮುಖ ಗುರುಗಳಿಗೆ ದಾನ ದತ್ತಿ ನೀಡಿರುವುದನ್ನು ಗುರುತಿಸಬಹುದು. ಇದರಿಂದ ಈ ಜಿಲ್ಲೆಯಾದ್ಯಂತ ಶೈವ ಧರ್ಮವು ಪ್ರಭಲವಾಗಿದ್ದುದಕ್ಕೆ ಸಾಕ್ಷಿಯಾಗಿವೆ.

ಕೊನೆ ಟಿಪ್ಪಣಿಗಳು :

೧. ಭಟ್ಟಾಚಾರ್ಯ, ಬಿ., ಶೈವಿಸಮ್ ಅಂಡ್ ಪಬ್ಲಿಕ್ ವರ್ಲ್ಡ್, ಭಾಗ-೨, ಪು.೫೫೯

೨. ಮಾರ್ಷಲ್, ಜೆ., ಮೆಹೆಂಜೋಧಾರೋ ಅಂಡ್ ಇಂಡಿಯನ್ ಸಿವಿಲಿಝೇಶನ್, ಭಾಗ,೧, ಪರಿಚಯ ಭಾಗ

೩. ಆಲ್ಶೆಹಿನ್ ಡ್ಯಾನಿಯಲ್., ಹಿಂದೂ ಪಾಲಿತೀಇಸಜ್, ಪು.೧೮೮

೪. ಚಿದಾನಂದಮೂರ್ತಿ, ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸಂ-೧, ಪು.೧೩೭

೫. ಅದೇ,ಪು.೧೩೭

೬. ಸರ್ ಚಾರ್ಲ್ಸ್ ಎಲಿಯಟ್., ಹಿಂದೂಯಿಸಮ್ ಅಂಡ್ ಬುದ್ಧಿಸಮ್, ಸಂ-೨, ಪು. ೧೪೩

೭. ರೈಸ್, ಬಿ.ಎಲ್., ಎ.ಕ. ಸಂ.,೭, ಪು.೨೦೦

೮. ಇಂಡಿಯನ್ ಆ್ಯನ್ಟಿಕ್ವರಿ, ಸಂ-೧೯, ಪು.೭

೯. ದಿವಾಕರ, ಆರ್.ಆರ್., ಕರ್ನಾಟಕದ ಪರಂಪರೆ, ಸಂ-೧., ಪು.೪೪

೧೦. ರಾಜಶೇಖರ್, ಎಸ್., ದಕ್ಷಿಣ ಭಾರತದ ವಾಸ್ತುಶಿಲ್ಪಕ್ಕೆ ಬಾದಾಮಿ ಚಾಲುಕ್ಯರ ಕೊಡುಗೆ, ಪು.೧೨

೧೧. ಭಂಡಾರ್ಕರ್, ಆರ್.ಜಿ., ವೈಷ್ಣವಿಸಮ್, ಶೈವಿಸಮ್ ಅಂಡ್ ಮೈನರ್ ರಿಲಿಜಿಯನ್ ಸಿಸ್ಟಮ್, ಪು.೧೭೨

೧೨. ಭಂಡಾರ್ಕರ್, ಆರ್.ಜಿ., ವೈಷ್ಣವಿಸಮ್, ಶೈವಿಸಮ್ ಅಂಡ್ ಮೈನರ್ ರಿಲಿಜಿಯನ್ ಸಿಸ್ಟಮ್, ಪು.೧೭೨

೧೩. ದಿವಾಕರ, ಆರ್.ಆರ್., ಕರ್ನಾಟಕದ ಪರಂಪರೆ, ಸಂ-೧., ಪು.೧೮೧

೧೪. ಕೃಷ್ಣರಾಯ, ಕೆ., ಕರ್ನಾಟಕ ಲಾಕುಳ ಶೈವರ ಇತಿಹಾಸ, ಪು.೧೦೭

೧೫. ಶಿವತಾರಕ ಕೆ.ಬಿ., ಪು.೪೨೫

೧೬. ವಾಸುದೇವ ಬಡಿಗೇರ, ಪು. ೦೪

೧೭. ವಾಸುದೇವ ಬಡಿಗೇರ ಪು.೦೬

೧೮. SII, XX, No.93

೧೯. ಸುಭಾಸ ರಾ. ಚಿಂಚೋಳ್ಳಿ, ಪು.

೨೦. ಸುಭಾಸ ರಾ. ಚಿಂಚೋಳ್ಳಿ ಪು.

೨೧. ವಾಸುದೇವ ಬಡಿಗೇರ ಪು. ೬೮

೨೨. ವಾಸುದೇವ ಬಡಿಗೇರ ಪು.೬೯

೨೩. ಸುಭಾಸ ರಾ. ಚಿಂಚೋಳ್ಳಿ., ಪು.೧೪೮

೨೪. ಚಿಂಚೊಳ್ಳಿ ರಾ. ಸುಭಾಸ. ಪು. ೧೬೮

೨೫. ಬಸವನ ಬಾಗೇವಾಡಿ. ಪು. ೯೮

೨೬. ಬಸವನ ಬಾಗೇವಾಡಿ. ಪು.೧೦೧

ಅಧ್ಯಾಯ ಆರು

ನಂಬಿಕೆ ಮತ್ತು ಆಚರಣೆಗಳು

ಮಾನವನ ವಿಕಾಸ ಮಾರ್ಗದಲ್ಲಿ ಧರ್ಮದ ಪಾತ್ರ ಮಹತ್ತರವಾಗಿದೆ. ಇದು ಭೂಮಂಡಲದ ಎಲ್ಲ ದೇಶಗಳ, ಎಲ್ಲ ಜನಾಂಗದ, ಎಲ್ಲ ಕಾಲದ ಮನುಷ್ಯನ ಬದುಕಿಗೆ ತೋರುದಾರಿಯಾಗಿದೆ. ಜಗತ್ತಿನ ಎಲ್ಲ ಭಾಗದ ಜನರು ತಮ್ಮ ತಮ್ಮ ಆತ್ಮತೃಪ್ತಿಗಾಗಿ ಧರ್ಮವನ್ನು ರೂಪಿಸಿಕೊಂಡಂತೆ ಭಾರತವೂ ಕೂಡಾ ಧರ್ಮವನ್ನು ರೂಪಿಸಿಕೊಂಡಿದೆ. ಅಷ್ಟೇ ಅಲ್ಲ, ಅದನ್ನು ಇಡೀ ಬದುಕಿನ ಸಾರಸರ್ವಸ್ವವನ್ನಾಗಿಸಿಕೊಂಡಿದೆ. ಪ್ರಾಗೈತಿಹಾಸಿಕ ಕಾಲದಿಂದಲೂ ಭಾರತವು ಧರ್ಮದ ವಿಷಯದಲ್ಲಿ 'ಪ್ರಪಂಚದ ಗರ್ಭಗುಡಿ' ಎಂದೇ ಜನಜನಿತವಾಗಿದೆ. ಭಾರತದಲ್ಲಿ ಪ್ರಮುಖವಾಗಿ ಹಿಂದು ಬೌದ್ಧ, ಜೈನ, ಪಾರಸಿ, ಸಿಖ್ ಮುಂತಾದ ಧರ್ಮಗಳು ಪ್ರಚಲಿತದಲ್ಲಿವೆ. ಅದರಲ್ಲಿ ಹಿಂದು ಧರ್ಮದಲ್ಲಿ ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಕ್ತಿ ವಿಶಿಷ್ಟಾದ್ವೈತ ಮುಂತಾದ ಸಿದ್ಧಾಂತಗಳು ರೂಪುಗೊಂಡು ಮನುಷ್ಯನ ಬದುಕಿಗೆ ಹೊಸಬೆಳಕನ್ನು ನೀಡುತ್ತಲೇ ಬಂದಿವೆ.

ಪ್ರಾಚೀನ ಕಾಲದಿಂದಲೂ ಶೈವ, ವೈಷ್ಣವ, ಶಾಕ್ತ ಎಂಬ ಮೂರು ಪ್ರಧಾನ ಪಂಥಗಳು ಬೆಳೆದು ಬಂದವು. ಶಿವನ ಉಪಾಸಕರು ಶೈವ –ವೀರಶೈವರೆನಿಸಿದರೆ, ವಿಷ್ಣುವಿನ ಉಪಾಸಕರು ವೈಷ್ಣವ, ಶ್ರೀವೈಷ್ಣವ, ಭಾಗವತರೆನಿಸಿದ್ದಾರೆ. ಶಾಕ್ತರು ಶಕ್ತಿ ಅಥವಾ ಮಾತೃದೇವತೆಯ ಆರಾಧಕರಾಗಿದ್ದಾರೆ.

ಶಿವೋಪಾಸನೆ ಅತ್ಯಂತ ಪ್ರಾಚೀನವಾದುದಾಗಿದೆ. ಇತಿಹಾಸ ಪೂರ್ವ ಯುಗದಿಂದಲೂ ಇದರ ಅಸ್ತಿತ್ವವನ್ನು ವಿದ್ವಾಂಸರು ಗುರುತಿಸಲೆತ್ನಿಸಿದ್ದಾರೆ. ಆರ್ಯರಿಗಿಂತಲೂ ಪೂರ್ವದ ದ್ರಾವಿಡ ಜನಾಂಗದ ನೆಲೆಯೆನ್ನಲಾದ ಹರಪ್ಪಾ ಮೆಹೆಂಜೋದಾರೊ ಸಂಸ್ಕೃತಿಯ ನೆಲೆಗಳಲ್ಲಿ ಮಾಡಿದ ಉತ್ಖನನಗಳಲ್ಲಿ ಕಂಡು ಬಂದ ವೃಷಭ, ಪಶುಪತಿ ಮುಂತಾದ ಮುದ್ರೆಗಳನ್ನು, ಲಿಂಗಾಕೃತಿಗಳನ್ನು ಗಮನಿಸಿದರೆ ಇದು ಬಹುಮಟ್ಟಿಗೆ 'ಶಿವೋಪಾಸಕ ಸಂಸ್ಕೃತಿ' ಅಥವಾ ಶಿವಪರ ಸಂಸ್ಕೃತಿ ಆಗಿರುವುದು ಸ್ಪಷ್ಟವಾಗುತ್ತದೆ.

ಶಿವೋಪಾಸಕ ಧರ್ಮದಲ್ಲಿ ಪ್ರಾರಂಭದಿಂದಲೂ ಕಂಡುಬರುವ ಪ್ರಮುಖ ಲಕ್ಷಣವೆಂದರೆ, ಸೃಷ್ಟ್ಯಾತ್ಮಕವಾದ ವಿಶ್ವತತ್ವದ ಉಪಾಸನೆ ಮತ್ತು ಧ್ಯಾನ. ಇಂದಿಗೂ ಭಾರತದಾದ್ಯಂತ ಇರುವ ಶೈವ ದೇವಾಲಯಗಳಲ್ಲಿ ಶಿವನನ್ನು "ಸ್ವಯಂಭು ಶಿವಲಿಂಗ" ರೂಪದಲ್ಲಿ ಪೂಜಿಸುವ ಪರಂಪರೆ ಅತ್ಯಂತ

ಪ್ರಾಚೀನವಾದುದು. ಹಾಗೆಯೇ ಶೈವ ಧರ್ಮದಲ್ಲಿ ಪ್ರಾಚೀನ ಕಾಲದಿಂದಲೇ ಅನೇಕ ನಂಬಿಕೆ, ಸಂಪ್ರದಾಯಗಳು ಬೆಳೆದುಬಂದಿವೆ.

ಸಂಪ್ರದಾಯ, ನಂಬಿಕೆಗಳು ನಿತ್ಯವ್ಯವಹಾರದ ಪದ್ಧತಿಗಳೂ ಅವುಗಳ ಹಿನ್ನೆಲೆಯಲ್ಲಿರುವ ಕಲ್ಪನೆಗಳೂ, ಉದ್ದೇಶಗಳು ಕಲೆತು ಸಂಪ್ರದಾಯವಾಗಿ ರೂಪ ತಳೆಯುತ್ತವೆ. ಇನ್ನು ನಂಬುಗೆಗಳು ಮಾನವನ ಮನಸ್ಸಿನ ಪ್ರಕ್ರಿಯೆಗಳಾಗಿವೆ. ಹೀಗಾಗಿ ಮನುಷ್ಯನ ಜೀವನ ಹೆಚ್ಚಾಗಿ ಸಂಪ್ರದಾಯ, ನಂಬಿಕೆಗಳನ್ನು ರೂಢಿಸಿಕೊಂಡು, ಬೆಳೆಸಿಕೊಂಡು ಬಂದಿದೆ. ಇವುಗಳ ಹುಟ್ಟು ಬೆಳವಣಿಗೆಗೆ ಸಮಾಜಶಾಸ್ತ್ರಜ್ಞರು ಕೊಡುವ ಕಾರಣಗಳಲ್ಲಿ ಧಾರ್ಮಿಕ ಪದ್ಧತಿ ಬಹು ಮುಖ್ಯವಾದುದು. ಈ ಹಿನ್ನೆಲಯಲ್ಲಿ ದಾನ–ವ್ರತ, ನದೀಸ್ನಾನ, ಶುಭಾಶುಭ, ಪುಣ್ಯ–ಪಾಪಗಳ ಕಲ್ಪನೆ ಬೆಳೆದು ಬಂದಿದೆ. ಈ ಧಾರ್ಮಿಕ ಆಚರಣೆಗಳು ಮತ್ತು ಅವುಗಳ ಫಲಾಫಲಗಳು ಎಷ್ಟರ ಮಟ್ಟಿಗೆ ಜನಪ್ರಿಯತೆಯನ್ನು ಪಡೆದವೆಂದರೆ ಪ್ರಾಚೀನ ಕಾಲಘಟ್ಟದಿಂದ ಇಂದಿಗೂ ಸಹ ತೀರ್ಥಸ್ನಾನಗಳು, ಗ್ರಹಣಗಳ ಸಂದರ್ಭದಲ್ಲಿಯ ಆಚರಣೆಗಳು, ದೇವರಿಗೆ ನಿತ್ಯಪೂಜೆಗಳು, ವಿಶೇಷಪೂಜೆಗಳು, ಜಾತ್ರೆಗಳು, ಹಬ್ಬಗಳು, ವ್ರತಗಳು ಪ್ರಚಲಿತವಿರುವದನ್ನು ಗಮನಿಸಬಹುದು.

ಅಧ್ಯಯನ ಕ್ಷೇತ್ರದಲ್ಲಿಯೂ ಅನೇಕ ಆಚರಣೆಗಳ ಜೊತೆಯಲ್ಲಿ ದೈವಿಕ ನಂಬಿಕೆಗಳು ಅಸ್ತಿತ್ವದಲ್ಲಿದ್ದವು. ಶಗುನ ರೂಪದ ಪೂಜೆ, ಪೌರಾಣಿಕ ದೇವರುಗಳ ಪೂಜೆ, ಪವಿತ್ರಕಲ್ಲುಗಳು, ಗಿಡಗಳು, ವೀರಗಲ್ಲು, ಸತೀಗಲ್ಲು ಹಾಗೂ ನಂತರದ ಅವಧಿಯಲ್ಲಿ ನವಗ್ರಹ ಪೂಜೆ ಜನಪ್ರಿಯಗೊಂಡಿರುವದನ್ನು ಗಮನಿಸಬಹುದು. ಪ್ರಾರ್ಥನೆಗಳು, ಪ್ರಾಯಶ್ಚಿತ್ತ ಸಂದರ್ಭಗಳು ಮತ್ತು ತೀರ್ಥಯಾತ್ರೆಗಳು ಮಹತ್ವ ಪಡೆದಿದ್ದವು ಎಂಬುದು ಶಾಸನಗಳಿಂದ ಹಾಗೂ ಇಲ್ಲಿಯ ಪುರಾತತ್ವೀಯ ಅವಶೇಷಗಳಿಂದ ತಿಳಿದುಬರುತ್ತದೆ.

ದಾನ–ವ್ರತ

ವ್ಯಕ್ತಿಯ ಶ್ರೇಯಸ್ಸಿಗಾಗಿ, ಪುಣ್ಯಾರ್ಜನೆಗಾಗಿ ದಾನಬಿಡುವ ಪದ್ಧತಿ ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದಲ್ಲಿ ಒಂದು ಮೌಲ್ಯವಾಗಿತ್ತು. ಪ್ರಭುವರ್ಗದವರು ದಾನ, ಧರ್ಮ, ಹೋಮ ಹವನಾದಿಗಳನ್ನು ಸಾಮಾನ್ಯವಾಗಿ ಪುತ್ರೋತ್ಸವ, ಜಾತಕರ್ಮ, ಪಟ್ಟಾಭಿಷೇಕ, ವರ್ಧಂತಿ ಮೊದಲಾದ ಸಂದರ್ಭಗಳಲ್ಲಿ ಮಾಡುತ್ತಿದ್ದರು, ದಾನಬಿಡಲು ಹಬ್ಬ ಹರಿದಿನ, ಸೂರ್ಯಗ್ರಹಣ, ಚಂದ್ರಗ್ರಹಣಗಳ ಕಾಲ ಪ್ರಶಸ್ತವೆನ್ನುವ ನಂಬಿಕೆಯಿತ್ತು. ಹೆಚ್ಚಿನ ದಾನಗಳೆಲ್ಲ ಇಂಥ ಸಂದರ್ಭಗಳಲ್ಲೇ ಬಿಟ್ಟಿರುವುದನ್ನು ಶಾಸನಗಳು ಸಮರ್ಥಿಸುತ್ತವೆ. 'ಚಂದ್ರಗ್ರಹಣದಂದು ಮಾಡಿದ ದಾನಫಲವು

ನೂರರಷ್ಟು ಅಧಿಕ, ಸೂರ್ಯಗ್ರಹಣದಂದು ಮಾಡಿದ ದಾನದ ಫಲವು ಸಹಸ್ರದಷ್ಟು ಅಧಿಕ ಹಾಗೆಯೇ ವಿಷುವ ದಿನಗಳಂದು ಮಾಡಿದ ದಾನದ ಫಲವು ಶತಸಹಸ್ರದಷ್ಟು ಅಧಿಕ'ವೆಂಬ ನಂಬಿಕೆ ನಮ್ಮಲ್ಲಿರುವದರಿಂದ ಗ್ರಹಣಗಳು ಸಂಭವಿಸಿದ ದಿನಗಳಂದು ಅದರಲ್ಲೂ ಸೂರ್ಯಗ್ರಹಣಗಳ ನಿಮಿತ್ತ ದೇವಾಲಯಗಳಲ್ಲಿ ವಿಶೇಷಪೂಜೆಗಳನ್ನು, ದಾನ ಪ್ರಕ್ರಿಯೆಗಳನ್ನು ಕೈಗೊಳ್ಳುವದು ವಾಡಿಕೆಯಾಗಿತ್ತು. ದಾನವಸ್ತುವಾಗಿ ಧನ, ಬಂಗಾರ ಮತ್ತು ಗೋವುಗಳನ್ನು ನೀಡಲಾಗುತ್ತಿತ್ತು. ಗ್ರಹಣ ಸಂದರ್ಭದಲ್ಲಿ ಉಪವಾಸವಿದ್ದು, ಗ್ರಹಣ ಬಿಟ್ಟ ಮೇಲೆ ಮನೆಗಳನ್ನು ಸ್ವಚ್ಛಗೊಳಿಸಿ, ಸ್ನಾನದ ನಂತರವೇ ಭೋಜನವನ್ನು ತಯಾರಿಸುವ ಪದ್ಧತಿಯು ನಮ್ಮಲ್ಲಿ ಇಂದಿಗೂ ಇದೆ. ಅದರಂತೆ ಗರ್ಭಿಣಿ ಮಹಿಳೆಯರು ಗ್ರಹಣವನ್ನು ವೀಕ್ಷಿಸುವದರಿಂದ ದೈಹಿಕ ಅಂಗವಿಕಲತೆಯುಳ್ಳ ಮಕ್ಕಳು ಜನಿಸುತ್ತಾರೆಂಬ ಭಾವನೆಯಿದೆ. ಮತ್ತು ಗ್ರಹಣದ ಮರುದಿನ ಬಡವರು, ಬ್ರಾಹ್ಮಣರು ಮತ್ತು ಶೂದ್ರರಂತವರಿಗೆ ಅನ್ನಸಂತರ್ಪಣೆ ಮಾಡಲಾಗುತ್ತದೆ.

ಎರಡನೇ ಜಗದೇಕಮಲ್ಲನ ತರ್ದವಾಡಿ ನಾಡಿನ ಹಂದರಗಲ್ ಶಾಸನ ದೇವಾಲಯದಲ್ಲಿ ದರ್ಮಕಾರ್ಯ ಮಾಡಿಕೊಳ್ಳುವುದನ್ನು ಸೂಚಿಸಿದೆ.[೧] ಯುವರಾಜ ಮಲ್ಲಿಕಾರ್ಜುನ ದೇವರ ಪರಮಾರಾಧ್ಯರಾದ ಲಕ್ಷ್ಮೀಧರ ಭಟ್ಟೋಪಾಧ್ಯಾಯರು ಮಹಾದಾನ ನಿಮಿತ್ತವಾಗಿ ಖೇಡದ ಸ್ವಯಂಭುದೇವರಿಗೆ ಎಂಬತ್ತು ಮತ್ತರು ಭೂಮಿಯನ್ನು ಬಿಟ್ಟುದಾಗಿ ಕ್ರಿ.ಶ. ೧೧೧೦ರ ಅಗರಖೇಡ ಶಾಸನ ತಿಳಿಸುತ್ತದೆ.[೨] ಕ್ರಿ.ಶ. ೮೬೨ರ ನೃಪತುಂಗನ ಹೂವಿನ ಹಿಪ್ಪರಗಿ ಶಾಸನ ಅರಸು ಸೂರ್ಯಗ್ರಹಣದಂದು ತುಲಾಪುರುಷ ದಾನ ಕಯ್ಕೊಂಡು ಜ್ಯೋತಿಷ್ಯ ಶಕುನ ನಿಮಿತ್ತಗಳನ್ನು ಬಲ್ಲ ಗೋಲೆಯಭಟ್ಟನಿಗೆ ಹಿಪ್ಪರಗೆಗ್ರಾಮ ಬಿಟ್ಟುಕೊಟ್ಟುದನ್ನು ತಿಳಿಸಿದೆ. ದಾನಿ ತನ್ನ ತೂಕದ ಚಿನ್ನ ಕೊಡುವುದು ತುಲಾಪುರುಷ ದಾನ ವೈಶಿಷ್ಟ್ಯವಾಗಿದೆ. ಈ ನಾಡಿನ ಗೋವಿಂದ ದಂಡಾಧಿಪ ತನ್ನ ಜನ್ಮದಿನದಂದು ಸಾಲೊಟಗಿಯ ಸಾಲೆಗೆ ಮತ್ತು ಪ್ರತಿವರ್ಷ ಆ ದಿನದಂದು ಅಲ್ಲಿನ ಅತಿಥಿಗಳ ಭೋಜನ ವ್ಯವಸ್ಥೆಗೆ ದಾನ ನೀಡಿದ ಉಲ್ಲೇಖ ಅಲ್ಲಿನ ಶಾಸನದಲ್ಲಿದೆ.[೩] ಕ್ರಿ.ಶ. ೧೦೬೨ರ ಹೊನವಾಡ ಶಾಸನ ಚಾಳುಕ್ಯ ತ್ರೈಲೋಕ್ಯಮಲ್ಲನ ಪತ್ನಿ ಕೇತಲದೇವಿಯು ಮಾರ್ಗಶಿರ ಬಹುಳ ಪಾಡಿವ(ಮಾದಿ)ತ್ಯವಾರಂ ಸೋಮಗ್ರಹಣ ನಿಮಿತ್ತದಿಂ ಸಿದೇಶ್ವರದೇ(ವ)ಗ್ಗ್ ಗಾಣ ಮತ್ತು ತೋಟವನ್ನು ದಾನ ನೀಡಿದಂತೆ ಹೇಳಿದೆ.[೪]

ಹಿರೇಬೇವಿನೂರ ಶಾಸನ ಬೊಪ್ಪಣ ಚಮೂಪನ ಸತಿ ಸಿರಿದೇವಿಯಕ್ಕ ವ್ರತಸಾರ ಸಮುಚ್ಚಯ ಮತ್ತು ಸ್ಮೃತಿಗಳಲ್ಲಿರುವ ನೋಂಪಿಗಳನ್ನೆಲ್ಲ ಮಾಡಿ 'ಕ್ಷಿತಿರುಹನೋಂಪಿ' ಒಂದುಳಿದೆಯೆಂದು ಕೇಳಿ ತಿಳಿದು ಪರಮಾನಂದದಿಂದ ನಾನಾ ವನಸ್ಪತಿಗಳನ್ನು ನೆಟ್ಟು ಅದನ್ನು

ಆಚರಿಸಿದುದನ್ನು ತಿಳಿಸಿದೆ.[೫] ತ್ರೈಲೋಕ್ಯ ಮಲ್ಲದೇವರ ಪಿರಿಯರಸಿ ಮೈಳಲದೇವಿ ಸೋಮಗ್ರಹಣ ಪರ್ವ ನಿಮಿತ್ತ ಬಲ್ಲವರಸರ ಸಂಮುಖದಲ್ಲಿ ಲಕ್ಷಹೋಮ ನಡೆಸಿದ್ದುದನ್ನು ಹೊನವಾಡ ಶಾಸನ ಉಲ್ಲೇಖಿಸಿದೆ.[೬] ಕ್ರಿ.ಶ. ೧೦೬೨ರ ಚಡಚಣದ ಶಾಸನ ಕಳಚುರಿ ಕನ್ನಮರಸನು ಮಂಗಳವೇಡೆಯಿಂದ ಆಳುತ್ತಿರುವಾಗ ಅವನ ಅಧಿಕಾರಿಯಾದ ಪ್ರಭುರಾಜ ಚಟ್ಟನ ಪುತ್ರ ರಾಜಿತಕೀರ್ತಿ ವಿಳಾಸದಂತಿದ್ದ ದಾಸನು ಸೂರ್ಯಗ್ರಹಣ ನಿಮಿತ್ತವಾಗಿ ಚಟ್ಟಿತಾಣದ ಮುದ್ಧರಾಜರಿಗೆ ಚಟಿಹಳ್ಳಿಯನ್ನು ದಾನವಾಗಿ ನೀಡಿದ ಉಲ್ಲೇಖವಿದೆ.[೭] ಕ್ರಿ.ಶ. ೧೧೭೦ರ ಕಳಚುರಿ ರಾಯಮುರಾರಿ ಸೋವಿದೇವನ ಕಾಲದ ಶಾಸನ ಶ್ರೀ ಖೇಡದ ಶ್ರೀ ಕೈಳಾಸೇಶ್ವರದೇವರ ನಂದಾದೀವಿಗೆಗೆ ಬಬ್ಬಗಾವುಂಡ ಮತ್ತು ಲಕ್ಷ್ಮಾದೇವಿಯರು ಸೂರ್ಯಗ್ರಹಣದಂದು ಒಂದು ಗಾಣವನ್ನು ನೀಡಿದ್ದನ್ನು ತಿಳಿಸುತ್ತದೆ.[೮] ಹೀಗೆ ಗ್ರಹಣದ ದಿನದಂದು ದಾನ ಕೊಟ್ಟಿರುವುದು ಅನೇಕ ಶಾಸನಗಳಿಂದ ತಿಳಿದುಬರುತ್ತದೆ.

ತೀರ್ಥಸ್ನಾನ:

ತಪಸ್ಸು, ತೀರ್ಥಕ್ಷೇತ್ರಯಾತ್ರೆ ಮತ್ತು ದಾನಗಳಂತಹ ಸತ್ಕಾರ್ಯಗಳನ್ನು ಹಾಗೂ ಪ್ರತಿಫಲಾಪೇಕ್ಷೆಯಿಲ್ಲದೇ ದೇವರನ್ನು ಪೂಜಿಸಿ ಮನಸ್ಸನ್ನು ಪವಿತ್ರಗೊಳಿಸಿಕೊಳ್ಳುವದು ಕರ್ಮಯೋಗವೆನಿಸಿಕೊಳ್ಳುವದು. ಪಂಚಭೂತಗಳಲ್ಲಿ ಒಂದಾದ ಜಲವು ಭಾರತೀಯರಿಗೆ ಗಂಗೆಯ ಸ್ವರೂಪವಾಗಿದೆ. ಶಿವನ ಜಡೆಯಲ್ಲಿ ರಾರಾಜಿಸುವ ಈಕೆಗೆ ದೇವತಾ ಸ್ಥಾನವಿದ್ದು, ಮನುಕುಲಕ್ಕೆ 'ಮಾತೆ' ಎಂದೇ ಸಂಬೋಧಿತಳಾಗಿದ್ದಾಳೆ. 'ಗಂಗಾ ಸ್ನಾನಂ ಮತ್ತು ತುಂಗಾ ಪಾನಂ' ಎಂಬಂತೆ ಭಾರತೀಯರ ಧಾರ್ಮಿಕ ನಂಬಿಕೆಗಳಲ್ಲಿ ತೀರ್ಥಸ್ನಾನವೂ ಒಂದಾಗಿದೆ. 'ಯಾರು ಸಂಕ್ರಾಂತಿ ದಿನಗಳಲ್ಲಿ ಗಂಗಾಸ್ನಾನ ಮಾಡುವರೋ ಅವರಿಗೆ ಆರು ತಿಂಗಳ ಗಂಗಾಸ್ನಾನದ ಫಲ ದೊರೆಯುವದೆಂಬ ನಂಬಿಕೆಯಿದೆ. ಹೀಗೆ ಈ ಕಾಲದ ಜನಕ್ಕೆ ಸ್ವರ್ಗ, ನರಕ, ಜನ್ಮ ಪುನರ್ಜನ್ಮಗಳ ಬಗ್ಗೆ ನಂಬಿಕೆಯಿತ್ತೆಂದು ಸ್ಪಷ್ಟವಾಗುತ್ತದೆ.

ಜಿಲ್ಲೆಯಲ್ಲಿ ಕಂಡುಬರುವ ಅನೇಕ ಶಾಸನಗಳ ಕೊನೆಯಲ್ಲಿ ಬರುವ ಶಾಪಾಶಯಗಳಲ್ಲಿ ಶಾಸನದಲ್ಲಿರುವ ಧರ್ಮವನ್ನು ಮೀರಿದವರು ಪ್ರಯಾಗ, ಕುರುಕ್ಷೇತ್ರ, ಗಂಗೆ, ಶ್ರೀಪರ್ವತ, ಗಯಾ, ರಾಮೇಶ್ವರ ಮತ್ತು ವಾರಣಾಸಿಯಲ್ಲಿ ಸಾವಿರ ಹಸುಗಳನ್ನು ಕೊಂದ ಪಾಪ ಬರುವದೆಂದು ಎಚ್ಚರಿಸುತ್ತವೆ. ಅಲ್ಲದೆ ತೀರ್ಥಕ್ಷೇತ್ರಗಳ ದರ್ಶನ, ಅಲ್ಲಿಯ ಸ್ನಾನ ಮತ್ತು ಆ ಕ್ಷೇತ್ರಗಳಲ್ಲಿ ದಾನ ಮಾಡುವುದು ಶ್ರೇಯಸ್ಕರವೆಂದು, ತೀರ್ಥಕ್ಷೇತ್ರಗಳ ದರ್ಶನದಿಂದ ಪುಣ್ಯ ಸಂಪಾದನೆಯಾಗುವದೆಂಬ ಆಶಯವನ್ನು ಮಹಾಭಾರತ ಮತ್ತು ಪುರಾಣಗಳು ವ್ಯಕ್ತಪಡಿಸುತ್ತವೆ. ತರ್ದವಾಡಿ ನಾಡಿನ ಮಹಾ ಪ್ರಧಾನ ಲಕ್ಷ್ಮೀದೇವ ದಂಡನಾಯಕ ವೈಶಾಖದ ಅಮವಾಸ್ಯೆ ಸೋಮವಾರ ಬ್ಯತಿಪಾತದಂದು

ಭೂಯ್ಯಾರಕ್ಕೆ ನದಿಸ್ನಾನ ನಿಮಿತ್ತ ಬಂದು ಕೂಡಲ ಅಭಿನವ ಮಲ್ಲಿಕಾರ್ಜುನ ದೇವರನ್ನು ಕಂಡು ದಾನಬಿಟ್ಟುದನ್ನು ಕ್ರಿ.ಶ. ೧೧೬೨ರ ಭೂಯ್ಯಾರ ಶಾಸನ ಪ್ರಸ್ತಾಪಿಸಿದೆ.[೯] ನಮ್ಮ ಜನರಿಗೆ ಇಂದಿಗೂ ಎರಡು ನದಿಗಳು ಸೇರುವ ಸ್ಥಳ (ಕೂಡಲ) ಪವಿತ್ರವೆಂಬುದನ್ನು ಇಲ್ಲಿ ಜ್ಞಾಪಿಸಬಹುದು. ಜೊತೆಗೆ ಜಿಲ್ಲೆಯ ಭೀಮಾನದಿಯನ್ನು ಗಂಗಾನದಿಗೆ ಸಮಾನವೆಂದು[೧೦] ಮರ್ತ್ಯಲೋಕದ ಸಕಳಜನಂಗಳ್ ಸ್ನಾನ ಸೇವನೆಯಿಂದನೇಕ ಜನ್ಮಾಂತರದುರಿತ ನಿವಾರಣಂ ಮಾಡಲ್ವೇಡಿ ಯನೇಕಭಂಗುರ ತರತ್ತರಂಗವೀತಿತ್ಸ್ಯಾಯೆ (ವೀಚಿಚ್ಛಾಯೆ) ಯಾಗಿ ಪೂರ್ವ್ವಾಭಿಮುಖವಾದ ಶ್ರೀಮನ್ಮಹಾ ಭೀಮರಥೀನದಿ ಎಂದು ಕ್ರಿ.ಶ. ೧೧೭೨ರ ಕಳಚುರ್ಯ ಚಕ್ರವರ್ತಿ ರಾಯಮುರಾರಿ ಸೋವಿದೇವನ ಕಡ್ಲೆವಾಡ ಶಾಸನ ಉಲ್ಲೇಖಿಸುತ್ತದೆ.[೧೧] ಜಿಲ್ಲೆಯ ಶಾಸನಗಳು ಕೃಷ್ಣಾ ನದಿಯನ್ನು ಕೃಷ್ಣವೇಣ್ಣಾ, ಕೃಷ್ಣಬೆಣ್ಣಾ, ಕೃಷ್ಣಹೊಳೆ, ಕೃಷ್ಣವೇಣ್ಣಿ,[೧೨] ಎಂದು ಉಲ್ಲೇಖಿಸುತ್ತವೆ.

ಶಕುನ

ಪ್ರಾಚೀನ ನಂಬಿಕೆಗಳಲ್ಲಿ ಶುಭಾಶುಭಗಳನ್ನು ತಿಳಿದುಕೊಳ್ಳುವ ಜ್ಯೋತಿಷ ಶಕುನವೂ ಒಂದು, ಗ್ರಹನಕ್ಷತ್ರಗಳ ಹಿನ್ನೆಲೆಯಲ್ಲಿ ಭವಿಷ್ಯದರ್ಶನ ಮಾಡಿಸುವ ಜ್ಯೋತಿಷ ನಮ್ಮಲ್ಲಿ ಒಂದು ಶಾಸ್ತ್ರವಾಗಿಯೇ ಬೆಳೆದುಬಂದಿದೆ. ಶಕುನ ೬೪ ಕಲೆಗಳಲ್ಲಿ ಒಂದೆಂದು ಪರಿಗಣಿಸಲ್ಪಟ್ಟಿದೆ. ಭಾರತೀಯರು ಜ್ಯೋತಿಷದಲ್ಲಿ ಬಹಳ ಮರ್ಯಾದೆ ತೋರಿಸುತ್ತಿದ್ದುದನ್ನು ಅಲ್ಬೇರೂನಿ ಉಲ್ಲೇಖಿಸಿದ್ದಾನೆ.[೧೩]

ತರ್ದವಾಡಿ ನಾಡಿನ ಬಸವಣ್ಣ 'ಶುಭಸೂಚನೆಯಾಗಿ ಕಂಗಳು ಕೆತ್ತಿಹವಯ್ಯಾ' ಎನ್ನುತ್ತಾನೆ. ಗಂಡಸರ ಬಲಗಣ್ಣು ಅದುರುವುದು ಇಂದಿಗೂ ಶುಭ ಸೂಚನೆಯ ನಂಬುಗೆಯಾಗಿದ್ದು, ಬಸವಣ್ಣನವರ ಆ ಮಾತು ಬಹುಶಃ ಬಲಗಣ್ಣಿನ ಅದಿರುವಿಕೆಯನ್ನು ಸೂಚಿಸುವಂತಿದೆ. ಹಾಗೇ ಅಂಗೈ ನವೆಯಾಗುವುದು ಶುಭಸೂಚಕವೆಂಬ ಅಂಶ ಅಲ್ಲೇ ಉಲ್ಲೇಖಗೊಂಡಿದೆ. ರಾಜಸಭೆಯಲ್ಲಿ ವಿದ್ವಾಂಸರಲ್ಲಿ ಜ್ಯೋತಿಷ. ಶಕುನ ಬಲ್ಲವನೂ ಇರುತ್ತಿದ್ದ. ತರ್ದವಾಡಿ ನಾಡಿನ ಪ್ರಾಚೀನ ಶಾಸನ ನೃಪತುಂಗವಲ್ಲಭ ಸಾಮಂತ, ಮಂಡಲೀಕರ ಎದುರಿನಲ್ಲಿ ಜ್ಯೋತಿಷ, ಶಕುನ ನಿಮಿತ್ತ ಬಲ್ಲ ಗೋಲೆಯಭಟ್ಟನಿಗೆ ಹಿಪ್ಪರಗೆ ಗ್ರಾಮ ಬಿಟ್ಟಿದ್ದನ್ನು ತಿಳಿಸಿದೆ.[೧೪] ಹಾಗೇ ವಿಜಾಪುರ ಶಾಸನ ಜೋಯಿಸ ಗೋವಿಂದಗೆ ನಾಲ್ಕು ಮತ್ತು ಜೋಯಿಸಗೆಯ್ ಬಿಟ್ಟುದನ್ನು ತಿಳಿಸಿದೆ.[೧೫]

ಶ್ರಾದ್ಧ

ಮರಣ ಮತ್ತು ಮರಣೋತ್ತರ ಕ್ರಿಯೆಗಳಿಗೆ ಸಂಬಂಧಿಸದಂತೆ ಇರುವ ಅನೇಕ ವಿಧಿ, ಸಂಸ್ಕಾರಗಳಲ್ಲಿ ವರ್ಷಕ್ಕೊಮ್ಮ ನಡೆಯುವ ಶ್ರಾದ್ಧವೂ ಒಂದು, ಸತ್ತವರ ಪರಲೋಕ ಸಾಧನೆಗೆ ನೆರವಾಗುವುದೆಂಬ ಮತ್ತು ಸತ್ತವರ ಆತ್ಮಕ್ಕೆ ಶಾಂತಿ ಸಿಗದೇ ಅದು ತಮ್ಮನ್ನು ಪೀಡಿಸಬಹುದೆಂಬ ಭಯಮೂಲವಾದ ನಂಬಿಕೆಯ ಈ ಸಂಸ್ಕಾರದಲ್ಲಿ ದಾನ, ಧರ್ಮಗಳಿಗೆ ವಿಶೇಷ ಸ್ಥಾನ.

ತರ್ದವಾಡಿ ನಾಡಿನ ಗೋವಿಂದರಸ ದಂಡನಾಯಕರು ತಮ್ಮ ಸೊಸೆ ಪದ್ಮಾವತಿಯ ಸ್ವರ್ಗ್ಗದಿವಸವಾದ ಮಾಘ ಹುಣ್ಣಿಮೆಯಲ್ಲಿ ವರ್ಷಂಪ್ರತಿ ಅವಳ ಶ್ರೇಯಸ್ಕರವಾಗಿ ಆಂಧ್ರ ದಂಡಪರ್ಷೆಗೆ ಭೋಜನ ಮಾಡಿಸಲು ೨೫ ಗದ್ಯಾಣ ಬಿಟ್ಟಿದ್ದರು.[೧೬] ಹಾಗೇ ಇಂಗಳೇಶ್ವರದ ತೀರ್ಥದೇವೆಗೆ ಹೊವಿನಹಿಪ್ಪರಗೆಯ ಹಬು ವಿಟರಸ, ರೇವರಸ, ರೇಚರಸರು ರೆಂಮರಸನ ತಂದೆಯ ತದ್ದಿನದಲ್ಲಿ ಅಜ್ಜಿಯರು, ರಿಸಿಯರಿಗೆ ಆಹಾರದಾನಕ್ಕೆಂದು ಭೂಮಿ ದಾನ ನೀಡಿದ್ದಾರೆ.[೧೭]

ಪಾಪ–ಪುಣ್ಯ

ಸಮಾಜ ಸ್ವಾಸ್ಥ್ಯವನ್ನು ಕಾಪಾಡುವ ಮೂಲೋದ್ದೇಶದಿಂದ ಪುಣ್ಯ–ಪಾಪ, ಸ್ವರ್ಗ–ನರಕಗಳ ಕಲ್ಪನೆ ಮೊದಮೊದಲು ಜನ್ಮತಾಳಿರಬಹುದಾದರೂ ಒಂದು ನಂಬುಗೆಯಾಗಿ ಬಹು ಪ್ರಾಚೀನ ಕಾಲದಿಂದಲೂ ಬೆಳೆದುಬಂದಿದೆ. ಎಲ್ಲ ಪ್ರಾಚೀನ ಋಷಿಗಳು ಪಾಪವನ್ನು ಸ್ಥೂಲವಾಗಿ ಮಹಾಪಾತಕ ಮತ್ತು ಉಪಪಾತಕಗಳೆಂದು ಎರಡು ವಿಧವಾಗಿ ವಿಭಜಿಸಿದ್ದಾರೆ.[೧೮] ಶಾಸನಗಳು ಫಲಶ್ರುತಿಗಳಲ್ಲಿ ಸಾಮಾನ್ಯವಾಗಿ ಪಂಚಮಹಾಪಾತಕದ ಹೆಸರನ್ನು ಉಲ್ಲೇಖಿಸುತ್ತವೆ. ಈ ನಾಡಿನ ದಾನಶಾಸನಗಳ ಕೊನೆಯಲ್ಲಿ ಕೊಟ್ಟ ದಾನವನ್ನು ಕಾಪಾಡಿದವರಿಗೆ ದೊರಕುವ ಶ್ರೇಯಸ್ಸು ಅದನ್ನು ಕೆಡಿಸಿದವನಿಗೆ (ಅಪಹರಿಸಿದವನಿಗೆ) ಒದಗುವ ಪಾಪದ ಚಿತ್ರವನ್ನು ಸ್ಮೃತಿ, ಪುರಾಣಾದಿಗಳಿಂದಾರಿಸಿದ ಪ್ರಸಿದ್ಧ ಶ್ಲೋಕಗಳ ಮೂಲಕ ಬಿಂಬಿಸಲಾಗಿದೆ. ಶ್ಲೋಕಗಳಿಲ್ಲದ ಕಡೆ ಅದರ ಸಾರವನ್ನೇ ದೇಶ–ಭಾಷೆಯಲ್ಲಿ ಹೇಳಲಾಗಿದೆ. ಇದರ ಉದ್ದೇಶ ಮುಖ್ಯವಾಗಿ ಕೊಟ್ಟ ದಾನ ಅಪಹೃತವಾಗದೇ ಉಳಿಯಬೇಕು ಎನ್ನುವುದಾಗಿದೆ. ಎಲ್ಲ ಧರ್ಮಗಳ ಶಾಸನಗಳಲ್ಲಿ ಸಾರ್ವತ್ರಿಕವಾಗಿ ಕಂಡುಬರುವ ಈ ಮಾತುಗಳು ಬರುಬರುತ್ತ ಅಶ್ಲೀಲತೆಯತ್ತ ಹೊರಳಿದುದು ನಮ್ಮ ಸಾಮಾಜಿಕ ಅಧಃಪತನವನ್ನು ಸೂಚಿಸುತ್ತದೆ. ಪಾಪದಿಂದ ಪ್ರಾಯಶ್ಚಿತ ಮಾಡಿಕೊಳ್ಳುವ ಪುರುಷನು ನರಕಗಳನ್ನು ಹೊಂದುವನೆನ್ನುತ್ತಾನೆ ಯಾಜ್ಞವಲ್ಕ್ಯ[೧೯] ಈ ಪ್ರಾಯಶ್ಚಿತಕ್ಕಾಗಿಯೇ ದಾನ, ಧರ್ಮ, ವೃತಾಚರನೆಗಳು ಹುಟ್ಟಿಕೊಂಡವೆಂದು

ತೋರುತ್ತದೆ. ಇದರ ಪರಿಣಾಮ ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಶಾಸನಗಳಲ್ಲಿ ಉಕ್ತಗೊಂಡ ಅಸಂಖ್ಯಾತ ದಾನಧರ್ಮಗಳಲ್ಲಿ ಕಾಣುತ್ತೇವೆ.

ಹಬ್ಬಗಳು

ಪರ್ವ ಎಂಬ ಸಂಸ್ಕೃತ ಶಬ್ದವು ಪ್ರಾಕೃತ ಜನರ ಬಾಯಲ್ಲಿ ಅಪಬ್ರಂಶವಾಗಿ ಪಬ್ಬ ಎಂದಾಯಿತು. ಈ ಪಬ್ಬವು ಹಬ್ಬವೆಂದು ರೂಪುಗೊಂಡು ಕನ್ನಡ ನಾಡಿನಲ್ಲಿ ರೂಢಿಯಾಗಿದೆ.[೨೦] ತರ್ದವಾಡಿ ನಾಡಿನ ಶಾಸನಗಳು 'ಪಂಚಪರ್ವ' ವನ್ನು ಉಲ್ಲೇಖಿಸಿದ್ದು[೨೧] ಅವು ಯಾವುವೆಂಬುದನ್ನು ಸ್ಪಷ್ಟಪಡಿಸಿಲ್ಲ. ಡಾ. ಚಿದಾನಂದ ಮೂರ್ತಿಯವರು ಅಂದು ದೇವಾಲಯಗಳಲ್ಲಿ ನಡೆಯುತ್ತಿದ್ದ ಎರಡು ಪೂಜಾ ಉತ್ಸವಗಳಾದ ಚೈತ್ರ ಮತ್ತು ಪವಿತ್ರಗಳನ್ನು ಹೆಸರಿಸುತ್ತ ಮಂತ್ರ ಪುಷ್ಪದವರಾರೋಪಣ ಫಲಪೂಜೆ ಕಾರ್ತಿಕ ಕೃತ್ತಿಕಾ ದೀಪಪೂಜೆ, ವಸಂತೋತ್ಸವಗಳನ್ನೂ ಸೇರಿಸಿಕೊಂಡರೆ ಐದು ಹಬ್ಬಗಳಾಗುತ್ತವೆ ಎಂದಿದ್ದಾರೆ.[೨೨] ಇವು ಪರ್ವ (ಹಬ್ಬ) ಗಳಾಗಿರದೆ ವಿವಿಧ ಕಾಲ ಸಂದರ್ಭಗಳಲ್ಲಿ ಆಚರಿಸುವ ಐದು ಪೂಜಾ ಉತ್ಸವಗಳೆಂಬುದು ಮೇಲು ನೋಟಕ್ಕೇ ಸ್ಪಷ್ಟವಾಗುತ್ತದೆ. ಅಲ್ಲದೆ ವಿಜಯಪುರ ಶಾಸನ ಶ್ರೀ ನರಸಿಂಹದೇವರ ಪಂಚಪಬರ್ವ್ವ, ಚೈತ್ರ ಪವಿತ್ರ ನಿವೆದ್ಯ ಎಂದು ಸ್ಪಷ್ಟವಾಗಿ ಪಂಚಪರ್ವ್ವವನ್ನು ಚೈತ್ರ ಪವಿತ್ರದಿಂದ ಭಿನ್ನವಾಗಿಸಿದೆ.[೨೩] ಮೇಲಾಗಿ ಶಾಸನಗಳು ಎಲ್ಲಿಯೂ ಇವುಗಳನ್ನು ಪರ್ವಗಳೆಂದು ಕರೆದಿಲ್ಲ. ಹಾಗಾದರೆ ಪಂಚಪರ್ವಗಳು ಯಾವುವು? ಇದಕ್ಕೆ ಉತ್ತರ ಸುಲಭವಾಗಿಲ್ಲ. ಡಾ. ಬೆಟಗೇರಿ ಕೃಷ್ಣಶರ್ಮರು "ಸೂರ್ಯನ ಮಾರ್ಗಕ್ರಮಣದ ಒಂದು ವರ್ಷದ ಅವಧಿಯಲ್ಲಿ ಬರುವ ಹನ್ನೆರಡು ಹುಣ್ಣಿಮೆ, ಅಮವಾಸ್ಯೆ, ಸಂಕ್ರಮಣಗಳನ್ನು ಪರ್ವದಿನಗಳೆನ್ನುವರು. ಹುಣ್ಣಿವೆ, ಅಮವಾಸ್ಯೆ, ಸಂಕ್ರಮಣಗಳಂತೆಯೇ ಪ್ರತಿಪಕ್ಷದಲ್ಲಿಯೂ ಬರುವ ಅಷ್ಟಮಿ, ಚತುರ್ದಶಿ ತಿಥಿಗಳೆರಡು ಪರ್ವದಿನಗಳೆನಿಸುವವು. ಇವೆಲ್ಲ ದಿನಗಳೂ ಸೇರಿ ಪಂಚಪರ್ವ ಎನಿಸಿಕೊಳ್ಳುತ್ತವೆ" ಎಂದಿರುವುದನ್ನು ಗಮನಿಸಬೇಕು.[೨೪]

ತರ್ದ್ದವಾಡಿ ನಾಡಿನ ಶಾಸನಗಳಲ್ಲಿ 'ಐಂದ್ರಪರ್ವ್ವ',[೨೫] 'ಚಟ್ಟಿ ಆದಿವಾರ ಉತ್ತರಾಯಣ ಸಂಕ್ರಮಣಪರ್ವ',[೨೬] ವಿಜಯಪುರ ಜಿಲ್ಲೆಯ ಬಹುತೇಕ ಶಾಸನಗಳಲ್ಲಿ ಸಂಕ್ರಮಣಪರ್ವಗಳ ದಿನದಂದು ದಾನ ಕೊಟ್ಟಿರುವ ಉಲ್ಲೇಖಗಳು ಕಂಡುಬರುತ್ತದೆ. ಉದಾ: ಕ್ರಿ.ಶ. ೧೦೪೦ರ ಚಾಳುಕ್ಯ ಜಗದೇಕಮಲ್ಲನ ಶಾಸನ ಬೆನಕನವಿಟ್ಟಗೆಯ ಮೂಲಸ್ಥಾನ ಮಹಾದೇವರ್ಗ್ಗೆ ಸಕವರ್ಷ ೯೬೨ನೆಯ ವಿಕ್ರಮ ಸಂವತ್ಸರ ದುತ್ತರಾಯಣ ಸಂಕ್ರಾನ್ತಿಯೊಳ ಪರ್ವ್ವನಿಮಿತ್ತಂ(ವಾ)ಗೆ ದಾನ ಬಿಟ್ಟ ಉಲ್ಲೇಖವಿದೆ.[೨೭] ಕ್ರಿ.ಶ. ೧೦೬೯ರ ಭುವನೈಕಮಲ್ಲನ ಕಾಖಂಡಕಿ ಶಾಸನ ಸಕವರ್ಷ ೯೯೧ನೆಯ ಸೌಮ್ಯಸಂವತ್ಸರದ ಪುಷ್ಯ ಸುದ್ಧ ನವಮಿ ಬೃಹಸ್ಪತಿವಾರದಂದಿನ ಉತ್ತರಾಯಣ

ಸಂಕ್ರಾಂತಿಯಪರ್ವ್ವದಂದು ಉತ್ತಮಗ್ರಹಾರಂ ಕಾಕಣ್ಡಿಗೆಯ ಸಿದ್ಧೇಶ್ವರ ದೇವರ ರಂಗಬೋಗಕ್ಕಂ ಸ್ನಾನ ನಿವೇದ್ಯಕ್ಕೆಮೆನ್ದು ದಾನ ಬಿಟ್ಟ ಉಲ್ಲೇಖವಿದೆ.[೨೮] ಕ್ರಿ.ಶ. ೧೦೯೯ರ ಆರನೇ ವಿಕ್ರಮಾದಿತ್ಯನ ಕಣ್ಣೂರು ಶಾಸನ ಚಾಳುಕ್ಯ ವಿಕ್ರಮಕಾಲದ ೧೦ನೆಯ ಸುಕ್ಲ ಸಂವತ್ಸರದ ಪುಸ್ಯ ಸುದ್ಧ ೨ ಆದಿತ್ಯವಾರ ದಂದುತ್ತರಾಯಣ ಸಂಕ್ರಾಂತಿ ಪರ್ವ್ವ ನಿಮಿತ್ತದಿಂ ಕನ್ನವೂರಿಯ ಶ್ರೀ ಸ್ವಯಂಭು ಚಂಡೇಸ್ವರದೇವರ್ಗ್ಗೆ ದಾನ ಬಿಟ್ಟಿದ್ದನ್ನು ಉಲ್ಲೇಖಿಸುತ್ತದೆ.[೨೯] ಕ್ರಿ.ಶ. ೧೧೭೦ರ ರಾಯಮುರಾರಿ ಸೋವಿದೇವನ ನಿಡೋಣಿ ಶಾಸನದಲ್ಲಿ ರಾಯಮುರಾರಿ ಸೋಯಿದೇವ ವರ್ಷದ ನಾಲ್ಕನೆಯ ವಿಕೃತಸಂವತ್ಸರದ ಆಷಾಡ ಸುದ್ಧ ೧೧ ಶುಕ್ರವಾರದಂದು ದಕ್ಷಿಣಾಯನ ಸಂಕ್ರಮಣ ಪರ್ವ್ವನಿಮಿತ್ತಂ ದಾನ ಕೊಟ್ಟಿದ್ದನ್ನು ಉಲ್ಲೇಖಿಸುತ್ತದೆ.[೩೦] ವನದುಯ್ಯಲಪರ್ವ್ವ,[೩೧] 'ದೀಪಾವಳಿ ಪರ್ಬ್ಬ',[೩೨] 'ನೂಲಪರ್ವ್ವ',[೩೩] 'ಯುಗಾದಿ ಮಹಾಪರ್ವ' ಹೆಸರುಗಳು ದೊರೆಯುತ್ತಿದ್ದು ಇವೇ ಆ ಪಂಚಪರ್ವ್ವಗಳೆಂದು ಹೇಳಬಹುದು. ಶಾಸನಗಳಲ್ಲಿ ಬರುವ ನೂಲಪರ್ವ್ವ ಎಂಬುದು ಪವಿತ್ರವನ್ನೇ ಸೂಚಿಸುತ್ತದೆ. ಎಂಬ ಹೇಳಿಕೆ ಸರಿಯಲ್ಲ.[೩೪] ಈ ನಾಡಿನ ಕೊಲ್ಲಾರ ಶಾಸನ ನೂಲಪರ್ವ್ವ, ಪವಿತ್ರವನ್ನು ಭಿನ್ನ ಭಿನ್ನವಾಗಿ ಹೆಸರಿಸಿದೆ.[೩೫] ಈ ಪಂಚಪರ್ವಗಳಿಗೆ ದಾನನೀಡಿದ್ದಷ್ಟನ್ನು ಬಿಟ್ಟರೆ ಹೆಚ್ಚಿನ ವಿವರಗಳನ್ನು ಶಾಸನಗಳು ಒದಗಿಸುವುದಿಲ್ಲ. ಪರ್ವದೂಟದ ಉಲ್ಲೇಖವನ್ನು ಒಂದು ಶಾಸನ ನೀಡಿದೆ. ದೀಪಾವಳಿ, ಸಂಕ್ರಮಣ, ನೂಲಪರ್ವಗಳು ಇಂದಿಗೂ ಬಳಕೆಯಲ್ಲಿವೆ, ವನದುಯ್ಯಲ ಪರ್ವ್ವ ಇಂದಿನ ನಾಗರಪಂಚಮಿಯಾಗಿರುವಂತೆ ತೋರುತ್ತದೆ. ಮನಗೂಳಿಯ ಶಂಬಿಕೇಶ್ವರ ದೇವರ್ಗ್ಗೆ ಹಿರಿಯಕೋಲ ಮತ್ತರು ಯಿಪ್ಪತ್ತುಮಂ ಐಂದ್ರಪರ್ವ್ವಮಂ ಹೊರವಾಡಿಸಿ ವೇದಪಾರಗರಪ್ಪ ಬ್ರಾಹ್ಮಣರನೋಡಿಸಿ ಪೂಜಿಸಲು ಸರ್ವನಮಸ್ಯವಾಗಿ ಬಿಟ್ಟ ಹೇಳಿಕೆಯನ್ನು ನೋಡಿದರೆ[೩೬] ಇಂದ್ರಪರ್ವ್ವಕ್ಕೂ ಬ್ರಾಹ್ಮಣರಿಗೂ ಸಂಬಂಧ ಕಲ್ಪಿಸಬೇಕೆನಿಸುತ್ತದೆ.

ಜಿಲ್ಲೆಯ ಶಾಸನಗಳಲ್ಲಿ ಮಹಾವೈಶಾಖಿ, ಬಾದುಬ್ಬೆ ಪರ್ವ, ದೀವಳಿಗೆ ಪರ್ವ, ಅಕ್ಷಯತೃತೀಯಾ ಪರ್ವ, ಮಕರಸಂಕ್ರಮಣ, ಇತ್ಯಾದಿ ಹಬ್ಬಗಳ ಉಲ್ಲೇಖಗಳು ಕಂಡುಬರುತ್ತವೆ. ಇವುಗಳ ಜೊತೆಗೆ ಜನಪ್ರಿಯವಾದ ಮತ್ತು ಬಹಳಷ್ಟು ಶಾಸನಗಳಲ್ಲಿ ದಾಖಲಾದ ಮತ್ತೊಂದು ಹಬ್ಬವೆಂದರೆ ಸಂಕ್ರಾಂತಿಯಾಗಿದೆ. ಸಂಕ್ರಾಂತಿಗಳಲ್ಲಿ ಉತ್ತರಾಯಣ, ದಕ್ಷಿಣಾಯಣ ಸಂಕ್ರಾಂತಿ, ವೃಶ್ಚಿಕಸಂಕ್ರಾಂತಿ, ವಿಷು ಸಂಕ್ರಾಂತಿ, ಕನ್ನೆ ಸಂಕ್ರಾಂತಿ, ಕಾರ್ತಿಕಮಾಸದ ಸಂಕ್ರಾಂತಿಗಳು ಶಾಸನಗಳಲ್ಲಿ ಉಲ್ಲೇಖಗೊಂಡಿವೆ.

ಜಿಲ್ಲೆಯ ಶಾಸನಗಳಲ್ಲಿ ಉಲ್ಲೇಖಿತ ಅಮವಾಸ್ಯೆಗಳೆಂದರೆ, ಅಶ್ವಯುಜ ಅಮವಾಸ್ಯೆ, ಜೇಷ್ಠ ಬಹುಳ ಅಮವಾಸ್ಯೆ, ವೈಶಾಖ ಅಮವಾಸ್ಯೆ, ಕಾರ್ತಿಕ ಅಮವಾಸ್ಯೆ, ವೈಶಾಖ ಬಹುಳ ಅಮವಾಸ್ಯೆ,

ಆಷಾಢ ಅಮವಾಸ್ಯೆ, ಶ್ರಾವಣ ಬಹುಳ ಅಮವಾಸ್ಯೆ, ಕೃಷ್ಣಪಕ್ಷ ಅಮವಾಸ್ಯೆ, ಫಾಲ್ಗುಣದ ಅಮವಾಸ್ಯೆ, ಭಾದ್ರಪದ ಬಹುಳ ಅಮವಾಸ್ಯೆ.

ಅದರಂತೆ ಇವರ ಶಾಸನಗಳಲ್ಲಿ ಉಲ್ಲೇಖಿತ ಹುಣ್ಣಿಮೆಗಳೆಂದರೆ, ಕಾರ್ತಿಕಮಾಸದ ಹುಣ್ಣಿಮೆ, ಪುಷ್ಯ ಶುದ್ಧ ಹುಣ್ಣಿಮೆ, ವೈಶಾಖ ಹುಣ್ಣಿಮೆ, ಭಾದ್ರಪದ ಹುಣ್ಣಿಮೆ, ಅಶ್ವಯುಜ ಹುಣ್ಣಿಮೆ, ಮಾರ್ಗಶಿರಮಾಸದ ಹುಣ್ಣಿಮೆ, ಕಾರ್ತಿಕಮಾಸದ ಹುಣ್ಣಿಮೆ, ಮಾಘಮಾಸದ ಹುಣ್ಣಿಮೆ.

ಪೂಜಾ ವಿಧಾನಗಳ ಬೆಳಕು ಚೆಲ್ಲುವ ಶಾಸನಗಳು: ಸಾಮಾನ್ಯವಾಗಿ ಅಮವಾಸ್ಯೆ, ಹುಣ್ಣಿಮೆ, ಚೌತಿ, ಏಕಾದಶಿ, ದ್ವಾದಶಿ ಇತ್ಯಾದಿ ನಿರ್ದಿಷ್ಟ ತಿಥಿಗಳಲ್ಲಿ ನೈಮಿತ್ತಿಕ ಪೂಜೆಗಳು ಜರಗುತ್ತವೆ. ಶಾಸನಗಳಲ್ಲಿ ನಿತ್ಯಪೂಜಾ ವಿಧಿವಿಧಾನಗಳ ಬಗ್ಗೆ ಹೆಚ್ಚಿನ ಮಾಹಿತಿ ದೊರೆಯುತ್ತದೆ.

ತ್ರಿಕಾಲ ಪೂಜೆ

ತ್ರಿಕಾಲ ಪೂಜೆಯೆಂದರೆ ಪ್ರಾತಃಕಾಲ, ಮಧ್ಯಾಹ್ನ ಮತ್ತು ರಾತ್ರಿ ಮೂರು ಹೊತ್ತು ದೇವರಿಗೆ ಸಲ್ಲಿಸುವ ಪೂಜೆಯಾಗಿದ್ದು, ಆಗಮಗಳು ಈ ಕುರಿತು ತಿಳಿಸುತ್ತವೆ. ಪೂಜಾ ಸಮಯದಲ್ಲಿ ಮಂಗಳಾರತಿ ಮಾಡುವಾಗ ಕೊಂಬು, ತಮಟೆ, ಶಂಖ, ಭೇರಿ ಮತ್ತು ಜಯಗಂಟೆಗಳೆಂಬ ಪಂಚಮಹಾವಾದ್ಯಗಳನ್ನು ಬಾರಿಸಲಾಗುತ್ತದೆ. ಈ ಪದ್ಧತಿಯು ಈಗಲೂ ಅಸ್ತಿತ್ವದಲ್ಲಿದೆ. ಅಂಗಭೋಗವು ಪ್ರಾತಃಕಾಲದ ಪೂಜೆಗೆ ಸಂಬಂಧಿಸಿದೆ. ಏಕೆಂದರೆ ಸ್ನಾನ ಮತ್ತು ಅಭಿಷೇಕಗಳಂತಹ ಭೋಗಗಳು ಬೆಳಿಗ್ಗೆ ಮಾತ್ರ ಮಾಡಲಾಗುತ್ತವೆ. ಜಿಲ್ಲೆಯ ಶಾಸನಗಳಲ್ಲಿ ಈ ಉಲ್ಲೇಖವಿದೆ.

ಆಗಮದ ಪ್ರಕಾರ ಜಪ, ಹೋಮ ಮತ್ತು ತರ್ಪಣಗಳೆಂಬ ಮೂರು ಆರಾಧನಾ ರೂಪಗಳನ್ನು ಕಾಣಬಹುದು. ಜಪವೆಂದರೆ ದೇವರ ಮೂಲಮಂತ್ರವನ್ನು ಪುನರುಕ್ತಿ ಮಾಡುವದು. ಹೋಮವೆಂದರೆ ಪವಿತ್ರಾಗ್ನಿಗೆ ತುಪ್ಪ ಇತ್ಯಾದಿ ವಿಧಿಪೂರ್ವಕ ಸಮರ್ಪಣೆ ಮಾಡುವುದು. ಆದರೆ ಗಣಪತಿಯನ್ನು ಬಿಟ್ಟರೆ ಹೋಮರೂಪದ ಆರಾಧನೆ ಬಹಳ ವಿರಳ. ಸರ್ವಸಾಮಾನ್ಯವಾಗಿ ಆಚರಿಸುವ ಹೋಮವು ಗಣಪತಿಹೋಮ. ಹಾಗೆಯೇ ಅಪರೂಪವಾಗಿ ಮೃತ್ಯುಂಜಯ ಹೋಮ ಮತ್ತು ಸುದರ್ಶನ ಹೋಮಗಳನ್ನು ಮಾಡಲಾಗುತ್ತದೆ. ತರ್ಪಣವೆಂದರೆ ದೇವರನ್ನು ಉಪಚಾರಗಳಿಂದಲೋ, ಕಾಣಿಕೆಗಳಿಂದಲೋ ಪೂಜಿಸುವದು. ಅದರಂತೆ ದೇವಾಲಯಗಳಲ್ಲಿ ನಿತ್ಯನೈಮಿತ್ತಿಕ, ವಿಶೇಷಪೂಜೆ ಮತ್ತು ಉತ್ಸವಾದಿಗಳ ಆಚರಣೆ ಕ್ರಮವನ್ನು ಕುರಿತು ವಿಷ್ಣುಸಂಹಿತೆ, ಪರಮಸಂಹಿತೆ, ಸುಪ್ರಭೇಧಾಗಮ, ನಾರದೀಯಸಂಹಿತೆ ಇತ್ಯಾದಿ ವೈಷ್ಣವ ಆಗಮಗ್ರಂಥಗಳು ತಿಳಿಸುತ್ತವೆ.

ಪ್ರಸ್ತುತ ದೇವಾಲಯಗಳಲ್ಲಿ ಈಗ ನಡೆಯುವ ಆಚರಣೆ ಪ್ರಾಚೀನ ದೇವಾಲಯಗಳಲ್ಲಿ ಇದ್ದ ಪೂಜಾ ವಿಧಿಗಳು ಬೇರೆಯಾಗಿವೆ. ಶಾಸನಗಳು ದಾನವನ್ನು ಹೇಳಬೇಕಿದ್ದಾಗ ಯಾವ ಕಾರಣಗಳಿಗಾಗಿ ದಾನಗಳನ್ನು ನೀಡಲಾಗಿದೆ ಎಂಬುದನ್ನು ಹೇಳಬೇಕಿದ್ದಾಗ ಪೂಜೆ–ಪುನಸ್ಕಾರ, ನಿತ್ಯ, ನೈವೇದ್ಯ, ಅಂಗಭೋಗ, ರಂಗಬೋಗಗಳಿಗೆಂದು ದಾನ ನೀಡಿರುವುದನ್ನು ಉಲ್ಲೇಖಿಸುತ್ತವೆ. ಇವೆಲ್ಲವೂ ದೇವಾಲಯಗಳಲ್ಲಿ ನಿತ್ಯ ಪೂಜೆಗಳನ್ನು ಸೂಚಿಸುತ್ತವೆ. ಇವೆರಡನ್ನೂ ಒಟ್ಟಾಗಿಸಿ ಶಾಸನಗಳು ನಿತ್ಯ ನೈಮಿತ್ತಿಕ ಪೂಜೆಗಳೆಂದು ಗುರುತಿಸುತ್ತವೆ. ನಿತ್ಯ ಪೂಜೆಯಲ್ಲಿ ಪ್ರಧಾನವಾಗಿ ಆವಾಹನ, ಅರ್ಚನ, ನವೇದನ ಎಂಬ ತ್ರಿವಿಧೋಪಚಾರಗಳು ಇವೆ. ವಿವೇಕ ಚಿಂತಾಮಣಿಯು ಅಷ್ಟೋಪಚಾರ, ದಶೋಪಚಾರ, ಷೋಡಶೋಪಚಾರ, ಚತುರ್ವಿಂಶತ್ಯುಪಚಾರ, ದ್ವಾತ್ರಿಂಶಶ್ಯುಪಚಾರ, ಚತುಷ್ಪ್ಯಷ್ಟುಪಚಾರ, ಅಷ್ಟೋತ್ತರ ಶತೋಪಚಾರ, ಸಹಸ್ರ, ವಿಧೋಪಚಾರ ಎಂಬ ಬಗೆಗಳನ್ನು ಗುರುತಿಸುತ್ತದೆ. ಇವುಗಳಲ್ಲಿ ಆಗಮ ಸಮ್ಮತವಾದವುಗಳು ಧ್ಯಾನ, ಆವಾಹನ, ಆಸನ, ಪಾದ್ಯ, ಅರ್ಘ್ಯ, ಆಚಮನ, ಸ್ನಾನ, ವಸ್ತ್ರ, ಯಜ್ಞಸೂತ್ರ, ಭೂಷಣ, ಗಂಧ, ಅಕ್ಷತೆ, ಪುಷ್ಪ, ಧೂಪ, ದೀಪ, ನೈವೇದ್ಯ, ಮುಖವಾಸನ, ನೀರಾಜನ, ದರ್ಪಣ, ಫಲಾರ್ಪಣ, ತಾಂಬೂಲ, ಪ್ರದಕ್ಷಿಣ, ನಮಸ್ಕಾರ, ಸ್ತೋತ್ರ, ಪುರಾಣ ಪಠನ, ಛತ್ರ, ಚಾಮರ, ವ್ಯಜನ, ಶಯ್ಯಾ, ಸಂಗೀತ, ನೃತ್ಯವಾದ್ಯ ಮತ್ತು ಆತ್ಮಾರೋಪಣ ಇನ್ನು ನೈಮಿತ್ತಿಕ ಪೂಜೆಗಳು ಸಾಮಾನ್ಯವಾಗಿ ಅಮವಾಸ್ಯೆ, ಪೌರ್ಣಮಿ, ಚೌತಿ, ಏಕಾದಶಿ, ದ್ವಾದಶಿ ಮುಂತಾದ ದಿನಗಳಲ್ಲಿ ನಡೆಯುತ್ತದೆ.[೩೭]

ಆದರೆ ಈ ಮೇಲಿನ ಎಲ್ಲ ಅಂಶಗಳು ನಮಗೆ ಶಾಸನದಲ್ಲಿ ದೊರೆಯುವುದಿಲ್ಲ. ಉಲ್ಲೇಖಿತ ವಿಷಯದಲ್ಲಿ ಗಂಧ, ಅಕ್ಷತೆ, ಧೂಪ, ದೀಪ, ಸಂಗೀತ, ನೃತ್ಯದ ಉಲ್ಲೇಖಗಳು ಮಾತ್ರ ದೊರೆಯುತ್ತವೆ. ಈಗ ನೋಡಿದಂತೆ ಶಾಸನ ಉಲ್ಲೇಖಿತ ಎಷ್ಟೋ ವಿಧಿಗಳು ಇಂದು ಉಳಿದು ಬಂದಿಲ್ಲ. ಇನ್ನು ಕೆಲವು ಮಾರ್ಪಾಡುಗಳನ್ನು ಹೊಂದಿವೆ. ಪ್ರಸ್ತುತ ಜಿಲ್ಲೆಯ ದೇವಾಲಯಗಳಲ್ಲಿ ನಿತ್ಯಪೂಜೆಯನ್ನು ಕಾಣುತ್ತೇವೆ. ಕೆಲವು ದೇವಾಲಯಗಳಲ್ಲಿ ನಿತ್ಯಪೂಜೆಯು ದಿನಕ್ಕೆ ಎರಡು ಬಾರಿ ಜರುಗುತ್ತದೆ. ಬೆಳಿಗ್ಗೆಯ ಸಮಯದಲ್ಲಿ ಎಂದಿನ ಪೂಜೆ ಇದ್ದರೆ ಎರಡನೇ ಪೂಜೆ ಸಾಯಂಕಾಲದಲ್ಲಿ ದೇವರಿಗೆ ಮಂಗಳಾರತಿಯನ್ನು ಬೆಳಗುವದರೊಂದಿಗೆ ಸಾಂಪ್ರತಗೊಳ್ಳುತ್ತದೆ. ನಿತ್ಯ ಪೂಜೆಯಲ್ಲಿ ದೇವರಿಗೆ ಸ್ನಾನ, ಗಂಧ, ಹೂವು, ಹಾಗೂ ಧೂಪದ ಬದಲಾಗಿ ಅಗರಬತ್ತಿಯ ಬಳಕೆಯನ್ನು ಕಾಣುತ್ತೇವೆ. ವಿಶೇಷ ಪೂಜೆಯೆಂದರೆ ಪ್ರತಿ ಅಮವಾಸ್ಯೆಯಂದು ಮಾಡುವ ಪೂಜೆಯಾಗಿದೆ. ಅಂದು ದೇವರಿಗೆ ಎಂದಿನಂತೆ ಪೂಜೆಯಿರದೇ ಅರ್ಚಕರು, ಜಂಗಮರು ಅಥವಾ ಪೂಜಾರಿಗಳು ಉಪವಾಸವನ್ನು ಆಚರಿಸಿ, ದೇವರಿಗೆ ಅಲಂಕಾರ ಪೂಜೆಯನ್ನು ಮತ್ತು ಗೋಧೂಮ ಸೇವೆಯನ್ನು ಅರ್ಪಿಸುತ್ತಾರೆ. ಮತ್ತು ಗೋಧಿಯಿಂದ ಮಾಡಿದ ಪಾಯಸದ ಅಥವಾ ಸಾವಿಗೆ

ನೈವೇದ್ಯ ಮಾಡಿ ಅದನ್ನು ಪ್ರಸಾದವನ್ನಾಗಿ ಎಡೆ ಹಿಡಿಯಲಾಗುತ್ತದೆ. ಪೂಜೆಯ ಸಂಧರ್ಭದಲ್ಲಿ ಯಾವುದೇ ಮಂತ್ರಗಳ ಬಳಕೆ ಕಾಣುವುದಿಲ್ಲ. ಕುಂಕುಮವನ್ನು ಗಂಧದಂತೆ ಬಳಸುವುದನ್ನು ಕಾಣಬಹುದು. ರುದ್ರವನ್ನು ಹೇಳುತ್ತೇವೆ ಎಂದು ಹೇಳಿದರೂ ಮಂತ್ರ ಯಾವುದೆಂದು ಮರು ಪ್ರಶ್ನಿಸಿದಾಗ ಓ ನಮಃ ಶಿವಾಯ ಎಂಬ ಪಂಚಾಕ್ಷರಿ ಮಂತ್ರ ಉಚ್ಚರಣೆ ಕೇಳಿಬರುತ್ತದೆ. ಇತ್ತೀಚಿನ ವರ್ಷಗಳಲ್ಲಿ ಕೆಲವು ದೇವಾಲಯಗಳಲ್ಲಿ ಶ್ರಾವಣ, ಯುಗಾದಿ, ದೀಪಾವಳಿಯಂತಹ ಕೆಲವು ಪ್ರಮುಖ ಹಬ್ಬಗಳಲ್ಲಿ ಜಾತ್ರೆಯನ್ನು ಮಾಡುತ್ತಿದ್ದಾರೆ.

ಈ ಮೇಲಿನ ಎಲ್ಲ ಅಂಶಗಳನ್ನು ಗಮನಿಸಿ ನೋಡಿದರೆ ಕೆಲ ವಿಷಯಗಳು ಹೀಗೆ ಕಂಡುಬರುತ್ತವೆ. ಶಾಸನಗಳು ಉಲ್ಲೇಖಿಸುವ ಪೂಜಾಪದ್ಧತಿಗೂ ಇಂದಿನ ಪೂಜೆಯ ವ್ಯವಸ್ಥೆಗೂ ಅಜಗಜಾಂತರ ವ್ಯತ್ಯಾಸವಿದೆ. ಕಾಲಾನಂತರದಲ್ಲಿ ಪೂಜೆ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತ ಬಂದಿರುವುದನ್ನು ಕಾಣುತ್ತೇವೆ. ಪೂಜೆ ವ್ಯವಸ್ಥೆ ಬದಲಾಗಲು ಉತ್ತರ ಕರ್ನಾಟಕದಲ್ಲಿ ನಡೆದ ಕ್ರಾಂತಿಕಾರಕ ಬದಲಾವಣೆಗಳು ಕಾರಣವಾದವು. ಎಲ್ಲಿ ಬ್ರಾಹ್ಮಣ ಪೂಜೆ ಇದೆಯೋ ಅಲ್ಲೇಲ್ಲ ಶಾಸನಗಳು ಹೇಳುವ ಪೂಜೆ ಪದ್ಧತಿಯನ್ನು ಹೆಚ್ಚು ಕಡಿಮೆ ಅದೇ ಸ್ಥಿತಿಯಲ್ಲಿ ನೋಡುತ್ತೇವೆ. ಉದಾಹರಣೆಗೆ ರಂಗಭೋಗ ವ್ಯವಸ್ಥೆ. ಆದರೆ ಇದೇ ವ್ಯವಸ್ಥೆಯನ್ನು ಲಿಂಗಾಯತ ಸಮುದಾಯ ಪೂಜೆ ಮಾಡುತ್ತಿರುವ ದೇವಾಲಯಗಳಲ್ಲಿ ಕಾಣುವುದಿಲ್ಲ. ಲಿಂಗಾಯತ ಪೂಜೆ ಇರುವ ದೇವಾಲಯಗಳಲ್ಲಿ ಅವಲೋಕಿಸಿ ನೋಡಿದಾಗ ಗಂಧದ ರೂಪದಲ್ಲಿ ಕುಂಕುಮವನ್ನು ಬಳಸುವುದನ್ನು ಕಾಣುತ್ತೇವೆ. ಹಾಗೆಯೇ ರುದ್ರಮಂತ್ರವೆಂದು ಪಂಚಾಕ್ಷರ ಮಂತ್ರವನ್ನು ಕರೆಯುತ್ತಾರೆ. ಕೆಲವೊಮ್ಮೆ ಕನ್ನಡ ಶ್ಲೋಕಗಳೇ ಮಂತ್ರಗಳಾಗಿ ಬದಲಾಗುತ್ತವೆ. ಪೂಜೆ ಎನ್ನುವುದು ಇಲ್ಲಿ ಅತ್ಯಂತ ಸರಳವಾಗಿ ರೂಪಾಂತರ ಹೊಂದಿದೆ. ಇಷ್ಟು ದೊಡ್ಡ ವ್ಯತ್ಯಾಸಕ್ಕೆ ಕಾರಣವನ್ನು ಹುಡುಕುತ್ತಾ ಹೋದರೆ ೧೨ನೆಯ ಶತಮಾನದ ಬಸವಣ್ಣನವರ ಕಲ್ಯಾಣ ಕ್ರಾಂತಿಯ ಕಾರಣವಾಗಿ ಕಾಣುತ್ತದೆ. ಬಸವಣ್ಣನವರು ವೇದಗಳ ಪಾರಮ್ಯವನ್ನು ಧಿಕ್ಕರಿಸಿ ಸರಳ ದೇವಪೂಜೆಯನ್ನು ಜಾರಿಗೆ ತರುತ್ತಾರೆ. ಇದಕ್ಕೆ ಆಕರ್ಷಿತರಾದ ಅಂದಿನ ಬ್ರಾಹ್ಮಣ ಮತ್ತು ಬ್ರಾಹ್ಮಣೇತರ ಸಮುದಾಯಗಳ ಜನರು ಅವರೆಡೆಗೆ ಸಾಗಿ ಹೋಗುತ್ತಾರೆ. ಆದರೆ ಕಾಲಾಂತರದಲ್ಲಿ ಮತ್ತೆ ವೈದಿಕ ಪೂಜೆ ಪದ್ಧತಿ ಮತ್ತೆ ಲಿಂಗಾಯತರಲ್ಲಿ ಮೈಗೂಡಿಕೊಳ್ಳುತ್ತದೆ ಆದರೆ ಸಂಕೀರ್ಣ ಪೂಜೆಯ ಜಾಗದಲ್ಲಿ ಸರಳ ಪೂಜೆಯನ್ನು ಮಾಡತೊಡಗಿದರು. ಅದರ ಪ್ರತಿಬಿಂಬವನ್ನೇ ಇಂದೂ ಕೂಡ ಲಿಂಗಾಯತ ಪೂಜೆಯಿರುವ ದೇವಾಲಯಗಳಲ್ಲಿ ನೋಡುತ್ತೇವೆ. ಕುಂಕುಮವೇ ಗಂಧವಾಗುತ್ತದೆ. ಕನ್ನಡ ಶ್ಲೋಕ ಮತ್ತು ಪಂಚಾಕ್ಷರ ಮಂತ್ರಗಳೇ ವೇದಮಂತ್ರಗಳಾಗುತ್ತವೆ.

ಒಟ್ಟಾರೆಯಾಗಿ ಧಾರ್ಮಿಕ ಆಚರಣೆಗಳು ಒಂದು ನಾಡಿನ ಸಂಸ್ಕೃತಿಯನ್ನು ಪರಿಚಯಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಹಬ್ಬ ಮತ್ತು ಆಚರಣೆಗಳು ತಾವು ನಂಬಿದ ದೈವ ಅಥವಾ ದೇವಿಯ ಆರಾಧನೆಯನ್ನೇ ಮೂಲ ಉದ್ದೇಶವಾಗಿ ಹೊಂದಿವೆ. ಸಂತೋಷಕೂಟಗಳಾಗಿ, ವಿಶಿಷ್ಟ ಆಚರಣೆಗಳ ಕುರುಹುಗಳಾಗಿ, ಪುಣ್ಯ ಸಂಪಾದನೆಯ ಮಾರ್ಗಗಳಾಗಿ ಇವು ಇಂದಿಗೂ ಕಂಡುಬರುತ್ತವೆ. ಭಕ್ತ-ಭಗವಂತನ ಈ ವಿಶಿಷ್ಟ ಬಾಂಧವ್ಯವು ಮಾನವಾತೀತ ಶಕ್ತಿಯೊಂದಿಗೆ ಮನುಷ್ಯ ಸಂಬಂಧವನ್ನು ಮತ್ತು ಆಧ್ಯಾತ್ಮಿಕ ಶ್ರದ್ಧೆಯನ್ನು ನಿರಂತರವಾಗಿ ಪ್ರವಹಿಸುವ ಹಬ್ಬಗಳು ಮತ್ತು ಆಚರಣೆಗಳು ಮಹಾನದಿಗಳಿದ್ದಂತೆ. ಕೇವಲಜ್ಞಾನದ ಮಹಾಹೋಮ, ಮಂತ್ರನ್ಯಾಸ, ಅನಂತನನೋಹಿ ಮತ್ತು ಜಿನರಾತ್ರೆ ಮಹೋತ್ಸವಗಳಂತಹ ಆಚರಣೆಗಳಲ್ಲಿ ಜೈನ, ಶೈವ, ವೈಷ್ಣವ, ಶಾಕ್ತ ಪ್ರಭಾವಗಳನ್ನು ಕಾಣಬಹುದು. ಹಾಗಾಗಿ ಈ ಹಬ್ಬ ಮತ್ತು ಆಚರಣೆಗಳು ಜಾತ್ಯಾತೀತವಾಗಿ ಪ್ರಾಚೀನ ಕಾಲಘಟ್ಟದಿಂದಲೂ ಬೆಳೆದುಬಂದಿವೆ.

೧. SII, XV, No.45
೨. SII, XX, No.71
೩. SII, IX, No.08
೪. ಕ.ವಿ.ಶಾ.ಸಂ. ೧೦., ಸಂ.೮೨, ಪು.೧೨೭
೫. SII, XX, No.175
೬. ಕೊಪ್ಪಾ ಎಸ್.ಕೆ. ಪು. ೧೬೭
೭. ಕ.ವಿ.ಶಾ.ಸಂ. ೧೦, ಸಂ.೧೮, ಪು.೧೫೭
೮. ಕ.ವಿ.ಶಾ.ಸಂ–೧೦, ಸಂ.೦೩, ಪು.೧೪೨
೯. SII, XX, No.138
೧೦. ಕ.ವಿ.ಶಾ.ಸಂ. ಸಂ. ೦೩, ಪು.೧೪೨
೧೧. ಕ.ವಿ.ಶಾ.ಸಂ. ನಂ.೪೯, ಪು.೨೯೬
೧೨. SII., Vol.X, No.74, Vol.XVIII, No.94, Vol.XV, No.155
೧೩. ಕೊಪ್ಪಾ ಎಸ್.ಕೆ., ಪು. ೧೬೮
೧೪. SII, XIX, No.08
೧೫. SII, XVIII, No.381
೧೬. SII, XVIII, No.118
೧೭. SII, XV, No.642
೧೮. ಭಟ್ಟಾಚಾರ್ಯ ದಿನೇಶಚಂದ್ರ, ಪ್ರಾಯಶ್ಚಿತಗಳು ಮತ್ತು ವ್ರತಗಳು, ಯು.ಭಾ.ಸಂ., ಸಂ.೦೨, ಪು.೨೮೨
೧೯. ಕೊಪ್ಪಾ ಎಸ್.ಕೆ., ೧೬೯
೨೦. ಕೊಪ್ಪಾ ಎಸ್.ಕೆ., ಪು ೧೭೦
೨೧. SII, XV, No.45
೨೨. ಕೊಪ್ಪಾ ಎಸ್.ಕೆ., ಪು.೧೭೦
೨೩. SII, XVIII, No.158
೨೪. ಕೃಷ್ಣಶರ್ಮ ಬೆಟಗೇರಿ, ಸಾಹಿತ್ಯ ವಿಹಾರ, ಪು. ೨೦೧
೨೫. ಎಇಂ., ೫, ಪು.೨೬

೨೬. SII, XX, No.86

೨೭. ಕ.ವಿ.ಶಾ.ಸಂ., ನಂ.೨೯., ಪು.೫೫-೫೬

೨೮. ಕ.ವಿ.ಶಾ.ಸಂ-೧೦, ನಂ.೭೫, ಪು.೧೧೪

೨೯. ಕ.ವಿ.ಶಾ.ಸಂ-೧೦, ನಂ.೬೭, ಪು.೧೦೧

೩೦. ಕ.ವಿ.ಶಾ.ಸಂ-೧೦, ನಂ.೭೮, ಪು.೧೨೦

೩೧. SII, XX, No.111

೩೨. SII, XV, No.155

೩೩. SII, XV, No.169

೩೪. SII, XV, No.169

೩೫. SII, XV, No.99

೩೬. Epi. Ind., 05, P.26

೩೭. ಆದಿತ್ಯ ಹೆಗ್ಡೆ, ೨೦೧೮, ಕಲ್ಯಾಣ ಚಾಳುಕ್ಯರ ಕಾಲದ ಶೈವ ಧರ್ಮ, ಅಪ್ರಕಟಿತ ಮಹಾಪ್ರಬಂಧ, ಪು. ೨೭೧

ಅಧ್ಯಾಯ ಏಳು

ಉಪಸಂಹಾರ

ಧರ್ಮ ಎಂಬ ಪದವನ್ನು ಕೇವಲ ಒಂದು ಪದವಾಗಲೀ ಅಥವಾ ವಾಕ್ಯದಲ್ಲಾಗಲೀ ಹಿಡಿದಿಡಲು ಸಾಧ್ಯವಿಲ್ಲ. ಮಾನವನ ಹುಟ್ಟಿನಿಂದ ಒಂದಲ್ಲ ಒಂದು ರೀತಿಯಿಂದ ಅಂದರೆ ಭಯದಿಂದ, ನಂಬಿಕೆಯಿಂದ ಕೌತುಕದಿಂದ, ಭಕ್ತಿಯಿಂದ ಸರ್ವರೀತಿಯಿಂದಲೂ ಧರ್ಮ ಮಾನವನನ್ನು ಆವರಿಸಿಕೊಂಡಿದೆ. ಮನುಷ್ಯನ ಪ್ರಾಪಂಚಿಕ ವ್ಯವಹಾರಗಳಿಂದ ಮುಕ್ತಗೊಳಿಸಿ ಮೋಕ್ಷದೆಡೆಗೆ ಗುರಿ ಸೇರಿಸಲು ವಾಹಕದಂತೆ ವರ್ತಿಸುವುದು ಈ ಧರ್ಮ. ಪ್ರಾಚೀನ ಕಾಲಘಟ್ಟದಿಂದ ಇಂದಿನವರೆಗೆ ಹಲವು ಧರ್ಮಗಳು ಹುಟ್ಟಿ ಬೆಳೆದು ಬಂದಿದ್ದು ಕೆಲವು ಕಾಲನಲ್ಲಿ ಲೀನವಾದರೆ ಇನ್ನು ಕೆಲವು ರೂಪಾಂತರ ಹೊಂದಿದವು. ಈ ರೂಪಾಂತರ ಹೊಂದುತ್ತ ಹೊಸತನಕ್ಕೆ ತೆರೆದುಕೊಳ್ಳುತ್ತ ಮತ್ತಷ್ಟು ಬೆಳೆದ, ಬೆಳೆಯುತ್ತಿರುವ ಧರ್ಮವೆಂದರೆ ಅದು ಶೈವ ಧರ್ಮ ಮಾತ್ರ. ಶೈವ ಮತಃ ಸಾಂಸ್ಕೃತಿಕ ಅಧ್ಯಯನ (ವಿಜಯಪುರ ಜಿಲ್ಲೆಯನ್ನು ಅನುಲಕ್ಷಿಸಿ) ಎಂಬ ಈ ಮಹಾಪ್ರಬಂಧ ಜಿಲ್ಲೆಯಲ್ಲಿ ಕಂಡುಬರುವ ಶಾಸನಗಳು, ದೇವಾಲಯಗಳು, ಮೂರ್ತಿಶಿಲ್ಪಗಳು ಹಾಗೂ ಇತರೆ ಪುರಾತತ್ವೀಯ ಅವಶೇಷಗಳು ಮತ್ತು ಪ್ರಾಚೀನ ಅಂಶಗಳನ್ನು ಉಳಿಸಿಕೊಂಡಂತಹ ಸಾಂಸ್ಕೃತಿಕ ಹೆಜ್ಜೆ ಗುರುತಿರುವ ನಂಬಿಕೆ, ಆಚರಣೆಗಳ ಸ್ಥೂಲ ಅಧ್ಯಯನದ ಫಲವಾಗಿದೆ. ಈ ಮಹಾಪ್ರಬಂಧದಲ್ಲಿ ಚರ್ಚಿಸಲಾದ ವಿಷಯಗಳು ಒಟ್ಟಾರೆಯಾಗಿ ವಿಜಯಪುರ ಜಿಲ್ಲೆಗೆ ಸಂಬಂಧಿಸಿದ ಸಮಗ್ರ ಶೈವ ಧರ್ಮದ ಕುರಿತಾಗಿ ದಾಖಲೆಗಳನ್ನು ನೀಡುತ್ತದೆ.

ವಿಜಯಪುರ ಜಿಲ್ಲೆಯಲ್ಲಿ ಶೈವ ಧರ್ಮವನ್ನು ಗಮನಿಸಲಾಗಿ ರಾಷ್ಟ್ರಕೂಟ, ಕಲ್ಯಾಣ ಚಾಳುಕ್ಯ, ಕಳಚೂರಿ, ಯಾದವರ ಕಾಲಘಟ್ಟದಲ್ಲಿ ಪ್ರಭಾವ ಪೂರ್ಣವಾಗಿ ಬೆಳೆದು ಬಂದಿದ್ದು, ಮುಸ್ಲಿಂ ಅರಸರ ಆಡಳಿತಾವಧಿಯಲ್ಲಿ ಕುಂಠಿತಗೊಂಡಿದ್ದನ್ನು ಕಾಣುತ್ತೇವೆ. ಆದರೂ ದಖ್ಖನ್ ಪ್ರದೇಶದಲ್ಲಿ ಆಳ್ವಿಕೆ ಮಾಡಿದ ಮುಸ್ಲಿಂ ಅರಸರು ಸರ್ವಧರ್ಮ ಸಹಿಷ್ಣುಗಳಾಗಿದ್ದು ಜಿಲ್ಲೆಯಲ್ಲಿ ಇವರ ಕಾಲಾವಧಿಯಲ್ಲಿ ಶೈವಧರ್ಮವು ಪೋಷಣೆಯನ್ನು ಪಡೆದಿತ್ತೆಂದು ಹೇಳಬಹುದು. ಉದಾಹರಣೆಗಾಗಿ ಎರಡನೇ ಇಬ್ರಾಹಿಂ ಆದಿಲ್‌ಶಾಹ ಸಂಗೀತ ಆರಾಧಕನಾಗಿದ್ದನಲ್ಲದೆ ಸ್ವತಃ ಸಂಗೀತಗಾರನಾಗಿದ್ದು ಪ್ರಾರಂಭದಲ್ಲಿ ಸರಸ್ವತಿ, ಗಣೇಶನ ಶ್ಲೋಕಗಳನ್ನು ಸ್ತುತಿಸುತ್ತಿದ್ದನು ಎಂದು ಇಬ್ರಾಹಿಂ ನಾಮಾ ಕೃತಿಯಿಂದ ತಿಳಿದುಬರುತ್ತದೆ. ಅಲ್ಲದೆ ಈತನು ನರಸಿಂಹನ ಆರಾಧಕನಾಗಿದ್ದಲ್ಲದೆ, ಸಾಲೋಟಗಿಯ

ಶಿವಯೋಗೇಶ್ವರ ದೇವಾಲಯವನ್ನು ಜೀರ್ಣೋದ್ಧಾರಗೊಳಿಸಿ ದಾನಕೊಟ್ಟನೆಂದು ಹೇಳಲಾಗುತ್ತದೆ. ಮುಸ್ಲಿಂ ಆಡಳಿತಾವಧಿಯ ನಂತರವೂ ಈ ಪ್ರದೇಶದಲ್ಲಿ ಶೈವ ಧರ್ಮ ಯಾವುದೇ ಅಡೆ ತಡೆ ಇಲ್ಲದೆ ಬೆಳೆದು ಬಂದಿರುವುದನ್ನು ಕಾಣುತ್ತೇವೆ. ಹಾಗಾಗಿ ಪ್ರಸ್ತುತ ಜಿಲ್ಲೆಯಲ್ಲಿ ಶೈವ ಆರಾಧಕರೇ ಹೆಚ್ಚಿನ ಪ್ರಮಾಣದಲ್ಲಿದ್ದಾರೆ. ಜಿಲ್ಲೆಯ ಶಾಸನಗಳನ್ನು ಮತ್ತು ದೇವಾಲಯಗಳನ್ನು ಗಮನಿಸಿದಾಗ ಕಲ್ಯಾಣ ಚಾಳುಕ್ಯರ ಕಾಲಾವಧಿಯಲ್ಲಿ ಶೈವ ಧರ್ಮವು ಎರಡು ಶತಮಾನಗಳ ಕಾಲ ಪ್ರಭಾವ ಪೂರ್ಣವಾಗಿ ಬೆಳೆದು ಬಂದಿರುವುದನ್ನು ಕಾಣುತ್ತೇವೆ. ದೇವಾಲಯದ ನಿರ್ಮಾಣವೇ ಪುಣ್ಯದಾಯಕವೆಂದು ಬಗೆದು ಯುದ್ಧದಂತೆ ವೇಗವಾಗಿ ಸಾಮ್ರಾಜ್ಯದ ತುಂಬೆಲ್ಲ ದೇವಾಲಯಗಳನ್ನು ನಿರ್ಮಾಣ ಮಾಡಿರುವುದನ್ನು ಕಾಣುತ್ತೇವೆ. ಅದಕ್ಕೆ ವಿಜಯಪುರ ಜಿಲ್ಲೆಯು ಹೊರತಾಗಿಲ್ಲ. ಮತ್ತು ಅದಕ್ಕೆ ದಾನಗಳನ್ನು ಯಥೇಚ್ಛ ರೀತಿಯಲ್ಲಿ ನೀಡಿರುವುದನ್ನು ಕಾಣುತ್ತೇವೆ.

ಪ್ರಸ್ತುತ ಮಹಾಪ್ರಬಂದನ್ನು ಏಳು ಅಧ್ಯಾಯಗಳನ್ನಾಗಿ ವಿಂಗಡಿಸಿಕೊಂಡು ರಚಿಸಲಾಗಿದ್ದು ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ ವ್ಯಾಪ್ತಿ ಈ ವರೆಗಿನ ಅಧ್ಯಯನದ ವಿಮರ್ಶೆ ಮತ್ತು ಆಕರಗಳಲ್ಲಿ ನಮ್ಮ ಅಧ್ಯಯನಕ್ಕೆ ಅವಶ್ಯಕವಾದ ಈ ಪೂರ್ವದ ಕೆಲಸಗಳನ್ನು ವಿಮರ್ಶಿಸಿ ನಮ್ಮ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು ಹೇಳಲಾಗಿದೆ.

ರಾಜಕೀಯ ಹಿನ್ನೆಲೆ ಎಂಬ ಎರಡನೆಯ ಅಧ್ಯಾಯದಲ್ಲಿ ಜಿಲ್ಲೆಯ ಭೌಗೋಳಿಕ ಹಾಗೂ ರಾಜಕೀಯ ಇತಿಹಾಸವನ್ನು ಸಂದರ್ಭಕ್ಕೆ ಅನುಸಾರವಾಗಿ ಶಾಸನಗಳೊಂದಿಗೆ ವಿವರಿಸಲಾಗಿದೆ. ಒಂದು ಪ್ರದೇಶದ ಉನ್ನತಿಗೆ ಅಲ್ಲಿನ ಭೌಗೋಳಿಕ ಪರಿಸರ ಕೂಡ ಬಹುಮುಖ್ಯವಾಗುತ್ತದೆ. ಮಾನವನ ಅಲೆಮಾರಿ ಜೀವನದಿಂದ ಹಿಡಿದು ಕ್ರಮೇಣ ಒಂದು ಸುಸಂಬದ್ಧವಾದ ಸಾಮಾಜಿಕ ವ್ಯವಸ್ಥೆ ನಿರ್ಮಾಣವಾಗುವಲ್ಲಿ ಅಲ್ಲಿನ ಪರಿಸರ ಬಹಳ ಮುಖ್ಯ ಭೌಗೋಳಿಕವಾಗಿ ಸಮೃದ್ಧಿಯನ್ನು ಪಡೆದಿದ್ದಂತಹ ವಿಜಯಪುರ ಜಿಲ್ಲೆಯ ಪರಿಸರವು ನದಿ, ಗುಡ್ಡ, ಹಳ್ಳ, ಕೊಳ್ಳ ಮೊದಲಾದ ನೈಸರ್ಗಿಕ ಸಂಪತ್ತು ಇಲ್ಲಿ ಮಾನವನು ನಾಗರಿಕನಾಗಲು ಕಾರಣವಾಯಿತು. ಹಾಗಾಗಿ ಪ್ರಾಗಿತಿಹಾಸ ಕಾಲದಿಂದಲೂ ಇಲ್ಲಿ ಜನವಸತಿ ಕಂಡುಬರುತ್ತದೆ. ಶಾಸನಗಳು, ದೇವಾಲಯಗಳು, ಪುರಾತತ್ವೀಯ ಹಾಗೂ ಸಾಹಿತ್ತಿಕ ಆಕರಗಳನ್ನು ಇಟ್ಟುಕೊಂಡು ರಾಜಕೀಯ ಚರಿತ್ರೆಯನ್ನು ಶೈವ ಧರ್ಮದ ಹಿನ್ನೆಲೆಯಾಗಿ ಕಟ್ಟಿಕೊಡಲಾಗಿದೆ.

ಮೂರನೆಯ ಅಧ್ಯಾಯವು ಶೈವ ಧರ್ಮದ ಉಗಮ ಮತ್ತು ವಿಕಾಸ ಎಂಬುದರಲ್ಲಿ ಸಿಂಧೂನಾಗರಿಕತೆಯಿಂದ ಮೊದಲ್ಗೊಂಡು ಕಲ್ಯಾಣ ಚಾಳುಕ್ಯರ ಆರಂಭದವರೆಗಿನ ಶೈವ ಧರ್ಮದ ಬೆಳವಣಿಗೆಯನ್ನು ಗುರುತಿಸಲಾಗಿದ್ದು ವೇದಗಳ ಕಾಲ, ಮಹಾಕಾವ್ಯಗಳು, ಉಪನಿಷತ್ ಮತ್ತು ಬೇರೆ

ಬೇರೆ ರಾಜಮನೆತನಗಳ ಆಳ್ವಿಕೆಯ ಕಾಲಕ್ಕೆ ಶೈವ ಧರ್ಮ ಹೇಗಿತ್ತು ಎಂಬುದನ್ನು ಚರ್ಚಿಸಲಾಗಿದೆ. ಅಲ್ಲದೆ ಶೈವ ಧರ್ಮದ ಪಂಥಗಳಾದ ಕಾಳಾಮುಖ, ಕಾಪಾಲಿಕರ, ಪಾಶುಪತ, ಮಹಾವ್ರತ, ಕಾಶ್ಮೀರ ಶೈವ, ಶುದ್ಧಶೈವ ವಿವರಗಳನ್ನು ನೀಡಲಾಗಿದೆ.

ನಾಲ್ಕನೇ ಅಧ್ಯಾಯವು ವಿಜಯಪುರ ಜಿಲ್ಲೆಯಲ್ಲಿ ಶೈವ ಧರ್ಮ ಎಂಬ ಅಧ್ಯಾಯದಲ್ಲಿ ಜಿಲ್ಲೆಯಲ್ಲಿ ಶೈವ ಧರ್ಮದ ಬೆಳವಣಿಗೆಯನ್ನು ಶಾಸನ ಆಕರಗಳನ್ನು ಇಟ್ಟುಕೊಂಡು ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ. ಜಿಲ್ಲೆಯಲ್ಲಿ ಕಂಡುಬರುವ ಶೈವ ಪಂಥಗಳು, ಶೈವ ಗುರುಪರಂಪರೆಯನ್ನು ಕುರಿತು ವಿವರಿಸಲಾಗಿದೆ. ಗುರುಪರಂಪರೆಯನ್ನು ಒಂದೇ ಹೆಸರಿನ ಮುನಿಗಳು ಮತ್ತು ಶಾಸನಗಳಲ್ಲಿ ಗುರುಶಿಷ್ಯರ ಸಂಬಂಧ, ಅವರಕಾರ್ಯವನ್ನು ತಿಳಿಯುವ ಪ್ರಯತ್ನವನ್ನು ಮಾಡಿದ್ದೇವೆ. ಶೈವ ಧರ್ಮಕ್ಕೆ ನೀಡಿದ ದಾನ ಮತ್ತು ದಾನಿಗಳು, ದಾನಗಳ ವಿಧಗಳನ್ನು ಕುರಿತು ವಿವರಿಸಲಾಗಿದೆ. ಇಲ್ಲಿ ಕಂಡುಕೊಂಡ ಗಮನಾರ್ಹ ವಿಷಯವೆಂದರೆ ರಾಜ ಸಾಮ್ರಾಜ್ಯದ ಪ್ರಶ್ನಾತೀತ ನಾಯಕನಾಗಿದ್ದರೂ ಸಹ ನೇರವಾಗಿ ಆತ ದಾನಗಳಲ್ಲಿ ಭಾಗಿಯಾದುದು ಕಡಿಮೆಯೇ. ಮತ್ತೊಂದು ಅಂಶವೆಂದರೇ ಸ್ತ್ರೀ ಸಮಾಜದ ದಾನಗಳು, ರಾಣಿಯರು ದಾನಗಳನ್ನು ನೀಡಿದುದಲ್ಲದೇ ರಾಜ ಅಥವಾ ಮಾಂಡಳಿಕರು ದಾನಗಳನ್ನು ನೀಡುವಂತೆ ಪ್ರೇರೇಪಿಸಿದುದನ್ನು ಕಾಣುತ್ತೇವೆ.

ಶರಣರು ಮಾತಿನಲ್ಲಿ ಮಹತ್ವವನ್ನು ಮೂಡಿಸಿದವರು ಶರಣರ ಜೀವನ ಬಹುಮುಖವಾದದ್ದು. ಕೆಲವರಂತೂ ಒಂದೂ ಕಡೆ ಸಾಧಕರು, ಇನ್ನೊಂದು ಕಡೆ ಸಮಾಜ ಸೇವಕರು; ಮತ್ತೊಂದು ಕಡೆ ಧರ್ಮದ ಬೆಳಕನ್ನು ಹೊತ್ತ ದೀವಟಿಗಳು, ಕ್ರಾಂತಿಕಾರರು ಆದರೂ ತಮ್ಮ ನಿತ್ಯ ಜೀವನದ ಕಾಯಕವನ್ನು ನಮ್ರ ಭಾವದಿಂದ ಮಾಡುವ ಕರ್ಮಕುಶಲಗಳು, ಜೀವನವನ್ನು ತೆರೆದ ಕಣ್ಣಿನಿಂದ ನೋಡಿದವರು. ಲೋಕದ ಕಷ್ಟ-ಕಾರ್ಪಣ್ಯಗಳನ್ನು ಕಂಡು ಕನಿಕರಗೊಂಡವರು; ಕಷ್ಟ-ಸುಃಖಗಳನ್ನು ತಾವು ಉಂಡವರು, ಸ್ತುತಿನಿಂದೆಗಳನ್ನು ಏಕಪ್ರಕಾರವಾಗಿ ಬರಮಾಡಿ ಕೊಂಡವರು. ಈ ಎಲ್ಲ ಮುಖಗಳಿಂದ ನೂರಾರು ಅನುಭವಗಳನ್ನು ಪಡೆದ ಅವರ ಚೇತನ ಶ್ರೀಮಂತವಾಗಿದೆ. ಗಗನ ಗಾಮಿಯಾಗಿ ಮೇಲೇರಿದೆ. ಅದೆಲ್ಲದರ ಪ್ರಭಾವವನ್ನು ವಚನಗಳಲ್ಲಿ ಕಾಣುತ್ತೇವೆ.

ಮಾತಿನ ಅರ್ಥಕ್ಕೆ ಮೀರಿದ ಪರಿಶುದ್ಧ ಭಾವನೆಯ ಉತ್ತುಂಗ ಶಿಖರವನ್ನು ಅನೇಕ ವಚನಗಳಲ್ಲಿ ಕಾಣುತ್ತೇವೆ.

ಕನ್ನಡ ನಾಡು ಬಸವ ಭೂಮಿಯೆಂದೇ ಗುರುತಿಸಲ್ಪಟ್ಟಿದೆ. ವಚನ ಜಾತಿಯ ಸ್ವಾತಂತ್ರ್ಯ ಮತ್ತು ಸಮಾನತೆಯ ತಳಹದಿಯ ಮೇಲೆ, ಲಿಂಗಬೇಧರಹಿತ ಹೊಸ ಸಮಾಜರಚನೆಗಾಗಿ ಹನ್ನೆರಡನೆಯ ಶತಮಾನದಲ್ಲಿ ಶ್ರಮಿಸಿದ ಶರಣರ ಪ್ರಯತ್ನ ಜಾಗತಿಕ ಇತಿಹಾಸದಲ್ಲಿ ಹಿರಿದಾದ

ಸ್ಥಾನದಲ್ಲಿ ದಾಖಲೆಯಾಗುವಂತಹದ್ದು. ಬಸವಣ್ಣವರ ನಾಯಕತ್ವದಲ್ಲಿ ಶರಣ ಸಮೂಹವೂ ಸಂಪ್ರದಾಯವಾದಿಗಳ ಮೇಲೆ ಸಾಧಿಸಿದ ವಿಜಯ ಅದ್ಭುತವಾದದ್ದು, ಧ್ವನಿ ಇಲ್ಲದ ಜನರ ಧ್ವನಿಯಾಗಿ ಹೊರಹೊಮ್ಮಿದ ಈ ಸಾಹಿತ್ಯ ಜಾಗತಿಕ ಮಟ್ಟದಲ್ಲಿ ಶ್ರೇಷ್ಠತೆಯನ್ನು ಪಡೆದಿದೆ.

ಕನ್ನಡ ಸಾಹಿತ್ಯಕ್ಕೆ ಶರಣರು ಕೊಟ್ಟ ಅಪೂರ್ವ ಕೊಡುಗೆಯೆಂದರೆ ವಚನಸಾಹಿತ್ಯ. ಸಮಾಜದ ಎಲ್ಲ ವರ್ಗಗಳ ಜನರು, ಅನುಭವ ಮಂಟಪದಲ್ಲಿ ನೆಲೆನಿಂತು ಶರಣರಾಗಿ ಸಮುಷ್ಠೆ ಪ್ರಜ್ಞೆಯಿಂದ ವಚನಗಳನ್ನು ರಚಿಸಿದರು. ಆ ಕಾಲದಲ್ಲಿ ಸ್ತ್ರೀಯರಿಗೆ ಯಾವ ಗೌರವೂ ಇರಲಿಲ್ಲ. ಆದರೆ ಬಸವಣ್ಣವರು ಸ್ತ್ರೀಯರ ಅಭಿವ್ಯಕ್ತಿಗೂ ಮಾಧ್ಯಮವಾದರು. ಒಂದು ರೀತಿಯಲ್ಲಿ ಹನ್ನೆರಡನೆಯ ಶತಮಾನ ದಲಿತರು ಮತ್ತು ಸ್ತ್ರೀಯರ ದಾಸ್ಯದ ವಿಮೋಚನೆಯ ಶತಮಾನವಾಗಿದೆ.

ಶರಣರು ನಿಜವಾದ ಬಂಡಾಯಗಾರರಾಗಿದ್ದರೂ ಯಾರನ್ನಾದರೂ ಸಂತೋಷಪಡಿಸಲೆಂದು ಅವರು ಬರೆಯಲಿಲ್ಲ; ಅಥವಾ ಇನ್ನಾರ ಮನಸ್ಸಿಗೆ ನೋವಾಗುತ್ತದೆಂದು ಬರೆಯುವದನ್ನು ನಿಲ್ಲಿಸಲಿಲ್ಲ. ಅವರು ನುಡಿದಂತೆ ನಡೆದರು. ತಮ್ಮ ಸಿದ್ಧಾಂತಗಳಿಂದ ಹಿಂದೆ ಸರಿಯಲಿಲ್ಲ. ಅವರು ಎಲ್ಲ ರೀತಿಯ ಮೂಢ–ಆಚರಣೆಗಳ ವಿರುದ್ಧ ಖಡ್ಗವನ್ನು ಝುಳಪಿಸಿದರು. ವೇದಶಾಸ್ತ್ರ ಆಗಮಗಳನ್ನು ಖಡಾಖಂಡಿತವಾಗಿ ವಿರೋಧಿಸಿದರು. ದಲಿತರನ್ನು ಸಮೀಪ ಕರೆದು ಅವರನ್ನು ತಮ್ಮ ಹೃದಯಕ್ಕೆ ಹಚ್ಚಿಕೊಂಡರು. ಅಲ್ಲಿಯವರೆಗೆ ಉಳ್ಳವರ ಆಸ್ತಿಯಾಗಿದ್ದ ದೇವರನ್ನು ಸ್ವತಂತ್ರಗೊಳಿಸಿ ಅವನ್ನು ಜನರ ಕೈಗೇ ನೀಡಿದರು.

ಶರಣರು ಪರ್ಯಾಯ ಸಮಾಜ ರಚನೆಯ ಕನಸನ್ನು ಕಂಡಿದ್ದರು. ಅವರಿಗಿಂತ ಮೊದಲು ಬುದ್ಧ ಸಮಾನತೆಯ ವಿಚಾರಗಳನ್ನು ಬಿತ್ತಿದ್ದ ಶರಣರು ಬಂದಾಗಿಂತ ಒಂದು ಹೆಜ್ಜೆ ಮುಂದೆ ಹೋಗಿ ಜನರನ್ನು ಕಟ್ಟಿದರು. ಶರಣರ ಮುಖ್ಯ ಕಾಳಜಿ ಮನುಷ್ಯನಾಗಿದ್ದ ಮನುಷ್ಯನನ್ನು ಕಟ್ಟುತ್ತಲೆ ಅವರು ಸಮಾಜವನ್ನು ಕಟ್ಟಿದರು.

ಹನ್ನೆರಡನೆಯ ಶತಮಾನದಲ್ಲಿ ಶರಣರು ಪ್ರತಿಪಾದಿಸಿದ ವಿಚಾರಗಳು ಇಂದಿಗೂ ಪ್ರಸ್ತುತವಾಗಿವೆ. ಶರಣರ ಮಾತುಗಳೆ ವಚನಗಳಾಗಿದ್ದವು. ಒಂಭತ್ತು ನೂರಾ ವರ್ಷಗಳು ಕಳೆದ ಹೋದರು ವಚನಗಳು ನಿತ್ಯ ನೂತನಗಳಾಗಿವೆ. ಪ್ರತಿ ಓದಿನಲ್ಲಿ ಹೊಸ ಹೊಸ ಅರ್ಥವನ್ನು ನೀಡುವ ವಚನಗಳು ಕನ್ನಡವೂ ವಿಶ್ವಸಾಹಿತ್ಯಕ್ಕೆ ಕೊಟ್ಟ ಕಾಣಿಕೆಯಾಗಿದೆ

ಅವಿದ್ಯಾವಂತರು, ಹಳ್ಳಿಗರು, ಅಶಿಕ್ಷಿತರು, ಬಸವ ಚಳುವಳಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ವಚನ ಸಾಹಿತ್ಯವನ್ನು ನಿರ್ಮಿಸಿರುವುದು ಸಾಹಿತ್ಯ ಲೋಕದ ಒಂದು ದೊಡ್ಡ ಸೋಜಿಗವಾಗಿದೆ. ಈ ವಚನಗಳ ರಚನಾ ಕೌಶಲ್ಯ ಎಷ್ಟು ಅಚ್ಚುಕಟ್ಟಾಗಿದೆ ಎಂದರೆ ಅದರಲ್ಲಿಯ ಒಂದೇ ಒಂದು ಸಾಲು ಅಥವಾ ಶಬ್ದ ಅವಶ್ಯಕತೆಗಿಂತ ಹೆಚ್ಚೆಂದು ಅನ್ನಿಸುವುದಿಲ್ಲ. ಭಾರತದ

ಇತಿಹಾಸದಲ್ಲಿ ೧೨ನೆಯ ಶತಮಾನವು ಸುವರ್ಣಾಕ್ಷರಗಳಿಂದ ಬರೆದಿಡುವ ಸಂಪುಟವಾಗಿದೆ. ಅಜ್ಞಾನ, ಅಂಧಕಾರ, ಮೌಢ್ಯ, ಕಂದಾಚಾರ, ಜಾತೀಯತೆ, ಮತಾಂಧತೆ, ಶೋಷಣೆ ಮುಂತಾದವುಗಳಲ್ಲಿ ಮುಳುಗಿಹೋಗಿದ್ದ ಸಮಾಜವನ್ನು ಮೇಲೆತ್ತಲು ಶರಣರು ತಮ್ಮ ಅರಿವಿನ ಜ್ಞಾನದಿಂದ ಪ್ರಯತ್ನಿಸಿದರು. ಬಸವಾದಿ ಶರಣರು ಆರಂಭಿಸಿದ ಸಾಮಾಜಿಕ ಪರಿವರ್ತನೆಯ ಈ ಧಾರ್ಮಿಕ ಕ್ರಾಂತಿಯಲ್ಲಿ ಮಾತುಬಾರದ ಜನರು ಮಾತನಾಡಿದ್ದಾರೆ; ಧ್ವನಿ ಇಲ್ಲದವರು ಸುಶ್ರಾವ್ಯವಾಗಿ ಹಾಡಿದ್ದಾರೆ. ತಮ್ಮ ಗುರುತೇ ಇಲ್ಲದ ಜನರು ಬೇರೆಯವರಿಗೆ ಮಾದರಿಯಾಗಿ ಹೊರಹೊಮ್ಮಿದ್ದಾರೆ. ಈ ಚಳುವಳಿಯಲ್ಲಿ ಬಡವರು, ದೀನರು, ದಲಿತರು, ಸಿರಿವಂತರು, ಹೀಗೆ ಎಲ್ಲರೂ ಭಾಗಿಗಳಾಗಿ ಬಂದು ಪರ್ಯಾಯ ಸಮಾಜವನ್ನು ಕಟ್ಟಲು ಪ್ರಯತ್ನಿಸಿದ್ದಾರೆ.

ಈ ಜನರು ತಾವು ನುಡಿದಂತೆ ನಡೆದಿದ್ದಾರೆ. ಪ್ರಾಮಾಣಿಕವಾಗಿ ತಮ್ಮನ್ನು ತಾವು ತೋರಿಸಿಕೊಂಡು ಪಾರದರ್ಶಕ ಜೀವನವನ್ನು ನಡೆಸಿದ್ದಾರೆ. ಕೆಲಸ ಮಾಡದೆ ಯಾರೂ ಊಟವನ್ನು ಮಾಡಬಾರದೆಂಬ 'ಕಾಯಕ' ತತ್ವವನ್ನು ಜಾರಿಗೆ ತಂದರು. ಅಪರೂಪದ 'ದಾಸೋಹ' ಕಲ್ಪನೆಯನ್ನು ಪ್ರಚಾರ ಪಡಿಸಿದರು. ದೇಹವನ್ನೆ ದೇವಾಲಯವನ್ನಾಗಿಸಿ 'ಸ್ಥಾವರ'ವನ್ನು ತಿರಸ್ಕರಿಸಿದರು. ಚಲನಶೀಲತೆಯೇ ಮುಖ್ಯತತ್ವವನ್ನಾಗಿ ಸ್ವೀಕರಿಸಿ 'ಜಂಗಮ'ವನ್ನು ಪುರಸ್ಕರಿಸಿದರು. ಈ ಶರಣರ ಕ್ರಾಂತಿ ಸರ್ವತೋಮುಖ ಕ್ರಾಂತಿ; ಸಂಪೂರ್ಣಕ್ರಾಂತಿ; ಕೆಳವರ್ಗದ ಜನರು ಕೀಳುತನದ ಕೀಳಿರಿಮೆಯಿಂದ ನೊಂದು ಬೆಂದು ಹೋಗಿದ್ದರು. ಒಂದು ವೇಳೆ ಇದು ಯಶಸ್ವಿಯಾಗಿ ನಿರಂತರ ನಡೆದಿದ್ದರೆ ಜಗತ್ತಿನಲ್ಲಿ ಭಾರತದ ಸ್ಥಾನವೇ ಬದಲಾಗಿ ಹೋಗುತ್ತಿತ್ತು.

ಏಕೆಂದರೆ ಶಿವ-ಶರಣರು ಅಂದಿನ ಪರಂಪರೆಯ ತತ್ವ-ಸಿದ್ಧಾಂತಗಳಲ್ಲಿರುವ ಪೊಳ್ಳುತನ, ಗೊಡ್ಡುತನಗಳನ್ನು ಧೈರ್ಯದಿಂದ ಪ್ರಶ್ನಿಸಿದ್ದಾರೆ. ಧರ್ಮದ ಹೆಸರಿನಲ್ಲಿ ಜಾತಿಯ ಹೆಸರಿನಲ್ಲಿ ನಡೆಯುತ್ತಿದ್ದ ಶೋಷಣೆ, ವಂಚನೆಗಳನ್ನು ಅವರು ಬಯಲು ಗೊಳಿಸಿದರು. ದೇವಲೋಕ, ಕೈಲಾಸ, ಸ್ವರ್ಗ-ನರಕಗಳು ಕೇವಲ ಭ್ರಮೆಗಳಾಗಿದ್ದು ಸ್ಥಾವರ ಲಿಂಗ ಪೂಜೆಯನ್ನು ಗುಡಿ ನಿರ್ಮಾಣದ ಕ್ರಿಯೆಯನ್ನು ಬಲವಾಗಿ ಖಂಡಿಸಿದರು.

೧೨ನೆಯ ಶತಮಾನವೆಂದರೆ ಸಮಾನತೆಯ ಯುಗ, ಬಸವನ ಸುತ್ತಲಿದ್ದ ಶರಣ ಸಮೂಹವೂ ಜಾತಿ ಕಾರಣವಾಗಿ ಯಾರಲ್ಲಿಯೂ ಭೇದಭಾವ ಎಣಿಸಲಿಲ್ಲ. ಪೂರ್ವದಲ್ಲಿ ಬೇರೆ-ಬೇರೆ ಕುಲದವರಾಗಿದ್ದ ಅವರೆಲ್ಲ ಒಂದೇ ಕುಲಕ್ಕೆ ಸೇರಿ ಅದನ್ನು ಶರಣ ಕುಲ ಎಂದು ಕರೆದರು.

ಬಸವಯುಗಕ್ಕಿಂತ ಮೊದಲು ಸಾಮಾಜಿಕ ಕ್ರಾಂತಿಗೆ ಮುನ್ನುಡಿ ಬರೆದ ಬುದ್ಧ, ಮಹಾವೀರ, ದೇವರ ಹೆಸರಿನಲ್ಲಿ ನಡೆಯುವ ಎಲ್ಲ ತರಹದ ಹಿಂಸೆಯನ್ನು ವಿರೋಧಿಸಿದರು.

'ಅಹಿಂಸೆಯೇ ಪರಮ ಶ್ರೇಷ್ಠವಾದ ಧರ್ಮ'ವೆಂದು ಮಹಾವೀರ ಹೇಳಿದರೆ, ಸಕಲ ಪ್ರಾಣಿಗಳಲ್ಲಿ ಪ್ರೀತಿಯನ್ನು ಕಾಣಬೇಕೆಂದು ಬುದ್ಧ ಹೇಳಿದ. ಅದೇ ರೀತಿಯಾಗಿ 'ಸಕಲ ಪ್ರಾಣಿಗಳಲ್ಲಿ ದಯ ಇರಬೇಕು; ಧಯವೇ ಧರ್ಮದ ಮೂಲ'ವೆಂದು ಬಸವಣ್ಣನವರು ಹೇಳಿದರು. ದೇವರು ಮನುಷ್ಯನ ಉದ್ಧಾರಕ್ಕಾಗಿ ಇದ್ದಾನೆಯೇ ಹೊರತು ಆತನ ವಿನಾಶಕ್ಕೆ ಅಲ್ಲ ಎಂಬುದನ್ನು ಬಸವಾದಿ ಶರಣರು ಪ್ರತಿಪಾದಿಸಿದರು.

ಶರಣರದ್ದು 'ಉಳ್ಳವರ ಧರ್ಮವಲ್ಲ, ಇಲ್ಲದವರ ಧರ್ಮ. ಸ್ಥಾವರ ದೇವಾಲಯಗಳ ಧರ್ಮವಲ್ಲ, ಜಂಗಮ ಸಮುದಾಯದವರ ಧರ್ಮ. ಜನಜೀವಕ್ಕೆ ಜೀವ ಬಲಿಯಾಗುವ ಧರ್ಮವಲ್ಲ, ಪಶ್ಚಾತಾಪದ ಸರಳ ಧರ್ಮ. ಅಯ್ಯೋ ಪಾಪಿ ಎನ್ನುವ ಧರ್ಮವಲ್ಲ, ಕಾಯಕಯೋಗಿಗಳ ಬಾಳದೇಗುಲದಲ್ಲಿ ಬೆಳಗುವ ಧರ್ಮ, ಸತ್ತ ಮೇಲೆ ಸ್ವರ್ಗ ನರಕಗಳನ್ನು ತೋರಿಸುವ ಧರ್ಮವಲ್ಲ, ಆಚಾರವೇ ಸ್ವರ್ಗ ಅನಾಚಾರವೇ ನರಕವೆಂದು ಸಾರಿ ಇದೇ ಲೋಕದಲ್ಲಿ ಸ್ವರ್ಗವನ್ನು ತೋರಿಸುವ ಧರ್ಮ. ಶರಣರು ಧರ್ಮಕ್ಕೆ ಒಂದು ಹೊಸ ವ್ಯಾಖ್ಯೆಯನ್ನು ನೀಡಿದರು. ಶರಣರು ಭೂಮಿಯನ್ನು ಬಿಟ್ಟು ಆಕಾಶದಲ್ಲಿ ಕೆಲಸವನ್ನು ಹುಡಕಲಿಲ್ಲ. ಈ ನೆಲದ ಬದುಕಿನಲ್ಲಿಯೇ ಅವರು ಅದನ್ನು ಕಂಡುಕೊಂಡರು. ಶರಣರೆಂದರೆ ಯಾರು? ದೇವರೆಂದರೆ ಯಾರು? ಇವರಿಬ್ಬರ ನಡುವಿನ ಸಂಬಂಧವೇನು? ಎಂಬುದನ್ನು ಬಸವಾದಿ ಶರಣರು ಎಳೆ-ಎಳೆಯಾಗಿ ವಿಶ್ಲೇಷಿಸಿ ಒಂದು ಹೊಸ ಧರ್ಮದ ಕಾರ್ಯವನ್ನು ನೀಡಿದರು.

ವಚನಕಾರರು ಪ್ರತಿಯೊಂದರಲ್ಲಿಯೂ ವೈಜ್ಞಾನಿಕವಾದ ನಿಲುವನ್ನು ಸ್ವೀಕರಿಸಿದವರು. ದೇವಾಲಯ ಮತ್ತು ಗರ್ಭಗುಡಿ ಸಂಸ್ಕೃತಿಯನ್ನು ವಿರೋಧಿಸಿ ಮತ್ತು ನಿರಾಕರಿಸಿ ಜನರ ಬೌದ್ಧಿಕ ಮಟ್ಟ ಹೆಚ್ಚಿಸುವಲ್ಲಿ ಮತ್ತು ಅವರ ಮಾನಸಿಕ ಗುಲಾಮಗಿರಿಯನ್ನು ಹೊಡೆದೊಡಿಸುವಲ್ಲಿ ಶರಣರು ಶ್ರಮಿಸಿದರು. ಕೈಗೆ ಕೊಟ್ಟ ಇಷ್ಟಲಿಂಗವ ಬಿಟ್ಟು ಬೆಟ್ಟದ ಲಿಂಗಕ್ಕೆ ನಡೆಯುವವರನ್ನು ಕಂಡು ವಚನಕಾರರು ನೊಂದರು; ವೆಥೆ ಪಟ್ಟರು; ಕನಿಕರಗೊಂಡರು; ಹೇಳಿ ನೋಡಿದರು ವಿನಂತಿಸಿಕೊಂಡರು, ಎಚ್ಚರಿಕೆ ನೀಡಿದರು; ಕೊನೆಗೆ ಕೈಗೆ ಪಾದರಕ್ಷೆ ತೆಗೆದುಕೊಂಡರು; ದೇವಾಲಯದ ಸುತ್ತ-ಸುತ್ತುವದರಿಂದ ಪುಣ್ಯ ಸಿಗುತ್ತದೆಂಬುದಾಗಲಿ, ಮೋಕ್ಷ ಸಿಗುತ್ತದೆಂಬುದಾಗಲಿ ಅವರು ನಂಬಲಿಲ್ಲ; ಅವರದು ನಿಜ ಅರಿವಿನ ಪಥ. ದೇವ, ದೇವರು, ದೇವಾಲಯ, ಗರ್ಭಗುಡಿ – ಇವುಗಳೆಲ್ಲ ಕೆಲಸವಿಲ್ಲದವರ ಹೋಗಳಿಕೆಗಳೆಂದು ಅವರಿಗೆ ಗೊತ್ತಿತ್ತು. ಅದಕ್ಕಾಗಿಯೇ ಅವರು ದೇಹವನ್ನೇ ದೇಗುಲವೆಂದು ಸಾರಿದರು. ಪ್ರಾಮಾಣಿಕವಾಗಿ ಕಾಯಕ ಮಾಡುವುದಕ್ಕೆ ಕೈಲಾಸವೆಂದು ಕರೆದರು. ಅಲ್ಲಿಯವರೆಗೆ ಉಳ್ಳವರ, ಸವರ್ಣಿಯರ ಸೆರೆಯಲ್ಲಿದ್ದ ದೇವರುಗಳನ್ನು ಬಿಡುಗಡೆ ಮಾಡಿ

ದೇವರನ್ನು ಬಡವರ ಕೈಗೆ ಹಸ್ತಾಂತರಿಸಿದರು. ಕಲ್ಲು-ಮಣ್ಣಿನ ದೇವಾಲಯಗಳನ್ನು ನಿರಾಕರಿಸಿ ಇಷ್ಟಲಿಂಗವೇ ದೇವರೆಂದು ಸಾರಿದ ಶರಣರು ಹೇಳಿದಂತೆಯೇ ನಡೆದರು.

ಒಬ್ಬನೇ ದೇವನೆಂದು ಘೋಷಿಸಿ ಅಂತರಾತ್ಮದ ರೂಪದ ಇಷ್ಟಲಿಂಗವನ್ನು ಜನರಕೈಗೆ ಕೊಟ್ಟು ಇತಿಹಾಸ ಎಂದೂ ಕಂಡರಿಯದಿದ್ದ ಕ್ರಾಂತಿಯನ್ನು ಸಾಧಿಸಿದರು. ಬಸವಾದಿ ಶರಣರು ಜಡಸಂಸ್ಕೃತಿಯ ವಿರುದ್ಧ ಚೈತನ್ಯ ಸಂಸ್ಕೃತಿಯನ್ನು ರೂಪಿಸಿದರು. ಈ ಚೈತನ್ಯ ಸಂಸ್ಕೃತಿಯು ಎಲ್ಲ ಜಾತಿಯ ಜನರಿಗೆ ಮುಟ್ಟುವಂತೆ ನೋಡಿಕೊಂಡರು. ಜಾತಿಯ ಕಟ್ಟುಪಾಡುಗಳಿಲ್ಲದ ಪ್ರಾಮಾಣಿಕ, ಶುದ್ಧ ಸಮಾಜದ ರಚನೆಗೆ ಕಾರಣರಾದರು.

೧೨ನೆಯ ಶತಮಾನಕ್ಕೆ ಮೊದಲು ಜಗತ್ತಿನ ಯಾವುದೇ ಭಾಗದಲ್ಲಿ ದುಡಿಯುವ ವರ್ಗವನ್ನು ಒಂದುಗೂಡಿಸಿ ಚಳುವಳಿ ಮಾಡಿದ ದಾಖಲೆಯಿಲ್ಲ. ಬಸವಣ್ಣನವರು ಎಲ್ಲ ಪ್ರಕಾರದ ಕಾಯಕ ಜೀವಿಗಳನ್ನು ಒಂದುಗೂಡಿಸಿ ಶರಣ ಸಂಕುಲವೆಂಬ ನವಸಮಾಜ ನಿರ್ಮಾಣ ಮಾಡಿದರು. ದುಡಿಯುವ ಜನರನ್ನು ಮೊದಲ ಬಾರಿಗೆ ಒಂದುಗೂಡಿಸಿದ ಕೀರ್ತಿ ಬಸವಣ್ಣನವರಿಗೆ ಸಲ್ಲುತ್ತದೆ. ಬಸವಣ್ಣನವರ ಪ್ರಧಾನಿ ಕಾಯಕ ಹೆಚ್ಚಿನದಲ್ಲ; ಹರಳಯ್ಯನವರ ಸಮಗಾರ ಕಾಯಕ ಕಡಿಮೆಯಿಲ್ಲ ಎಂಬ ಸತ್ಯವನ್ನು ಶರಣರು ಲೋಕಕ್ಕೆ ಸಾರಿದರು. ಬಸವಣ್ಣನವರು ಕಾಯಕ ಜೀವಿಗಳ ಬದುಕಿನಲ್ಲಿ ಅಕ್ಷರಕ್ರಾಂತಿ ಮಾಡಿದರು. ಅವರೆಲ್ಲ ಅಕ್ಷರ ಕಲಿತು ತಮ್ಮ-ತಮ್ಮ ಕಾಯಕದ ಅನುಭವವನ್ನು ಅನುಭಾವದ ಮಟ್ಟಕ್ಕೆರಿಸಿ ಅನನ್ಯವಾದ ವಚನ ಸಾಹಿತ್ಯದ ರಚನೆ ಮಾಡಿದರು. ೧೨ನೆಯ ಶತಮಾನಕ್ಕಿಂತ ಮುಂಚೆ ಜಗತ್ತಿನ ಯಾವ ಮೂಲೆಯಲ್ಲೂ ಇಂತಹ ಚಳುವಳಿ ಆಗಿಲ್ಲ. ಹೀಗಾಗಿ ಇದು ಕಾಯಕ ಜೀವಿಗಳ ಧರ್ಮವಾಗಿದೆ.

ಈ ಶರಣ ಚಳುವಳಿ ವಿಕಾಸಶೀಲ ತತ್ವದ ಮೇಲೆ, ಮಾನವ ಜಾತಿಯ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಆಧರಿಸಿ, ಲಿಂಗಭೇದರಹಿತ ಹೊಸ ಸಮಾಜ ಕಟ್ಟಲು ಶ್ರಮಿಸಿದರು. ಮಂದಿರಗಳಲ್ಲಿ ಬಂಧಿಯಾಗಿದ್ದ ದೇವರನ್ನು ಮನುಷ್ಯನ ಕರಸ್ಥಲಕ್ಕೆ ತಂದು ದೇಹವನ್ನೇ ದೇಗುಲ ಮಾಡಿದ ಹಿರಿಮೆ ಶರಣರದು. ಅದಕ್ಕಾಗಿಯೇ 'ಬಸವಣ್ಣನವರ ಉದರದಲ್ಲಿ ಹುಟ್ಟಿತ್ತು ಲಿಂಗ' ಎಂದು ಚನ್ನಬಸವಣ್ಣನವರು ಹೇಳಿದ್ದಾರೆ.

ಬಸವಣ್ಣನವರು ಕಾಯಕನಿಷ್ಠೆ, ಪ್ರಸಾದಪ್ರಜ್ಞೆ, ದಾಸೋಹಂಭಾವ, 'ಶಿವನಸೊಮ್ಮು' ಎಂಬ ಸಾಮಾಜಿಕ ನಿಧಿ, ಗಣಶಕ್ತಿಯ ಮಹತ್ವವನ್ನು ಎತ್ತಿ ಹಿಡಿಯುವ ಸಮೂಹ ನಾಯಕತ್ವ, ಶರಣ ಸಂಕುಲ, ಒಳಗಿನ ಅರಿವು ಮೂಡಿಸುವ ಇಷ್ಟಲಿಂಗ ಮತ್ತು ಹೊರಗಿನ ಪ್ರಜ್ಞೆ, ಮೂಡಿಸುವ ಜಂಗಮ ಲಿಂಗ, ಇವೆರಡೂ ಬೇರೆ ಅಲ್ಲ ಎಂಬ ಸಂಗಮತತ್ವ, ಈ ಎಲ್ಲವನ್ನು ಒಂದಾಗಿಸುವ ಪ್ರಕ್ರಿಯೆಯಿಂದ ಕೂಡಿದ ಲಿಂಗ ಜಂಗಮ ಮುಂತಾದ ಕಾರಣಗಳಿಂದಾಗಿ ಕನ್ನಡ ನಾಡಿನ ಶರಣರು ೧೨ನೆಯ

ಶತಮಾನದಲ್ಲಿ ವಿಶ್ವದಲ್ಲೆ ವಿಶಿಷ್ಟವಾದ 'ಶರಣ ಸಂಕುಲ' ಎಂಬ ನವ ಮಾನವನ ಸಮಾಜವನ್ನು ನಿರ್ಮಿಸಿ ತೋರಿಸಿದ್ದಾರೆ.

ಇಷ್ಟಲಿಂಗವು ನಮ್ಮೊಳಗಿನ ದೇವರ ಸಂಕೇತವಾಗಿದೆ. ಜಂಗಮಲಿಂಗವು ವಿಶ್ವ ಎಂಬ ದೇವರಾಗಿದೆ. ಇವೆರಡು ಕೂಡಿದ ನಂತರ ಸೃಷ್ಟಿಯಾಗುವುದೇ ಲಿಂಗತತ್ವ. ಈ ಲಿಂಗತತ್ವವೇ ಸಂಗಮತತ್ವ. ಈ ಒಂದುಗೂಡಿ ಬದುಕುವ ಸಮತಾತತ್ವವನ್ನೇ ಸರ್ವಶರಣರ ವಚನಗಳು ಸಾರುತ್ತಿವೆ. ಈ ಹಿನ್ನೆಲೆಯಲ್ಲಿ ಶರಣ ಸಂಕುಲ ಹೆಸರಿನ ಸಮತಾ ಸಮಾಜ ನಿರ್ಮಾಣವಾಯಿತು.

ಬಸವಣ್ಣನವರೇ ದುಡಿಯುವ ವರ್ಗದ ಮೊದಲ ಸಂಘಟಿಕರು. ಏನೂ ಇಲ್ಲದವರು ಈ ಜಗತ್ತನ್ನು ಬದಲಾಯಿಸುವ ಶಕ್ತಿಯನ್ನು ಹೊಂದಿರುತ್ತಾರೆ. ಇದು ಶರಣ ಚಳುವಳಿಯ ಮಹಾಘೋಷವಾಗಿದೆ. ಯಾಕೆಂದರೆ ಬಸವಣ್ಣನವರು ಯಾವ ವಚನಗಳಲ್ಲಿಯೂ ಕೂಡ ತಮ್ಮ ಘನ ವ್ಯಕ್ತಿತ್ವದ ಬಗ್ಗೆ ಮಾತನಾಡಿಲ್ಲ. ಅವರು ಮಾತನಾಡಿದ್ದು ತಮ್ಮ ಮುಂದೆ ಇರುವ ಜೀವಗಳ ಬಗ್ಗೆ ಕಸ ಗುಡಿಸುವ ಸತ್ಯಕ್ಕನ ಬಗ್ಗೆ, ಹುಲ್ಲು ಹೊರುವ ಸೋಮಣ್ಣನ ಬಗ್ಗೆ, ಎಂಥಾ ಮಾತುಗಳನ್ನು ಅವರು ಆಡಿದ್ದಾರೆ. ಯಾವ ರೀತಿಯಾದ ಚಿಂತನೆಯನ್ನು ಅವರು ಮಾಡಿದ್ದಾರೆ. ಬದುಕನ್ನು ಅವರು ಹೇಗೆ ಎದುರಿಸಿದ್ದಾರೆ ಎಂದು ಚಿಂತಿಸುವ ಅಗತ್ಯತೆ ಇದೆ. 'ಲಂಚವಂಚನಕ್ಕೆ ಕೈಯಾನದ ಭಾಷೆ' ಎಂದು ಕಸಗುಡಿಸುವ ದಲಿತ ಮಹಿಳೆ ಸತ್ಯಕ್ಕ ಹೇಳುತ್ತಾಳೆ. ಕಸ ಗುಡಿಸುವ ಹೆಣ್ಣುಮಗಳಿಗೆ ಅಂತ ವ್ಯಕ್ತಿತ್ವ ನಿರ್ಮಾಣ ಆಗಲಿಕ್ಕೆ ಸಾಧ್ಯ ಆಗಬೇಕಾದರೆ ಆ ವಚನ ಚಳುವಳಿ ಎಷ್ಟು ಅದ್ಭುತವಾಗಿತ್ತು. ಹುಲ್ಲು ಹೊರೆ ಹೊರುವ ಸೋಮಣ್ಣ ಹೇಳುತ್ತಾನೆ 'ವ್ಯಾಧಿ ಬಂದರೆ ನರಳು, ಬೆನೆ ಬಂದರೆ ಒರಲು, ಜೀವ ಹೋದಡೆ ಸಾಯಿ. ಇದಕ್ಕಾಗಿ ದೇವರ ಹಂಗೇಕೆ ಭಾಪು ಲದ್ದೆಯಸೋಮಂ'. ಈ ಮಾತುಗಳಿಂದ ತಿಳಿದು ಬರುವುದೇನೆಂದರೆ ಇದು ಆತ್ಮವಿಶ್ವಾಸದ ಚಳುವಳಿಯಾಗಿತ್ತು. ಚಳುವಳಿಯಿಲ್ಲದ ಬದುಕು ನಿರರ್ಥಕವಾದ ಬದುಕು. ಶರಣರ ನೇತೃತ್ವದ ಈ ಚಳುವಳಿ ಶಕ್ತಿಶಾಲಿಯಾಗಿ ಬೆಳೆದು ಸಾಮಾಜಿಕ ಪರಿವರ್ತನೆಯಾಯಿತು, ಆರ್ಥಿಕ ಪರಿವರ್ತನೆಯಾಯಿತು. ಎಷ್ಟಾಯಿತೆಂದರೆ 'ಕಲ್ಯಾಣದಲ್ಲಿ ಕೂಡುವರುಂಟೆ, ಬೇಡುವವರಿಲ್ಲ' ಎಂದು ಬಸವಣ್ಣ ಘೋಷಿಸಿದರು.

ಕೊನೆಯ ಎರಡು ಅಧ್ಯಾಯಗಳು ಪ್ರಮುಖ ಶೈವ ದೇವಾಲಯಗಳು ಹಾಗೂ ನಂಬಿಕೆ ಆಚರಣೆಗಳು ಎಂದಿದ್ದು ಇದು ಸಂಪೂರ್ಣವಾಗಿ ಕ್ಷೇತ್ರಕಾರ್ಯದ ಮೇಲೆ ರಚಿಸಿದ ಅಧ್ಯಾಯವಾಗಿದೆ. ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳಿಗೆ ಸಂಬಂಧಿಸಿದಂತೆ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಕೆಲವು ದೇವಾಲಯಗಳ ವಾಸ್ತುವಿನ್ಯಾಸವನ್ನು ಗಮನಿಸಲಾಗಿದೆ. ಜಿಲ್ಲೆಯಲ್ಲಿ ಬಹುತೇಕವಾಗಿ ಶೈವ ದೇವಾಲಯಗಳೇ ಕಂಡುಬರುತ್ತಿದ್ದು ಬಹುಸಂಖ್ಯೆಯ ದೇವಾಲಯಗಳು ಪೂಜೆ ಪುನಸ್ಕಾರ, ಜೀರ್ಣೋದ್ಧಾರಗಳಿಂದ ಜನ ಸಾಮಾನ್ಯರಿಂದಲೂ ನಿರ್ಲಕ್ಷಕ್ಕೊಳಗಾಗಿವೆ.

ಕೇವಲ ಐತಿಹಾಸಿಕ ಸ್ಮಾರಕವಾಗಿಯೇ ಉಳಿದಿವೆ. ಕೆಲವು ಗ್ರಾಮಗಳಲ್ಲಿ ಪ್ರಾಚೀನ ದೇವಾಲಯಗಳು ಜೀರ್ಣೋದ್ಧಾರಗೊಂಡಿವೆ. ಆರ್ಥಿಕಾಭಿವೃದ್ಧಿ ಹಾಗೂ ಧಾರ್ಮಿಕಾಭಿವೃದ್ಧಿಯ ಉದ್ದೇಶಕ್ಕಾಗಿ ಆ ದೇವಾಲಯಗಳ ಮೂಲ ಹೆಸರುಗಳು ಕೂಡಾ ಬದಲಾಗಿ ಮತ್ತೊಂದು ಹೆಸರಿನಿಂದ ಕರೆಯಲ್ಪಡುತ್ತಿವೆ. ಅಲ್ಲದೇ ಈ ದೇವಾಲಯಗಳು ಪ್ರವಾಸಿ ಕೇಂದ್ರಗಳಾಗಿ ಪ್ರವಾಸಿಗರನ್ನು ಸೆಳೆಯಲೂ ಆರ್ಥಿಕ ಮೂಲಗಳಾಗಿ ಬದಲಾಗಲು ಸಾಧ್ಯವೇ ಎಂಬುದನ್ನು ಕುರಿತಾಗಿ ಮುಂದೆ ಅಧ್ಯಯನಗಳು ನಡೆಯಬೇಕಾದ ಅವಶ್ಯಕತೆಯಿದೆ.

ಶೈವಮತದ ಅಧ್ಯಯನಕ್ಕೆ ಸಂಬಂಧಿಸಿ ಕೈಕೊಂಡ ಈ ಅಧ್ಯಯನವು ಶಾಸನಗಳನ್ನೇ ಅವಲಂಬಿಸಿ ಇದ್ದ ಅಧ್ಯಯನ ಆದರೂ ಪೂಜಾವಿಧಿಗೆ ಶಾಸನಗಳು ಉಲ್ಲೇಖಿಸುವ ಅಂಶಕ್ಕೂ ಈಗ ನಡೆಯುತ್ತಿರುವ ಪೂಜಾ ಕ್ರಮಕ್ಕೂ ಇರುವ ವ್ಯತ್ಯಾಸವನ್ನು ಕಂಡುಕೊಳ್ಳಲು ಈ ಕ್ಷೇತ್ರಕಾರ್ಯವನ್ನು ಕೈಗೊಳ್ಳಲಾಯಿತು. ಇಂದಿಗೂ ಪೂಜಾವಿಧಿ ವಿಧಾನಗಳು ಉಳಿದು ಬಂದಿರುವ ಕೆಲ ಆಯ್ದ ದೇವಾಲಯಗಳಲ್ಲಿ ಅಧ್ಯಯನ ಕೈಗೊಂಡಾಗ ತಿಳಿದು ಬರುವುದೇನೆಂದರೆ ಶಾಸನಗಳಲ್ಲಿ ಕಾಣುವ ಪೂಜಾವಿಧಿ ಇಂದು ಕಾಣದೇ ಅದು ಸಾಕಷ್ಟು ಸರಳೀಕರಣಗೊಂಡಿರುವುದನ್ನು ಗಮನಿಸಲಾಗಿದೆ. ಸಾಂಸ್ಕೃತಿಕ ಪರಂಪರೆಯ ಹಿನ್ನೆಲೆಯಲ್ಲಿ ಬೆಳೆದಿರುವ ವಿಜಯಪುರ ಜಿಲ್ಲೆಯ ಪರಿಸರವು ಸಂಪ್ರದಾಯ, ಆಚರಣೆ, ಜಾತ್ರೆ – ಉತ್ಸವಗಳು ಪ್ರಾದೇಶಿಕತೆಗೆ ಅನುಗುಣವಾಗಿ ನಡೆಯುವಂತಹುಗಳಾಗಿವೆ. ಅಗತ್ಯಗಳಿಗೆ ತಕ್ಕಂತೆ ಬದಲಾಗುತ್ತಿರುವ ಸಂಪ್ರದಾಯಗಳು ಇಂದು ಪಟ್ಟಣಗಳಲ್ಲಿ ತಮ್ಮ ಅಸ್ತಿತ್ವವನ್ನು ಸ್ಥಾಪಿಸಿವೆ. ಆದರೆ ಹಳ್ಳಿಗಳೂ ಇದರಿಂದ ಹೊರತಾಗಿಲ್ಲ ಆದ ಕಾರಣ ನಶಿಸಿ ಹೋಗುತ್ತಿರುವ ಸಂಪ್ರದಾಯಗಳ ಒಳಸತ್ವವನ್ನು ವೈಜ್ಞಾನಿಕ ದೃಷ್ಟಿಯಿಂದ ಅಧ್ಯಯನ ಮಾಡಿ ಅದರ ಮೌಲ್ಯಗಳನ್ನು ಸಮಾಜದ ಮುಂದಿನ ಪೀಳಿಗೆಗೆ ನೀಡುವ ಅವಶ್ಯಕತೆ ಇದೆ.

ಒಟ್ಟಾರೆಯಾಗಿ ನೋಡುವುದಾದರೆ ವಿಜಯಪುರ ಜಿಲ್ಲೆಯ ಪರಿಸರದಲ್ಲಿ ಶೈವ ಧರ್ಮವು ಪ್ರಾಮುಖ್ಯತೆ ಪಡೆದ ಧರ್ಮವಾಗಿತ್ತೆಂದು ಇಲ್ಲಿನ ಶಾಸನಗಳು, ಪ್ರಾಚೀನ ದೇವಾಲಯಗಳು ಹಾಗೂ ಸ್ಮಾರಕಗಳಿಂದ ತಿಳಿದು ಬರುತ್ತದೆ. ಇದು ಹೆಚ್ಚಿನ ಪ್ರಾಮುಖ್ಯತೆ ಗಳಿಸಲು ಕಾರಣ ಈ ಭಾಗದ ಸಾಮಂತರು, ಗಾವುಂಡರು, ಭೂಮಾಲೀಕರು, ವ್ಯಾಪಾರಿಗಳು ಹಾಗೂ ಅಗ್ರಹಾರಗಳು ನೀಡಿದ ದೊಡ್ಡ ಮಟ್ಟದ ದಾನದತ್ತಿಗಳು. ಜಿಲ್ಲೆಯ ಸಿಂದಗಿಯ ಸಂಗಮೇಶ್ವರ, ಬಸವನ ಬಾಗೇವಾಡಿಯ ಬಸವೇಶ್ವರ, ಸಾಲೊಟಗಿಯ ಶಿವಯೋಗೇಶ್ವರ, ಮಿಣಜಗಿಯ ಸಂಗಮೇಶ್ವರ, ಕಡ್ಲೇವಾಡದ ಸೋಮೇಶ್ವರ, ನಿಂಬಾಳದ ಕೋಟಿಶಂಕರಲಿಂಗ ಅಲ್ಲದೆ ಮುತ್ತಗಿ, ಹೆಬ್ಬಾಳ, ಕಕ್ಕಳಮೇಲಿ, ಕಲಕೇರಿ, ಮುದ್ದೇಬಿಹಾಳ, ಹೊರ್ತಿ, ಇಂಗಳೇಶ್ವರ, ಕೊಂಡಗೂಳಿ, ಆಲಮೇಲಗಳಂತಹ ಅನೇಕ

ಗ್ರಾಮಗಳಲ್ಲಿನ ಶಿವ ಅಥವಾ ಶೈವ ದರ್ಮದ ಮೇಲಿನ ಭಕ್ತಿ, ಶೈವ ಧರ್ಮವು ಇತರ ಧರ್ಮಗಳಿಗಿಂತ ಪ್ರಾಮುಖ್ಯತೆ ಹೊಂದಲು ಕಾರಣವಾಗಿದೆ. ದೇವಾಲಯಗಳ ನಿರ್ಮಾಣ ಹಾಗೂ ಸಂರಕ್ಷಣೆಯ ಸಲುವಾಗಿ ಇಲ್ಲಿನ ಮಾಂಡಲಿಕರು, ದಂಡನಾಯಕರು, ಆಡಳಿತ ವರ್ಗದವರು, ಜನಸಾಮಾನ್ಯರು ತಮ್ಮ ಹೆಸರಿನಲ್ಲಿ ದೇವಾಲಯಗಳನ್ನು ನಿರ್ಮಾಣ ಮಾಡುವುದು ಮತ್ತು ನಿರ್ಮಾಣಕ್ಕೆ ಪ್ರೋತ್ಸಾಹ ನೀಡಿರುವುದನ್ನು ಸಾಮಾನ್ಯವಾಗಿ ಕಾಣುತ್ತೇವೆ. ಅದು ಇಂದಿಗೂ ಮುಂದುವರೆದುಕೊಂಡು ಬಂದಿರುವುದನ್ನು ಕಾಣುತ್ತೇವೆ. ಹಾಗಾಗಿ ಜಿಲ್ಲೆಯಲ್ಲಿ ಶೈವ ಮತ ಹೆಚ್ಚಿನ ಪ್ರಾಶಸ್ತ್ಯವನ್ನು ಪಡೆದುಕೊಂಡಿದೆ. ಮಹಾಪ್ರಬಂಧದ ಕೊನೆಗೆ ಈ ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಂಡ ಸಂಶೋಧನಾತ್ಮಕ ವರದಿಗಳು, ಪುಸ್ತಕಗಳು, ಲೇಖನಗಳು ಮತ್ತು ಅಪ್ರಕಟಿತ ಮಹಾಪ್ರಬಂಧಗಳು ಮುಂತಾದ ವಿವರಗಳನ್ನು ಗ್ರಂಥಋಣದಲ್ಲಿ ನೀಡಲಾಗಿದೆ. ಅಧ್ಯಯನಕ್ಕೆ ಸಂಬಂಧಿಸಿದ ನಕ್ಷೆಗಳು ಮತ್ತು ಛಾಯಾಚಿತ್ರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಫಲಿತಗಳು :

* ವಿಜಯಪುರ ಜಿಲ್ಲೆಗೆ ಸಂಬಂಧಿಸಿದ ೪೯೯ ಶಾಸನಗಳನ್ನು ಅವಲೋಕಿಸಿ ಅವುಗಳಲ್ಲಿ ಶೈವಮತದ ಉಲ್ಲೇಖವಿರುವ ೧೫೪ ಶಾಸನಗಳನ್ನು ಸಂಗ್ರಹಿಸಿ ಅಧ್ಯಯನ ಕೈಗೊಳ್ಳಲಾಗಿದೆ.
* ರಾಷ್ಟ್ರಕೂಟರಿಂದ ಯಾದವರ ಕಾಲದವರೆಗೂ ಶೈವ ಶಾಸನ ಗುರುತಿಸಲಾಗಿ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಈ ಜಿಲ್ಲೆಯಲ್ಲಿ ಶೈವ ಮತ ಅತ್ಯಂತ ಪ್ರಭಲವಾಗಿ ಬೆಳೆದು ಬಂದಿತ್ತೆಂದು ಶಾಸನಗಳನ್ವಯ ಗುರುತಿಸಲಾಗಿದೆ.
* ಕಲ್ಯಾಣ ಚಾಲುಕ್ಯರ ೬೬ ಶಾಸನಗಳು ಶೈವಮತದ ಕುರಿತಾಗಿ ಮಾಹಿತಿ ಒದಗಿಸುತ್ತದೆ.
* ಕಾಳಾಮುಖರಿಗೆ ಸಂಬಂಧಿಸಿದ ೫ ಶಾಸನಗಳು ದೊರೆತಿರುವುದರಿಂದ ಕಾಳಾಮುಖರ ಪ್ರಾಬಲ್ಯದ ಕುರುಹು ಈ ಪ್ರದೇಶದಲ್ಲಿತ್ತೆಂದು ತಿಳಿದುಬರುತ್ತದೆ.
* ಭುಜಂಗಾವಳಿ ಪರಂಪರೆಯ ಮೂಲ ಸ್ಥಾನ ಕಂಚಿಯ ಭೊಜಂಗೇಶ್ವರ ದೇವಸ್ಥಾನವಾಗಿದ್ದು ಆ ಪರಂಪರೆಯು ಅಲ್ಲಿಂದ ಧರ್ಮಪುರಿಗೆ ಬಂದಿತು. ಈ ಧರ್ಮಪುರಿಯು ಶ್ರೀಶೈಲದ ಹೆಬ್ಬಾಗಿಲಾಗಿತ್ತು. ಆ ಮೂಲಕ ಪ್ರವೇಶ ಪಡೆದ ಇವರ ಉಲ್ಲೇಖ ಕಂಡುಬರುವುದು ವಿಜಯಪುರ ಜಿಲ್ಲೆಯ ಶಾಸನಗಳಲ್ಲಿ ಎಂಬುದನ್ನು ಅಧ್ಯಯನದಲ್ಲಿ ಸ್ಪಷ್ಟಪಡಿಸಲಾಗಿದೆ.
* ಕರ್ನಾಟಕದಲ್ಲಿ ಪಾಶುಪತ ಶಾಖೆಯ ಉಲ್ಲೇಖವು ಕಿಗ್ಗ ಶಾಸನದಲ್ಲಿ ಕಂಡುಬರುತ್ತದೆ. ಅಲ್ಲಿಂದ ಈ ಪರಂಪರೆ ವಿಜಯಪುರ ಜಿಲ್ಲೆಯ ಇಂದಿನ ಆಲಮೇಲ ಗ್ರಾಮಕ್ಕೆ ಬಂದು ನೆಲೆಸಿ ಉತ್ತರೇಶ್ವರ ದೇವರ ಆರಾಧಕರಾಗುತ್ತಾರೆ. ಇದೇ ಅವಧಿಯಲ್ಲಿ ಈ ಪ್ರದೇಶಕ್ಕೆ ಹೊಂದಿಕೊಂಡ ಜೇವರಗಿ ತಾಲೂಕಿನ ಯಡ್ರಾಮಿ ಮತ್ತು ಸುರಪುರ ತಾಲೂಕಿನ ಮುದನೂರುಗಳಲ್ಲಿ ಈ ಪರಂಪರೆ

ವಿಸ್ತರಿಸಿಕೊಳ್ಳುತ್ತದೆ. ಅಲ್ಲಿ ಪಾಶುಪತವು ಅಭಿನವ ಪಾಶುಪತವಾಗಿ ಬದಲಾಗುತ್ತದೆ. ಹೀಗಾಗಿ ಮಲೆಯಾಳ ಪಂಡಿತರ ಮೂಲ ನೆಲೆ ಈಗಿನ ಆಲಮೇಲದಿಂದ ಪ್ರಾರಂಭವಾಗುತ್ತದೆ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಗಿದೆ.

* ಪಾಶುಪತರ ಕುರಿತು ೬ ಶಾಸನಗಳಲ್ಲಿ ಉಲ್ಲೇಖವಿದ್ದು ಅದರಲ್ಲಿಯ ೨ ಶಾಸನಗಳಲ್ಲಿ ಬುಜಂಗಾವಳಿಗೆ ಸಂಬಂಧಿಸಿದ್ದು ಇದನ್ನು ಮೊದಲ ಬಾರಿಗೆ ಗುರುತಿಸಲಾಗಿದೆ ಹಾಗೂ ವಿಜಯಪುರ ಜಿಲ್ಲೆಯಲ್ಲಿ ಬುಜಂಗಾವಳಿ ಪ್ರಬಲವಾಗಿತ್ತು ಎಂದು ತಿಳಿದುಬಂದಿದೆ.
* ರಾಜ, ರಾಣಿ, ಮಹಾಮಂಡಳೇಶ್ವರ, ಮಂಡಳೇಶ್ವರ, ಸಾಮಂತರ, ದಂಡನಾಯಕರು, ವ್ಯಾಪಾರಿ ವರ್ಗದವರು ದೇವಾಲಯ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದರು ಎಂಬುದನ್ನು ಗುರುತಿಸಲಾಗಿದೆ.
* ಮಹಿಳೆಯರು, ಮುನಿಗಳು, ಅಧಿಕಾರಿ ವರ್ಗದ ಕುಟುಂಬದವರೂ ಕೂಡಾ ದೇವಾಲಯ ನಿರ್ಮಾಣ ಕಾರ್ಯ ಮಾಡಿದ ಉಲ್ಲೇಖವಿದೆ ಎಂಬುದನ್ನು ಮೊದಲ ಬಾರಿಗೆ ಕಂಡುಕೊಳ್ಳಲಾಗಿದೆ.
* ದಾನ ಶಾಸನಗಳು ಎಷ್ಟು? ಯಾರಿಗೆ? ಏನು ದಾನ ನೀಡಿದರು ಎಂಬುದನ್ನು ಶಾಸನಗಳ ಹಿನ್ನಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.
* ವ್ಯಾಪಾರಿ ವರ್ಗದವರು ಶೈವಮತದ ಬೆಳವಣಿಗೆಗೆ ಪ್ರಮುಖ ಪಾತ್ರವಹಿಸಿದ ಕುರಿತು ವಿಶ್ಲೇಷಣೆ ಮಾಡಲಾಗಿದೆ.
* ಕೆಲವು ವಿಶೇಷ ಸಂದರ್ಭದಲ್ಲಿ ಸಾಮಾನ್ಯ ವರ್ಗದವರೂ ಕೂಡಾ ದೇವಾಲಯ ನಿರ್ಮಾಣ ಹಾಗೂ ದಾನ ನೀಡಿದ ವಿವರ ಲಭ್ಯವಾಗಿದೆ.
* ಕೆಲವು ಕಡೆ ದೇವಾಲಯಗಳ ಮೂಲ ಹೆಸರು ಬದಲಾಗಿ ಬೇರೆ ಹೆಸರಿನಿಂದ ಕರೆದ ಮಾಹಿತಿ ಕ್ಷೇತ್ರ ಕಾರ್ಯದಿಂದ ತಿಳಿದು ಬಂದಿದೆ.
* ಬಸವ ಪೂರ್ವ ಕಾಲದಲ್ಲಿ ಶೈವಮತ ಹೇಗಿತ್ತು ಬಸವ ಕಾಲದಲ್ಲಿ ಅದರ ಪ್ರಭಾವ ಮತ್ತು ಬಸವೋತ್ತರ ಕಾಲದಲ್ಲಿ ಶೈವಮತ ಹೇಗಿತ್ತು ಎಂಬುದರ ಕುರಿತು ಚರ್ಚಿಸಲಾಗಿದೆ.
* ೧೨ನೆಯ ಶತಮಾನದಲ್ಲಿ ರಾಜಕೀಯ ಸ್ಥಿತ್ಯಂತರ ಶೈವಮತದ ಮೇಲೆ ಹೇಗೆ ಪ್ರಭಾವ ಬೀರಿತು ಎಂಬುದರ ಕುರಿತು ಚರ್ಚಿಸಲಾಗಿದೆ.
* 'ಶರಣ ಸಂಕುಲ' ಎಂಬ ವಿಶಿಷ್ಟ ಮಾನವ ಸಮಾಜ ನಿರ್ಮಾಣವಾಗಿದ್ದು ೧೨ನೆಯ ಶತಮಾನದಲ್ಲಿ ಎಂಬುದನ್ನು ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

* ಪ್ರಾಚೀನ ಕಾಲದಿಂದ ಶೈವಮತಕ್ಕೆ ಸಿದ್ಧಾಂತವಿರಲಿಲ್ಲ. ೧೨ನೆಯ ಶತಮಾನದ ಶರಣರು ಅದಕ್ಕೊಂದು ಸಿದ್ಧಾಂತ ಕಲ್ಪಿಸಿ ಕೊಟ್ಟರು.

* ಇಸ್ಲಾಂ ಧರ್ಮದ ಪ್ರಭಾವದಲ್ಲಿ ರಾಜಾಶ್ರಯ ತಪ್ಪಿ ಶೈವಮತ ಕುಟುಂಬಕ್ಕೆ ಸೀಮಿತವಾಗಿ ರಾಜಾಶ್ರಯವಿಲ್ಲದ 'ಕತ್ತಲ ಯುಗ' ಎಂದೇ ಈ ಕಾಲವನ್ನು ಕರೆಯಬಹುದು.

* ಮುಸ್ಲಿಂ ಆಡಳಿತಕ್ಕೆ ಪರ್ಯಾಯವಾಗಿ ವಿಜಯನಗರ ಅರಸರು ಹಾಗೂ ಅವರ ಪಾಳೆಗಾರರು ಶೈವಮತಕ್ಕೆ ಆಶ್ರಯ ನೀಡಿದರು.

* ಎರಡನೇ ಪ್ರೌಢದೇವರಾಯನ ಕಾಲದಲ್ಲಿ ವಚನ ಸಾಹಿತ್ಯದ ಸಂಗ್ರಹ, ನೂರೊಂದು ವಿರಕ್ತರ ಉಲ್ಲೇಖ, ವೀರಶೈವ ಮತದ ಪ್ರಬಾವನ್ನು ನಾವು ಕಾಣುತ್ತೇವೆ.

* ವಿಜಯನಗರೋತ್ತರ ಕಾಲದಲ್ಲಿ ಮಧ್ಯ ಮತ್ತು ದಕ್ಷಿಣ ಕರ್ನಾಟಕದಲ್ಲಿ ಬಂದ ಸಣ್ಣಪುಟ್ಟ ರಾಜಮನೆತನಗಳು ವೀರಶೈವ ಮತಕ್ಕೆ ಪ್ರೋತ್ಸಾಹ ಹಾಗೂ ಆಶ್ರಯ ನೀಡುವುದರ ಮೂಲಕ ಮಠ ಮಾನ್ಯಗಳು ನಿರ್ಮಾಣವಾದವು.

* ವಿಜಯನಗರೋತ್ತರ ಕಾಲದಲ್ಲಿ ನಿರ್ಮಾಣವಾದ ಮಠ ಮಾನ್ಯಗಳ ಪರಂಪರೆ ಬ್ರಿಟಿಷರ ಕಾಲದಲ್ಲಿಯೂ ಮುಂದುವರೆದುಕೊಂಡು ಬಂದವು. ಈಗಲೂ ಕೂಡಾ ವಾರ್ಷಿಕ ಆಯವ್ಯಯದಲ್ಲಿ ಮಠ ಮಾನ್ಯ ದೇವಾಲಯಗಳಿಗೆ ಹಣಕಾಸಿನ ಸಹಾಯ ನೀಡುವುದರ ಮೂಲಕ ಆ ಕಾರ್ಯಕ್ಕೆ ಪ್ರೋತ್ಸಾಹನೀಡುವುದು ಗಮನಿಸಬಹುದಾಗಿದೆ.

ಗ್ರಂಥಋಣ

ಕನ್ನಡ ಗ್ರಂಥಗಳು

೧. ಅಂಜನಪ್ಪ ಯಳನಾಡು, ೨೦೦೮, **'ಧರ್ಮ ಮತ್ತು ಮುಕ್ತ ವಿಚಾರ'**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಅಣ್ಣಿಗೇರಿ ಎ.ಎಂ., ೧೯೮೦, **'ವಿಜಾಪುರದ ಶಿಲ್ಪಕಲಾ ವೈಭವ'**, ಭವಾನಿ ಪ್ರಕಾಶನ, ಧಾರವಾಡ.

೩. ಈರಣ್ಣ ಕೆ.ಪಿ., ೨೦೧೨, **'ಕಾಳಾಮುಖ ಕುರಿತಾಗಿರುವ ಅಧ್ಯಯನಗಳು'**, ಮನು ಸಾಹಿತ್ಯ ಪ್ರಕಾಶನ, ಧಾರವಾಡ.

೪. ಕಡಕೋಳ ಎಚ್.ಎಂ. (ಸಂ.), ೨೦೧೦, **'ಬಿಜಾಪುರ ಜಿಲ್ಲಾ ಸಾಂಸ್ಕೃತಿಕ ಪರಂಪರೆ'**, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ವಿಜಾಪುರ.

೫. ಕಪಟರಾಳ ಕೃಷ್ಣರಾಯ, ೧೯೫೫, **'ಕರ್ನಾಟಕ ಲಾಕುಳ ಶೈವರ ಇತಿಹಾಸ'**, ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ.

೬. ಕಲಬುರ್ಗಿ ಎಂ.ಎಂ., ೧೯೮೦, **'ಸಮಾಧಿ ಬಲಿದಾನ ವೀರ ಮರಣ ಸ್ಮಾರಕಗಳು'**, ಐ.ಬಿ.ಹೆಚ್ ಪ್ರಕಾಶನ, ಬೆಂಗಳೂರು.

೭. ಕಲಬುರ್ಗಿ ಎಂ.ಎಂ., ೧೯೯೯, **'ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮. ಕಲಬುರ್ಗಿ ಎಂ.ಎಂ., ೨೦೦೬, **'ಸಂಸ್ಕೃತಿ ವಿಕೃತಿ'**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೯. ಕುಲಕರ್ಣಿ ಆನಂದ, ೨೦೦೨, **'ತಾಳಿಕೋಟೆ ಯುದ್ಧ ಒಂದು ಅಧ್ಯಯನ'**, (ಅಪ್ರಕಟಿತ ಪಿಎಚ್.ಡಿ ಪ್ರಬಂಧ) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೦. ಕುಲಕರ್ಣಿ ಕೃಷ್ಣಕೋಲ್ಹಾರ., ೨೦೦೨, **'ಬಿಜಾಪುರ ಆದಿಲ್‌ಷಾಹಿ'**, ಸಿಕ್ಯಾಬ ಆದಿಲ್‌ಷಾಹಿ ಅಧ್ಯಯನ ಸಂಸ್ಥೆ, ವಿಜಾಪುರ.

೧೧. ಕೊಪ್ಪಾ ಎಸ್.ಕೆ., ೧೯೯೦, **'ತರ್ದವಾಡಿ ನಾಡು ಒಂದು ಅಧ್ಯಯನ'**, ಪ್ರತಿಭಾ ಪ್ರಕಾಶನ, ಇಂಡಿ.

೧೨. ಗುರವ ಆರ್., ೧೯೭೯, **'ತರ್ದವಾಡಿ ನಾಡು'**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೩. ಚಿಂಚೋಳಿ ಸುಭಾಸ, ೧೯೯೯, **'ಪ್ರಾಕ್ತನ ಶಾಸ್ತ್ರದ ಹಿನ್ನೆಲೆಯಲ್ಲಿ ಬಿಜಾಪುರ ಜಿಲ್ಲೆಯಲ್ಲಿರುವ ಕಲ್ಯಾಣ ಚಾಲುಕ್ಯರ ಕಾಲದ ವಾಸ್ತು ಮತ್ತು ಶಿಲ್ಪಕಲೆಯ ಅಧ್ಯಯನ'**, ಅಪ್ರಕಟಿತ ಪಿಹೆಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೪. ಚಿದಾನಂದಮೂರ್ತಿ ಎಮ್., ೧೯೬೬, **'ಶಾಸನಗಳ ಸಂಸ್ಕೃತಿಕ ಅಧ್ಯಯನ'**, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೧೫. ಜ್ಞಾನಾನಂದ ಜಿ., ೨೦೦೧, **'ಶಿಲ್ಪಾದರ್ಶ ಸಂ.೧'**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೬. ತರಿಕೆರೆ ರಹಮತ್ (ಸಂ.), ೨೦೦೮, **'ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ – ಧರ್ಮ'**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೭. ತರಿಕೆರೆ ರಹಮತ್, ೨೦೧೦, **'ಕರ್ನಾಟಕದ ನಾಥಪಂಥ'**, ಅಭಿನವ ಪ್ರಕಾಶನ, ಬೆಂಗಳೂರು.

೧೮. ತಿಪ್ಪೇರುದ್ರಸ್ವಾಮಿ ಎಚ್., ೧೯೬೮, **'ಕರ್ನಾಟಕ ಸಂಸ್ಕೃತಿಕ ಸಮೀಕ್ಷೆ'**, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು.

೧೯. ತಿಪ್ಪೇರುದ್ರಸ್ವಾಮಿ ಎಚ್., **'ಶರಣರ ಅನುಭಾವ ಸಾಹಿತ್ಯ'**, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಬೆಂಗಳೂರು

೨೦. ದೊಡ್ಡಮನಿ ಗಂಗಾಧರ, ೨೦೦೨, **'ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಪ್ರಮುಖ ರಾಜಧಾನಿ ಪಟ್ಟಣಗಳು ಒಂದು ಅಧ್ಯಯನ'**, (ಅಪ್ರಕಟಿತ ಪಿಎಚ್.ಡಿ ಪ್ರಬಂಧ) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨೧. ದೊಡ್ಡಮನಿ ಎಸ್.ಎಮ್., ೨೦೧೧, **'ಮೂರುಜಾವಿ ದೇವರು ಪರಂಪರೆ'**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೨. ದೇಜಗೌ, **'ವಿಶ್ವ ಸಂಸ್ಕೃತಿಗೆ ವೀರಶೈವ ಸಂಸ್ಕೃತಿಯ ಕಾಣಿಕೆ'**, ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ, ಮೈಸೂರು.

೨೩. ನರಸಿಂಹಮೂರ್ತಿ ಎ.ವಿ., ೧೯೭೧, **'ಕರ್ನಾಟಕದ ಸೇವುಣರ ಇತಿಹಾಸ'**, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೨೪. ನರಸಿಂಹಮೂರ್ತಿ, ಎ.ವಿ., (ಅನು.), **'ಭಾರತೀಯ ಜನತೆಯ ಇತಿಹಾಸ ಮತ್ತು ಸಂಸ್ಕೃತಿ ಸಂ.೩, ಸಂ.೧೪'**, ಭಾರತೀಯ ವಿದ್ಯಾಭವನ, ಬೆಂಗಳೂರು.

೨೫. ನರೋಡೆ ಅಶೋಕ ಮತ್ತು ವಿಜಯಕುಮಾರ (ಸಂ.), **'ನಿರುಪಾಧಿ'**, ಅಭಿನಂದನ ಗ್ರಂಥ ಮರೆಗುದ್ದಿ ಪೂಜ್ಯ ಶ್ರೀ ನಿರುಪಾಧೀಶ ಮಹಾಸ್ವಾಮಿಗಳ ಅಭಿನಂದನಾ ಸಮಿತಿ, ಮುಧೋಳ.

೨೬. ನವರತ್ನ ಎನ್.ಆರ್., ೧೯೭೬, **'ಜಾಗತಿಕ ಧರ್ಮಗಳು'**, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨೭. ನಾರಾಯಣ ಪಿ.ವಿ., **'ವಚನ ಸಾಹಿತ್ಯ, ಒಂದು ಸಾಂಸ್ಕೃತಿಕ ಅಧ್ಯಯನ'**, ತೋಂಟದಾರ್ಯ ಸಂಸ್ಥಾನಮಠ, ಗದಗ

೨೮. ನಾಯಕ ಹಾ.ಮಾ., (ಪ್ರ.ಸಂ.), ೨೦೦೫, **'ಕನ್ನಡ ವಿಷಯ ವಿಶ್ವಕೋಶ ಕರ್ನಾಟಕ ಸಂ.೧'**, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೨೯. ನಂದಿಮಠ ಎಸ್.ಸಿ., ೧೯೮೪, **'ಕರ್ನಾಟಕದ ಧರ್ಮಗಳು ಭಾಗ-೨'**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೩೦. ನಾಗಯ್ಯ ಜೆ.ಎಮ್., ೧೯೮೨, **'ಆರನೆಯ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ'**, ವೀರಶೈವ ಅಕಾದೆಮಿ, ಬೆಳಗಾವಿ.

೩೧. ನೀಲಕಂಠಸ್ವಾಮಿ, ೨೦೦೭, **'ಬಿಜಾಪುರ ಜಿಲ್ಲೆಯ ಶಾಸನಗಳ ಸಾಂಸ್ಕೃತಿಕ ಅಧ್ಯಯನ'**, ಅಪ್ರಕಟಿತ ಮಹಾಪ್ರಬಂಧ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೩೨. ಫಿಲಿಯೋಜ ವಸುಂಧರ, ೨೦೦೩, **'ಕರ್ನಾಟಕದಲ್ಲಿ ಲಾಕುಳಶೈವ ಜಕ್ಕಣಾಚಾರ್ಯರು'**, ಕನ್ನಡ ಸಂಶೋಧನಾ ಸಂಸ್ಥೆ, ಧಾರವಾಡ.

೩೩. ಪಂಚಮುಖಿ ಆರ್.ಎಸ್., ೧೯೮೦, **'ಕರ್ನಾಟಕ ಇತಿಹಾಸ ಸಂಪುಟ-೧'**, ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳ, ಧಾರವಾಡ.

೩೪. ಪ್ರಭಾಕರ ಎಂ.ಎನ್., ೨೦೧೧, **'ದೇವಾಲಯ ವಾಸ್ತು'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೫. ಬಡಿಗೇರ ವಿ.ಎಸ್., ೧೯೯೪, **'ಬಸವನ ಬಾಗೇವಾಡಿ ತಾಲೂಕಿನ ಪುರಾತತ್ವ ಅವಶೇಷಗಳು ಒಂದು ವರದಿ'**, ಇತಿಹಾಸ ದರ್ಶನ ಸಂಪುಟ-೯, ಬೆಂಗಳೂರು.

೩೬. ಬಡಿಗೇರ ವಾಸುದೇವ, ೨೦೦೬, **'ಕರ್ನಾಟಕ ದೇವಾಲಯ ಕೋಶ ವಿಜಾಪುರ ಜಿಲ್ಲೆ'**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೭. ಮಂಜುನಾಥ್ ಸಿ.ಯು., ೨೦೧೨, **'ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ'**, ಚಿತ್ಕಲಾ ಪ್ರಕಾಶನ, ಕುಪ್ಪಂ.

೩೮. ಮಂಜುನಾಥ ಎಸ್. ಪಾಟೀಲ, ೨೦೧೭, **'ವಿಜಾಪುರ ಜಿಲ್ಲೆಯ ರಕ್ಷಣಾ ವಾಸ್ತುಶಿಲ್ಪ'**, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೯. ಮಂಜುನಾಥ ಎಸ್. ಪಾಟೀಲ ಮತ್ತು ಇತರರು (ಸಂ.), ೨೦೧೯, **'ಕಮ್ಮಿತ್ತುನಾಡು'**, ಚೇತನ್ ಬುಕ್ಸ್, ಬೆಂಗಳೂರು.

೪೦. ಮಂಜುಳಾ ಆಚಾರಿ, ೨೦೧೪, **'ಕಾಳಾಮುಖ ಪರಂಪರೆ ಮತ್ತು ಮೂರುಜಾವಿ ಪೀಠ ಸಾಂಸ್ಕೃತಿಕ ಅಧ್ಯಯನ'**, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೧. ಮಹದೇವಪ್ಪ ಎನ್.ಜಿ., ೧೯೯೫, **'ಧಾರ್ಮಿಕ ನಂಬಿಕೆಗಳು ಮತ್ತು ದಾರ್ಶನಿಕ ವಿಶ್ಲೇಷಣೆ'**, ವೀರಶೈವ ಅಧ್ಯಯನ ಅಕಾಡೆಮಿ ಶ್ರೀ ನಾಗನೂರು ರುದ್ರಾಕ್ಷಿ ಮಠ, ಬೆಳಗಾವಿ.

೪೨. ಮುನಿಸ್ವಾಮಿ ಆರ್. (ಮು.ಸಂ.), ೧೯೯೯, **'ವಿಜಾಪುರ ಜಿಲ್ಲಾ ಗ್ಯಾಸೆಟಿಯರ್'**, ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು

೪೩. ರಂಜಾನ ದರ್ಗಾ, **'ಶರಣರ ಸಮಗ್ರ ಕ್ರಾಂತಿ'**, ಲೋಹಿಯಾ ಪ್ರಕಾಶನ, ಬಳ್ಳಾರಿ.

೪೪. ಲೀಲಾ ಶಾಂತಕುಮಾರಿ, ೧೯೭೨, **'ಕರ್ನಾಟಕದ ಅಗ್ರಹಾರಗಳು, ಅಗ್ರಹಾರ, ಪಾವಿಟ್ಟಿಗೆ'**, ಕರ್ನಾಟಕ ಭಾರತಿ ಸಂಪುಟ-೪, ಧಾರವಾಡ.

೪೫. ಲಕ್ಷ್ಮಣ ತೆಲಗಾವಿ, ೨೦೦೪, **'ಮೌರ್ಯ ಮತ್ತು ಶಾತವಾಹನ ಯುಗ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೬. ವಸಂತಲಕ್ಷ್ಮೀ ಕೆ., ೨೦೦೭-೦೮, **'ಕರ್ನಾಟಕದ ಶೈವ ಶಿಲ್ಪಗಳು'**, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ.

೪೭. ವಾಸುದೇವ ಬಡಿಗೇರ, ೨೦೧೨, **'ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೮. ಶೇಷಶಾಸ್ತ್ರಿ ಆರ್., ೧೯೮೪, **'ಕರ್ನಾಟಕದ ವೀರಗಲ್ಲುಗಳು'**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೪೯. ಷೇಕ್ ಅಲಿ. ಬಿ., ೧೯೯೯, **'ಕರ್ನಾಟಕ ಚರಿತ್ರೆ ಸಂ.೦೧'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೦. ಶಿವತಾರಕ ಕೆ.ಬಿ., ೨೦೦೧, **'ಕರ್ನಾಟಕ ಪುರಾತತ್ವ ನೆಲೆಗಳು'**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೧. ಶೇಕದಾರ ವಿಜಯಕುಮಾರ, ೨೦೦೬, **'ವಿಜಾಪುರ ಜಿಲ್ಲೆಯ ದೆಸಗತ್ತಿಗಳು ಒಂದು ಅಧ್ಯಯನ'**, (ಅಪ್ರಕಟಿತ ಪಿಎಚ್.ಡಿ ಪ್ರಬಂಧ) ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫೨. ಸುಂದರ ಅ., ೧೯೯೫, **'ಕರ್ನಾಟಕ ಪ್ರಾಗಿತಿಹಾಸ ಕಲೆ'**, ಕರ್ನಾಟಕ ಲಲಿತ ಕಲಾ ಆಕೆಡೆಮಿ, ಬೆಂಗಳೂರು.

೫೩. ಸರಜೂ ಕಾಟ್ಕರ, **'ಶರಣ ಸಂಸ್ಕೃತಿ'**, ಶ್ರೀ ಕಾರಂಜ ಮಠ, ಪ್ರಕಾಶನ, ಬೆಳಗಾವಿ.

೫೪. ಹೂಗಾರ ಎಂ.ಬಿ., **'ಶರಣರ ಆಂದೋಲನ ಹಾಗೂ ಹೊಸ ಸಮಾಜದ ಪರಿಕಲ್ಪನೆ'**, ವಿಮೋಚನಾ ಪ್ರಕಾಶನ, ಅಥಣಿ

೫೫. ಹನುಮಂತರಾವ್ ಜೆ., ೧೯೭೨, **'ಪಾಶುಪತ ಆಗಮಗಳು'**, ಸತ್ಯವಾಹಿನಿ ೫೦, ಮೈಸೂರು.

೫೬. ಹಿರೇಮಠ ಎಸ್.ಎಸ್., ೨೦೦೩, **'ಪಾಶುಪತ ದರ್ಶನ'**, ಸಮತಾ ಪ್ರಕಾಶನ, ಹರಪನಹಳ್ಳಿ.

೫೭. ಹಿರೇಮಠ ಎಸ್.ಎಸ್., ೨೦೦೪, **'ಕಾಳಾಮುಖ ದರ್ಶನ'**, ಸಮತಾ ಪ್ರಾಕಶನ, ಹರಪನಹಳ್ಳಿ.

ಇಂಗ್ಲೀಷ ಗ್ರಂಥಗಳು

೫೮. Banerjea N., 1968, ***Religion in Arts and Archaeology*** (Vaisnavism and Saivism), Laknow University, Laknow.

೫೯. Basavaraj k.R., 1984, ***History and Culture of Karnataka***, Chalukya publications, Dharwad.

೬೦. Bandarkar R.G., 1957, ***Vaishnavism Saivism and Minor Religious System***, Indological Book House, Varanasi.

೬೧. Bhatt N.R., 2008, ***Shaivism in the light of Epics,*** Puranas and Agamas, Indica House, Varanasi.

೬೨. Bird James,1844, ***'The Ruined City of Bijapur'***, JBBRAS,Bombay.

೬೩. Basavaraj K.R., 1984, ***'History and Culture of Karnataka'***, Karnatak University, Dharwad.

೬೪. Cousen Henry, 1977, ***'Bijapur and its Architectural Remains'***, Bharatia Publishing House, Varanasi.

೬೫. Choubey M.C., 1997***, Lakulisa in Indian Art and Culture***, Sharada Publishing House, Delhi.

೬೬. Cousens Henry, 1926, ***The Chalukyan Architecture of the Kanarese Districts***, Govt. of India Publication.

೬೭. Davied N. Lorenzen, 1972***, The Kapalikas and Kalamukhas Two Lost – Saivite sects,*** University of California press, California.

೬೮. Divakar R.R., 1968, ***Karnataka Through the Ages***, Govt of Mysore, Bangalore.

೬೯. Desai P.B., 1070, ***A History of Karnataka***, Karnatak University, Dharwad.

೭೦. Filliozat Vasundhara, 2010, ***Kalamukha and Pashupata temple in Dharwar***, Kuppuswami sastri research Institute, chennai.

೭೧. Gopal B.R., 1981, ***'The Chalukays of Kalyan'***, Prasarang Karnatak university, Dharwad.

೭೨. Hiremath V.R., 1990, ***Religious Conditions during period of Chalukyas of Kalyana,*** Karnatak University, Dharwad.

೭೩. Jash P., 1974, ***History of Saivism Through the Ages***, Munshiram Manoharalal, Delhi.

೭೪. Joshi R.V., 1956, ***'Plestocene Studies of the Malaprabha Basin'***, Prasarang Karnatak University, Dharwad.

೭೫. Joshi P.M., 1936, ***'The Kingdom of Bijapur'***, University of London, London.

೭೬. Jouveau Dubreivil, '1920, ***'Anicient History of the Deccan'***, Pandichary.

೭೭. Khaodaey Zaman, 1989, ***'Persion Elements in the cultural Art and Architecture of Bijapur'***, (unpublished Ph.d Thises) Osmaniya university, Hyderabad.

೭೮. Kodad S.B., 1986, ***'The Battle of Talikota'***, Shri Ramachandra Publication, New Delhi.

೭೯. Narayan Ayyar C.V., 1936, ***Origin and Early of Saivism in South India***, University of Madras, Madras.

೮೦. Nilakhantha Shastri K.A., 1963, ***The Development of Religion in South India***, Bombay Orgent Longmans, Bombay.

೮೧. Madan A.P., 1990, *'The History of the Rastrakutas'*, Harman Publishing, New Delhi.

೮೨. Pappu R.S., 1986, ***'The Pleistoscene Studies of the Krishna Basin'***, Deccan College poona, poona.

೮೩. Pathak V.S., 1960, ***History Of Saiva Cult in Northern India***, Varanasi.

೮೪. Ritti S.N., 1977, '*The Seunas*', Prasarang Karnatak University, Dharwad.

೮೫. Sinha Jadunath, 1975, Schools of Saivism, Sinha Publishing House Calcutta, Calcutta.

೮೬. Sherwani H.K. and Joshi P.M., 1973, ***'History of Medievel Deccan vol-I and vol-II',*** Govt of Andhrapradesh, Hyderabad.

೮೭. Sheshadri M., 1962, '***The Stone are Tools from Salvadagi, Bijapur district'***, Journal of the Mysore University vol-21, Mysore.

೮೮. Sundar A.,1990,***'Archaeology in Karnataka'***, Directorate of Archaeology and museum, Mysore.

೮೯. Tyagi I.C., 1992, ***Shaivism in Ancient india,*** Meenakshi Prakashana, Meerut

೯೦. Vasant Madhuva K.G., 1978, ***'Kannada Sourcess of the Adilshahis of Bijapur (1555-1686)***', I.H.C., Hyderabad.

೯೧. Yazdani G., 1960, ***The Early History of Deccan,*** Oxferd University Press, London.

೯೨. Zendekar A.L., 2002, ***'History and Antiquities of Tardawadi'***, karnatak university, Dharwad.

ಪ್ರಾಥಮಿಕ ಆಕರಗಳು

೯೩. ಕಲಬುರ್ಗಿ ಎಂ.ಎಂ., ೧೯೭೬, **'ವಿಜಾಪುರ ಜಿಲ್ಲೆಯ ಶಾಸನ ಸೂಚಿ'**, ಕನ್ನಡ ಅಧ್ಯಯನ ಪೀಠ, ಧಾರವಾಡ.

೯೪. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಮಹಬೂಬುರ್ ರಹಮಾನ ಮದನಿ, (ಅನು.), ೨೦೧೪, **'ಗುಲದಸ್ತಾಯೆ ಬಿಜಾಪುರ'**, ಆದಿಲಶಾಹಿ ಸಾಹಿತ್ಯ ಸಂ.೬, ವಚನಪಿತಾಮಹ ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರ, ವಿಜಾಪುರ.

೯೫. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಮಹಬೂಬುರ್ ರಹಮಾನ ಮದನಿ, (ಅನು.), ೨೦೧೪, **'ತಾರೀಖೆ ಹಪ್ತಕುರ್ಶಿ'**, ಆದಿಲಶಾಹಿ ಸಾಹಿತ್ಯ ಸಂ.೬, ವಚನಪಿತಾಮಹ ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರ, ವಿಜಾಪುರ.

೯೬. ಕೃಷ್ಣ ಕೊಲ್ಹಾರಕುಲಕರ್ಣಿ (ಅನು.), ೨೦೧೪, **'ಬಸಾತೀನೆ ಸಲಾತೀನ'**, ಆದಿಲಶಾಹಿ ಸಾಹಿತ್ಯ ಸಂ.೫, ವಚನಪಿತಾಮಹ ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರ, ವಿಜಾಪುರ.

೯೭. ದೇವರಕೊಂಡಾರೆಡ್ಡಿ (ಸಂ.), ೨೦೧೧, **'ಬಿಜಾಪುರ ಶಾಸನ ಸಂಪುಟ-೧೦'**, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯೮. ಫಕೀರ್ ಮುಹಮ್ಮದ್ ಕಟ್ಪಾಡಿ (ಅನು.), ೨೦೧೫, **'ತಝ್ಕೀರತುಲ್ ಮುಲೂಕ್'**, ಆದಿಲಶಾಹಿ ಸಾಹಿತ್ಯ ಸಂ.೧೦, ವಚನಪಿತಾಮಹ ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರ, ವಿಜಾಪುರ.

೯೯. ಮಹಮ್ಮದ್ ಸಿಬ್ಗತ್‌ಉಲ್ಲಾಹ್ (ಅನು.), ೨೦೧೪, **'ಇಬ್ರಾಹೀಮನಾಮಾ'**, ಆದಿಲಶಾಹಿ ಸಾಹಿತ್ಯ ಸಂ.೬, ವಚನಪಿತಾಮಹ ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರ, ವಿಜಾಪುರ.

೧೦೦. ಮಹನೂರ್ ಜಮಾನಿ ಬೇಗಂ ಮತ್ತು ಇತರರು (ಅನು.), **'ಮೊಹಮ್ಮದ ನಾಮಾ'**, ಆದಿಲಶಾಹಿ ಸಾಹಿತ್ಯ ಸಂ.೦೭, ವಚನಪಿತಾಮಹ ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರ, ವಿಜಾಪುರ.

೧೦೧. ಯಾಸೀನ್ ಖುದ್ದೂಸಿ ಎಂ., ಸೀತಾರಾಮ ಜಾಗೀರ್‌ದಾರ್ (ಸಂ.), ೨೦೦೯, **'ಪರ್ಶಿಯನ, ಅರೇಬಿಕ ಮತ್ತು ಉರ್ದು ಶಾಸನಗಳು'**, ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦೨. ವಸಂತ ಕುಷ್ಟಗಿ ಮತ್ತು ಇತರರು (ಅನು.), ೨೦೧೪, **'ತಾರೀಖ ಎ ಫರಿಶ್ತಾ', ಭಾಗ.೩, ಆದಿಲಶಾಹಿ ಸಾಹಿತ್ಯ ಸಂ.೩,** ವಚನಪಿತಾಮಹ ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರ, ವಿಜಾಪುರ.

೧೦೩. Ephigraphia Indica volumes

೧೦೪. Epigraphia Carnatica

೧೦೫. Epigraphica Indica

೧೦೬. Indian Antiquary

೧೦೭. Progress Report of the Kannada Research Institute

೧೦೮. Karnatak Inscriptions

೧೦೯. South Indian Inscription volumes

<u>ನಿಘಂಟುಗಳು</u>

ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು ಸಂ-೧೪, ಬೆಂಗಳೂರು, ೧೯೭೧.

ಕವಲಿ ಜೆ.ಎ., ೧೯೫೭, ಸಚಿತ್ರ ಕನ್ನಡ ಕಸ್ತೂರಿ ಕೋಶ, ರಾಮಾಶ್ರಯ ಬುಕ್ ಡಿಪೋ, ಧಾರವಾಡ.

ಮರಿಯ ಭಟ್ಟ ಎಮ್., ೧೯೭೦, ಕಿಟೆಲ್ಲರ ಕನ್ನಡ – ಇಂಗ್ಲೀಷ್ ನಿಘಂಟು, ಮದ್ರಾಸ್ ವಿಶ್ವವಿದ್ಯಾಲಯ, ಮದ್ರಾಸ್.

ಕನ್ನಡ – ಇಂಗ್ಲೀಷ್ ನಿಘಂಟು, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೬೫.

ವೆಂಕಟಾಚಲಶಾಸ್ತ್ರೀ, ೧೯೭೧, ಶ್ರೀವತ್ಸ ನಿಘಂಟು, ಶಾರದಾ ಮಂದಿರ, ಮೈಸೂರು.

ಸಂಕ್ಷಿಪ್ತ ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೭೫.

ಕನ್ನಡ ನಿಯತಕಾಲಿಕೆಗಳು ಮತು ಪತ್ರಿಕೆಗಳು

ಕರ್ನಾಟಕ ಭಾರತಿ
ಸಾಧನೆ
ಮಾನವಿಕ ಕರ್ನಾಟಕ
ವಿದ್ಯಾರ್ಥಿ ಭಾರತಿ
ಸಾಹಿತ್ಯ ಪರಿಷತ್ ಪತ್ರಿಕೆ
ಜಯ ಕರ್ನಾಟಕ
ಪ್ರಬುದ್ಧ ಕರ್ನಾಟಕ
ಅಂಕಣ
ಬಸವಪಥ
ಇತಿಹಾಸ ದರ್ಪಣ
ಪ್ರಾಚೀನ ಕರ್ನಾಟಕ



ಕರ್ನಾಟಕ ನಕ್ಷೆ



ವಿಜಯಪುರ ಜಿಲ್ಲೆಯ ನಕ್ಷೆ

ಛಾಯಾಚಿತ್ರಗಳು



ಈಶ್ವರ ದೇವಾಲಯ, ಹೋರ್ತಿ, ಇಂಡಿ ತಾಲೂಕು



ರೇವಣಸಿದ್ದೇಶ್ವರ ದೇವಾಲಯ, ರೇವತಗಾಂವ, ಇಂಡಿ ತಾಲೂಕು



ರಾಮಲಿಂಗೇಶ್ವರ ದೇವಾಲಯ, ಯರಗಲ, ಸಿಂದಗಿ ತಾಲೂಕು



ಕೋಟಿ ಶಂಕರಲಿಂಗ ದೇವಾಲಯ, ನಿಂಬಾಳ, ಇಂಡಿ ತಾಲೂಕು




ಸಂಗಮೇಶ್ವರ ದೇವಾಲಯ, ಸಿಂದಗಿ, ಸಿಂದಗಿ ತಾಲೂಕು



ಮಲ್ಲಿಕಾರ್ಜುನ ದೇವಾಲಯ, ಮಲಘಾಣ, ಸಿಂದಗಿ ತಾಲೂಕು




ಶಾಂತಲಿಂಗೇಶ್ವರ ದೇವಾಲಯ, ಕಲಕೇರಿ, ಸಿಂದಗಿ ತಾಲೂಕು



ಸೋಮನಾಥ ದೇವಾಲಯ, ಇಂಗಳೇಶ್ವರ, ಬಸವನ ಬಾಗೇವಾಡಿ ತಾಲೂಕು



ರಾಮಲಿಂಗೇಶ್ವರ ದೇವಾಲಯದ ಸ್ತಂಭಗಳು, ಯರಗಲ, ಸಿಂದಗಿ ತಾಲೂಕು



ರಾಮೇಶ್ವರ ದೇವಾಲಯದ ನವರಂಗ, ದೇವೂರು, ಸಿಂದಗಿ ತಾಲೂಕು



ಸೋಮನಾಥ ದೇವಾಲಯ, ಕಡ್ಲೇವಾಡ, ಸಿಂದಗಿ ತಾಲೂಕು



ಸೋಮನಾಥ ದೇವಾಲಯದ ಕಕ್ಷಾಸನ ಭಾಗ, ಕಡ್ಲೇವಾಡ, ಸಿಂದಗಿ ತಾಲೂಕು



ಸೋಮನಾಥ ದೇವಾಲಯದ ನವರಂಗದ ಸ್ತಂಭಗಳು, ಕಡ್ಲೇವಾಡ, ಸಿಂದಗಿ ತಾಲೂಕು



ರಾಮಲಿಂಗ ದೇವಾಲಯದ ಭಿತ್ತಿ ಭಾಗ, ಚಾಂದಕವಠೆ, ಸಿಂದಗಿ ತಾಲೂಕು



ಸೋಮಲಿಂಗ ದೇವಾಲಯ, ಕುಮಸಗಿ, ಸಿಂದಗಿ ತಾಲೂಕು



ಮೂರುಲಿಂಗ ದೇವಾಲಯದ ಭೀತ್ತಿ ಭಾಗ, ಬಸರಕೋಡ, ಮುದ್ದೇಬಿಹಾಳ ತಾಲೂಕು



ರಾಮಲಿಂಗೇಶ್ವರ ದೇವಾಲಯ, ಇಟಗಿ, ಬಸವನ ಬಾಗೇವಾಡಿ ತಾಲೂಕು




ದೇವಾಲಯಗಳ ಸಂಕೀರ್ಣ, ಮುತ್ತಗಿ, ಬಸವನ ಬಾಗೇವಾಡಿ ತಾಲೂಕು



ದೇವಾಲಯಗಳ ಸಂಕೀರ್ಣ, ಮುತ್ತಗಿ, ಬಸವನ ಬಾಗೇವಾಡಿ ತಾಲೂಕು



ಸರಸ್ವತಿ ದೇವಾಲಯ, ಮುತ್ತಗಿ, ಬಾಗೇವಾಡಿ ತಾಲೂಕು



ಶಿವಯೋಗೇಶ್ವರ ದೇವಾಲಯ, ಸಾಲೋಟಗಿ, ಇಂಡಿ ತಾಲೂಕು



ಶಿವಯೋಗೇಶ್ವರ ದೇವಾಲಯದ ಒಳನೋಟ, ಸಾಲೋಟಗಿ, ಇಂಡಿ ತಾಲೂಕು



ರಾಮೇಶ್ವರ ದೇವಾಲಯ, ಸಾಲೋಟಗಿ, ಇಂಡಿ ತಾಲೂಕು




ಸಂಗಮೇಶ್ವರ ದೇವಾಲಯದ ಸ್ತಂಭಗಳು, ಕಕ್ಕಳಮೇಲಿ, ಸಿಂದಗಿ ತಾಲೂಕು



ದೇವಾಲಯದ ಪ್ರಸ್ತರ ಭಾಗದಲ್ಲಿರುವ ಶೈವಮುನಿ ಶಿಲ್ಪಗಳು, ದೇವೂರು, ಸಿಂದಗಿ ತಾಲೂಕು



ಸಂಗಮೇಶ್ವರ ದೇವಾಲಯದ ಆವರಣದಲ್ಲಿರುವ ಶಿವಲಿಂಗ, ಸಿಂದಗಿ, ಸಿಂದಗಿ ತಾಲೂಕು



ಸಂಗಮೇಶ್ವರ ದೇವಾಲಯದ ಆವರಣದಲ್ಲಿರುವ ತಾಂತ್ರಿಕ ಶಿಲ್ಪಗಳು, ಸಿಂದಗಿ, ಸಿಂದಗಿ ತಾಲೂಕು




ದೇವಾಲಯದ ಆವರಣದಲ್ಲಿರುವ ಉಮಾಮಹೇಶ್ವರ ಮತ್ತು ಸಪ್ತಮಾತೃಕೆಯರ ಶಿಲ್ಪಗಳು, ಕಡ್ಲೇವಾಡ, ಸಿಂದಗಿ ತಾಲೂಕು





ಸಂಗಮೇಶ್ವರ ದೇವಾಲಯದ ಆವರಣದಲ್ಲಿರುವ ಋಷಿ ಶಿಲ್ಪಗಳು, ಸಿಂದಗಿ, ಸಿಂದಗಿ ತಾಲೂಕು



ಗುಬ್ಬೆವಾಡ, ಯರಗಲ, ಕಡ್ಲೇವಾಡದಲ್ಲಿರುವ ಶಿಲ್ಪಗಳು, ಸಿಂದಗಿ ತಾಲೂಕು